ಕನ್ನಡ ವಿಚಾರ ಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯ ಹುಡುಕಾಟದ ನೆಲೆಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ
ಶಂಕರಪ್ಪ ಹೆಚ್.ಎಸ್

ಮಾರ್ಗದರ್ಶಕರು
ಡಾ.ರಹಮತ್ ತರೀಕೆರೆ

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೮

ಕನ್ನಡ ವಿಚಾರ ಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯ ಹುಡುಕಾಟದ ನೆಲೆಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ
ಶಂಕರಪ್ಪ ಹೆಚ್.ಎಸ್

ಮಾರ್ಗದರ್ಶಕರು
ಡಾ.ರಹಮತ್ ತರೀಕೆರೆ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೧೮

ಸಂಶೋಧಕರ ಪ್ರಮಾಣ ಪತ್ರ

"ಕನ್ನಡ ವಿಚಾರ ಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯ ಹುಡುಕಾಟದ ನೆಲೆಗಳು" ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ. ಪದವಿಗಾಗಿ ಡಾ.ರಹಮತ್ ತರೀಕೆರೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Shankarappa H S

ಶಂಕರಪ್ಪ ಎಚ್.ಎಸ್.,
ಸಂಶೋಧಕ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 25/01/2018
ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

ಶಂಕರಪ್ಪ ಎಚ್.ಎಸ್., ಇವರು "ಕನ್ನಡ ವಿಚಾರ ಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯ ಹುಡುಕಾಟದ ನೆಲೆಗಳು" ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಡಾ.ರಹಮತ್ ತರೀಕೆರೆ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ಮಹತ್ವ

೧.೧ ಪ್ರಸ್ತಾವನೆ

೧.೨ ಅಧ್ಯಯನದ ಉದ್ದೇಶ ಮತ್ತು ಮಹತ್ವ

೧.೩ ಅಧ್ಯಯನದ ವ್ಯಾಪ್ತಿ ಮತ್ತು ಆಕರಗಳು

೧.೩.೧ ಲೇಖಕ ವ್ಯಾಪ್ತಿ

೧.೩.೨ ಆಕರ ವ್ಯಾಪ್ತಿ

೧.೩.೩ ಕಾಲವ್ಯಾಪ್ತಿ

೧.೪ ಅಧ್ಯಯನ ವಿಧಾನ

೧.೫ ಪೂರ್ವಾಧ್ಯಯನಗಳ ಸಮೀಕ್ಷೆ

೧.೬ ಪರಿಕಲ್ಪನಾತ್ಮಕ ಚರ್ಚೆ

೧.೬.೧ ಕನ್ನಡ ವಿಚಾರ ಸಾಹಿತ್ಯ

೧.೬.೨ ಕನ್ನಡ ಅಸ್ಮಿತೆ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ಮಹತ್ವ

೧.೧ ಪ್ರಸ್ತಾವನೆ

ಭಾಷಾ ಸಂಸ್ಕೃತಿಯೂ ಒಂದು ರಚನೆ. ಅದಕ್ಕೆ ಸಾಮಾಜಿಕ ವಿನ್ಯಾಸದಲ್ಲಿ ಒಂದು ಜೈವಿಕ ಮೂಲವಿಲ್ಲ. ಅಂದರೆ ಯಾವುದೇ ಭಾಷೆಗೆ ತನಗೇ ತಾನೇ ಒದಗಿ ಬರುವ ಜೈವಿಕ ಎನ್ನಬಹುದಾದ ಮೂರ್ತಸ್ವರೂಪದ 'ಅಸ್ಮಿತೆ' ಎಂಬುದು ಇರುವುದಿಲ್ಲ. ಅಮೂರ್ತ ಸ್ವರೂಪದಲ್ಲಿರುವ ಭಾಷೆಗೆ ಅದನ್ನು ಮಾತನಾಡುವವರ ಮೂಲಕ, ಆ ಭಾಷೆಯನ್ನು ಆಡುವ ನಿರ್ದಿಷ್ಟ ಪ್ರದೇಶದ ಮೂಲಕ, ಅಂದರೆ, 'ಭಾಷೆ', 'ಭಾಷಿಕ' ಮತ್ತು ಭಾಷೆಯನ್ನು ಆಡುವ ಜನರ 'ದೇಶ'ರೂಪದ 'ಅಸ್ಮಿತೆ'ಯ ಮೂಲಕವೇ ಅಸ್ತಿತ್ವ ಬರುತ್ತದೆ. ಎಲ್ಲ ಭಾಷೆಗಳ ಸಾಹಿತ್ಯವೂ ಭಾಷೆ, ಜನ ಮತ್ತು ದೇಶಗಳನ್ನು ಸಮೀಕರಿಸುವ ಕೆಲಸವನ್ನು ಲಾಗಾಯ್ತಿನಿಂದಲೂ ಮಾಡಿಕೊಂಡು ಬಂದಿದೆ.

ಮನುಷ್ಯ ಇತಿಹಾಸದ ಮೊದಲ ಹಂತದಲ್ಲಿ ಸಂವಹನ, ಮಾಧ್ಯಮದ ಚಹರೆಯಷ್ಟನ್ನೇ ಪಡೆದಿದ್ದ ಭಾಷೆ ನಂತರದ ಕಾಲಘಟ್ಟಗಳಲ್ಲಿ 'ಜನಾಂಗಿಕ' ಮತ್ತು 'ಪ್ರಾದೇಶಿಕ' ಚಹರೆಗಳಾಗಿ ರೂಪಾಂತರಗೊಂಡಿತು. ಆದ್ದರಿಂದಲೇ 'ಕನ್ನಡ'ವೆಂಬುದು ದೇಶವಾಚಿಯಾಗಿದ್ದಾಗ ಕರ್ನಾಟಕವನ್ನು, ಜನವಾಚಿಯಾದಾಗ ಕನ್ನಡಿಗರನ್ನು, ಭಾಷಾವಾಚಿಯಾದಾಗ ಕನ್ನಡವನ್ನು ಸೂಚಿಸುತ್ತದೆ.[೧] ಭಾಷೆ ಈ ಚಹರೆಗಳನ್ನು ಪಡೆದುಕೊಳ್ಳುತ್ತಿದ್ದಂತೆಯೇ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ನೆಲೆಗಳ ಆಯಾಮಗಳನ್ನು ಪಡೆದುಕೊಳ್ಳಲಾರಂಭಿಸಿತು. ಈ ಕಾರಣದಿಂದಲೇ ಭಾಷಾ ಅಸ್ಮಿತೆ ಕುರಿತ ಚಿಂತನೆ ಭಾಷಿಕ ಆಯಾಮಕ್ಕಿಂತಲೂ ಭಾಷೆಯನ್ನು ಪ್ರಭಾವಿಸುತ್ತಿರುವ ಮೇಲ್ಕಂಡ ವಿವಿಧ ನೆಲೆಗಳ ಮೂಲಕ ನಡೆಯುತ್ತ ಹೆಚ್ಚು ವಿಸ್ತಾರವನ್ನೂ, ಸಂಕೀರ್ಣತೆಯನ್ನೂ ಪಡೆಯಲಾರಂಭಿಸಿತು.

ಒಂದು ಭಾಷೆಯ ಅಸ್ಮಿತೆಯ ಪ್ರಶ್ನೆ ಯಾವ ಯಾವ ಕಾರಣಗಳಿಗಾಗಿ ಹುಟ್ಟುತ್ತದೆ ಎಂಬುದು ಅಧ್ಯಯನಯೋಗ್ಯವಾದ ವಿಚಾರವಾಗಿದೆ. ಯಾವುದೇ ವ್ಯಕ್ತಿ/ಸಮುದಾಯಕ್ಕೆ ತನ್ನತನದ ಹುಡುಕಾಟ ಆರಂಭವಾಗುವುದು ಎದುರಾಳಿಯ ಕಲ್ಪನೆಯಿಂದ. ಅದೇ ರೀತಿ ಒಂದು ಭಾಷೆಗೂ 'ಅಸ್ಮಿತೆ'ಯ ಪ್ರಶ್ನೆ ಕಾಡುವುದು ಸಾಮಾನ್ಯವಾಗಿ ಪ್ರಬಲವಾದ ಎದುರಾಳಿಯ ಪ್ರವೇಶವಾಗಿ 'ತನ್ನ' ಅಸ್ತಿತ್ವದ ಬಗ್ಗೆ ಆತಂಕ ಮೂಡಿದಾಗ. ಇಲ್ಲಿ 'ಎದುರಾಳಿ' ಎನ್ನುವುದು ಯಾವಾಗಲೂ ಇನ್ನೊಂದು ಭಾಷೆಯೇ ಆಗಿರಬೇಕೆಂದಿಲ್ಲ. ಉದಾಹರಣೆಗೆ ಒಂದೇ ಭಾಷೆಯೊಳಗಿನ 'ಗ್ರಾಮ್ಯ'ಭಾಷೆಗೆ 'ಶಿಷ್ಟಭಾಷೆ', ಒಂದೇ ಭಾಷಾವಲಯದೊಳಗಿನ ಒಂದು ಪ್ರದೇಶದ ಭಾಷೆಗೆ ಇನ್ನೊಂದು ಪ್ರದೇಶದ ಭಾಷೆ ಎದುರಾಳಿಯಾಗಿ ಕಂಡು ಬರಬಹುದು. ನಿಜದ ಸಂಗತಿ ಏನೆಂದರೆ ಈ ರೀತಿ ಭಾಷೆಯ ಒಳಗೇ ಸ್ಪರ್ಧೆ ಏರ್ಪಡುವುದಕ್ಕೆ ಭಾಷೆ ಕಾರಣವಾಗಿರುವುದಿಲ್ಲ. ಬದಲಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ

ಮತ್ತು ಸಾಂಸ್ಕೃತಿಕ ಒತ್ತಡಗಳು ಪ್ರೇರಣೆ ಒದಗಿಸುತ್ತಿದ್ದು ಭಾಷೆ ಕೇವಲ ಈ ಪ್ರೇರಣೆಗಳ ಸಾಧನವಾಗಿ ಕೆಲಸ ಮಾಡುತ್ತಿರುತ್ತದೆ.

'ಭಾಷೆ' ಎಂಬ 'ಸಾಧನ' ತನ್ನನ್ನು ನೋಡುವ ಯಾವ ಬಗೆಯ ಅಸ್ಮಿತೆಯ ಕಾರಣದಿಂದ ಎಂತಹ ಚಿಂತನೆಗಳನ್ನು ಹುಟ್ಟು ಹಾಕಿದೆ? ಇಂತಹ ಚಿಂತನೆಗಳು ಸಮಾಜದ ಮೇಲೆ ಮಾಡಿರುವ, ಮಾಡುತ್ತಿರುವ ಪರಿಣಾಮಗಳೇನು? ಇಂತಹ ವಿವಿಧ ಚಿಂತನೆಗಳಿಗೆ ಮೂಲವಾಗಿರುವ ಕನ್ನಡದ ಅಸ್ಮಿತೆಗಳ ಸ್ವರೂಪವನ್ನು ಅರಿಯುವ ಆಸಕ್ತಿಯಿಂದ ಈ ಅಧ್ಯಯನವನ್ನು ಮಾಡಲಾಗಿದೆ.

೧.೨ ಅಧ್ಯಯನದ ಉದ್ದೇಶ ಮತ್ತು ಮಹತ್ವ

ತನ್ನ ಸಹಸ್ರಾರು ವರ್ಷಗಳಿಂದ ಬಾಳಿ ಬದುಕಿಕೊಂಡು ಬಂದ ಚರಿತ್ರೆ ಕನ್ನಡಕ್ಕೆ ಆತ್ಮವಿಶ್ವಾಸ ಹೆಚ್ಚಿಸುವ ಸಂಗತಿಯಾದರೂ ತನ್ನ ಅಸ್ತಿತ್ವವನ್ನು ಅಲುಗಾಡಿಸುತ್ತಿರುವ ಹಲವು ಆತಂಕಗಳು ಕನ್ನಡಕ್ಕೆ ಎದುರಾಗಿವೆ. ಈ ಎಲ್ಲ ಆತಂಕದ ಮೂಲ ಇಂಗ್ಲಿಶ್ ಎಂಬ ತಿಳುವಳಿಕೆ ಸಾರ್ವತ್ರಿಕವಾಗಿದೆ. ಆದರೆ ಕನ್ನಡದ ಬಿಕ್ಕಟ್ಟುಗಳ ಮೂಲ ಸಂಕೀರ್ಣ ನೆಲೆಗಳಲ್ಲಿದೆ. ಮುಖ್ಯವಾಗಿ ಕನ್ನಡ ಅಸ್ಮಿತೆಯನ್ನು ಗ್ರಹಿಸುವ ಮತ್ತು ನೋಡುವ ತಾತ್ವಿಕತೆಯ ಸ್ವರೂಪವೇ ಕನ್ನಡದ ಅಸ್ತಿತ್ವವನ್ನು ಅಳಿಸುವ ಅಥವಾ ಉಳಿಸುವ, ಶಕ್ತಿ ಕುಂದಿಸುವ ಅಥವಾ ಚೈತನ್ಯ ತುಂಬುವ ಹಾಗೂ ಚಲನೆಯ ಗತಿ-ವಿಗತಿಗಳನ್ನು ನಿಯಂತ್ರಿಸುವ ತಂತ್ರಾಂಶವಾಗಿದೆ.

ಇಪ್ಪತ್ತನೆಯ ಶತಮಾನ ಭಾರತೀಯ ಸಮಾಜದ ಬದುಕಿನ ಹಳೆಯ ಬಂಧನಗಳಿಂದ ವಿಮೋಚನೆಗೊಂಡ, ಹೊಸ ಬಂಧನಗಳಿಗೆ ಒಳಪಟ್ಟ ಮತ್ತು ಈ ಹೊಸ ಬಂಧನಗಳಿಂದಲೂ ಬಿಡಿಸಿಕೊಳ್ಳುವ ಪ್ರಯತ್ನಗಳು ಢಾಳಾಗಿ ಕಾಣಬರುವ ಸಂಕೀರ್ಣವಾದ ಹಲವು ಬಂಧನ - ವಿಮೋಚನೆಗಳ ಪರ್ವಕಾಲ. ಬಿಳಿಯ ದೊರೆಗಳಿಂದ ವಿಮೋಚನೆಗೊಂಡು ಕರಿಯ ದೊರೆಗಳ ಹಿಡಿತಕ್ಕೆ, ದೃಗ್ಗೋಚರ ವಸಾಹತುಶಾಹಿ ಪ್ರಭುತ್ವದಿಂದ ನಮ್ಮ ಕೈಗಳಿಂದಲೇ ನಮ್ಮನ್ನು ಬಂಧಿಸಿಡುವ ಅಗೋಚರ ನವವಸಾಹತುಶಾಹಿ ಪ್ರಭುತ್ವದ ನಿಯಂತ್ರಣಕ್ಕೆ, ಅಂಧಾನುಶ್ರದ್ಧೆಯ ಕತ್ತಲೆಯಿಂದ ಆಧುನಿಕತೆಯ ಬೆಳಕಿಗೆ, ಆಧುನಿಕತೆಯ ಬೆಳಕೇ ಬೆಂಕಿಯಾಗುವ ವಿಪರ್ಯಾಸಕ್ಕೆ, ಹೀಗೆ ತದ್ವಿರುದ್ಧ ಎನಿಸುವ ಪರಿಣಾಮಗಳನ್ನು ಅಭಿವ್ಯಕ್ತಿಗೊಳಿಸಿದ ರಂಗಸ್ಥಳವಾದ ಕಾಲಘಟ್ಟ. ಈ ಎಲ್ಲವೂ ಸಮಾಜದ ಮುಖ್ಯ ಘಟಕವಾದ ಭಾಷೆಯ ಜಗತ್ತಿನಲ್ಲಿಯೂ ಸಹಜವಾಗಿಯೇ ಘಟಿಸಿದೆ. ಕನ್ನಡಭಾಷೆ ಭಾರತದ ದೇಶಿ ಭಾಷೆಗಳಲ್ಲಿ ಒಂದಾಗಿ ಕಳೆದ ಶತಮಾನದ ಈ ಎಲ್ಲಾ ವಿಭಿನ್ನ ನೆಲೆಯ ಸ್ಥಿತ್ಯಂತರಗಳಿಗೆ ತನ್ನನ್ನು ಒಡ್ಡಿಕೊಂಡಿದೆ. ಈ ಕಾಲಘಟ್ಟದಲ್ಲಿ ಕನ್ನಡ ಅಸ್ಮಿತೆ ಯಾವೆಲ್ಲ ಬಗೆಯ ಚಿಂತನೆಗಳಲ್ಲಿ ರೂಪ ಪಡೆಯಿತು ಎನ್ನುವುದನ್ನು ಅರಿಯುವುದು ಕನ್ನಡ ನಡೆದು ಬಂದ ಹಾದಿಯ ಏಳು ಬೀಳುಗಳನ್ನು ತಿಳಿಯುವ ಪ್ರಯತ್ನವೇ ಆಗಿದೆ. ಈ ರೀತಿಯ ಪ್ರಯತ್ನದಿಂದ ಒಡಮೂಡುವ

ತಿಳುವಳಿಕೆಗಳು ಕನ್ನಡ ಬದುಕಿನ ಭವಿಷ್ಯದ ಹೆಜ್ಜೆಗಳಿಗೆ ಕಿಂಚಿತ್ತಾದರೂ ಕಸುವು ತುಂಬಲಿ ಎನ್ನುವ ಹಂಬಲ ಈ ಅಧ್ಯಯನಕ್ಕಿದೆ.

ಈ ಅಧ್ಯಯನದ ಮಹತ್ವ ಮತ್ತು ಉದ್ದೇಶಗಳನ್ನು ಹೀಗೆ ಗುರುತಿಸಬಹುದಾಗಿದೆ.

೧. ಕನ್ನಡ ಅಸ್ಮಿತೆ ಕುರಿತ ಚಿಂತನೆಗಳನ್ನು ವಿವಿಧ ಧಾರೆಗಳಲ್ಲಿ ಗುರುತಿಸಲು ಸಾಧ್ಯವೆ? ಹಾಗೆ ಗುರುತಿಸಲು ಸಾಧ್ಯವಾದರೆ ಈ ಚಿಂತನಾಧಾರೆಗಳ ತಾತ್ವಿಕ ನೆಲೆಗಳು ಯಾವುವು? ಈ ತಾತ್ವಿಕ ನೆಲೆಗಳಿಗೆ ಪ್ರಭಾವ ಬೀರಿರುವ ಸಂಗತಿಗಳಾವುವು?

೨. ಕನ್ನಡ ಅಸ್ಮಿತೆ ಕುರಿತ ಚಿಂತನಾಧಾರೆಗಳು ನಿರ್ದಿಷ್ಟ ಕಾಲಕ್ರಮದಲ್ಲಿ ಹರಿದುಬಂದಿವೆಯೇ? ಹಾಗಿದ್ದಲ್ಲಿ ಇದರ ಹಿಂದಿರುವ ಕಾಲದ ಒತ್ತಡಗಳೇನು?

೩. ಕನ್ನಡ ಅಸ್ಮಿತೆ ಕುರಿತ ವಿವಿಧ ಚಿಂತನಾಧಾರೆಗಳು ಕನ್ನಡವು ಪ್ರಭುತ್ವದ ಭಾಷೆಗಳಾದ ಇಂಗ್ಲಿಶ್ ಮತ್ತು ಸಂಸ್ಕೃತದೊಂದಿಗೆ ಹಾಗೂ ಕರ್ನಾಟಕದ ಲಂಬಾಣಿ, ಕೊಡವ, ತುಳುಗಳಂತಹ ಇತರ ಭಾಷೆಗಳ ಜೊತೆ ವರ್ತಿಸಿರುವುದನ್ನು ಗ್ರಹಿಸಿರುವ ತಾತ್ವಿಕ ಸ್ವರೂಪವೇನು?

೪. ಪ್ರಭುತ್ವ ಮತ್ತು ಬಂಡವಾಳಶಾಹಿಶಕ್ತಿಗಳು ಕನ್ನಡ ಅಸ್ಮಿತೆಯನ್ನು ಪ್ರಭಾವಿಸುತ್ತಿರುವ ಸ್ವರೂಪ ಕುರಿತಂತೆ ಕನ್ನಡ ಅಸ್ಮಿತೆ ಕುರಿತ ವಿವಿಧ ಚಿಂತನಾಧಾರೆಗಳು ಹೇಗೆ ಪ್ರತಿಕ್ರಿಯಿಸಿವೆ?

೫. ಕನ್ನಡ ಅಸ್ಮಿತೆ ಕುರಿತ ಚಿಂತನಾಧಾರೆಗಳು ಕನ್ನಡದ ಬೆಳವಣಿಗೆಯನ್ನು ಪ್ರಭಾವಿಸಿರುವ ಸ್ವರೂಪವೇನು? ಕನ್ನಡದ ಬೆಳವಣಿಗೆಗೆ ಕನ್ನಡ ಅಸ್ಮಿತೆ ಕುರಿತ ಯಾವ ಚಿಂತನಾಧಾರೆಗಳಲ್ಲಿನ ಯಾವ ಅಂಶಗಳು ಪೂರಕವಾಗಿವೆ ಮತ್ತು ಯಾವ ಅಂಶಗಳು ಮಾರಕವಾಗಿವೆ?

೬. ಸಂಸ್ಕೃತದ ಋಣ ಮತ್ತು ಹಂಗಿಲ್ಲದೆ ಮೂಲಕನ್ನಡವನ್ನು ಬಳಸುವ ಮತ್ತು ಹುಡುಕುವ ಹಠಗಳು ಏನನ್ನು ಸೂಚಿಸುತ್ತಿವೆ? ಕನ್ನಡದ ಶಿಷ್ಟರೂಪ ಮತ್ತು ಆಡುರೂಪಗಳನ್ನು ಪ್ರಮಾಣಭಾಷೆ ಎಂದು ಸಮಾಜದ ಯಾವ ವರ್ಗಗಳು ಯಾವ ಕಾರಣಕ್ಕಾಗಿ ಪ್ರತಿಪಾದಿಸುತ್ತಿವೆ. ಇದಕ್ಕಿರುವ ಭಾಷಿಕೇತರ ಆಯಾಮಗಳಾವುವು?

೭. ಕನ್ನಡದ ಚಿಂತಕರ ಚಿಂತನೆಗಳನ್ನು ಆಧರಿಸಿ ಕನ್ನಡ ಅಸ್ಮಿತೆಯ ನಿರ್ದೇಶಕ ತತ್ವಗಳನ್ನು ಅರಿಯುವುದು ಸಾಧ್ಯವೇ? ಅರಿಯಲು ಸಾಧ್ಯವಾದರೆ ಅವುಗಳ ಸ್ವರೂಪವೇನು?

೧.೩ ಅಧ್ಯಯನದ ಕೇಂದ್ರ ಹಾಗೂ ಲೇಖಕ-ಆಕರ-ಕಾಲ ವ್ಯಾಪ್ತಿ

೧.೩.೧ ಲೇಖಕ ವ್ಯಾಪ್ತಿ

ಇಪ್ಪತ್ತನೆಯ ಶತಮಾನ ಕರ್ನಾಟಕದ ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಮಹತ್ವದ ಸ್ಥಿತ್ಯಂತರಗಳನ್ನು ಕಂಡು ಪ್ರಮುಖ ಬದಲಾವಣೆಗಳ ಆರಂಭಕ್ಕೆ ಮುನ್ನುಡಿಯಾದ ಕಾಲ. ಈ ಕ್ಷೇತ್ರಗಳಲ್ಲಾದ ಪಲ್ಲಟಗಳು ಸಹಜವಾಗಿ ಶೈಕ್ಷಣಿಕ ಮತ್ತು ಸಾಹಿತ್ಯ ಕ್ಷೇತ್ರಗಳ ಸ್ವರೂಪದ ಬದಲಾವಣೆಗೂ ಕಾರಣವಾದವು. ಬ್ರಿಟೀಷರು ಆರಂಭಿಸಿದ ಶಾಲೆಗಳು ಶೂದ್ರ ಮತ್ತು ಅಸ್ಪೃಶ್ಯ ಸಮುದಾಯಗಳಿಗೆ ಶಿಕ್ಷಣದ ಹೆಬ್ಬಾಗಿಲುಗಳನ್ನು ತೆರೆಸಿದವು. ಶತಮಾನದ ಆರಂಭದಲ್ಲಿ ಶೂದ್ರ ಸಮುದಾಯದಿಂದ ಬಂದ ಕುವೆಂಪು ಅವರ 'ಬ್ರಿಟೀಷರು ಬಂದು ಇಲ್ಲಿ ಶಾಲೆಗಳನ್ನು ತೆರೆದು ಇಂಗ್ಲಿಶ್ ಕಲಿಸದಿದ್ದರೆ ನಾನು ಯಾರದೋ ಮನೆಯ ಕೊಟ್ಟಿಗೆಯಲ್ಲಿ ಕೆಲಸ ಮಾಡಿಕೊಂಡಿರಬೇಕಾಗಿರುತ್ತಿತ್ತು' ಎಂಬರ್ಥದ ಮಾತುಗಳು ಈ ಪಲ್ಲಟವನ್ನು ಪ್ರಮಾಣೀಕರಿಸುತ್ತಿವೆ. ಶಿಕ್ಷಣ ಪಡೆದ ತಳಸಮುದಾಯಗಳು ಕ್ರಮೇಣ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ್ದು ಕುವೆಂಪು ಅವರನ್ನು ಮೊದಲ್ಗೊಂಡು ದೇವನೂರು ಮಹಾದೇವ ಅವರವರೆಗೂ ನೋಡಬಹುದು. ಈ ಕಾಲಘಟ್ಟದಲ್ಲಿಯೇ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ-ಬಂಡಾಯ ಸಾಹಿತ್ಯಿಕ ಆಂದೋಳನಗಳು ಹುಟ್ಟು ಪಡೆದು ಹೊಸ ಅರಿವನ್ನು ಮೂಡಿಸಿದವು. ಶತಮಾನದ ಎಪ್ಪತ್ತರ ದಶಕದ ನಂತರದಲ್ಲಿ ತಳಸಮುದಾಯಗಳು, ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಮಹಿಳಾ ಸಮುದಾಯ ಶತಮಾನದ ಮೊದಲ ದಶಕದ ಪೂರ್ವಕ್ಕೆ ಹೋಲಿಸಿದರೆ ದೊಡ್ಡ ಪ್ರಮಾಣದಲ್ಲಿಯೇ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದವು. ಎಪ್ಪತ್ತು ಮತ್ತು ಎಂಬತ್ತರ ದಶಕವಂತೂ ದಲಿತ-ಬಂಡಾಯ ಸಂಘಟನೆಗಳ ಹುಟ್ಟಿಗೂ, ಜಾತಿ ವಿನಾಶ ಸಮ್ಮೇಳನ, ಜಾಗೃತ ಸಾಹಿತ್ಯ ಸಮ್ಮೇಳನದಂತಹ ಪ್ರಖರ ಸಾಹಿತ್ಯ ಚಟುವಟಿಕೆಗಳಿಗೂ ಕೇಂದ್ರ ಸ್ಥಾನವಾಯಿತು. ಸಾಹಿತ್ಯ ಸೃಷ್ಟಿಯಲ್ಲದೇ ಆವರೆಗಿನ ಕನ್ನಡ ಸಾಹಿತ್ಯವನ್ನು ಪುನರ್ ಮೌಲ್ಯಮಾಪನ ಮಾಡುವ ಈ ಸಾಹಿತ್ಯದಲ್ಲಿ 'ಬೂಸಾ ಎಷ್ಟು? ಸಾಚಾ ಎಷ್ಟು?' ಎಂದು ಮೌಲ್ಯನಿರ್ಣಯ ಮಾಡುವ ಕೆಲಸವೂ ಆರಂಭಗೊಂಡಿತು.

ಸಾಹಿತ್ಯದಲ್ಲಿ ಸೃಜನಶೀಲ ಮತ್ತು ಸೃಜನೇತರ ಎಂಬ ವಿಭಾಗೀಕರಣವೂ ಈ ಕಾಲಘಟ್ಟದಲ್ಲಿ ಢಾಳಾಗಿ ಗೋಚರಿಸಿತು. ಕತೆ-ಕವಿತೆ-ಕಾದಂಬರಿಗಳಂಥಹ ಪ್ರಕಾರಗಳು ಸೃಜನಶೀಲವೆಂದೂ ಸಂಶೋಧನೆ, ವಿಚಾರ ಸಾಹಿತ್ಯ, ಅಂಕಣ ಬರಹದಂತಹ ಪ್ರಕಾರಗಳು ಸೃಜನೇತರ ಎಂದು ಗುರುತಿಸಲ್ಪಟ್ಟವು. ಆದರೆ ಶತಮಾನದ ಕೊನೆಗೆ ಈ ವಿಭಾಗೀಕರಣದ ಗೆರೆಗಳು ಅಳಿಸಿಹೋಗಲಾರಂಭಿಸಿದವು.

ಬಿ.ಎಂ.ಶ್ರೀ, ಡಿವಿಜಿ, ಮಾಸ್ತಿ, ಸೇಡಿಯಾಪು ಕೃಷ್ಣಭಟ್ಟ, ಕುವೆಂಪು, ಪಂಡಿತ ತಾರಾನಾಥ, ಶ್ರೀರಂಗ, ಶಂಬಾ, ಶಿವರಾಮ ಕಾರಂತ, ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ

ತೇಜಸ್ವಿ, ಕೆ.ವಿ.ಸುಬ್ಬಣ್ಣ, ದೇವನೂರ ಮಹಾದೇವ, ಡಿ.ಆರ್.ನಾಗರಾಜ್, ಬರಗೂರು ರಾಮಚಂದ್ರಪ್ಪ ಇವರೆಲ್ಲ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿಯಂತೆಯೇ ವಿಚಾರ ಸಾಹಿತ್ಯದಲ್ಲಿಯೂ ಮಹತ್ವದ್ದನ್ನು ಸಾಧಿಸಿದರು. ಮಾಸ್ತಿ, ಡಿವಿಜಿಯವರ ವಿಚಾರ ಸಾಹಿತ್ಯ ತುಸು ಸಂಪ್ರದಾಯವಾದಿ ಎಂದು ವಿಮರ್ಶಾವಲಯ ಗುರುತಿಸಿತು. ಸಂಶೋಧನೆಯಲ್ಲಿ ತಮ್ಮನ್ನು ಪೂರ್ಣ ತೊಡಗಿಸಿಕೊಂಡ ಶಂಬಾ ಜೋಶಿ ಅವರ ವಿಚಾರ ಸಾಹಿತ್ಯ ಸಂಶೋಧನೆಯ ಹಿನ್ನೆಲೆಯಲ್ಲಿ ಹೆಚ್ಚು ಆಳವನ್ನು ಪಡೆಯಿತು. ಡಿ.ಎನ್ ಶಂಕರಭಟ್ಟ, ಚಿದಾನಂದ ಮೂರ್ತಿ, ಕೆ.ವಿ ನಾರಾಯಣ ಅವರು ಭಾಷಾಶಾಸ್ತ್ರಜ್ಞರಾಗಿದ್ದು ಅವರ ವಿಚಾರ ಸಾಹಿತ್ಯ ವಿದ್ವತ್ ವಲಯಗಳಲ್ಲಿ ಚರ್ಚೆಗೆ ಒಳಗಾಯಿತು.

ಕನ್ನಡದಲ್ಲಿ ವಿಚಾರ ಸಾಹಿತ್ಯವನ್ನೇ ತಮ್ಮ ಪ್ರಧಾನ ಪ್ರಕಾರವಾಗಿಸಿಕೊಂಡವರ ಸಂಖ್ಯೆ ಕಡಿಮೆ. ಹೀಗೆ ವಿಚಾರ ಸಾಹಿತ್ಯಕ್ಕೆ ಸೀಮಿತರಾದವರು ನಿರ್ದಿಷ್ಟ ಚಳವಳಿಗಳಲ್ಲಿ ತೊಡಗಿಸಿಕೊಂಡ ಹೋರಾಟಗಾರರು. ತಮ್ಮ
ಹೋರಾಟಕ್ಕೆ ಪೂರಕವಾದ ಸಾಹಿತ್ಯ ರಚಿಸುವುದು ಇವರ ಆದ್ಯತೆಯಾಗಿತ್ತು. ಆಲೂರು ವೆಂಕಟರಾಯರು,
ಪಾಟೀಲ ಪುಟ್ಟಪ್ಪ ಅವರು ಈ ಸಾಲಿನಲ್ಲಿ ಪ್ರಮುಖರಾಗಿದ್ದಾರೆ.

ಈ ಅಧ್ಯಯನದಲ್ಲಿ ಪ್ರಾತಿನಿಧಿಕವಾಗಿ ಲೇಖಕರನ್ನು ಆಯ್ದುಕೊಂಡು ಅಧ್ಯಯನ ಮಾಡಲಾಗಿದೆ. ಅವರುಗಳೆಂದರೆ ಬಿ.ಎಂ.ಶ್ರೀ, ಕುವೆಂಪು, ಲಂಕೇಶ್, ಆಲೂರು ವೆಂಕಟರಾಯರು, ಚಿದಾನಂದಮೂರ್ತಿ, ಶಂ.ಬಾ ಜೋಶಿ, ಯು.ಆರ್ ಅನಂತಮೂರ್ತಿ, ಕೆ.ವಿ.ಸುಬ್ಬಣ್ಣ, ಅ.ನ.ಕೃ, ಡಿ.ಎನ್ ಶಂಕರಭಟ್ಟ, ಕೆ.ವಿ ನಾರಾಯಣ, ಮತ್ತು ಬರಗೂರು ರಾಮಚಂದ್ರಪ್ಪ ಅವರು. ಜತೆಗೆ ಸಂಘಟನೆಯಾಗಿ ಕರ್ನಾಟಕ ರಕ್ಷಣಾ ವೇದಿಕೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪ್ರಧಾನವಾಗಿ ಬಿ.ಎಂ.ಶ್ರೀ ಅವರಿಗೆ 'ಕನ್ನಡ ಮಾತು ತಲೆಯೆತ್ತುವ ಬಗೆಗೆ' ಚಿಂತನೆ ಮಾಡಲು ಕನ್ನಡವನ್ನು ಇಂಗ್ಲಿಷ್ ಭಾಷೆಯಲ್ಲಿ ರಚಿತವಾದ ಸಾಹಿತ್ಯ ರಚನೆಗೆ ಸರಿಸಾಟಿಯಾಗಿ ಸಜ್ಜುಗೊಳಿಸುವ ತುರ್ತು ಇತ್ತು. ಡಿ.ಎನ್ ಶಂಕರಭಟ್ಟರಿಗೆ ಕೆಳವರ್ಗದವರಿಗೆ ತ್ರಾಸವೆನಿಸದ ಕನ್ನಡವನ್ನು ರೂಪಿಸುವ ತುರ್ತು ಎದುರಾಗಿದೆ. ಬರಗೂರು ಅವರ ಚಿಂತನೆ ಸಮಷ್ಟಿ ಕನ್ನಡ ಭಾಷೆಯನ್ನು ಉದ್ದೇಶಿಸಿದ್ದರೂ ಅದು ಭಾಷೆಯಾಗಿ ಇಂಗ್ಲಿಶನ್ನು ಕಲಿಯಲೇಬೇಕಾದ ಕೆಳವರ್ಗದವರ ಅನಿವಾರ್ಯತೆಯನ್ನು ಒಡಲಲ್ಲಿಟ್ಟುಕೊಂಡಿದೆ. ಡಿ.ಎನ್. ಶಂಕರಭಟ್ಟರು ದ್ರಾವಿಡತನದ ಹಿನ್ನೆಲೆಯಿಂದ ಕನ್ನಡದ ಅಸ್ಮಿತೆಯನ್ನು ಕಟ್ಟುತ್ತಿದ್ದಾರೆ. ಇವರೊಂದಿಗೆ ಆಲೂರು ವೆಂಕಟರಾಯರು, ಶಂಬಾ ಜೋಷಿ, ಕುವೆಂಪು, ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ ಮುಂತಾದವರ ಚಿಂತನೆಗಳು ವಿಭಿನ್ನ ನೆಲೆಗಳನ್ನು ಹೊಂದಿವೆ.

ಕನ್ನಡ ಅಸ್ಮಿತೆ ಕುರಿತ ಚಿಂತನಾಧಾರೆಗಳನ್ನು ಗುರುತಿಸುವಾಗ ಅವುಗಳು ಕ್ರಮವಾಗಿ ಸಾಹಿತ್ಯವಾದಿ, ಭಾಷಾ ಮೂಲಭೂತವಾದಿ, ಸಾಂಸ್ಕೃತಿಕ ಹುಡುಕಾಟ, ಜನಪ್ರಿಯ, ದ್ರಾವಿಡಶೋಧ, ಮತ್ತು ಸಾಮಾಜಿಕ ನೆಲೆಗಳಲ್ಲಿ ಹರಿದುಬಂದಿರುವುದನ್ನು ಗುರುತಿಸಬಹುದು. ಈ ನೆಲೆಗಳಿಗೆ ಕಾರಣವಾದದ್ದು ಆಯಾಯ ಕಾಲಘಟ್ಟದ ನಿರೀಕ್ಷೆಗಳು.

ಇಪ್ಪತ್ತನೆಯ ಶತಮಾನದ ಆರಂಭಕಾಲದಲ್ಲಿ ಕನ್ನಡಭಾಷೆಗೆ ಎದುರಾದ ಬಿಕ್ಕಟ್ಟುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಎರಡು ಬಗೆಯ ಚಿಂತನೆಗಳು ಕುಡಿಯೊಡೆದಂತೆ ತೋರುತ್ತವೆ. ಎರಡು ಚಿಂತನೆಗಳಲ್ಲಿಯೂ ಇದ್ದ ಸಮಾನ ನೆಲೆಯೆಂದರೆ ಕನ್ನಡಕ್ಕೆ ಅನ್ಯಭಾಷೆಗಳಿಂದ ಬಿಕ್ಕಟ್ಟುಗಳು ಎದುರಾಗುತ್ತಿದ್ದು ಅವುಗಳು ಕನ್ನಡದ ಎದುರಾಳಿಗಳು ಎಂಬ ತಿಳಿವಳಿಕೆಯನ್ನು ಹೊಂದಿದ್ದು.

ಮೊದಲ ಚಿಂತನಾಧಾರೆ ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಭುತ್ವ ಭಾಷೆಗಳಾದ ಇಂಗ್ಲಿಶ್ ಮತ್ತು ಸಂಸ್ಕೃತಗಳನ್ನು ಕನ್ನಡದ ಪ್ರಧಾನ ಎದುರಾಳಿ ಭಾಷೆಗಳೆಂದು ಗ್ರಹಿಸಿದರೆ ಎರಡನೆಯ ಚಿಂತನಾಧಾರೆ ನೆರೆಯ ಮರಾಠಿಯಂತಹ ಭಾಷೆಗಳನ್ನು ಕನ್ನಡದ ಎದುರಾಳಿ ಭಾಷೆಗಳೆಂದು ಪರಿಗಣಿಸಿತ್ತು. ಇಂಗ್ಲಿಶ್ ಮತ್ತು
ಸಂಸ್ಕೃತಗಳ ದಟ್ಟ ಪ್ರಭಾವದಲ್ಲಿ ಕನ್ನಡವನ್ನು ಉಳಿಸಿಕೊಳ್ಳಬೇಕಾದ ತುರ್ತಿನ ಕುರಿತು ಚಿಂತಿಸಿದವರು ಸಾಹಿತ್ಯದ ಮೂಲಕ ಕನ್ನಡಕ್ಕೆ ಹೊಸ ಚೈತನ್ಯವನ್ನು ಕೊಡುವ ಪ್ರಯತ್ನಗಳನ್ನು ಮಾಡಿದರು. ಈ ಚಿಂತಕರು ವಿಶ್ವವಿದ್ಯಾಲಯಗಳಲ್ಲಿದ್ದ ಸಾಹಿತಿಗಳೇ ಆಗಿದ್ದುದು ಇದಕ್ಕೆ ಪ್ರೇರಣೆಯಾಗಿರಬಹುದು. ಯಾವ ಭಾಷೆಗಳು ಕನ್ನಡವನ್ನು ಅಳಿಸಿ ಹಾಕುತ್ತಿವೆ ಎಂದು ಇವರು ಭಾವಿಸಿದರೋ ಅದೇ ಭಾಷೆಯ ಚೈತನ್ಯದಾಯಕ ಅಂಶಗಳಿಂದ ಕನ್ನಡಕ್ಕೆ ಶಕ್ತಿಧಾರಣೆ ಮಾಡಲು ಇವರು ಬಯಸಿದರು. ಬಿ.ಎಂ.ಶ್ರೀ ಅವರು ಇಂಗ್ಲಿಶಿನ, ಕುವೆಂಪು ಅವರು ಸಂಸ್ಕೃತದ ಚೈತನ್ಯದಾಯಕ ಧಾತುಗಳನ್ನು ಕನ್ನಡಕ್ಕೆ ಉಣಿಸುವ ಪ್ರಯತ್ನ ಮಾಡಿದರು.

ಬಿ.ಎಂ.ಶ್ರೀ ಮತ್ತು ಕುವೆಂಪು ಸಂಸ್ಕೃತ ಅಥವಾ ಇಂಗ್ಲಿಶುಗಳ ಜತೆ ಕನ್ನಡದ ಸಂಬಂಧ ಹೇಗಿರಬೇಕೆಂಬ ವಿಷಯದಲ್ಲಿ ತೆಗೆದುಕೊಂಡ ನಿಲುವಿನ ಹಿಂದೆ, ಕನ್ನಡ ಭಾಷೆಯನ್ನು ಕಟ್ಟುವ, ಕನ್ನಡ ಸಾಹಿತ್ಯಕ್ಕೇ ಕಸುವು ತುಂಬುವ, ಹಾಗೂ ಕನ್ನಡಿಗರ ತಿಳುವಳಿಕೆಯನ್ನು ಬೆಳೆಸುವ ಸಾಮುದಾಯಿಕ ಆಶಯಗಳಿದ್ದವು.[೨] ಸಾಹಿತ್ಯ ಮತ್ತು ಶಿಕ್ಷಣದಲ್ಲಿ ಈ ಚಿಂತಕರ ಚಿಂತನೆಗಳಿಗೆ ಪ್ರೇರಣೆ ಒದಗಿಸಿದ್ದು ಬ್ರಿಟಿಶ್ ವಸಾಹತುಶಾಹಿಯ ಪ್ರಭಾವದಿಂದಾಗಿ ರೂಪುಗೊಂಡ ಲೋಕಗ್ರಹಿಕೆಯ ಕ್ರಮಗಳು. ಇಂಗ್ಲಿಶ್ ಸಾಹಿತ್ಯ ಮತ್ತು ಪಾಶ್ಚಿಮಾತ್ಯ ಬದುಕಿನ ವೈಚಾರಿಕತೆ ಕನ್ನಡಕ್ಕೆ ದಕ್ಕಿದ್ದು ಇವರಿಬ್ಬರು ಆಯ್ದುಕೊಟ್ಟ 'ಇಂಗ್ಲಿಶಿ'ನಿಂದಾಗಿಯೇ. ಸಂಸ್ಕೃತದ ಮೂಲಕ ಯಥಾಸ್ಥಿತಿವಾದವನ್ನು ಮುಂದುವರೆಸಿದವರ ಹುನ್ನಾರಗಳನ್ನು ಮರೆಯದೆಯೂ ಕುವೆಂಪು ಸಂಸ್ಕೃತದಲ್ಲಿದ್ದ ಸಾಹಿತ್ಯ ನಿರ್ಮಿತಿಯ ಹಿಂದಿನ ಕೆಲವು ಕಲಾತ್ಮಕ ಸೂಕ್ಷ್ಮಗಳನ್ನು ಕನ್ನಡಕ್ಕೆ

ದೊರಕಿಸಿದ್ದು ಗಮನಿಸಬೇಕಾದ್ದು. ಎದುರಾಳಿಯ ಶಕ್ತಿಯನ್ನು ಪಡೆಯುವ ಮೂಲಕವೇ ಎದುರಾಳಿಯನ್ನು ಮಣಿಸಿ, ಅಪ್ರಸ್ತುತಗೊಳಿಸಿ, ತನ್ನತನವನ್ನು ಕಾಪಾಡಿಕೊಳ್ಳುವ ಈ ವಿಧಾನ ಕನ್ನಡ ಅಸ್ಮಿತೆ ಕುರಿತ ಸಂದರ್ಭದಲ್ಲಿ ಅಪರೂಪದ್ದಾಗಿದೆ.

ಈ ಕಾಲಘಟ್ಟದಲ್ಲಿಯೇ ಚಿಗುರೊಡೆದ ಇನ್ನೊಂದು ಚಿಂತನಾಧಾರೆಯ ಆದ್ಯತೆ ನೆರೆಯ ಭಾಷೆಗಳನ್ನು ಎದುರಾಳಿ ಎಂದು ಭಾವಿಸಿ, ಆ ಭಾಷೆಗಳ ಸುಪರ್ದಿಯಲ್ಲಿದ್ದ ಕನ್ನಡ ಪ್ರದೇಶಗಳನ್ನು ಪಡೆದು ನಿರ್ದಿಷ್ಟ ವ್ಯಾಪ್ತಿಯ ಭೌಗೋಳಿಕ ಕರ್ನಾಟಕವನ್ನು ಕಟ್ಟುವುದಾಗಿತ್ತು. ಈ ಚಿಂತನೆಗಳನ್ನು ಹೊಂದಿದ್ದ ಚಿಂತಕರು ಕರ್ನಾಟಕ ಏಕೀಕರಣ ಚಳುವಳಿಯ ಮುಂದಾಳುಗಳೂ ಆಗಿದ್ದುದು ಅವರ ಚಿಂತನೆಯ ಹಿಂದಿನ ಪ್ರೇರಣೆಯಾಗಿತ್ತು. ಆಲೂರು ವೆಂಕಟರಾಯರು ಈ ಚಿಂತನಾಧಾರೆಯ ಪ್ರಾತಿನಿಧಿಕ ಚಿಂತಕರಾಗಿದ್ದಾರೆ. ಬಲಪಂಥೀಯ ರಾಷ್ಟ್ರೀಯತೆ ಕುರಿತ ಚಿಂತನೆಗಳಿಂದ ಈ ಚಿಂತನಾಧಾರೆ ಪ್ರಭಾವಿತವಾಗಿದೆ. ಒಂದು ವರ್ಗದ ಚರಿತ್ರೆ ಸೃಷ್ಟಿಸಿದ ಗತದ ವೈಭವವನ್ನು ಮುನ್ನೆಲೆಗೆ ತರುತ್ತ ಭಾವನಾತ್ಮಕವಾಗಿ ಕರ್ನಾಟಕವನ್ನು ಒಂದುಗೂಡಿಸುವ ಹಂಬಲ ಈ ಚಿಂತನೆಗಿರುವ ಪ್ರೇರಣೆಯಾಗಿದೆ. ಇದು ಮರಾಠಿಯಂತಹ ನೆರೆಯ ಭಾಷೆಗಳನ್ನು ಎದುರಾಳಿಯ ಸ್ಥಾನದಲ್ಲಿಟ್ಟು ನೋಡಿದರೂ ಈ ಚಿಂತನೆಯ ತಾತ್ವಿಕತೆ ಅದೇ ಮರಾಠಿ ಭಾಷಾ ಏಕೀಕರಣ ಚಳುವಳಿಯಿಂದ ಬಂದಿರುವುದು ವೈರುಧ್ಯದ ಸಂಗತಿ. ಈ ಮೂಲಕ ಹೊರಹೊಮ್ಮುವ ಕನ್ನಡ ಅಸ್ಮಿತೆಯ ತದ್ವಿರುದ್ಧ ಎನಿಸುವ ಚಹರೆಯೆಂದರೆ ತನ್ನ ಎದುರಾಳಿ ಭಾಷೆಗಳನ್ನು ಅವುಗಳ ಚೈತನ್ಯವನ್ನು ಹೀರಿಕೊಂಡು ಅದೇ ಜಾಣತಂತ್ರದಿಂದ ಮಣಿಸುವುದು ಒಂದು ಬಗೆಯಾದರೆ, ಎದುರಾಳಿ ಭಾಷೆಗಳ ಜೊತೆ ಬೀದಿಕಾಳಗ ಸೇರಿದಂತೆ ಎಲ್ಲ ಬಗೆಯ ವಾಗ್ವಾದ ಸೃಷ್ಟಿಸುತ್ತ ಮೂಲದಲ್ಲಿ ಅವುಗಳದೇ ತಾತ್ವಿಕತೆಯನ್ನು ತನ್ನದನ್ನಾಗಿ ಮಾಡಿಕೊಳ್ಳುವುದು ಎರಡನೆಯ ಬಗೆ. ಈ ವಿಭಿನ್ನ

ಚಿಂತನಾಧಾರೆಗಳನ್ನು ಕ್ರಮವಾಗಿ 'ಸಾಹಿತ್ಯವಾದಿ ಕನ್ನಡ ಅಸ್ಮಿತೆಯ ಚಿಂತನಾಧಾರೆ' ಮತ್ತು 'ಮೂಲಭೂತವಾದಿ ಕನ್ನಡ ಅಸ್ಮಿತೆಯ ಚಿಂತನಾಧಾರೆ' ಎಂದು ಗುರುತಿಸಬಹುದು. ಈ ಚಿಂತನಾಧಾರೆಗಳು ನಿರ್ದಿಷ್ಟ ಕಾಲಘಟ್ಟಗಳಲ್ಲಿ ಚಿಗುರೊಡೆದಿದ್ದರೂ ಅದು ಶತಮಾನದುದ್ದಕ್ಕೂ ಬೇರೆ ಬೇರೆ ಚಿಂತಕರ ಮೂಲಕ ಹರಿದುಬಂದಿರುವುದನ್ನು ಗುರುತಿಸಬಹುದು. ಬಿ.ಎಂ.ಶ್ರೀ ಮತ್ತು ಕುವೆಂಪು ಅವರೊಂದಿಗೆ 'ಸಾಹಿತ್ಯವಾದಿ ಕನ್ನಡ ಅಸ್ಮಿತೆಯ ಚಿಂತನಾಧಾರೆ'ಯ ನಂತರದ ಕಾಲಘಟ್ಟದ ಪ್ರಾತಿನಿಧಿಕ ಚಿಂತಕರನ್ನಾಗಿ ಈ ಅಧ್ಯಯನ ಪಿ.ಲಂಕೇಶರನ್ನು ಆಯ್ದುಕೊಂಡಿದೆ. ಆಲೂರು ವೆಂಕಟರಾಯರೊಂದಿಗೆ 'ಮೂಲಭೂತವಾದಿ ಕನ್ನಡ ಅಸ್ಮಿತೆಯ ಚಿಂತನಾಧಾರೆ'ಯ ನಂತರದ ಕಾಲಘಟ್ಟದ ಪ್ರಾತಿನಿಧಿಕ ಚಿಂತಕರನ್ನಾಗಿ ಚಿದಾನಂದಮೂರ್ತಿ ಅವರನ್ನು ಆಯ್ದುಕೊಂಡಿದೆ.

ಬಿ.ಎಂ.ಶ್ರೀ ಬ್ರಿಟಿಷ್ ವಸಾಹತುಶಾಹಿ ಕುರಿತು ತಕರಾರುಗಳಿಲ್ಲದ ಮತ್ತು ಮೈಸೂರು ರಾಜಪ್ರಭುತ್ವಕ್ಕೆ ನಿಷ್ಠೆ ಹೊಂದಿದ್ದ ಇಂಗ್ಲಿಶ್ ಪ್ರಾಧ್ಯಾಪಕರು. ಸಂಸ್ಕೃತದ ಹೊರೆಯಿಂದ ಕನ್ನಡವನ್ನು ಬಿಡಿಸಿ ಅದಕ್ಕೆ ಇಂಗ್ಲಿಶಿನ ಚೈತನ್ಯಧಾರಣೆ ಮಾಡಲು ಪ್ರಯತ್ನಿಸಿದವರು. ಶ್ರೀ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆ ಶತಮಾನದುದ್ದಕ್ಕೂ ಕನ್ನಡನುಡಿಯ ಚರ್ಚೆಗಳಲ್ಲಿ ತನ್ನ ಪ್ರಭಾವವನ್ನು ಬೀರುತ್ತಲೇ ಬಂದಿದೆ.

ಭಾರತೀಯ ಸಂದರ್ಭದಲ್ಲಿ, ವಿವಿಧ ನೆಲೆಗಳಲ್ಲಿ ಇಂಗ್ಲಿಶ್ ಬಿಡುಗಡೆ ಮತ್ತು ಬಂಧನಕ್ಕೆ ಕಾರಣವಾಗುತ್ತಿರುವುದರ ಕುರಿತು ಖಚಿತತೆ ಇದ್ದ ಕುವೆಂಪು ೨೦ನೇ ಶತಮಾನದ ಕನ್ನಡದ ವೈಚಾರಿಕ ಆಕೃತಿಯಾಗಿ ಬೆಳೆದವರು. ಸಂಸ್ಕೃತಭೂಯಿಷ್ಟ ಭಾಷೆಯನ್ನು ತಮ್ಮ ಸಾಹಿತ್ಯದಲ್ಲಿ ವಿಪುಲವಾಗಿ ಬಳಸಿದರೂ ಕನ್ನಡದ ತಳಸಮುದಾಯದ ಚೈತನ್ಯಶಕ್ತಿಯನ್ನು ಗುರುತಿಸಿ ಅಭಿವ್ಯಕ್ತಿಸಿದವರು.

ತಮ್ಮ ಹೆಸರಿನ ಪತ್ರಿಕೆಯ ಮೂಲಕ ಚಿಕಿತ್ಸಕಗುಣದ ಆರೋಗ್ಯಕಾರಿ ಕನ್ನಡ ಮನಸ್ಸನ್ನು ರೂಪಿಸಿದ ಲಂಕೇಶ್ ಕನ್ನಡಭಾಷೆಗೆ ವಿಶಿಷ್ಟ ಗದ್ಯವನ್ನು ಕೊಡುಗೆಯಾಗಿ ನೀಡಿದವರು. ಕುವೆಂಪು ಬಾಹ್ಯ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರಲಿಲ್ಲ. ಆದರೆ ತಮ್ಮ ಬರವಣಿಗೆಯನ್ನೇ ಚಳುವಳಿಯಾಗಿ ರೂಪಿಸಿದವರು. ಇದು ಲಂಕೇಶರ ವಿಚಾರದಲ್ಲಿಯೂ ಸತ್ಯ. ಸಾಹಿತ್ಯದ ವಿವಿಧ ಪ್ರಾಕಾರಗಳಲ್ಲಿ ಸಾಹಿತ್ಯ ರಚಿಸಿ ಆ ಮೂಲಕ ಕನ್ನಡದ ಒಂದು ತಲೆಮಾರನ್ನು ಪ್ರಭಾವಿಸಿದವರು ಲಂಕೇಶ್.

ರಾಷ್ಟ್ರೀಯವಾದಿ ಚಿಂತನೆಗಳಿಂದ ಪ್ರಭಾವಿತರಾದ ಆಲೂರು ವೆಂಕಟರಾಯರು ಆ ಹಾದಿಯ ಮೂಲಕವೇ ಕರ್ನಾಟಕ ಏಕೀಕರಣ ಚಳುವಳಿಯ ರಂಗಪ್ರವೇಶ ಮಾಡಿ ಅದನ್ನು ಮುನ್ನಡೆಸಿದವರು. ಪತ್ರಕರ್ತರಾಗಿ ಹಲವು ಪತ್ರಿಕೆಗಳಲ್ಲಿ ಮುಖ್ಯ ಜವಾಬ್ದಾರಿ ವಹಿಸಿಕೊಂಡವರು. ಅವರ ಪತ್ರಿಕಾ ಬರವಣಿಗೆ ಮತ್ತು ಸಾಹಿತ್ಯದ ಸಿಂಹಪಾಲು ಏಕೀಕರಣ ಕರ್ನಾಟಕವನ್ನು ಸಾಕಾರಗೊಳಿಸುವ ವಿಚಾರಗಳನ್ನೇ ತುಂಬಿಕೊಂಡಿವೆ.

ಭಾಷಾ ವಿಜ್ಞಾನಿಯಾಗಿರುವ ಎಂ.ಚಿದಾನಂದಮೂರ್ತಿ ಅವರು ಸಂಶೋಧಕರಾಗಿಯೂ ಹೆಸರು ಮಾಡಿದ್ದಾರೆ. ಶಾಸನಗಳ ಅಧ್ಯಯನ ಅವರ ಸಂಶೋಧನಾ ಕ್ಷೇತ್ರದ ಮುಖ್ಯ ಆಸಕ್ತಿಯಾಗಿದೆ. ಕನ್ನಡ ಸಂಸ್ಕೃತಿಯ ಬಗ್ಗೆ ಅಗಾಧ ಹೆಮ್ಮೆ ಮತ್ತು ವರ್ತಮಾನದಲ್ಲಿ ಅದು ಮುಕ್ಕಾಗುತ್ತಿರುವ ಬಗ್ಗೆ ಆಕ್ರೋಶದಿಂದ ಕೂಡಿರುವ ತಮ್ಮ ಚಿಂತನೆಗಳಿಂದ ಸದಾ ಸುದ್ದಿಯಲ್ಲಿರುವ ಚಿದಾನಂದಮೂರ್ತಿಗಳು ಕನ್ನಡ ಅಸ್ಮಿತೆಯ ಚಿಂತನೆಯ ಒಂದು ಪ್ರಮುಖ ಧಾರೆಯನ್ನು ನಿಸ್ಸಂಶಯವಾಗಿ ಪ್ರತಿನಿಧಿಸುತ್ತಿದ್ದಾರೆ.

ಶಂಬಾ ಜೋಶಿ ಅವರಿಗೆ ಆಲೂರರಂತೆ ನೆರೆಯ ಮರಾಠಿ ಭಾಷೆ ಕನ್ನಡವನ್ನು ದಮನಿಸುವ ಭಾಷೆಯಾಗಿ ಕಂಡರೂ ಅವರ ಆದ್ಯತೆಯಿದ್ದುದು ಲಿಖಿತ ಪಠ್ಯಗಳೊಂದಿಗೆ ಪುರಾಣ, ಸಂಕೇತ,

ಆಚರಣೆ, ಜನರ ನಂಬಿಕೆಗಳ ಮೂಲಕ ಸಾಂಸ್ಕೃತಿಕವಾಗಿ ಕನ್ನಡ ಅಸ್ಮಿತೆಯನ್ನು ನಿರ್ವಚಿಸುವುದರಲ್ಲಿ. ಕನ್ನಡ ಅಸ್ಮಿತೆಯ ಈ ಬಗೆಯ ಚಿಂತನಾಧಾರೆಯನ್ನು 'ಸಾಂಸ್ಕೃತಿಕ ಹುಡುಕಾಟದ ನೆಲೆ' ಎಂದು ಗುರುತಿಸಬಹುದು. ಈ ನೆಲೆಯ ಕನ್ನಡ ಅಸ್ಮಿತೆಯ ಚಿಂತನಾಧಾರೆಯಲ್ಲಿ ನಂತರದ ಕಾಲಘಟ್ಟದ ಚಿಂತಕರನ್ನಾಗಿ ಯು.ಆರ್ ಅನಂತಮೂರ್ತಿ ಮತ್ತು ಕೆ.ವಿ.ಸುಬ್ಬಣ್ಣ ಅವರನ್ನು ಈ ಅಧ್ಯಯನ ಆಯ್ದುಕೊಂಡಿದೆ.

ಕನ್ನಡ ಜನಸಮುದಾಯದ ಬೇರುಗಳನ್ನು ವಿಭಿನ್ನ ಆಕರಗಳ ಮೂಲಕ ಹುಡುಕಲು ಪ್ರಯತ್ನಿಸಿದ ಶಂಬಾ ಜೋಶಿ ಅವರು ಆ ಮೂಲಕವೇ ಕನ್ನಡ ಸಂಶೋಧನೆ ಸಾಗಬೇಕಾದ ಹಾದಿಯನ್ನು ನಿರ್ದೇಶಿಸಿದವರು. ಕನ್ನಡದ ಮೇಲೆ ಮರಾಠಿಯ ಅಧಿಪತ್ಯದ ವಿರೋಧ ಶಂ.ಬಾ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳಲ್ಲಿ ಮತ್ತೆ ಮತ್ತೆ ಕಾಣುತ್ತದೆ. ಶಂಬಾ ಅವರು ಮರಾಠಿ ಮೂಲದವರು ಎಂಬುದು ಕನ್ನಡ ಅಸ್ಮಿತೆ ರೂಪಿಸುವಲ್ಲಿ ನೆರೆಹೊರೆಯ ಭಾಷಿಕರ ಪಾತ್ರವನ್ನು ಅರಿಯುವಂತೆ ಪ್ರೇರೇಪಿಸುತ್ತದೆ.

'ಇಂಗ್ಲಿಶ್ ಬ್ರಾಹ್ಮಣ, ಕನ್ನಡ ಶೂದ್ರ' ದಂತಹ ದಟ್ಟ ಸಾಂಸ್ಕೃತಿಕ ರೂಪಕಗಳ ಮೂಲಕವೇ ಕನ್ನಡ ಅಸ್ಮಿತೆಯನ್ನು ಚಿಂತಿಸಿದವರು ವೃತ್ತಿಯಲ್ಲಿ ಇಂಗ್ಲಿಶ್ ಪ್ರಾಧ್ಯಾಪಕರಾಗಿದ್ದ ಯು.ಆರ್ ಅನಂತಮೂರ್ತಿ ಅವರು. ಚಳುವಳಿಗಳ ಆರ್ಭಟ ಮತ್ತು ಘೋಷಣೆಗಳಾಚೆ ಅವನ್ನು ವಿವೇಕದಿಂದ ಪರೀಕ್ಷಿಸಿದವರು. ಎಲ್ಲಾ ವಿಕಾರಗಳಿಂದ ಕನ್ನಡದ ಅಸ್ಮಿತೆಯನ್ನು ಪಾರು ಮಾಡುವುದು ನಿಜದ ಅರ್ಥದಲ್ಲಿ ಅನಂತಮೂರ್ತಿ ಅವರಿಗೆ 'ಜೀವನ್ಮರಣದ ಪ್ರಶ್ನೆ'ಯಾಗಿತ್ತು.

ವಿಶ್ವಾತ್ಮಕ ನೆಲೆಯಲ್ಲಿ ಕನ್ನಡ ಅಸ್ಮಿತೆಯನ್ನು ಚಿಂತಿಸಿದ ಕೆ.ವಿ ಸುಬ್ಬಣ್ಣ ಅವರು ತಮ್ಮ ನೀನಾಸಂ ರಂಗ ಚಟುವಟಿಕೆಗಳ ಮೂಲಕ ಅದನ್ನು ನೆಲೆಗೊಳಿಸಲು ಯತ್ನಿಸಿದವರು. ಎಂತಹ ಬಿಕ್ಕಟ್ಟಿನಲ್ಲಿಯೂ ತನ್ನನ್ನು ತಾನು ಉಳಿಸಿಕೊಂಡು ಮುಂದೆ ಸಾಗುವ ಗುಣ ಕನ್ನಡಕ್ಕಿದೆ ಎಂಬ ಕಡುವಿಶ್ವಾಸದಲ್ಲಿ ಹುಟ್ಟುವ ಸುಬ್ಬಣ್ಣ ಅವರ ಕನ್ನಡ ಅಸ್ಮಿತೆ ಸಾಹಿತ್ಯಪಠ್ಯಗಳಿಂದಲೂ ಆಕಾರ ಪಡೆದಿದೆ.

ಅರವತ್ತರ ಸುಮಾರಿನ ಕನ್ನಡ ಪರ ಚಳುವಳಿಗಳು ಒಂದು ಕಡೆ ಕನ್ನಡಿಗರ ಅವಕಾಶಗಳನ್ನು ವಿಸ್ತರಿಸಬೇಕೆಂಬ, ಕಾಯ್ದುಕೊಳ್ಳಬೇಕೆಂಬ ಅಪೇಕ್ಷೆಯನ್ನೂ ಇನ್ನೊಂದೆಡೆ ಕನ್ನಡ ಪ್ರಜ್ಞೆಯನ್ನು ಜಾಗೃತ ಗೊಳಿಸುವ ಉದ್ದೇಶವನ್ನು ಹೊಂದಿದ್ದವು. ಕನ್ನಡ ಪ್ರಜ್ಞೆಯ ಬಗ್ಗೆ ಜಾಗೃತಿ ಮೂಡಿಸಲು ಏಕೀಕರಣದ ಸಂದರ್ಭದಲ್ಲಿ ಅನುಸರಿಸಿದ ಚಾರಿತ್ರಿಕ ಮರುಗಳಿಕೆಯ ವಿಧಾನವನ್ನೇ ಈಗಲೂ ಮುಂದುವರೆಸಲಾಯಿತು. ಅಂದರೆ ಕರ್ನಾಟಕ ಪರಂಪರೆಯ ಸಾಧನೆಗಳನ್ನು ಗುರುತಿಸಿ ಅವುಗಳ ಬಗೆಗೆ ಅಭಿಮಾನವನ್ನು ಮೂಡಿಸುವ ಮೂಲಕ ಕನ್ನಡ ಪ್ರಜ್ಞೆಯನ್ನು ನೆಲೆಗೊಳಿಸಬಹುದು ಎಂಬ ನಂಬಿಕೆ ಇಲ್ಲಿದೆ.[೩] ಈ ಬಗೆಯ ಕನ್ನಡ ಅಸ್ಮಿತೆಯನ್ನು 'ಜನಪ್ರಿಯ ನೆಲೆಯ ಚಿಂತನಾಧಾರೆ' ಎಂದು ಕರೆಯಬಹುದು. ಮೇಲ್ನೋಟಕ್ಕೆ 'ಮೂಲಭೂತವಾದಿ'ಯಂತೆ ಕಾಣುವ ಈ ಚಿಂತನಾಧಾರೆ ಜನರನ್ನು

ಬೇಗ ತನ್ನತ್ತ ಸೆಳೆದು ಕನ್ನಡ ಕಟ್ಟುವಿಕೆಯಲ್ಲಿ ಸಮುದಾಯವನ್ನು ಬಳಸಿಕೊಳ್ಳುವ ಇರಾದೆ ಹೊಂದಿದೆ. ಪ್ರಗತಿಶೀಲ ಸಾಹಿತಿಯಾಗಿ ಕನ್ನಡಪರ ಹೋರಾಟಗಳನ್ನು ಮುನ್ನಡೆಸಿದ ಅ.ನ.ಕೃ ಅವರಲ್ಲಿ ಈ ಮಾದರಿಯ ಚಿಂತನೆಗಳನ್ನು ಅಧ್ಯಯನ ಗುರುತಿಸಿದೆ. ಈ ನೆಲೆಯ ಕನ್ನಡ ಅಸ್ಮಿತೆಯ ಚಿಂತನಾಧಾರೆಯಲ್ಲಿ ನಂತರದ ಕಾಲಘಟ್ಟದ ಕನ್ನಡಪರ ಹೋರಾಟದ ಸಂಘಟನೆಯಾಗಿ ಕರ್ನಾಟಕ ರಕ್ಷಣಾ ವೇದಿಕೆಯನ್ನು ಈ ಅಧ್ಯಯನ ಆಯ್ದುಕೊಂಡಿದೆ.

ಪ್ರಗತಿಶೀಲ ಚಳುವಳಿಯ ಮುಖ್ಯ ಸಾಹಿತಿಗಳಲ್ಲೊಬ್ಬರಾದ ಅ.ನ.ಕೃ ಎಂದೇ ಖ್ಯಾತರಾದವರು ಅ.ನ.ಕೃಷ್ಣರಾಯರು. ಪ್ರಸಿದ್ಧ ಕಾದಂಬರಿಕಾರರಾದ ಅವರು ಕನ್ನಡದ ಓದುಗರ ಹೆಚ್ಚಳಕ್ಕೆ ಕಾರಣರಾಗಿದ್ದರೂ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಕಾಣುವುದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಏಕೀಕರಣ ಚಳುವಳಿಯ ಹೋರಾಟಗಾರರಾಗಿ ಅವರು ಮಾಡಿರುವ ನೂರಾರು ಭಾಷಣ ಮತ್ತು ಪತ್ರಿಕಾ ಹೇಳಿಕೆಗಳಿಂದ.

ಕನ್ನಡಪರ ಸಂಘಟನೆಗಳ ಪ್ರಾತಿನಿಧಿಕ ಸಂಘಟನೆಯಾಗಿ ಕರ್ನಾಟಕ ರಕ್ಷಣಾ ವೇದಿಕೆಯ ಕನ್ನಡ ಅಸ್ಮಿತೆಯನ್ನು ಅರಿಯಲು ಅಧ್ಯಯನ ಪ್ರಯತ್ನಿಸಿದೆ. ಈ ಸಂಘಟನೆ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಹೊಂದಿರುವ ಸೈದ್ಧಾಂತಿಕ ನಿಲುವುಗಳೇನು ಮತ್ತು ಯಾವ ವಿವಾದ ಅಥವಾ ಸಮಸ್ಯೆಗಳನ್ನು ಆದ್ಯತೆಯೆಂದು ಪರಿಗಣಿಸಿ ಹೋರಾಟ ಕಟ್ಟುತ್ತವೆ ಎಂಬುದರತ್ತ ಅಧ್ಯಯನದ ಕೇಂದ್ರವಿದೆ.

ಕನ್ನಡ ಸಂಸ್ಕೃತದಿಂದ ಟಿಸಿಲೊಡೆದ ಭಾಷೆ ಅಲ್ಲ, ಇದು ದ್ರಾವಿಡಭಾಷಾ ಕುಟುಂಬದಿಂದ ಬಂದ ಭಾಷೆ ಎನ್ನುವ ಅರಿವು ಕನ್ನಡವನ್ನು ಸಂಸ್ಕೃತದಿಂದ ಬೇರ್ಪಡಿಸಿ, ದ್ರಾವಿಡ ನೆಲೆಯಿಂದ ನೋಡುವುದಕ್ಕೆ ಪ್ರೇರಣೆ ನೀಡಿತು. ಇದು ದ್ರಾವಿಡಮೂಲದ ಕನ್ನಡವನ್ನು 'ಹೊಸ ಬರಹ'ವಾಗಿ ರಚಿಸಲು ಪ್ರೇರಣೆ ನೀಡಿತು. ಡಿ.ಎನ್. ಶಂಕರಭಟ್ಟರು ಕೆಲವು ದಶಕಗಳಿಂದ ತಪಸ್ಸಿನ ರೀತಿಯಲ್ಲಿ 'ಕನ್ನಡಕ್ಕೆ ಕನ್ನಡದ್ದೇ ಆದ ವ್ಯಾಕರಣ' ಮತ್ತು ಸಂಸ್ಕೃತದಿಂದ ಬಿಡುಗಡೆ ಪಡೆದ ಆಡುಭಾಷೆಯಾಧಾರಿತ 'ಹೊಸ ಬರಹ'ವನ್ನು ರಚಿಸುವ ಕಾಯಕದಲ್ಲಿ ತೊಡಗಿದ್ದಾರೆ. ಕನ್ನಡದೊಂದಿಗೆ ಸಂಸ್ಕೃತ ಮತ್ತು ಇಂಗ್ಲಿಶ್ ಭಾಷೆಯಲ್ಲಿ ಪ್ರಭುತ್ವವನ್ನು ಹೊಂದಿರುವ ಡಿ.ಎನ್ ಶಂಕರಭಟ್ಟರು ದೇಶ-ವಿದೇಶಗಳಲ್ಲಿ ಭಾಷೆಯ ಅಧ್ಯಯನ, ಸಂಶೋಧನೆ, ಕಲಿಸುವಿಕೆಯಲ್ಲಿ ತೊಡಗಿದ್ದವರು.

ಕೆ.ವಿ ನಾರಾಯಣ ಅವರು 'ದ್ರಾವಿಡಶೋಧದ ನೆಲೆ'ಯ ಕನ್ನಡ ಅಸ್ಮಿತೆಯ ಚಿಂತನಾಧಾರೆಗೆ ಕಸುವು ತುಂಬುತ್ತಿರುವ ಇನ್ನೊಬ್ಬ ಪ್ರಮುಖ ಚಿಂತಕರಾಗಿದ್ದು ಅವರನ್ನು ಈ ಅಧ್ಯಯನ ಆಯ್ದುಕೊಂಡಿದೆ. ಕನ್ನಡ ಅಸ್ಮಿತೆಯನ್ನು ಅದರೆಲ್ಲ ಸಂಕೀರ್ಣತೆಯಲ್ಲಿ ಗ್ರಹಿಸಿದವರು ಭಾಷಾ ವಿಜ್ಞಾನಿ ಕೆ.ವಿ ನಾರಾಯಣ ಅವರು. ಮಗುವೊಂದು ಯಾವ ವಯಸ್ಸಿನೊಳಗೆ ಎಷ್ಟು ಭಾಷೆಗಳನ್ನು

ಕಲಿಯಬಹುದು ಎಂಬುದರಿಂದ ಹಿಡಿದು ಆಧುನಿಕ ತಂತ್ರಜ್ಞಾನ ಕನ್ನಡಕ್ಕೆ ಹೇಗೆ ಇಂಬು ನೀಡಿದೆ ಮತ್ತು ಎಲ್ಲಿ ಸಮಸ್ಯೆ ತಂದೊಡ್ಡಿದೆ ಎಂಬುದನ್ನು ಖಚಿತವಾಗಿ ಹೇಳಬಲ್ಲವರು. ಕನ್ನಡದ ಚಿಂತಕರು ಆಧುನಿಕಪ್ರಜ್ಞೆ ಉಳ್ಳವರಾದರೂ ಈ 'ಆಧುನಿಕ ಪ್ರಜ್ಞೆ'ಯೂ ಒಂದು ನಿರ್ದಿಷ್ಟತೆಯಲ್ಲಿ ಸ್ಥಗಿತಗೊಂಡು ಅವರ ಭಾಷೆ ಕುರಿತ ಚಿಂತನೆಗಳು 'ಆಧುನಿಕ ಸಾಂಪ್ರದಾಯಿಕತೆ'ಯಾಚೆ ಹೊರಚಾಚುವುದು ವಿರಳ. ಕೆ.ವಿ ನಾರಾಯಣ ಅವರು ನಿಸ್ಸಂದಿಗ್ಧವಾಗಿ ಇದಕ್ಕೆ ಅಪವಾದವಾಗಿ ನಿಲ್ಲುವವರು.

ಏಳನೆಯ ದಶಕದಲ್ಲಿ ಕರ್ನಾಟಕದಲ್ಲಿ ನಡೆದ ಕೆಲವು ಸಾಮಾಜಿಕ ಪರಿವರ್ತನೆಗಳ ಪರಿಣಾಮವಾಗಿ ಆವರೆಗೆ ಸಮಾಜ ಒಪ್ಪಿದ ಸಾಂಸ್ಕೃತಿಕ ನಾಯಕತ್ವದ ಕಲ್ಪನೆ ಬದಲಾಯಿತು. ನಾಯಕರು ಒಂದು ಕಾಲದ ಸಮಾಜದ ಅಪೇಕ್ಷೆಗಳನ್ನು, ಬಯಕೆಗಳನ್ನು ಪ್ರತಿನಿಧಿಸುತ್ತಾರೆ. ಆದರೆ ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಕರ್ನಾಟಕವು ತನ್ನ ಸಾಮಾಜಿಕ ರಚನೆಯಲ್ಲಿ ಮುಚ್ಚಿಹೋಗಿದ್ದ ಬಿರುಕುಗಳನ್ನು ಹೊರತೆಗೆದು ತೋರತೊಡಗಿತ್ತು. ಇದೇ ಕಾಲಕ್ಕೆ ಹಿಂದುಳಿದ ವರ್ಗಗಳ ಮತ್ತು ದಲಿತ ಸಮುದಾಯದ ಅಸ್ಮಿತೆಯ ಪ್ರಶ್ನೆಗಳು ಮುಂದೆ ಬಂದವು.[೪] ಇದುವೇ ಸಾಮಾಜಿಕ ನೆಲೆಯ ಕನ್ನಡ ಅಸ್ಮಿತೆಯ ಚಿಂತನೆಗೆ ದಾರಿ ಮಾಡಿಕೊಟ್ಟಿತು. ಇಂತಹ ಚಿಂತನಾಧಾರೆಯನ್ನು ಹಲವು ಚಿಂತಕರಲ್ಲಿ ಅಧ್ಯಯನ ಗುರುತಿಸಿದ್ದು ಪ್ರಾತಿನಿಧಿಕವಾಗಿ ಬರಗೂರು ರಾಮಚಂದ್ರಪ್ಪ ಅವರನ್ನು ಆಯ್ದುಕೊಂಡಿದೆ.

ಬಂಡಾಯ ಸಾಹಿತ್ಯ ಸಂಘಟನೆಯ ಮುಂಚೂಣಿಯಲ್ಲಿದ್ದ ಬರಗೂರು ರಾಮಚಂದ್ರಪ್ಪ ಅವರು 'ಕನ್ನಡಾಭಿಮಾನ'ದ ಸ್ವರೂಪದ ನೆಲೆಗಳನ್ನು ಗುರುತಿಸುತ್ತಲೇ ಕನ್ನಡ ಅಸ್ಮಿತೆಯನ್ನು ಚಿಂತಿಸಿದವರು. ಕನ್ನಡ ಅಸ್ಮಿತೆಯನ್ನು 'ಕನ್ನಡಿಗ'ನ ನೆಲೆಯಿಂದ ಗ್ರಹಿಸುವುದು ಬರಗೂರರ ಆದ್ಯತೆ. ತಾವು ಹುಟ್ಟು ಹಾಕಿದ ಉಪ ಸಂಸ್ಕೃತಿ ಚರ್ಚೆ ಅವರ ಕನ್ನಡ ಅಸ್ಮಿತೆಯ ಚಿಂತನೆಗೆ ಸಾಮಾಜಿಕ ನೆಲೆಯನ್ನು ಒದಗಿಸಿದೆ. ಸಾಮಾಜಿಕ ನೆಲೆಯ ಇನ್ನೊಂದು ಧಾರೆಯಾಗಿ ದಲಿತ ನೆಲೆಯ ಚಿಂತನೆಗಳನ್ನು ಅರಿಯಲು ಯತ್ನಿಸಲಾಗಿದೆ.

ಕನ್ನಡ ಅಸ್ಮಿತೆ ಕುರಿತ ಚಿಂತನಾಧಾರೆಗಳು ೨೦ನೇ ಶತಮಾನದ ಆರಂಭಘಟ್ಟದಲ್ಲಿ ಸಾಹಿತ್ಯಿಕ ನೆಲೆಯಲ್ಲಿ ಆರಂಭಗೊಂಡು ಶತಮಾನದ ಅಂತ್ಯದಲ್ಲಿ ಸಾಮಾಜಿಕ ನೆಲೆಗೆ ಬಂದು ಸೇರಿದಂತೆ ಭಾಸವಾಗುತ್ತದೆ. ಗಮನಿಸಬೇಕಾದ ಸಂಗತಿಯೆಂದರೆ ಮೂಲಭೂತವಾದಿ ನೆಲೆಯೊಂದನ್ನು ಹೊರತುಪಡಿಸಿ ಈ ಚಿಂತನಾಧಾರೆಗಳಲ್ಲೆಲ್ಲ ಪ್ರತಿಯೊಂದು ನೆಲೆಯೂ ಅಂತರ್ಗತವಾಗಿದ್ದು ಆಯಾಯ ಸಂದರ್ಭದ ತುರ್ತಿಗೆ ಸ್ಪಂದಿಸಿ ನಿರ್ದಿಷ್ಟ ಚಿಂತನಾಧಾರೆಗಳು ಮುನ್ನೆಲೆಗೆ ಬಂದಿದ್ದನ್ನು ಗಮನಿಸಬಹುದು. ಸಾಹಿತ್ಯವಾದಿ ನೆಲೆಯಲ್ಲಿ ಇದುವರೆಗೂ ಚರ್ಚಿಸಲ್ಪಟ್ಟ ಬಿ.ಎಂ.ಶ್ರೀ ಅವರ ಚಿಂತನೆಗಳಲ್ಲಿ ಸಾಮಾಜಿಕ ನೆಲೆಯೂ ಪ್ರಮುಖವಾಗಿತ್ತು ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಒಬ್ಬನೇ ಚಿಂತಕನ ಚಿಂತನೆಗಳ ನೆಲೆ ಕಾಲಘಟ್ಟಗಳಲ್ಲಿ ಬದಲಾದದ್ದನ್ನೂ ನಾವು ಗಮನಿಸಬಹುದು.

ಸಾಂಸ್ಕೃತಿಕ ನೆಲೆಯಲ್ಲಿದ್ದ ಅನಂತಮೂರ್ತಿ ಅವರ ಚಿಂತನೆಗಳು ಕೊನೆಯ ದಶಕಗಳಲ್ಲಿ ಸಾಮಾಜಿಕ ನೆಲೆಗೆ ಬದಲಾದದ್ದನ್ನೂ ನಾವು ಗುರುತಿಸಬಹುದು. ಇಂತಹ ಬದಲಾವಣೆಯ ಹಿಂದಿನ ಪ್ರೇರಣೆಗಳನ್ನು ಅರಿಯಲು ಅಧ್ಯಯನ ಪ್ರಯತ್ನಿಸಿದೆ.

೧.೩.೨ ಆಕರ ವ್ಯಾಪ್ತಿ

ಈ ಅಧ್ಯಯನದ ಮುಖ್ಯ ಆಕರ ವಿಚಾರ ಸಾಹಿತ್ಯವಾಗಿದೆ. ಅಧ್ಯಯನದಲ್ಲಿ ಆಯ್ದುಕೊಂಡ ಚಿಂತಕರ ವಿಚಾರ ಸಾಹಿತ್ಯವನ್ನು ಒಳಗೊಂಡ ಕೃತಿಗಳೆಲ್ಲವನ್ನು ಗಮನಿಸುತ್ತ, ಅವರ ಚಿಂತನೆಗಳು ಹರಳುಗಟ್ಟಿದ ಮುಖ್ಯ ಕೃತಿಗಳನ್ನು ಆಧರಿಸಿ ಅಧ್ಯಯನವನ್ನು ನಡೆಸಲಾಗಿದೆ. ವಿಚಾರ ಸಾಹಿತ್ಯಕ್ಕೆ ಪೂರಕವಾಗಿ ಕಥೆ, ಕವಿತೆ, ಕಾದಂಬರಿ ಪ್ರಕಾರದಲ್ಲಿನ ನಿರ್ದಿಷ್ಟ ಸಾಹಿತ್ಯವನ್ನು ಗಮನಿಸಲಾಗಿದೆ.

ಅಧ್ಯಯನದಲ್ಲಿ ಆಕರವಾಗಿ ಬಳಸಿದ ವಿವಿಧ ಚಿಂತಕರ ಕೃತಿಗಳು ಹೀಗಿವೆ: ಬಿ.ಎಂ.ಶ್ರೀ ಅವರ ಸಮಗ್ರ ಸಾಹಿತ್ಯ 'ಶ್ರೀ ಸಂಪುಟ', ಕುವೆಂಪು ಅವರ 'ಸಮಗ್ರ ಗದ್ಯ' ಸಂಪುಟ ಭಾಗ ೧ ಮತ್ತು ೨, ಲಂಕೇಶರ 'ಟೀಕೆ–ಟಿಪ್ಪಣಿ' ಯ ೩ ಸಂಪುಟಗಳು, 'ಮರೆಯುವ ಮುನ್ನ'ದ ೨ ಸಂಪುಟಗಳು, 'ಮನಕೆ ಕಾರಂಜಿಯ ಸ್ಪರ್ಷ', 'ಸಾಹಿತಿ ಸಾಹಿತ್ಯ ವಿಮರ್ಶೆ', ಆಲೂರರ 'ಕರ್ನಾಟಕ ಗತವೈಭವ' ಮತ್ತು 'ಕರ್ನಾಟಕತ್ವದ ವಿಕಾಸ', ಚಿದಾನಂದ ಮೂರ್ತಿಯವರ 'ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ'ಕೃತಿಯ ಸಾಹಿತ್ಯವನ್ನು ಒಳಗೊಂಡ ಅವರ ಸಮಗ್ರ ಬರೆಹಗಳ 'ಚಿದಾನಂದಾಯಣ', ಶಂ.ಬಾ ಜೋಶಿ ಅವರ 'ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ', 'ಎಡೆಗಳು ಹೇಳುವ ಕಂನಾಡ ಕಥೆ', ಅನಂತಮೂರ್ತಿ ಅವರ 'ಸನ್ನಿವೇಶ', 'ಪ್ರಜ್ಞೆ ಮತ್ತು ಪರಿಸರ', 'ಪೂರ್ವಾಪರ', 'ಬೆತ್ತಲೆ ಪೂಜೆ ಯಾಕೆ ಕೂಡದು?', 'ವಾಲ್ಮೀಕಿಯ ನೆವದಲ್ಲಿ', 'ಋಜುವಾತು', ಸುಬ್ಬಣ್ಣ ಅವರ ಸಮಗ್ರ ಬರೆಹಗಳ 'ಅರೆಶತಮಾನದ ಅಲೆ ಬರಹಗಳು', ಅ.ನ.ಕೃ ಅವರ ಭಾಷಣ, ಲೇಖನಗಳನ್ನೊಳಗೊಂಡ 'ಅ.ನ.ಕೃಷ್ಣರಾಯರ ಸಾಹಿತ್ಯ ಶ್ರೇಣಿ' ಸಂಪುಟಗಳು, ಕರ್ನಾಟಕ ರಕ್ಷಣಾ ವೇದಿಕೆಯ ಮಾಸಪತ್ರಿಕೆ 'ಕರವೇ ನಲ್ನುಡಿ'ಯ ಸಂಚಿಕೆಗಳು, ಡಿ.ಎನ್ ಶಂಕರಭಟ್ಟರ ಮುಖ್ಯ ಕೃತಿಗಳ ಸಂಪುಟ 'ಕನ್ನಡ ನುಡಿಯ ಬಗೆಗೆ ಚಿಂತನೆ', ಕೆ.ವಿ ನಾರಾಯಣ ಅವರ 'ಕನ್ನಡ ಜಗತ್ತು ಅರ್ಧ ಶತಮಾನ', ಬರಗೂರು ಅವರ ಕನ್ನಡ ಕುರಿತ ಚಿಂತನೆಗಳ 'ಕನ್ನಡ ಪ್ರಜ್ಞೆ' ಪ್ರಧಾನ ಆಕರಗಳಾಗಿವೆ. ಇದಕ್ಕೆ ಪೂರಕವಾಗಿ ಇನ್ನಿತರ ಚಿಂತಕರ ಕೃತಿಗಳು, ಬಿಡಿ ಲೇಖನಗಳನ್ನು ಆಕರವಾಗಿ ಬಳಸಿಕೊಂಡು ಈ ಅಧ್ಯಯನವನ್ನು ನಡೆಸಲಾಗಿದೆ.

ಕನ್ನಡಪರ ಸಂಘಟನೆಗಳು ಕರ್ನಾಟಕ ಏಕೀಕರಣದ ಹೋರಾಟದ ಕಾಲದಿಂದಲೂ ಹಲವು ಬಗೆಗಳಲ್ಲಿ ಕನ್ನಡವನ್ನು ಪ್ರಭಾವಿಸುತ್ತ ಬಂದಿವೆ. ಇವುಗಳ ಚಿಂತನೆಗಳು ಹೋರಾಟಗಾರರ ಭಾಷಣ, ಕನ್ನಡಪರ ಸಂಘಟನೆಗಳು ಪ್ರಕಟಿಸುವ ಪತ್ರಿಕೆಗಳಲ್ಲಿ ಕಂಡು ಬರುತ್ತವೆ. ಕನ್ನಡದ ಅಸ್ಮಿತೆಯನ್ನು

ಕುರಿತಂತೆ ಪ್ರತಿವರ್ಷ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಿನ್ನ-ವಿಭಿನ್ನ ಚಿಂತನೆಗಳಿವೆ. ಈ ಚಿಂತನೆಗಳು ಅವರ ಅಧ್ಯಕ್ಷಭಾಷಣಗಳಲ್ಲಿ ವ್ಯಕ್ತವಾಗಿವೆ.

ಪ್ರಧಾನವಾಗಿ ಕನ್ನಡ ವಿಚಾರಸಾಹಿತ್ಯದ ಚಿಂತನಶೀಲ ಬರಹಗಳನ್ನು ಆಧರಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇವುಗಳ ಜೊತೆಗೆ ಪ್ರಾಸಂಗಿಕವಾಗಿ ಕವಿತೆಗಳನ್ನು ಮತ್ತು ಕಥನ ಸಾಹಿತ್ಯವನ್ನು ಬಳಸಿಕೊಳ್ಳಲಾಗಿದೆ. ಕನ್ನಡ ಭಾಷೆಯನ್ನು ಕುರಿತ ಗ್ರಂಥಗಳು, ಕನ್ನಡ ಅಸ್ಮಿತೆ ಕುರಿತು ಕನ್ನಡ ವಿಚಾರ ಸಾಹಿತ್ಯದಲ್ಲಿ ಬಂದ ಗ್ರಂಥಗಳು, ಲೇಖನಗಳು ಮತ್ತು ಪ್ರಕಟಿತ ಭಾಷಣಗಳು, ಕನ್ನಡವನ್ನು, ಕರ್ನಾಟಕವನ್ನು ಕುರಿತು ರಚನೆಯಾದ ಪ್ರಾತಿನಿಧಿಕ ಕವಿತೆಗಳು, ಸರ್ಕಾರ ನೇಮಿಸಿದ ನಾಡು-ನುಡಿಗೆ ಸಂಬಂಧಿಸಿದ ಆಯೋಗಗಳ ವರದಿಗಳು, ಜನಭಾಷೆ-ಪ್ರಭುತ್ವಭಾಷೆ, ಕನ್ನಡ ರಾಷ್ಟ್ರೀಯತೆ ಕುರಿತ ಆಯ್ದ ಪಿ.ಎಚ್‌ಡಿ ಪ್ರಬಂಧಗಳು, ಕನ್ನಡದ ಸಾಹಿತ್ಯಿಕ ಪತ್ರಿಕೆಗಳು ಮತ್ತು ಕನ್ನಡಪರ ಸಂಘಟನೆಗಳು ಪ್ರಕಟಿಸಿದ ಪತ್ರಿಕೆಗಳು ಈ ಅಧ್ಯಯನದಲ್ಲಿ ಬಳಸಿಕೊಂಡ ಪೂರಕ ಆಕರಗಳಾಗಿವೆ.

೧.೩.೩ ಕಾಲವ್ಯಾಪ್ತಿ

ಬಿ.ಎಂ.ಶ್ರೀ ಅವರ 'ಕನ್ನಡ ಮಾತು ತಲೆಯೆತ್ತುವ ಬಗೆ' ಭಾಷಣದಲ್ಲಿ ಹೊರಹೊಮ್ಮಿದ ಚಿಂತನೆಯು ಕನ್ನಡ ಅಸ್ಮಿತೆಗೆ ಸಂಬಂಧಿಸಿದಂತೆ ಗುರುತಿಸಲಾಗುವ ೨೦ನೇ ಶತಮಾನದ ಮೊಟ್ಟಮೊದಲ ಪ್ರಮುಖ ಚಿಂತನೆಯಾಗಿದೆ. ಈ ಚಿಂತನೆ ಮೂಡಿದ್ದು ೧೯೧೧ ರಲ್ಲಿ. ಅಲ್ಲಿಂದ ಆರಂಭಿಸಿ ೨೦೧೧ರವರೆಗಿನ ಒಂದು ಶತಮಾನದ ಆಯ್ದ ಕನ್ನಡ ವಿಚಾರ ಸಾಹಿತ್ಯದಲ್ಲಿ ಪ್ರಕಟವಾದ ಕನ್ನಡ ಅಸ್ಮಿತೆಯ ಕುರಿತ ಚಿಂತನೆಗಳನ್ನು ಈ ಅಧ್ಯಯನ ಆಕರವಾಗಿಸಿಕೊಂಡಿದೆ.

೧.೪ ಅಧ್ಯಯನ ವಿಧಾನ

'ಕನ್ನಡ ವಿಚಾರ ಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯ ಹುಡುಕಾಟದ ನೆಲೆಗಳು' ಎಂಬ ಈ ಅಧ್ಯಯನದಲ್ಲಿ ಅಳವಡಿಸಿಕೊಂಡ ಅಧ್ಯಯನ ವಿಧಾನಗಳು ಕೆಳಕಂಡಂತಿವೆ:

೧. ಒಬ್ಬರು ಚಿಂತಕರ ಕನ್ನಡ ಅಸ್ಮಿತೆ ರೂಪು ಪಡೆಯುವಲ್ಲಿ ಅವರ ಕಾಲಘಟ್ಟ, ಸಿದ್ಧಾಂತ, ಸಾಮಾಜಿಕ ಹಿನ್ನೆಲೆ, ವೃತ್ತಿ, ಜೀವಿಸುವ ಪ್ರದೇಶ, ಅವರ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು ಪ್ರಧಾನ ಪಾತ್ರ ವಹಿಸುತ್ತವೆ. ಕನ್ನಡದ ಸಾಹಿತಿಗಳು, ಚಿಂತಕರು ಕನ್ನಡ ಅಸ್ಮಿತೆ ಕುರಿತು ಮಂಡಿಸಿದ ಚಿಂತನೆಗಳಿಗೆ ವೈಯಕ್ತಿಕ ದೃಷ್ಟಿಕೋನ ಸಹಜವಾಗಿ ಸಣ್ಣ ಪ್ರಮಾಣದಲ್ಲಿ ಕೆಲಸ ಮಾಡಿದ್ದರೂ ಪ್ರಮುಖವಾಗಿ ಇವುಗಳ ಹಿಂದಿರುವುದು ಚಾರಿತ್ರಿಕ ಒತ್ತಡವೇ. ಈ ತಿಳುವಳಿಕೆಯ ಹಿನ್ನೆಲೆಯಲ್ಲಿಯೇ ಅಧ್ಯಯನ ಸಾಗುವುದು.

೨. ನಿರ್ದಿಷ್ಟ ಚಿಂತಕರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳನ್ನು ಅರಿಯಲು ಆ ಚಿಂತಕರ ಪಠ್ಯವನ್ನು ಮಾತ್ರ ಅವಲಂಬಿಸದೆ ಇತರ ಚಿಂತಕರ ಚಿಂತನೆಗಳೊಂದಿಗೆ ಆ ಚಿಂತಕರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳನ್ನು ತೌಲನಿಕವಾಗಿ ವಿಮರ್ಶಿಸುವುದು. ಇದರಿಂದ ಆ ನಿರ್ದಿಷ್ಟ ಚಿಂತಕರ ಕನ್ನಡ ಅಸ್ಮಿತೆ ಕುರಿತ ಮಿತಿ ಮತ್ತು ವಿಶಿಷ್ಟತೆಗಳನ್ನು ಸ್ಪಷ್ಟಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.

೩. ನಿರ್ದಿಷ್ಟ ಚಿಂತಕರ ಕನ್ನಡ ಅಸ್ಮಿತೆ ಕುರಿತ ಚಿಂತನೆ ನಿರ್ದಿಷ್ಟ ಚಿಂತನಾಧಾರೆಯಲ್ಲಿಯೇ ಸದಾ ಇರುತ್ತದೆ ಎಂಬ ಸರಳ ತೀರ್ಮಾನಕ್ಕೆ ಬರದೆ ಅವರ ಚಿಂತನೆಗಳ ನೆಲೆ ಕಾಲಘಟ್ಟಗಳಲ್ಲಿ ಬದಲಾಗಿದೆಯಾ? ಬದಲಾಗಿದ್ದರೆ ಅದಕ್ಕಿರುವ ಪ್ರೇರಣೆಗಳೇನು ಎನ್ನುವುದನ್ನು ಅರಿಯುವುದು.

೪. ಲೇಖಕರು, ಚಿಂತಕರು ಮತ್ತು ಹೋರಾಟಗಾರರ ನಿಲುವುಗಳನ್ನು ಮತ್ತು ವಿವಿಧ ಕಾಲಘಟ್ಟಗಳಲ್ಲಿ ವ್ಯಕ್ತಗೊಂಡ ಪರಸ್ಪರ ವೈರುಧ್ಯವೆನಿಸುವ ನಿಲುವುಗಳನ್ನು, ಆ ನಿಲುವುಗಳು ರೂಪುಗೊಂಡಿರುವ ವೈಯಕ್ತಿಕ, ಚಾರಿತ್ರಿಕ ಒತ್ತಡಗಳು ಮತ್ತು ಅವರನ್ನು ಪ್ರಭಾವಿಸಿದ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಗ್ರಹಿಸಲು ಪ್ರಯತ್ನಿಸುವುದು.

೫. ಅಧ್ಯಯನಕ್ಕೆ ಆರಂಭದಲ್ಲಿಯೇ ಸಿದ್ಧ ಚೌಕಟ್ಟನ್ನು ರೂಪಿಸಿಕೊಂಡು ಅದಕ್ಕೆ ಪೂರಕವಾದ ಮಾಹಿತಿಗಳನ್ನು ಆರಿಸಿ ವಿಶ್ಲೇಷಿಸದೇ, ತಾನು ಮಂಡಿಸಬೇಕೆಂದಿರುವ ತಾತ್ವಿಕತೆಗೆ ವ್ಯತಿರಿಕ್ತ ಎನಿಸುವ ಸಂಗತಿಗಳನ್ನು ತೇಲಿಸಿ ಕೈಬಿಡದೆ, ತನಗೆ ಪೂರಕವಾದದ್ದರ ಪ್ರಾಧಾನತೆಯಲ್ಲಿಯೇ ವ್ಯತಿರಿಕ್ತವಾದುದನ್ನೂ ಎತ್ತಿಕೊಂಡು ವಿಶ್ಲೇಷಣೆ ಮಾಡುವುದು.

೬. 'ರಾಷ್ಟ್ರೀಯತೆ' ಸಂದರ್ಭದಲ್ಲಿ ಸಂಭವಿಸುವಂತೆ 'ಕನ್ನಡ ಅಸ್ಮಿತೆ' ಎನ್ನುವುದು ಮೂಲಭೂತವಾದಿ ಯಾಗುವ ಅಥವಾ ಕನ್ನಡದ ಹಿತವನ್ನು ಬಲಿಗೊಟ್ಟ ಉದಾರತೆಯಾಗುವ ಅತಿಗೆ ಸಾಗುವ ಅಪಾಯಗಳಿವೆ. ಇವೆರಡೂ ಅತಿಗಳನ್ನು ಮೀರುವ ವಿವೇಕದಲ್ಲಿ ಅಧ್ಯಯನವನ್ನು ನಡೆಸುವುದು.

೭. ಅಸ್ಮಿತೆಯ ಚರ್ಚೆಗಳು ಬರೀ ಬೌದ್ಧಿಕ ಮತ್ತು ವೈಚಾರಿಕ ಸಂಗತಿಗಳಷ್ಟೇ ಆಗಿಲ್ಲ. ಅವು ಒಟ್ಟು ಸಂಸ್ಕೃತಿ ಮತ್ತು ಸಮುದಾಯದ ಬದುಕಿನ ಮೇಲೆ ಪರಿಣಾಮಗಳನ್ನೂ ಬೀರುವ ಮತ್ತು ತಲ್ಲಣಗಳನ್ನು ಹುಟ್ಟಿಸುವ ಸಂಗತಿಗಳೂ ಆಗಿವೆ ಎಂಬ ಎಚ್ಚರದಲ್ಲಿ ಅಧ್ಯಯನ ಮಾಡುವುದು.

೧.೫ ಪೂರ್ವಾಧ್ಯಯನಗಳ ಸಮೀಕ್ಷೆ

ಕನ್ನಡ ವಿಚಾರ ಸಾಹಿತ್ಯದಲ್ಲಿ ಕಂಡು ಬರುವ ಕನ್ನಡ ಅಸ್ಮಿತೆ ಕುರಿತಂತೆಯೇ ಕನ್ನಡದಲ್ಲಿ ಅಧ್ಯಯನಗಳು ನಡೆದಿಲ್ಲ. ಆದರೆ ಕನ್ನಡ ರಾಷ್ಟ್ರೀಯತೆ ಕುರಿತಂತೆ ನಡೆದ ಅಧ್ಯಯನಗಳಲ್ಲಿ ಮತ್ತು ಜನಭಾಷೆ–ಪ್ರಭುತ್ವಭಾಷೆ ಕುರಿತ ಅಧ್ಯಯನಗಳಲ್ಲಿ ಕನ್ನಡ ಅಸ್ಮಿತೆಯು ಅಲ್ಲಲ್ಲಿ ಬಿಡಿಬಿಡಿಯಾಗಿ ಚರ್ಚೆಗೆ ಒಳಗಾಗಿದೆ. ಕನ್ನಡ ಅಸ್ಮಿತೆಯತ್ತ ಅಲ್ಲಲ್ಲಿ ಹೊರಳುವ ಎರಡು ಪಿ.ಎಚ್.ಡಿ ಪ್ರಬಂಧಗಳನ್ನು ಈ ಅಧ್ಯಯನ ಗಮನಿಸಿದೆ. ಅವುಗಳೆಂದರೆ ವೆಂಕಟೇಶಯ್ಯ ನೆಲ್ಲುಕುಂಟೆ ಅವರ 'ಆಧುನಿಕ ಸಾಹಿತ್ಯದಲ್ಲಿ ಕನ್ನಡ ರಾಷ್ಟ್ರೀಯತೆಯ ಚಿಂತನೆಯ ಆಯಾಮಗಳು' (೨೦೦೮) ಮತ್ತು ರಂಗನಾಥ ಕಂಟನಕುಂಟೆ ಅವರ 'ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ' (೨೦೦೯).

'ರಾಷ್ಟ್ರ, ರಾಷ್ಟ್ರಪ್ರಭುತ್ವ, ರಾಷ್ಟ್ರೀಯತೆ, ರಾಷ್ಟ್ರೀಯವಾದಗಳೆಂಬ ಪರಿಕಲ್ಪನೆಗಳು ಜಗತ್ತಿನ ಚಿಂತನೆಗಳನ್ನು ದಟ್ಟವಾಗಿ ಆಕ್ರಮಿಸಿವೆ ಮತ್ತು ಸಂಕೀರ್ಣಗೊಳಿಸಿವೆ. ಒಂದಲ್ಲ ಒಂದು ರೀತಿಯಲ್ಲಿ ತನ್ನ ಸದಸ್ಯರ ಬದುಕನ್ನು ಈ ಪರಿಕಲ್ಪನೆಗಳು ನಿಯಂತ್ರಿಸುತ್ತಿವೆ. ಮನುಷ್ಯನ ರಾಜಕೀಯ ಇತಿಹಾಸದಲ್ಲಿ ಆಧುನಿಕ ಆವಿಷ್ಕಾರವಾದ ಈ ಚಿಂತನೆಗಳು ವಿಭಿನ್ನ ರೀತಿಯಲ್ಲಿ ಸಮುದಾಯಗಳನ್ನು ಒಂದುಗೂಡಿಸಿವೆ. ಆದರೆ ಈ ಚಿಂತನೆಗಳನ್ನು ಕುರಿತು ಸಾರ್ವತ್ರಿಕ ಅಥವಾ ಸಾರ್ವಕಾಲಿಕವಾದ ವ್ಯಾಖ್ಯಾನ ಮಾಡಲು ಸಾಧ್ಯವಿಲ್ಲ' ಎಂಬ ತಿಳುವಳಿಕೆಯ ಅರಿವಿನಲ್ಲಿ ರಾಷ್ಟ್ರೀಯತೆಯನ್ನು ಕುರಿತು ಚರ್ಚಿಸುವ ವೆಂಕಟೇಶಯ್ಯ ನೆಲ್ಲುಕುಂಟೆ ಅವರ "ಆಧುನಿಕ ಸಾಹಿತ್ಯದಲ್ಲಿ ಕನ್ನಡ ರಾಷ್ಟ್ರೀಯತಾ ಚಿಂತನೆಯ ಆಯಾಮಗಳು" ಸಂಶೋಧನೆಯು ನಿರ್ದಿಷ್ಟವಾಗಿ ಆಧುನಿಕ ಸಾಹಿತ್ಯದಲ್ಲಿ ಕನ್ನಡ ರಾಷ್ಟ್ರೀಯತೆಯ ಆಯಾಮಗಳನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತದೆ.

ಸ್ವಭಾವದಲ್ಲಿ ಅಮೂರ್ತವಾಗಿರುವಂತೆ ಕಾಣುವ ರಾಷ್ಟ್ರೀಯತೆ ಪರಿಕಲ್ಪನೆ ವಾಸ್ತವದಲ್ಲಿ ತೀವ್ರವಾಗಿ ಕ್ರಿಯಾಶೀಲವಾಗಿದೆ. ರಾಷ್ಟ್ರ ಹಾಗೆಂದರೇನು ಎಂದು ಸಾಮಾನ್ಯನಿರಲಿ ವಿದ್ವಾಂಸರೂ ತಕ್ಷಣಕ್ಕೆ ಹೇಳಲಾಗದ ಪರಿಸ್ಥಿತಿ ಇದೆ. ಆದರೆ ಅನ್ಯ ಭಾಷಿಕನೊಬ್ಬ ಅವನ ಮಾತೃಭಾಷೆಯಲ್ಲಿ ಮಾತನಾಡಿದರೆ, ಅದು ತನ್ನ ಭಾಷೆಗೆ ಅವಮಾನವೆಂದೂ, ಅನ್ಯ ಧಾರ್ಮಿಕನೊಬ್ಬನ ಧಾರ್ಮಿಕ ಆಚರಣೆಗಳು, ದೇಶ ಪ್ರೇಮಕ್ಕೆ ವಿರುದ್ಧವಾದವುಗಳೆಂದೂ ಈ ಪ್ರಜ್ಞೆ ಭಾವಿಸತೊಡಗುತ್ತದೆ. ಇಷ್ಟೊಂದು ಪ್ರಭಾವಶಾಲಿಯಾದ ಪರಿಕಲ್ಪನೆಯನ್ನು ಬಿಟ್ಟು ನಡೆಸುವ ಚಿಂತನೆಗಳು ಅಪೂರ್ಣವಾಗಿರುತ್ತವೆ ಎಂಬುದು ಈ ಅಧ್ಯಯನದ ನಂಬಿಕೆಯಾಗಿದೆ.

'ಭಾಷೆ'ಯೇ ಬದುಕು, ಸಂಸ್ಕೃತಿ, ಪ್ರಜಾತಾಂತ್ರಿಕ ಹಕ್ಕು, ಅಧಿಕಾರ ಎಂಬಷ್ಟರ ಮಟ್ಟಿಗೆ ಚರ್ಚೆಗಳಾಗುತ್ತಿರುವ ಹೊತ್ತಿನಲ್ಲಿ ಇಂಗ್ಲಿಷ್‌ನಂತಹ ಪ್ರಭುತ್ವದ ಭಾಷೆಗಳ ಆಕ್ರಮಣದಿಂದ ಜನಭಾಷೆಗಳ ಅಸ್ತಿತ್ವ ಆತಂಕದಲ್ಲಿದೆ. ಭಾಷೆಯ ಗುಣಲಕ್ಷಣಗಳು ಮತ್ತು ಶಕ್ತಿಗಳನ್ನೆ ಜನಭಾಷೆಗಳನ್ನು ದಮನ ಮಾಡಲು ಬಳಸಲಾಗುತ್ತಿದೆ. ಈ ಬಗೆಗೆ ಕನ್ನಡದ ಸಂದರ್ಭದಲ್ಲಿ ಆಳವಾದ

ಅಧ್ಯಯನವಾಗಬೇಕಾದ ಅಗತ್ಯವನ್ನು ಮನಗಂಡು ರಂಗನಾಥ ಕಂಟನಕುಂಟೆ ಅವರು ಸಂಶೋಧನೆ ಕೈಗೊಂಡು 'ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷದ ನೆಲೆಗಳು : ಒಂದು ಅಧ್ಯಯನ' ಎಂಬ ಪ್ರಬಂಧವನ್ನು ರಚಿಸಿದ್ದಾರೆ.

ಮನೋವಿಶ್ಲೇಷಣಾತ್ಮಕ ಭಾಷಾಶಾಸ್ತ್ರ, ಸಾಮಾಜಿಕ ಭಾಷಾಶಾಸ್ತ್ರ, ವ್ಯಾವಹಾರಿಕ ಪರಿಪ್ರೇಕ್ಷ್ಯ, ಇವುಗಳನ್ನು ಪರಿಶೀಲಿಸಿ ಭಾಷೆಯ ಸಂಬಂಧವಾಗಿ ಏರ್ಪಡುವ ಪಾಶ್ಚಾತ್ಯ ಅಹಂಕಾರ ಹಾಗೂ ಪೌರ್ವಾತ್ಯರ ಕೀಳರಿಮೆಯ ಪ್ರಶ್ನೆಗಳನ್ನು ಲೇಖಕರು ಇಲ್ಲಿ ವಿವೇಚನೆಗೆ ಒಡ್ಡಿದ್ದಾರೆ. ಕರ್ನಾಟಕದ ಬಹುಭಾಷಿಕ ಪರಿಸರದಲ್ಲಿ ಏರ್ಪಟ್ಟಿರುವ ಭಾಷಿಕ ಸಂಘರ್ಷವನ್ನು ಈ ಕೃತಿ ಚರ್ಚಿಸುತ್ತದೆ. ಆ ಮೂಲಕ ಭಾಷೆಯ ರಾಜಕಾರಣದ ವಿವಿಧ ಮುಖಗಳನ್ನು ಕೃತಿ ಗಮನಿಸುತ್ತದೆ. ಶಾಲೆಗಳನ್ನು ಆವರಿಸಿಕೊಂಡಿರುವ ಇಂಗ್ಲಿಶ್ ನಮ್ಮ ಮಕ್ಕಳ ಆಲೋಚನಾಶಕ್ತಿ ಮತ್ತು ಸಮಯವನ್ನು ಕುಂದಿಸುತ್ತಿರುತ್ತದೆ. ಅವೈಜ್ಞಾನಿಕ ಭಾಷಾ ನೀತಿಗಳಿಂದ ಶಿಕ್ಷಣ ಎಂಬುದು ಗಿಳಿಪಾಠವಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ತಯಾರಾಗುತ್ತಿರುವ ವಿದ್ಯಾರ್ಥಿಗಳ ಜ್ಞಾನದ ಮಟ್ಟವೆ ಇದಕ್ಕೆ ಉದಾಹರಣೆ. ಭಾಷೆ ಮತ್ತು ಶಿಕ್ಷಣಗಳು ಸರಕಾಗಿ ಮಾರಾಟವಾಗುತ್ತಿರುವ ದಿನಗಳಲ್ಲಿ ಈ ವಿಚಾರ ಮತ್ತಷ್ಟು ಗಂಭೀರವಾಗಿದೆ. ಮಾರುಕಟ್ಟೆಯ ಅಗತ್ಯವನ್ನು ಬಿಂಬಿಸಿ ಇಂಗ್ಲಿಷಿನ ಮೂಲಕ ಶಿಕ್ಷಣ ನೀಡುತ್ತಿರುವುದು ವಂಚನೆ ಎಂದು ಅನ್ನಿಸದೇ ಇರುವುದು ದೊಡ್ಡ ದುರಂತವೆಂದು ಕೃತಿ ಪ್ರತಿಪಾದಿಸುತ್ತದೆ.

ಜನಭಾಷೆಯ ಉಳಿವಿಗಾಗಿ ಅಗತ್ಯವಾಗಿರುವ ಜನಾಂದೋಲನಗಳು ಮತ್ತು ಅವುಗಳ ಸ್ವರೂಪಗಳನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ. ಹೇರಿಕೆಯ ಬೇಡಿಕೆಯ ಇಂಗ್ಲಿಷಿನ ಸ್ವರೂಪವನ್ನು ವಿವರಿಸುತ್ತ ಒಟ್ಟಾರೆ ಇವುಗಳಿಂದಾದ ಸಾಮಾಜಿಕ ಅಸಮಾನತೆಯ ವಿಕಾಸವನ್ನು ಚಿಂತನಾರ್ಹ ಒಳನೋಟಗಳೊಂದಿಗೆ ಮಂಡಿಸಲಾಗಿದೆ. ಜನಭಾಷೆಗೆ ಎದುರಾಗಿರುವ ಸವಾಲುಗಳನ್ನು ಕಂಡು ತಳಮಳಗೊಂಡಿರುವ ಮನಸ್ಸು ಈ ಅಧ್ಯಯನದ ಹಿಂದ ಕೆಲಸ ಮಾಡಿರುವುದು ಯಾರ ಅರಿವಿಗೂ ಬರುವಂತಿದೆ. ಖಚಿತವಾಗಿ ಹೇಳುವುದಾದರೆ ನಮ್ಮ ಈವರೆಗಿನ ಭಾಷಿಕ ಚರ್ಚೆಗಳ ಸ್ವರೂಪವನ್ನು ಇನ್ನಷ್ಟು ವಿಸ್ತರಿಸಿ ಭಿನ್ನ ರೀತಿಯಲ್ಲಿ ಚಿಂತಿಸಬೇಕಾಗಿರುವ ಅಗತ್ಯವನ್ನು ಮನದಟ್ಟು ಮಾಡುವಲ್ಲಿ ಈ ಸಂಶೋಧನಾ ಪ್ರಬಂಧ ಸಾಕಷ್ಟು ಯಶಸ್ವಿಯಾಗಿದೆ.

೧.೬ ಪರಿಕಲ್ಪನಾತ್ಮಕ ಚರ್ಚೆ

೧.೬.೧ ಕನ್ನಡ ವಿಚಾರ ಸಾಹಿತ್ಯ

ಅ.ಭಾಷೆ : ಭಾಷೆಯೆಂಬುದು ಅಂತಸ್ಥ ಸಾಮರ್ಥ್ಯವಾಗಿ ಮಗುವಿನಲ್ಲಿ ಹುಟ್ಟಿನಿಂದಲೇ ಇರುತ್ತದೆ ಎಂದು ನೋಮ್ ಚಾಮ್‌ಸ್ಕಿಯಂತಹ ಭಾಷಾ ವಿಜ್ಞಾನಿಗಳು ದೃಢಪಡಿಸಿದ್ದಾರೆ.

ಭಾಷೆಗಳು ಎಷ್ಟೇ ವೈವಿಧ್ಯವಾಗಿದ್ದರೂ ಅವುಗಳ ಉದ್ದೇಶ, ಕಾರ್ಯ, ಆಶಯ ಒಂದೇ. ಎಲ್ಲ ಭಾಷೆಗಳದು ಮಾನವ ಸಮುದಾಯಗಳ ಸಂಸ್ಕೃತಿ, ಸೃಷ್ಟಿಕ್ರಿಯೆ ಮತ್ತು ಸಂವಹನದ ಅಗತ್ಯವನ್ನು ಪೂರೈಸುವುದೇ ಆಗಿದೆ. ಎಲ್ಲ ಭಾಷೆಗಳಿಗೂ ಅವುಗಳನ್ನು ಪೂರೈಸುವ ಶಕ್ತಿಯಿದೆ.

ಭಾಷಾ ವಿಜ್ಞಾನಿಗಳು ಭಾಷೆಯ ಲಕ್ಷಣಗಳನ್ನು ಗುರುತಿಸುವಾಗ, ಭಾಷೆಯನ್ನು 'ಸಂಸ್ಕೃತಿಯ ವಾಹಕ' ಎಂದು ಗುರುತಿಸುತ್ತಾರೆ. ಇಂತಹ ಸಂಸ್ಕೃತಿ ಮತ್ತು ಸಂವಹನರೂಪಿಯಾದ ಭಾಷೆ. 'ಲಿಪಿ ಮತ್ತು ಮಾತು'ಗಳೆರಡರಲ್ಲಿಯೂ ವಿಭಿನ್ನ ಭಾಷಿಕ ರೂಪ (ಧ್ವನಿ ಸಂಕೇತಗಳು, ಪದರೂಪಗಳು, ವಾಕ್ಯರೂಪಗಳು ಮತ್ತು ವ್ಯಾಕರಣ ನಿಯಮಾವಳಿಗಳು) ಗಳನ್ನು ಒಳಗೊಂಡಿವೆ.

'ಇದಮಂಧಂ ತಮಂ ಕೃತ್ಸ್ನಂ ಜಾಯೇತ ಭುವನತ್ರಯಂ' – ಭಾಷೆಯೆಂಬ ಬೆಳಕು ಇಲ್ಲದೆ ಹೋದರೆ ಇಡೀ ಮೂರು ಲೋಕಗಳು ಕತ್ತಲೆಯಲ್ಲಿ ಕೊಳೆಯಬೇಕಾಗುತ್ತದೆ ಎಂದು ಸಂಸ್ಕೃತ ವ್ಯಾಕರಣಿ ದಂಡಿ ಹೇಳುತ್ತಾನೆ.

ಭಾಷೆಯೊಂದು ಸಂವಹನದ ಮಾಧ್ಯಮವಾಗಿ ಮಾತ್ರ ಪರಿಗಣಿತವಾಗಿದ್ದ ಕಾಲಘಟ್ಟದಲ್ಲಿ ದಂಡಿ ಭಾಷೆಯ ಮಹತ್ವವನ್ನು ಕುರಿತು ಹೇಳುವ ಈ ಮಾತು ಈಗ ಹೊಸ ಅರ್ಥಗಳನ್ನು ಹೊಳೆಯಿಸುತ್ತಿದೆ. ಭಾಷೆಯೊಂದು ಈಗ ಸಮುದಾಯಗಳ ಬಾಳಿನಲ್ಲಿ ಕತ್ತಲೆಯನ್ನು ಸೃಷ್ಟಿಸಲೂ ಕಾರಣವಾಗುತ್ತಿದೆ. ವಸಾಹತುಶಾಹಿ ಶಕ್ತಿಗಳು ಆಫ್ರಿಕಾ ದೇಶಗಳಲ್ಲಿ ಇಂಗ್ಲಿಶ್ ಭಾಷೆಯನ್ನು ಹೇರುವುದರ ಮೂಲಕ ಅಲ್ಲಿನ ಸ್ವಾಹಿಲಿಯಂತಹ ಸ್ಥಳೀಯ ಭಾಷೆಗಳನ್ನು ಹೇಗೆ ನಾಶ ಮಾಡಿದವು ಮತ್ತು ಇದು ಅಲ್ಲಿನ ಜನರ ಬಾಳಿನಲ್ಲಿ ಉಂಟುಮಾಡಿದ ತಲ್ಲಣಗಳನ್ನು ಗೂಗಿ ವಾ ಥಿಯಾಂಗೊ ಅವರ 'ಡಿಕಾಲೋನೈಸಿಂಗ್ ದಿ ಮೈಂಡ್' ಕೃತಿ ವಿವರವಾಗಿ ಚರ್ಚಿಸುತ್ತದೆ. ಚಿನುವಾ ಅಚಿಬೆ ಅವರ 'ಥಿಂಗ್ಸ್ ಫಾಲ್ ಅಪಾರ್ಟ್' ಕಾದಂಬರಿಯೂ ಇದನ್ನೇ ಧ್ವನಿಸುತ್ತದೆ.

ಯಾವುದೇ ಜನಸಮುದಾಯವು ಆಲೋಚನೆಯ ಕ್ರಮಗಳನ್ನು ಮತ್ತು ಜ್ಞಾನರೂಪಗಳನ್ನು ಭಾಷೆಯ ಮೂಲಕವೇ ಪ್ರಕಟಗೊಳಿಸುವುದರಿಂದ ಸಹಜವಾಗಿಯೇ ಆ ಭಾಷೆಯೊಳಗೆ ಅದು ಅಡಕವಾಗಿರುತ್ತದೆ. ಆದ್ದರಿಂದ ಭಾಷೆಯೊಳಗೆ ಅಡಕವಾಗಿರುವ ಆಲೋಚನೆಗಳ ಮೊತ್ತ ಸಮುದಾಯವೊಂದರ 'ಸಾಂಸ್ಕೃತಿಕ ಸಮಷ್ಟಿ ಜೀವನದ ಉತ್ಪನ್ನ'ವಾಗಿರುತ್ತದೆ. ಮೇಲೆ ಹೇಳಿದಂತೆ ಇಂತಹ ಉತ್ಪನ್ನಗಳೇ ಸಮುದಾಯಗಳಿಗೆ ಅಸ್ಮಿತೆ ಹಾಗೂ ಅನನ್ಯತೆಯನ್ನು ತಂದು ಕೊಡುವುದು. ಅಂತಹ ಅನನ್ಯವಾದ ಆಲೋಚನೆಯ ಕ್ರಮಗಳನ್ನು, ಅರಿವಿನ ರೂಪಗಳನ್ನು ಭಾಷೆ ಮುಂದಿನ ಪೀಳಿಗೆಗೆ ರವಾನಿಸುತ್ತಿರುತ್ತದೆ.[೫] ಯಾವ ಭಾಷೆಯೂ ಅದರೊಳಗಿನ ತಿಳಿವಳಿಕೆಯೂ ತನಗೆ ತಾನೇ ಕೇಡಲ್ಲ. ಅದನ್ನು ಯಾರು, ಯಾವ ದೃಷ್ಟಿಕೋನದಲ್ಲಿ ಮತ್ತು ಯಾಕಾಗಿ ಬಳಸುತ್ತಾರೆ ಎಂಬುದರ ಮೇಲೆ ಅದು ಒಳಿತೊ ಕೆಡುಕೊ ಆಗುತ್ತದೆ. ಭಾಷೆಗಳು ಉಚ್ಚಜಾತಿ ಮತ್ತು ವರ್ಗಗಳ

ಹಿತಾಸಕ್ತಿಯ ಜತೆಗೆ, ರಾಜಕೀಯ ಅಧಿಕಾರದ ಜತೆ ಸಮೀಕರಣಗೊಳ್ಳುತ್ತಿದ್ದಂತೆ, ಅಸಮಾನತೆಯ ಶ್ರೇಣೀಕರಣ ಸೃಷ್ಟಿಸುತ್ತದೆ; ತಾನು ಭಿನ್ನ ಮತ್ತು ಶ್ರೇಷ್ಠವೆಂಬ ಅಹಮಿಕೆ ಪಡೆದುಕೊಳ್ಳುತ್ತದೆ.

ಭಾಷೆ, ಸಮಾಜ ಮತ್ತು ಅಧಿಕಾರ ಇವು ಮೂರೂ ಪರಸ್ಪರ ಸಂಬಂಧ ಇರುವ ಸಂಗತಿಗಳು. ಈ ಸಂಬಂಧಕ್ಕೆ ಗಮನಕೊಟ್ಟು ಸಮಾಜವನ್ನು ತಿಳಿಯಲು ಯತ್ನಿಸುವುದು ಎಂದರೆ ಸಮಾಜದ ರಚನೆ, ಸಮಾಜದ ಕಾರ್ಯನಿರ್ವಹಣೆ, ಒಟ್ಟು ಸಮಾಜದ ಬಗ್ಗೆ ಬೇರೆ ಬೇರೆ ಸಮೂಹಗಳಲ್ಲಿ ಗುಪ್ತವಾಗಿ ಇರುವ, ಬಲುಮಟ್ಟಿಗೆ ಅದೃಶ್ಯವಾಗಿರುವ ಪೂರ್ವಾಗ್ರಹಗಳನ್ನು ಅರಿಯುವ ಕೆಲಸವೇ ಆಗುತ್ತದೆ. ಭಾಷಿಕ ವರ್ತನೆಯ ಅರಿವು ಸಮಾಜದ ವಾಸ್ತವತೆಯಲ್ಲಿ ನಮ್ಮನ್ನು ನಾವು ಅರಿಯುವುದಕ್ಕೆ ನಮ್ಮ ಮತ್ತು ಇತರರ ಸಂಬಂಧದ ಸ್ವರೂಪವನ್ನು ತಿಳಿಯುವುದಕ್ಕೆ ಮನುಷ್ಯ ಸಮಾಜದ ಅನ್ಯಾಯವನ್ನು ಕಾಣುವುದಕ್ಕೆ, ಕಂಡು ನಿವಾರಿಸಲು ಯತ್ನಿಸುವುದಕ್ಕೆ ದಾರಿಯನ್ನು ತೆರೆದೀತು ಎಂದು ಓ.ಎಲ್.ನಾಗಭೂಷಣಸ್ವಾಮಿ ಅವರು ಅಭಿಪ್ರಾಯ ಪಡುತ್ತಾರೆ.

ಆ. ಕನ್ನಡ : ಕನ್ನಡ ಎಂಬ ಭಾಷೆ ರೂಪುಗೊಂಡ ಬಗ್ಗೆ ಹಲವು ಅಧ್ಯಯನಗಳು ನಡೆದಿವೆ. ಮಹಾಭಾರತದಲ್ಲಿ 'ಕರ್ಣಾಟಾ' ಶಬ್ದವಿದೆ. ಕ್ರಿ.ಶ.ಒಂದನೆಯ ಶತಮಾನದ್ದು ಎನ್ನಲಾದ ಮಾರ್ಕಂಡೇಯ ಪುರಾಣದಲ್ಲಿ ಉಕ್ತವಾಗಿರುವ ದೇಶಗಳಲ್ಲಿ 'ಕರ್ಣಾಟಕ'ವೂ ಒಂದಾಗಿದೆ. ಸೋಮದೇವನ ಕಥಾಸರಿತ್ಸಾಗರ (ಕ್ರಿ.ಶ.೫ನೇ ಶ)ದಲ್ಲಿ ಮತ್ತು ವರಾಹಮಿಹಿರನ ಬೃಹತ್ಸಂಹಿತೆಯಲ್ಲಿ (ಕ್ರಿ.ಶ.೬ನೇ ಶ) ಕರ್ಣಾಟ ಎಂದಿದೆ. ಶೂದ್ರಕನ ಮೃಚ್ಛಕಟಿಕ ನಾಟಕದಲ್ಲಿ ಒಂದು ಪಾತ್ರವಾದ ಚಂದನಕ 'ಕರ್ಣಾಟ'ವನ್ನು ಹೇಳುತ್ತಾನೆ. ಗಂಗಭೂವಿಕ್ರಮನ ಬೆದಕೂರು ಶಾಸನದಲ್ಲಿ 'ಅಸ್ಯಸೀಮಾಃಕರ್ನಾಟಕೇ.. .'ಎಂದಿದೆ. ಸಂಸ್ಕೃತದಲ್ಲಿ ಕರ್ಣಾಟ, ಕರ್ನಾಟಕ ಎಂಬ ಎರಡು ರೂಪಗಳೂ ಇವೆ, ಸಮಾನಾರ್ಥಕವಾಗಿವೆ. 'ಕರ್ಣೇಷು ಅಟತಿ ಕರ್ಣಾಟ'ಎಂದು ಶಬ್ದರತ್ನಾವಲಿ' ಮತ್ತು ವಿಶ್ವಗುಣಾದರ್ಶ'ಗಳಲ್ಲಿ ವಿವರಣೆ ಇದೆ. ಎಂದರೆ, ಕಿವಿಗಳಲ್ಲಿ ಬಿದ್ದು ಪ್ರಸಿದ್ಧವಾದದ್ದು ಸ್ಕಂದಪುರಾಣದಲ್ಲಿ ಕರ್ಣಾಟ ಎಂಬ ರಾಕ್ಷಸನು ವಾಸಿಸುತ್ತಿದ್ದರಿಂದ ಈ ಹೆಸರು ಬಂದಿತೆಂದು ಹೇಳಲಾಗಿದೆ. ಪ್ರಾಕೃತದಲ್ಲಿ 'ಕಣ್ಣಾಡ' ಎಂಬ ರೂಪ ಬಳಕೆಯಾಗಿದೆ. 'ಶಿಲಪ್ಪದಿಕಾರಮ್' (ಕ್ರಿ.ಶ.೨ನೇ ಶತಮಾನ)ನಲ್ಲಿ ಚೇರರಾಜ ನೀಲಗಿರಿಯಲ್ಲಿ 'ಕರುನಾಡರ್' ಆಡಿದ ಕುಣಿತ ನೋಡಿದನೆಂದಿದೆ. ಪಾಂಡ್ಯರಾಜನ ವೇಳ್ವಕುಡಿ ತಾಮ್ರಶಾಸನದಲ್ಲಿ (ಕ್ರಿ.ಶ.೭೭೦) 'ಕರುನಾಡಗನ್' ಶಬ್ದವಿದೆ. ಹೀಗೆ ಮೊದಲು ಪ್ರದೇಶವಾಚಕ, ಆನಂತರ ಭಾಷಾವಾಚಕ, ಜನಾಂಗವಾಚಕವಾಗಿ ಕರ್ಣಾಟಕ ಶಬ್ದ ರೂಢಿಯಲ್ಲಿತ್ತು. ಕ್ರಿಸ್ತಪೂರ್ವದಿಂದಲೂ ಕನ್ನಡ ಪ್ರದೇಶ ಅಸ್ತಿತ್ವದಲ್ಲಿತ್ತು. ಕನ್ನಡ ಭಾಷೆ ಕ್ರಿಸ್ತಶಕದ ಪ್ರಾರಂಭದಿಂದ ಇದ್ದಿರಬಹುದು ಎಂದು ಎಂ.ಎಚ್ ಕೃಷ್ಣಯ್ಯ ತರ್ಕಿಸುತ್ತಾರೆ.

ಕನ್ನಡಕ್ಕೆ ಕನಿಷ್ಠ ಸಾವಿರ ವರ್ಷಗಳಿಗಿಂತಲೂ ದೀರ್ಘಕಾಲದ ಇತಿಹಾಸವಿರುವುದು 'ಕವಿರಾಜಮಾರ್ಗ' ಕೃತಿಯಿಂದ ತಿಳಿದು ಬರುತ್ತದೆ.

ಕನ್ನಡ ಸಂಸ್ಕೃತದಿಂದ ಹುಟ್ಟು ಪಡೆದ ಭಾಷೆ ಎಂಬ ನಂಬಿಕೆಯಿತ್ತು. ಆದರೆ ಕನ್ನಡದ ಮೂಲ ಸಂಸ್ಕೃತವಲ್ಲ, ಸಂಸ್ಕೃತದಿಂದ ಅನೇಕ ಅಕ್ಷರಗಳು ಮತ್ತು ಪದಗಳು ಕನ್ನಡಕ್ಕೆ ಬಂದಿರುವುದು ಹೌದು, ಕೆಲವು ವಿಶಿಷ್ಟವಾದ ಚಾರಿತ್ರಿಕ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಇದುವರೆಗೆ ಕನ್ನಡ ಬರಹ ಸಂಸ್ಕೃತವನ್ನು ಅವಲಂಬಿಸಿತ್ತು ಎನ್ನುವುದು ಡಿ.ಎನ್ ಶಂಕರ ಭಟ್ಟರ ಅಭಿಪ್ರಾಯ. ೧೮ನೇ ಶತಮಾನದಲ್ಲಿಯೇ ದ್ರಾವಿಡ ಭಾಷೆಗಳ ಬಿಡಿ ಅಧ್ಯಯನಗಳು ಆರಂಭವಾಗಿ ೧೯ನೇ ಶತಮಾನದ ಆರಂಭದ ಹೊತ್ತಿಗೆ ಸಂಶೋಧನೆಗಳು ಭಾರತೀಯ ಭಾಷೆಗಳೆಲ್ಲವೂ ಸಂಸ್ಕೃತದಿಂದ ಹುಟ್ಟಿವೆ ಎಂಬುದು ಆಧಾರರಹಿತ ಎಂದು ಸಾಬೀತುಪಡಿಸಿದ್ದವು. ಭಾರತದಲ್ಲಿ ಬ್ರಿಟಿಶ್ ಅಧಿಕಾರಿಯಾಗಿದ್ದ ವೈಟ್ ಎಲ್ಲಿಸ್ ಕನ್ನಡ ಭಾಷೆ ದ್ರಾವಿಡಭಾಷಾ ಕುಟುಂಬದಿಂದ ಹುಟ್ಟುಪಡೆದಿದ್ದು ಎಂದು ಸಂಶೋಧನೆಯ ಮೂಲಕ ರುಜುವಾತುಪಡಿಸಿದ್ದ. ರಾಬರ್ಟ್ ಕಾಲ್ಡ್‌ವೆಲ್ (೧೮೧೮-೧೮೯೧) ಅವರ 'ಕಂಪೆರೆಟಿವ್ ಗ್ರಾಮರ್ ಆಫ್ ದ್ರವಿಡಿಯನ್ ಆರ್ ಸೌತ್ ಇಂಡಿಯನ್ ಫ್ಯಾಮಿಲಿ ಆಫ್ ಲಾಂಗ್ವೇಜಸ್' ಕೃತಿ ಅನುಮಾನಕ್ಕೆಡೆ ಇಲ್ಲದಂತೆ ಕನ್ನಡವನ್ನೂ ಒಳಗೊಂಡಂತೆ ದಕ್ಷಿಣ ಭಾರತದ ಬಹುತೇಕ ಭಾಷೆಗಳ ದ್ರಾವಿಡಮೂಲವನ್ನು ದೃಢಪಡಿಸಿತ್ತು.

'ಕನ್ನಡ' ಎಂದರೆ ಏನು ಎಂಬ ಪ್ರಶ್ನೆಗೆ ಸುಲಭವಾಗಿ 'ಒಂದು ಭಾಷೆ' ಎಂದು ಉತ್ತರಿಸಬಹುದು. ಕನ್ನಡ ಎಲ್ಲಿದೆ ಎಂಬ ಪ್ರಶ್ನೆಗೆ ಯಾರೂ ಉತ್ತರ ಕೊಡಲಾರರು. ಏಕೆಂದರೆ ಅದು ಅಮೂರ್ತ. ಅಲ್ಲದೇ ಅದು ನಿರಾಕಾರ. ಅದಕ್ಕೆ ಸಾಮಾಜಿಕ ವಿನ್ಯಾಸದಲ್ಲಿ ಒಂದು ಜೈವಿಕ ಮೂಲವಿಲ್ಲ. ಇದಕ್ಕೆ 'ಒಂದು ಭಾಷೆ' ಎಂಬ ಗುರುತಷ್ಟೇ ಸಾಲದು. ಇದು ಮೂರ್ತವಾಗುವುದು ಈ ಭಾಷೆಯನ್ನು ಆಡುವ ವ್ಯಕ್ತಿಯೊಂದಿಗೆ ಅಥವಾ ಈ ಭಾಷೆಯನ್ನು ಆಡುವ ಜನರ ನಿರ್ದಿಷ್ಟ ಪ್ರದೇಶದೊಂದಿಗೆ ಲಗತ್ತುಗೊಂಡಾಗ. ಅಂದರೆ 'ಕನ್ನಡ' ನಮ್ಮ ಅರಿವಿಗೆ ಬರುವುದು 'ಕನ್ನಡಿಗ' ಮತ್ತು 'ಕರ್ನಾಟಕ'ದ ಮೂಲಕ ಆದರೂ ಇಂದು ಕನ್ನಡ ಮತ್ತು ಕರ್ನಾಟಕ ಶಬ್ದಗಳನ್ನು ನಿರ್ದಿಷ್ಟ ಅರ್ಥದಲ್ಲಿ ಬಳಸಲಾಗುತ್ತಿದೆ. ಹಿಂದೆ ಈ ಶಬ್ದಗಳು ಭಾಷೆ, ಜನಾಂಗ ಅಥವಾ ಜನಪದ ಮತ್ತು ಪ್ರದೇಶವನ್ನೂ ಸೂಚಿಸುತ್ತಿದ್ದವು. ಕವಿರಾಜಮಾರ್ಗಕಾರನೇ ಕನ್ನಡ ಶಬ್ದವನ್ನು ಭಾಷೆ ಹಾಗೂ ಪ್ರದೇಶವಾಚಿಯಾಗಿ ಬಳಸಿದ್ದಾನೆ. 'ಪಳಗನ್ನಡ' ಎಂದಾಗ ಭಾಷೆಯನ್ನು ಕುರಿತುದಾಗಿದೆ. 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ', 'ಒಕ್ಕುಂದದ ನಡುವಣ ನಾಡೆ ಕನ್ನಡದ ತಿರುಳ್' ಎಂಬಲ್ಲಿ ಪ್ರದೇಶವಾಚಿಕವಾಗಿಯೂ ಕವಿರಾಜಮಾರ್ಗಕಾರ ಬಳಸಿದ್ದಾನೆ. ಅಂಡಯ್ಯ ಹೇಳುವ 'ಕನ್ನಡಮೆನಿಪ್ಪಾ ನಾಡು ಚೆಲ್ವಾಯಿತು' ಎಂಬಲ್ಲಿಯೂ ಪ್ರದೇಶವೇ ಸೂಚಿತವಾಗಿದೆ. ಅಲ್ಲದೆ 'ಕನ್ನಡ, ಕಮ್ಮೆ, ತೆಲುಗ, ತಿಗುಳ' ಎಂಬ

ನಿಜಗುಣ ಶಿವಯೋಗಿಗಳ ಪ್ರಯೋಗದಿಂದ ಈ ಶಬ್ದ ಜನಾಂಗ ಅಥವಾ ಕುಲವನ್ನೂ ಸೂಚಿಸುತ್ತಿತ್ತು ಎಂದು ಊಹಿಸಲಾಗಿದೆ. ಈಗ ಕನ್ನಡ, ಕನ್ನಡನಾಡು, ಕನ್ನಡಿಗ ಶಬ್ದಗಳು ಭಾಷೆ, ಪ್ರದೇಶ, ಕುಲ-ಜನ ಅರ್ಥದಲ್ಲಿ ಬಳಕೆಯಾಗುತ್ತಿದೆ. 'ಕನ್ನಡ ನಾಡು' ಶಬ್ದಕ್ಕೆ ಬದಲಾಗಿ 'ಕರ್ನಾಟಕ' ಮಾನ್ಯತೆ ಪಡೆದು ರೂಢಿಯಲ್ಲಿದೆ, ಅಧಿಕೃತವಾಗಿ ಪ್ರದೇಶದ ಹೆಸರೂ ಆಗಿದೆ.[೬] ಸಾರಾಂಶದಲ್ಲಿ ಕನ್ನಡವೆಂದರೆ ಭಾಷೆ ಮಾತ್ರವಲ್ಲ. ಅದು ಏಕಕಾಲಕ್ಕೆ ಭಾಷೆ, ಭೂಮಿ, ಸಮಾಜ ಮತ್ತು ಸಂಸ್ಕೃತಿಗಳನ್ನು ಒಳಗೊಂಡ ಪರಿಭಾಷೆಯಾಗಿದೆ.

ಇ. **ವಿಚಾರ ಸಾಹಿತ್ಯ** : ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ನಿಘಂಟು (ಎಂಟನೆಯ ಸಂಪುಟ) 'ವಿಚಾರ' ಎಂಬ ಪರಿಭಾಷೆಗೆ ವಿಮರ್ಶೆ, ಪರ್ಯಾಲೋಚನೆ, ಪರಾಮರ್ಶೆ, ವಿವೇಕ, ವಿವೇಚನೆ ಎಂಬ ವ್ಯಾಖ್ಯೆ ನೀಡುತ್ತದೆ. 'ವಿಚಾರ' ಎಂಬ ಪದ ನಿರ್ದಿಷ್ಟ 'ಸಂಗತಿ' ಎಂಬ ಅರ್ಥ ಹೊರಡಿಸುತ್ತದೆ. ದೈನಂದಿನ ಬಳಕೆಯಲ್ಲಿ 'ವಿಚಾರ'ವನ್ನು 'ಸಂಗತಿ' ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. 'ವಿಚಾರ' ಎಂಬುದನ್ನು ಒಂದು ಪರಿಭಾಷೆಯಾಗಿ ಪರಿಗಣಿಸಿದಾಗ 'ಸಂಗತಿ'ಯೊಂದನ್ನು ನಮ್ಮ ಪೂರ್ವಾಧ್ಯಯನ, ತಿಳುವಳಿಕೆ ಮತ್ತು ವಿವೇಕದ ಬೆಳಕಿನಲ್ಲಿ ವಿವೇಚಿಸುವುದು ಎಂದು ಅರ್ಥೈಸಲಾಗುತ್ತದೆ. ಕುವೆಂಪು ಅವರ ಬಹಳ ಪ್ರಸಿದ್ಧ ಭಾಷಣ 'ವಿಚಾರ ಕ್ರಾಂತಿಗೆ ಆಹ್ವಾನ'ದ ಶೀರ್ಷಿಕೆಯಲ್ಲಿ 'ವಿಚಾರ' ಎನ್ನುವುದನ್ನು ಈ ಬಗೆಯಲ್ಲಿಯೇ ಅರ್ಥೈಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯ ಎಂಬತ್ತರ ದಶಕದಲ್ಲಿ ಕುಲಪತಿಗಳಾದ ಎಚ್.ನರಸಿಂಹಯ್ಯ ಅವರ ನೇತೃತ್ವದಲ್ಲಿ ಸಾಯಿಬಾಬಾ ಅವರ ಪವಾಡಗಳನ್ನು ಬಯಲಿಗೆಳೆಯುವ ಸಂದರ್ಭದಲ್ಲಿಯೇ ಕನ್ನಡದಲ್ಲಿ 'ವಿಚಾರ ಸಾಹಿತ್ಯ' ಸಂಕಲನಗಳು ರೂಪುಗೊಂಡವು. ಬಸವರಾಜ ಕಲ್ಗುಡಿ ಅವರು ಗುರುತಿಸುವಂತೆ ಈ ಸಂದರ್ಭದಲ್ಲೇ ಮೂಲತಃ ವಿಚಾರ ಸಾಹಿತ್ಯದ ಕಲ್ಪನೆಗೆ ರೂಪುರೇಶೆಗಳು ಮೂಡಿದಂತಾದವು. ವೈಜ್ಞಾನಿಕ ದೃಷ್ಟಿಕೋನಕ್ಕೂ, 'ರ್‍ಯಾಶಿನಾಲಿಟಿ'ಗೂ ಆತ್ಮೀಯ ಸಂಬಂಧಗಳು ಮೂಡಿದ ಸಮಯ ಇದು.

ಕನ್ನಡ ಆಧುನಿಕ ಸಾಹಿತ್ಯವನ್ನು ವಸಾಹತುಶಾಹಿ ಆಡಳಿತ ಮತ್ತು ಅದರೊಂದಿಗೆ ಬಂದ ಯುರೋಪಿಯನ್ ಸಾಹಿತ್ಯ ಪ್ರಭಾವಿಸಿದೆ. ಇದರೊಂದಿಗೆ ಮಾರ್ಕ್ಸ್‌ವಾದ, ಲೋಹಿಯಾವಾದ, ಗಾಂಧಿವಾದ, ಮತ್ತು ಮೂಲದಲ್ಲಿ ಸಾಕಷ್ಟು ಇವುಗಳ ಪ್ರಭಾವದಿಂದ ಕರ್ನಾಟಕದಲ್ಲಿ ಹುಟ್ಟು ಪಡೆದ ಗೋಕಾಕ್, ರೈತ, ದಲಿತ ಬಂಡಾಯ, ಜಾತಿ ವಿನಾಶ ಮತ್ತು ಬೂಸಾ ಚಳುವಳಿ ಮತ್ತು ವಾಗ್ವಾದಗಳು ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಕನ್ನಡ ವಿಚಾರ ಸಾಹಿತ್ಯದ ಸ್ವರೂಪವನ್ನು ರೂಪಿಸಿವೆ. ಬಸವರಾಜ ಕಲ್ಗುಡಿ ಅವರು ಅಭಿಪ್ರಾಯ ಪಡುವಂತೆ ಆಧುನಿಕ ಯುಗದ ಬಹುಪಾಲು ವೈಚಾರಿಕ ಆಕೃತಿಗಳು ಹುಟ್ಟಿರುವುದೇ ಕಾಲ-ದೇಶಬದ್ಧವಾದ ಅತ್ಯಗತ್ಯ ಬೇಡಿಕೆಗಳಲ್ಲಿ. ತನ್ನ ಸಂದರ್ಭದ ಸಮುದಾಯಪರವಾದ ಸಂವೇದನೆಯನ್ನು ಗ್ರಹಿಸಲು ಯತ್ನಿಸುವ ಈ ಚಿಂತನೆಗಳು,

ಎಲ್ಲ ಬಗೆಯ ಪ್ರಭುತ್ವದ ಒತ್ತಡ, ಒತ್ತಾಯಗಳ ವಿರೋಧವಾಗಿ ವಿಚಾರಗಳನ್ನು ಮೂಡಿಸಲು ಬಯಸುತ್ತದೆ. ಮನುಷ್ಯನ ಅಂತಃಸತ್ವ ಮತ್ತು ಶಕ್ತಿಗಳನ್ನು ಮೌಲ್ಯೀಕರಣಗೊಳಿಸಲು ಬಯಸುವ 'ಅನುಭಾವಿಕ' ಸತ್ವವುಳ್ಳ ವಿಚಾರ ಸಾಹಿತ್ಯವೂ ಕನ್ನಡದಲ್ಲಿದೆ. ಚರಿತ್ರೆಯ ತಿರುಗಣೆಯಲ್ಲಿ ಮುಳುಗುವ ಹಾಗೆ ಮಾಡುವ ಕ್ರೌರ್ಯ, ದುಃಖ, ಭಯ, ದುರಾಸೆಗಳಿಂದ ಹೊರಗಡೆಗೆ ಬರಬೇಕೆನ್ನುವ ಬಯಕೆಗೆ ಇಂಥ ವೈಚಾರಿಕ ವಲಯಗಳು ಸಹಾಯ ಮಾಡಬಲ್ಲವು. ಆದರೆ ಇಲ್ಲಿ ಮತೀಯತೆಯತ್ತ ಜಾರುವ ಆಳದಲ್ಲಿ ವಿಭಜಿಸುವ ಉದ್ದೇಶವುಳ್ಳ ಸಾಹಿತ್ಯವನ್ನು ಗುರುತಿಸುವ ಮತ್ತು ನಿರಾಕರಿಸುವ ಅಗತ್ಯವನ್ನು ಕಲ್ಗುಡಿ ಅವರು ಪ್ರತಿಪಾದಿಸುತ್ತಾರೆ.

ಸಾಹಿತ್ಯ ತನ್ನ ಅರ್ಥವ್ಯಾಪ್ತಿಯನ್ನು ಕಾಲಗತಿಯಲ್ಲಿ ವಿಸ್ತರಿಸಿಕೊಂಡರೂ ಸೃಜನಶೀಲ ಮತ್ತು ಸೃಜನೇತರ ಎಂಬ ವಿಂಗಡಣೆ ಇನ್ನೂ ಪೂರ್ತಿ ಕನ್ನಡದಲ್ಲಿ ಅಳಿಸಿ ಹೋಗಿಲ್ಲ. ಕಥೆ–ಕಾವ್ಯ–ನಾಟಕ–ಕಾದಂಬರಿಗಳು ಗಳಿಸಿರುವ ಮಾನ್ಯತೆಯನ್ನು ಸಂಶೋಧನೆ ಮತ್ತು ವಿಚಾರ ಸಾಹಿತ್ಯ ಗಳಿಸಿಲ್ಲ. ಸೃಜನಶೀಲ ಎನಿಸಿಕೊಂಡ ಕಾದಂಬರಿಯ ರಚನೆಯ ಮೂಲಕ ಸಾಹಿತ್ಯಲೋಕದಲ್ಲಿ ಭದ್ರಸ್ಥಾನ ಪಡೆಯುವುದು ಕೆಲವು ಲೇಖಕರಿಗೆ ಸಾಧ್ಯವಾಯಿತು. ಆದರೆ ತಮ್ಮ ಇಡೀ ಬದುಕನ್ನು ಕನ್ನಡ ನಾಡು–ನುಡಿ ಕುರಿತ ಸಂಶೋಧನೆಗೆ ಮುಡಿಪಾಗಿಟ್ಟ ಶಂಬಾ ಜೋಶಿ ಅವರ ಕೊಡುಗೆ ಅವರ ಜೀವಿತಾವಧಿಯಲ್ಲಿ ಮಾನ್ಯತೆ ಗಳಿಸುವುದು ಕಷ್ಟವಾಯಿತು.

ಸೃಜನಶೀಲ ಸಾಹಿತ್ಯ ಪ್ರಕಾರ ಎನ್ನಿಸಿಕೊಂಡ ಕಥೆ–ಕಾವ್ಯ–ನಾಟಕ–ಕಾದಂಬರಿಗಳು ಜನಸಮುದಾಯದ ಮೇಲೆ ಬೀರುವ ಪ್ರಭಾವವನ್ನು, ಆ ಮೂಲಕ ಅದರ ಪ್ರಾಮುಖ್ಯತೆಯನ್ನು ಅಳೆಯಲು ಯಾವುದೇ ನಿರ್ದಿಷ್ಟ ಮಾನದಂಡಗಳಿಲ್ಲ. ಸಾಹಿತ್ಯ ಕೃತಿಗಳಿಂದ ಸಮಾಜದಲ್ಲಿ ಜಾತಿಪ್ರಜ್ಞೆ ಅಳಿಸಿದೆ, ಮೇಲ್ಜಾತಿಗಳಲ್ಲಿ ಆತ್ಮವಿಮರ್ಶೆ ಮೂಡಿದೆ, ಕೆಳಜಾತಿಗಳಲ್ಲಿ ಸ್ವಾಭಿಮಾನ ಮೂಡಿದೆ ಎಂದು ಸಮಾಜಶಾಸ್ತ್ರಜ್ಞರು ಹೇಳಿದರೂ ಈ ಬದಲಾವಣೆಗಳಲ್ಲಿ ಸಾಹಿತ್ಯದ ಪ್ರಭಾವವೆಷ್ಟು, ಕಾನೂನುಗಳ, ಬದಲಾದ ರಾಜಕೀಯ, ಆರ್ಥಿಕ ಕಾರಣಗಳೆಷ್ಟು ಎಂದು ಗುರುತಿಸುವುದು ಕಷ್ಟಸಾಧ್ಯವಾಗಿದೆ. ಇದಕ್ಕೆ ಸ್ವಲ್ಪಮಟ್ಟಿನ ಅಪವಾದವೆಂಬಂತೆ ವಿಚಾರ ಸಾಹಿತ್ಯವು ಆಯಾ ಭಾಷಿಕ ಸಮುದಾಯದಲ್ಲಿನ ಚಿಂತನೆಯ ಸ್ವರೂಪವನ್ನು ಮತ್ತು ಜನರ ಪ್ರಜ್ಞೆಯನ್ನು ಕ್ಷಿಪ್ರಗತಿಯಲ್ಲಿ ಬದಲಾಯಿಸಿರುವುದನ್ನು ಗಮನಿಸಬಹುದು. ಭಾಷೆಗೆ ಸಂಬಂಧಿಸಿದಂತೆ ಪ್ರಭುತ್ವದ ನೀತಿ ನಿರ್ಧಾರಗಳ ಮೇಲೆ ವಿಚಾರ ಸಾಹಿತ್ಯದ ಪ್ರಭಾವವಿರುವುದನ್ನು ಗುರುತಿಸಬಹುದು. ಕರ್ನಾಟಕದಲ್ಲಿ ಗಡಿ–ಭಾಷೆ–ಉದ್ಯೋಗಗಳ ಕಾರಣಕ್ಕಾಗಿ ಮಹಾಜನ, ಗೋಕಾಕ್, ಸರೋಜಿನಿ ಮಹಿಷಿ ಆಯೋಗಗಳನ್ನು ಸರ್ಕಾರ ರಚನೆ ಮಾಡಿ ವರದಿಗಳನ್ನು ಪಡೆದು ಅನುಷ್ಠಾನದ ಕ್ರಿಯೆಗೆ ಇಳಿದಿದ್ದರ ಹಿನ್ನೆಲೆಯಲ್ಲಿ ವಿಚಾರ ಸಾಹಿತ್ಯದ ಪ್ರಭಾವವಿರುವುದನ್ನು ಗಮನಿಸಬಹುದಾಗಿದೆ. ಜಾತಿ ತಾರತಮ್ಯ, ಸಾಮಾಜಿಕ ಅನಿಷ್ಟಗಳ ಮತ್ತು ಮೂಢನಂಬಿಕೆಗಳ ನಿವಾರಣೆಯಲ್ಲಿ ವಿಚಾರ ಸಾಹಿತ್ಯದ ಪ್ರಭಾವವಿರುವುದನ್ನು

ಗುರುತಿಸಬಹುದಾಗಿದೆ. ವಿಚಾರ ಸಾಹಿತ್ಯವನ್ನು ನಿರಂತರವಾಗಿ ಪ್ರಕಟಿಸುವ ಪತ್ರಿಕೆಗಳ ಪಾತ್ರ ಈ ನಿಟ್ಟಿನಲ್ಲಿ ಪ್ರಮುಖವಾಗಿದೆ. ಕಳೆದೊಂದು ದಶಕದಲ್ಲಿ ಉದ್ಯಮವಾಗಿ ಪರಿವರ್ತಿತಗೊಂಡ ಮಾಧ್ಯಮ ಜಾತಿವ್ಯವಸ್ಥೆಯನ್ನು, ಸಾಮಾಜಿಕ ಅನಿಷ್ಟಗಳನ್ನು ಮತ್ತು ಮೂಢನಂಬಿಕೆಗಳನ್ನು ಪೋಷಿಸುತ್ತಿರುವುದು ಹೊಸ ವಿದ್ಯಮಾನವಾಗಿದೆ.

ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದವರೇ ವಿಚಾರ ಸಾಹಿತ್ಯ ಪ್ರಕಾರಕ್ಕೂ ಕಸುವು ತುಂಬಿದವರಾಗಿದ್ದಾರೆ. ಕನ್ನಡದ ದೊಡ್ಡ ಲೇಖಕರೆಲ್ಲ ವಿಚಾರ ಸಾಹಿತ್ಯ ರಚಿಸಿದ್ದಾರೆ. ಈ ಲೇಖಕರ ಕಥೆ, ಕಾದಂಬರಿ, ಕಾವ್ಯ, ನಾಟಕಗಳಲ್ಲಿ ಧ್ವನ್ಯಾರ್ಥಗಳಲ್ಲಿ ಅಂತರ್ಗತವಾಗಿರುವ ಹಲವು ಸಂಗತಿಗಳು ಈ ಸಾಹಿತ್ಯಪ್ರಕಾರಗಳಿಗೆ ಹೋಲಿಸಿದರೆ ವಿಚಾರ ಸಾಹಿತ್ಯದಲ್ಲಿ ನೇರವಾಗಿ ಮಂಡಿತವಾಗಿವೆ. ಸೃಜನೇತರ ಎನ್ನುವ ಕಾರಣಕ್ಕಾಗಿ ವಿಚಾರ ಸಾಹಿತ್ಯ ಇತ್ತೀಚಿನವರೆಗೂ ಅವಜ್ಞೆಗೆ ಒಳಗಾಗಿತ್ತು. ಆದರೆ ಈ ಸಂಗತಿ ಅದರ ಮಹತ್ವವನ್ನೇನೂ ಕಡಿಮೆ ಮಾಡುವುದಿಲ್ಲ.

೧.೬.೨ ಕನ್ನಡ ಅಸ್ಮಿತೆ

'ಅಸ್ಮಿತೆ' ತನ್ನ ಚಹರೆಗಳನ್ನು, ತನ್ನತನವನ್ನು ಮತ್ತು ತನ್ನ ಸ್ಥಾನಮಾನಗಳನ್ನು ಗುರುತಿಸಿಕೊಳ್ಳುವ ಅರ್ಥವನ್ನು ಹೊಂದಿರುವ ಪರಿಭಾಷೆ. ಇಂಗ್ಲೀಷಿನ 'Identity' (ಗುರುತು) ಮತ್ತು 'Existence' (ಅಸ್ತಿತ್ವ) ಎರಡರ ಅರ್ಥವೂ ಇರುವ ಪರಿಕಲ್ಪನೆಯಿದು. ಆದರೆ, ಇದಕ್ಕೂ ಮೀರಿದ ವಿಸ್ತಾರವಾದ ಮತ್ತು ಆಳವಾದ ಅರ್ಥವ್ಯಾಪ್ತಿ ಹಿಂದಿ ಭಾಷೆಯಿಂದ ಬಂದ ಈ ಪರಿಕಲ್ಪನೆಗಿದೆ.

ಜಾಗತಿಕವಾದ ಕೆಲವು ಉದಾಹರಣೆಗಳ ಮೂಲಕ ಭಾಷಾ ಅಸ್ಮಿತೆ ಕುರಿತ ಚರ್ಚೆಯನ್ನು ಪ್ರವೇಶಿಸಬಹುದು. ಮೊದಲನೆಯದು ಕುರ್ದಿಶ್ ಭಾಷೆಗೆ ಸಂಬಂಧಿಸಿದ್ದು. ಕುರ್ದಿಶ್ ಭಾಷೆಯನ್ನಾಡುವ ಜನಾಂಗ ಮಧ್ಯ ಪ್ರಾಚ್ಯದಲ್ಲಿದ್ದು ಇರಾಕ್, ಇರಾನ್, ಟರ್ಕಿಗಳ ಸಂಧಿ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಮೂರೂ ದೇಶಗಳಲ್ಲಿ ಹರಡಿಹೋಗಿರುವ ಈ ಭಾಷಿಕರಿಗೆ ರಾಷ್ಟ್ರವಿಲ್ಲ. ಜನಾಂಗಿಕ ಭಿನ್ನತೆಯಿಂದಾಗಿ ತಾವು ಪ್ರತ್ಯೇಕವಾಗಬೇಕೆಂದು ಹೋರಾಡುತ್ತಿದ್ದಾರೆ. ಇವರ ವಿಶಿಷ್ಟತೆಯ ಮುಖ್ಯ ಚಹರೆಗಳಲ್ಲಿ ಇವರ ಭಾಷೆಯೂ ಒಂದಾಗಿದೆ. ಈ ಜನಾಂಗವನ್ನು ಹತ್ತಿಕ್ಕುತ್ತಿರುವ ರಾಷ್ಟ್ರಗಳಲ್ಲಿ, ಮುಖ್ಯವಾಗಿ ಟರ್ಕಿಯಲ್ಲಿ, ಈ ಕುರ್ದಿಶ್ ಭಾಷೆಯನ್ನು ಬಳಸಲು ನಿರ್ಬಂಧಗಳಿವೆ.

ಎರಡನೆಯದು ಮಾಕ್ರೊ ಅಲ್ಗಾಂಕಿಯನ್ ಭಾಷಾ ಕುಟುಂಬಕ್ಕೆ ಸೇರಿದ ಒಜಿಬ್ವ ಭಾಷೆ ಮತ್ತು ಫ್ರೆಂಚ್ ಭಾಷೆಗೆ ಸಂಬಂಧಿಸಿದ್ದಾಗಿದೆ. ಉತ್ತರ ಅಮೆರಿಕಾದ ಕೆನಡಾ ಈಗ ಒಂದು ಕಾಮನ್ ವೆಲ್ತ್ ರಾಷ್ಟ್ರವಾಗಿದೆ. ಆದರೆ ಫ್ರೆಂಚ್ ವಸಾಹತಾಗಿದ್ದ ಇಂದಿನ ಕೆನಾಡಾದ ಕ್ವಿಬೆಕ್ ಪ್ರಾಂತ್ಯದಲ್ಲಿ

ಫ್ರೆಂಚ್ ಭಾಷಿಕ ಸಮುದಾಯವಿದೆ. ಬಹುದಿನಗಳಿಂದ ಕೆನಡಾದಲ್ಲಿ ಎರಡು ರಾಷ್ಟ್ರಗಳ ಬೇಡಿಕೆಯಿದೆ. ಫ್ರೆಂಚ್ ಮಾತಾಡುವ ಸಮುದಾಯವೇ ಈ ಬೇಡಿಕೆಯನ್ನು ಮಂಡಿಸಿದ್ದು, ತಮ್ಮ ಭಾಷೆಯನ್ನು ಪ್ರತ್ಯೇಕತೆಗೆ ಮುಖ್ಯ ಕಾರಣವನ್ನಾಗಿ ಇರಿಸಿಕೊಂಡಿದ್ದಾರೆ. ಇಂಥದೇ ಪರಿಸ್ಥಿತಿ ವಿಭಜನಪೂರ್ವ ಪಾಕಿಸ್ತಾನದಲ್ಲೂ ಇತ್ತು. ೧೯೪೭ ರಿಂದ ೧೯೭೧ ರವರೆಗೆ ಎರಡು ಭೌಗೋಳಿಕ ವಿಭಾಗಗಳಲ್ಲಿದ್ದ ಈ ರಾಷ್ಟ್ರಗಳಿಂದ ಬಾಂಗ್ಲಾದೇಶ ಪ್ರತ್ಯೇಕವಾಗಿ ರೂಪುಗೊಂಡಿತು. ಎರಡೂ ಭಾಗಗಳು ಧಾರ್ಮಿಕ ಏಕತೆಯನ್ನು ಹೊಂದಿದ್ದರೂ ಭಿನ್ನತೆಗೆ ಇದ್ದ ಕಾರಣಗಳಲ್ಲಿ ಭಾಷೆಯೂ ಮುಖ್ಯವಾಗಿದೆ.

ಮೂರನೆಯ ಉದಾಹರಣೆ ಭಾರತದ್ದೇ ಆದ ಉರ್ದು ಮತ್ತು ಸಿಂಧಿ ಭಾಷೆಗಳಿಗೆ ಸಂಬಂಧಿಸಿದ್ದಾಗಿದೆ. ಭಾರತದಲ್ಲಿ ರಾಜ್ಯಗಳ ಮರುವಿಂಗಡಣೆಗೆ ಭಾಷೆಯನ್ನೇ ಮುಖ್ಯ ಆಧಾರವನ್ನಾಗಿ ಇರಿಸಿಕೊಳ್ಳಲಾಗಿದೆ. ಹೀಗಿದ್ದರೂ ಎರಡು ಪ್ರಮುಖ ಭಾಷಾ ಸಮುದಾಯಗಳಾದ ಉರ್ದು ಮತ್ತು ಸಿಂಧಿಗಳಿಗೆ ಭೌಗೋಳಿಕ ಪ್ರತ್ಯೇಕತೆ ಇಲ್ಲ. ಎಷ್ಟೋ ರಾಜ್ಯಗಳಲ್ಲಿ ಈ ಭಾಷಾ ಸಮುದಾಯಗಳು ಹಂಚಿಹೋಗಿವೆ. ಕೆಲವು ರಾಜ್ಯಗಳಲ್ಲಿ ಪ್ರತ್ಯೇಕ ಭಾಷಾ ಸಮುದಾಯಗಳು ಹಂಚಿಹೋಗಿವೆ. ಕೆಲವು ರಾಜ್ಯಗಳಲ್ಲಿ ಪ್ರತ್ಯೇಕ ಭಾಷಾ ಸಮುದಾಯಗಳು ಅಲ್ಪಸಂಖ್ಯಾತವಾಗಿ ಅಡಕಗೊಂಡಿವೆ. ಭಾಷಾ ಅಲ್ಪಸಂಖ್ಯಾತರು ಎಂಬ ಗುಂಪನ್ನು ನಿರ್ದೇಶಿಸಿ ಕೆಲವು ಶಾಸನಬದ್ಧ ಸವಲತ್ತುಗಳನ್ನು ಕಲ್ಪಿಸುವ ಕಾನೂನುಗಳು ಜಾರಿಯಲ್ಲಿವೆ. ಈಗ ನಾಡಿನಾದ್ಯಂತ ನಡೆಯುತ್ತಿರುವ ಹಲವಾರು ಪ್ರತ್ಯೇಕವಾದಿ ಹೋರಾಟಗಳಲ್ಲಿ ಕೆಲವು ತಮ್ಮ ಪ್ರತ್ಯೇಕತೆಗೆ ಭಾಷೆಯನ್ನೇ ಮುಖ್ಯ ಚಹರೆಯನ್ನಾಗಿ ಇರಿಸಿಕೊಂಡಿವೆ. ಇಲ್ಲೆಲ್ಲಾ ಭಾಷಾ ಅಲ್ಪಸಂಖ್ಯಾತ ಸಮುದಾಯವೊಂದು ಪ್ರತ್ಯೇಕ ಅಸ್ತಿತ್ವಕ್ಕೆ ಹೋರಾಡುತ್ತಿರುತ್ತದೆ. ಈ ಹೋರಾಟದಲ್ಲಿ ಭಾಷೆ ಮುಖ್ಯ ಚಹರೆಯಾಗಿರುತ್ತದೆ. ಭಾಷೆಯ ಪ್ರತ್ಯೇಕತೆಯನ್ನು ಗುರಿಯಾಗಿಸಿಕೊಂಡು ತಮ್ಮ ಸಾಂಸ್ಕೃತಿಕ ಅಸ್ತಿತ್ವಕ್ಕಾಗಿನ ಹೋರಾಟ ಮತ್ತು ಭಾಷೆಯ ಅಸ್ತಿತ್ವವನ್ನೇ ಗುರಿಯಾಗಿಸಿಕೊಂಡ ಎರಡು ಬಗೆಯ ಹೋರಾಟಗಳನ್ನು ಕಾಣಬಹುದು.

ಮೇಲ್ಕಂಡ ಉದಾಹರಣೆಗಳು ಅಸ್ಮಿತೆ ಕೇವಲ ಭಾಷೆಗೆ ಸಂಬಂಧಿಸಿದ್ದಲ್ಲ ಎನ್ನುವುದನ್ನು ಹೇಳುತ್ತಿವೆ. ಮೊದಲ ಎರಡು ನಿದರ್ಶನಗಳಲ್ಲಿ ಅಸ್ಮಿತೆಗೆ ಭಾಷೆಗಿಂತ ಮುಖ್ಯವಾಗಿ ಭೌಗೋಳಿಕ ನೆಲೆಯಿದೆ. ಟಿಬೆಟಿಯನ್ನರ, ತಮಿಳರ, ಕೊಡವ ಸಮುದಾಯದವರ, ಪ್ಯಾಲಿಸ್ತೇನಿಯರ ಹಾಗೂ ಕಾಶ್ಮೀರಿ ಪಂಡಿತರ ವಿಚಾರದಲ್ಲಿಯೂ ಇದು ಅನ್ವಯವಾಗುಂತಹದ್ದು. ಸಂಕೇತಿ ಭಾಷೆ ಮಾತನಾಡುವ ಸಮುದಾಯದ ಅಸ್ಮಿತೆಯ ಪ್ರಧಾನ ನೆಲೆ ಭಾಷೆ ಅಥವಾ ಭೌಗೋಳಿಕ ನೆಲೆಯದ್ದಾಗಿರದೆ ಸಾಂಸ್ಕೃತಿಕವಾದದ್ದಾಗಿದೆ. ಮೇಲೆ ಉದಾಹರಿಸಿದ ಮೂರನೆಯ ನಿದರ್ಶನ ಸಂಕೇತಿ ಸಮುದಾಯದ ಆದ್ಯತೆಯಾದ ಸಾಂಸ್ಕೃತಿಕ ನೆಲೆಯದ್ದು. ಭಾರತದ ಪಾರ್ಸಿ ಸಮುದಾಯದವರ ಅಸ್ಮಿತೆಯ ನೆಲೆ ಪ್ರಧಾನವಾಗಿ ಭಾಷೆ, ಭೌಗೋಳಿಕ ಅಥವಾ ಸಾಂಸ್ಕೃತಿಕವಾದದ್ದಲ್ಲ. ತಮ್ಮ ಸಮುದಾಯವೇ ಕಣ್ಮರೆಯಾಗುತ್ತಿದೆ ಎಂಬ ಆತಂಕದಲ್ಲಿ ಹುಟ್ಟಿದ

ಜನಾಂಗಿಕ ನೆಲೆಯದ್ದು. ಹಕ್ಕಿ–ಪಿಕ್ಕಿ ಸಮುದಾಯದಂತಹ ಅಲೆಮಾರಿ ಸಮುದಾಯಗಳಿಗೆ ಭಾಷಿಕ ಅಸ್ಮಿತೆಯೂ ಕಾಡುವುದಿಲ್ಲ. ಅವರಿಗೆ ಪ್ರಧಾನವಾಗಿ ಕಾಡುವುದು ಅನ್ನ, ನೀರು, ನೆರಳುಗಳನ್ನು ಗಳಿಸಲು ಪ್ರತಿದಿನ ಹೋರಾಡಬೇಕಾದ ಬದುಕಿನ ಪ್ರಶ್ನೆ.

ಮೇಲಿನ ಉದಾಹರಣೆಗಳನ್ನು ತಾತ್ವಿಕವಾಗಿ ನೋಡಿದಾಗ, ಒಂದು ಭಾಷೆಯ ಅಥವಾ ಸಮುದಾಯದ ಮಧ್ಯಮ ಮತ್ತು ಶ್ರೀಮಂತ ವರ್ಗಗಳು ತಮ್ಮ ಭಾಷಾ ಅಸ್ಮಿತೆಯ ರಕ್ಷಣೆಗಾಗಿ ಹೋರಾಡುತ್ತಿದ್ದರೆ ಕೆಳವರ್ಗಗಳಿಗೆ ಅದು ಆತಂಕದ ಸಂಗತಿಯಲ್ಲ ಎಂಬುದು ಮನದಟ್ಟಾಗುತ್ತದೆ. ಭಾಷಾ ಅಸ್ಮಿತೆ ಕುರಿತ ಚರ್ಚೆಯಲ್ಲಿ ಮಧ್ಯಮವರ್ಗಕ್ಕೆ ಸಂಬಂಧಿಸಿದಂತೆ ಟೀಕೆ ಮಾಡುವಾಗಲೂ ಎಚ್ಚೆತ್ತ ಮಧ್ಯಮವರ್ಗಗಳೇ ಅಂತಿಮವಾಗಿ ಭಾಷೆಯ ಕುರಿತ ಜನಪರ ಹೋರಾಟಕ್ಕೆ ತಾತ್ವಿಕ ಚೌಕಟ್ಟು ಮತ್ತು ನಾಯಕತ್ವ ಕೊಡುತ್ತವೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಅಸ್ಮಿತೆಯನ್ನು ಪ್ರತಿಷ್ಠೆಯನ್ನಾಗಿಸಿಕೊಂಡ ಸಮುದಾಯಗಳು ಹುಸಿ ಅಸ್ಮಿತೆಯ ನಾಶದ ಆತಂಕದಲ್ಲಿರುತ್ತವೆ. ಜೀವಂತಭಾಷೆಯಾದ ಹಕ್ಕಿಪಿಕ್ಕಿ ಸಮುದಾಯದ ಭಾಷೆಯ ಉಳಿವಿಗೆ ಯಾವ ಪ್ರಯತ್ನವೂ ನಡೆಯದ ಸಮಯದಲ್ಲಿಯೇ ಸಂಸ್ಕೃತದಂತಹ ಜನಬಳಕೆಯಿಲ್ಲದ ಭಾಷೆಯು ದೇವಭಾಷೆಯೆಂಬ ಪ್ರತಿಷ್ಠೆ, ಸಂಪತ್ತು, ಸೌಲಭ್ಯ, ಎಲ್ಲವನ್ನೂ ಗಳಿಸುತ್ತದೆ. ಉತ್ತರದ ಕೆಲವೇ ರಾಜ್ಯಗಳ ಭಾಷೆ 'ರಾಷ್ಟ್ರಭಾಷೆ'ಯೆಂಬ ಪ್ರಚಾರ–ಪ್ರತಿಷ್ಠೆ ಹಾಗೂ – ಧನಕನಕ ವಸ್ತುವಾಹನಾದಿಗಳೆಲ್ಲವನ್ನೂ ಪಡೆಯುತ್ತದೆ. ಪ್ರಪಂಚದ ಮೂರನೇ ಎರಡುಭಾಗದಲ್ಲಿ ಬಳಕೆಯಲ್ಲಿ ಇಲ್ಲದ ಇಂಗ್ಲಿಶ್ ಭಾಷೆ ಅಂತರರಾಷ್ಟ್ರೀಯವಾಗುತ್ತದೆ ಎಂಬ ಬರಗೂರು ಅವರ ಅಸಮಾಧಾನಕ್ಕೆ ಸಕಾರಣಗಳಿವೆ. ಸುಮಾರು ಒಂದು ಕೋಟಿ ಜನರಾಡುವ ತುಳುವನ್ನು ಕರ್ನಾಟಕ ರಾಜ್ಯ ಇಂದಿನವರೆಗೆ ಅಧಿಕೃತ ಭಾಷೆಯೆಂದೇ ಘೋಷಿಸಿಲ್ಲ. ಖಾಸಿ, ಜೈಂಟಿಯಾ, ಕೊಡವ, ಬೃಜ ಮೊದಲಾದ ಅನೇಕ ಭಾಷೆಗಳದೂ ಇದೇ ಕತೆ. ಕರ್ನಾಟಕದಲ್ಲಿ ಇವತ್ತಿಗೂ ತುಳು–ಕೊಡವದಂಥ ಭಾಷೆಗಳಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಪ್ರಾಧ್ಯಾಪಕರೇ ಇಲ್ಲ. ಹೀಗೆ ದೇಶದ ಸುಮಾರು ೨೪ ಸ್ವತಂತ್ರ ಭಾಷೆಗಳಲ್ಲಿ ಪ್ರಾಧ್ಯಾಪಕರು ಇಲ್ಲ ಎಂದು ಪುರುಷೋತ್ತಮ ಬಿಳಿಮಲೆ ಅವರು ದೇಶಿ ಭಾಷೆಗಳಿಗೆ ಪ್ರಭುತ್ವ ತೋರುವ ನಿರ್ಲಕ್ಷ್ಯವನ್ನು ಅಂಕಿ ಅಂಶಗಳೊಂದಿಗೆ ವಿವರಿಸುತ್ತಾರೆ. ಒಂದು ಭಾಷೆ ಪ್ರತಿಷ್ಠಿತ ಎನಿಸಿಕೊಳ್ಳುವ ಅಥವಾ ನಿರ್ಲಕ್ಷ್ಯಕ್ಕೆ ಒಳಗಾಗುವ ಪ್ರಶ್ನೆಯು ಆ ಭಾಷೆ ಎಷ್ಟು ಜೀವಂತವಾಗಿದೆ ಎನ್ನುವುದಕ್ಕಿಂತ ಅದು ಯಾವ ವರ್ಗದ್ದು ಮತ್ತು ಪ್ರಭುತ್ವದ ಮೇಲೆ ಅದರ ಪ್ರಭಾವದ ಸ್ವರೂಪವೇನು ಎಂಬುದು ನಿರ್ಣಾಯಕವಾಗಿರುತ್ತದೆ. ಆದ್ದರಿಂದಲೇ 'ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಜನರ ಭಾಷೆಗಳು ಎಲ್ಲ ಸವಲತ್ತುಗಳನ್ನೂ ಪಡೆದುಕೊಳ್ಳುತ್ತಿವೆ. ದುರ್ಬಲರ ನಾಲಿಗೆ ಕಟ್ಟಿ ಹೋಗಿದೆ. ಅವರ ಭಾಷೆಗಳು ವಿನಾಶದತ್ತ ಚಲಿಸುತ್ತಿವೆ'.[೭] ಈ ಹಿನ್ನೆಲೆಯಲ್ಲಿ ಕನ್ನಡದ ಅಸ್ಮಿತೆಯ ಪ್ರಶ್ನೆಯು ಬಿ.ಎಂ.ಶ್ರೀ ಅವರ ವೈಚಾರಿಕ

ಚಿಂತನೆಯಿಂದ ಆರಂಭಿಸಿ ಕೆ.ವಿ ನಾರಾಯಣ ಅವರ ವೈಜ್ಞಾನಿಕ ಚಿಂತನೆಯವರೆಗೆ ಹಲವು ಭಿನ್ನ ಸ್ತರಗಳಲ್ಲಿ, ಭಿನ್ನ ಆಯಾಮಗಳಲ್ಲಿ ಬೆಳೆಯುತ್ತ ಬಂದಿರುವುದನ್ನು ಗಮನಿಸಬಹುದು.

ಒಂದು ಭಾಷೆಯ ಅಸ್ಮಿತೆಯ ಪ್ರಶ್ನೆ ಯಾವ ಯಾವ ಕಾರಣಗಳಿಗಾಗಿ ಹುಟ್ಟುತ್ತದೆ ಎಂಬುದು ಅಧ್ಯಯನಯೋಗ್ಯವಾದ ವಿಚಾರವಾಗಿದೆ. ಯಾವುದೇ ವ್ಯಕ್ತಿ/ಸಮುದಾಯಕ್ಕೆ ತನ್ನತನದ ಹುಡುಕಾಟ ಆರಂಭವಾಗುವುದು ಸಾಮಾನ್ಯವಾಗಿ ಎದುರಾಳಿಯ ಕಲ್ಪನೆಯಿಂದ. ಅದೇ ರೀತಿ ಒಂದು ಭಾಷೆಗೂ 'ಅಸ್ಮಿತೆ'ಯ ಪ್ರಶ್ನೆ ಕಾಡುವುದು ಸಾಮಾನ್ಯವಾಗಿ ಪ್ರಬಲವಾದ ಎದುರಾಳಿಯ ಪ್ರವೇಶವಾಗಿ 'ತನ್ನ' ಅಸ್ತಿತ್ವದ ಬಗ್ಗೆ ಆತಂಕ ಮೂಡಿದಾಗ. ಸಹಜವಾಗಿ ಈ ಆತಂಕ ಹಾಗೂ ಹೋರಾಟದ ಹಿಂದೆ ತನ್ನನ್ನು ರಕ್ಷಿಸಿಕೊಳ್ಳುವ ಉದ್ದೇಶವಿರುತ್ತದೆ. ೧೯೦೫ ರಲ್ಲಿ ಬ್ರಿಟಿಷ್ ಗವರ್ನರಾಗಿದ್ದ ಲಾರ್ಡ್ ಕರ್ಜನ್ನನ 'ಬಂಗಾಳ ವಿಭಜನೆ' ಘಟನೆಯೇ ಮೊಟ್ಟಮೊದಲು ಭಾರತದ ವಿವಿಧ ಭಾಷಾ ಅಸ್ಮಿತೆಗಳ ಜಾಗೃತಿಗೆ ಮೂಲವಾಯಿತು ಎನ್ನುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಯಾವುದೇ ಅಸ್ಮಿತೆಯ ಮೇಲೆ ಕಾಲದ ಚಾರಿತ್ರಿಕ ಒತ್ತಡಗಳು ಪ್ರಧಾನ ಪಾತ್ರ ವಹಿಸುತ್ತವೆ. ಕನ್ನಡವು ವಿವಿಧ ಕಾಲಘಟ್ಟಗಳಲ್ಲಿ ಸಂಸ್ಕೃತ, ಇಂಗ್ಲಿಶ್ ಭಾಷೆಗಳ ಎದುರಿನಲ್ಲಿ ತನ್ನ ಅಸ್ಮಿತೆಗಾಗಿ ಹೋರಾಟ ನಡೆಸಿದೆ. ವಸಾಹತುಶಾಹಿ, ನವವಸಾಹತುಶಾಹಿ ಕಾಲಘಟ್ಟದ ಜೀವನವಿಧಾನಗಳು ಕನ್ನಡದ ಅಸ್ಮಿತೆಯನ್ನು ಗಂಭೀರವಾಗಿ ಕಾಡಿವೆ. ಭಾಷಾ ಅಸ್ಮಿತೆಗೆ ಆತಂಕಮೂಲವಾದ ವಿಧೇಯತೆಯ ಮತ್ತು ಸಂಘರ್ಷದ ಗುಣವಿರುವಂತೆ ಯಜಮಾನಿಕೆಯ ಗುಣಗಳೂ ಇವೆ. ಎದುರಾಳಿಯ ಆತಂಕದಿಂದ ತನ್ನನ್ನು ರಕ್ಷಿಸಿಕೊಳ್ಳಲು ಅಸ್ಮಿತೆಯ ಪ್ರಶ್ನೆ ಕಾಡಿದರೆ ಉಪಭಾಷೆಗಳ ಮೇಲೆ ಯಜಮಾನಿಕೆ ಸ್ಥಾಪಿಸಲು ಅದರ 'ಅಸ್ಮಿತೆ'ಯ ಜಾಗೃತಿ ಉಂಟಾಗುತ್ತದೆ. ಕನ್ನಡ ಭಾಷೆಯು ಇಂಗ್ಲಿಷ್, ಸಂಸ್ಕೃತ, ಉರ್ದು, ತುಳು, ಲಂಬಾಣಿ, ಕೊಂಕಣಿ, ಕೊಡವ, ಹಕ್ಕಿಪಿಕ್ಕಿ ಭಾಷೆಗಳ ಎದುರು ವರ್ತಿಸುವ ಬಗೆ ಏಕಪ್ರಕಾರವಾಗಿಲ್ಲ. ಕನ್ನಡವು ಕೊಡವ, ತುಳು, ಹಕ್ಕಿಪಿಕ್ಕಿ, ಲಂಬಾಣಿಗಳಂಥಹ ಭಾಷೆಗಳಿಗೆ ಯಜಮಾನ ಭಾಷೆಯಂತೆಯೂ, ಸಂಸ್ಕೃತ ಮತ್ತು ಇಂಗಿಷ್‌ನ ಎದುರು ಅಧೀನ ಭಾಷೆಯಂತೆಯೂ ವರ್ತಿಸುತ್ತದೆ. ಅಂದರೆ ದಮನಿತ ಮತ್ತು ದಮನಕಾರಿ ಎರಡೂ ಆಯಾಮಗಳನ್ನು ಕನ್ನಡ ಒಳಗೊಂಡಿದೆ. ಕರ್ನಾಟಕದಲ್ಲಿಯೇ ಹಲವು ಸೊಗಡಿನ ಕನ್ನಡವಿದೆ. ಧಾರವಾಡ, ಮಂಡ್ಯ, ಮಂಗಳೂರು ಕನ್ನಡಗಳಲ್ಲಿ ಅಗಾಧ ವ್ಯತ್ಯಾಸಗಳಿವೆ. ಇದರೊಂದಿಗೆ ಗ್ರಾಮೀಣ ಕನ್ನಡ ಹಾಗು ನಗರ ಕನ್ನಡದ ನಡುವಿನ ಮೇಲರಿಮೆ/ಕೀಳರಿಮೆಯ ಸಂಬಂಧಗಳು ಕೂಡ ಕನ್ನಡದ ಅಸ್ಮಿತೆಯನ್ನು ನಿರ್ಧರಿಸುವ ಅಂಶವಾಗಿವೆ. ಈ ಹಿನ್ನೆಲೆಯಲ್ಲಿ ಕನ್ನಡಕ್ಕೆ ಸಾಮಾಜಿಕ ನೆಲೆಯಲ್ಲಿ ಹಲವಾರು ತರತಮಗಳಿವೆ. ಆದ್ದರಿಂದ ಕನ್ನಡ ಅಸ್ಮಿತೆ ಎನ್ನುವುದು ಏಕಘನಾಕೃತ ಅಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಯಾವುದೇ ಮಾನವ ಸಮಾಜದಲ್ಲಿ ಭಾಷೆ ಎಂಬುದು ಯಾವತ್ತೂ ಕೇವಲ ಭಾಷಿಕ ಪ್ರಶ್ನೆ ಮಾತ್ರ ಆಗಿರುವುದಿಲ್ಲ. ಭಾಷೆಯಿಂದ ನಾಡು-ಸಂಸ್ಕೃತಿಯನ್ನು ಬೇರ್ಪಡಿಸಲಾಗುವುದಿಲ್ಲ. ಭಾಷೆಯನ್ನು ಬಳಸುವ ಮೂಲಕವೇ ಅವನ್ನು ಜೀವಂತವಾಗಿಡಬೇಕಾಗುತ್ತದೆ. ಭಾಷೆ ಮತ್ತು ಸಂಸ್ಕೃತಿಗಳು ಜನರ ಬದುಕಿನೊಂದಿಗೆ ಬೆಸೆದುಕೊಂಡಿರುತ್ತದೆ. ಭಾಷೆ ಆರ್ಥಿಕತೆ, ಸಾಮಾಜಿಕತೆ, ಧಾರ್ಮಿಕತೆ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಒಳಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಆ ನಿರ್ದಿಷ್ಟ ಭಾಷೆಯ ಅಸ್ಮಿತೆಯನ್ನು ಗುರುತಿಸಬೇಕಾಗುತ್ತದೆ. ಕನ್ನಡ ಭಾಷೆಯೂ ಇದರಿಂದ ಹೊರತಲ್ಲ. ಕನ್ನಡದ ಸಂದರ್ಭದಲ್ಲಿ ಈ ಮಾತುಗಳು ಇನ್ನೊಂದು ವಾಸ್ತವವನ್ನು ಹೇಳುತ್ತಿವೆ. ಭಾಷಾ ವಿಜ್ಞಾನಿಗಳು ಅಭಿಪ್ರಾಯಪಡುವಂತೆ ಭಾಷಾ ಅಸ್ಮಿತೆಯ ಅಧ್ಯಯನಕ್ಕೆ ಭಾಷೆಯ ರಚನೆಯನ್ನು ಮಾತ್ರ ವಿವರಿಸುವ ಭಾಷಾ ವಿಜ್ಞಾನದ (Structural Linguistics) ಥಿಯರಿಗಳು ದೊಡ್ಡ ಪ್ರಮಾಣದಲ್ಲಿ ಸಹಾಯಕ್ಕೆ ಬರುವುದಿಲ್ಲ.

ಗೂಗಿ ವಾ ಥಿಯಾಂಗೊ ವ್ಯಾಖ್ಯಾನಿಸುವಂತೆ ಭಾಷೆಯೆಂದರೆ, ಜನತೆ ಚರಿತ್ರೆಯಲ್ಲಿ ತಾನು ಪಡೆದ ಅನುಭವಗಳ ಸ್ಮೃತಿಸಂಚಯ. ಒಂದು ಸಮುದಾಯದ ಸಂಸ್ಕೃತಿಯ ಹುಟ್ಟು, ಬೆಳವಣಿಗೆ ಕೂಡುವಿಕೆ, ಬದಲಾಯಿಸುವಿಕೆ, ಕೊನೆಗೆ ಪೀಳಿಗೆಯಿಂದ ಪೀಳಿಗೆಗೆ ಸಾಗಿಸುವಿಕೆ- ಈ ಎಲ್ಲವನ್ನು ಅದರ ಭಾಷೆ ಮಾಡುತ್ತಿರುತ್ತದೆ. ಭಾಷೆ ಸಂಸ್ಕೃತಿಯ ಹುಟ್ಟು, ಬೆಳವಣಿಗೆ, ಕೂಡುವಿಕೆ, ಬದಲಾಯಿಸುವಿಕೆ, ಕೊನೆಗೆ ಪೀಳಿಗೆಯಿಂದ ಪೀಳಿಗೆಗೆ ಸಾಗಿಸುವಿಕೆ- ಈ ಎಲ್ಲವನ್ನು ಅದರ ಭಾಷೆ ಮಾಡುತ್ತಿರುತ್ತದೆ. ಭಾಷೆ ಸಂಸ್ಕೃತಿಯ ರೂಪಿಯಾಗಿರುತ್ತದೆ. ಅಂತಲೇ ಸಂಸ್ಕ್ರತಿಯನ್ನು ಭಾಷೆಯಿಂದ ಬೇರ್ಪಡಿಸುವುದು ಅಸಾಧ್ಯ. ಇದನ್ನು ಕೆ.ವಿ. ಸುಬ್ಬಣ್ಣನವರ ಮಾತುಗಳಲ್ಲಿ ಸಮಗ್ರವಾಗಿ ಹೇಳಬಹುದಾದರೆ 'ಒಂದು ಭಾಷೆ-ಸಂಸ್ಕೃತಿಯೆಂದರೆ ,ಅದು ಒಂದು ಜನಪದದ 'ಸಮಸ್ತ ಮನಸ್ಸಿನ ಲೋಕಾಕೃತಿ'

ಕನ್ನಡದ ಸಂದರ್ಭದಲ್ಲಿ ಭಾಷಾ ವಿಜ್ಞಾನಿ ಕೆ.ವಿ.ನಾರಾಯಣ ಅವರು 'ಅಸ್ಮಿತೆ' ಎನ್ನುವುದಕ್ಕೆ ಕನ್ನಡದ 'ಗುರುತುಗಳು' ಎಂದೂ, ವಿಮರ್ಶಕ ರಾಜೇಂದ್ರ ಚೆನ್ನಿ ಅವರು 'ಕನ್ನಡದ ಸ್ವಂತಿಕೆ' ಎಂದೂ ವ್ಯಾಖ್ಯಾನಿಸುತ್ತಾರೆ. ಪಿ.ವಿ ನಾರಾಯಣ ಅವರ ಪ್ರಕಾರ ಕಾಲದ ದೀರ್ಘವಾಹಿನಿಯ ಜೊತೆಗೆ ಸಮಾನಾಂತರವಾಗಿ ನಮ್ಮ ಭಾಷೆಯ ಸಾತತ್ಯ ನಮ್ಮನ್ನು ಆವರಿಸಿಕೊಂಡಿದ್ದು, ನಮ್ಮ ಭಾಷೆಯ ಕಾರಣದಿಂದಾದ ಈ ಸ್ವರೂಪವೇ 'ಕನ್ನಡತನ'; ಆಲೋಚನೆ, ವಿಚಾರ, ಅನುಭವ, ಅಭಿವ್ಯಕ್ತಿ- ಇವುಗಳಲ್ಲಿ ತಾದ್ರೂಪ್ಯವನ್ನೇ ಉಂಟುಮಾಡಿರುವ ಗುಣ. ಓ.ಎಲ್ ನಾಗಭೂಷಣಸ್ವಾಮಿ ಅವರು ವ್ಯಾಖ್ಯಾನಿಸುವಂತೆ ವೈವಿಧ್ಯದ ಪರಿಕಲ್ಪನೆಯ ಇನ್ನೊಂದು ಮಗ್ಗಲು ಅಸ್ಮಿತೆ. 'ಇವರು ಇವರೇ. ಅವರಲ್ಲ; ನಾನು ನಾನೇ, ಬೇರೆ ಯಾರೂ ಅಲ್ಲ' ಎಂದು ಸೂಚಿಸುವುದೇ ಅಸ್ಮಿತೆ. ದೇಹಾಕಾರ, ಉಡುಪು, ನಂಬಿಕೆ, ವರ್ತನೆ, ಆಚರಣೆ, ಸಂಗೀತ, ಕಲೆ, ಕರಕುಶಲ ವಸ್ತು

ಇತ್ಯಾದಿಗಳೆಲ್ಲ ಅಸ್ಮಿತೆಯ ಅಂಶಗಳೇ ಆದರೂ ಅಸ್ಮಿತೆಯ ಲಕ್ಷಣಗಳನ್ನೆಲ್ಲ ಸರ್ವಾಂತರ್ಯಾಮಿಯಾಗಿ ಆವರಿಸಿಕೊಂಡಿರುವುದೂ ಸಮುದಾಯದ ಭಾಷೆಯೇ. ಭಾಷೆ ನಷ್ಟವಾದರೆ ಸಮುದಾಯದ ಅಸ್ಮಿತೆಯೂ ಇಲ್ಲವಾಗುತ್ತದೆ. ಭಾವನಾತ್ಮಕವಾಗಿ ಜನರನ್ನು ಒಟ್ಟಿಗೆ ತರುವುದು ಎಲ್ಲ ಭಾಷಾ ಅಸ್ಮಿತೆಗಳ ಪ್ರಮುಖ ಕಾಳಜಿಯಾಗಿದ್ದು ಅದು ಕನ್ನಡದ ಸಂದರ್ಭದಲ್ಲಿಯೂ ನಿಜವಾದದ್ದು.

ಕೆ.ವಿ ನಾರಾಯಣ ಅವರು ಗುರುತಿಸುವಂತೆ ಕನ್ನಡ ಸಂಸ್ಕೃತಿಯ ನೆಲೆಗಳನ್ನು ಜನಪದ ಸಂಸ್ಕೃತಿಯೊಡನೆ ಸಮೀಕರಿಸುವ ಪ್ರಯತ್ನಗಳು ಏಕೀಕರಣ ಪೂರ್ವದಲ್ಲಿ ಆರಂಭಗೊಂಡಿದ್ದವು. ನಂತರದ ಅಧ್ಯಯನಗಳು ಅವೈದಿಕ ನೆಲೆಯನ್ನು ಕನ್ನಡ ಜನಪದ ಸಂಸ್ಕೃತಿಯ ಮೂಲ ಶೋಧವನ್ನಾಗಿ ಗುರುತಿಸಲು ಯತ್ನಿಸಿದವು. ಎಂಟನೇ ದಶಕದ ನಂತರ ಈ ನೆಲೆಗಳು ಭಿನ್ನವಾದವು. ಆವರೆಗೆ ಅವೈದಿಕ ಎಂದು ಗ್ರಹಿಸಿದ ನೆಲೆಯೊಳಗೆ, ಕೃಷಿಮೂಲ ಎಂದು ತಿಳಿಯಲಾಗಿದ್ದ ಜನಪದ ಸಂಸ್ಕೃತಿಯ ಎಷ್ಟೋ ಬೇರುಗಳು ಕೆಳಜಾತಿಯ ಸಮುದಾಯಗಳ ಜೊತೆಗೆ ಹೆಣೆದುಕೊಂಡದ್ದು ಸ್ಪಷ್ಟವಾಗತೊಡಗಿತ್ತು. ನಂತರದಲ್ಲಿ ಜನಪದದ ತಾತ್ವಿಕ ನೆಲೆಗಟ್ಟನ್ನು ಕನ್ನಡದ ಅಸ್ಮಿತೆಯ ಗುರುತನ್ನಾಗಿ ಪರಿಗಣಿಸುವ ಯತ್ನವನ್ನು ಹಿಂದಕ್ಕೆ ತಳ್ಳಿ ಅದರ ಬದಲು ಅದರ ಬಾಹ್ಯ ರೂಪಗಳು ಅಂದರೆ ಯಕ್ಷಗಾನ. ಡೊಳ್ಳು ಕುಣಿತ, ನಂದಿ ಕುಣಿತ, ಪಟದ ಕುಣಿತ, ಸುಗ್ಗಿ ಕುಣಿತ ಹೀಗೆ ಹಲವು ಹತ್ತು ಇವುಗಳಲ್ಲಿ ಎಷ್ಟೋ ಕಲೆಗಳಲ್ಲಿ ಮಾತ್ರ ಗುರುತುಗಳನ್ನಾಗಿ ಉಳಿಸಿಕೊಳ್ಳುವ ಪ್ರಯತ್ನಗಳು ಮೊದಲಾದವು. ಅಂದರೆ ಅವು ಕರ್ನಾಟಕದ ಗುರುತಾಗಿ ಬಿಟ್ಟವು. ಕರ್ನಾಟಕದ ಚರಿತ್ರೆಯನ್ನು ಅದರ ಸಾಂಸ್ಕೃತಿಕ ವೈವಿಧ್ಯವನ್ನು ಕನ್ನಡದ ಗುರುತುಗಳನ್ನಾಗಿ ಪರಿಗಣಿಸುವ ಇನ್ನೊಂದು ನೆಲೆ ಬೆಳೆದುಬಂದಿದೆ. ಏಳನೆಯ ದಶಕದಲ್ಲಿ ಕರ್ನಾಟಕದಲ್ಲಿ ನಡೆದ ಕೆಲವು ಸಾಮಾಜಿಕ ಪರಿವರ್ತನೆಗಳ ಪರಿಣಾಮವಾಗಿ ಹಿಂದುಳಿದ ವರ್ಗಗಳ ಮತ್ತು ದಲಿತ ಸಮುದಾಯದ ಅಸ್ಮಿತೆಯ ಪ್ರಶ್ನೆಗಳು ಮುಂದೆ ಬಂದವು.

ಕನ್ನಡ ಭಾಷಾ ಅಸ್ಮಿತೆಗೆ ಇನ್ನೊಂದು ಸ್ವರೂಪ ಬಂದಿದ್ದು ಸರೋಜಿನಿ ಮಹಿಷಿ ಸಮಿತಿಯು ನೀಡಿದ ವರದಿಯಿಂದ ಈ ವರದಿ ಪ್ರಕಾರ ಯಾವುದೇ ವ್ಯಕ್ತಿ ೧೫ವರ್ಷಗಳ ಕಾಲ ಕರ್ನಾಟಕದಲ್ಲಿ ನೆಲೆಸಿದರೆ ಆ ವ್ಯಕ್ತಿಯನ್ನು ಕರ್ನಾಟಕದ ಪ್ರಜೆ ಹಾಗು ಕನ್ನಡಿಗ ಎಂದು ಗುರುತಿಸಲು ಸಾಧ್ಯ. ಬೇರೊಂದು ರೀತಿಯಲ್ಲಿ ಉಪಯುಕ್ತವಾದರೂ ಕನ್ನಡಿಗರನ್ನು ವ್ಯಾಖ್ಯಾನಿಸುವಾಗ ೧೫ ವರ್ಷ ಕಾಲಾವಧಿ ಮತ್ತು ಕರ್ನಾಟಕದಲ್ಲಿ ವಾಸ ಇವೆರಡು ಮುಖ್ಯ ನೆಲೆಗಳಾಗಿ ಭಾಷೆಯ ಪ್ರಶ್ನೆ ಹಿಂದಕ್ಕೆ ಸರಿಯಿತು. ಕನ್ನಡಿಗ ಪದದಲ್ಲಿ ಕನ್ನಡ ಮಾತನಾಡುವ ವ್ಯಕ್ತಿ ಎಂಬ ಅಭಿಪ್ರಾಯವಿದ್ದರೂ ಇಡೀ ವ್ಯಾಖ್ಯೆ ಭಾಷೆಯನ್ನು ಬಿಟ್ಟು ದೇಶ ಮತ್ತು ವ್ಯಕ್ತಿಗಳಿಗೆ ಸೀಮಿತವಾಯಿತು. ಮುಂದೆ ಸ್ಥಾಪಿತವಾದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕನ್ನಡ ವಿಶ್ವವಿದ್ಯಾಲಯಗಳು ಕನ್ನಡದ ಗುರುತುಗಳು

ಎನಿಸಿಕೊಂಡವು. ಆದರೆ ಕನ್ನಡ ವಿಶ್ವವಿದ್ಯಾಲಯ ಕನ್ನಡದ ಗುರುತಾಗುವುದು ಸಂಸ್ಕೃತಿಯ ದೃಷ್ಟಿಯಿಂದ ಅಪೇಕ್ಷಣೀಯವಾದರೂ ಸಂಸ್ಥೆಯ ಬೆಳವಣಿಗೆ ಮತ್ತು ಭವಿಷ್ಯದ ದೃಷ್ಟಿಯಿಂದ ಅಷ್ಟೇನೂ ಹಿತಕರವಾದ ಸಂಗತಿಯಲ್ಲ[೮] ಎಂಬ ಚಿಂತನೆಯೂ ವ್ಯಕ್ತವಾಯಿತು. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮಾನ್ಯತೆಯನ್ನು ಕನ್ನಡದ ಗುರುತಾಗಿ ಪಡೆಯಲು ಹೋರಾಟಗಳು ನಡೆದು ಅದು ಯಶಸ್ವಿಯಾಯಿತು. ಒಂದು ಭಾಷೆ ಕ್ಲಾಸಿಕಲ್ ಆಗುವುದು ಅದಕ್ಕೆ ಕಟ್ಟಿದ ಕಾಲಗುಂಡಾಗಬಹುದೇ ಹೊರತು ಬೇರೆ ಏನೂ ಅಲ್ಲ. ಕನ್ನಡಿಗ ಜನರಿಗೆ ಸರ್ಕಾರ ಕೊಡುವ ಬಿ.ಪಿ.ಎಲ್ ಕಾರ್ಡುಗಳು ಉಪಯುಕ್ತ ಗುರುತುಗಳಾಗಬಹುದೇ ಹೊರತು ಅವರಾಡುವ ಭಾಷೆಗೆ ಶಾಸ್ತ್ರೀಯ ಭಾಷೆಯ ಪಟ್ಟ ದೊರಕುವುದಲ್ಲ[೯] ಎಂಬ ವಾದಗಳು ಕೇಳಿ ಬಂದವು.

ಕನ್ನಡದೊಳಗೆ ಕನ್ನಡೇತರ ಅಸ್ಮಿತೆಗಳೂ ಇವೆ. ಯಾವುದೇ ಪ್ರಮುಖ ಭಾಷೆಯ ಸಂದರ್ಭದಲ್ಲಿಯೂ ಈ ಬಹುಸ್ತರೀಯ ಸಂಬಂಧ ಸಹಜವಾದದ್ದು. ಗಮನಿಸಬೇಕಾದದ್ದು ಏನೆಂದರೆ, ಕನ್ನಡ ಅಸ್ಮಿತೆಯ ರಕ್ಷಣೆಯ ಮುಖವಾಡ ಹೊತ್ತು ವಿವಿಧ ಹಿತಾಸಕ್ತಿಗಳು ತಮ್ಮ ಕಾರ್ಯಸಾಧನೆಗೆ ಮುಂದಾಗಿರುವುದು. ಕೆಲವು ಕನ್ನಡಪರ ಸಂಘಟನೆಗಳು ನಿರ್ದಿಷ್ಟ ಜಾತಿಯೊಂದಿಗೆ, ನಿರ್ದಿಷ್ಟ ರಾಜಕೀಯ ಪಕ್ಷದೊಂದಿಗೆ, ನಿರ್ದಿಷ್ಟ ಮತೀಯ ಸಂಘಟನೆಯೊಂದಿಗೆ ಕಾರ್ಯಾಚರಿಸುವುದನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ತೊಂಬತ್ತರ ದಶಕದ ನಂತರ ಜಾಗತೀಕರಣಕ್ಕೆ ಮೈಯೊಡ್ಡಿದ ನಾಡಿನಲ್ಲಿ ಮಾರುಕಟ್ಟೆ ಪ್ರಣೀತ ಹಿತಾಸಕ್ತಿಗಳು ಭಾಷೆಗಳ ಸ್ವರೂಪವನ್ನೂ ತಮ್ಮ ಇಚ್ಚೆಗೆ ತಕ್ಕಂತೆ ಬದಲಿಸಿಕೊಳ್ಳುವ ಪ್ರಯತ್ನದಲ್ಲಿವೆ. ಮೇಲ್ಕಂಡ ತಾತ್ವಿಕ ವಿಚಾರಗಳ ಬೆಳಕಿನಲ್ಲಿ 'ಕನ್ನಡ ವಿಚಾರ ಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯ ಹುಡುಕಾಟದ ನೆಲೆಗಳನ್ನು' ಅಧ್ಯಯನ ಮಾಡಲಾಗುವುದು.

ಟಿಪ್ಪಣಿಗಳು

೧. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೨೫೬

೨. ರಹಮತ್ ತರೀಕೆರೆ, ನೇತು ಬಿದ್ದ ನವಿಲು, ಪು. ೫

೩. ನಾರಾಯಣ ಕೆ.ವಿ., ಕನ್ನಡ ಜಗತ್ತು–ಅರ್ಧ ಶತಮಾನ, ಪು. ೨೫೮

೪. ಅದೇ, ಪು. ೩೧೧

೫. ರಂಗನಾಥ ಕಂಟನಕುಂಟೆ, ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ, ಪು. ೮–೯

೬. ಕೃಷ್ಣಯ್ಯ. ಎಂ.ಎಚ್., ಸಂಕ್ಷಿಪ್ತ ಕನ್ನಡ ಬಳಿಭಾಷೆಯ ಚರಿತ್ರೆ, ಪು. ೪೩

೭. ಪುರುಷೋತ್ತಮ ಬಿಳಿಮಲೆ, ವಾರ್ತಾಭಾರತಿ, ೨೧.೦೩.೨೦೧೬

೮. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೨೯೦–೯೧

೯. ಅದೇ, ಪು. ೨೮೨

ಅಧ್ಯಾಯ ೨

ಕನ್ನಡ ಅಸ್ಮಿತೆ : ಸಾಹಿತ್ಯವಾದಿ ನೆಲೆ

೨.೧ ಪೀಠಿಕೆ

೨.೨ ಬಿ.ಎಂ.ಶ್ರೀ ಅವರ ಚಿಂತನೆಗಳು

೨.೨.೧ ಪೀಠಿಕೆ

೨.೨.೨ ಇಂಗ್ಲಿಶಿನಿಂದ ಕನ್ನಡಕ್ಕೆ ಕಸುವು ತುಂಬುವ ಹಂಬಲ

೨.೨.೩ ಕನ್ನಡದ ಮೇಲಿನ ಸಂಸ್ಕೃತದ ಹೊರೆಯನ್ನು ತಗ್ಗಿಸುವ ಪ್ರಯತ್ನ

೨.೨.೪ ಸಾಮಾಜಿಕ ನೆಲೆಯೂ ಅಂತರ್ಗತವಾದ ಚಿಂತನೆ

೨.೩ ಕುವೆಂಪು ಅವರ ಚಿಂತನೆಗಳು

೨.೩.೧ ಪೀಠಿಕೆ

೨.೩.೨ ಅನುಮೋದಿಸುವ ಮತ್ತು ದೂರವಿರಿಸುವ ಇಂಗ್ಲಿಶುಗಳ ತಾರತಮ್ಯ ಪ್ರಜ್ಞೆ

೨.೩.೩ ಕನ್ನಡ–ಸಂಸ್ಕೃತಗಳ ಸಂಬಂಧ

೨.೩.೩.೧ ಸಂಸ್ಕೃತ ಮತ್ತು 'ಸಂಸ್ಕೃತಿ' ಸಂಬಂಧ ಕುರಿತ ವೈರುಧ್ಯದ ನಿಲುವುಗಳು

೨.೩.೩.೨ ಭಾಷೆಗೆ ಅನ್ವಯಿಸದ 'ನೀರೆಲ್ಲವೂ ತೀರ್ಥ' ಎನ್ನುವ ದಾರ್ಶನೀಕತೆ

೨.೩.೩.೩ ಕುವೆಂಪು ಅವರಲ್ಲಿ ಕನ್ನಡ ಮತ್ತು ಸಂಸ್ಕೃತದ ಸಂಬಂಧ : ಆರು ಗ್ರಹಿಕೆಗಳು

೨.೩.೩.೪ ಕುವೆಂಪು ಸಂದರ್ಭದಲ್ಲಿ ಕನ್ನಡ–ಸಂಸ್ಕೃತ ಸಂಬಂಧ ಕುರಿತ ಆರು ಗ್ರಹಿಕೆಗಳ ತೌಲನಿಕ ವಿಶ್ಲೇಷಣೆ

೨.೩.೪ ಕುವೆಂಪು ಚಿಂತನೆಗಳ ಸಂಕೀರ್ಣತೆ

೨.೪ ಲಂಕೇಶ್ ಅವರ ಚಿಂತನೆಗಳು

೨.೪.೧ ಪೀಠಿಕೆ

೨.೪.೨ 'ವಸಾಹತುಭಾಷೆ ಇಂಗ್ಲಿಶಿ'ನ ಚಿಂತನೆಗಳ ಗೈರು

೨.೪.೩ ಭಾಷೆ–ಸಮಾಜಗಳ ನಡುವಿನ ಸಂಕೀರ್ಣ ಸಂಬಂಧಗಳ ವಿಶ್ಲೇಷಣೆ

೨.೪.೪ ಕಲಾತ್ಮಕ ವ್ಯಸನವಾಗದ ಜೀವಂತ ಸಾಹಿತ್ಯದ ಹುಡುಕಾಟ

೨.೫ ಸಾಹಿತ್ಯವಾದಿ ನೆಲೆಯ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಅಧ್ಯಾಯ ೨

ಕನ್ನಡ ಅಸ್ಮಿತೆ : ಸಾಹಿತ್ಯವಾದಿ ನೆಲೆ

೨.೧. ಪೀಠಿಕೆ

'ಸಾಹಿತ್ಯ'ವನ್ನು ೧೯ನೇ ಶತಮಾನಕ್ಕೂ ಮೊದಲು 'ಲಿಟರೇಚರ್' ಎನ್ನುವ ಅರ್ಥದಲ್ಲಿ ಬಳಸಲಾಗುತ್ತಿರಲಿಲ್ಲ. ಆಗ ಸಾಹಿತ್ಯದ ಅರ್ಥ 'ಸಹಿತ' ಅಂದರೆ ಒಂದು ವಸ್ತುವಿನ ಜತೆ ಇರುವಂತಹದ್ದು, ಜೊತೆಯಲ್ಲಿ ಹೋಗುವಂತಹದ್ದು, ಸಾಮಗ್ರಿ, ಪರಿಕರ ಎನ್ನುವ ಅರ್ಥದಲ್ಲಿ ಬಳಸಲಾಗುತ್ತಿತ್ತು. ಸಾಹಿತ್ಯಕ್ಕೆ ಒಂದು ಕಾರ್ಯಕ್ಕೆ ಬೇಕಾದ ಅಗತ್ಯ ಸಲಕರಣೆಗಳು ಎಂಬರ್ಥವಿದೆ. ಉದಾ.ಗೆ ಅಕ್ಕಿ, ಬೇಳೆ ಮೆಣಸು ತರಕಾರಿ ಮುಂತಾದವು ಅಡುಗೆ ಸಾಹಿತ್ಯ. ಎಲ್ಲ ಸಾಹಿತ್ಯ ಇದ್ದರೆ ಒಳ್ಳೆಯ ಅಡುಗೆ ಮಾಡಬಹುದು ಎಂಬ ಮಾತು ಮಂಗಳೂರು ಸೀಮೆಯಲ್ಲಿ ಬಳಕೆಯಲ್ಲಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ನಿಘಂಟು (ಎಂಟನೆಯ ಸಂಪುಟ) 'ಸಾಹಿತ್ಯ' ಎಂಬ ಪರಿಭಾಷೆಗೆ 'ರಸಾವಹವಾದ ಕಾವ್ಯ, ನಾಟಕ, ಕಥೆ, ಕಾದಂಬರಿ, ಪ್ರಬಂಧ ಮುಂತಾದ ವಿವಿಧ ಪ್ರಕಾರಗಳನ್ನೊಳಗೊಂಡ ಸೃಜನಾತ್ಮಕ ಬರವಣಿಗೆ' ಎನ್ನುವ ವ್ಯಾಖ್ಯೆ ನೀಡಿದೆ. ಲಿಟರೇಚರ್ ಎಂಬ ಪದವನ್ನು 'ಅಕ್ಷರ' ಎನ್ನುವ ಅರ್ಥದಲ್ಲೂ ಬಳಸಲಾಗುತ್ತದೆ.

'ಸಾಹಿತ್ಯ' ಎಂಬ ಪರಿಭಾಷೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ನಿಘಂಟು ನೀಡುವ ವ್ಯಾಖ್ಯೆ ಭಾರತೀಯ ಕಾವ್ಯ ಮೀಮಾಂಸೆಯ ತತ್ವವನ್ನು ಆಧರಿಸಿದೆ. ಆದರೆ ನಂತರದ ಕಾಲಘಟ್ಟದಲ್ಲಿ ಸಾಹಿತ್ಯ ತನ್ನನ್ನು ಭಾರತೀಯ ಕಾವ್ಯ ಮೀಮಾಂಸೆಯ ಸೀಮಿತ ಅರ್ಥವ್ಯಾಪ್ತಿಯಿಂದ ಬಿಡುಗಡೆಗೊಳಿಸಿಕೊಂಡು ಬಹುಮುಖತೆಯಲ್ಲಿ ತನ್ನನ್ನು ವಿಸ್ತರಿಸಿಕೊಂಡಿದೆ. ಮುಖ್ಯವಾಗಿ ಭಾರತೀಯ ಕಾವ್ಯ ಮೀಮಾಂಸೆಯ ಶಿಷ್ಟರೂಪದ ಕಾವ್ಯ ಕೇಂದ್ರಿತ ಆಲೋಚನೆಯಿಂದ ಬಿಡುಗಡೆ ಪಡೆದು ವಚನ, ಜನಪದ ಸಾಹಿತ್ಯ, ತತ್ವಪದಗಳೂ ಸಾಹಿತ್ಯ ಎನ್ನಿಸಿಕೊಂಡಿವೆ. ಸಾಹಿತ್ಯ ಕುರಿತು ಅನೇಕ ಪರಿಕಲ್ಪನೆಗಳು, ವ್ಯಾಖ್ಯೆಗಳು ಚಾಲ್ತಿಯಲ್ಲಿವೆ. ಈ ಹಿನ್ನೆಲೆಯಲ್ಲಿ ಸಾಹಿತ್ಯವು ಬರೆಹ ಮತ್ತು ಮಾತುಗಳನ್ನು ಬಳಸಿ ಹುಟ್ಟುವ ವಾಙ್ಮಯ ಎಂದು ಹೇಳಬಹುದು.

'ಸಂಶೋಧನೆ ' ಅರವತ್ತರ ದಶಕದವರೆಗೂ 'ಸಾಹಿತ್ಯ' ಎನ್ನಿಸಿಕೊಂಡಿರಲಿಲ್ಲ. ಆನಂತರ ಇದನ್ನು ಸಾಹಿತ್ಯ ತನ್ನ ಅರ್ಥವ್ಯಾಪ್ತಿಗೆ ಸೇರಿಸಿಕೊಂಡಿದೆ. ಎಪ್ಪತ್ತರ ದಶಕದಲ್ಲಿ 'ಕನ್ನಡ' ಎನ್ನುವ ಸೀಮಿತವಾದ ಪರಿಕಲ್ಪನೆ 'ಕರ್ನಾಟಕ' ಎಂಬ ವಿಶಾಲವಾದ ಪರಿಕಲ್ಪನೆಯೆಡೆ ಜಿಗಿತ ಕಂಡಂತೆ ಸಾಹಿತ್ಯ ಪರಿಭಾಷೆ 'text' (ಪಠ್ಯ) ಎಂಬ ಅರ್ಥದಲ್ಲಿ ಬಳಕೆಯಾಗತೊಡಗಿತು. ರೈತ, ದಲಿತ, ಮಹಿಳಾ ಇತ್ಯಾದಿ ವಿಭಿನ್ನ ಚಳವಳಿಗಳ ಕರಪತ್ರಗಳಿಗೂ ಇರುವ ಚಾರಿತ್ರಿಕ ಮತ್ತು ಸಾಮಾಜಿಕ

ಮಹತ್ವ ಅರಿವಿಗೆ ಬಂದು ಇವುಗಳ ಪಠ್ಯ ಕೂಡ 'ಸಾಹಿತ್ಯ' ಎಂದು ಪರಿಗಣಿತವಾಯಿತು. ಮಹತ್ವದ ಗೋಡೆ ಬರಹಗಳು, ಆಟೋರಿಕ್ಷಾಗಳ ಮೇಲಿನ ಬರಹ, ಜಾಹೀರಾತು, ಮುನ್ನುಡಿಗಳು, ಸಂಪಾದಕೀಯಗಳು, ಭಾಷಣಗಳು ಇವೆಲ್ಲವೂ 'ಸಾಹಿತ್ಯ' ಎನ್ನಿಸಿಕೊಂಡವು. ಒಟ್ಟಾರೆಯಾಗಿ ಮುದ್ರಿತಗೊಂಡ, ಕೇಳಲ್ಪಟ್ಟ ಕನ್ನಡಭಾಷೆಯ ಎಲ್ಲ ನುಡಿಗಳೂ 'ಸಾಹಿತ್ಯ' ಎಂದು ಪರಿಗಣನೆಗೆ ಒಳಪಡಲಾರಂಭಿಸಿತು. ಈಗ ಅಂತರ್ಜಾಲದಲ್ಲಿನ ವೆಬ್ ಸೈಟ್, ಬ್ಲಾಗ್‌ಗಳಲ್ಲಿನ ಬರಹಗಳೂ ಸಾಹಿತ್ಯ ಎಂದು ಪರಿಗಣಿತವಾಗಿವೆ. ಈ ಎಲ್ಲ ಬೆಳವಣಿಗೆಗೆ ಮುಖ್ಯವಾಗಿ ಎಪ್ಪತ್ತರ ದಶಕದ ನಂತರದಲ್ಲಿ ಜನ ಚಳುವಳಿಗಳು ಸಂಸ್ಕೃತಿ, ಜಾತಿ, ಪರಿಸರ, ಪ್ರಾದೇಶಿಕತೆ, ಸಮುದಾಯ, ಜಾಗತೀಕರಣ, ಭಾಷಿಕ ಪ್ರಶ್ನೆ, ದಲಿತ ವಿಚಾರಗಳನ್ನು ಕುರಿತು ಮೂಡಿಸಿದ ಜಾಗೃತಿ ಸಾಹಿತ್ಯವನ್ನು ಪ್ರಬಲವಾಗಿ ಪ್ರಭಾವಿಸಿದ್ದು ಕಾರಣವಾಗಿವೆ.

ಕನ್ನಡವನ್ನು ಸಾಹಿತ್ಯದ ದೃಷ್ಟಿಕೋನದಿಂದ ಪ್ರಧಾನವಾಗಿ ನೋಡುವ ನೆಲೆಯಿದೆ. ಬಿ.ಎಂ.ಶ್ರೀ ಅವರು 'ಕನ್ನಡ ಮಾತು ತಲೆ ಎತ್ತುವ ಬಗೆ' ಕುರಿತು ಕಳೆದ ಶತಮಾನದ ಆರಂಭದಲ್ಲಿ ಚಿಂತಿಸಿದ್ದು ಈ ನೆಲೆಯಿಂದ. 'ಸಾಹಿತ್ಯದ ನೆಲೆ' ಎನ್ನುವುದು ಈ ಸಂದರ್ಭದಲ್ಲಿ ಸಾಹಿತ್ಯದ ರಚನೆ ಕುರಿತ ಚಿಂತನೆಯ ನೆಲೆ ಎಂಬ ಸೀಮಿತ ಅರ್ಥ ಹೊರಡಿಸುವ ಅಪಾಯವಿದೆ. ಬಿ.ಎಂ.ಶ್ರೀ ಅವರ ಈ ಕುರಿತ ಚಿಂತನೆಯನ್ನು ಆಧರಿಸಿ ಇದನ್ನು ಸ್ಪಷ್ಟಪಡಿಸುವುದಾದರೆ ಸಾಹಿತ್ಯವು ಆಸ್ಥಾನದಲ್ಲಿ ಕೂತ ಪಂಡಿತರಿಗಲ್ಲ. ನಾಡಿನ ಮಕ್ಕಳಿಗೆ , ಮಹಿಳೆಯರಿಗೆ, ಮಕ್ಕಳಿಗೆ ಅರ್ಥವಾಗುವಂತೆ ಸರಳವಾಗಿ ಕನ್ನಡದಲ್ಲಿ ಬರೆಯಬೇಕು ಎಂಬುದು ಅವರ ಸಾಹಿತ್ಯ ಸಾರ್ಥಕವಾಗುವ ಬಗೆಯಾಗಿತ್ತು. ಇನ್ನೂ ಸ್ಪಷ್ಟವಾಗಿ ವಿವರಿಸುವುದಾದರೆ ಅವರ ಪ್ರಕಾರ ಮಾತು ತಲೆಯೆತ್ತುವುದೆಂದರೆ, ಮಾತುಗರು ತಲೆಯೆತ್ತುವುದು ಎಂದೇ ಅರ್ಥವಾಗುತ್ತದೆ.

ಸಾಹಿತ್ಯವನ್ನು ದೈವತ್ವಕ್ಕೇರಿಸುವ, ಪವಿತ್ರೀಕರಿಸುವ ರೂಢಿಯೊಂದು ಚಾಲ್ತಿಯಲ್ಲಿದೆ. ಇದರೊಂದಿಗೆ ಸಾಹಿತ್ಯಕ್ಕಿಂತ ಸಾಹಿತಿಗೆ ಮನ್ನಣೆ ನೀಡುವ, ಅಭಿಮಾನ ತೋರುವ ಪರಂಪರೆಯಿದೆ. ಸಾಹಿತ್ಯ ಕೃತಿಗಳನ್ನು ಆನೆಯ ಅಂಬಾರಿಯಲ್ಲಿ ಮೆರವಣಿಗೆ ಮಾಡುವುದಿದೆ. ಈ ಪ್ರವೃತ್ತಿ ಸಾಹಿತ್ಯಕ್ಕೆ ಯಾವ ಪ್ರಯೋಜನವನ್ನೂ ಉಂಟು ಮಾಡುವುದಿಲ್ಲ. ಇದರಿಂದ ಸಾಹಿತ್ಯದ ಉದ್ದೇಶ ನಿರರ್ಥಕವಾಗುವ ಸಂಭವವೇ ಜಾಸ್ತಿ. ಭಾಷೆಯ ಅಭಿಮಾನದ ಗುರುತಾಗಿ ಸಾಹಿತ್ಯ ಕೃತಿಗಳನ್ನು ಪರಿಗಣಿಸುವ ಈ ಪ್ರವೃತ್ತಿ ಕೇವಲ ಈ ವಲಯಕ್ಕೆ ಮಾತ್ರ ಸೀಮಿತವಾದುದಲ್ಲ. ಸಂಸ್ಕೃತಿಯ ಈ ಹೊತ್ತಿನ ನೆಲೆಗಳನ್ನು ಅದು ಬಿಂಬಿಸುತ್ತದೆ. ರೂಪ ಮತ್ತು ಆಶಯ ಈ ದ್ವಂದ್ವಮಾನಗಳಲ್ಲಿ ರೂಪವು ಮುಂಚೂಣಿಗೆ ಬಂದು ಆಶಯವು ಹಿಂದಕ್ಕೆ ಸರಿಯುವ ಅಥವಾ ನಾಶವಾಗಿ ಹೋಗುವ ಸಂದರ್ಭಗಳು ಸೃಷ್ಟಿಯಾಗುತ್ತಿವೆ ಎಂದು ಕೆ.ವಿ. ನಾರಾಯಣ ಅವರು ವಿಷಾದಿಸುತ್ತಾರೆ. ಇಂತಹ ಮನೋಭಾವವನ್ನು ಕನ್ನಡ ಸಾಹಿತ್ಯ ನಿರಂತರವಾಗಿ ಪ್ರಜ್ಞಾಪೂರ್ವಕವಾಗಿ ಕಳಚಿಕೊಳ್ಳುತ್ತಲೇ

ಬಂದಿದೆ. ಇದಕ್ಕೆ ಪರ್ಯಾಯವಾಗಿ ಕನ್ನಡ ಸಾಹಿತ್ಯದ ಬಹುಮುಖ್ಯಧಾರೆ ಸಾಹಿತ್ಯವನ್ನು ಮನುಷ್ಯನ ಘನತೆಯ ಪ್ರತಿಪಾದನೆಗೆ, ಮನುಷ್ಯ ಚೇತನದ ವಿಕಾಸದ ಮಾಧ್ಯಮವಾಗಿ ಬಳಸಿದ್ದು ಗೋಚರಿಸುತ್ತದೆ.

ಕೆ.ವಿ ನಾರಾಯಣ ಅವರ ಪ್ರಕಾರ ಸಾಹಿತ್ಯಕ್ಕೆ ಈ ಲೋಕದಿಂದ ಭಿನ್ನವಾದ ಅಸ್ತಿತ್ವವಿಲ್ಲ. ಲೋಕವನ್ನೂ, ಬದುಕನ್ನೂ ಕುರಿತ ಲೇಖಕನ ಕಾಣ್ಕೆಗಳು ಭಾಷೆಯ ಮೂಲಕ ಸಾಹಿತ್ಯರೂಪ ಪಡೆಯುತ್ತವೆ. ಒಂದು ಕಾಲದ ಸಂಸ್ಕೃತಿಯ ವ್ಯಾಖ್ಯೆಯಲ್ಲಿ ಸಾಹಿತ್ಯ ಕೃತಿಗಳ ಸ್ಥಾನವೇನು ಎಂಬುದು ಮುಖ್ಯ ಪ್ರಶ್ನೆ. ಸರಳವಾದ ಉತ್ತರವೆಂದರೆ ಭಾಷಾ ಸಂಸ್ಕೃತಿಯು ತನ್ನ ಆವಿಷ್ಕಾರಗಳನ್ನು ಭೌತಿಕ ಜಗತ್ತಿನಲ್ಲಿ ಸಂಸ್ಥಾಪಿಸಲು ಮತ್ತು ಶೋಧಿಸಲು ಸಾಹಿತ್ಯ ಕೃತಿಗಳನ್ನು ಬಳಸುತ್ತವೆ. ಈ ಬಗೆಯ ಬಳಕೆಗೆ ಎರಡು ವಿಧಾನಗಳಿವೆ. ಒಂದು: ಸಾಹಿತ್ಯ ಕೃತಿಗಳಿಗೂ ಸಂಸ್ಕೃತಿಗೂ ಇರುವ ಅಥವಾ ಇರಬೇಕಾದ ಸಂಬಂಧದ ನೆಲೆ. ಇನ್ನೊಂದು: ಸಾಹಿತ್ಯ ಕೃತಿಗಳನ್ನು ಒಂದು ಸಂಸ್ಕೃತಿಯ ಚಲನಶೀಲತೆಯ ದಾಖಲೆಗಳೆಂದು ತಿಳಿದು ಅವುಗಳನ್ನು ಗುರುತುಗಳನ್ನಾಗಿ ಪರಿವರ್ತಿಸುವುದು. ಈ ವ್ಯಾಖ್ಯೆಗೆ ಹೊರತಾದ ಲೋಕವನ್ನೂ, ಬದುಕನ್ನೂ ಹೊರಗಿಟ್ಟ 'ಸಾಹಿತ್ಯಕ್ಕೋಸ್ಕರ ಸಾಹಿತ್ಯ' ಎನ್ನುವ ಸಾಹಿತ್ಯವೂ ಇದೆ. ಇಂತಹ ಸಾಹಿತ್ಯದ ಹಿಂದೆಯೂ ಒಂದು ರಾಜಕಾರಣವಿದೆ. ಅದು ಕೇವಲ ಭ್ರಮೆಗಳನ್ನು ಸೃಷ್ಟಿಸುತ್ತ ಅದರ ಮರೆಯಲ್ಲಿ ತಾರತಮ್ಯದ ಅಸಹನೀಯ ಸಾಮಾಜಿಕ ವಾಸ್ತವವನ್ನು ಮರೆಸುವ, ಯಥಾಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗುವ ರಾಜಕಾರಣ. ಎಂಬತ್ತು-ತೊಂಬತ್ತರ ದಶಕಗಳವರೆಗೆ ಮುದ್ರಣಮಾಧ್ಯಮದಲ್ಲಿ ಧಾರಾವಾಹಿಗಳಾಗಿ ಪ್ರಕಟವಾಗುತ್ತಿದ್ದ ಕಾದಂಬರಿಗಳು ಈ ಸ್ವರೂಪದವು. ಈಗ ಆ ಸ್ಥಾನವನ್ನು ದೃಶ್ಯ ಮಾಧ್ಯಮಗಳಲ್ಲಿ ಬರುತ್ತಿರುವ ರಂಜನೀಯ ಧಾರವಾಹಿಗಳು ಆಕ್ರಮಿಸಿವೆ. ಇದರ ಇನ್ನೊಂದು ಅತಿಯಲ್ಲಿ ಸಾಮಾಜಿಕ ಬದಲಾವಣೆಯನ್ನು ಆವಾಹಿಸಿಕೊಂಡಂತೆ ಸೃಷ್ಟಿಯಾಗುವ ಸಾಹಿತ್ಯ. ಈ ಕಾರಣಕ್ಕಾಗಿಯೇ ಪ್ರಗತಿಶೀಲ ಸಾಹಿತ್ಯ ನಿರೀಕ್ಷಿಸಿದಷ್ಟು ಫಲಪ್ರದವಾಗದಿರುವುದನ್ನು ಗುರುತಿಸಬಹುದು.

ಕನ್ನಡದಲ್ಲಿ ಶುದ್ಧ ಸಾಹಿತ್ಯಕ ದೃಷ್ಟಿಕೋನ ಎಂಬುದು ಮೊದಲಿಂದಲೂ ಪ್ರಶ್ನೆಗೆ ಒಳಗಾಗುತ್ತ ಬಂದಿದೆ. ಕನ್ನಡದ ಆಧುನಿಕ ಪೂರ್ವ ಪಠ್ಯಗಳು ಕೇವಲ 'ಸಾಹಿತ್ಯಕ'ವಾದುದಲ್ಲ. ಇತಿಹಾಸ, ಪುರಾಣ ಮತ್ತು ವಾಸ್ತವಗಳ ನಡುವೆ ಕನ್ನಡ ಪ್ರಾಚೀನ ಸಾಹಿತ್ಯ ಪರಂಪರೆಯು ಒಂದು ಬಗೆಯ ಸಾವಯವ ಸಂಬಂಧವನ್ನು ಏರ್ಪಡಿಸಿಕೊಂಡಿತ್ತು. ಕನ್ನಡ ನಾಡಿನ ಜನತೆಯು ಚರಿತ್ರೆಯುದ್ದಕ್ಕೂ ಮಾಡಿಕೊಂಡು ಬಂದಿರುವ ಸಾಮಾಜಿಕ ರಾಜಕೀಯ ಕ್ರಿಯೆಗಳ ಭಾಗವಾಗಿಯೇ ಕನ್ನಡ ಸಾಹಿತ್ಯ ಚಿಂತನೆಯು ವಿಕಾಸಗೊಂಡಿರುವುದು. 'ಕನ್ನಡದಲ್ಲಿ ಸತ್ವಯುತವಾಗಿ ಬರೆಯುತ್ತಿರುವ ಲೇಖಕ – ತನಗೆ ತಿಳಿದೋ ತಿಳಿಯದೆಯೋ- ಒಂದು ದೊಡ್ಡ ಸಾಮಾಜಿಕ ಕ್ರಾಂತಿಯಲ್ಲಿ ಭಾಗಿಯಾಗುತ್ತಿರುತ್ತಾನೆ' ಎಂಬ ಯು.ಆರ್ ಅನಂತಮೂರ್ತಿ ಅವರ ವಿಶ್ಲೇಷಣೆ ಇದನ್ನೇ

ಧ್ವನಿಸುತ್ತದೆ. ಈ ಅರ್ಥದಲ್ಲಿ ಕನ್ನಡ ಸಾಹಿತ್ಯ ಚಿಂತನೆಯು ಸಾಮಾಜಿಕ ರಾಜಕೀಯ ಚಿಂತನೆಯೂ ಆಗಿದೆ. ಪ್ರತಿಯೊಂದು ದೊಡ್ಡ ಸಾಹಿತ್ಯ ಪರಂಪರೆಯ ಗರ್ಭದಲ್ಲೂ ಪ್ರತ್ಯೇಕ ರಾಷ್ಟ್ರವೊಂದರ ಭ್ರೂಣ ಇರುತ್ತದೆ ಎಂಬ ಡಿ.ಆರ್ ನಾಗರಾಜ ಅವರ ಗ್ರಹಿಕೆ ಕೂಡ ಕನ್ನಡ ಸಾಹಿತ್ಯ ಚಿಂತನೆಯು ಸಾಮಾಜಿಕ ರಾಜಕೀಯ ಚಿಂತನೆಯೂ ಆಗಿದೆ ಎನ್ನುವುದನ್ನು ಅನುಮೋದಿಸುತ್ತದೆ. ಭಾಷೆಯೊಂದು ಬಲಿಷ್ಠವಾಗುವುದು ಆ ಭಾಷಿಕ ಜನಾಂಗ ರಾಜಕೀಯವಾಗಿ ಬಲವಾದಾಗ ಎಂಬ ಉತ್ತರ ಸರಳವಾದದ್ದು. ಆದರೆ ತುಂಬ ಮುಖ್ಯವಾದದ್ದು ಎನ್ನುವ ಡಿ.ಆರ್. ನಾಗರಾಜ ಅವರು ರಾಜಕೀಯವಾಗಿ ಪ್ರಬಲವಾಗುವುದು ಎಂಬ ಆಸೆ ತಾರ್ಕಿಕವಾಗಿ ಕೊನೆಯಾಗುವುದು ಆ ಭಾಷಿಕಕುಲ ಪ್ರತ್ಯೇಕ ರಾಷ್ಟ್ರೀಯ ಪ್ರಭುತ್ವವಾದಾಗ ಎಂದು ಅಭಿಪ್ರಾಯಪಡುತ್ತಾರೆ. ಭಾಷಿಕ ಕುಲಗಳು ರಾಷ್ಟ್ರೀಯ ಪ್ರಭುತ್ವವಾಗಲು ಪ್ರಬಲ ಅಭ್ಯರ್ಥಿಗಳು. ರಾಷ್ಟ್ರೀಯ ಪ್ರಭುತ್ವವಾದಾಗ ಆ ಭಾಷಿಕ ಕುಲದ ಸಾಹಿತ್ಯಕ್ಕೆ, ಸಾಂಸ್ಕೃತಿಕ ಸಾಧನೆಗಳಿಗೆ ಒಂದು ಹೊಸರೀತಿಯ ಪ್ರಾಮುಖ್ಯತೆ ಬರುತ್ತದೆ. ಹಾಗೆ ನೋಡಿದರೆ, ಕಳೆದ ೧೫೦ ವರ್ಷಗಳಲ್ಲಿ ರಾಷ್ಟ್ರೀಯ ಕುಲಗಳು ಹುಟ್ಟಿದ್ದೇ ಸಾಹಿತ್ಯ ಪರಂಪರೆಗಳ ಅಧ್ಯಯನದಿಂದ ಎನ್ನುವ ಅವರ ಗ್ರಹಿಕೆಗಳು ಸಾಹಿತ್ಯಕ್ಕೂ ರಾಜಕೀಯ ಚಿಂತನೆಗಳಿಗೂ ಇರುವ ಸಂಬಂಧವನ್ನು ಖಚಿತಪಡಿಸುತ್ತವೆ. ಈ ಬಗೆಗಳಲ್ಲಿ ಸಾಹಿತ್ಯ ಹೊತ್ತಿರುವ ಜವಾಬ್ದಾರಿ ಬಹು ನೆಲೆಗಳಾದ್ದಾಗಿದೆ. ಈ ಹಿನ್ನೆಲೆಯಲ್ಲಿಯೇ ಪ್ರಸ್ತುತ ಅಧ್ಯಯನ 'ಸಾಹಿತ್ಯವಾದಿ ನೆಲೆ' ಎನ್ನುವುದನ್ನು ಗ್ರಹಿಸುತ್ತದೆ.

೨.೨ ಬಿ.ಎಂ.ಶ್ರೀ ಅವರ ಚಿಂತನೆಗಳು

೨.೨.೧ ಪೀಠಿಕೆ

ಕನ್ನಡಪರ ಚಿಂತನೆಗೆ ಇಪ್ಪತ್ತನೆಯ ಶತಮಾನದ ಆರಂಭದಲ್ಲಿಯೇ ಅಡಿಪಾಯ ಹಾಕಿದವರಲ್ಲಿ ಬಿ.ಎಂ.ಶ್ರೀ ಎಂದೇ ಹೆಸರಾದ ಬಿ.ಎಂ.ಶ್ರೀಕಂಠಯ್ಯ (೧೮೮೪-೧೯೪೬) ಅವರು ಮುಖ್ಯರಾದವರು. ಬಿ.ಎಂ.ಶ್ರೀ ಅವರ ಕನ್ನಡ ಚಿಂತನೆ ಹಲವು ಕಾರಣಗಳಿಗಾಗಿ ಉದ್ದಕ್ಕೂ ಚರ್ಚೆಗೆ ಒಳಗಾಗುತ್ತ ಬಂದಿದೆ. ಕನ್ನಡಪರ ಚಿಂತನೆಗೆ ಅಡಿಪಾಯ ಹಾಕಿದವರು ಎನ್ನುವುದು ಮೊದಲ ಕಾರಣವಾದರೆ ಕನ್ನಡಪರವಾದ ಕಡುನಿಷ್ಠ ಕಾಳಜಿ ಮತ್ತು ಬಹುಮುಖತೆಯುಳ್ಳ ಚಿಂತನೆ ಎರಡನೆಯ ಕಾರಣವಾಗಿದೆ. ಕನ್ನಡ, ಇಂಗ್ಲಿಶ್ ಮತ್ತು ಸಂಸ್ಕೃತಭಾಷೆಗಳ ಆಳವಾದ ಜ್ಞಾನ ಅವರಿಗಿತ್ತು.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಬಿ.ಎಂ.ಶ್ರೀ ಅವರು ಮಾಡಿದ ಕನ್ನಡ ಭಾಷೆ ಕುರಿತ ಚಾರಿತ್ರಿಕ ಭಾಷಣ 'ಕನ್ನಡ ಮಾತು ತಲೆ ಎತ್ತುವ ಬಗೆ' (೧೯೧೧) ಕನ್ನಡದ ಬದುಕಿನಲ್ಲಿ ಮತ್ತೆ ಮತ್ತೆ ಚರ್ಚೆಗೆ ಒಳಪಡುತ್ತ, ಪುನಃ ಪುನಃ ಸಮಕಾಲೀನಗೊಳ್ಳುತ್ತಿರುವ ಭಾಷಣ. ಈ ಉಪನ್ಯಾಸವು ಚಾರಿತ್ರಿಕ ಮಹತ್ವದಿಂದ ಕೂಡಿದೆ. ಇದರಲ್ಲಿ ಶ್ರೀಯವರು ಪ್ರಕಟಿಸಿರುವ ತಲ್ಲಣಗಳು

ಈಗಲೂ ನಮ್ಮ ಸಂವೇದನೆಗೆ ತಾಕುವಷ್ಟು ತೀವ್ರವಾಗಿದೆ. ಇದರಲ್ಲಿ ಆಳವಾದ ಚಿಂತನೆ ಮತ್ತು ಮುಂಗಾಣ್ಕೆಯಿದೆ. ಇದು ಕನ್ನಡವನ್ನೂ, ಕರ್ನಾಟಕವನ್ನೂ ಕಟ್ಟುವ ದಾರ್ಶನಿಕತೆ ಮತ್ತು ಹೊಣೆಗಾರಿಕೆಯಿಂದ ಕೂಡಿದ ಉಪನ್ಯಾಸವೆಂದು ರಹಮತ್ ತರೀಕೆರೆ ಅವರು ಅಭಿಪ್ರಾಪಡುತ್ತಾರೆ. ಬಿ.ಎಂ.ಶ್ರೀ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳ ಪರಿಣಾಮಗಳು ಮತ್ತು ಮಿತಿಗಳ ಕುರಿತು ಹಲವು ಆಯಾಮಗಳಲ್ಲಿ ಚರ್ಚೆಗಳು ನಡೆದಿವೆ. ಈ ಅಧ್ಯಯನದಲ್ಲಿಯೂ ಬಿ.ಎಂ.ಶ್ರೀ ಅವರ 'ಪ್ರಮಾಣ ಭಾಷೆ' ಕುರಿತ ಚಿಂತನೆಗಳನ್ನು 'ಪ್ರಮಾಣೀಕರಣ' ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇದರಾಚೆಗೆ ಶ್ರೀ ಅವರ ಚಿಂತನೆಗಳ ವಿಶಿಷ್ಟತೆ ಎಂದರೆ ಅವರ ಕೆಲವು ಚಿಂತನೆಗಳು ಕೇವಲ ಚಿಂತನೆಗಳಾಗಿ ಉಳಿಯದೆ ಅನುಷ್ಠಾನಕ್ಕೂ ಬಂದವು ಎನ್ನುವುದು.

ಎಚ್ಚೆತ್ತ ಜನಸಮುದಾಯಗಳು ತಮ್ಮ ನೆಲದ ಭಾಷೆಯ ಉಳಿವಿಗಾಗಿ ಹಲವು ರೀತಿಯಲ್ಲಿ ಪ್ರಯತ್ನಿಸುತ್ತವೆ. ಒಂದನೆಯದು ಭಾಷೆಯ ಕುರಿತು ಆಳವಾದ ಚಿಂತನೆಗಳನ್ನು ಮಂಡಿಸುವುದು. ಎರಡನೆಯದು ಇಂತಹ ಚಿಂತನೆಗಳನ್ನು ತಮ್ಮ ತಮ್ಮ ವೈಯಕ್ತಿಕ ಕಾರ್ಯವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವುದು. ಮೂರನೆಯದು ಈ ಚಿಂತನೆಗಳನ್ನು ಅನುಷ್ಠಾನಗೊಳಿಸಲು ಪ್ರಭುತ್ವದ ಮೇಲೆ ಒತ್ತಡ ತರುವ ಚಳುವಳಿ ರೂಪಿಸುವುದು. ಸಂಘಟನೆಗಳನ್ನು ಹೊರತುಪಡಿಸಿ ವ್ಯಕ್ತಿಗಳ ನಿಟ್ಟಿನಲ್ಲಿ ನೋಡಿದಾಗ ಹೆಚ್ಚಿನ ನಿದರ್ಶನಗಳಲ್ಲಿ ಚಿಂತನೆ ಮತ್ತು ಹೋರಾಟ ಮಾಡುವ ವ್ಯಕ್ತಿಗಳು ಒಬ್ಬರೇ ಆಗಿರುತ್ತಾರೆ. ಕನ್ನಡ ಭಾಷೆಯ ಕುರಿತು ಚಿಂತಿಸುವಾಗ ಈ ಗುಂಪಿನಲ್ಲಿ ಶಂ.ಬಾ ಜೋಷಿ, ಆಲೂರು ವೆಂಕಟರಾಯರು, ಅ.ನ.ಕೃ, ಚಿದಾನಂದಮೂರ್ತಿ ಮತ್ತು ಅನಂತಮೂರ್ತಿ ಅವರನ್ನು ಉದಾಹರಿಸಬಹುದು. ಭಾಷೆ ಕುರಿತ ತಮ್ಮ ಚಿಂತನೆಗಳನ್ನು ಮಂಡಿಸುವುದರೊಂದಿಗೆ ಅದನ್ನು ಅನುಷ್ಠಾನಗೊಳಿಸುವ ಅವಕಾಶ ಕೆಲವರಿಗೆ ಮಾತ್ರ ಲಭ್ಯವಿರುತ್ತದೆ. ಅಂತಹ ಅವಕಾಶ ಹೊಂದಿದ್ದು ಅದನ್ನು ಸಮರ್ಥವಾಗಿ ಬಳಸಿಕೊಂಡವರಲ್ಲಿ ಬಿ.ಎಂ.ಶ್ರೀ, ಕುವೆಂಪು, ದೇಜಗೌ ಮತ್ತು ಬರಗೂರು ರಾಮಚಂದ್ರಪ್ಪ ಅವರು ಮುಖ್ಯರಾದವರು. ವಿಶ್ವವಿದ್ಯಾಲಯ ಮತ್ತು ಪ್ರಾಧಿಕಾರಗಳಲ್ಲಿದ್ದ ತಮ್ಮ ಅಧಿಕಾರಸ್ಥಾನಗಳ ಮೂಲಕ ಇವರು ಕನ್ನಡಭಾಷೆಯನ್ನು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಶ್ರಮಿಸಿದವರು. ಶ್ರೀ ಅವರು ೧೯೨೬-೩೦ರ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿದ್ದರು. ಈ ಅವಧಿಯಲ್ಲಿ ಕನ್ನಡದ ಅಭಿವೃದ್ಧಿಗಾಗಿ ಪೀಠವನ್ನು ಸೃಷ್ಟಿಸಿದರು. ಕನ್ನಡದಲ್ಲಿ ಬಿ.ಎ ಆನರ್ಸ್ ಪದವಿಯನ್ನು ಮತ್ತು ಎಂ.ಎ ತರಗತಿಯನ್ನು ೧೯೨೭ರಲ್ಲಿ ಪ್ರಾರಂಭಿಸಿದರು. ಸಂಸ್ಕೃತದ ಭಾರದಿಂದ ಹೊರತಾದ, ಇಂಗ್ಲಿಶಿನ ಹೊಸ ಶೈಲಿಯಿಂದ ಕನ್ನಡಕ್ಕೆ ಪ್ರಮಾಣಭಾಷೆಯೊಂದನ್ನು ರೂಪಿಸುವುದು ಬಿ.ಎಂ.ಶ್ರೀ ಅವರ ಪ್ರಮುಖ ಚಿಂತನೆಗಳಲ್ಲೊಂದು. ಅವರು 'ಕನ್ನಡಕ್ಕೊಂದು ಕಟ್ಟು' ಲೇಖನದಲ್ಲಿ ಕನ್ನಡದ ಪ್ರಮಾಣಭಾಷೆಯ

ಸ್ಥೂಲ ಚೌಕಟ್ಟನ್ನು ನಿರೂಪಿಸಿದ್ದನ್ನು ಮೈಸೂರು ಸಂಸ್ಥಾನದಲ್ಲಿ ಪಠ್ಯಪುಸ್ತಕಗಳನ್ನು ರಚಿಸಲು ನಿಯುಕ್ತವಾಗಿದ್ದ ವಿವಿಧ ಸಮಿತಿಗಳ ಸದಸ್ಯರು ಜಾರಿಗೆ ತರಲು ಯತ್ನಿಸಿರುವುದನ್ನು ಗಮನಿಸಬಹುದು.

೨.೨.೨ ಇಂಗ್ಲಿಶಿನಿಂದ ಕನ್ನಡಕ್ಕೆ ಕಸುವು ತುಂಬುವ ಹಂಬಲ

ಕನ್ನಡದ ಮೇಲಿನ ಪ್ರಭಾವ ಕುರಿತಂತೆ ಇಂಗ್ಲಿಶ್ ಮತ್ತು ಸಂಸ್ಕೃತ ಕುರಿತ ಬಿ.ಎಂ.ಶ್ರೀ ಅವರ ನಿಲುವುಗಳು ವಿಭಿನ್ನವಾಗಿದ್ದು ಚರ್ಚೆಗಳನ್ನು ಹುಟ್ಟು ಹಾಕಿದೆ. ಬಿ.ಎಂ.ಶ್ರೀ ಅವರ ಕಾಲಕ್ಕೆ ಸಂಸ್ಕೃತ ಗತಸಾಮ್ರಾಜ್ಯಶಾಹಿ ಭಾಷೆಯಾಗಿದ್ದರೆ ಇಂಗ್ಲಿಶ್ ವರ್ತಮಾನದ ಸಾಮ್ರಾಜ್ಯಶಾಹಿ ಭಾಷೆಯಾಗಿತ್ತು. ಇವೆರಡರಲ್ಲಿ ಬಿ.ಎಂ.ಶ್ರೀ ಅವರಿಗೆ ಕನ್ನಡಕ್ಕೆ ಕಂಟಕದಂತೆ ತೋರುತ್ತಿದ್ದುದು ಸಂಸ್ಕೃತವಾಗಿತ್ತು. ೨೧ನೇ ಶತಮಾನದ ಈ ಆರಂಭಕಾಲದಲ್ಲಿ ನಿಂತು ನೋಡಿದಾಗ ಕನ್ನಡ ಮತ್ತು ಕನ್ನಡದಂತಹ ಎಲ್ಲಾ ದೇಶಿ ಭಾಷೆಗಳಿಗೆ ತೀವ್ರತರವಾದ ಬಿಕ್ಕಟ್ಟುಗಳನ್ನು ತಂದೊಡ್ಡಿರುವುದು, ಅವುಗಳ ಅಸ್ತಿತ್ವವನ್ನು ಅಲುಗಾಡಿಸುತ್ತಿರುವುದು ಬಂಡವಾಳಶಾಹಿಗಳ ಭಾಷೆಯಾದ ಇಂಗ್ಲಿಷ್ ಆಗಿದೆ ಎನ್ನುವುದು ಸ್ಪಷ್ಟವಾದ ಸಂಗತಿಯಾಗಿದೆ. ಈಗ ದೇಶಿ ಭಾಷೆಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಡಬೇಕಾದ ಕಠಿಣ ಸನ್ನಿವೇಶ ನಿರ್ಮಾಣವಾಗಿದೆ. ಈ ಕಾರಣದಿಂದಲೇ ಬಿ.ಎಂ.ಶ್ರೀ ಅವರು ಇಂಗ್ಲಿಶನ್ನು ಭರತಮಾತೆಯ 'ಇನಿಯ ತಂಗಿ' ಎಂದು ಗ್ರಹಿಸುವ ನಿಲುವೇ ಇವತ್ತಿನ ಸಂದರ್ಭದಲ್ಲಿ ದಿಗ್ಭ್ರಮೆಯನ್ನು ಹುಟ್ಟಿಸುವಂತಿದೆ. ಇಂಗ್ಲಿಷ್ ಪ್ರಭುತ್ವದ ಭಾಷೆಯಾಗಿ ಮಾರುಕಟ್ಟೆಯನ್ನು ನಿಯಂತ್ರಿಸುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಬಿ.ಎಂ.ಶ್ರೀ ನಿಲುವು ದಿಗ್ಭ್ರಮೆಗೆ ಕಾರಣವಾಗಿರುವುದು ಸಹಜವೆನಿಸುವಂತೆ ತೋರುತ್ತದೆ. ಆದರೆ ಶತಮಾನವೊಂದರಷ್ಟು ಹಿಂದೆ ಕನ್ನಡದ ಬಿಕ್ಕಟ್ಟಿಗೆ ಇಂಗ್ಲಿಷ್ ಮೂಲಕವೇ ಪರಿಹಾರ ಕಾಣುವ ಪ್ರಯತ್ನ ಮಾಡಿದವರು ಬಿ.ಎಂ.ಶ್ರೀ ಅವರು. ಇಂಗ್ಲಿಶಿನಿಂದ ಆಧುನಿಕತೆ ಮತ್ತು ವೈಚಾರಿಕತೆಯನ್ನು ಕನ್ನಡ ಸಾಹಿತ್ಯಕ್ಕೆ ತರಲು ಬಿ.ಎಂ.ಶ್ರೀ ಪ್ರಯತ್ನಿಸಿದರು. ಮುಖ್ಯವಾದ ಸಂಗತಿಯೆಂದರೆ ಇಂಗ್ಲಿಷಿನ ಕುರಿತು ಕುರುಡು ವ್ಯಾಮೋಹವೇನೂ ಅವರಿಗಿರಲಿಲ್ಲ. 'ಜನರ ಮುಖಂಡರೂ ಮೇಧಾವಿಗಳೂ ಎಷ್ಟೇ ಭಾಷೆಗಳನ್ನು ಕಲಿಯಲಿ, ಜನಸಾಮಾನ್ಯರೂ, ಸರ್ವಜನವೂ ದೇಶಭಾಷೆಯನ್ನು ಆಡತಕ್ಕದ್ದೇ? ಇಲ್ಲ, ಅದನ್ನು ಕಿತ್ತು ಅದರ ಸ್ಥಳದಲ್ಲಿ ಭಾರತಭೂಮಿಯ ಹೆಸರನ್ನು ಹೇಳಿಕೊಂಡು ದಿಗ್ವಿಜಯಕ್ಕೆ ಬಂದಿರುವ ಬೇರೊಂದು ಭಾಷೆಯನ್ನು ಹೂಡತಕ್ಕದ್ದೇ? ಎಚ್ಚರಿಕೆಯಿಂದ ಯೋಚನೆ ಮಾಡಬೇಕು.'[೧] ಎಂಬ ಎಚ್ಚರ ಅವರಲ್ಲಿತ್ತು.

ಅಂದು ಸಾಹಿತ್ಯಿಕ ನೆಲೆಯಲ್ಲಿ ಇಂಗ್ಲಿಷ್ ಕನ್ನಡಕ್ಕೆ ಮುಖ್ಯ ಎಂದು ಬಿ.ಎಂ.ಶ್ರೀ ಅವರು ಭಾವಿಸಿದ್ದರು. ಪಶ್ಚಿಮದ ಸಂಸ್ಕೃತಿಯಲ್ಲಿರುವ ಅನೇಕ ಶ್ರೇಷ್ಠ ಸಂಗತಿಗಳು ನಮ್ಮಲ್ಲಿಲ್ಲ. ಆದ್ದರಿಂದ ಅಲ್ಲಿರುವಂತಹ ಶ್ರೇಷ್ಠ ಮಾದರಿಗಳು ನಮ್ಮಲ್ಲೂ ಸೃಷ್ಟಿಯಾಗಬೇಕು ಎಂಬ ನಿಲುವು ಬಿ.ಎಂ ಶ್ರೀ ಅವರದ್ದಾಗಿತ್ತು. ಅವರು ಇಂಗ್ಲಿಷ್ ಗೀತಗಳನ್ನು ಕನ್ನಡಕ್ಕೆ ತಂದಿದ್ದನ್ನು, ಕನ್ನಡ ಕಾವ್ಯಕ್ಷೇತ್ರವು ಇಂಗ್ಲಿಶ್

ಸಾಹಿತ್ಯದಿಂದ ಜೀವಧಾರಣೆ ಪಡೆಯಬೇಕೆಂದು ಅವರು ಪ್ರತಿಪಾದಿಸಿದ್ದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. "ಇವಳ ಸೊಬಗನವಳು ತೊಟ್ಟು ನೋಡ ಬಯಸಿದೆ; ಅವಳ ತೊಡಿಗೆ ಇವಳಿಗಿಟ್ಟು ಹಾಡಬಯಸಿದೆ"[5] ಎನ್ನುವ 'ಕಾಣಿಕೆ' ಪದ್ಯದ ಸಾಲುಗಳು ಇಂಗ್ಲಿಶ್ ಮತ್ತು ಕನ್ನಡದ ನಡುವಿನ ಕೊಡುಕೊಳ್ಳುವಿಕೆಯ ಸಂಬಂಧವನ್ನು ಅವರು ಸಾಹಿತ್ಯದ ನೆಲೆಯಲ್ಲಿ ನೋಡುತ್ತಿದ್ದಾರೆ ಎನ್ನುವುದನ್ನು ಸೂಚಿಸುತ್ತಿವೆ. ಹೀಗಿದ್ದರೂ ಇಂಗ್ಲಿಷ್ ಭಾಷೆ ಕನ್ನಡಕ್ಕೆ ಪೂರಕವಾಗಿ ಮಾತ್ರ ಇರಬೇಕು ಎನ್ನುವ ನಿಲುವನ್ನು ಅವರು ಹೊಂದಿದ್ದರು. ಬಹುಷಃ ಬಿ.ಎಂ.ಶ್ರೀ ಕನ್ನಡದ ಸಂದರ್ಭದಲ್ಲಿ ಇಂಗ್ಲಿಶ್ ಕುರಿತು ತೆಗೆದುಕೊಂಡ ನಿಲುವು ಆ ಹೊತ್ತಿಗೆ ಸರಿಯಾದದ್ದು ಎನಿಸಿದರೂ ವರ್ತಮಾನದಲ್ಲಿ ಇಂಗ್ಲಿಶ್ ಕನ್ನಡ ಭಾಷೆಯ ಮೇಲೆ ಪರಿಣಾಮಗಳನ್ನು ಅವಲೋಕಿಸಿದಾಗ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಬ್ರಿಟಿಶ್ ಸಾಮ್ರಾಜ್ಯಶಾಹಿಯ ಅಪಾಯಗಳನ್ನು ತಮ್ಮ 'ನಾಗರ ಬೆತ್ತ' ಕಥೆಯ ಮೂಲಕ ಅಪೂರ್ವವಾಗಿ ಚಿತ್ರಿಸಿದ್ದ ಸೇಡಿಯಾಪು ಈ ಹಿನ್ನೆಲೆಯಲ್ಲಿಯೇ ಸಾಹಿತ್ಯಕವಾಗಿಯೂ ಇಂಗ್ಲಿಷನ್ನು ಬಳಸುವುದರ ಬಗ್ಗೆ ಆಗಲೇ ವಿರೋಧ ವ್ಯಕ್ತಪಡಿಸಿದ್ದರು ಎನಿಸುತ್ತದೆ. ಬಿ.ಎಂ.ಶ್ರೀ ಅವರು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಆಂಗ್ಲರ ಸಾಮ್ರಾಜ್ಯವಾದವನ್ನು ಒಪ್ಪಿಕೊಂಡಿರುವುದರ ಬಗ್ಗೆ ತೋರುವ ತಕರಾರುಗಳು ಸಕಾರಣವಾಗಿವೆ. ಆದರೆ ಅವರು ಕನ್ನಡ ಸಾಹಿತ್ಯದ ಅಂಧ ಸಂಪ್ರದಾಯಗಳನ್ನು ಬಿಡಿಸಿ, ಅದು ವಿಚಾರಪರವಾಗಬೇಕು, ಸತ್ವಶಾಲಿಯಾಗಬೇಕು ಎಂದು ಚಿಂತಿಸಿ ಅವರು ಮಾಡಿದ ಪ್ರಯತ್ನ ಇಂದು ಫಲ ಕೊಡುತ್ತಿರುವುದನ್ನು ಗಮನಿಸುತ್ತಿದ್ದೇವೆ. ಶ್ರೀಯವರು ಇಂಗ್ಲಿಶ್ ಬಗ್ಗೆ ತೋರುವ ಅಸ್ಥೆಗೆ ಕಾರಣವಾಗಿರುವುದು ಇಂಗ್ಲಿಶ್ ಸಾಹಿತ್ಯದ ಸಂಗದಿಂದಲೇ ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯದಿಂದ ಬಂದಿರುವ ಕಾಯಿಲೆಗಳು ಗುಣವಾಗುತ್ತವೆ ಎಂದು ನಂಬಿದ್ದು ; ಹೀಗಾಗಿ ರಾಜಕೀಯ ಹಾಗೂ ಸಾಹಿತ್ಯಕವಾದ ಎರಡೂ ನಿಲುವು ಅವರಲ್ಲಿ ಏಕೀಭವಿಸಿದವು.

ಜಾಗತೀಕರಣದ ಉಪಕರಣವಾಗಿ ಬಂದ ಇಂಗ್ಲಿಶ್ ದೇಶಿ ಭಾಷೆಗಳ ಅಸ್ತಿತ್ವಕ್ಕೆ ಸಂಚಕಾರ ತರುತ್ತಿರುವುದು ಸಮಕಾಲೀನ ವಿದ್ಯಮಾನವೇನೋ ಹೌದು. ಆದರೆ ಇಂತಹ ಅನಾಹುತಗಳು ನಡೆಯುತ್ತಿರುವುದು ಮಾರುಕಟ್ಟೆಯ ಭಾಷೆಯಾಗಿ ಬಂದ ಇಂಗ್ಲಿಶಿನಿಂದ. ಬಿ.ಎಂ.ಶ್ರೀ ಅವರು ಅಂದು ಆಯ್ಕೆ ಮಾಡಿಕೊಟ್ಟ ಇಂಗ್ಲಿಶಿನಿಂದಲ್ಲ. ಬಿ.ಎಂ.ಶ್ರೀ ಆಯ್ದುಕೊಟ್ಟ ಇಂಗ್ಲಿಶ್ ಕನ್ನಡ ಸಾಹಿತ್ಯವನ್ನು ಚೈತನ್ಯಗೊಳಿಸಿದೆ. ಕನ್ನಡದ ಬದುಕನ್ನು ಆಧುನಿಕಗೊಳಿಸಿದೆ ಮತ್ತು ಮಾನವೀಯಗೊಳಿಸಿದೆ. ಸಾಹಿತ್ಯಕವಾಗಿಯೂ ಇಂಗ್ಲಿಶನ್ನು ಒಪ್ಪದ ಸೇಡಿಯಾಪು ಅವರ ಚಿಂತನೆಗೆ ಇಂಗ್ಲಿಶಿನ ಕೇಡಿನ ಕುರಿತ ಆತಂಕವಿದ್ದರೂ ಅದರ ಚೈತನ್ಯದಾಯಕ ಅಂಶಗಳನ್ನು ಗುರುತಿಸುವಲ್ಲಿ ಮಿತಿಯಿದೆ. ಇಲ್ಲಿಯೇ ಬಿ.ಎಂ.ಶ್ರೀ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಯ ವಿಶಿಷ್ಟತೆ ಇರುವುದು.

೨.೨.೩ ಕನ್ನಡದ ಮೇಲಿನ ಸಂಸ್ಕೃತದ ಹೊರೆಯನ್ನು ತಗ್ಗಿಸುವ ಪ್ರಯತ್ನ

'ರಾಜರ ಆಶ್ರಯದಿಂದಲೂ, ಮತಾಚಾರಗಳ ಭಕ್ತಿಯಿಂದಲೂ ಸಂಸ್ಕೃತ ಭಾಷೆ ವಿದ್ವನ್ಮಂಡಲಿಯಲ್ಲಿ ರಾಷ್ಟ್ರಭಾಷೆಯಾಗಿ ಗೌರವ ಸ್ಥಾನಕ್ಕೆ ಏರಿತು. ಬಹುಕಾಲ ಭಾರತ ಭೂಮಿಯನ್ನು ಒಂದುಗೂಡಿಸಿತು.' 'ನಾವು ಸ್ವೀಕರಿಸತಕ್ಕ ಭಾಷೆಗಳನ್ನು ಹೇಳುತ್ತಿರುವಾಗ ಸಂಸ್ಕೃತವನ್ನು ಬಿಡುವುದಕ್ಕಿಲ್ಲ, ಇದು ನಮ್ಮ ಪೂರ್ವಿಕರಾದ ಆರ್ಯರ ಭಾಷೆ.' ಸಂಸ್ಕೃತ ಭಾಷೆಯನ್ನು ಕುರಿತ ವ್ಯಾಮೋಹವೆನ್ನಿಸುವಷ್ಟು ಈ ರೀತಿಯ ಸ್ವರೂಪದ ಮಾತುಗಳು ಬಿ.ಎಂ.ಶ್ರೀ ಅವರ ಲೇಖನ ಮತ್ತು ಭಾಷಣಗಳಲ್ಲಿ ಬರುತ್ತವೆ. ಈ ಮಾತುಗಳು ಬಿ.ಎಂ.ಶ್ರೀ ಅವರ ವರ್ಗಪ್ರಜ್ಞೆಯ ಕಾರಣದಿಂದಾಗಿ ಬಂದಿವೆಯೇ? ಈ ಹಿನ್ನೆಲೆಯಲ್ಲಿ ಸಂಸ್ಕೃತ ಭಾಷೆ ಕುರಿತ ಬಿ.ಎಂ.ಶ್ರೀ ಅವರ ನಿಲುವೇನು ಎನ್ನುವುದನ್ನು ಪರಿಶೀಲಿಸಬೇಕಾಗಿದೆ.

'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ಕೃತಿಯಲ್ಲಿನ 'ಭಾಷೆಗಳ ಮೇಲಾಟ' ಶೀರ್ಷಿಕೆಯ ಅಧ್ಯಾಯದಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಕನ್ನಡಿಗನು ಯಾವ ಭಾಷೆಯನ್ನು ಅನುಸರಿಸಬೇಕು ಎನ್ನುವ ಚರ್ಚೆಯನ್ನು ಮಾಡುವ ಬಿ.ಎಂ.ಶ್ರೀ ಅವರು ಸಂಸ್ಕೃತವನ್ನು ಕುರಿತು ನಾಡಿನ ಒಂದು ವರ್ಗದಲ್ಲಿರುವ ಆಸಕ್ತಿಯನ್ನು ವಿಶ್ಲೇಷಿಸುತ್ತಾರೆ. ಅದು ಹೀಗಿದೆ: 'ಈ ದೇಶದಲ್ಲಿ ಪೂಜ್ಯಸ್ಥಾನದಲ್ಲಿರುವುದು; ಕನ್ನಡ ಭಾಷೆಗೆ ಬಹುಕಾಲ ನಾನಾ ಬಗೆಯ ಚೈತನ್ಯವನ್ನು ತುಂಬಿ ನೂತನ ಮಾರ್ಗವನ್ನು ಕಲ್ಪಿಸಿಕೊಟ್ಟಿರುವುದು. ಅನೇಕ ಮಹನೀಯರು ತಮ್ಮ ಜೀವಮಾನವನ್ನೆಲ್ಲಾ ಇದಕ್ಕಾಗಿ ಧಾರೆಯೆರೆದು ಪುಷ್ಪವಾಗಿ ಮಾಡಿರುವ ಭಾಷೆ ಇದು. ಈಗಲೂ ಕೂಡ ಇದರ ಮೇಲೆ ಹೆಚ್ಚು ವಿಶ್ವಾಸ, ಹೆಚ್ಚು ಮಮತೆ ಇರುವ ಜನರು ಈ ಭಾಷೆಯಲ್ಲೇ ಮಾತನಾಡಿದರೂ ಆಗಬಹುದಾಗಿದೆ. ಆದ್ದರಿಂದ ಇದನ್ನೇ ಸುಲಭಗೊಳಿಸಿ ಭರತಖಂಡಕ್ಕೆ ಮತ್ತೊಮ್ಮೆ ರಾಷ್ಟ್ರಭಾಷೆಯನ್ನಾಗಿ ಏಕೆ ಮಾಡಬಾರದೆಂದು ಕೇಳಿದರೂ ಕೇಳಬಹುದು.'[೩] ಈ ಮಾತುಗಳು ಬಿ.ಎಂ ಶ್ರೀ ಅವರ ಸಂಸ್ಕೃತಪರವಾದ ಮೇಲ್ವರ್ಗದ ಹಿತಾಸಕ್ತಿಯಿಂದ ಮೂಡಿರಬಹುದೇ ಎಂದು ಅನುಮಾನಿಸುವ ಹೊತ್ತಿಗೆ ಸಂಸ್ಕೃತವನ್ನು ಬಳಕೆಗೆ ತರುವ ಜನರ ನಿಲುವು ಎಷ್ಟು ವಾಸ್ತವಿಕವಾದದ್ದು ಎನ್ನುವುದನ್ನು ಮುಂದಿನ ಮಾತುಗಳಲ್ಲಿ ಪ್ರಶ್ನಿಸುತ್ತಾರೆ. 'ಆದರೆ, ಎಲ್ಲ ಕನ್ನಡಿಗರೂ ಸಂಸ್ಕೃತ ಭಾಷೆಯನ್ನೇ ಅಭ್ಯಾಸ ಮಾಡಿ ಅದರಿಂದಲೇ ಎಲ್ಲ ವಿಷಯಗಳನ್ನೂ ತಿಳಿದುಕೊಳ್ಳುವುದೂ, ಆ ಭಾಷೆಯಿಂದಲೇ ತಮ್ಮ ಏಳಿಗೆಯನ್ನು ಸಾಧಿಸಿಕೊಳ್ಳುವುದೂ ಎಷ್ಟು ಮಟ್ಟಿಗೆ ಸಾಧ್ಯ?'[೪] ಎನ್ನುವ ಅವರ ಪ್ರಶ್ನೆಯಲ್ಲಿಯೇ ಸಂಸ್ಕೃತವನ್ನು ಪ್ರತಿಷ್ಠಾಪಿಸಬಯಸುವ ಹಿತಾಸಕ್ತಿಯ ವಿರೋಧವನ್ನು ಕಾಣಬಹುದು.

ಬಿ.ಎಂ.ಶ್ರೀ ಅವರು ಧಾರವಾಡದಲ್ಲಿ ಮಾಡಿದ ಭಾಷಣದಲ್ಲಿ ಸಂಸ್ಕೃತ ಭಾಷೆ ಯಾರಿಂದ ಮತ್ತು ಯಾವುದಕ್ಕೆ ಬಳಕೆಯಾಯಿತು ಎಂದು ಹೇಳುವ ಮೂಲಕ ಅದು ಸಾಮಾಜಿಕ ಶ್ರೇಣೀಕರಣಕ್ಕೆ

ಕಾರಣವಾದುದನ್ನು ಸೂಚಿಸುತ್ತಾರೆ. 'ಸಾಮಾನ್ಯ ಜನರೆಂದರೆ ದಕ್ಷಿಣದಲ್ಲಿ ಆರ್ಯರಲ್ಲ ಶೂದ್ರರು. ಶೂದ್ರರನ್ನು ಕಂಡರೆ ಆರ್ಯರಿಗೆ ತಿರಸ್ಕಾರ ಈಗಲೂ ಇದೆ. ಹಿಂದೆ ಇನ್ನೂ ಹೆಚ್ಚೇ ಇದ್ದಿರಬೇಕು. ಈ ಶೂದ್ರರು ತಮ್ಮನ್ನು ಗೌರವದಿಂದ ಕಾಣುವುದಕ್ಕೆ ಎಷ್ಟು ಬೇಕೋ ಅಷ್ಟು ಅವರಿಗೆ ಉಪದೇಶವನ್ನು ಮಾಡಿದರು. ಮಿಕ್ಕದ್ದನ್ನೆಲ್ಲಾ ತಮ್ಮಲ್ಲೇ ಬಚ್ಚಿಟ್ಟುಕೊಂಡರು. ಗ್ರಂಥಗಳನ್ನು ಅವರ ಏಳಿಗೆಗೆ ಬರೆಯಲಿಲ್ಲ. ರಾಜಸಭೆಗಳಲ್ಲಿ ಸುಖಪುರುಷನಾದ ಪೋಷಕನಿಗೆ ಹೊಗಳು ಭಟ್ಟರಾಗಿ, ತಮ್ಮೊಳಗೆ ಒಬ್ಬರನ್ನೊಬ್ಬರನ್ನು ಜರೆಯುತ್ತಾ, ಸಂಸ್ಕೃತ ಕವಿಗಳನ್ನು ತಲೆಮೆಟ್ಟಿಹಾರಿದೆವೆಯೆಂದು ಪ್ರತಿಷ್ಠೆ ಕೊಚ್ಚುತ್ತಾ, ಹತ್ತು ಎಳೆ ಸಂಸ್ಕೃತ ಒಂದು ಎಳೆ ಕನ್ನಡ, ಹೀಗೆ ಕೂಡಿಸಿ ಬರಿಯ ಶಬ್ದಾಡಂಬರದ ಮಗ್ಗವನ್ನೂ ಹೆಣೆಯುತ್ತಾ, ದೊಡ್ಡ ಬಿರುದುಗಳನ್ನೂ ಧನವನ್ನೂ ಅಗ್ರಹಾರಗಳನ್ನೂ ಪಡೆಯುವುದಕ್ಕಾಗಿ ಸಂಸ್ಕೃತ ಪಂಡಿತರಾದ ಕವಿಗಳು ಈ ಗ್ರಂಥಗಳನ್ನು ಬರೆದದ್ದು. ರಾಜರ ಪ್ರಾಬಲ್ಯ ಮುರಿದು ಹೋದಹಾಗೆಲ್ಲ ಈ ಕವಿಗಳ ಅಬ್ಬರವೂ ಅಡಗುತ್ತ ಬಂತು. ಶಿವಭಕ್ತರ ಕಾಲದಿಂದ ಸ್ವಲ್ಪ ಮಟ್ಟಿಗೆ ಅತಿ ಪಾಂಡಿತ್ಯಕ್ಕೆ ಹೋಗದೆ ಜನಮಂಡಲಿಗಾಗಿ ಬರೆದ ಕಾವ್ಯಗಳು ದೊರಕುತ್ತವೆ'[೫೨] ಸಂಸ್ಕೃತದಿಂದ ಕನ್ನಡ ಭಾಷೆಗಾಗುತ್ತಿರುವ ಅಪಾಯಗಳನ್ನು ಸರಿಯಾಗಿ ಗುರುತಿಸಿರುವ ಬಿ.ಎಂ.ಶ್ರೀ ಕನ್ನಡದ ಮೇಲಿನ ಸಂಸ್ಕೃತದ ಹೊರೆಯನ್ನು ಇಳಿಸಿ, ಈ ಹೊರೆಯ ಕಾರಣಕ್ಕೆ ಸೊರಗಿದ ಕನ್ನಡಕ್ಕೆ ಇಂಗ್ಲಿಶ್‌ನ ಚೈತನ್ಯದಾಯಕ ಅಂಶಗಳಿಂದ ಶಕ್ತಿ ತುಂಬಲು ಯತ್ನಿಸಿದರು. ಮೇಲ್ಕಂಡ ಶ್ರೀ ಅವರ ಮಾತುಗಳಲ್ಲಿ ಸಂಸ್ಕೃತ ಭಾಷಿಕ ಮಾತ್ರವಲ್ಲದೆ ಸಾಮಾಜಿಕವಾಗಿಯೂ ತರತಮಗಳ ಸೃಷ್ಟಿಗೆ ಕಾರಣವಾದದ್ದರ ಬಗ್ಗೆಯೂ ಅರಿವಿದೆ. ಭಾರತದ ಸಂದರ್ಭದಲ್ಲಿ ರಾಜಕೀಯ ಪ್ರಭುತ್ವದ ಭಾಷೆಯ ಬಂಡೆಗಲ್ಲಿನಡಿ ಜಜ್ಜಿ ಹೋಗಿದ್ದು ದೇವನಾಗರಿ ಸಂಸ್ಕೃತವಲ್ಲ, ಇಂಡಿಯಾದ ದೇಶಿಭಾಷೆಗಳು. ದೇಶಿ ಭಾಷೆಗಳ ಪಾಲಿಗೆ ಸ್ವತಃ ಸಂಸ್ಕೃತವು ಬಂಡೆಗಲ್ಲಾಗಿತ್ತು ಎಂಬುದನ್ನು ಮತ್ತು ಕನ್ನಡ ಭಾಷೆಯನ್ನು ಸಂಸ್ಕೃತದ ಚೌಕಟ್ಟಿಗೆ ಸಿಲುಕಿಸುವ ಪ್ರಯತ್ನ ಮೂಲಭೂತವಾಗಿ ಪುರೋಹಿತಶಾಹಿ ಪ್ರೇರಣೆಯನ್ನು ಪಡೆದಿತ್ತು ಎಂಬುದನ್ನು ಮರೆಯುವಂತಿಲ್ಲ. ಈ ಸ್ಪಷ್ಟತೆ ಬಿ.ಎಂ.ಶ್ರೀ ಅವರಿಗಿದ್ದುದರಿಂದಲೇ ಸಂಸ್ಕೃತ ಕಾವ್ಯಮಾಲೆಯಿಂದ ಕನ್ನಡಕ್ಕೆ ಬಂದಿರುವ ಕಾಯಿಲೆಗಳನ್ನು ಆಂಗ್ಲಕಾವ್ಯವೇ ಪರಿಹರಿಸಬೇಕು ಎಂದು ತಮ್ಮ ಧಾರವಾಡದ ಭಾಷಣದಲ್ಲಿ ಹೇಳಿದ್ದರು. ಸಾಹಿತ್ಯದ ನೆಲೆಯಲ್ಲಿ ಹೇಳಿದರೂ ಪರೋಕ್ಷವಾಗಿ ಇದು ಶ್ರೀಯವರು ಕನ್ನಡ ಭಾಷೆಗೆ ಸಂಸ್ಕೃತದಿಂದ ತಗುಲಿದ ರೋಗವನ್ನು ಕುರಿತು ಮಾಡಿದ ಹೇಳಿಕೆಯೇ ಆಗಿತ್ತು.

ಬಿ.ಎಂ.ಶ್ರೀ ಅವರ ಒಟ್ಟು ಚಿಂತನೆಗಳನ್ನು ಕುರಿತ ಇದುವರೆಗಿನ ಚರ್ಚೆಗಳನ್ನು ಗಮನಿಸಿದಾಗ ಈ ಚರ್ಚೆಗಳ ಮೇಲೆ ಬಿ.ಎಂ.ಶ್ರೀ ಅವರ ವೈಯಕ್ತಿಕವಾದ ಮೂರು ಸಂಗತಿಗಳು ಅಗತ್ಯಕ್ಕಿಂತ ಹೆಚ್ಚು ಪ್ರಭಾವ ಬೀರಿದಂತೆ ತೋರುತ್ತದೆ. ಅವುಗಳೆಂದರೆ ಅವರ ಜಾತಿ, ಬ್ರಿಟಿಷ್ ವಸಾಹತು ಕುರಿತ ಮೃದು ಧೋರಣೆ ಮತ್ತು ರಾಜನಿಷ್ಠೆ. ಮುಖ್ಯವಾಗಿ ಭಾಷೆ ಸಂದರ್ಭದಲ್ಲಿ, ಸಂಸ್ಕೃತ ಭಾಷೆ ಕುರಿತ

ಅವರ ನಿಲುವುಗಳನ್ನು ಚರ್ಚಿಸುವಾಗ ಅವರು ಹುಟ್ಟಿದ ಬ್ರಾಹ್ಮಣಜಾತಿಯ ಹಿನ್ನೆಲೆ, ಇಂಗ್ಲಿಷ್ ಭಾಷೆ ಕುರಿತ ಅವರ ನಿಲುವುಗಳನ್ನು ಚರ್ಚಿಸುವಾಗ ಬ್ರಿಟಿಷ್ ವಸಾಹತು ಕುರಿತ ಅವರ ಮೃದು ಧೋರಣೆ ಪ್ರಭಾವ ಬೀರಿದಂತೆ ತೋರುತ್ತದೆ.

ಬಿ.ಎಂ.ಶ್ರೀ ಅವರ ಕಾಲಘಟ್ಟವನ್ನು ಗಮನಿಸಿದಾಗ ಆಗ ಸಂಸ್ಕೃತ ಬಲ್ಲ ವರ್ಗವೇ ಅಧಿಕಾರದ ಭಾಷೆಯಾಗಿದ್ದ ಇಂಗ್ಲಿಶನ್ನು ಅನುಸರಿಸತೊಡಗಿದ್ದು ಅರಿವಾಗುತ್ತದೆ. ಇಂತಹ ವರ್ಗವನ್ನು ಕನ್ನಡದತ್ತ ಒಲಿಸಿಕೊಳ್ಳುವ ಕಾರ್ಯತಂತ್ರದ ಭಾಗವಾಗಿಯೇ ಒಮ್ಮೆಗೆ ಸಂಸ್ಕೃತವನ್ನು ತಿರಸ್ಕರಿಸದೇ ಅದರ ಪರವಾದ ಮಾತುಗಳನ್ನು ಆಡುತ್ತಲೇ ಅನುಸಂಧಾನದ ಮಾರ್ಗದಲ್ಲಿ ಬಿ.ಎಂ.ಶ್ರೀ ಅವರು ನಡೆದರು ಎನ್ನುವುದು ಅರಿವಾಗುತ್ತದೆ. ಬಿ.ಎಂ.ಶ್ರೀ ಅವರ ಲೇಖನ ಮತ್ತು ಭಾಷಣಗಳಲ್ಲಿನ ಸಂಸ್ಕೃತ ಪರವಾದ ನುಡಿಗಳನ್ನು ಬಿಡಿ ಬಿಡಿಯಾಗಿ ವಾಚ್ಯಾರ್ಥದಲ್ಲಿ ನೋಡದೇ ಒಟ್ಟಾರೆ ಧ್ವನಿಯನ್ನು ಗ್ರಹಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಈ ಶತಮಾನದ ಮೊದಲ ಭಾಗದಲ್ಲಿ ಕನ್ನಡವನ್ನು ಕನಸಿ, ಕನ್ನಡವನ್ನು ಬೆಳೆಸಿದವರು ಬಿ.ಎಂ.ಶ್ರೀ ಎಂಬುದು ಚರಿತ್ರೆ ಧ್ವನಿಸುವ ಸತ್ಯವಾಗಿದೆ. ವಿಶೇಷವೆಂದರೆ ಬ್ರಿಟಿಷ್ ಚಕ್ರಾಧಿಪತ್ಯವನ್ನು ಒಪ್ಪಿಕೊಂಡು ಸೀಮಿತ ನೆಲೆಯಲ್ಲಿ ಸ್ವಾಯತ್ತತೆ ಅನುಭವಿಸುತ್ತಿದ್ದ ಮೈಸೂರೊಡೆಯರಿಗೆ ರಾಜಸೇವಾಸಕ್ತರಾಗಿ ಕೆಲಸ ಮಾಡಿದ ಬಿಎಂಶ್ರೀ, ಕನ್ನಡದ ಮೇಲೆ ಸಂಸ್ಕೃತ ಸಾಹಿತ್ಯದ ಹೇರಿಕೆಯನ್ನು ವಿರೋಧಿಸಿದ್ದು; ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಆಂಗ್ಲರ ಸಾಮ್ರಾಜ್ಯವಾದವನ್ನು ಒಪ್ಪಿಕೊಂಡಿದ್ದ ಅವರು, ಕನ್ನಡದ ಮೇಲಿದ್ದ ಸಂಸ್ಕೃತದ ಸಾಮ್ರಾಜ್ಯಶಾಹಿಯನ್ನು ತೀವ್ರವಾಗಿ ತಿರಸ್ಕರಿಸಿದ್ದು ವೈರುಧ್ಯದಂತೆ ತೋರುತ್ತದೆ. ವರ್ತಮಾನದ ಭಾಷಾವಿಜ್ಞಾನಿ ಡಿ.ಎನ್ ಶಂಕರಭಟ್ಟರ ಸಂಸ್ಕೃತ ಕುರಿತ ನಿಲುವು ಕೂಡ ಇದೇ ಆಗಿದೆ. ಇವರಿಗೂ ಕೂಡ ದೇಶಿ ಭಾಷೆಗಳಿಗೆ ಬಹುದೊಡ್ಡ ಕಂಟಕವಾಗಿರುವ ಇಂಗ್ಲಿಶಿನ ಬಗ್ಗೆ ದೊಡ್ಡ ತಕರಾರುಗಳಿಲ್ಲ. ಇದು ಮೇಲ್ವರ್ಗಗಳಿಂದ ಬಂದ ಚಿಂತಕರು ಪಾರಂಪರಿಕ ಪಾಪಪ್ರಜ್ಞೆಯಿಂದ ಬಿಡುಗಡೆಗೊಳ್ಳುವ ದಾರಿಯೇ ಎಂಬ ಪ್ರಶ್ನೆಯನ್ನು ಹುಟ್ಟಿಸುತ್ತಿದೆ.

೨.೨.೪ ಸಾಮಾಜಿಕ ನೆಲೆಯೂ ಅಂತರ್ಗತವಾದ ಚಿಂತನೆ

ಕನ್ನಡದ ಪರವಾಗಿ ಕೆಲಸ ಮಾಡಿದ ಹಲವು ಚಿಂತಕರಲ್ಲಿ ವೈರುಧ್ಯವೆನಿಸುವ ನಿಲುವುಗಳು ಕಾಣುತ್ತವೆ. ಯಾರನ್ನು ತಮ್ಮ ದೇಶದಿಂದ ಓಡಿಸಬೇಕೆಂದು ಭಾರತೀಯರು ಹೋರಾಡುತ್ತಿದ್ದರೋ, ಯಾವ ಭಾಷೆ ನಮ್ಮ ಭಾಷೆಗಳನ್ನು ನಾಶ ಮಾಡುತ್ತಿದೆಯೆಂದು ಜನ ಭಾವಿಸಿದ್ದರೋ ಆ ಜನರನ್ನು ಮತ್ತು ಆ ಭಾಷೆಯನ್ನು ಇವರು ವಿರೋಧಿಸಲಿಲ್ಲ. ಆದರೆ ಅವರು ವಿರೋಧಿಸುತ್ತಿದ್ದುದು ಕನ್ನಡದ ಮೇಲೆ ಯಜಮಾನಿಕೆ ತೋರುತ್ತಿದ್ದ ನೆರೆಯ ಸೋದರ ಭಾಷೆ ಅಥವಾ ಒಂದು ಕಾಲಘಟ್ಟದಲ್ಲಿ ಪ್ರಭುತ್ವದ ಭಾಷೆಯಾಗಿದ್ದ ಸಂಸ್ಕೃತ ಭಾಷೆಯನ್ನು. ಇಂತಹ ಚಿಂತಕರ ಯಾದಿಯಲ್ಲಿ ಇಂಗ್ಲಿಶರನ್ನು,

ಇಂಗ್ಲಿಶ್ ಭಾಷೆಯನ್ನು ವಿರೋಧಿಸದ, ಸಂಸ್ಕೃತದ ಬಗ್ಗೆ ತಕರಾರುಗಳಿದ್ದ ಬಿ.ಎಂ.ಶ್ರೀ ಅವರು ಪ್ರಮುಖರಾಗಿದ್ದಾರೆ. ಅವರ ಈ ವಿಶಿಷ್ಟ ನಿಲುವಿಗೆ ಅವರು ಬದುಕಿ ಕೆಲಸ ಮಾಡಿದ ಕಾಲದೇಶಗಳ ಚಾರಿತ್ರಿಕ ಒತ್ತಡಗಳೂ ಕಾರಣವಾಗಿವೆ.

ಈವರೆಗೂ ಬಿ.ಎಂ.ಶ್ರೀ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳನ್ನು ಪ್ರಧಾನವಾಗಿ ಸಾಹಿತ್ಯದ ನೆಲೆಯಲ್ಲಿಯೇ ಚರ್ಚಿಸಲಾಗಿದೆ. ಅವರ ಕಾಣಿಕೆ ಪದ್ಯ ಮತ್ತು 'ಭಾಷೆಯ ಮತ್ತು ಕಾವ್ಯಮಾಲೆಯ ಪೂರ್ವೋತ್ತರವನ್ನು ತಿಳಿದು, ಅವು ಮುಂದೆ ಶೋಭಿಸಿ ತಮ್ಮ ಸತ್ವದಿಂದಲೇ ಜನರು ಮೋಹಿಸುವಂತೆ ಮಾಡುವುದಕ್ಕಾಗಿ, ಎಲ್ಲರೂ ಅಭಿಮಾನಪಟ್ಟುಕೊಂಡು ಯೋಗ್ಯತಾನುಸಾರ ಸಹಾಯ ಮಾಡಬೇಕು' ಎನ್ನುವಂತಹ ಅವರ ನುಡಿಗಳೇ ಚರ್ಚೆಯ ಮುನ್ನೆಲೆಗೆ ಬಂದಿದ್ದು ಇದಕ್ಕೆ ಕಾರಣ. ಆದರೆ ಬಿ.ಎಂ.ಶ್ರೀ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಯಲ್ಲಿ ಸಾಮಾಜಿಕ ನೆಲೆಯೂ ಅಂತರ್ಗತವಾಗಿದೆ. ಸೆಕ್ಯುಲರ್ ಆದ ಸಮಾಜವಾದಿ ಮೌಲ್ಯಗಳು ಅವರ ಭಾಷೆ ಕುರಿತ ಚಿಂತನೆಯಲ್ಲಿದೆ. 'ನಾವು ಬಳಸತಕ್ಕ ಯಾವ ಭಾಷೆಯೇ ಆಗಲಿ, ಪೇಟೆಗೆ ಹೋಗಿ ವ್ಯಾಪಾರ ಮಾಡುವುದಕ್ಕೆ, ಕಾಗದ ಬರೆಯುವುದಕ್ಕೆ, ಪ್ರತಿದಿನದ ಕಾರ್ಯಾಚರಣೆಗೆ ಒದಗಿದರೆ ಸಾಲದು. ಭಾಷೆಯಿಂದ ಜನರ ಜೀವನ ಮೇಲ್ಪಟ್ಟು, ಅವರ ವಿಚಾರಶಕ್ತಿ ಹೆಚ್ಚಿ, ಅವರ ಜೀವನದಲ್ಲಿ, ಒಟ್ಟು ಜನಾಂಗದ ಜೀವನದಲ್ಲಿ, ಒದಗಬಹುದಾದ ಸಮಸ್ಯೆಗಳು ಪಾರಾಗಿ ಜನತೆಯೂ ದೇಶವೂ ಸ್ವರ್ಗಪಥಕ್ಕೆ ಹಾರುವ ಪಕ್ಷಿಯಂತೆ ಮೇಲಕ್ಕೆ ಮೇಲಕ್ಕೆ ಹೋಗಲು ಸಾಧಕವಾಗಬೇಕು'[೬] ಎಂದವರು ಪ್ರತಿಪಾದಿಸುತ್ತಾರೆ.

'ಭಾಷೆಯೆನ್ನುವುದು ನಿತ್ಯಗಟ್ಟಳೆಯ ವ್ಯಾಪಾರಕ್ಕಾಗಿ ಇರುವುದು ಮಾತ್ರವಲ್ಲ. ಅದರ ಮುಖ್ಯಕಾರ್ಯ ಒಂದು ಜನಾಂಗವನ್ನು ಸಂಸ್ಕಾರದಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗಲು ಸಾಧಕವಾಗುವುದು. ಆನಂದರಸವನ್ನು ಕಲೆಯ ಮೂಲಕ ಹೃದಯಕ್ಕೆ ತುಂಬುವುದು. ಆತ್ಮೋದ್ಧಾರಕ್ಕೆ ಸೋಪಾನವಾಗುವುದು– ಒಂದು ಇಡಿಯ ಜನಾಂಗವನ್ನು; ಅಲ್ಲೊಬ್ಬರನ್ನು ಇಲ್ಲೊಬ್ಬರನ್ನಲ್ಲ; ಕೇವಲ ವಿದ್ಯಾಪಾರಂಗತರನ್ನಲ್ಲ; ಜನಸಾಮಾನ್ಯರನ್ನು; ನಾಡಿನ ಗಂಡಸರು, ಹೆಂಗಸರು, ಮಕ್ಕಳನ್ನು.'[೬] ಎನ್ನುವಲ್ಲಿ ಕನ್ನಡ ಅಸ್ಮಿತೆಯ ಚಿಂತನೆಯಲ್ಲಿ ಸಾಮಾಜಿಕ ನೆಲೆ ಸ್ಪಷ್ಟವಾಗಿದೆ.

ಬಿ.ಎಂ.ಶ್ರೀ ಅವರು ಕನ್ನಡ ಭಾಷೆಯನ್ನು ಜಾತ್ಯಾತೀತ ಮತ್ತು ಧರ್ಮಾತೀತ ನೆಲೆಯಲ್ಲಿ ಕಟ್ಟ ಬಯಸುತ್ತಾರೆ. ಜೈನ, ಬ್ರಾಹ್ಮಣ, ವೀರಶೈವ ಹೀಗೆ ಎಲ್ಲ ಸಮುದಾಯಗಳಿಂದ ಬಂದ ಕವಿಗಳು ರಚಿಸಿದ ಸಾಹಿತ್ಯದಂತೆ ಕ್ರೈಸ್ತಕಾವ್ಯಮಾಲೆಯೂ, ಮಹಮ್ಮದೀಯರ ಕಾವ್ಯಮಾಲೆಯೂ ಕನ್ನಡದ ಭಾಗವಾಗಬೇಕೆಂದು ಅವರು ಬಯಸುತ್ತಾರೆ. "ಕನ್ನಡಿಗರಾದ ನಾವು ಸಂಘಟಿತರಾಗಬೇಕು. ನಮ್ಮ ನಾಡು ನುಡಿಯ ಸೇವೆ ಸಲ್ಲಿಸಲು ಮುಂದುವರಿದಾಗ ಹಿಂದೂ ಮುಸಲ್ಮಾನ, ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಸಂಕುಚಿತಾಭಿಪ್ರಾಯಗಳನ್ನು ಬದಿಗೊತ್ತಿ ನಮ್ಮ ಕುಲ ಕನ್ನಡಕುಲ, ಗೋತ್ರ ಸೂತ್ರಗಳೆಲ್ಲವೂ

ಕನ್ನಡವೇ, ನಮಗೆ 'ಕನ್ನಡ ಗೆಲ್ಗೆ ಕನ್ನಡ ಬಾಳ್ಗೆ' ಎಂಬುದೇ ನಿತ್ಯವೂ ಪಠಿಸುವ ಪಂಚಾಕ್ಷರ ಮಹಾಮಂತ್ರವೆಂದು ಭಾವಿಸಬೇಕು. 'ಒಂದು ಭಾಷೆಯಾಡುವವರೆಲ್ಲ ಒಂದು ಜಾತಿ'[೭] ಎನ್ನುವ ಅಚಲ ನಂಬಿಕೆ ಅವರದು.

ಬಿ.ಎಂ.ಶ್ರೀ ಅವರ ಕನ್ನಡ ಭಾಷೆ ಕುರಿತ ಚಿಂತನೆ ಸಂಕುಚಿತವಾದುದಲ್ಲ. 'ಈ ಪುಣ್ಯ ಕ್ಷೇತ್ರದಲ್ಲಿ ಬೇರೂರಿ ಆಕಾಶ ಹಬ್ಬಿರುವ ಎಲ್ಲಾ ಪ್ರದೇಶಗಳಿಂದಲೂ ಗಾಳಿಯನ್ನೂ ಬೆಳಕನ್ನೂ ಆಹಾರವನ್ನೂ, ತೇಜಸ್ಸನ್ನೂ ಹೀರಿಕೊಳ್ಳುವ ಉದಾರ ಹೃದಯವೊಂದನ್ನು'[೮] ಕನ್ನಡ ಮನಸ್ಸು ಹೊಂದಬೇಕೆಂಬುದು ಶ್ರೀ ಅವರ ಹಂಬಲವಾಗಿದೆ. ಬಿ.ಎಂ.ಶ್ರೀ ಅವರ ಈ ಎಲ್ಲ ಚಿಂತನೆಗಳು ಸಮಕಾಲೀನ ಸಂದರ್ಭದಲ್ಲಿ ದೊಡ್ಡ ಮೌಲ್ಯಗಳಾಗಿ ಕಂಡುಬರುತ್ತವೆ.

ದೇಶಿ ಭಾಷೆಯ ಕುರಿತಂತೆ ಮೂರು ಬಗೆಯ ನಿಲುವುಗಳು ಇರಲು ಸಾಧ್ಯವಿದೆ. ಅವುಗಳೆಂದರೆ:-

೧. ನಮ್ಮ ಭಾಷೆಯೇ ಸರ್ವಶ್ರೇಷ್ಠ ಎನ್ನುವ ಮತ್ತು ಅನ್ಯಭಾಷೆಗಳನ್ನು ಸ್ವೀಕರಿಸದಿರುವ ಮೂಲಭೂತವಾದಿತನ.

೨. ನಮ್ಮ ಭಾಷೆ ನಾಶವಾಗುತ್ತಿರುವ ಭಾಷೆ. ಇದರ ಬಗ್ಗೆ ಚಿಂತಿಸುವುದಕ್ಕಿಂತ ಇಂಗ್ಲಿಷನ್ನು ಅನುಸರಿಸುವುದೇ ಉತ್ತಮ ಎನ್ನುವ ತಮ್ಮ ಭಾಷೆಯ ಬಗ್ಗೆ ಕಾಳಜಿಯಿಲ್ಲದ ಹೊಂದಾಣಿಕೆಯ ಮಾರ್ಗ.

೩. ಮಾಧ್ಯಮವಾಗಿ ತಮ್ಮ ಭಾಷೆಯನ್ನೇ ಬಳಸುತ್ತ ಅದರ ಉಳಿವಿಗೆ ಸರ್ವಪ್ರಯತ್ನ ಮಾಡುವತ್ತ ಭಾಷೆಯಾಗಿ ಇಂಗ್ಲಿಷನ್ನು ಕಲಿಯುವ ಅನುಸಂಧಾನದ ಮಾರ್ಗ.

ಬಿ.ಎಂ.ಶ್ರೀ ಅವರು ಮೂರನೇ ನಿಲುವಿನವರು. ಕನ್ನಡದ 'ಭಂಡಾರವನ್ನೆಲ್ಲಾ ಕೂಡಿಟ್ಟು ಕಾಪಾಡಿಕೊಂಡು ಮುಂದೆ ಹೆಚ್ಚಿಸುತ್ತಾ ಹೋಗುವುದು ಬಿಟ್ಟು, ಇದ್ದಬದ್ದದ್ದನ್ನೆಲ್ಲಾ ಕೆರೆಯಲ್ಲಿ ಮುಳುಗಿಸಿ ಕೈ ಬೀಸಿಕೊಂಡು ಮನೆಗೆ ಬರುವಷ್ಟು ಮರುಳತನ ಎಲ್ಲಾದರೂ ಉಂಟೆ?'[೯] ಎಂದು ಕನ್ನಡವನ್ನು ಕೈಬಿಟ್ಟು ಇಂಗ್ಲಿಶಿನ ಹಿಂದೆ ಹೋಗುವವರನ್ನು ಅವರು ಆಕ್ರೋಶದಿಂದ ಪ್ರಶ್ನಿಸುತ್ತಾರೆ. 'ಕನ್ನಡನಾಡಿಗೆ ಕನ್ನಡವೇ ಗತಿ ಅನ್ಯಥಾ ಶರಣಂ ನಾಸ್ತಿ." ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ.[೧೦] ಎನ್ನುವ ಖಚಿತವಾದ ಗಟ್ಟಿನಿಲುವು ಶ್ರೀ ಅವರದು. ಬಿ.ಎಂ.ಶ್ರೀ ಶಿಷ್ಯರಾದ ಕುವೆಂಪು ಅವರನ್ನು ಒಳಗೊಂಡಂತೆ ಮುಂದಿನ ಕಾಲಘಟ್ಟದ ಕನ್ನಡದ ಬಹುಮುಖ್ಯ ಚಿಂತಕರೆಲ್ಲ ಈ ಆರೋಗ್ಯಕಾರಿ ನಿಲುವನ್ನೇ ಪ್ರತಿಪಾದಿಸಿರುವುದನ್ನು ಗಮನಿಸಿದಾಗ ಈ ಚಿಂತನೆಯ ಮಹತ್ವ ಅರಿವಾಗುತ್ತದೆ.

೨.೩ ಕುವೆಂಪು ಅವರ ಚಿಂತನೆಗಳು

೨.೩.೧ ಪೀಠಿಕೆ

ಇಪ್ಪತ್ತನೆಯ ಶತಮಾನವು ಕನ್ನಡ ಭಾಷೆಯು ಹಲವು ಸ್ತರಗಳಲ್ಲಿ ವ್ಯಾಪಕತೆಯನ್ನು ಪಡೆದ ತಿರುವಿನ ಕಾಲಘಟ್ಟವಾಗಿದೆ. ಈ ಕಾಲಘಟ್ಟದಲ್ಲಿಯೇ ಬ್ರಿಟಿಷರು ತೆರೆದ ಶಾಲೆಗಳಿಂದ, ಶತಮಾನದ ಉತ್ತರಾರ್ಧದಲ್ಲಿ ನಮ್ಮದೇ ಸರ್ಕಾರಗಳು ಶಿಕ್ಷಣಕ್ಕೆ ನೀಡಿದ ಒತ್ತಿನಿಂದಾಗಿ ಆವರೆಗೂ ಶಿಕ್ಷಣ ಕ್ಷೇತ್ರದಲ್ಲಿ ಸಮಾನ ಅವಕಾಶ ಸಿಗದ ಬಹುಸಂಖ್ಯಾತ ಶೂದ್ರ ಸಮುದಾಯಗಳು ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣವನ್ನು ಪಡೆಯಲು ಅನುವಾಯಿತು. ಶಿಕ್ಷಣ ಪಡೆದ ಈ ಸಮುದಾಯ ಸಹಜವಾಗಿಯೇ ಸಾಹಿತ್ಯಕ್ಷೇತ್ರದತ್ತಲೂ ತೊಡಗಿಕೊಂಡಿತು. ಈ ಕಾಲಘಟ್ಟ ರೂಪಿಸಿದ ರೂಪಕಪ್ರತಿಭೆ ಕುವೆಂಪು (೧೯೦೪-೧೯೯೪). ಕುವೆಂಪು ಅವರು ಬಹುಸಂಕೀರ್ಣವಾದ ಪ್ರತಿಭೆಯೂ ಹೌದು. ಭಾಷೆಗೆ ಸಂಬಂಧಿಸಿದ ಕುವೆಂಪು ಅವರ ಚಿಂತನೆಗಳಲ್ಲಿಯೂ ಈ ಸಂಕೀರ್ಣತೆಯನ್ನು ಕಾಣಬಹುದು. ಇಂಗ್ಲಿಶಿನಲ್ಲಿ ಬರೆಯಲು ಆರಂಭಿಸಿ ಕನ್ನಡಕ್ಕೆ ಮರಳಿದ, ಇಂಗ್ಲಿಶ್ ಕಲಿಯದಿದ್ದರೆ ತಾನು ನಾಶವಾಗುತ್ತಿದ್ದೆ ಎನ್ನುವ ಹೊತ್ತಿಗೆ ಅದಕ್ಕೆ ತದ್ವಿರುದ್ಧ ಎನಿಸುವ ಇಂಗ್ಲಿಶು ಕನ್ನಡದ ಮಕ್ಕಳ ಮೇಲಿನ ಕಲ್ಲುಚಪ್ಪಡಿ ಎಂದು ಎಚ್ಚರಿಸುವ, ಕನ್ನಡಭಾಷೆಯ ಕುರಿತು ಕಡು ಅಭಿಮಾನದ ಸಾಹಿತ್ಯ ರಚಿಸುವ ಹೊತ್ತಿನಲ್ಲೇ ಸಂಸ್ಕೃತಭೂಯಿಷ್ಠವಾಗಿ ಬರೆಯುವ ಈ ಪ್ರತಿಭೆಯ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳಲು ಈ ಚಿಂತನೆಗಳ ಆಳವಾದ ಅಧ್ಯಯನವಲ್ಲದೆ ಈ ಪ್ರತಿಭೆಯ ಹಿನ್ನೆಲೆ, ಆ ಕಾಲಘಟ್ಟದ ಸಂಕೀರ್ಣತೆ ಎಲ್ಲದರ ಅರಿವಿನ ಅಗತ್ಯವಿದೆ.

ಮನುಷ್ಯಚೇತನದ ಬಹುಮುಖಿ ವಿಕಾಸಕ್ಕೆ ಸ್ವಾತಂತ್ರ್ಯ ಮತ್ತು ಈ ಸ್ವಾತಂತ್ರ್ಯವನ್ನು ಖಾತರಿಗೊಳಿಸುವ ರಾಜಕೀಯ ವ್ಯವಸ್ಥೆಯಾದ ಪ್ರಜಾಪ್ರಭುತ್ವವೇ ಆತ್ಯಂತಿಕ ಮಾದರಿಯಾಗಿದೆ. ಕನ್ನಡವನ್ನು ಕಟ್ಟಿ ಬೆಳೆಸುವುದರಲ್ಲಿ ಬಿ.ಎಂ.ಶ್ರೀ ಅವರ ಚಿಂತನೆಗಳು ಮತ್ತು ಕ್ರಿಯಾಶೀಲತೆಯ ಮಹತ್ವವನ್ನು ಅರಿಯುವಾಗಲೂ ಬ್ರಿಟಿಶ್ ಮತ್ತು ಮೈಸೂರು ರಾಜಪ್ರಭುತ್ವವನ್ನು ಅವರು ಒಪ್ಪಿಕೊಂಡಿದ್ದು ಅವರ ಬಹುದೊಡ್ಡ ಮಿತಿಯಾಗಿ ಕಂಡುಬರುತ್ತದೆ. ತಮ್ಮ ಗುರುವಿನ ಈ ಮಿತಿಯನ್ನು ಕುವೆಂಪು ದಿಟ್ಟತೆಯಲ್ಲಿ ಮೀರಿದರು. ಮೈಸೂರು ರಾಜಪ್ರಭುತ್ವದ ಸಂಕೇತವೆಂದೂ ಪ್ರಜಾಪ್ರಭುತ್ವದ ಹೊಸ ಸಮಾಜ ನಿರ್ಮಾಣದಲ್ಲಿ ದೊಡ್ಡ ತಡೆಯೆಂದೂ ಕುವೆಂಪು ಭಾವಿಸಿದ್ದರು. ಕುವೆಂಪು ಅವರ ವಿಚಾರ ಸಾಹಿತ್ಯದಲ್ಲಿ ರಾಜಕೀಯ ನಂಬಿಕೆಯಾಗಿ ಪ್ರಜಾಪ್ರಭುತ್ವ ಪರವಾದ ನಿಲುವು ಅಂತರ್ಗತವಾಗಿದೆ.

ಮಾತೃಭಾಷೆಯ ಮಹತ್ವವನ್ನು ತಮ್ಮ ಜೀವಮಾನದುದ್ದಕ್ಕೂ ಪ್ರತಿಪಾದಿಸುತ್ತ, ಶಿಕ್ಷಣಮಾಧ್ಯಮವಾಗಿ ಮಾತೃಭಾಷೆಯನ್ನು ಜಾರಿಗೆ ತರಬೇಕೆಂದು ಬಲವಾಗಿ ಆಗ್ರಹಿಸುತ್ತ ಬಂದವರು

ಕುವೆಂಪು ಅವರು. ಆರಂಭದಿಂದಲೂ ಶಿಕ್ಷಣದಿಂದ ವಂಚಿತವಾಗಿ ಆಗಷ್ಟೇ ಅದಕ್ಕೆ ತೆರೆದುಕೊಳ್ಳುತ್ತಿದ್ದ ಮಲೆನಾಡಿನ ಶೂದ್ರಸಮುದಾಯದಿಂದ ಬಂದ ಕುವೆಂಪು, ಮಾತೃಭಾಷೆ ಕನ್ನಡದ ಪರವಾಗಿ ತಳೆದ ಗಟ್ಟಿನಿಲುವು ಶೂದ್ರ ಮತ್ತು ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳಿಗೆ ಮಾತೃಭಾಷೆಯಿಂದಲೇ ಉನ್ನತಿ ಸಾಧ್ಯ ಎಂಬ ಖಚಿತ ನಂಬಿಕೆಯಿಂದ ಹೊರಟಂತೆ ಕಾಣುತ್ತದೆ.

ಕುವೆಂಪು ಅವರು ಇಪ್ಪತ್ತನೆಯ ಶತಮಾನದ ಕನ್ನಡದ ಬಹುದೊಡ್ಡ ಸಾಹಿತಿ. ಆದರೆ ಅವರ ಚಿಂತನೆಗಳ ಮಹತ್ವವಿರುವುದು ಅವರ ಚಿಂತನೆಗಳು ಕೇವಲ ಸಾಹಿತ್ಯವನ್ನು ಮಾತ್ರ ಪ್ರಭಾವಿಸಲಿಲ್ಲ ಎನ್ನುವುದು. ಕರ್ನಾಟಕದ ಭಾಷಾಚಳುವಳಿ, ರೈತಚಳುವಳಿ, ದಲಿತ ಚಳುವಳಿ ಹಾಗೂ ಬಂಡಾಯ ಸಾಹಿತ್ಯ ಚಳುವಳಿಗಳ ಹಿಂದೆ, ಕುವೆಂಪು ಚಿಂತನೆಯ ನೇರ ಹಾಗೂ ಪರೋಕ್ಷ ಪ್ರಭಾವವಿರುವುದನ್ನು ಈಗಲೂ ಗುರುತಿಸಬಹುದು. ಕರ್ನಾಟಕದ ಹಲವು ಚಳುವಳಿಗಳನ್ನು ಪ್ರಭಾವಿಸಿದ ಕುವೆಂಪು ಚಳುವಳಿ ಕುರಿತ ಸಾಮಾನ್ಯ ವ್ಯಾಖ್ಯಾನದಲ್ಲಿ ಆ್ಯಕ್ಟಿವಿಸ್ಟ್ ಆಗಿರಲಿಲ್ಲ. ಕಾರಂತರಂತೆ ಅವರು ಬೀದಿಗಿಳಿದು ಹೋರಾಡಿದವರಲ್ಲ. ಆದರೆ ಸಮಾಜ ಬದಲಾಗಬೇಕು, ಸಾಮಾನ್ಯನೂ ಘನತೆಯಿಂದ ಬದುಕುವಂತಾಗಬೇಕು ಎನ್ನುವುದು ಅವರ ಹಂಬಲವಾಗಿತ್ತು. ಈ ಕಾಳಜಿ ಅವರ ಸಾಹಿತ್ಯದಲ್ಲೆಲ್ಲ ಸುಪ್ತಪ್ರವಾಹವಾಗಿ ಹರಿದಿದೆ. ಲೋಕ ಬದಲಿಸಬೇಕೆಂಬ ದೃಢವಾದ ನಂಬಿಕೆ ಹಾಗೂ ಕ್ರಿಯಾಶೀಲತೆಯೇ ಕುವೆಂಪು ಅವರ ಸಾಹಿತ್ಯದ ಜೀವಂತಿಕೆಗೆ ಕಾರಣವಾಗಿದೆ.

೨.೩.೨ ಅನುಮೋದಿಸುವ ಮತ್ತು ದೂರವಿರಿಸುವ ಇಂಗ್ಲಿಶುಗಳ ತಾರತಮ್ಯ ಪ್ರಜ್ಞೆ

ಕುವೆಂಪು ಅವರ ಸಂದರ್ಭದಲ್ಲಿ ಇಂಗ್ಲಿಶನ್ನು ಕಲಿತು ಬ್ರಿಟೀಷರ ಆಡಳಿತದಲ್ಲಿ ಸರ್ಕಾರಿ ಹುದ್ದೆಗಳನ್ನು ಪಡೆಯುತ್ತಿದ್ದವರೆಲ್ಲರೂ ಬಹುಪಾಲು ಮೇಲ್ಜಾತಿಯ ಜನರೇ ಆಗಿದ್ದರು. ಇದು ಅವರ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಸಹಕಾರಿಯಾಗಿತ್ತು. ಆದರೆ ತಮ್ಮ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಎತ್ತರಿಸಿಕೊಳ್ಳಲು ಇಂಗ್ಲಿಶನ್ನು ಕಲಿಯುವುದು ಒಂದೇ ಶೂದ್ರ ಸಮುದಾಯಗಳಿಗೆ ಬಿಡುಗಡೆಯ ದಾರಿ ಎಂದು ಕುವೆಂಪು ಭಾವಿಸದಿರುವುದು ಗಮನಾರ್ಹ. ಶಿಕ್ಷಣ ಮತ್ತು ಸಾಹಿತ್ಯ ಅಭಿವ್ಯಕ್ತಿಯ ಆಯಾಮಗಳಲ್ಲಿ ಮನೆಮಾತು ಮತ್ತು ಪರಿಸರದ ಭಾಷೆಗಳ ಮಹತ್ವದ ಬಗ್ಗೆ ಅವರು ಸದಾ ಚಿಂತಿಸುತ್ತಿದ್ದರು.

ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಈ ಮುಂದಿನ ಮಾತುಗಳನ್ನು ಗಮನಿಸಬೇಕು. "ನಾವು ಯಾವ ಭಾಷೆಯಲ್ಲಿ ಹುಟ್ಟಿ ಬೆಳೆದಿದ್ದೇವೆಯೋ ಅದರಲ್ಲಿ ನಮಗೆ ಪ್ರಭುತ್ವ ಬರುವಂತೆ, ವಿಷಯಗಳು ಸ್ಪಷ್ಟವಾಗಿ ಗೋಚರಿಸುವಂತೆ, ಅನ್ಯಭಾಷೆಯಲ್ಲಿ ಗೋಚರಿಸುವುದಿಲ್ಲ. ಸ್ವತಂತ್ರವಾದ ಆಲೋಚನೆ ಪರಭಾಷೆಯಲ್ಲಿ ಸಾಧ್ಯವಿಲ್ಲ.. .. ಎಲ್ಲಿಯವರೆಗೆ ನಾವು ಅನ್ಯಭಾಷೆಯಲ್ಲಿ ಜ್ಞಾನಬೋಧೆಯನ್ನು ನಡೆಸುತ್ತಾ ಹೋಗುತ್ತೇವೆಯೋ ಅಲ್ಲಿಯವರೆಗೆ ನಾವು ಅನ್ಯರು ಹೇಳಿದುದನ್ನು ತೆಗೆದುಕೊಂಡು ಬಳಸಬಲ್ಲೆವೇ ಹೊರತು ಹೊಸದನ್ನು ಸೃಷ್ಟಿ ಮಾಡುವುದು ಕಷ್ಟಸಾಧ್ಯವಾಗುತ್ತದೆ."[೧೧]

ಇಲ್ಲಿ ಕುವೆಂಪು ಅವರ ಗಮನವಿರುವುದು ‘ಹೊಸದನ್ನು ಸೃಷ್ಟಿ’ಸುವುದರ ಕಡೆಗೆ. ಅಂದರೆ ವ್ಯಕ್ತಿಯ ಸೃಜನಶೀಲ ವಿಕಸನ ಕುವೆಂಪು ಅವರಿಗೆ ಮುಖ್ಯವಾದುದಾಗಿತ್ತು. ‘ಇನ್ನು ಮುಂದೆ ಇಂಗ್ಲಿಶ್ ಪುಸ್ತಕಗಳನ್ನು ಕನ್ನಡದಲ್ಲಿಯೇ ಪಾಠ ಹೇಳಬೇಕು. .. ಪರೀಕ್ಷೆಯಲ್ಲಿ ಉತ್ತರಗಳನ್ನು ಕನ್ನಡದಲ್ಲಿ ಬರೆಯಬೇಕು. ಇದರಿಂದ ದೇಶಕ್ಕೆ ಕ್ಷೇಮ. ಸಹಸ್ರಾರು ವಿದ್ಯಾರ್ಥಿಗಳ ಶ್ರೇಯಸ್ಸೂ ಆಗುತ್ತದೆ’[೧೨] ಎನ್ನುವಷ್ಟರ ಮಟ್ಟಿಗೆ ಕಲಿಕೆಯಲ್ಲಿ ಇಂಗ್ಲಿಶ್ ಅನಗತ್ಯ ಎಂದು ಅವರು ಪ್ರತಿಪಾದಿಸುತ್ತಾರೆ. ಅನಂತಮೂರ್ತಿ ಅವರು ಕೂಡ ಈ ಬಗೆಯ ಅಭಿಪ್ರಾಯ ವ್ಯಕ್ತಪಡಿಸಿದರು. ಪಶ್ಚಿಮದ ಕೆಲವು ದೇಶಗಳಲ್ಲಿರುವಂತೆ, ಮುಖ್ಯವಾಗಿ ಸಂಶೋಧನೆಯ ಸಂದರ್ಭದಲ್ಲಿ ಮೂಲ ಭಾಷೆಯಲ್ಲಿ ಓದಿ, ಗ್ರಹಿಸಿ ತಮ್ಮ ಭಾಷೆಯಲ್ಲಿ ಅಭಿವ್ಯಕ್ತಿ ಮಾಡಬೇಕು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಕುವೆಂಪು ಮತ್ತು ಅನಂತಮೂರ್ತಿ ಇಬ್ಬರೂ ವಿದ್ಯಾರ್ಥಿಗಳ ಪ್ರಜ್ಞೆಯ ವಿಕಾಸಕ್ಕೆ ಪೂರಕವಾದ ಭಾಷಾವಿಜ್ಞಾನಿಗಳು ಮಂಡಿಸುವ ಪ್ರಮೇಯವನ್ನು ಇಲ್ಲಿ ಅನುಮೋದಿಸುತ್ತಿದ್ದಾರೆ. ಇದನ್ನು ಸಾಹಿತ್ಯಕ ನೆಲೆಯ ಭಾಷಾಭಿವ್ಯಕ್ತಿವಾದವೆನ್ನಬಹುದು.

ಆದರೆ ಕುವೆಂಪು ಅವರು ಸಾರಾಸಗಟಾಗಿ ಇಂಗ್ಲಿಶ್ ಭಾಷಾಕಲಿಕೆಯನ್ನು ವಿರೋಧಿಸುವುದಿಲ್ಲ. “ನಮ್ಮ ಕರ್ಣಾಟಕದಲ್ಲಿ ಎಷ್ಟು ಮಂದಿ ವಿದ್ಯಾರ್ಥಿಗಳು ಅಖಿಲ ಭಾರತ ರಂಗಕ್ಕೆ ಹೋಗುತ್ತಾರೆ? ಎಷ್ಟು ಮಂದಿ ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ರಂಗಕ್ಕೆ ಪ್ರವೇಶಿಸುತ್ತಾರೆ? ಎಂಬ ವಿಚಾರವನ್ನು ಮನನ ಮಾಡಬೇಕು. ಅಖಿಲ ಭಾರತೀಯ ರಂಗಕ್ಕೆ ಪ್ರವೇಶಿಸುವವರಿಗೆ ಇಂಗ್ಲಿಶ್ ಬೇಕು. ಅಂತಹ ವಿದ್ಯಾರ್ಥಿಗಳ ಪ್ರಮಾಣ ಎಷ್ಟು? ಅಂತರರಾಷ್ಟ್ರೀಯ ಸ್ಥಾನಮಾನಗಳಲ್ಲಿ ರಾಜಕೀಯ, ವೈಜ್ಞಾನಿಕ ಇತ್ಯಾದಿ ಶಾಖೆಗಳಿಗೆ ಪ್ರವೇಶಿಸುವವರಿಗೆ ಇಂಗ್ಲಿಶ್ ಭಾಷೆಯ ಜ್ಞಾನ ಅವಶ್ಯಕ. ಇನ್ನು ಕರ್ಣಾಟಕದಲ್ಲಿಯೇ ಇದ್ದು ತಮ್ಮ ಜೀವನವನ್ನು ರೂಪಿಸಿಕೊಳ್ಳುವವರೂ ಇದ್ದಾರೆ. ಈ ಮೂರು ಭಾಗದ ವಿದ್ಯಾರ್ಥಿಗಳನ್ನು ವಿಭಾಗ ಮಾಡಿಕೊಂಡು ಯಾರು ಯಾರಿಗೆ ಎಷ್ಟು ಇಂಗ್ಲಿಶ್ ಬೇಕು ಎಂಬುದನ್ನು ನಿಷ್ಕರ್ಷಿಸಬೇಕು”[೧೩] ಎಂದು ಅಗತ್ಯವಿರುವ ವಿದ್ಯಾರ್ಥಿಗಳಿಗೆ ಮಾತ್ರ ಇಂಗ್ಲಿಶ್ ಭಾಷಾ ಕಲಿಕೆಯನ್ನು ಸೂಚಿಸುತ್ತಾರೆ.

ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದಂತಹ ಮೂಲಭೂತ ಅವಶ್ಯಕತೆಗಳನ್ನು ದೇಶದ ಪ್ರತಿಯೊಬ್ಬ ಪ್ರಜೆಗೂ ಒದಗಿಸುವುದು ನಮ್ಮ ಸರ್ಕಾರಗಳ ಜವಾಬ್ದಾರಿಯಾಗಿದೆ. ಈ ಕಾರಣದಿಂದಲೇ ಒಟ್ಟು ಜನಸಮುದಾಯಕ್ಕೆ ಹಿತವೆನಿಸುವಂತಹ ಶೈಕ್ಷಣಿಕ ನೀತಿಗಳನ್ನು ತರುವುದು ಸರ್ಕಾರಕ್ಕೆ ಸಾಧ್ಯ ಎನ್ನುವ ನಂಬಿಕೆಯಿತ್ತು. ಸ್ವಾತಂತ್ರ್ಯ ಬಂದ ಎರಡು–ಮೂರು ದಶಕಗಳವರೆಗೂ ದೇಶದ ಜನರಲ್ಲಿ ಈ ನಂಬಿಕೆ ದೃಢವಾಗಿತ್ತು. ಪ್ರಜಾಪ್ರಭುತ್ವ ದೇಶದ ಸರ್ಕಾರಗಳು ನಿರ್ವಹಿಸಬೇಕಾದ ಜವಾಬ್ದಾರಿಗಳು ಮತ್ತು ಅವು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುತ್ತವೆ ಎನ್ನುವ ವಿಶ್ವಾಸ ಕುವೆಂಪು ಅವರ ಚಿಂತನೆಗೆ ತಳಹದಿಯನ್ನು ಒದಗಿಸಿದೆ.

ಶಿಕ್ಷಣ ಮಾಧ್ಯಮವನ್ನು ನಿರ್ಧರಿಸುವ ಅಧಿಕಾರ ಸರ್ಕಾರಗಳಿಗೆ ಮತ್ತು ತಮ್ಮ ಇಷ್ಟದ ಭಾಷೆಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ವಿದ್ಯಾರ್ಥಿಗಳಿಗೂ ಇಲ್ಲದಿರುವ ಸಂದರ್ಭದಲ್ಲಿ ಶಿಕ್ಷಣ ವ್ಯವಸ್ಥೆಯಿದೆ. ಒಬ್ಬ ವಿದ್ಯಾರ್ಥಿಯ ಆಸಕ್ತಿಗೆ ಅನುಗುಣವಾಗಿ ಆತನಿಗೆ ಆಯ್ಕೆಯ ಸ್ವಾತಂತ್ರ್ಯವಿದ್ದಾಗಿನ ಸಂದರ್ಭದಲ್ಲಿ ಅವನಿಗೆ ಬೇಕಾದ ಇಂಗ್ಲೀಶಿನ ಸ್ವರೂಪ ನಿರ್ಧರಿಸಿಕೊಳ್ಳಲು ಸಾಧ್ಯ. ಆದರೆ ಜಾಗತೀಕರಣೋತ್ತರ ಸಂದರ್ಭದಲ್ಲಿ ಎಲ್ಲರಿಗೂ ಏಕಬಗೆಯ ಇಂಗ್ಲಿಷಿನ ಅನಿವಾರ್ಯತೆಯನ್ನು ಕಾರ್ಪೊರೆಟ್ ಶಕ್ತಿಗಳು ಸೃಷ್ಟಿಸಿವೆ. ಇವುಗಳ ಆಧುನಿಕ ಪಳಗಿಸುವಿಕೆ ಹೇಗಿದೆಯೆಂದರೆ, ಒಂದು ಮೂಸೆಗೆ ಬೇಕಾದ ರೀತಿಯಲ್ಲಿ ತಮ್ಮ ಮಕ್ಕಳು ತಯಾರಾಗುವುದೇ ಹೆಗ್ಗಳಿಕೆ ಎಂಬ ಮನೋಭಾವವನ್ನು ಇವು ಪೋಷಕರಲ್ಲಿ ಬೆಳೆಸುತ್ತಿದೆ. ಮುಂದುವರೆದು ವಿದ್ಯಾರ್ಥಿಗಳೂ ಈ ಮನೋಭಾವ ಹೊಂದುತ್ತಾರೆ. ಖ್ಯಾತ ಚಿಂತಕ ಇವಾನ್ ಇಲ್ಲಿಚ್ ಇದನ್ನೇ 'ಸ್ಕೂಲಿಂಗ್' ಎಂದು ಕರೆಯುತ್ತಾರೆ. ಈಗ ಬಹುತೇಕ ಎಲ್ಲರ ಕನಸೂ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗ ಹಿಡಿಯುವುದು, ಅಮೇರಿಕಕ್ಕೆ ಹೋಗುವುದು, ಸಾಧ್ಯವಾದರೆ ಅಲ್ಲಿಯೇ ನೆಲೆಸುವುದಾಗಿದೆ. ಈ ಕನಸಿನ ಸಾಕಾರಕ್ಕೆ ಇಡೀ ಸಮಾಜವೇ ಸಮೂಹಸನ್ನಿಯಂತೆ ಇಂಗ್ಲಿಶ್ ಮಾಧ್ಯಮದ ಹಿಂದೆ ಬಿದ್ದಿರುವ ಪ್ರಸ್ತುತ ಸಂದರ್ಭದಲ್ಲಿ ಕುವೆಂಪು ಅವರ ಚಿಂತನೆ ಒಂದು ಸಾಂಸ್ಕೃತಿಕ ಎಚ್ಚರಿಕೆಯಂತಿದೆ.

ಕುವೆಂಪು ಇಂಗ್ಲಿಶಿನ ಮತ್ತು ಕೆಲಮಟ್ಟಿಗೆ ಹಿಂದಿಯ ಅಪಾಯದ ಕುರಿತು ಬಹು ಗಂಭೀರರಾಗಿರುವುದು ಈ ಕುರಿತ ಅವರ ಕಠೋರವೆನಿಸುವ ರೂಪಕಗಳಿಂದೊಡಗೂಡಿದ ಮಾತುಗಳಲ್ಲಿ, ಈ ಅಪಾಯವನ್ನು ತಪ್ಪಿಸಿರಿ ಎಂದು ಸರ್ಕಾರಕ್ಕೆ ಕೋರುವಾಗಿನ ಕಳಕಳಿ, ಆರ್ದ್ರತೆಗಳಲ್ಲಿ ವ್ಯಕ್ತವಾಗುತ್ತದೆ. ಅವರ ಇಂತಹ ಕೆಲವು ನುಡಿಗಳನ್ನು ಇಲ್ಲಿ ಉದಾಹರಿಸಬಹುದು:

೧. "ಇನ್ನು ಮುಂದೆ ನಮ್ಮ ಮಕ್ಕಳ ತಲೆಯ ಮೇಲೆ ಇಂಗ್ಲಿಶ್ ಚಪ್ಪಡಿಯ ಭಾರವನ್ನು ಹೊರಿಸಿ, ಅವರನ್ನು ಕುಂಠಿತರನ್ನಾಗಿ ಮಾಡುವ ಅನುಚಿತ ಕಾರ್ಯವನ್ನು ನಿಲ್ಲಿಸಬೇಕು."[೧೪]

೨. ಬಲಾತ್ಕಾರದ ಇಂಗ್ಲಿಶ್ ಭಾಷೆಯಿಂದಲೂ ಇಂಗ್ಲಿಷ್ ಮಾಧ್ಯಮದಿಂದಲೂ ವರ್ಷ ವರ್ಷವೂ ಪರೀಕ್ಷೆಯ ಜಿಲೋಟಿನ್ನಿಗೆ ಕೋಟ್ಯಾಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿ ಕೊಡುತ್ತಿದ್ದಾರೆ. ಆಹಾರ ಸಮಸ್ಯೆಗಿಂತಲೂ ಚೀಣಿಯರ ಸಮಸ್ಯೆಗಿಂತಲೂ ಗುರುತರವಾದ ಸಮಸ್ಯೆ ಇದು. ಈ ಬಲಾತ್ಕಾರದ ಇಂಗ್ಲಿಶ್ ಶಿಕ್ಷಣದ ಪ್ರಚ್ಛನ್ನ ಭ್ರಷ್ಟಾಚಾರವನ್ನು, ನಷ್ಟದಲ್ಲಾಗಲೀ ಹಾನಿಯಲ್ಲಾಗಲೀ, ಸರಿದೂಗುವ ಭ್ರಷ್ಟಾಚಾರ ಮತ್ತೊಂದಿಲ್ಲ.[೧೫]

೩. ಇನ್ನು ಮುಂದೆ ಇಂಗ್ಲಿಶ್ ಹಲವರು ಕಲಿಯುವ ಭಾಷೆಯಲ್ಲ ; ಕೆಲವರು ಕಲಿಯಬೇಕಾದ ಭಾಷೆ.[೧೬]

೪. ದೇಶದ ಮಕ್ಕಳು ತಾವರಿಯದ ಇತರ ಭಾಷೆಗಳ ಹೊರೆಯನ್ನು ಹೊತ್ತು, ಯಾವುದನ್ನೂ ಸರಿಯಾಗಿ ಅರಿಯಲಾರದೆ, ಏನನ್ನೂ ಚೆನ್ನಾಗಿ ಅರಗಿಸಿಕೊಳ್ಳಲಾರದೆ, ಈಗಿರುವಂತೆಯೇ

ಕುಂಟುತ್ತಾ ತಡವುತ್ತಾ, ನಿಂತವರು ನಿಲ್ಲಲಿ, ಬಿದ್ದವರು ಬೀಳಲಿ, ಸೋತವರು ಸೋಲಲಿ, ಪಯಣ ಹೊರಟ ನೂರರಲ್ಲಿ ತೊಂಬತ್ತೊಂಬತ್ತು ಹಿಂದುಳಿದು, ಆ ಕೊನೆಯ ಅದೃಷ್ಟಶಾಲಿಯೂ ಅರ್ಧಮಾತ್ರನಾಗಿ, ಏದುತ್ತಾ, ಗುರಿಯ ಬಳಿ ಸಾರುತ್ತಿರುವ ಇಂದಿನ ದುರ್ಗತಿಯನ್ನೇ ನಾವು ಪ್ರಗತಿ ಎಂದು ಕರೆದುಕೊಳ್ಳುತ್ತಾ ಆತ್ಮವಂಚಕರಾಗಿ ಸಾಗಬೇಕಾಗುತ್ತದೆ.[೧೭]

೫. ಇಂಗ್ಲಿಶ್ ಬಲಿಷ್ಠ ಭಾಷೆ–ಅದರ ಕಾಲು ಮುರಿದು ಆಳಾಗಿಸಿಕೊಳ್ಳಿ. ಹೇಳಿದ ಕೆಲಸ ಮಾಡಿಕೊಂಡು ಬಿದ್ದಿರುತ್ತದೆ. ಹಿಂದಿಗೆ ಸ್ವಾತಂತ್ರ್ಯ ಕೊಡುವುದು ಬೇಡ. ಅದರ ಸೊಂಟ ಮುರಿಯಿರಿ. ಅದರಿಂದ ನಮಗೆ ಅಪಾಯವಿಲ್ಲ. ಒಬ್ಬ ಕುಂಟ, ಒಬ್ಬ ಹೆಳವ. ಅವು ನಮ್ಮ ಮೈಮೇಲೆ ಬೀಳುವುದಿಲ್ಲ.[೧೮]

೬. ಕೋಟಿ ಕೋಟಿ ಭಾರತೀಯ ಮಕ್ಕಳ ಮನಶ್ಶಕ್ತಿಯ ವೃಥಾಶ್ರಮದಿಂದ ರಾಷ್ಟ್ರಕ್ಕೆ ವರ್ಷ ವರ್ಷವೂ ಒದಗುತ್ತಿರುವ ಅಪಾರ ಧನ ಬುದ್ಧಿ ಧೈರ್ಯ ನಷ್ಟಗಳಿಂದಾಗುವ ಚೈತನ್ಯಹಾನಿಯನ್ನು ತಪ್ಪಿಸಬೇಕೆಂದು ಪ್ರಾರ್ಥಿಸುತ್ತೇನೆ.[೧೯]

ಇಂಗ್ಲಿಶನ್ನು ಚಪ್ಪಡಿ, ಜಿಲೋಟಿನ್‌ಗೆ ಹೋಲಿಸುವಲ್ಲಿ, ಆಹಾರ ಮತ್ತು ಯುದ್ಧದ ಹಾನಿಗಿಂತಲೂ ಇಂಗ್ಲಿಶು ಎಷ್ಟು ಅನಾಹುತಕಾರಿ ಎಂಬ ಲೇಖಕರ ನಿಲುವು ವ್ಯಕ್ತವಾಗುತ್ತದೆ. ಇದರೊಂದಿಗೆ 'ಪಾರು ಮಾಡೆಮ್ಮನೀ ಇಂಗ್ಲಿಶಿನಿಂದ ಪೂತನಿಯ ಕೊಂದ ಗೋವಿಂದ' ಎಂಬ ಅವರ ಕವಿತೆಯ ಸಾಲುಗಳಲ್ಲಿ ಇಂಗ್ಲಿಶಿನ ಅಪಾಯದ ಸ್ವರೂಪವನ್ನು ಗಮನಿಸಬಹುದು.

ಕುವೆಂಪು ತಮ್ಮ ಬರಹಗಳಲ್ಲಿ ಮಾತ್ರವಲ್ಲ ಬದುಕಿನಲ್ಲಿಯೂ ಅದಕ್ಕೆ ಬದ್ಧರಾಗಿದ್ದರು. ಘಟನೆಯೊಂದನ್ನು ಉದಾಹರಿಸಬಹುದಾದರೆ ಅವರಿಗೆ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಿ.ಲಿಟ್ ಪ್ರಶಸ್ತಿ ನೀಡಿ ಗೌರವಿಸಲು ಇಚ್ಚಿಸಿದಾಗ ಸರಕಾರ ಕನ್ನಡವನ್ನು ಅಧಿಕೃತ ಭಾಷೆಯೆಂದು ಘೋಷಿಸುವವರೆಗೂ ಪ್ರಶಸ್ತಿ ಸ್ವೀಕರಿಸುವುದಿಲ್ಲವೆಂದು ನಿರಾಕರಿಸಿದರು. ಅದರಂತೆ ನಡೆದುಕೊಂಡರು. ಶಿಕ್ಷಣದಲ್ಲಿ ಇಂಗ್ಲಿಶಿನ ಪ್ರಭಾವವನ್ನು ಹೋಗಲಾಡಿಸುವ ಉದ್ದೇಶ ಇದರ ಹಿಂದಿತ್ತು.

ಕುವೆಂಪು ಅವರು ಇಪ್ಪತ್ತನೆಯ ಶತಮಾನದ ಕರ್ನಾಟಕದ ವೈಚಾರಿಕ ಚಿಂತನೆಯ ಬಹುದೊಡ್ಡ ಐಕಾನ್ ಆಗಿ ಗುರುತಿಸಲ್ಪಟ್ಟವರು. ಇಂತಹ ದಟ್ಟ ವೈಚಾರಿಕತೆ ಕುವೆಂಪು ಅವರಿಗೆ ಹರಿದು ಬಂದಿದ್ದು ಇಂಗ್ಲಿಶ್ ಸಾಹಿತ್ಯದಿಂದ. ಕ್ರೈಸ್ತ ಮಿಷಿನರಿಗಳ ಉದ್ದೇಶಗಳ ಬಗ್ಗೆ ಅನುಮಾನ ಮತ್ತು ಭಿನ್ನಮತ ಇಟ್ಟುಕೊಂಡೇ ಅವು ಮಲೆನಾಡಿನ ಶೂದ್ರ ಸಮುದಾಯಕ್ಕೆ ಇಂಗ್ಲಿಶಿನ ಮೂಲಕ ಸಾಮಾಜಿಕ ಬಿಡುಗಡೆಗೆ ಕಾರಣವಾದದ್ದನ್ನು ಕುವೆಂಪು ನೆನೆಯುತ್ತಾರೆ. ಕುವೆಂಪು ಅವರ ಚಿಂತನೆಯ ಈ ಬಗೆಯ ಸಂಕೀರ್ಣ ನೆಲೆಯನ್ನು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಜೀವರತ್ನಯ್ಯ ಮತ್ತು ದೇವಯ್ಯ ಪಾತ್ರ ಚಿತ್ರಣದಲ್ಲಿ ಗಮನಿಸಬಹುದು. ಪಾದ್ರಿ ಜೀವರತ್ನಯ್ಯನನ್ನು ವ್ಯಂಗ್ಯದಲ್ಲಿ

ಚಿತ್ರಿಸುವ ಕುವೆಂಪು, ಜೀವರತ್ನಯ್ಯನಿಂದಲೇ ವೈಚಾರಿಕತೆ ಬೆಳೆಸಿಕೊಂಡು ಪುರೋಹಿತಶಾಹಿಯನ್ನು ಪ್ರಶ್ನಿಸುವ ದೇವಯ್ಯನನ್ನು ಹೆಮ್ಮೆಯಿಂದ ಚಿತ್ರಿಸುತ್ತಾರೆ. ಹಿಂದೂ ಧರ್ಮದ ಕೆಳಸಮುದಾಯಗಳ ಸಾಮಾಜಿಕ ಬಿಡುಗಡೆಗಾಗಿ ವೈಚಾರಿಕತೆಯ ಮೂಲಕ ಬರುವ ಕ್ರೈಸ್ತ ಧರ್ಮ ಸ್ವೀಕಾರಾರ್ಹವೆನ್ನುವ ಕುವೆಂಪು, ಹಿಂದೂಧರ್ಮಕ್ಕೆ ಬದಲಿಯಾಗಿ ಬರುವ ಕ್ರೈಸ್ತಧರ್ಮಕ್ಕೆ ವಿರೋಧ ತೋರುತ್ತಾರೆ. ಅದರಂತೆ ವೈಚಾರಿಕತೆ ತರುವ ಇಂಗ್ಲಿಶ್ ನಮಗೆ ಬೇಕೆ ಹೊರತು, ನಮ್ಮ ಭಾಷೆಯನ್ನೇ ನಾಶ ಮಾಡುವ ಸಾಮ್ರಾಜ್ಯಶಾಹಿ ಇಂಗ್ಲಿಶಲ್ಲ ಎನ್ನುವುದು ಕುವೆಂಪು ಅವರ ದೃಢವಾದ ನಿಲುವು. ಇಂಗ್ಲಿಶ್ ಭಾಷೆ ಭಾರತೀಯರ ಪಾಲಿಗೆ, ನಿರ್ದಿಷ್ಟವಾಗಿ ಇಲ್ಲಿನ ಕೆಳಸಮುದಾಯಗಳಿಗೆ ಆರಂಭದಲ್ಲಿ ಬಿಡುಗಡೆಯ ವರವಾಗಿ ನಂತರದಲ್ಲಿ ಅವರ ಚೈತನ್ಯವನ್ನು ನಾಶ ಮಾಡುವ ಶಾಪವಾಗಿ ಪರಿವರ್ತಿತವಾಗಿದ್ದನ್ನು ಕುವೆಂಪು ಎಚ್ಚರದಿಂದ ಗಮನಿಸುತ್ತಾರೆ.

ಇಂಗ್ಲಿಶನ್ನು ವಿರೋಧಿಸುತ್ತಿರುವಾಗ ಕುವೆಂಪು ಅವರು ಅದನ್ನು ವಸಾಹತುಶಾಹಿಯಾಗಿ ಕೂಡ ನೋಡುತ್ತಿರಬಹುದು. ಏಕೆಂದರೆ, ಶಿವರಾಮ ಪಡಿಕ್ಕಲ್ ಅವರು ಅಭಿಪ್ರಾಯಪಡುವಂತೆ ವಸಾಹತುಶಾಹಿಯು ಭಾರತದಲ್ಲಿ ಸಾಮಾಜಿಕ ಕ್ರಾಂತಿಯನ್ನೇನೂ ತರಲಿಲ್ಲ. ಬದಲಾಗಿ ಕೆಲವು ಪರಿವರ್ತನೆಗಳನ್ನು ಮತ್ತು ವಕ್ರ ಬದಲಾವಣೆಗಳನ್ನು ತಂದಿತು. ಹಳೆಯ ಫ್ಯೂಡಲ್ ವ್ಯವಸ್ಥೆಯನ್ನು ಎದುರಿಸಿ, ಛಿದ್ರ ಮಾಡಿದ ಆಧುನಿಕತೆಯದು. ಜತೆಗೆ ಭಾರತದ ಶ್ರೇಣೀಕರಣಗಳನ್ನು ಮುಂದುವರೆಸಿದ ಮತ್ತು ಪರಿವರ್ತಿಸಿದ ಆಧುನಿಕತೆಯದು.

ಇಂಗ್ಲಿಶನ್ನು ಮಕ್ಕಳ ತಲೆಯ ಮೇಲೆ ಹಾಕುವ ಚಪ್ಪಡಿ ಎಂದೂ, ರಕ್ಕಸಿ ಪೂತನಿ ಎಂದು ದಟ್ಟ ರೂಪಕಗಳ ಮೂಲಕ ಜರೆದ ಕುವೆಂಪು ಸುಮಾರು ಎರಡೂವರೆ ದಶಕಗಳ ನಂತರ ಇಂಗ್ಲಿಶ್ ಕಲಿಯದೇ ಹೋಗಿದ್ದರೆ ತಾವು ಯಾರದೋ ಮನೆಯ ಕೊಟ್ಟಿಗೆಯಲ್ಲಿ ಕೆಲಸ ಮಾಡಿಕೊಂಡು ಇರಬೇಕಾಗುತ್ತಿತ್ತು ಎಂದು ಅಭಿಪ್ರಾಯಪಟ್ಟರು. ಕುವೆಂಪು 'ಇಂಗ್ಲಿಶ್ ಕಲಿಯದೆ ಹೋಗಿದ್ದರೆ' ಎನ್ನುವುದನ್ನು 'ಬ್ರಿಟಿಶರು ಭಾರತಕ್ಕೆ ಬಾರದೇ ಹೋಗಿದ್ದರೆ' ಎಂದೂ ವ್ಯಾಖ್ಯಾನಿಸಲಾಗುತ್ತದೆ.

'ಕನ್ನಡ ಸಂಸ್ಕೃತಿಯ ಒಳಗಿನ ವೈರುಧ್ಯಗಳು ಜನವಿರೋಧಿಯಾಗಿವೆ. ನಾವು ಭಾವುಕತೆಯಲ್ಲಿ ಅದಕ್ಕೆ ಶರಣಾಗುವುದು ಸಾಧ್ಯವಿಲ್ಲ. ಈ ಸಂಸ್ಕೃತಿಯು ನಿಯುಕ್ತಿಗೊಳಿಸಿದ ಅಧೀನತೆಯ ಗುರಿಯಿಂದ ಹೊರಬರಲು ಇಂಗ್ಲಿಶ್ ನಮಗೆ ಅವಕಾಶ ನೀಡಿತ್ತು' ಎಂದು ಕುವೆಂಪು ಹೇಳಿದರು. ಎರಡು ಸಂಗತಿಗಳು ಇಲ್ಲಿ ಸ್ಪಷ್ಟವಾಗುತ್ತಿವೆ. ಒಂದು, ನಾವು ರಚಿಸಿಕೊಂಡ ಕನ್ನಡ ಸಂಸ್ಕೃತಿಯ ಒಳಪದರುಗಳಲ್ಲಿ ಇರುವ ವೈರುಧ್ಯಗಳು ನಮಗೆ ಗೋಚರವಾದುದು. ಎರಡನೆಯದು, ಇಂತಹ ವೈರುಧ್ಯಗಳ ನಿವಾರಣೆಯ ಮೂಲಕ ಹೊಸ ಜೀವನ ವಿನ್ಯಾಸಕ್ಕೆ ದಾರಿಗಳನ್ನು ಹುಡುಕಿಕೊಂಡದ್ದು. ಈ ಎರಡೂ ಸಂದರ್ಭದಲ್ಲಿ ಇಂಗ್ಲಿಶಿಗೆ ಒಂದು ಮಹತ್ವದ ಪಾತ್ರವಿತ್ತೆಂದು ತೋರುತ್ತದೆ.' ಎಂದು ಕೆ.ವಿ ನಾರಾಯಣ ಅವರು ಅಭಿಪ್ರಾಯಪಡುತ್ತಾರೆ. ಇಂಗ್ಲಿಶಿನಿಂದ ವೈಚಾರಿಕತೆಯನ್ನೂ,

ಪ್ರಜಾಪ್ರಭುತ್ವೀಯ ಹಾಗೂ ಜಾತ್ಯಾತೀತ ಮೌಲ್ಯಗಳನ್ನು ಪಡೆದ ಕುವೆಂಪು ಇಂಗ್ಲಿಶ್ ಕಲಿಯದೇ ಹೋಗಿದ್ದರೆ ತಾವು ಯಾರದೋ ಮನೆಯ ಕೊಟ್ಟಿಗೆಯಲ್ಲಿ ಕೆಲಸ ಮಾಡಿಕೊಂಡು ಇರಬೇಕಾಗುತ್ತಿತ್ತು ಎಂದು ಅಭಿಪ್ರಾಯಪಟ್ಟಿದ್ದು ಈ ಅರ್ಥದಲ್ಲಿ ಎನಿಸುತ್ತದೆ.

ಇಂಗ್ಲಿಶನ್ನು ಗೆಲ್ಲಬಹುದು ಎಂಬ ಹುಮ್ಮಸ್ಸಿನಲ್ಲಿ ನಾವು ಮುಂದಾದೆವು ಎಂದು ತೋರುತ್ತದೆ. ಆ ನಂತರದ ದಿನಮಾನಗಳು, ಆ ಇಂಗ್ಲಿಶಿಗೆ ಇರುವ ಸ್ವಯಂಚಾಲಿತ ಸಾಮರ್ಥ್ಯದ ಅರಿವನ್ನು ನಮಗೆ ಮಾಡಿಕೊಟ್ಟಿದೆ. ಇದು ಕುವೆಂಪು ಅವರ ಇಂಗ್ಲಿಶ್ ಕುರಿತ ಚಿಂತನೆಯಲ್ಲಿನ ಪಲ್ಲಟಕ್ಕೆ ಕಾರಣವೆಂದು ಕೆ.ವಿ ನಾರಾಯಣ ಅವರು ವಿಶ್ಲೇಷಿಸುತ್ತಾರೆ. ಇದನ್ನು ಕುವೆಂಪು ಅವರ ಚಿಂತನೆಯಲ್ಲಿನ ಪಲ್ಲಟ ಎನ್ನುವುದಕ್ಕಿಂತ ಇವೆರೆಡೂ ಬಗೆಯ ನಿಲುವು ಕುವೆಂಪು ಅವರ ಅನುಮೋದಿಸುವ ಇಂಗ್ಲಿಶ್ ಮತ್ತು ದೂರ ಇಡಬಯಸುವ ಇಂಗ್ಲಿಶ್ ಎಂದು ಗ್ರಹಿಸುವುದು ಯುಕ್ತವಾದುದು ಎನಿಸುತ್ತದೆ. ಇದನ್ನು ಇನ್ನೂ ವಿಸ್ತರಿಸಬಹುದಾದರೆ ಸಾಮಾಜಿಕ ಬಿಡುಗಡೆಗೆ ವೈಚಾರಿಕತೆಯಾಗಿ ಇಂಗ್ಲಿಶನ್ನು ಅನುಮೋದಿಸುವ ಕುವೆಂಪು ಅವರು ದೇಶಿಭಾಷೆಯಲ್ಲಿ ಜ್ಞಾನ ಪಡೆಯುವ ಶಿಕ್ಷಣದಲ್ಲಿ ಇಂಗ್ಲಿಶ್ ತೊಡಕೆಂದು ಅದನ್ನು ದೂರ ಇಡಬಯಸುತ್ತಾರೆ. ಅನುಮೋದಿಸುವ ಇಂಗ್ಲಿಷ್ ಮತ್ತು ದೂರವಿರಿಸುವ ಇಂಗ್ಲಿಷಿನ ಮೇಲ್ಕಂಡ ಎರಡೂ ಸ್ತರಗಳ ಸೂಕ್ಷ್ಮ ವಿಂಗಡಣೆ ಕುವೆಂಪು ಅವರ ಚಿಂತನೆಯಲ್ಲಿದೆ. ಇಂಗ್ಲಿಶಿಗೆ ವಿರುದ್ಧವಾದ ಕುವೆಂಪು ಅವರ ನಿಲುವು ಜಾಗತೀಕರಣೋತ್ತರ ಸಂದರ್ಭದ ಕರ್ನಾಟಕದಲ್ಲಿನ ಬುದ್ಧಿಜೀವಿಗಳ ಒಂದು ವರ್ಗ ಮತ್ತು ದಲಿತ ಸಂಘಟನೆಗಳು ತೆಗೆದುಕೊಂಡ ನಿಲುವಿಗೆ ವಿರುದ್ಧವಾಗಿರುವುದು ಬಹಳ ಮುಖ್ಯವಾದ ಸಂಗತಿಯಾಗಿದೆ. ಮೇಲ್ಜಾತಿಗಳು ಇಂಗ್ಲಿಶ್ ಶಿಕ್ಷಣ ಪಡೆದು ಮುಂದುವರಿಯುತ್ತಿವೆ, ಇವರಂತೆ ಮುಂದುವರೆಯಬೇಕಾದರೆ ಅವರಂತೆ ಇಂಗ್ಲಿಷ್ ಮಾಧ್ಯಮದ ಶಿಕ್ಷಣವನ್ನು ಹಿಂದುಳಿದ ಜಾತಿಗಳೂ ಅನುಸರಿಸಬೇಕು ಎನ್ನುವ ವಾದ ಇವರದ್ದಾಗಿದೆ.

ಕನ್ನಡ ಮತ್ತು ಇಂಗ್ಲಿಶಿನ ಸಂಬಂಧದ ಸಂದರ್ಭದಲ್ಲಿ ಕುವೆಂಪು ಅವರು ಬಿ.ಎಂ.ಶ್ರೀ ಅವರಂತೆ ಸಾಹಿತ್ಯವಾದಿ ನೆಲೆಯಲ್ಲಿ ಚಿಂತಿಸದೆ ಸಾಮಾಜಿಕ ನೆಲೆಯಲ್ಲಿ ಚಿಂತಿಸುವುದು ಗಮನಕ್ಕೆ ಬರುತ್ತದೆ. ಇಂಗ್ಲಿಶಿನ ವೈಚಾರಿಕತೆ, ಸಾಹಿತ್ಯದ ಹೊಸ ಶೈಲಿ ತರುವುದರ ಮೂಲಕ ಕನ್ನಡವನ್ನು ಬೆಳೆಸಲು ಶ್ರೀ ಅವರು ಒತ್ತು ನೀಡಿದರು. ಕುವೆಂಪು ಸಾಹಿತ್ಯದಲ್ಲಿ ಇಂಗ್ಲಿಶಿನ ವೈಚಾರಿಕತೆ, ಸಾಹಿತ್ಯದ ಹೊಸ ಶೈಲಿ ಇರುವುದು ನಿಜ. ಆದರೆ ಅವರ ಕಾಳಜಿಯಿದ್ದುದು ತಾನು ಹುಟ್ಟಿ ಬೆಳೆದು ಬಂದ ಹಳ್ಳಿಗಾಡಿನ ಕೆಳವರ್ಗದ ಮಕ್ಕಳಿಗೆ ಇಂಗ್ಲಿಶ್ ಕಲಿಕೆ ಯಾವ ಪರಿಣಾಮವನ್ನು ಬೀರುತ್ತದೆ ಎನ್ನುವುದನ್ನು ಅರಿಯುವುದರಲ್ಲಿ. ಚಿಂತಕರ ತಾತ್ವಿಕ ನಿಲುವುಗಳನ್ನು ಅವರು ಹುಟ್ಟಿ ಬೆಳೆದು ಬಂದ ಪರಿಸರ, ಜಾತಿ-ವರ್ಗಗಳು ಹೇಗೆ ಪ್ರಭಾವಿಸುತ್ತವೆ ಎನ್ನುವುದನ್ನು ಇಂಗ್ಲಿಶ್ ಕುರಿತ ಬಿ.ಎಂ.ಶ್ರೀ ಮತ್ತು ಕುವೆಂಪು ಅವರ ನಿಲುವುಗಳಲ್ಲಿನ ಭಿನ್ನತೆಗಳು ಸಾಕ್ಷೀಕರಿಸುತ್ತಿವೆ.

೨.೩.೩ ಕನ್ನಡ–ಸಂಸ್ಕೃತಗಳ ಸಂಬಂಧ

೨.೩.೩.೧. ಸಂಸ್ಕೃತ ಮತ್ತು 'ಸಂಸ್ಕೃತಿ' ಸಂಬಂಧ ಕುರಿತ ವೈರುಧ್ಯದ ನಿಲುವುಗಳು :

'ಪ್ರಪಂಚದಲ್ಲಿ ಯಾವ ಸಮಯದಲ್ಲಿ ಏನು ಬೇಕಾದರೂ ಆಗಬಹುದು. ಎಂಥ ವಿನಾಶವಾದರೂ ಒದಗಬಹುದು. ಆದರೆ ಭರತಖಂಡದ ಸಾಂಸ್ಕೃತಿಕ ಐಕ್ಯತೆ ಮಾತ್ರ ಅವಿನಾಶಿ. ಈ ಸಂಸ್ಕೃತಿ ವಿಶೇಷವಾಗಿ ಸಂಸ್ಕೃತಭಾಷೆಯಲ್ಲಿ ರಕ್ಷಿತವಾಗಿ ಘನೀಭೂತವಾಗಿ ಇದೆ. ಅದು ೧೪ ಮುಖ್ಯಭಾಷೆಗಳ ಮೂಲಕ ಸಾಮಾನ್ಯ ಜನರೆಡೆಗೆ ಹರಿದು ಬರುತ್ತಿದೆ. ಸಂಸ್ಕೃತಭಾಷೆ ಸರೋವರ ಇದ್ದ ಹಾಗೆ. ೧೪ ಭಾಷೆಗಳು ಅಲ್ಲಿಂದ ಹೊಮ್ಮಿದ ಕಾಲುವೆಗಳು. –ಕನ್ನಡದ ಕಾಲುವೆ, ಮರಾಠಿಕಾಲುವೆ ಇತ್ಯಾದಿ'[೨೦] ಎಂದು ಕುವೆಂಪು ಸಂಸ್ಕೃತಭಾಷೆಯ ಮಹತ್ವವನ್ನು ವಿವರಿಸುತ್ತಾರೆ.

ಕನ್ನಡ ಭಾಷೆಯ ಕುಡಿ ಚಿಗುರೊಡೆದಿದ್ದು ದ್ರಾವಿಡಭಾಷೆಯಿಂದ ಮತ್ತು ಬಹುತೇಕ ಭಾರತೀಯ ಭಾಷೆಗಳ ಮೂಲ ಸಂಸ್ಕೃತವಲ್ಲ ಎನ್ನುವುದು ಸಂಶೋಧನೆಗಳು ಆ ಕಾಲಕ್ಕೆ ದೃಢಪಡಿಸಿದ ಸಂಗತಿಗಳಾಗಿದ್ದವು. ಇಂಡೋ– ಆರ್ಯನ್ ಭಾಷಾ ಕುಟುಂಬಕ್ಕೆ ಸೇರಿದ ಸಂಸ್ಕೃತ ಮತ್ತು ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ ಕನ್ನಡ ಭಾಷೆಯ ನುಡಿ ಸಾಮಗ್ರಿಗಳಾದ ಅಕ್ಷರ–ಪದ–ವಾಕ್ಯ ಅರ್ಥರಚನೆಯ ಬೇರೆ ಬೇರೆ ಬಗೆಗಳಲ್ಲಿವೆ. ಇವೆರೆಡು ಒಂದೇ ಭಾಷಾ ಮೂಲದಿಂದ ಹುಟ್ಟಿ ಬಂದಿಲ್ಲ. ಪ್ರಾಚೀನ ಕಾಲದಿಂದಲೂ ಕನ್ನಡ ಭಾಷೆಯು ಸಂಸ್ಕೃತ, ಪ್ರಾಕೃತ, ಅರೇಬಿಕ್, ಪರ್ಷಿಯನ್, ಪೋರ್ಚುಗೀಸ್ ಮತ್ತು ಇಂಗ್ಲಿಷ್ ಭಾಷೆಗಳಿಂದ ನೂರಾರು ಪದಗಳನ್ನು ಎರವಲಾಗಿ ಪಡೆದುಕೊಂಡಿದೆ. ಇವುಗಳ ಪೈಕಿ ಸಂಸ್ಕೃತ ಭಾಷೆಯಿಂದ ಅತಿ ಹೆಚ್ಚಿನ ಪದಗಳನ್ನು ಮತ್ತು ಅಂತಹ ಸಂಸ್ಕೃತ ಪದಗಳನ್ನು ಯಥಾವತ್ತಾಗಿ ಸಂಸ್ಕೃತದಲ್ಲಿರುವಂತೆ ಕನ್ನಡ ಬರಹದಲ್ಲಿ ಬರೆಯಲು ತೊಡಗಿದ್ದರಿಂದ ಸಂಸ್ಕೃತ ವರ್ಣಮಾಲೆಯ ಅನೇಕ ಅಕ್ಷರಗಳನ್ನು ಎರವಲಾಗಿ ಪಡೆದುಕೊಂಡಿದೆ. ಕೆಲವು ಸಂಸ್ಕೃತ ಭಾಷಾ ಸಂಶೋಧಕರು ಹೇಳುವಂತೆ, ಸಂಸ್ಕೃತವು ಎಲ್ಲ ಭಾರತೀಯ ಮೂಲ ಭಾಷೆಗಳಿಂದ ಶಬ್ದ ಹಾಗೂ ಉಚ್ಚಾರಗಳನ್ನು ಎರವಲು ಪಡೆದೇ ಸಮೃದ್ಧವಾಗಿರುವುದು. ಸಾರಾಂಶದಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳ ನಡುವೆ ಎರವಲು ಸಂಬಂಧವಿದೆಯೇ ಹೊರತು ಅದು 'ತಾಯಿ–ಮಗಳ' ಸಂಬಂಧದ ಸ್ವರೂಪದ್ದಲ್ಲ ಎನ್ನುವುದು ಭಾಷಾ ಶಾಸ್ತ್ರಜ್ಞರು ಅಧ್ಯಯನದಿಂದ ಕಂಡುಕೊಂಡ ಸತ್ಯವಾಗಿದೆ. ಆದರೆ "ಸಂಸ್ಕೃತ ಕನ್ನಡದ ತಾಯಿ" ಎನ್ನುವ ವ್ಯವಸ್ಥಿತ ಪ್ರಚಾರದಲ್ಲಿರುವ ಮಿಥ್ಯೆ ಕುವೆಂಪು ಅವರನ್ನೂ ಒಪ್ಪಿಸಿಬಿಟ್ಟಿತ್ತು ಎನ್ನುವುದು ಅಚ್ಚರಿಯ ಸಂಗತಿಯಾಗಿದೆ.

'ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ
ಹೊರ ನುಡಿಯ ಹೊರೆಯಿಂದ ಕುಸಿದು ಕುಗ್ಗಿ
ರಾಜ ನುಡಿಯೆಂದೊಂದು, ರಾಷ್ಟ್ರ ನುಡಿಯೆಂದೊಂದು
ದೇವ ನುಡಿಯೆಂದೊಂದು ಹತ್ತಿ ಜಗ್ಗಿ'

..ಎಂಬ ತಮ್ಮ ಕವಿತೆಯಲ್ಲಿ ಇಂಗ್ಲಿಶ್, ಹಿಂದಿ ಮತ್ತು ಸಂಸ್ಕೃತ ಭಾಷೆಗಳ ಭಾರದಲ್ಲಿ ಕನ್ನಡ ಸಾಯುತ್ತಿರುವ ಬಗ್ಗೆ ಕುವೆಂಪು ಅವರಿಗೆ ಗಮನವಿದೆ. ಆದರೆ ಬಿ.ಎಂ.ಶ್ರೀ ಅವರಂತೆ ಕನ್ನಡದ ಮೇಲಿನ ಸಂಸ್ಕೃತದ ಭಾರವನ್ನು ಇಳಿಸುವ ಪ್ರಯತ್ನವನ್ನು ಕುವೆಂಪು ಅವರು ಮಾಡಿದಂತೆ ಕಾಣುವುದಿಲ್ಲ. ಆದ್ದರಿಂದ 'ಕನ್ನಡ ಸಂರಕ್ಷಣೆಯ ಹೋರಾಟದಲ್ಲಿದ್ದ ಎಷ್ಟೋ ಜನರಿಗೆ ಸಂಸ್ಕೃತ ಹಾಗೂ ಹಿಂದಿ ಭಾಷೆಗಳು ಉಂಟುಮಾಡುವ ಅಪಾಯವನ್ನು ಅರಿಯಲಾಗಲೀ, ಅದನ್ನು ಆಡಲಾಗಲೀ ಅವರ ವರ್ಗಪ್ರಜ್ಞೆ ಅವಕಾಶ ಕೊಡಲಿಲ್ಲ. ಅತ್ಯಂತ ನಿಚ್ಚಳವಾಗಿ ಅದನ್ನು ಮಂಡಿಸಿದ ಕುವೆಂಪು ಅದನ್ನೊಂದು ಸಮಗ್ರ ಗ್ರಹಿಕೆಯನ್ನಾಗಿ ರೂಪಿಸಿದ್ದರು' ಎನ್ನುವ ಬಂಜಗೆರೆ ಜಯಪ್ರಕಾಶ ಅವರ ಅಭಿಪ್ರಾಯ ಚರ್ಚೆಯನ್ನು ಆಹ್ವಾನಿಸುತ್ತದೆ.

'ಮನುಷ್ಯಚೇತನದ ಸರ್ವತೋಮುಖವೂ ವಿಕಾಸಮಾನವೂ ಆದ ಆತ್ಮಶ್ರೀಯನ್ನು ಸಂಸ್ಕೃತಿ' ಎಂದು ಸಂಕೇತಿಸಬಹುದು ಎಂದು ಕುವೆಂಪು ಅವರು 'ಭಾರತೀಯ ಸಂಸ್ಕೃತಿ'[೨೧] ಎಂಬ ತಮ್ಮ ಲೇಖನದಲ್ಲಿ ವಿಶ್ಲೇಷಿಸುತ್ತಾರೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರು ಹೇಳುತ್ತಿರುವ ಸಂಸ್ಕೃತಭಾಷೆಯಲ್ಲಿ ಘನೀಭೂತವಾಗಿರುವ ಸಂಸ್ಕೃತಿ ಯಾವುದು ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಸಂಸ್ಕೃತಭಾಷೆಯನ್ನು ಯಾರು ಬಳಸಬಹುದು, ಯಾರು ಬಳಸಲು ನಿಷಿದ್ಧ ಎನ್ನುವುದೇ ಸಮಾಜವನ್ನು ಜಾತಿ ಆಧಾರದಲ್ಲಿ ವಿಭಜಿಸಿದ್ದು ಚರಿತ್ರೆ. ಆದರೆ ಇದಕ್ಕೆ ಸಂಸ್ಕೃತ ಭಾಷೆಯನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಬೇಕಾಗಿಲ್ಲ. ಯಾಕೆಂದರೆ ಭಾಷೆಯೊಂದು ಸಂವಹನದ ಮಾಧ್ಯಮ ಅಷ್ಟೆ. ಎಲ್ಲ ಭಾಷೆಗಳಂತೆ ಇದನ್ನು ಸುಡುವ ಬೆಂಕಿಯಾಗಿಯೂ, ಕತ್ತಲೆ ನಿವಾರಿಸುವ ಬೆಳಕಾಗಿಯೂ ಬಳಸಬಹುದು. ಇದಕ್ಕಿಂತ ಮುಖ್ಯವಾಗಿದ್ದು ಸಂಸ್ಕೃತ ಭಾಷೆ ಬಹುಸಂಖ್ಯಾತ ಜನರಿಗೆ ದೂರದಲ್ಲಿ ಬೆರಗುಗೊಳಿಸುವ, ಭಯ ಹುಟ್ಟಿಸುವ ಭಾಷೆಯಾಗಿತ್ತೇ ವಿನಾ ದೈನಂದಿನ ಜೀವನದ ಭಾಗವಾಗಿರಲಿಲ್ಲ ಎನ್ನುವುದು. ಹೀಗಿರುವಾಗ 'ಸಂಸ್ಕೃತಿ ನಿರ್ಮಾಣದಲ್ಲಿ' ಸಂಸ್ಕೃತ ಭಾಷೆಯ ಕೊಡುಗೆ ಏನು? ಇದು ಇಂಬು ನೀಡಿದ್ದು ಸಾಂಸ್ಕೃತಿಕ ಐಕ್ಯತೆಗೋ ಅಥವಾ ಛಿದ್ರತೆಗೋ ಎಂಬ ಪ್ರಶ್ನೆಗಳು ಉದ್ಭವವಾಗುತ್ತವೆ. ಕನ್ನಡವು ದ್ರಾವಿಡ ಭಾಷಾ ಮೂಲದಿಂದ ಹುಟ್ಟಿದ್ದು, ಸಂಸ್ಕೃತ ಕನ್ನಡಕ್ಕೆ ವರವಲ್ಲ, ಶಾಪವಾಗಿದೆ ಎಂದು ಡಿ.ಎನ್ ಶಂಕರಭಟ್ಟರಂತಹ ದೇಶಿವಾದಿ ಭಾಷಾ ಶಾಸ್ತ್ರಜ್ಞರು ನಿರೂಪಿಸುತ್ತಿದ್ದಾರೆ. ಕುವೆಂಪು ಅವರ ತಲೆಮಾರಿನ ಹಿರಿಯ ಸಾಹಿತಿಗಳಾದ ಬಿ.ಎಂ ಶ್ರೀ ಅವರು ಹೇರಿಕೊಂಡ ನಿಲುವಿನಲ್ಲಿ ಬರುವ ಸಂಸ್ಕೃತ ಕನ್ನಡಕ್ಕೆ ಕಂಟಕ ಎಂದೇ ಪ್ರತಿಪಾದಿಸಿದ್ದಾರೆ. ಈ

ಹಿನ್ನೆಲೆಯಲ್ಲಿ ಕುವೆಂಪು ಅವರ ಸಂಸ್ಕೃತ ಭಾಷೆಯ ಬಗೆಗಿನ ಇತ್ಯಾತ್ಮಕ ಅಭಿಪ್ರಾಯ ಚರ್ಚಾರ್ಹವಾಗಿದೆ.

೨.೩.೩.೨. ಭಾಷೆಗೆ ಅನ್ವಯಿಸದ 'ನೀರೆಲ್ಲವೂ ತೀರ್ಥ' ಎನ್ನುವ ದಾರ್ಶನೀಕತೆ :

'ನೀ ಮೆಟ್ಟುವ ನೆಲ –ಅದೆ ಕರ್ನಾಟಕ;

ನೀನೇರುವ ಮಲೆ ಸಹ್ಯಾದ್ರಿ

ನೀ ಮುಟ್ಟುವ ಮರ – ಶ್ರೀಗಂಧದ ಮರ;

ನೀ ಕುಡಿಯುವ ನೀರ್ – ಕಾವೇರಿ'

..ಹೀಗೆ ಕರ್ನಾಟಕವನ್ನು ಸಹ್ಯಾದ್ರಿ ಪರ್ವತ, ಶ್ರೀಗಂಧದ ಮರ ಮತ್ತು ಕಾವೇರಿ ನದಿಯಂತಹ ಉನ್ನತವೆನ್ನಿಸುವ ರೂಪಕಗಳ ಮೂಲಕ ಕುವೆಂಪು ಗುರುತಿಸುತ್ತಾರೆ. ಇದು ವಸ್ತುವಿನ 'ಗುಣ' ಕುರಿತ ಶ್ರೇಷ್ಠತೆಯ ಮಾನದಂಡದಿಂದ ಬಂದ ಸಹಜ ರೂಪಕಗಳಂತೆ ಮೇಲ್ನೋಟಕ್ಕೆ ಅನ್ನಿಸುತ್ತದೆ. ಆದರೆ ಕುವೆಂಪು ಅವರ ಸಾಹಿತ್ಯದಲ್ಲಿ ಇಂತಹ ಸಮಾಜ ರೂಢಿಗೆ ತಂದ ಶ್ರೇಷ್ಠತೆ ಮತ್ತು ಕನಿಷ್ಠತೆಯನ್ನು ಅನುಸರಿಸುವುದನ್ನೂ ಕಾಣಬಹುದು. 'ಗೊಬ್ಬರ', 'ಹೀರೆ ಹೂ', 'ಕರಿಸಿದ್ದ'ರ ಕುರಿತು ಬರೆಯುವ, 'ನೀರೆಲ್ಲವೂ ತೀರ್ಥ' ಎಂದು ಪ್ರತಿಪಾದಿಸುವ ಕುವೆಂಪು ಚಿಂತನೆಯಲ್ಲಿನ ವೈರುಧ್ಯದಂತೆ ಇದು ಕಾಣುತ್ತದೆ. 'ಹೂವಿನಂತೆಯೇ ಗೊಬ್ಬರ; ಕೋಗಿಲೆಯಂತೆಯೇ ರೈತ; ತಪಸ್ಸಿನಂತೆಯೇ ಶ್ರಮ; ಹೀಗೆ ಕುವೆಂಪು ಪ್ರತಿಸಂಸ್ಕೃತಿ ಪ್ರತೀಕಗಳನ್ನು ಆಯ್ದುಕೊಳ್ಳುತ್ತಾ ಕುವೆಂಪು ಅವರು ಕಾವ್ಯ ನಿರ್ಮಿಸಿದ್ದಾರೆ. ಅವರಿಗದೊಂದು ಸಾಂಸ್ಕೃತಿಕ ಯುದ್ಧ. ಅದು ನಿಜ ಕನ್ನಡತ್ವದ ನೆಲೆಗಟ್ಟಾಗಿಯೂ ಅವರ ಕಣ್ಣೊಳಗಿದೆ 'ಎಂಬ ಬಂಜಗೆರೆ ಅವರು ಕಾಣಿಸುವ ಕುವೆಂಪು ಅವರ ತಾತ್ವಿಕತೆಯನ್ನು ಒಪ್ಪಿಕೊಂಡ ನಂತರವೂ ಅವರು ಬಳಸುವ ಭಾಷೆಯ ಬಗೆಗಿನ ಪ್ರಶ್ನೆಗಳು ಉಳಿಯುತ್ತವೆ. ಮೇಲ್ಜಾತಿ ಲೇಖಕರೇ ತುಂಬಿದ್ದ ಕನ್ನಡ ಸಾಹಿತ್ಯಲೋಕದಲ್ಲಿ ತಮ್ಮನ್ನು ಪ್ರತಿಷ್ಠಾಪಿಸಿಕೊಳ್ಳಲು ಕುವೆಂಪು ಸಂಸ್ಕೃತಭೂಯಿಷ್ಠವಾಗಿ ಕನ್ನಡವನ್ನು ಬರೆದರು ಎನ್ನುವ ಅಭಿಪ್ರಾಯವಿದೆ. ಇದರ ಜೊತೆಗೆ ಕುವೆಂಪು ಅವರು ಬಳಸಿದ ಕನ್ನಡಕ್ಕೆ ಕಾರಣವನ್ನು ಮೇಲೆ ಪ್ರಸ್ತಾಪಿಸಿದ ಆಯಾಮದಿಂದಲೂ ನೋಡಬೇಕಾಗಿದೆ.

ಕನ್ನಡ ಅಸ್ಮಿತೆಯನ್ನು ಮೇಲ್ಜಾತಿಮೂಲವಾದ ಇಂತಹ ಕ್ರಮಗಳಿಂದ ನೋಡುವುದನ್ನು ದಲಿತ–ಬಂಡಾಯದ ಲೇಖಕರು ಸಕಾರಣವಾಗಿಯೇ ಪ್ರಶ್ನಿಸುತ್ತಾರೆ. 'ಕನ್ನಡನಾಡಲ್ಲಿ ಶ್ರೀಗಂಧವೂ ಇದೆ; ಜಾಲಿಯ ಮರವೂ ಇದೆ; ಕೋಗಿಲೆಯೂ ಇದೆ, ಕಾಗೆಯೂ ಇದೆ; ಹರಿಯುವ ನದಿಗಳಿವೆ. ಬತ್ತಿದ ಕೆರೆಗಳಿವೆ. ವೈಭವೋಪೇತ ಸೌಧಗಳಿವೆ; ಸೋರಗಿದ ಗುಡಿಸಲುಗಳಿವೆ. ತುಂಬಿದ ಕಡಲು ಇದೆ; ಹಸಿದ ಒಡಲು ಇದೆ. ಹಸಿರಿನ ಕಾಡು ಇದೆ; ಒಣಗಿದ ಊರು ಇದೆ. ಕಾವೇರಿ ಕೃಷ್ಣೆಯರೂ

ಇದ್ದಾರೆ; ನೀರಿಲ್ಲದ ಹಳ್ಳಗಳೂ ಇವೆ. ಬಿರುಕುಬಿಟ್ಟ ಕೆರೆಗಳೂ ಇವೆ. ಕನ್ನಡ-ಕರ್ನಾಟಕವೆಂದರೆ ಇವೆಲ್ಲವೂ ಮುಖ್ಯ.' ಎಂದು ಬರಗೂರು ಅವರು ಹೇಳುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಇಲ್ಲಿ ಜಾಲಿಯ ಮರ, ಕಾಗೆ, ಬತ್ತಿದ ಕೆರೆಗಳು, ಸೊರಗಿದ ಗುಡಿಸಲುಗಳು, ಹಸಿದ ಒಡಲು, ಒಣಗಿದ ಊರು, ನೀರಿಲ್ಲದ ಹಳ್ಳ, ಬಿರುಕುಬಿಟ್ಟ ಕೆರೆಗಳೂ ಮುಖ್ಯ.' ಎಂದು ಬರಗೂರು ಅವರು ಒತ್ತಿ ಹೇಳುವಲ್ಲಿ ಈವರೆಗೆ ಕೆಳವರ್ಗದವರನ್ನು ಅಮುಖ್ಯವೆಂದು ಭಾವಿಸಲಾಗಿತ್ತು ಎನ್ನುವ ವಿಷಾದದ ದನಿಯಿದೆ. ಇದನ್ನು ಭಾಷೆಗೆ ಅನ್ವಯಿಸಿ ನೋಡುವುದಾದರೆ ಕೆಳವರ್ಗದವರ ಭಾಷೆ ದಲಿತ-ಬಂಡಾಯ ಕಾಲಘಟ್ಟದವರೆಗೂ ಅವಜ್ಞೆಗೆ ಒಳಗಾಗಿರುವುದನ್ನು ಕಾಣಬಹುದು. ವಚನ ಚಳುವಳಿ ಇಂತಹ ಅವಜ್ಞೆಯನ್ನು ನಿವಾರಿಸುವ ದಿಕ್ಕಿನಲ್ಲಿ ಮುನ್ನುಡಿ ಬರೆದರೂ ಅದು ಮುಂಬರಿಯಲಿಲ್ಲ. ಕುವೆಂಪು ಅವರು ತಮ್ಮ ಗುತ್ತಿ, ತಿಮ್ಮಿ, ಐತ, ಪೀಂಚಲುರಂತಹ ಕೆಳವರ್ಗದ ಪಾತ್ರಗಳನ್ನು ಜೀವಂತಿಕೆಯಿಂದ ಚಿತ್ರಿಸಿದರೂ ಅವರ ಒಟ್ಟು ಸಾಹಿತ್ಯದಲ್ಲಿ ಬಳಕೆಯಾದ ಭಾಷೆ ಮೇಲ್ವರ್ಗದ್ದಾಗಿತ್ತು. 'ಕಲೆಗಾಗಿ ಕಲೆಯಲ್ಲ' ಎಂದು ಬಲವಾಗಿ ಪ್ರತಿಪಾದಿಸಿದ ಪ್ರಗತಿಶೀಲರೂ, ಭಾಷೆಗೊಂದು ರೂಪಕಗಳ ಮಾಂತ್ರಿಕ ಶಕ್ತಿಯನ್ನು ತಂದುಕೊಟ್ಟ ನವ್ಯದವರೂ ಕೂಡ ದೇವನೂರು ಮಹಾದೇವ ಅವರ ಆಗಮನದವರೆಗೆ ಈ ಬಗ್ಗೆ ಚಿಂತಿಸಿದಂತೆ ಕಾಣುವುದಿಲ್ಲ.

೨.೩.೩.೩. ಕುವೆಂಪು ಅವರಲ್ಲಿ ಕನ್ನಡ ಮತ್ತು ಸಂಸ್ಕೃತದ ಸಂಬಂಧ : ಆರು ಗ್ರಹಿಕೆಗಳು

ಕುವೆಂಪು ತಮ್ಮ ಸಾಹಿತ್ಯದಲ್ಲಿ ಸಂಸ್ಕೃತ ಭಾಷೆಯನ್ನು ಬಳಸುವ ಬಗೆಗಿನ ಚರ್ಚೆಗಳು ಇನ್ನೂ ಕೊನೆ ಮುಟ್ಟಿಲ್ಲ. ಈ ಅಧ್ಯಯನ ಕಂಡುಕೊಂಡಂತೆ ಕನ್ನಡ ವಿದ್ವತ್ ವಲಯದಲ್ಲಿ ಕುವೆಂಪು ಅವರಲ್ಲಿ ಕನ್ನಡ ಮತ್ತು ಸಂಸ್ಕೃತದ ನಡುವಿನ ಸಂಬಂಧವನ್ನು ಕುರಿತಂತೆ ಆರು ಗ್ರಹಿಕೆಗಳು ಇವೆ. ಇದನ್ನು ಕುವೆಂಪು ಅವರನ್ನು ಹೊರತುಪಡಿಸಿಯೂ ಕನ್ನಡ ಮತ್ತು ಸಂಸ್ಕೃತದ ಸಂಬಂಧದ ಗ್ರಹಿಕೆಯನ್ನಾಗಿ ನೋಡುವುದು ಸಾಧ್ಯವಿದೆ. ಆ ಆರು ಗ್ರಹಿಕೆಗಳು ಹೀಗಿವೆ :

೧. ಕುವೆಂಪು ಬಳಸುವ ಸಂಸ್ಕೃತ ಕನ್ನಡಕ್ಕೆ ಹೊರೆಯಾಗುತ್ತದೆ.

೨. ಸಂಸ್ಕೃತದ ಬಳಕೆಯಿಂದ ತಮ್ಮ ಬರಹದ 'ಘನತೆ' ಹೆಚ್ಚಿಸಿಕೊಳ್ಳುವ ಉದ್ದೇಶ.

೩. ಯುದ್ಧತಂತ್ರವಾಗಿ ಮತ್ತು ಆಧ್ಯಾತ್ಮಿಕ ಹಕ್ಕುದಾರಿಕೆಯ ಪ್ರತಿಪಾದನೆಯಾಗಿ ಸಂಸ್ಕೃತವನ್ನು ಕುವೆಂಪು ಬಳಸುತ್ತಾರೆ.

೪. ಕುವೆಂಪು ಸಾಹಿತ್ಯದ ಮೂಲಕ ಸಂಸ್ಕೃತದಲ್ಲಿದ್ದ ಕಾವ್ಯಗಳು, ವಿಚಾರಗಳು ಮತ್ತು ಕಲಾತ್ಮಕ ಸೂಕ್ಷ್ಮಗಳ ಲಾಭ ಕನ್ನಡಕ್ಕೆ ದಕ್ಕುತ್ತವೆ, ಸಂಸ್ಕೃತ ಭಾಷೆ ಮತ್ತು ವಾಙ್ಮಯದ ಕಸುವು ಕನ್ನಡಕ್ಕೆ ದಕ್ಕಿದೆ.

೫. ಕನ್ನಡದಲ್ಲಿ ಬರೆಯುವಾಗ ಸಂಸ್ಕೃತ ಬಳಸುವುದು ಕುವೆಂಪು ಅವರಿಗೆ ಅನಿವಾರ್ಯವಾಗಿರಬಹುದು.

೬. ಕುವೆಂಪು ಅವರ ಕನ್ನಡದ ಮೂಲಕ ಸಂಸ್ಕೃತ ಮರುಜೀವ ಪಡೆಯುತ್ತದೆ.

ಮೇಲ್ಕಂಡ ಆರೂ ಗ್ರಹಿಕೆಗಳು ಮೂಡಿದ ಸಂದರ್ಭ ಮತ್ತು ಹಿನ್ನೆಲೆಯನ್ನು ಈ ಮುಂದೆ ಚರ್ಚಿಸಲಾಗಿದೆ:

೧. ಕುವೆಂಪು ಅವರ ಭಾಷೆ ಮತ್ತು ಶೈಲಿಗಳು ಎಷ್ಟರಮಟ್ಟಿಗೆ ಸಂಸ್ಕೃತಭೂಯಿಷ್ಠವಾಗಿವೆಯೆಂದರೆ ಅವರ ಕಾದಂಬರಿಗಳಲ್ಲಿ ಕೆಲವು ಕಡೆ ಅವರು ಬರೆದಿದ್ದು ಓದುಗನಿಗೆ ಅರ್ಥವಾಗದೆ ಹೋಗುತ್ತವೆ ಎಂದು ದಲಿತ ಮುಖಂಡರಾದ ಬಿ.ಕೃಷ್ಣಪ್ಪನವರು ಅಭಿಪ್ರಾಯ ಪಟ್ಟಿದ್ದರು. ಈ ಅಭಿಪ್ರಾಯ ಒಂದು ವರ್ಗದ ಓದುಗರಲ್ಲಿ ಸಾಮಾನ್ಯವಾಗಿವೆ. ಈ ಅಭಿಪ್ರಾಯ ಸಮಾಜದ ಪ್ರತಿಷ್ಠಿತ ವರ್ಗವನ್ನು ಕುವೆಂಪು ಓಲೈಸುತ್ತಾರೆ ಎಂಬರ್ಥದ ಟೀಕೆಯಾಗಿ ವ್ಯಕ್ತವಾದದ್ದೇ ಹೆಚ್ಚು. ಇದು ಕುವೆಂಪು ಅವರು ತಮ್ಮ ಸಾಹಿತ್ಯದಲ್ಲಿ ಬಳಸುವ ಸಂಸ್ಕೃತ ಪದಗಳು, ನುಡಿಗಟ್ಟುಗಳು ಕನ್ನಡಕ್ಕೆ ಹೊರೆಯಾಗುತ್ತವೆ ಎಂದು ಗ್ರಹಿಸುವ ದೃಷ್ಟಿಕೋನ.

೨. ಯೋಗ್ಯವಾದ ಕನ್ನಡ ಪದಗಳು ಇರುವಲ್ಲೂ ಸಂಸ್ಕೃತ ಪದಗಳನ್ನು ಬಳಸುವ ಪ್ರವೃತ್ತಿಗೆ ತಮ್ಮ ಬರಹದ 'ಘನತೆ' ಹೆಚ್ಚುತ್ತದೆಂಬ ಅನಿಸಿಕೆ ಕಾರಣವಾಗಿದೆ. ಮೇಲ್ವರ್ಗದ ಬರಹಗಾರರು ತಮ್ಮ ಬರಹಗಳ ಮೂಲಕ ವರ್ಗಭೇದವನ್ನು ಉಳಿಸಿಕೊಳ್ಳಲು ಪ್ರಯತ್ನಿಸುವುದನ್ನು ವಿರೋಧಿಸುವ ಬಂಡಾಯ ಬರಹಗಾರರಿಗೂ ತಮ್ಮ ಬರಹಗಳಲ್ಲಿ ಅವುಗಳ 'ಘನತೆ' ಹೆಚ್ಚಿಸುವುದಕ್ಕಾಗಿ ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಬಳಸುವಂತಹ ಪ್ರವೃತ್ತಿಯಿಂದ ಹೊರಬರಲು ಸಾಧ್ಯವಾಗಿಲ್ಲ ಎಂದು ಡಿ.ಎನ್. ಶಂಕರ ಭಟ್ಟರು ಅಭಿಪ್ರಾಯ ಪಟ್ಟಿದ್ದಾರೆ. ಕುವೆಂಪು ಅವರನ್ನು ಉದ್ದೇಶಿಸಿ ಅವರು ಈ ಅಭಿಪ್ರಾಯವನ್ನು ಮಂಡಿಸಿಲ್ಲವಾದರೂ ಕುವೆಂಪು ಅವರು ಶೂದ್ರ ಸಮುದಾಯದಿಂದ ಬಂದವರಾಗಿದ್ದು ಇದನ್ನು ಅವರ ಬರಹಗಳಿಗೂ ಅನ್ವಯಿಸಬಹುದಾಗಿದೆ.

೩. ಕುವೆಂಪು ಕಾದಂಬರಿಗಳಲ್ಲಿ ದಲಿತ ಪಾತ್ರ ಚಿತ್ರಣ ಕುರಿತಂತೆ ಪ್ರಶ್ನೆಗಳನ್ನೆತ್ತಿದ ಬಿ.ಕೃಷ್ಣಪ್ಪ ಅವರು ಕುವೆಂಪು ಸಂಸ್ಕೃತಮಯ ಭಾಷೆ ಬಳಸಲು ಕಾರಣ ಆ ಕಾಲದ ಬ್ರಾಹ್ಮಣಶಾಹಿ ಭಾಷೆ, ಶೈಲಿಗೆ ಛಾಲೆಂಜ್ ಮಾಡುವುದಾಗಿತ್ತು ಎಂದು ಗ್ರಹಿಸುತ್ತಾರೆ. ಇದು ಭಾಷೆಯ ಹೊರಮೈ ಕುರಿತ ಗ್ರಹಿಕೆಯಾದರೆ ಸಂಸ್ಕೃತದ ಭಾಷೆಯೊಳಗೆ ಹುದುಗಿರುವ ಜ್ಞಾನಕ್ಕೆ ಸಂಬಂಧಿಸಿದಂತೆ ವೈದಿಕ ವಾಙ್ಮಯದಲ್ಲಿ ಇರುವ ಪ್ರಗತಿಪರ ಚಿಂತನೆಗಳನ್ನು ಪರಿಷ್ಕರಿಸಿ ಬರೆಯುವುದು ವೈದಿಕ ಸನಾತನವಾದವನ್ನು ಅದರ ಸರಕಿನಿಂದಲೇ ಎದುರಿಸುವ ಕುವೆಂಪು ಅವರ ಯುದ್ಧತಂತ್ರಗಳಲ್ಲೊಂದು ಎಂದು ರಹಮತ್ ತರೀಕೆರೆ ಅವರು ಗುರುತಿಸುತ್ತಾರೆ. ಇದೇ ರೀತಿ ಸಂಸ್ಕೃತಭೂಯಿಷ್ಠತೆಯಿಂದ ಬರೆಯುವ ಕ್ರಮ ಕೂಡ ವೈದಿಕ ಸನಾತನವಾದವನ್ನು ಅದರ ಭಾಷೆಯ ನೆರವಿನಲ್ಲೇ ಎದುರಿಸುವ ಕುವೆಂಪು ಅವರ ಇನ್ನೊಂದು ಯುದ್ಧತಂತ್ರವಾಗಿರಬಹುದು ಎಂದು ಅನುಮಾನಿಸಬಹುದಾಗಿದೆ. ಈ ಸಂಸ್ಕೃತಭೂಯಿಷ್ಠತೆ 'ನಾನೇನು ನಿನಗಿಂತ ಕಮ್ಮಿಯಿಲ್ಲ' ಎಂದು

ತೋರಿಸುವ ತುಡಿತಗಳಿಂದ ಬಂದಿತು. ಇದರ ಹಿಂದೆ ಆಳುವ ವೈದಿಕ ಸಂಸ್ಕೃತಿಯ ಆಧ್ಯಾತ್ಮಿಕ ಹಕ್ಕುಗಳು ಶೂದ್ರರಿಗೂ ಇವೆ ಎಂಬ ಹಕ್ಕುದಾರಿಕೆಯ ನಿಲುವಿದೆ ಎಂದೂ ಅವರು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯ ಕನ್ನಡ-ಸಂಸ್ಕೃತ ಸಂಬಂಧಗಳ ಕುರಿತ ಚರ್ಚೆಯನ್ನು ಉಳಿದ ನಾಲ್ಕು ಬಗೆಯ ಸಾಹಿತ್ಯಿಕ ನೆಲೆಗಳಿಂದ ಸಾಮಾಜಿಕ ನೆಲೆಗೆ ಕೊಂಡೊಯ್ಯುತ್ತದೆ. ಕುವೆಂಪು ವೈದಿಕ ಸನಾತನವಾದಕ್ಕೆ ಸವಾಲಾಗಿ, ಯುದ್ಧತಂತ್ರವಾಗಿ ಮತ್ತು ಆಧ್ಯಾತ್ಮಿಕ ಹಕ್ಕುದಾರಿಕೆಯ ಪ್ರತಿಪಾದನೆಯಾಗಿ ಸಂಸ್ಕೃತವನ್ನು ಬಳಸುತ್ತಾರೆ ಎನ್ನುವ ಗ್ರಹಿಕೆಯಿದು.

೪. ಅನಂತಮೂರ್ತಿ ಅವರು ತಮ್ಮ 'ಇಂಗ್ಲಿಶ್ ಬ್ರಾಹ್ಮಣ, ಕನ್ನಡ ಶೂದ್ರ' ಲೇಖನದಲ್ಲಿ ಕುಮಾರವ್ಯಾಸ, ಪಂಪ, ಬಸವಣ್ಣರಂತಹ ಪ್ರಾಚೀನ ಕವಿಗಳು ಸಂಸ್ಕೃತದಲ್ಲಿದ್ದ ವಿಚಾರಗಳನ್ನು, ಕಾವ್ಯವನ್ನು ತಮ್ಮ ಜನರ ಸೊತ್ತಾಗಿ ಮಾಡಿರುವುದರ ಕಡೆ ನಮ್ಮ ಗಮನ ಸೆಳೆಯುತ್ತಾರೆ. 'ನಿತ್ಯದ ವ್ಯವಹಾರದಲ್ಲಿ ನಿರುದ್ಧೇಶವೂ, ನಿಯೋಗರಹಿತವೂ ಆಗಿರಬಹುದಾದ ಸಂಸ್ಕೃತದ ಬಳಕೆಯು ಕವಿತೆಯ ಚೌಕಟ್ಟಿನೊಳಗೆ ಕೆಲವು ಖಚಿತವಾದ ಕಲಾತ್ಮಕವಾದ ಉದ್ದೇಶಗಳನ್ನು ಹೊಂದಿರುತ್ತದೆ' ಎಂದು ಪಂಪನು ತನ್ನ ಸಾಹಿತ್ಯದಲ್ಲಿ ಸಂಸ್ಕೃತವನ್ನು ಬಳಸುವ ಹಿನ್ನೆಲೆಯನ್ನು ಕುರಿತು ಹೆಚ್.ಎಸ್ ರಾಘವೇಂದ್ರರಾವ್ ವಿಶ್ಲೇಷಿಸುತ್ತಾರೆ. ಅನಂತಮೂರ್ತಿ ಮತ್ತು ಹೆಚ್.ಎಸ್. ರಾಘವೇಂದ್ರರಾವ್ ಅವರು ಕುಮಾರವ್ಯಾಸ, ಬಸವಣ್ಣ, ಪಂಪ ಅವರ ಸಂದರ್ಭದಲ್ಲಿ ಮಾಡುವ ವಿಶ್ಲೇಷಣೆಗಳನ್ನು ಕುವೆಂಪು ಅವರ ಸಾಹಿತ್ಯದ ಸಂದರ್ಭಕ್ಕೂ ಅನ್ವಯಿಸಬಹುದಾಗಿದೆ. 'ಕುವೆಂಪು ಅವರ ಶೈಲಿ ಸಂಸ್ಕೃತದಿಂದ ತನ್ನ ಶಕ್ತಿಯನ್ನೂ ಮಲೆನಾಡಿನ ಜಾನಪದದಿಂದ ತನ್ನ ಜೀವವನ್ನೂ ಪಡೆದುಕೊಳ್ಳುತ್ತದೆ, ಆದ್ದರಿಂದ ಸಂಸ್ಕೃತದಿಂದ ಕನ್ನಡಕ್ಕೆ ಒಳಿತೇ ಆಗಿದೆ' ಎಂದು ಅನಂತಮೂರ್ತಿ ತಮ್ಮ 'ಬೆತ್ತಲೆ ಪೂಜೆ ಯಾಕೆ ಕೂಡದು?' ಲೇಖನದಲ್ಲಿ ವ್ಯಕ್ತಪಡಿಸುವ ಅಭಿಪ್ರಾಯ ಇದನ್ನು ಸ್ಪಷ್ಟಪಡಿಸುತ್ತದೆ. ಕುವೆಂಪು ಅವರ ಸಾಹಿತ್ಯದ ಮೂಲಕ ಸಂಸ್ಕೃತದಲ್ಲಿದ್ದ ಕಾವ್ಯಗಳು, ವಿಚಾರಗಳು ಮತ್ತು ಕಲಾತ್ಮಕ ಸೂಕ್ಷ್ಮಗಳ ಲಾಭ ಕನ್ನಡಕ್ಕೆ ದಕ್ಕಿವೆ ಎನ್ನುವ ಗ್ರಹಿಕೆ ಇದಾಗಿದೆ. ಇದರೊಂದಿಗೆ 'ಕನ್ನಡ ಭಾಷೆ ಮತ್ತು ವಾಙ್ಮಯದ ಒಡನಾಟದಿಂದ ಬಂದಿರುವ ಕಸುವನ್ನು ಕುವೆಂಪು ಗದ್ಯದಲ್ಲಿ' ರಹಮತ್ ಅವರು ಗುರುತಿಸುತ್ತಾರೆ.

೫. ಕನ್ನಡ ಮತ್ತು ಸಂಸ್ಕೃತ ಸಂಬಂಧ ಕುರಿತ ನಾಲ್ಕನೆಯ ಗ್ರಹಿಕೆ 'ಅನಿವಾರ್ಯವಾಗಿ ಕನ್ನಡದಲ್ಲಿ ಸಂಸ್ಕೃತ ಬಳಸುತ್ತಾರೆ' ಎನ್ನುವುದು. ಎಚ್.ಎಸ್. ರಾಘವೇಂದ್ರರಾವ್ ಅವರು ನಯಸೇನ ಮತ್ತು ಅಂಡಯ್ಯ ಅಚ್ಚಕನ್ನಡದಲ್ಲಿ ಬರೆಯಲು ಪ್ರಯತ್ನಿಸಿದ ಪ್ರಯೋಗವನ್ನು ಕುರಿತು ಬರೆಯುತ್ತ 'ಇವರ ಪ್ರಯೋಗಗಳು ಸಾಹಿತ್ಯಿಕವಾಗಿ ಏಕೆ ವಿಫಲವಾದವೆನ್ನುವುದು, ಅವರ ವೈಯಕ್ತಿಕ ಪರಿಮಿತಿಯ ಪ್ರಶ್ನೆಯೋ ಅಥವಾ ಮಹಾಕಾವ್ಯದಂಥ ಸುಧೀರ್ಘ ಬರವಣಿಗೆಯಲ್ಲಿ ಅನ್ಯಭಾಷಾ ಸಂಯೋಜನೆಯ ಅನಿವಾರ್ಯತೆಯನ್ನು ಸೂಚಿಸುತ್ತದೆಯೋ ಹೇಗೆ ಹೇಳುವುದು?' ಎಂಬ

ಪ್ರಶ್ನೆಯನ್ನೆತ್ತುತ್ತಾರೆ. ಆದರೆ ನಯಸೇನ, ಅಂಡಯ್ಯ ವಿಫಲವಾದ ಕಡೆ ಬಸವಣ್ಣ, ಬೇಂದ್ರೆ, ಕೆ.ಎಸ್.ನ ಮತ್ತು ಜಾನಪದ ಕವಿಗಳು ಯಶಸ್ವಿಯಾಗುವುದನ್ನು ಹೆಚ್.ಎಸ್. ರಾಘವೇಂದ್ರರಾವ್ ಅವರು ಗಮನಿಸುತ್ತಾರೆ. 'ಆದರೆ ಯಶಸ್ವಿಯಾದ ಈ ಕವಿಗಳೆಲ್ಲರ ಕಾವ್ಯ ಸ್ವರೂಪದಲ್ಲಿ ಕಿರುಗಾತ್ರದವಾಗಿದ್ದು, ಅದೇ ಕುವೆಂಪು, ಪು.ತಿ.ನ, ಗೋಕಾಕರು ಮಹಾಕಾವ್ಯಗಳನ್ನು ಬರೆದಾಗ ಸಂಸ್ಕೃತವನ್ನು ಸಂಯೋಜಿಸಿಕೊಳ್ಳುತ್ತಾರೆ' ಎನ್ನುವ ಮೂಲಕ ಈ ಕವಿಗಳಿಗೆ 'ಸಂಸ್ಕೃತ ಬಳಕೆ ಅನಿವಾರ್ಯವಾಗಿರಬಹುದು' ಎಂದು ಗ್ರಹಿಸುತ್ತಾರೆ. ಕುವೆಂಪು ಅವರಿಗೆ ಸಂಸ್ಕೃತ ಬಳಕೆ ಅನಿವಾರ್ಯವಾಗಿದ್ದಿರಬಹುದಾದ ಸಾಧ್ಯತೆಯನ್ನು ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಮುಂದಿನ ಮಾತುಗಳನ್ನು ಕಾಣಬಹುದಾಗಿದೆ : 'ಕುವೆಂಪು ಅವರಿಗೆ ಹೊರಗಿನ ಹೋರಾಟದಷ್ಟೇ ಒಳಗಿನ ಹೋರಾಟವೂ ಮುಖ್ಯವಾಗಿತ್ತು. ಉಳಿದವರಿಗೆ ಹೊರಗಿನ ಹೋರಾಟದ ಬಗ್ಗೆ ಆಸಕ್ತಿ. ಒಳಗಿನ ಸ್ಥಿತಿಯ ಬಗ್ಗೆ ಸಹಾನುಭೂತಿ, ಆದರೆ ಕುವೆಂಪು ಅವರಂತೆ ಅದಕ್ಕಾಗಿ ಅವರು ಹೋರಾಡಬೇಕಾದ ಅಗತ್ಯವಿರಲಿಲ್ಲ. ಕುವೆಂಪು ಕಾವ್ಯ 'ಚರಿತ್ರೆ'ಯನ್ನು ತನ್ನ ಒಡಲಲ್ಲಿಟ್ಟುಕೊಂಡೆ ಸೃಷ್ಟಿಯಾದ ಕಾವ್ಯ'

೬. ಮಡಿಕೇರಿಯಲ್ಲಿ ನಡೆದ ೧೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಸ್ಥಾನದಿಂದ ಡಿ.ವಿ.ಜಿ ಅವರು ಮಾಡಿದ ಭಾಷಣದಲ್ಲಿ ಹೀಗೆ ಹೇಳುತ್ತಾರೆ: 'ಲೋಕೋಪಕಾರದ ವಿಸ್ತೀರ್ಣವನ್ನು ಅಳೆದು ನೋಡಿದರೆ, ಬಸವಣ್ಣ ಅಲ್ಲಮರುಗಳಿಂದಲೂ, ಪುರಂದರ ಕನಕರುಗಳಿಂದಲೂ ಆಗಿರುವಷ್ಟು ವೇದಾಂತ ತತ್ವಪ್ರಚಾರವು ಅನೇಕ ಉಪನಿಷದ್ವ್ಯಾಖ್ಯಾತರುಗಳಿಂದ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು; ಕುಮಾರವ್ಯಾಸ ಕುಮಾರವಾಲ್ಮೀಕಿಗಳಿಂದ ಆಗಿರುವಷ್ಟು ಭಾರತ ರಾಮಾಯಣ ಕಥಾಪ್ರಸಾರವು ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದ ನೀಲಕಂಠ ಗೋವಿಂದರಾಜರುಗಳಿಂದ ಆಗಿಲ್ಲವೆಂದು ಹೇಳಬಹುದು. ಹೀಗೆ ಸಂಸ್ಕೃತದ ಸಂತತಿ ಖ್ಯಾತಿಗಳು ಕನ್ನಡದ ಮೂಲಕ ಅಭಿವೃದ್ಧಿಯಾಗುತ್ತಿವೆ.' ಡಿ.ವಿ.ಜಿ ಪ್ರಕಾರ ಕನ್ನಡದ ಮೂಲಕ ಸಂಸ್ಕೃತ ಬದುಕುವ ರೀತಿಯಿದು. 'ಯಾವತ್ತೂ ಸಂಸ್ಕೃತದಂತಹ 'ಅಖಿಲ' ಅಥವಾ ಕ್ಲಾಸಿಕಲ್ ಚೌಕಟ್ಟುಗಳಿಗೆ ಹೊಸಬಾಳು ಸಿಕ್ಕುವುದೇ ದೇಶಿಭಾಷೆ ಮತ್ತು ಸಾಹಿತ್ಯಗಳ ರೂಪಾಂತರಗಳಲ್ಲಿ'.[೨೨] ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯ ಕಾಲಘಟ್ಟದಲ್ಲಿ ಪಂಪ, ರನ್ನ, ಬಸವಣ್ಣ, ಅಲ್ಲಮ, ಪುರಂದರ, ಕನಕ, ಕುಮಾರವ್ಯಾಸ, ಕುಮಾರವಾಲ್ಮೀಕಿ ಮುಂತಾದವರ ಕನ್ನಡದ ಮೂಲಕ ಸಂಸ್ಕೃತ ಮರುಜೀವ ಪಡೆಯುವಂತೆ ಹೊಸಗನ್ನಡ ಸಂದರ್ಭದಲ್ಲಿ ಕುವೆಂಪು ಅವರ ಕನ್ನಡದ ಮೂಲಕ ಸಂಸ್ಕೃತ ಮರುಜೀವ ಪಡೆಯುತ್ತದೆ. 'ಖರೇಯೆಂದರೆ, ಸಂಸ್ಕೃತ, ಫಾರಸಿ ಮುಂತಾದ ಅಭಿಜಾತ ಭಾಷೆಗಳಿಗೆ ಭಾರತದಲ್ಲಿ ಮರುಹುಟ್ಟು ಒದಗಿರುವುದೇ ಜನಭಾಷೆಗಳಲ್ಲಿ. ಪಂಪ ಅಲ್ಲಮ, ಅಕ್ಕ, ಕುವೆಂಪು ಬೇಂದ್ರೆ ಮುಂತಾದ ಕವಿಗಳು, ಸಂಸ್ಕೃತ ವಾಙ್ಮಯಕ್ಕೆ ತಮ್ಮ

ಸೃಜನಶೀಲತೆಯ ಮೂಲಕ ಮರುಹುಟ್ಟು ಕೊಟ್ಟರು.'[೨೩] ಕುವೆಂಪು ಅವರ ಕನ್ನಡದ ಮೂಲಕ ಸಂಸ್ಕೃತ ಮರುಜೀವ ಪಡೆಯುತ್ತದೆ ಎನ್ನುವ ಗ್ರಹಿಕೆಯಿದು.

೨.೩.೩.೪ ಕುವೆಂಪು ಸಂದರ್ಭದಲ್ಲಿ ಕನ್ನಡ-ಸಂಸ್ಕೃತ ಸಂಬಂಧ ಕುರಿತ ಆರು ಗ್ರಹಿಕೆಗಳ ತೌಲನಿಕ ವಿಶ್ಲೇಷಣೆ

ಕುವೆಂಪು ಅವರ ಭಾಷೆ ಸಂಸ್ಕೃತಭೂಯಿಷ್ಠವಾಗಿದೆ ಎನ್ನುವ ಗ್ರಹಿಕೆಯಲ್ಲಿ ಇದೊಂದು ತೊಡಕಾಗಿದ್ದು ಲೇಖಕ ಸಂಸ್ಕೃತದ ಅವಲಂಬನೆಯಿಂದ ಹೊರಬರಬೇಕು ಎನ್ನುವ ದನಿಯಿದೆ. ಕೆಳವರ್ಗಗಳ ಬರಹಗಾರರು ಸಂಸ್ಕೃತ ಪದಗಳನ್ನು ಬಳಸುವುದರಿಂದ ತಮ್ಮ ಬರಹದ ಘನತೆ ಹೆಚ್ಚುತ್ತದೆ ಎಂದು ಭಾವಿಸುತ್ತಾರೆ ಎಂಬ ಗ್ರಹಿಕೆಯ ಹಿಂದೆ ಅದು ತಪ್ಪು ಭಾವನೆಯಾಗಿದ್ದು ಅದನ್ನು ಕೈಬಿಡಬೇಕು ಎನ್ನುವ ಒತ್ತಾಯವಿದೆ. ಕುವೆಂಪು ವೈದಿಕ ಸನಾತನವಾದಕ್ಕೆ ಸವಾಲಾಗಿ, ಯುದ್ಧತಂತ್ರವಾಗಿ ಮತ್ತು ಆಧ್ಯಾತ್ಮಿಕ ಹಕ್ಕುದಾರಿಕೆಯ ಪ್ರತಿಪಾದನೆಯಾಗಿ ಸಂಸ್ಕೃತವನ್ನು ಬಳಸುತ್ತಾರೆ ಎನ್ನುವ ಗ್ರಹಿಕೆಯಲ್ಲಿ ಇದುವೇ ಪ್ರಭುತ್ವಭಾಷೆಗೆ ಎದುರಾಗಿ ಕೆಳವರ್ಗಗಳು ನಿರ್ಮಿಸಿಕೊಳ್ಳುವ ತಮ್ಮ ಸ್ವಾಭಿಮಾನವನ್ನು ಸ್ಥಾಪಿಸಿಕೊಳ್ಳುವ ಪ್ರತಿಸಂಸ್ಕೃತಿಯ ಮಾದರಿ ಎನ್ನುವ ತಿಳುವಳಿಕೆಯಿದೆ. ಕುವೆಂಪು ಅವರ ಸಾಹಿತ್ಯದ ಮೂಲಕ ಸಂಸ್ಕೃತದಲ್ಲಿದ್ದ ಕಾವ್ಯಗಳು, ವಿಚಾರಗಳು ಮತ್ತು ಕಲಾತ್ಮಕ ಸೂಕ್ಷ್ಮಗಳ ಲಾಭ ಮತ್ತು ಸಂಸ್ಕೃತದ ಕಸುವು ಕನ್ನಡದ ಗದ್ಯಕ್ಕೆ ದಕ್ಕಿವೆ ಹಾಗೂ ಸಂಸ್ಕೃತ ಕನ್ನಡಕ್ಕೆ ಅನಿವಾರ್ಯವಾಗಿದೆ ಎನ್ನುವ ಗ್ರಹಿಕೆಗಳ ಹಿಂದೆ ಕುವೆಂಪು ಕನ್ನಡದಲ್ಲಿ ಸಂಸ್ಕೃತ ಬಳಸುತ್ತಿರುವುದರ ಕುರಿತ ಅನುಮೋದನೆಯಿದೆ. ಈ ಐದೂ ಗ್ರಹಿಕೆಗಳ ಹಿಂದೆ ಸಂಸ್ಕೃತಕ್ಕೆ ವಿರೋಧ, ಸಂಸ್ಕೃತದಲ್ಲಿರುವುದನ್ನು ಪಡೆಯಲು ಹೂಡುತ್ತಿರುವ ಯುದ್ಧತಂತ್ರ ಮತ್ತು ಹಕ್ಕುದಾರಿಕೆಯ ಪ್ರಶ್ನೆ, ಸಂಸ್ಕೃತದಿಂದ ಪಡೆಯುವುದು ಸಾಕಷ್ಟಿದೆ ಎನ್ನುವ ತಿಳುವಳಿಕೆ ಕೆಲಸ ಮಾಡುತ್ತಿದ್ದು ಇದರ ಆಳದಲ್ಲಿ ದೇಶಿ ಭಾಷೆಗಳ ಕೀಳರಿಮೆ ಅಂತರ್ಗತವಾದಂತಿದೆ. ಆದರೆ ಕನ್ನಡದ ಮೂಲಕ ಸಂಸ್ಕೃತ ಮರುಜೀವ ಪಡೆಯುತ್ತದೆ ಎನ್ನುವ ಗ್ರಹಿಕೆ ಮೂಡಿಸಿದ ಆರನೆಯ ಗ್ರಹಿಕೆಯ ಹಿಂದೆ ದೇಶಿ ಭಾಷೆಗಳು ಮರಳಿ ಗಳಿಸಿದ ಆತ್ಮಗೌರವದ ಮಂದಸ್ಮಿತವಿದೆ. ಈ ಮಂದಸ್ಮಿತಕ್ಕೆ ಕಾರಣವಾಗಿದ್ದು, ತಾನು ಪ್ರಭುತ್ವಭಾಷೆಯಾಗಿದ್ದಾಗ ದೇಶಿಭಾಷೆಗಳ ಮೇಲೆ ಬಂಡೆಗಲ್ಲಿನಂತೆ ಬಂದೆರಗಿದ ಸಂಸ್ಕೃತ ತಾನು ಅಪ್ಪಚ್ಚಿ ಮಾಡಬಯಸಿದ ಭಾಷೆಗಳಿಂದಲೇ ಮತ್ತು ತಾನು ಯಾವ ವರ್ಗದ ಜನರನ್ನು ಸಾಮಾಜಿಕ ಕಾರಣಕ್ಕಾಗಿ ದೂರ ಇಟ್ಟೆನೋ ಆ ವರ್ಗದ ಪ್ರತಿಭೆಗಳಿಂದಲೇ ಮರುಹುಟ್ಟು ಪಡೆಯಬೇಕಾದ ಚೋದ್ಯದ ವಿದ್ಯಮಾನ! ಕುವೆಂಪು ಅವರೇ ಇದಕ್ಕೆ ಸಮರ್ಥ ನಿದರ್ಶನವಾಗಿದ್ದಾರೆ.

೨.೩.೪ ಕುವೆಂಪು ಚಿಂತನೆಗಳ ಸಂಕೀರ್ಣತೆ

ಕುವೆಂಪು ಅವರು ಭಾಷೆಗಿಂತ ಮೊದಲು ಬದುಕಿಗೇ ಮೊದಲ ಪ್ರಾಧಾನ್ಯತೆ ನೀಡುತ್ತಾರೆ. "ಭಾಷೆಯೂ ಅಲ್ಲ ; ಲಿಪಿಯೂ ಅಲ್ಲ ; ಮತವೂ ಅಲ್ಲ ; ಸರ್ವೋದಯಕ್ಕೆ ಭದ್ರವಾದ ಆಧಾರ ಮತ್ತು ಬಲಿಷ್ಠ ಆಸ್ತಿಭಾರವಿರುವುದು 'ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು' ಎಂಬ ಆರ್ಥಿಕ ಸಮತೆಯಲ್ಲಿ ಎಂದು. ಆದರೂ ಆರ್ಥಿಕ ಸಮತೆಯ ಆನಂತರ ಮತ, ಲಿಪಿ ಮತ್ತು ಭಾಷೆಗಳು ಭಾವೈಕ್ಯಕ್ಕೆ ಸಹಾಯಕ ಕಾರಣಗಳಾಗುತ್ತವೆ."[೨೪] ಎನ್ನುವ ಕುವೆಂಪು ಅವರ ಚಿಂತನೆಯಲ್ಲಿ ಗೊಂದಲಗಳಿಲ್ಲ. ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಮೂಲಕವೇ ಸಮಾಜವಾದಿ ತತ್ವದ ಅನುಷ್ಠಾನ ಸಾಧ್ಯ ಎಂಬ ವಿಶ್ವಾಸ ಅವರದು. ಆದರೆ ಭಾಷೆಯನ್ನೇ ಸಾಧನವನ್ನಾಗಿ ಮಾಡಿಕೊಂಡು ಆರ್ಥಿಕ ಅಸಮಾನತೆಯನ್ನು ಸೃಷ್ಟಿ ಮಾಡುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳ ಬಗ್ಗೆ ಕುವೆಂಪು ಚಿಂತಿಸಿದಂತೆ ಕಾಣುವುದಿಲ್ಲ.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅದರ ಸಮಾಜವಾದಿ ಸಾಂವಿಧಾನಿಕ ಆಶಯಗಳು ಸಾಕಾರಗೊಳ್ಳಲು ಇಲ್ಲಿನ ಶಿಕ್ಷಣ ಮತ್ತು ಆಡಳಿತದ ಮಾಧ್ಯಮ ಜನಭಾಷೆಗಳಾದ್ದಾಗಿರಬೇಕು ಎಂದು ಕುವೆಂಪು ಸದಾ ಪ್ರತಿಪಾದಿಸುತ್ತ ಬಂದವರು. ಆದರೆ ವಿದೇಶಿಯ ಭಾಷೆಯೊಂದು ಭಾರತದಂತಹ ದೇಶಗಳಲ್ಲಿ ನೆಲೆಯೂರಲು ಪ್ರಯತ್ನಿಸುವ ಹಿಂದಿನ ರಾಜಕಾರಣದ ಕಡೆ ಕುವೆಂಪು ಅವರ ಚಿಂತನೆ ಹೊರಳುವುದಿಲ್ಲ. 'ನಮ್ಮಲ್ಲಿ ಕಾರಣಾಂತರದಿಂದ ನಾವು ವಿದೇಶಿಯ ಭಾಷೆಯೊಂದನ್ನು ಉಪಯೋಗಿಸುತ್ತಿದ್ದೇವೆ.'[೨೫] ಎನ್ನುವಲ್ಲಿ ಬ್ರಿಟೀಷರು ಬಂದಿದ್ದರಿಂದ ಭಾರತೀಯರು ಆಕಸ್ಮಿಕವಾಗಿ ಇಂಗ್ಲಿಷ್ ಭಾಷೆ ಕಲಿಯಬೇಕಾಯಿತು ಎಂದು ಕುವೆಂಪು ಗ್ರಹಿಸಿದಂತೆ ತೋರುತ್ತದೆ.

'ನಿಜವಾಗಿಯೂ ಕನ್ನಡ ಪ್ರೇಮ ಇದ್ದು, ಕನ್ನಡ ಮಾಧ್ಯಮ ಸರಿಯಾಗಿ ನಡೆಯುತ್ತೆ ಅಂದರೆ ಒಂದು ವರ್ಷ, ಎರಡು ವರ್ಷಗಳಲ್ಲಿ ಎಲ್ಲರೂ ಆ ಭಾಷೆ ತೆಗೆದುಕೊಳ್ಳುತ್ತಾರೆ'[೨೬] ಎಂಬ ವಿಶ್ವಾಸಕ್ಕೆ ಒಂದು ಕಡೆ ಕುವೆಂಪು ಅವರು ಜಾರುತ್ತಾರೆ. ಇದು ಕೂಡ ಭಾಷೆ ಕುರಿತ ಚಿಂತನೆಯನ್ನು ಅಭಿಮಾನ–ನಿರಭಿಮಾನದ ಭಾವುಕ ನೆಲೆಯಿಂದ ಮಾಡುವುದರ ಕಾರಣಕ್ಕೆ. ಕುವೆಂಪು ಅವರ ಒಟ್ಟು ಚಿಂತನೆಯನ್ನು ಗಮನಿಸಿದಾಗಲೂ ಇಂಗ್ಲಿಷನ್ನು ಒಂದು ಸಾಮ್ರಾಜ್ಯಶಾಹಿ ಭಾಷೆ ಎಂದು ಅವರು ಗ್ರಹಿಸಿದಂತೆ ತೋರುವುದಿಲ್ಲ. 'ಇಂಗ್ಲಿಷ್ ಮಾಧ್ಯಮವನ್ನುಳಿಸಿಕೊಳ್ಳಬೇಕೆಂಬುದು ಪಟ್ಟಭದ್ರ ಹಿತಾಸಕ್ತಿಗಳ ಹತಾಶ ಪ್ರಯತ್ನವಾಗಿದೆ' ಎಂದು ಹೇಳಿದರೂ 'ಪಟ್ಟಭದ್ರ ಹಿತಾಸಕ್ತಿಗಳು' ದೇಶದೊಳಗಿನವು ಎನ್ನುವ ಗ್ರಹಿಕೆಯಿದೆ. ಮುಖ್ಯವಾಗಿ ಭಾಷೆಗೂ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಭಾಷೆಯ ಮೂಲಕ ನಿಯಂತ್ರಿಸುತ್ತಿರುವ ಅರ್ಥಿಕತೆಯ ನಡುವಿರುವ ಸಂಬಂಧದ ಚರ್ಚೆಗೆ ಅವರ ಚಿಂತನೆ ಪ್ರವೇಶ ಪಡೆಯುವುದಿಲ್ಲ. ಇಂಗ್ಲಿಷ್ ಹೇರಿಕೆಯ ಹಿಂದೆ ಕೇಂದ್ರ ಸರ್ಕಾರದ 'ಬಲಾತ್ಕಾರ' ಮತ್ತು ಭಾಷೆಯೊಂದನ್ನು ಕಲಿಕೆಯ ದೃಷ್ಟಿಯಲ್ಲಿ ಮಾತ್ರ ಚಿಂತಿಸಿದಂತೆ ತೋರುತ್ತದೆ. ತೃತೀಯ

ರಾಷ್ಟ್ರಗಳಲ್ಲಿ ಅದಾಗಲೇ ಸಾಮ್ರಾಜ್ಯಶಾಹಿ ಶಕ್ತಿಗಳು ಇಂಗ್ಲಿಷಿನ ಮೂಲಕ ಪರೋಕ್ಷ ಅಧಿಕಾರ ಗಳಿಸಿದ್ದನ್ನು ಲೇಖಕರು ಗಮನಿಸಿದಂತಿಲ್ಲ. ಆಫ್ರಿಕಾ ಖಂಡಗಳ ಜನರನ್ನು ಸಾಮ್ರಾಜ್ಯಶಾಹಿ ದೇಶಗಳು ಅಮಾನುಷವಾಗಿ ಚಿತ್ರಿಸಿದಂತೆಯೇ ಕಲ್ಪಿಸಿಕೊಳ್ಳುವ ಕುವೆಂಪು ಅವರು ಅವುಗಳ ಹುನ್ನಾರವನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋಲುತ್ತಾರೆ.

ಕುವೆಂಪು ಅವರಿಗೆ ಭಾರತದ ಒಕ್ಕೂಟವ್ಯವಸ್ಥೆಯ ಬಗ್ಗೆ ಕಡುನಿಷ್ಠೆ. ಕರ್ನಾಟಕವನ್ನು ಭಾರತ ಒಕ್ಕೂಟದ ಒಂದು ಭಾಗವಾಗಿ ನೋಡುವುದರಲ್ಲಿ ಮತ್ತು ಕನ್ನಡವನ್ನು ದೇಶದ ಒಟ್ಟು ಹಿತಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಬೆಳೆಸುವುದರಲ್ಲಿ ಅವರಿಗೆ ಆಸಕ್ತಿ. 'ಜಯ್ ಭಾರತ ಜನನಿಯ ತನುಜಾತೆ/ ಜಯ ಹೇ ಕರ್ಣಾಟಕ ಮಾತೆ!' ಎಂದು ಆರಂಭವಾಗುವ ನಾಡಗೀತೆ 'ಜಯ ಹೇ ಕರ್ಣಾಟಕ ಮಾತೆ' ಯಲ್ಲಿಯೇ ಇದು ಸ್ಪಷ್ಟವಾಗಿದೆ. 'ಇಲ್ಲಿ ಕರ್ಣಾಟಕಮಾತೆಗೆ ಸಲ್ಲುವ ಜಯಕಾರ ಆಕೆ ಭಾರತ ಜನನಿಯ ತನುಜಾತೆಯಾಗಿರುವುದರಿಂದಲೇ ಭಾರತಾಂಬೆಯ ಅಂಗೋದ್ಭವೆಯಾಗಿ ವಿನಾ ಕರ್ಣಾಟಕಕ್ಕೆ ಬೇರೆಯ ಅಸ್ತಿತ್ವವೆಲ್ಲಿ?' ಎಂದು ಕುವೆಂಪು ಪ್ರಶ್ನಿಸುತ್ತಾರೆ. ಸ್ವಾತಂತ್ರ್ಯ ಸಿಕ್ಕ ಆರಂಭದ ದಶಕದಲ್ಲಿ ಬರೆದ ಈ ಕವಿತೆ ಮತ್ತು ಭಾಷಣ ಆ ಸಂದರ್ಭದಲ್ಲಿ ದೇಶದ ವಿವಿಧ ರಾಜ್ಯಗಳ ಜನ ಕೇಂದ್ರವನ್ನು ಒಪ್ಪಿಕೊಂಡ ಬಗೆ ಮತ್ತು ಅದರ ಮೇಲಿಟ್ಟ ವಿಶ್ವಾಸವನ್ನು ತೋರುತ್ತದೆ. ಆದರೆ ನಂತರದ ದಶಕಗಳಲ್ಲಿ ಕ್ರಮೇಣ ಆ ವಿಶ್ವಾಸ ನಶಿಸಿದ್ದನ್ನು ಕಾಣಬಹುದು . ಕುವೆಂಪು ಅವರು ಕೇಂದ್ರ ಸರ್ಕಾರವು ರಾಜ್ಯಗಳ ಮೇಲೆ ಹಿಂದಿ ಹೇರಿಕೆ ಮಾಡುವುದರ ವಿರುದ್ಧ ತೋರುವ ಪ್ರತಿಭಟನೆಯೇ ಇದಕ್ಕೊಂದು ಉದಾಹರಣೆ. ಕನ್ನಡವನ್ನು ಕನ್ನಡತನವನ್ನು ವರ್ಣಿಸುವ ಕುವೆಂಪು ಅವರ ಬಹು ಜನಪ್ರಿಯ ಪದ್ಯವೊಂದಿದೆ.

'ಎಲ್ಲಾದರೂ ಇರು, ಎಂತಾದರೂ ಇರು !
ಎಂದೆಂದಿಗೂ ನೀ ಕನ್ನಡವಾಗಿರು!
ಕನ್ನಡ ಗೋವಿನ ಓ ಮುದ್ದಿನ ಕರು,
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು;
ನೀ ಮೆಟ್ಟುವ ನೆಲ ಅದೆ ಕರ್ನಾಟಕ;
ನೀನೇರುವ ಮಲೆ ಸಹ್ಯಾದ್ರಿ
ನೀ ಮುಟ್ಟುವ ಮರ – ಶ್ರೀಗಂಧದ ಮರ;
ನಿ ಕುಡಿಯುವ ನೀರ್ ಕಾವೇರಿ'

ಗಡಿಗಳಿರುವ ಭೌಗೋಳಿಕ ಕರ್ನಾಟಕಕ್ಕಿಂತ ಸಾಂಸ್ಕೃತಿಕ ಕರ್ನಾಟಕಕ್ಕೆ ಕುವೆಂಪು ಹೆಚ್ಚು ಒತ್ತು ನೀಡುವುದು ಈ ಪದ್ಯದಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಈ ಪದ್ಯಕ್ಕೆ ಕುವೆಂಪು ಹೀಗೆ ವಿವರಣೆ ನೀಡುತ್ತಾರೆ: " 'ಕನ್ನಡ ಕಾವ್ಯಗಳನ್ನೋದುವಾತನು ಅಮೇರಿಕೆಯಲ್ಲಿದ್ದರೂ ಅದು ಕರ್ನಾಟಕವೇ.

'ಪಂಪನನೋದುವ ನಾಲಗೆ' ಮಿಸಿಸಿಪಿ ಹೊಳೆಯ ನೀರನ್ನು ಈಂಟಿದರೂ ಕಾವೇರಿಯೆ. 'ಕಾವೇರಿಯಿಂದಮಾಗೋದಾವರಿ ವರಮಿರ್ದ ನಾಡು' ಎಂದು ನೃಪತುಂಗನು ಬಣ್ಣಿಸಿದ ಕರ್ಣಾಟಕ ನೆಲದ ಎಲ್ಲೆ ಇಂದು ಭೌಗೋಳಿಕವಾಗಿ ವ್ಯತ್ಯಸ್ತವಾಗಿರುವುದಕ್ಕಾಗಿ ನಾವು ಪರಿತಪಿಸುವುದು ಅನಾವಶ್ಯಕ. ಕಾವೇರಿ ಮತ್ತು ಗೋದಾವರಿಗಳು ನಿತ್ಯವೂ ನಿರ್ದಿಗಂತವಾಗಿ ವಿಸ್ತರಿಸುತ್ತಿರುವ ಕರ್ಣಾಟಕದ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಭೂಮಿಕೆಯ ಗಡಿಗಳಿಗೆ ಸಂಕೇತ ಮಾತ್ರವಾಗಿರಲಿ. ಅವು ಭಾವೋಪಯೋಗಿಗಳೆ ಹೊರತು ಲೋಕೋಪಯೋಗಿಗಳಾಗುವುದಿಲ್ಲ"[೨೭] ಎಂದು ಕುವೆಂಪು ನಿರ್ಣಯಿಸುತ್ತಾರೆ. ವಿಶ್ವಮಾನವ ಸಂದೇಶ ಸಾರಿದ ಕವಿಗೆ ಇಂತಹ ಉದಾರವಾದಿ ದೃಷ್ಟಿಕೋನ ಅತ್ಯಂತ ಸಹಜ. "ಕರ್ನಾಟಕದ ಕಾವ್ಯ, ಕಲೆ ಸಂಸ್ಕೃತಿಗಳನ್ನು ಹೃದಯದಲ್ಲಿ ಪ್ರತಿಷ್ಠಾಪಿಸಿಕೊಂಡ ಕನ್ನಡಿಗರು ಭೌಗೋಳಿಕವಾದ ಎಲ್ಲೆಗಳಿಂದ ಹೆದರಬೇಕಾದ್ದಿಲ್ಲ" ಎನ್ನುವ ಮುಂದುವರಿದ ಮೇಲಿನ ಮಾತುಗಳೂ ಉದಾರವಾದಿ ಆದರ್ಶವಾದಿಯ ನುಡಿಗಳಂತಿವೆ.

ಚಿದಾನಂದಮೂರ್ತಿ ಅವರು ಜಾಗತಿಕ ವಿದ್ಯಮಾನಗಳನ್ನು ಮರೆಮಾಚಿ ಬೆಂಗಳೂರು ಪರಭಾಷಿಕರಿಂದ ಕರ್ನಾಟಕದ ಕೈತಪ್ಪುತ್ತಿದೆ ಎಂದು ವ್ಯಕ್ತಪಡಿಸುವ ತೀವ್ರ ಆತಂಕ ಒಂದು ಅತಿಯಾದರೆ; ಭೌಗೋಳಿಕ ಎಲ್ಲೆಗಳನ್ನು ಪೂರ್ಣ ನಿರ್ಲಕ್ಷಿಸಿ ಕುವೆಂಪು ಅವರು ಪ್ರತಿಪಾದಿಸುವ 'ಸಾಂಸ್ಕೃತಿಕ ಕನ್ನಡತನ'ವೂ ಇನ್ನೊಂದು ಅತಿ ಇರಬಹುದೇ, ಇದು ಒಂದು ಬಗೆಯಲ್ಲಿ ದೇಹವನ್ನು ನಿರಾಕರಿಸಿ ಆತ್ಮದ ಅಸ್ತಿತ್ವದ ಬಗ್ಗೆ ಮಾತನಾಡಿದಂತಲ್ಲವೇ ಎಂಬ ಪ್ರಶ್ನೆಗಳನ್ನು ಹುಟ್ಟು ಹಾಕಬಲ್ಲವು. ಆದರೆ 'ಭೌಗೋಳಿಕ ಕರ್ನಾಟಕ ಮತ್ತು ಮಾನಸಿಕ ಕರ್ನಾಟಕಗಳನ್ನು ಮುಖಾಮುಖಿ ಮಾಡುವ ವಿಧಾನ ಸೂಕ್ಷ್ಮಗ್ರಹಿಕೆಗೆ ಹಲವು ಸಾಧ್ಯತೆಗಳನ್ನು ಮುಂದಿಡುತ್ತವೆ. ಮುಖ್ಯವಾಗಿ ನಾವು ಕಲ್ಪಿಸಿಕೊಳ್ಳುವ, ರೂಢಿಸಿಕೊಳ್ಳುವ ಗುರುತುಗಳು ಹೇಗಿರಬೇಕು ಎಂಬುದನ್ನು ಇಲ್ಲಿ ಸೂಚಿಸಲಾಗಿದೆ. ಸಾಮಾನ್ಯವಾಗಿ ಇಂತಹ ಗುರುತುಗಳು ಸಮುದಾಯದ ಜನರನ್ನು ನಿಷ್ಕ್ರಿಯ ನೆಲೆಯಲ್ಲಿ ಪರಿಭಾವಿಸುತ್ತವೆ. ಅಂದರೆ ಗುರುತುಗಳು ಇವೆ. ನೀವು ಅದನ್ನು ಒಪ್ಪಿಕೊಳ್ಳಿ ಎಂಬ ನಿಲುವು ಮುಖ್ಯವಾಗುತ್ತವೆ. ಆದರೆ ಕುವೆಂಪು ಮುಂದಿಟ್ಟ ಗುರುತು ಜನರನ್ನು ಕ್ರಿಯಾತ್ಮಕ ನೆಲೆಯಲ್ಲಿ ಪರಿಭಾವಿಸುತ್ತದೆ'.[೨೮] ಕರ್ನಾಟಕ ಏಕೀಕರಣದ ನಂತರ ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎನ್ನುವುದನ್ನು ಗಾಯಕರು 'ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು' ಎಂದು ಹಾಡತೊಡಗಿದಾಗ ಬೇಂದ್ರೆ ಅದನ್ನು ಹಾಗೆ ಹೇಳಕೂಡದೆಂದು ಹಿಂದಿನಂತೆ 'ಉದಯವಾಗಲಿ' ಎಂದೇ ಹಾಡಲು ಸೂಚಿಸುತ್ತಾರೆ. ಬೇಂದ್ರೆ, ಕುವೆಂಪುರಂತಹ ಕನ್ನಡದ ಚಿಂತಕರು ಭೌಗೋಳಿಕ ಕರ್ನಾಟಕಕ್ಕಿಂತ ಸಾಂಸ್ಕೃತಿಕ ಕರ್ನಾಟಕಕ್ಕೆ ಹೆಚ್ಚು ಒತ್ತು ನೀಡುವ ಹಿಂದೆ ಇನ್ನೊಂದು ಉದ್ದೇಶವಿರುವಂತಿದೆ. 'ಕನ್ನಡದ ಗುರುತು ಎನ್ನುವ ಕಲ್ಪನೆ ಆಕ್ರಮಣಶೀಲವಾಗಬಹುದು. ಅದು ಅನ್ಯರನ್ನು ಬಹಳ ಅಸಹನೆಯಿಂದ ಕಾಣುವಂತ ಒಂದು

ಪರಿಕಲ್ಪನೆ ಆಗಬಹುದು. ಈ ಅಪಾಯವನ್ನು ಅವಾಗಲೇ ಅರ್ಥ ಮಾಡಿಕೊಂಡಿದ್ದ ನಮ್ಮ ಕನ್ನಡದ ಬರಹಗಾರರು ಕನ್ನಡ ಅನ್ನೋದು ಇನ್ನೂ ಆಗಿಲ್ಲದಂತಹ ಸ್ಥಿತಿ, ಕನ್ನಡ ನಾಡು ಅಂದ್ರೆ ನಾವು ಯಾವಾಗಲೂ ಕನಸು ಕಾಣೋ ಸ್ಥಿತಿಯೇ ಆಗಿರಬೇಕು ಎಂದು ಹೇಳಿದರು'[೨೯] ಇಂತಹ ನಿಲುವಿಗೆ ಇನ್ನೊಂದು ಆಯಾಮವೂ ಇದೆ. ಕರ್ನಾಟಕ ರಾಜ್ಯ ನಿರ್ಮಾಣದ ಹಿಂದೆ ಇರುವುದು ಒಂದು ರಾಜಕೀಯ ನಿರ್ಧಾರವೇ ಹೊರತು ಅದೊಂದು ಸಾಂಸ್ಕೃತಿಕ ಅವಿಷ್ಕಾರವಲ್ಲ ಎನ್ನುವ ಒಳನೋಟ. ಇದು ಕುವೆಂಪು ಮತ್ತು ಬೇಂದ್ರೆ ಅವರಲ್ಲಿ ಇದ್ದಂತಿದೆ.[೩೦] ಕರ್ನಾಟಕ ರಾಜ್ಯ ನಿರ್ಮಾಣ ಒಂದು ರಾಜಕೀಯ ನಿರ್ಧಾರವಾಗಿತ್ತು ಎನ್ನುವ ಗ್ರಹಿಕೆಯ ಕುರಿತು ಈ ಅಧ್ಯಯನಕ್ಕೆ ಎದುರಾದ ಪ್ರಶ್ನೆಗಳನ್ನು 'ರಾಜಕೀಯ ಧೋರಣೆಗಳು' ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಕನ್ನಡದ ಬಹುದೊಡ್ಡ, ಬಹುಮುಖಿ ಮತ್ತು ಸಂಕೀರ್ಣ ಪ್ರತಿಭೆಯಾದ ಕುವೆಂಪು ಅವರು ತಮ್ಮ ಹಲವು ಚಿಂತನೆಗಳಲ್ಲಿ ವೈರುಧ್ಯದ ನಿಲುವು ಹೊಂದಿದ್ದಂತೆ ತೋರುತ್ತದೆ. 'ನೂರಾರು ದೇವರ ನೂಕಾಚೆ ದೂರ' ಎಂದು ಕರೆಕೊಡುವ ಮೂಲಕ ವೈಚಾರಿಕರಂತೆ ಕಂಡರೆ, ಪುನರ್ಜನ್ಮವನ್ನು ನಂಬುತ್ತ ಸಂಪ್ರದಾಯವಾದಿಯಂತೆ ಗೊಂದಲ ಮೂಡಿಸುತ್ತಾರೆ.

> **'ಕರಿಯರದೋ, ಬಿಳಿಯರದೋ ಯಾರದಾದರೆ ಏನು?**
> **ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ**
> **ವಿಜಯನಗರವೊ ಮೊಗಲರಾಳ್ವಿಕೆಯೋ? ಇಂಗ್ಲೀಶರೋ?**
> **ಎಲ್ಲರೂ ಜಿಗಣೆಗಳೇ ನನ್ನ ನೆತ್ತರಿಗೆ!**
> **ಕತ್ತಿ ಪರದೇಶಿಯಾದರೆ ಮಾತ್ರ ನೋವೆ?**
> **ನಮ್ಮವರೆ ಹದ ಹಾಕಿ ತಿವಿದರದು ಹೂವೆ?**

ಎಂದು ಎಲ್ಲ ಪ್ರಭುತ್ವಗಳನ್ನು ಟೀಕಿಸುತ್ತ, ಸದಾ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವ ಕುವೆಂಪು ಸಾಮಂತಶಾಹಿಯ ನೆನಪುಗಳನ್ನು ನಮ್ಮ ಪರಂಪರೆಯ ಹೆಮ್ಮೆಯೆಂದು ಬಿಂಬಿಸುವ ಗೀತೆಯನ್ನೂ ರಚಿಸುತ್ತಾರೆ. ೧೯೪೯ರಲ್ಲಿ ಮೈಸೂರಿನ ಮಹಾರಾಜಾ ಕಾಲೇಜಿನ ಸಮಾರಂಭವೊಂದರಲ್ಲಿ ಕುವೆಂಪು ಅವರು ಏಕೀಕರಣದ ಪರವಾಗಿ ಮಾತನಾಡಿದಾಗ ಕರ್ನಾಟಕ ಸರ್ಕಾರದ ಸಚಿವರೊಬ್ಬರಿಂದ ಎಚ್ಚರಿಕೆಯ ನೋಟಿಸ್ ಬರುತ್ತದೆ. ಇದಕ್ಕೆ ಪ್ರತ್ಯುತ್ತರವಾಗಿ ಕುವೆಂಪು 'ಅಖಂಡ ಕರ್ನಾಟಕ' ಎಂಬ ಕವನ ಬರೆಯುತ್ತಾರೆ. ಬೂಟಾಟಿಕೆಯ ರಾಜಕಾರಣವನ್ನು ವಿರೋಧಿಸುವ ಈ ಕವನ 'ಇಂದು ಬಂದು ನಾಳೆ ಸಂದು ಹೋಹ ಸಚಿವ ಮಂಡಲ'ವನ್ನು ಲೇವಡಿ ಮಾಡುತ್ತ ಪಂಪ, ರನ್ನ, ಜನ್ನ, ನಾಗವರ್ಮ ಮುಂತಾದ ಕವಿಗಳದೇ ಶಾಶ್ವತ ಮಂತ್ರಿಮಂಡಲ ಎಂದು ಘೋಷಿಸುತ್ತದೆ. ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಈ ಕವನ ತಕ್ಷಣದಲ್ಲಿ ರೋಮಾಂಚನ ಮೂಡಿಸುವುದು ಹೌದಾದರೂ ಪ್ರಜಾಪ್ರಭುತ್ವ ವ್ಯವಸ್ಥೆಯ ಮಂತ್ರಿಗಳನ್ನು ವಿರೋಧಿಸಲು

ರಾಜಪ್ರಭುತ್ವದ ದೊರೆ ನೃಪತುಂಗನನ್ನು 'ಅಖಂಡ ಕರ್ನಾಟಕದ ಶಾಶ್ವತ ಮಂತ್ರಿಮಂಡಲದ ಚಕ್ರವರ್ತಿ' ಎಂದು ಕರೆದು ಗೊಂದಲ ಮೂಡಿಸುತ್ತದೆ. ಕುವೆಂಪು ನೃಪತುಂಗನನ್ನು ಕವಿಯಾಗಿ ಇಲ್ಲಿ ಪರಿಗಣಿಸಿರುವುದು ಸ್ಪಷ್ಟ. ಆದರೆ ನೃಪತುಂಗ ರಾಜ್ಯವಿಸ್ತಾರದ ಹಂಬಲವುಳ್ಳ ಒಬ್ಬ ದೊರೆಯೆಂಬುದು ಗಮನಿಸಿದರೆ ಈ ರೂಪಕದ ವಿರೋಧಾಭಾಸ ಗಮನಕ್ಕೆ ಬರುತ್ತದೆ. 'ನೃಪತುಂಗ ಒಂದು ರಾಜ್ಯವನ್ನು ಆಳಿದ ದೊರೆ. ಆದರೆ ಕರ್ನಾಟಕದ ಅವನ ಪರಿಕಲ್ಪನೆ, ಹಾಲೀ ಪ್ರಜಾಪ್ರಭುತ್ವ ವ್ಯವಸ್ಥೆಯ ಚೌಕಟ್ಟಿನ ಒಳಗೇ ನಡೆದಿರುವ ಕನ್ನಡ ಭಾಷಾ ಚಳುವಳಿಗಿಂತ ಹೆಚ್ಚು ಚಲನಶೀಲವೂ ಪ್ರಜಾಸತ್ತಾತ್ಮಕವಾಗಿಯೂ ಇದೆ ಎನ್ನುವುದು ಚರಿತ್ರೆಯ ವ್ಯಂಗ್ಯ' ಎಂದು ಜಿ.ರಾಜಶೇಖರ್ ತಮ್ಮ 'ಭಾವಿಸಿದ ಜನಪದ' ಲೇಖನದಲ್ಲಿ ಅಭಿಪ್ರಾಯ ಪಡುವಂತೆ ಕುವೆಂಪು ನೃಪತುಂಗನನ್ನು ನೋಡಿದರೆ ಎಂಬ ಪ್ರಶ್ನೆ ಮೂಡುತ್ತದೆ. ಆದರೆ ಕುವೆಂಪು ಅವರ ಇತರ ಕವಿತೆಗಳಲ್ಲಿಯೂ ಆಳರಸರನ್ನು ಕೀರ್ತಿಸುವ ಗುಣಗಳಿದ್ದು ಸಮಸ್ಯಾತ್ಮಕವಾಗಿವೆ.

ಭಾಷೆಗೆ ಸಂಬಂಧಿಸಿದ ವಿಚಾರದಲ್ಲಿಯೂ ಕುವೆಂಪು ಅವರು ಅಂತಹ ಕೆಲವು ವೈರುಧ್ಯಗಳನ್ನು ಹೊಂದಿದ್ದಾರೆ. ಹೀಗೆ ವೈರುಧ್ಯವೆನಿಸುವ ಅವರ ಚಿಂತನೆಗಳಲ್ಲಿ ಕೆಲವು ಇನ್ನೂ ಬಗೆಹರಿಯದೆ ಉಳಿದಿದ್ದರೆ, ಇನ್ನು ಕೆಲವು ಚಿಂತನೆಗಳು ಮೇಲ್ನೋಟಕ್ಕೆ ಮಾತ್ರ ವೈರುಧ್ಯವೆನಿಸುತ್ತಿದ್ದು ಹಲವು ಆಯಾಮಗಳಲ್ಲಿ ಅವನ್ನು ಚರ್ಚಿಸಿದಾಗ ಅದು ವೈರುಧ್ಯವಲ್ಲ, ಒಂದೇ ಸಂಗತಿಯ ವಿಭಿನ್ನ ನೆಲೆಯ ಚಿಂತನೆಗಳು ಎಂದು ಅರಿವಾಗುತ್ತದೆ. ಭಾಷೆಗೆ ಸಂಬಂಧಿಸಿದ ಕುವೆಂಪು ಅವರ ಚಿಂತನೆಗಳ ವಿಚಾರದಲ್ಲಿಯೂ ಇದು ಅನ್ವಯವಾಗುವಂತಹದು. ಇಂಗ್ಲಿಶ್ ಮತ್ತು ಸಂಸ್ಕೃತ ಬಳಕೆಯ ಕುರಿತ ಅವರ ಚಿಂತನೆಗಳು ಈ ರೀತಿ ಭಿನ್ನ ನೆಲೆಗಳನ್ನು ಹೊಂದಿವೆ. ವೈರುಧ್ಯವಲ್ಲದ ಆದರೆ ಮೇಲ್ನೋಟಕ್ಕೆ ವೈರುದ್ಯವೆನಿಸುವ ಕುವೆಂಪು ಅವರ ಚಿಂತನೆಗಳನ್ನು ಅರಿಯಲು ಈ ಅಧ್ಯಾಯದಲ್ಲಿ ಯತ್ನಿಸಲಾಗಿದೆ.

ಬಹುಮುಖಿ ಮತ್ತು ಸಂಕೀರ್ಣ ಪ್ರತಿಭೆಯಾದ ಕುವೆಂಪು ಅವರ ಕನ್ನಡ ಅಸ್ಮಿತೆಯ ಚಿಂತನೆಗಳ ನೆಲೆಯನ್ನು ಸಾಹಿತ್ಯವಾದಿ ನೆಲೆಗೆ ಸೀಮಿತಗೊಳಿಸಲಾಗದು. ಅವರ ಚಿಂತನೆಗಳಲ್ಲಿ ಸಾಂಸ್ಕೃತಿಕ ಹುಡುಕಾಟದ ನೆಲೆಯೂ ದಟ್ಟವಾಗಿದೆ. ಆದರೆ ಇದು ಹೆಚ್ಚು ವ್ಯಕ್ತವಾಗುವುದು ಅವರ ಕಾವ್ಯ ಮತ್ತು ಕಥನ ಸಾಹಿತ್ಯದಲ್ಲಿ.

ಕುವೆಂಪು ಅವರ ಕನ್ನಡ ಅಸ್ಮಿತೆಯನ್ನು ಸಂಗ್ರಹಿಸಿ ನೋಡಬಹುದಾದರೆ 'ರಾಜಭಾಷೆ ದೇವ ಭಾಷೆಗಳ ಬಂಧನದಿಂದ ಬಿಡಿಸಿಕೊಂಡ ಮಾತೃಭಾಷೆ; ಯಜಮಾನ ಸಂಸ್ಕೃತಿಗೆ ಸವಾಲೊಡ್ಡುವ ದೇಸಿ ಸಂಸ್ಕೃತಿ; ಮೌಢ್ಯ ಕಂದಾಚಾರಗಳನ್ನು ಮೀರಿ ನಿಲ್ಲುವ ವಿಚಾರಮತಿ; ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ಪ್ರಜಾತಾಂತ್ರಿಕ ನಿಲುವು; ಸಾಂಸ್ಥಿಕ ಮತ ಧರ್ಮಗಳನ್ನು ನಿರಾಕರಿಸಿದ ವಿಶ್ವ ಚೇತನದಲ್ಲಿ ನಂಬಿಕೆ ಇರಿಸಿದ ಅಧ್ಯಾತ್ಮಿಕತೆ; ವಿಜ್ಞಾನದ ಪ್ರಗತಿಯನ್ನು ಮೆಚ್ಚಿದರೂ ಭೋಗಾಸಕ್ತ ಜೀವನ ಮಾದರಿಗೆ ನಿರಾಕರಣೆ; ಮಹಿಳೆಯನ್ನು ಮಾತೆ, ಸಹಧರ್ಮಿಣಿ ಹಾಗೂ ಸತಿ

ಎಂದು ಗೌರವಿಸುವ ಮೌಲ್ಯ; ಸಾಮಾನ್ಯವೂ ಅಸಾಮಾನ್ಯವೂ ಒಂದೇ ಎಂಬ ದೃಷ್ಟಿಕೋನ; ಪ್ರಕೃತಿಯೇ ದೇಗುಲ ಎಂಬ ಪರಿಸರ ಪ್ರೀತಿ; 'ಶಿವನಿಲ್ಲದೆ ಕವಿ ಕುರುಡನೋ, ಶಿವ ಕಾವ್ಯದ ಕಣ್ಣೋ' ಎಂಬ ಸಾಹಿತ್ಯದ ಮೌಲ್ಯ. ಇವು ನವ ಕನ್ನಡತ್ವ ನಿರ್ಮಾಣದ ಪ್ರಯತ್ನಗಳಿಗೆ ಭದ್ರ ಆಧಾರ ಸ್ತಂಭಗಳನ್ನೊದಗಿಸುವ ಭೂಮಿಕೆಯಾಗಿದೆ[೩೧]

ಕುವೆಂಪು ಅವರ ಕನ್ನಡ ಅಸ್ಮಿತೆ ಹಲವು ದೊಡ್ಡ ಚಿಂತಕರಲ್ಲಿ ಸಹಜವಾಗಿರುವಂತೆ ಸಂಕೀರ್ಣತೆಯನ್ನೂ, ವೈರುಧ್ಯತೆಗಳನ್ನೂ ಪಡೆದಿವೆ. ಈ ಎಲ್ಲಾ ಸಂಕೀರ್ಣತೆಗಳೂ, ವೈರುಧ್ಯತೆಗಳೂ ಕನ್ನಡಪ್ರಜ್ಞೆಯನ್ನು ರೂಪಿಸುವುದರಲ್ಲಿ ಮುಖ್ಯಪಾತ್ರ ವಹಿಸಿವೆ. ಕುವೆಂಪು ಅವರು ಕರ್ನಾಟಕದ ಒಟ್ಟು ಜನಮಾನಸದಲ್ಲಿ ಕನ್ನಡಪ್ರಜ್ಞೆಯನ್ನು ಗಾಢವಾಗಿ ಬಿತ್ತಿದವರು. ತಮ್ಮ ಕವಿತೆಗಳ ಮೂಲಕ ಕನ್ನಡದ ಭಾವಲೋಕವನ್ನು, ಕಾದಂಬರಿಗಳು ಮತ್ತು ನಾಟಕಗಳ ಮೂಲಕ ಸಾಮಾಜಿಕ ಘನತೆಯನ್ನು, ತಮ್ಮ ವಿಚಾರಸಾಹಿತ್ಯದ ಮೂಲಕ ವೈಚಾರಿಕತೆಯನ್ನು ಕುವೆಂಪು ಮೂಡಿಸಿದ್ದಾರೆ. ಇದೆಲ್ಲವೂ ಕನ್ನಡದ ಮೂಲಕ ಹರಿದುಬಂದಿದ್ದು ಕನ್ನಡ ಅಸ್ಮಿತೆಯ ಭಾಗವಾಗಿ ಪುಷ್ಠಿಪಡೆದು ಕನ್ನಡಪ್ರಜ್ಞೆಯಾಗಿ ಚೈತನ್ಯಶೀಲವಾಗಿದೆ. ಈ ಕನ್ನಡಪ್ರಜ್ಞೆ ಪ್ರಜಾಪ್ರಭುತ್ವದ ಮೌಲ್ಯಗಳು, ಸಮಾಜವಾದಿ ಆಶಯಗಳು ಮತ್ತು ವೈಚಾರಿಕ ಪ್ರಜ್ಞೆಗಳೊಂದಿಗೆ ಕಸಿಗೊಂಡು ರೂಪುಗೊಂಡಿದ್ದು ಆರೋಗ್ಯವಂತ ಕರ್ನಾಟಕದ ಸಂವಿಧಾನದಂತಿದೆ.

೨.೪ ಲಂಕೇಶ್ ಅವರ ಚಿಂತನೆಗಳು

೨.೪.೧ ಪೀಠಿಕೆ

ಪಿ.ಲಂಕೇಶ್ (೧೯೩೫–೨೦೦೦) ಅವರ ಊರು ಶಿವಮೊಗ್ಗ ಜಿಲ್ಲೆಯ ಹಾರನಹಳ್ಳಿ ಪ್ರಾಂತ್ಯದ ಕೊನಗವಳ್ಳಿ. ಎರಡು ದಶಕಗಳ ಕಾಲ ಇಂಗ್ಲಿಶ್ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದ ಲಂಕೇಶ್ ಅವರು ನಂತರ ಸಿನಿಮಾ ಕ್ಷೇತ್ರದತ್ತ ಹೊರಳಿದರು. ಲಂಕೇಶರು ತಾವು ಆರಂಭಿಸಿದ ತಮ್ಮದೇ ಹೆಸರಿನ 'ಲಂಕೇಶ್ ಪತ್ರಿಕೆ'ಯ ಬರವಣಿಗೆಗಳ ಮೂಲಕ, ಕಥೆ, ಕವಿತೆ, ನಾಟಕ ಮತ್ತು ಕಾದಂಬರಿಗಳ ಮೂಲಕ ಜಾತ್ಯತೀತ, ವೈಚಾರಿಕ, ಸಮಾಜವಾದಿ ಕರ್ನಾಟಕವನ್ನು ಕಟ್ಟಲು ಪ್ರಯತ್ನಿಸಿದರು. ಕುವೆಂಪು ಅವರ ನಂತರದಲ್ಲಿ ದಟ್ಟ ವೈಚಾರಿಕ ತಳಹದಿಯ ಕನ್ನಡಪ್ರಜ್ಞೆಯನ್ನು ರೂಪಿಸಿದವರು ಲಂಕೇಶ್.

ಲಂಕೇಶರು ಸಾಹಿತ್ಯವಿಮರ್ಶೆಯನ್ನು ಅಕಡೆಮಿಕ್ ಶಿಸ್ತಿನಲ್ಲಿ ಬರೆದವರಲ್ಲ. 'ಅದು ಅನೇಕ ಸುಳ್ಳುಗಳಿಗೆ ಕಾರಣವಾಗಬಹುದು ಎಂಬುದಾಗಿ ಕೆಲವು ಬಾರಿ ಅತೀ ಎನ್ನುವಷ್ಟು–ನಂಬಿದ್ದ ಲಂಕೇಶ್ ತಮ್ಮದೇ ಅನೌಪಚಾರಿಕ ವಿಮರ್ಶಾ ಭಾಷೆಯೊಂದನ್ನು ಬೆಳೆಸಿಕೊಂಡರು'[೩೨] ಇದು ಅವರ ಮಿತಿಯೂ ಹೌದು. ಶಕ್ತಿಯೂ ಹೌದು. ಅಕೆಡೆಮಿಕ್ ಶಿಸ್ತಿರದ ಕಾರಣ ವಿಮರ್ಶೆಯೊಂದು

ಒಳಗೊಳ್ಳಬೇಕಾದ ಸಂಗತಿಗಳಿಂದ ಲಂಕೇಶರ ವಿಮರ್ಶೆ ಸೊರಗಿದರೆ, ಭಾರವಾದ ಅಕೆಡೆಮಿಕ್ ಶಿಸ್ತುಗಳ ಗೈರುಹಾಜರಿಯ ಕಾರಣದಿಂದಲೇ ಅದು ಎಲ್ಲ ವರ್ಗದ ಓದುಗರನ್ನು ತಲುಪಲು ಯಶಸ್ವಿಯಾಯಿತು. ಈ ಲಕ್ಷಣ ಲಂಕೇಶರ ಭಾಷೆ ಕುರಿತ ಚಿಂತನೆಯನ್ನು ಮಂಡಿಸುವ ಬರವಣಿಗೆಗಳಿಗೂ ಅನ್ವಯಿಸುತ್ತದೆ.

ಲಂಕೇಶ್ ಸಾಹಿತ್ಯವನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಿದ್ದರು. ಜಾಗೃತ ಸಾಹಿತ್ಯ ಸಮಾವೇಶದ ಕೊನೆಯ ದಿನ ಅವರಾಡಿದ ಮಾತುಗಳಲ್ಲಿ ಈ ಗಂಭೀರತೆಯ ಸ್ವರೂಪವನ್ನು ಅರಿಯಬಹುದು. "ಒಳಜೀವವೇ ಇಲ್ಲದವರು ಸಾಹಿತಿಯಾಗುವುದಿಲ್ಲ. ಒಳಜೀವ–ಇನ್ನರ್ ಲೈಫ್– ಅಂದರೆ ಏನೆಂದರೆ, ಜನರ ಸಂಪರ್ಕಕ್ಕೆ ಮೀರಿ, ಬಾಹ್ಯ ಜಗತ್ತಿನ ಆಗುಹೋಗುಗಳನ್ನೆಲ್ಲ ಹೊಟ್ಟೆಯಲ್ಲಿ ತುಂಬಿಕೊಂಡು ನೋಯುವ, ನವೆಯುವ ಅನುಭವ; ಸೃಷ್ಟಿಕಾರ್ಯದ ಮೂಲದ್ರವ್ಯ ಅದು. ಇದನ್ನುಳ್ಳ ಸೂಕ್ಷ್ಮಜ್ಞನಾದ ಪ್ರತಿಯೊಬ್ಬ ಸಾಹಿತಿಯೂ ಸಾವಿರಾರು ಜನರೆದುರು ಮಾತಾಡುವಾಗ ಸಾರ್ವಜನಿಕ ಕ್ರಿಯೆಯಲ್ಲಿ ತೊಡಗಿದಾಗ ದಿಗ್ಭ್ರಮೆಗೊಳ್ಳುತ್ತಾನೆ. ಹತ್ತು ನಿರರ್ಥಕ ಸಭೆಗಳು ಆತನ ಹತ್ತುಹನಿ ಜೀವರಸವನ್ನು ನಾಶ ಮಾಡುತ್ತವೆ, ಇಂಗಿಸುತ್ತವೆ. ಆದರೆ ಅರ್ಥಪೂರ್ಣ ಕ್ರಿಯೆಯಲ್ಲಿ, ಅರ್ಥಪೂರ್ಣ ಸಭೆಯಲ್ಲಿ, ಆತನ ಆಂತರ್ಯಕ್ಕೆ ಹೊಸಜೀವ ಹನಿಯುತ್ತದೆ"[೩೩] ಇಲ್ಲಿನ 'ಬಾಹ್ಯ ಜಗತ್ತಿನ ಆಗುಹೋಗುಗಳನ್ನೆಲ್ಲ ಹೊಟ್ಟೆಯಲ್ಲಿ ತುಂಬಿಕೊಂಡು ನೋಯುವ, ನವೆಯುವ ಅನುಭವ' ಎನ್ನುವುದು ಸಾಹಿತ್ಯಕ್ಕೆ ಸಾಮಾಜಿಕ ನೆಲೆಯನ್ನೂ ಒದಗಿಸುತ್ತಿದೆ.

ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಲಂಕೇಶರ ಅಂಕಣಬರಹಗಳು ಟೀಕೆ–ಟಿಪ್ಪಣಿ ಭಾಗ ೧,೨ (೧೯೯೭) ೩(೨೦೦೮) ಪ್ರಮುಖ ಬರವಣಿಗೆಗಳಾಗಿವೆ. ಪ್ರಸ್ತುತ (೧೯೭೦) ಕಂಡದ್ದು ಕಂಡ ಹಾಗೆ (೧೯೭೫) ಮತ್ತು ಬಿಟ್ಟು ಹೋದ ಪುಟಗಳು(೨೦೧೪) ಅವರ ವಿಮರ್ಶಾ ಲೇಖನ ಸಂಕಲನಗಳು. ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡ ಲೇಖನಗಳ ಪುಸ್ತಕ ಸಾಹಿತಿ ಸಾಹಿತ್ಯ ವಿಮರ್ಶೆ(೨೦೦೮), ಬಿಡಿ ಬರಹಗಳ ಸಂಗ್ರಹ 'ಮರೆಯುವ ಮುನ್ನ' ಐದು ಸಂಪುಟಗಳಲ್ಲಿ ಪ್ರಕಟವಾಗಿವೆ. ಮೇಲ್ಕಾಣಿಸಿದ ಕೃತಿಗಳಲ್ಲಿನ ಲಂಕೇಶರ ಆಯ್ದ ಬರಹಗಳಿಂದ ಅವರ ಕನ್ನಡ ಭಾಷೆ ಕುರಿತ ಅಸ್ಮಿತೆಯನ್ನು ಅರಿಯಲು ಯತ್ನಿಸಲಾಗಿದೆ.

೨.೪.೨ 'ವಸಾಹತುಭಾಷೆ ಇಂಗ್ಲಿಶ್'ನ ಚಿಂತನೆಗಳ ಗೈರು

ಇಂಗ್ಲಿಶ್ ಪ್ರಾಧ್ಯಾಪಕರಾಗಿ ಎರಡು ದಶಕಗಳ ಕಾಲ ಸೇವೆ ಸಲ್ಲಿಸಿದ, ಇಂಗ್ಲಿಶ್ ಮೂಲಕ ಜಗತ್ತಿನ ಸಾಹಿತ್ಯವನ್ನು ನಿರಂತರ ಓದುತ್ತಿದ್ದ ಲಂಕೇಶರು ಶಿಕ್ಷಣ ಮಾಧ್ಯಮವಾಗಿ ಇಂಗ್ಲಿಶನ್ನು ವಿರೋಧಿಸಿದವರು. 'ಕನ್ನಡ'ದ ಮೂಲಕ ಆಗತ್ಯವಾದ ಎಲ್ಲಾ ಭಾಷೆಗಳನ್ನು ನಮ್ಮ ಮಕ್ಕಳು ಕಲಿಯಬೇಕು. ಮುಖ್ಯವಾಗಿ 'ನಮ್ಮ ಶಾಲೆಗಳಲ್ಲಿ ಸಮಾನತೆ ಬರಬೇಕು'[೩೪] ಎನ್ನುವ ಚಿಂತನೆ

ಲಂಕೇಶರದು. ಇದು ಅನಂತಮೂರ್ತಿ ಅವರು ಪ್ರತಿಪಾದಿಸುತ್ತಿದ್ದ 'ಕಾಮನ್ ಸ್ಕೂಲ್' ಪರಿಕಲ್ಪನೆಯ ಸ್ವರೂಪದ್ದು. ಪ್ರತಿಷ್ಠೆಯ ಕಾರಣಕ್ಕಾಗಿ ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುವ ಪೋಷಕರಿಂದಾಗಿ ನಮ್ಮ ಶಿಕ್ಷಣ ವ್ಯವಸ್ಥೆ ಕೊಳೆಯುತ್ತಿದೆ ಎನ್ನುವ ಸಿಟ್ಟು ಲಂಕೇಶರಿಗಿತ್ತು. ಪೋಷಕರಲ್ಲಿ ಇಂಗ್ಲಿಶ್ ಬಗೆಗೆನ ವ್ಯಾಮೋಹಕ್ಕೆ ಮೂಲವಾದ ಖಾಸಗಿ ಶಿಕ್ಷಣ ವ್ಯವಸ್ಥೆಗೆ ಲಂಕೇಶರಿಗೆ ವಿರೋಧವಿತ್ತು. ಖಾಸಗಿ ಶಿಕ್ಷಣ ವ್ಯವಸ್ಥೆಯಿಂದಾಗಿ ಯುವಜನಾಂಗ ಕನ್ನಡದಿಂದ ದೂರವಾಗುತ್ತಾರೆ ಎಂಬ ಲಂಕೇಶರ ಆತಂಕ ಇಂದು ನಿಜವಾಗಿದೆ.

ನಮ್ಮ ಭಾಷೆ ನಮ್ಮ ಘನತೆ, ಗಾಂಭೀರ್ಯ, ಸ್ವಾಭಿಮಾನದೊಂದಿಗೆ ಹಣೆದುಕೊಂಡಿರುವ ಬಗ್ಗೆ ಆಳವಾಗಿ ಚಿಂತಿಸುವ ಲಂಕೇಶರು ಕನ್ನಡದ ಬಗ್ಗೆ ಗಂಭೀರರಾಗಿಲ್ಲದ ಕನ್ನಡಿಗರ ಅಭಿಮಾನಶೂನ್ಯತೆಯ ಬಗ್ಗೆ ವ್ಯಗ್ರರಾಗುತ್ತಾರೆ. ಲಂಕೇಶರ ಈ ವ್ಯಗ್ರತೆ ಕನ್ನಡ ಸಾಹಿತಿಯೊಬ್ಬನ ಪ್ರಾಮಾಣಿಕ ಸಿಟ್ಟಿನಂತೆ ತೋರುತ್ತದೆ ಎನ್ನುವುದು ನಿಜ. ಆದರೆ ಇದಕ್ಕೆ ಸ್ವಾಭಿಮಾನದ ಭಾವನಾತ್ಮಕ ಸಂಗತಿಗಳನ್ನು ಮೀರಿದ ಆಯಾಮಗಳಿವೆ ಎಂಬುದರತ್ತ ಲಂಕೇಶರ ಚಿಂತನೆ ವಿಸ್ತರಿಸದಂತೆ ಕಾಣುವುದಿಲ್ಲ.

ಕನ್ನಡಕ್ಕೆ ಬೆನ್ನು ಹಾಕಿ ಇಂಗ್ಲಿಷಿನತ್ತ ಮುಖ ಮಾಡಿರುವ ಜನರನ್ನು ಅಭಿಮಾನಶೂನ್ಯರು ಎಂದು ನಿರ್ಣಯಿಸುವಲ್ಲಿ ಸತ್ಯದ ಎಳೆಗಳಿದ್ದರೂ ಅದು ಸಂಪೂರ್ಣ ಸತ್ಯವಲ್ಲ. ಈ ರೀತಿಯ ಮಾತುಗಳನ್ನು ಬಿ.ಎಂ.ಶ್ರೀ ಅವರು ಹೇಳುತ್ತಿದ್ದ ಸಂದರ್ಭಕ್ಕೂ ಲಂಕೇಶರ ಸಂದರ್ಭಕ್ಕೂ ಅಗಾಧ ವ್ಯತ್ಯಾಸಗಳಿದ್ದವು. ಜಾಗತೀಕರಣಕ್ಕೆ ಭಾರತ ತೆರೆದುಕೊಂಡ ತೊಂಬತ್ತರ ದಶಕದ ನಂತರ ವಸಾಹತುಶಾಹಿ ಭಾಷೆಯಾಗಿ ಇಂಗ್ಲಿಶ್ ನಿಚ್ಚಳವಾಗಿ ಇಲ್ಲಿ ತನ್ನ ರಾಕ್ಷಸಹೆಜ್ಜೆಗಳನ್ನು ಊರಲಾರಂಭಿಸಿತು. ಬಹುರಾಷ್ಟ್ರೀಯ ಕಂಪನಿಗಳು ಶಿಕ್ಷಣದ ಮಾಧ್ಯಮವನ್ನು ನಿರ್ಧರಿಸತೊಡಗಿದವು. ಸರ್ಕಾರಿ ಶಾಲೆ ಮತ್ತು ಕನ್ನಡವನ್ನು ಉಳಿಸಬೇಕಾಗಿದ್ದ ಸರ್ಕಾರವನ್ನು ನಡೆಸುವವರೇ ಖಾಸಗಿ ಇಂಗ್ಲಿಷ್ ಶಾಲೆಗಳನ್ನು ತೆರೆಯತೊಡಗಿದರು. ತೊಂಬತ್ತರ ದಶಕದವರೆಗೆ ಬಹುಪಾಲು ಹೇರಿಕೆಯ ಭಾಷೆಯಾಗಿದ್ದ ಇಂಗ್ಲಿಶ್ ನಂತರ ಜನರ ಬೇಡಿಕೆಯ ಭಾಷೆಯಾಗಿ ಪರಿವರ್ತಿತವಾಯಿತು. ಇಂಗ್ಲಿಶ್ ಭಾಷೆ ಕನ್ನಡವನ್ನು ನಾಶ ಮಾಡುತ್ತ ಸುನಾಮಿ ವೇಗದಲ್ಲಿ ತನ್ನನ್ನು ಪ್ರತಿಷ್ಠಾಪಿಸಿಕೊಳ್ಳುತ್ತಿದ್ದರೂ ಇದರ ವಿರುದ್ಧ ತೊಂಬತ್ತರ ದಶಕದ ನಂತರ ಗೋಕಾಕ್ ಚಳವಳಿಯ ಮಾದರಿಯಲ್ಲಿ ಯಾವ ಚಳವಳಿಯೂ ಗಟ್ಟಿಯಾಗಿ ನಡೆಯಲಿಲ್ಲ. ಇದು ಕನ್ನಡ ಜನಸಮುದಾಯದ ಭಾಷೆಯ ಬಗೆಗಿನ ಆದ್ಯತೆಗಳು ಪಲ್ಲಟಗೊಂಡದ್ದನ್ನು ಸೂಚಿಸುತ್ತವೆ. ಯಾವುದೇ ಸಂಗತಿ ಕುರಿತ ನಮ್ಮ ಸಿಟ್ಟು ಆ ಸಂಗತಿಯ ಸುಧಾರಣೆಗೆ ಪರ್ಯಾಯಗಳನ್ನು ಸೂಚಿಸದಿದ್ದರೆ ಅದು ಸಿನಿಕತೆಗೆ ದಾರಿ ಮಾಡಿಕೊಡುತ್ತದೆ. ಲಂಕೇಶರ ಕನ್ನಡಿಗರ 'ಅಭಿಮಾನಶೂನ್ಯತೆ' ಕುರಿತ ಸಿಟ್ಟಿಗೂ ಈ ಮಿತಿಯಿದೆ.

ಪಾಶ್ಚಾತ್ಯ ಸಾಹಿತ್ಯವನ್ನು ಇಂಗ್ಲಿಷ್ ಮೂಲಕ ವಿಪುಲವಾಗಿ ಓದುತ್ತಿದ್ದ, ಈ ಕುರಿತು ದೊಡ್ಡ ಪ್ರಮಾಣದ ಮೌಲಿಕ ವಿಮರ್ಶಾ ಸಾಹಿತ್ಯ ರಚಿಸಿರುವ ಲಂಕೇಶರು ವಸಾಹತುಭಾಷೆಯಾಗಿ ಇಂಗ್ಲಿಶಿನ ಅಪಾಯಗಳನ್ನು ಚಿಂತಿಸಿದಂತಿಲ್ಲ. ಮೂಲಭೂತವಾಗಿ ವಸಾಹತುಶಾಹಿ ಬಗೆಗಿನ ಲಂಕೇಶರ ಧೋರಣೆಯೇ ವಸಾಹತುಭಾಷೆಯಾಗಿ ಇಂಗ್ಲಿಶನ್ನು ಗ್ರಹಿಸುವಲ್ಲಿ ಅವರಿಗೆ ತೊಡಕಾದಂತೆ ಕಾಣುತ್ತದೆ. 'ವಸಾಹತುಶಾಹಿ ಆಡಳಿತ, ದಬ್ಬಾಳಿಕೆಯನ್ನು ತಿರಸ್ಕರಿಸಿದರೂ, ಅದರ ಮುಖೇನ ಬಂದ ಆಧುನಿಕತೆ ದೇಶದಲ್ಲಿ ನಿಂತ ನೀರಾಗಿದ್ದಂತಹ ಸಮಾಜಕ್ಕೆ ಒದಗಿಸಿದ ಚಾಲನೆ ಬಗ್ಗೆ ಅವರಲ್ಲಿದ್ದ ವಿಶ್ವಾಸಕ್ಕೆ ಹೋಲಿಸಿದರೆ, ಅದೇ ವಸಾಹತುಶಾಹಿ ಆಧುನಿಕತೆ ಇಲ್ಲಿನ ಅನೇಕ ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳು ಪಡೆದುಕೊಳ್ಳುತ್ತಿದ್ದ ಚಾಲನೆಯನ್ನೂ ಕುಂಠಿತಗೊಳಿಸಿದ್ದರ ಬಗ್ಗೆ ಅವರ ಚಿಂತನೆ ಹರಿದಿದ್ದು ಕಡಿಮೆ. ಲಂಕೇಶರಿಗೆ ಆಧುನಿಕತೆ ಬಗ್ಗೆ ಇದ್ದ ವಿಶ್ವಾಸ, ಅವರನ್ನು ಪಾಶ್ಚಿಮಾತ್ಯ, ವೈಜ್ಞಾನಿಕ ಆಧುನಿಕತೆ ಹುಟ್ಟು ಹಾಕಿರುವ ಹೊಸ ಶೋಷಣೆಯ ವಿನ್ಯಾಸಗಳನ್ನು ಕುರಿತು ಇನ್ನೂ ಹೆಚ್ಚಿನ ವಿಚಾರ ಮಾಡದಂತೆ ತಡೆಯಿತೇ ಎಂಬ ಅನುಮಾನವನ್ನು ತಳ್ಳಿ ಹಾಕುವಂತಿಲ್ಲ' ಎಂಬ ವಿ.ಎಸ್. ಶ್ರೀಧರ್ ಅವರ ಅನುಮಾನಗಳಿಗೆ ಲಂಕೇಶರ ಚಿಂತನೆಗಳಲ್ಲಿ ಸಾಕ್ಷ್ಯಗಳು ಸಿಗುತ್ತವೆ. ತಮ್ಮ ಸಮಕಾಲೀನರಾಗಿದ್ದ ಅನಂತಮೂರ್ತಿ ಅವರು ಶಿಕ್ಷಣಮಾಧ್ಯಮವಾಗಿ ಇಂಗ್ಲಿಷ್ ಚಾಲ್ತಿಗೆ ಬರುತ್ತ ದೇಸಿಭಾಷೆಯಾದ ಕನ್ನಡದಂತಹ ಭಾಷೆಗಳನ್ನು ಅಳಿಸಿಹಾಕುತ್ತಿರುವ ಬಗ್ಗೆ ಗಾಢವಾಗಿ ಚಿಂತಿಸಿ ಬರೆಯುತ್ತಿದ್ದ ಸಂದರ್ಭದಲ್ಲಿ ಲಂಕೇಶರು ಆ ಬಗ್ಗೆ ಚಿಂತಿಸದಿರುವುದು ಕನ್ನಡ ಭಾಷೆ ಕುರಿತ ಅವರ ಚಿಂತನೆಯ ಒಂದು ಮಿತಿಯಾಗಿದೆ.

೨.೪.೩ ಭಾಷೆ-ಸಮಾಜಗಳ ನಡುವಿನ ಸಂಕೀರ್ಣ ಸಂಬಂಧಗಳ ವಿಶ್ಲೇಷಣೆ

ಕನ್ನಡಭಾಷೆಯ ಬಗ್ಗೆ ಗಾಢವಾಗಿ ಚಿಂತಿಸಿದ ಲಂಕೇಶ್ ವಚನಕಾರರ ರೀತಿಯಲ್ಲಿ ಆಳವಾದ ಚಿಂತನೆಯನ್ನು ಈ ಭಾಷೆಯೊಳಗೆ ಅಭಿವ್ಯಕ್ತಿಸುತ್ತಲೇ ಅದು ಸಾಮಾನ್ಯರಿಗೂ ತಲುಪುವಂತಹ ಶೈಲಿಯಲ್ಲಿ ಬರೆದವರು. 'ಲಂಕೇಶರ ಗದ್ಯ ಇಪ್ಪತ್ತನೆಯ ಶತಮಾನದ ಕೊಡುಗೆಯೆಂದು' ಎಚ್.ಎಸ್ ಶಿವಪ್ರಕಾಶ್ ಅವರ ಅಭಿಪ್ರಾಯವೂ ಈ ಮಾತುಗಳನ್ನು ಸಮರ್ಥಿಸುತ್ತದೆ. ಗೋಕಾಕ್ ಚಳವಳಿಯನ್ನು ಬೆಂಬಲಿಸಿದರೂ, ಕನ್ನಡಪರ ಹೋರಾಟಗಳ ಮೂಲಭೂತವಾದಿತನದ ಆಯಾಮಗಳನ್ನು ಲಂಕೇಶ್ ಎಚ್ಚರದಲ್ಲಿ ಗಮನಿಸುತ್ತಿದ್ದರು. ಕನ್ನಡಪರ ಹೋರಾಟಗಳು ಸ್ವಾರ್ಥಸಾಧನೆಯ ಮಾಧ್ಯಮಗಳಾದಾಗ ಕಟುವಾಗಿ ಟೀಕಿಸುತ್ತಿದ್ದರು. ಇದು ಅವರ ಮೇಲಿನ ದೈಹಿಕಹಲ್ಲೆಗೂ ಕಾರಣವಾದದ್ದಿದೆ.

ಲಂಕೇಶರು ಕನ್ನಡಭಾಷೆಯನ್ನು ಸಾಹಿತ್ಯದ ನೆಲೆಯಲ್ಲಿಯೇ ಚರ್ಚಿಸುತ್ತಾರೆ. 'ಬಿ.ಎಂ.ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತಗಳು' ಎಂಬ ಪುಸ್ತಕದ ಕವನಗಳನ್ನು ಓದುತ್ತಾ, ಅಲ್ಲಿಯ

ಕನ್ನಡದ ಸಂಪತ್ತನ್ನು ಕಂಡು ತನ್ನ ಎದೆ ಉಬ್ಬಿ ಹೋಗುತ್ತದೆ' ಎಂದು ಸಂಭ್ರಮಿಸುವ ಲಂಕೇಶರು. 'ಅಲ್ಲಿ ಇಂಗ್ಲಿಷಿನ ಅತ್ಯುತ್ತಮ ಕವನಗಳು ತಮ್ಮ ಚೆಂದವನ್ನು ಕನ್ನಡದಲ್ಲಿ ಉಳಿಸಿಕೊಳ್ಳುತ್ತವೆ. ಕೆಟ್ಟ ಕವನಗಳು ಬಿ.ಎಂ.ಶ್ರೀ ಕೈಯಲ್ಲಿ ಉತ್ತಮಗೊಳ್ಳುತ್ತವೆ' ಎಂದು ಮೆಚ್ಚುಗೆ ತೋರುತ್ತಾರೆ. ತ.ಸು ಶಾಮರಾಯರ ಕುರಿತ ಲೇಖನದಲ್ಲಿ ಭಾಷೆಯನ್ನು ಸೂಕ್ಷ್ಮವಾಗಿ ಬಳಸುವಂತೆ ಎಚ್ಚರಿಸುತ್ತಾರೆ. ಅನಂತಮೂರ್ತಿ ಅವರನ್ನು ಕುರಿತ ಬರಹದಲ್ಲಿ ಕನ್ನಡ ಭಾಷೆಗೆ ಅನಂತಮೂರ್ತಿ ಅವರು ಕೊಟ್ಟ ಕೊಡುಗೆಯನ್ನು ಗುರುತಿಸುತ್ತಾರೆ. ವೈದೇಹಿ ಅವರ ಸಾಹಿತ್ಯವನ್ನು ಓದಿ ಪುಳಕಗೊಳ್ಳುತ್ತಾರೆ. 'ಗುಬ್ಬಚ್ಚಿಯ ಗೂಡು' ಲೇಖನ ಲಂಕೇಶ್ ಭಾಷೆಯನ್ನು ಸಾಹಿತ್ಯಿಕ ನೆಲೆಯಲ್ಲಿ ನೋಡುತ್ತಿರುವುದರ ಪ್ರಾತಿನಿಧಿಕ ಬರಹವಾಗಿದೆ. ಈ ಲೇಖನದಲ್ಲಿ ಲಂಕೇಶರು ಸಾಹಿತ್ಯದ ಕುರಿತು ಹೀಗೆ ವ್ಯಾಖ್ಯಾನಿಸುತ್ತಾರೆ..'ಎಲ್ಲ ಕವನಗಳಲ್ಲಿನ ಸಿದ್ಧಾಂತ, ಬದ್ಧತೆ ಮುಖ್ಯವಾಗಿ ಬದುಕಿಗೆ, ಪ್ರೀತಿಗೆ ಮಾತ್ರ ಬದ್ಧ. ಈ ಸಿದ್ಧಾಂತಗಳು ಒಳ್ಳೊಳ್ಳೆಯ ಯೋಚನೆಗಳೆಲ್ಲ ಕವಿಯ ಆಟದ ಸಾಮಾನುಗಳು ಮಾತ್ರ, ನೆರೂಡ, ಬ್ರೆಕ್ಟ್ ತಮ್ಮ ಸಮತಾವಾದದ ಬಗ್ಗೆ ಎಷ್ಟು ಹೇಳಿಕೊಂಡರೂ ಅವರ ಕವನಗಳು ಕೆಟ್ಟುಹೋಗಿರುವ ಭಾಷೆಯನ್ನು ಹೃದಯಸ್ಪಂದನದ ಭಾಷೆಯ ಹತ್ತಿರ ತರುವುದಕ್ಕಾಗಿ, ಅಸಮಾನತೆ, ಅನ್ಯಾಯಗಳಿಂದ ಕೊಳೆತು ಹೋಗಿರುವ ಸಮಾಜಕ್ಕೆ ಗುಬ್ಬಚ್ಚಿಯ ಮುಗ್ಧ ನಿಸ್ವಾರ್ಥತೆ, ಸ್ವಾಭಿಮಾನದ ನಿಲುವು ತರುವುದಕ್ಕಾಗಿ, ಸಂಕೀರ್ಣಗೊಂಡು ಮನುಷ್ಯನನ್ನು ತನ್ನ ಅರಮನೆಯಲ್ಲಿ, ಗುಡಿಸಿಲಲ್ಲಿ ತಬ್ಬಲಿಯನ್ನಾಗಿ ಮಾಡುವ ಪರಿಸರಕ್ಕೆ ಮಾತು ಮೀರಿದ ಪ್ರೀತಿ ತರುವುದಕ್ಕಾಗಿ ನಡೆಸುವ ಪ್ರಯತ್ನಗಳು'

ಇಲ್ಲಿ ಲಂಕೇಶರು ಬಳಸುವ 'ಕೆಟ್ಟುಹೋಗಿರುವ ಭಾಷೆ'ಗೂ 'ಅಸಮಾನತೆ', ಅನ್ಯಾಯ' ಮತ್ತು 'ಕೊಳೆತು ಹೋಗಿರುವ ಸಮಾಜ'ಕ್ಕೂ ಸಂಬಂಧವಿದೆ. ಸಮಾಜದಲ್ಲಿ ಅಸಮಾನತೆ, ಅನ್ಯಾಯಗಳಿದ್ದಾಗ ಇಂತಹ ಸಮಾಜದಲ್ಲಿ ಚಾಲ್ತಿಯಲ್ಲಿರುವ ಭಾಷೆ ಕೂಡ ಕೆಟ್ಟುಹೋಗುತ್ತದೆ ಎನ್ನುವ ಗ್ರಹಿಕೆ ಇಲ್ಲಿದೆ. 'ಮುಗ್ಧ ನಿಸ್ವಾರ್ಥತೆ', 'ಸ್ವಾಭಿಮಾನ', 'ತಬ್ಬಲಿಯನ್ನಾಗಿ ಮಾಡುವ ಪರಿಸರಕ್ಕೆ ಮಾತು ಮೀರಿದ ಪ್ರೀತಿ ತರುವುದು' ಇವು ಸಾಹಿತ್ಯದ ಕೆಲಸ. ಸಾಹಿತ್ಯದ ಈ ಕೆಲಸ ಆಕಾರ ಪಡೆಯುವುದು ಭಾಷೆಯ ಮೂಲಕ. ಲೇಖಕರನ್ನು ಕುರಿತು ಬರೆಯುವಾಗ ಅವರಲ್ಲಿ 'ಜನಜೀವನದ ದುರಂತಮಯ ಸ್ಥಿತಿಯ ಬಗ್ಗೆ ಸಿಟ್ಟಾಗಲಿ ಕಿರಿಕಿರಿಯಾಗಲಿ ಇಲ್ಲ' ಎನ್ನುವಂತಹ ಹೇಳಿಕೆಗಳು ಲಂಕೇಶ್ ಅಪೇಕ್ಷಿಸುವ ಬರೆಹದ ಸಾಂಸ್ಕೃತಿಕ ಜವಾಬ್ದಾರಿಯ ಸ್ವರೂಪವನ್ನು ಕೂಡ ಸೂಚಿಸುತ್ತವೆ. ಇಲ್ಲಿ ಲಂಕೇಶರ ಕನ್ನಡ ಅಸ್ಮಿತೆ ಏಕಕಾಲದಲ್ಲಿ ಸಾಹಿತ್ಯದ ನೆಲೆಯದೂ, ಸಾಮಾಜಿಕ ನೆಲೆಯದೂ ಆಗಿ ಗೋಚರಿಸುತ್ತದೆ.

೨.೪.೪ ಕಲಾತ್ಮಕ ವ್ಯಸನವಾಗದ ಜೀವಂತ ಸಾಹಿತ್ಯದ ಹುಡುಕಾಟ

ಲಂಕೇಶರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು 'ಸಾಹಿತ್ಯದ ನೆಲೆ'ಯದ್ದು ಎನ್ನುವಾಗ ಆ 'ಸಾಹಿತ್ಯ'ದ ಸ್ವರೂಪದ ಬಗ್ಗೆಯೂ ಮರುಚಿಂತಿಸುವ ಅಗತ್ಯವಿದೆ. ಏಕೆಂದರೆ ಶುದ್ಧ ಸಾಹಿತ್ಯ ಎನ್ನುವುದು ಅವಾಸ್ತವಿಕ. ಕಾರಣ ಸಾಹಿತ್ಯ ಶೂನ್ಯದಲ್ಲಿ ಸೃಷ್ಟಿಯಾಗುವುದಿಲ್ಲ. ಅದು ಆಗಸದತ್ತ ಮುಖ ಮಾಡಿದ್ದರೂ ಅದು ನಿಂತಿರುವುದು ಈ ನೆಲದಲ್ಲೇ. ಅದರ ಬೇರುಗಳಿರುವುದು ಈ ನೆಲದೊಳಗೆಯೇ. ಈ ನೆಲದೊಳಗಣ ಪರಂಪರೆ, ನೆಲದ ಮೇಲಣ ಸಾಂಸ್ಕೃತಿಕ, ಸಾಮಾಜಿಕ, ಅಧಿಕಾರ ರಾಜಕಾರಣದ ಒಂದಿಲ್ಲೊಂದು ಬಗೆಯ ನಿರೂಪಣೆಯೇ ಸಾಹಿತ್ಯ. ಸಾಹಿತ್ಯ ಹೀಗಿರುವಾಗ ಸಾಹಿತ್ಯ ವಿಮರ್ಶೆಯಲ್ಲಿಯೂ 'ಶುದ್ಧ ಸಾಹಿತ್ಯ ವಿಮರ್ಶೆ ಎಂಬುದಿರಲು ಸಾಧ್ಯವಿಲ್ಲ; ಅದು ಸಾಂಸ್ಕೃತಿಕ ವಿಮರ್ಶೆಯೂ ಆಗಿರುತ್ತದೆ, ಆಗಿರಬೇಕು ಎಂಬ ಮಾತು ಒಂದು ಥಿಯರಿಯಾಗಿ ಈಗ ಪ್ರಚಲಿತದಲ್ಲಿದೆಯಾದರೂ, ಅದನ್ನು ಮುಂಚಿನಿಂದಲೂ ತಮ್ಮ ವಿಮರ್ಶಾ ಲೇಖನಗಳಲ್ಲಿ ಲಂಕೇಶ್ ಮಾಡಿಕೊಂಡೇ ಬಂದಿದ್ದರು ಎನ್ನುವುದು ಗಮನಿಸಬೇಕಾದ ಅಂಶ'[೩೪]

ಲಂಕೇಶರು ನವ್ಯ ಸಾಹಿತ್ಯಮಾರ್ಗದ ಎಲ್ಲ ಮುಖ್ಯ ಲೇಖಕರಂತೆ ಪಾಶ್ಚಾತ್ಯ ಲೇಖಕರಿಂದ ಪ್ರಭಾವಕ್ಕೆ ಒಳಗಾದವರು. ಅವರಲ್ಲಿ ಲೀವಿಸ್ ಕೂಡ ಇದ್ದಾನೆ. 'ಭಾಷೆಯೊಂದು ಸೃಜನಾತ್ಮಕ ಸಂವೇದನೆಯಾಗುವ ಪರಿಯನ್ನು ಲಂಕೇಶ್ ಲೀವೀಸ್‌ನಿಂದ ಪಡೆದರೂ, ಅದು ಕೇವಲ textual ಆದ ವಿಮರ್ಶೆಗೆ ಅವರನ್ನು ಸೀಮಿತಗೊಳಿಸಲಿಲ್ಲ. ಸ್ಥಳೀಯತೆ ಕುರಿತ ಒಲವು, ಇಲ್ಲಿನ ಪರಂಪರೆಯೊಳಗೇ ಇದ್ದ ಎಲ್ಲ ರೀತಿಯ ಜೀವವಿರೋಧಿ ಗುಣಗಳ ಬಗ್ಗೆ ಎಚ್ಚರ, ಸಮಕಾಲೀನ ಅಗತ್ಯಗಳ ಬಗೆಗಿನ ಕಾಳಜಿ: ಇವೆಲ್ಲ ಆಯಾಮಗಳನ್ನು ಪಡೆದುಕೊಂಡಿತು' ಎಂಬ ವಿ.ಎಸ್.ಶ್ರೀಧರ್ ಅವರ ಗ್ರಹಿಕೆಯಲ್ಲಿ ಸತ್ಯವಿದೆ.

ಸಾಹಿತ್ಯದಲ್ಲಿ ಲೇಖಕರು ಬಳಸುವ ಭಾಷೆಯ ಬಗ್ಗೆ ಗಾಢವಾಗಿ ಚಿಂತಿಸಿದ ಲೇಖಕ ಲಂಕೇಶ್. ಲಂಕೇಶರ ಪ್ರಕಾರ, ಬರಹಗಾರರಿಗೆ ಅಥವಾ ಮಾತುಗಾರರಿಗೆ ತಾವು ಬಳಸುವ ಮಾತಿನ ಶಕ್ತಿ ಮತ್ತು ಮಿತಿಗಳ ಬಗ್ಗೆ ಎಚ್ಚರವಿರಬೇಕು. ಮಾತನ್ನು ತಮ್ಮ ಅನುಭವ, ಆಲೋಚನೆ ಮತ್ತು ಭಾವನೆಗಳನ್ನು ಸಶಕ್ತವಾಗಿಯೂ ಪ್ರಾಮಾಣಿಕವಾಗಿಯೂ ಅಭಿವ್ಯಕ್ತಿ ಮಾಡಲು ತಕ್ಕ ಮಾಧ್ಯಮವಾಗಿ ಬಳಸಬೇಕೆಂದು ಗೊತ್ತಿರಬೇಕು. ಜಡ ಪರಿಭಾಷೆಗಳ ಮೇಲೆ ಲಂಕೇಶ್ ಅವರಿಗೆ ವಿಪರೀತ ಕೋಪ. ಅವರ ಪ್ರಕಾರ, ಮಾತಿನ ಶಕ್ತಿ ಮತ್ತು ಮಿತಿಗಳೆರಡರ ಬಗ್ಗೆ ಸದಾ ತಲ್ಲಣದಲ್ಲಿ ಬರೆಯುವವರೇ ನಿಜವಾದ ಲೇಖಕರು. ಬರೆಯುವವನಲ್ಲಿ ಸಾಕಷ್ಟು ಸ್ಫೂರ್ತಿ ಅಥವಾ ಉದ್ದೇಶವಿಲ್ಲದ ಭಾಷೆ ಅಶ್ಲೀಲ. ಪೊಳ್ಳು ಅನಿಸಿಕೆಗಳನ್ನು ತೀವ್ರ ಭಾವನೆಯೆನ್ನುವಂತೆ ಮಂಡಿಸುವುದೇ ಅಶ್ಲೀಲ. ಜೀವಂತ ಸಾಹಿತ್ಯದ ಹುಡುಕಾಟವು ಲಂಕೇಶರಲ್ಲಿ ಕಲಾತ್ಮಕತೆಯ ವ್ಯಸನವಾಗುವುದಿಲ್ಲ. ಕಲೆಯ ಜಗತ್ತಿಗೆ ಒಂದು ಸಾಂಸ್ಕೃತಿಕ ಹೊಣೆಗಾರಿಕೆಯೂ ಇದೆ ಎಂದು ಲಂಕೇಶ್ ತಿಳಿದಿದ್ದರು. ಲಂಕೇಶರ ಬರೆಹಗಳಲ್ಲಿ

ಕನ್ನಡಕ್ಕೊಂದು ಭಾಷಾತೀತವಾದ ಪರಂಪರೆಯನ್ನು ಕಟ್ಟಿಕೊಡುವ ಯತ್ನವಿದೆ. ಹಾಗೆಯೇ ಸಾಹಿತ್ಯ ವಿಮರ್ಶೆಗೊಂದು ಹೊಸ ಭಾಷೆಯನ್ನು ಕಟ್ಟಿಕೊಡುವ ಒತ್ತಾಸೆಯೂ ಇದೆ.

ಸಾಹಿತ್ಯ ಒಂದು ವ್ಯಸನವಾಗದಂತೆ ಬದ್ಧತೆಯನ್ನು ಪ್ರತಿಪಾದಿಸಿದವರು ಮತ್ತು ಅದಕ್ಕೆ ಬದ್ಧರಾದವರು ಲಂಕೇಶ್. 'ಸಾರ್ವಜನಿಕ ಜೀವನ ಸಾಂಸ್ಕೃತಿಕ ನರಮಂಡಲದಷ್ಟೇ ಸೂಕ್ಷ್ಮವಾದುದು. ಇಲ್ಲಿ ನಿಷ್ಠುರವಾಗಿ ಮಾತಾಡಿ ಅದರ ಒಳಿತು ಕೆಡುಕುಗಳನ್ನು ಹೇಳುವ ತೋರಿಸುವ ಚರ್ಚಿಸುವ ಜೀವಗಳನ್ನು ಸೃಷ್ಟಿಸುವುದಕ್ಕಾದರೂ ನಿಷ್ಠುರವಾಗಿ ಅಂತರಂಗದ ಇಂಗಿತದ ನೆರವು ಪಡೆದು ಮಾತಾಡುವವರು ಬೇಕು' ಎಂದು ಹಂಬಲಿಸುತ್ತಿದ್ದ ಲಂಕೇಶರ ಈ ನುಡಿಗಳು ಅವರು ಮಾತು ಅಥವಾ ಬರೆಹಕ್ಕೆ ನೀಡುತ್ತಿದ್ದ ಮಹತ್ವವನ್ನೂ ಹೇಳಬಲ್ಲವಾಗಿವೆ. ಲಂಕೇಶರ ಸಾಹಿತ್ಯ ವಿಮರ್ಶೆ ಸಾರ್ವಜನಿಕ ಬದುಕಿನ ಕಥನವೂ ಆಗಿದೆ. ಲಂಕೇಶರ ಸಾಹಿತ್ಯ ಸಂವೇದನೆ 'ನವ್ಯ'ವಾಗಿದ್ದರೂ ರಾಜಕೀಯ ಸಾಮಾಜಿಕ ನೆಲೆಗಳಲ್ಲಿ ಅದು ಶೂದ್ರ-ದಲಿತ ಸಂವೇದನೆಗಳಿಗೆ ಹತ್ತಿರವಾದುದಾಗಿತ್ತು. ನವ್ಯದ ಉಚ್ಛ್ರಾಯ ಘಟ್ಟದವರೆಗೂ ಅಡಿಗರ ಜತೆಗಿದ್ದ ಲಂಕೇಶರು ತಮ್ಮ ಕೊನೆಯ ದಶಕದಲ್ಲಿ ಕುವೆಂಪು ಅವರನ್ನು ಕುರಿತು ಗಂಭೀರವಾಗಿ ಬರೆದದ್ದು ಇದಕ್ಕೆ ನಿದರ್ಶನದಂತೆ ಪರಿಗಣಿಸಬಹುದಾಗಿದೆ. ಅಡಿಗರ ಸಾಹಿತ್ಯದ ನೆಲೆಯಿಂದ ಕುವೆಂಪು ಅವರ ಸಾಮಾಜಿಕ ನೆಲೆಗೆ ಲಂಕೇಶರ ಹೊರಳಿಕೆಯನ್ನು ಇದು ಸೂಚಿಸುತ್ತದೆ.

ಕರ್ನಾಟಕವೆಂಬ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಸ್ವೀಕರಿಸುವ ಮಾದರಿಗಳಲ್ಲಿ ಕರ್ನಾಟಕ ಬಹುಮುಖೀ ವಾಸ್ತವವೆಂಬ ನಿಲುವಿನದು ಒಂದು ಮಾದರಿ. ಲಂಕೇಶರ ವಿಚಾರಗಳಲ್ಲಿ ಇದು ಆಧುನಿಕ ಸೆಕ್ಯುಲರ್ ಸಾಮಾಜಿಕ ರಾಜಕಾರಣದ ಪರಿಕಲ್ಪನೆಗಳಲ್ಲಿ ಬೆಳೆದಿದೆ. ಸಾಂಸ್ಕೃತಿಕ ರಾಷ್ಟ್ರೀಯತೆಯ ಚರ್ಚೆಗೆ ವಿಶಿಷ್ಟ ಆಯಾಮ ಬಂದಿರುವುದು ಕರ್ನಾಟಕದ ಬಗೆಗಿನ ಲಂಕೇಶರ ಆಲೋಚನೆಗಳಿಂದ. ಸಾಂಸ್ಕೃತಿಕ ರಾಷ್ಟ್ರೀಯತೆಯ ಪರಿಭಾಷೆಯಲ್ಲಿ ಮಾತನಾಡದೆ, ನೆನಪುಗಳ ವಿಂಗಡಣೆಗೆ, ವಿಶ್ಲೇಷಣೆಗೆ ಹೋಗದೆ ಆಧುನಿಕ ಜಗತ್ತಿನ ಸಾಮಾಜಿಕ ರಾಜಕಾರಣದ ಚೌಕಟ್ಟಿನಲ್ಲಿ ಅವರು ಮಾತನಾಡುತ್ತಾರೆ. ಇಲ್ಲಿ ಚರ್ಚೆಗೆ ತಕ್ಷಣದ ರಾಜಕೀಯ, ಸಾಮಾಜಿಕ ಉಪಯುಕ್ತತೆ ಮತ್ತು ಮೂರ್ತತೆ ಎರಡೂ ಒಟ್ಟಿಗೇ ಒದಗಿ ಬರುತ್ತದೆ ಎಂದು ಡಿ. ಆರ್ ನಾಗರಾಜ್ ಅವರು ವಿಶ್ಲೇಷಿಸುತ್ತಾರೆ.

ಲಂಕೇಶ್ ಪತ್ರಿಕೆ ಆರಂಭಿಸುವವರೆಗೂ ವಿವಿಧ ಕ್ಷೇತ್ರಗಳ ಬಗ್ಗೆ ಸಮಾಜದಲ್ಲಿ ವಿಭಿನ್ನವಾದ ಶಾಶ್ವತವೆನಿಸುವ ಅಭಿಪ್ರಾಯವಿತ್ತು. ರಾಜಕಾರಣ ಕೆಟ್ಟುಹೋಗಿದೆ ಎನ್ನುವ ಸಿನಿಕತನದೊಂದಿಗೆ ಆ ಕ್ಷೇತ್ರದ ಬಗ್ಗೆ ಅವ್ಯಕ್ತ ಭಯ. ಸಾಹಿತಿಗಳ ಬಗ್ಗೆ ಪೂಜನೀಯ ಭಾವನೆ ಕೆಲವು ಉದಾಹರಣೆಗಳು. ಆದರೆ ಲಂಕೇಶರು ತಮ್ಮ ವಿಭಿನ್ನ ಪತ್ರಿಕೋದ್ಯಮದ ಮೂಲಕ ರಾಜಕೀಯ ಕ್ಷೇತ್ರದ ಒಳಹೊರಗನ್ನು ಅನಾವರಣಗೊಳಿಸತೊಡಗಿದರು. ಸಾಹಿತ್ಯಕ್ಷೇತ್ರದೊಳಗಿನ ಜಾತೀಯತೆ, ಸಣ್ಣತನಗಳನ್ನು ತೆರೆದಿಟ್ಟರು.

ಲಂಕೇಶ್ ಟಿ.ಎಸ್ ಎಲಿಯಟ್ ಬಗ್ಗೆ ಬರೆಯುತ್ತ 'ಆತ ಒಂದು ಭಾಷೆಯ ಜನರ ನುಡಿಗಟ್ಟು ಮತ್ತು ಸಂವೇದನೆಯನ್ನೇ ಬದಲಾಯಿಸಿದ್ದ' ಎನ್ನುತ್ತಾರೆ. ಕರ್ನಾಟಕದಲ್ಲಿ ಲಂಕೇಶ್ ತಮ್ಮ 'ಲಂಕೇಶ್ ಪತ್ರಿಕೆ' ಯಲ್ಲಿ ತಮ್ಮ ವಿಶಿಷ್ಟ ಗದ್ಯದಲ್ಲಿ ಬರೆಯುತ್ತ ಮಾಡಿದ್ದು ಇದೇ ಕೆಲಸವನ್ನು. ಲಂಕೇಶರ ವಿಚಾರ ಸಾಹಿತ್ಯದಲ್ಲಿ ಕನ್ನಡ ಭಾಷೆ ಮತಾಂಧತೆಯ ವಿಕಾರಗಳಿಲ್ಲದ ಜಾತ್ಯತೀತ, ಸಮಾಜವಾದಿ ಮೌಲ್ಯಗಳನ್ನು ಪ್ರತಿಪಾದಿಸಿಕೊಂಡು ಹೋಗಬೇಕೆಂಬ ಕಾಳಜಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ.

೨.೫ ಸಾಹಿತ್ಯವಾದಿ ನೆಲೆಯ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಸಾಹಿತ್ಯವಾದಿ ನೆಲೆಯ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಸಾಮಾಜಿಕ ನೆಲೆಯ ಚಿಂತನೆಗಳೂ ಆಗಿದ್ದು ಸಾಹಿತ್ಯದ ಮೂಲಕ ಸಾಮಾಜಿಕ ಚಲನಶೀಲತೆಯನ್ನು ತಮ್ಮ ಆಂತರ್ಯದಲ್ಲಿಟ್ಟುಕೊಂಡಿವೆ. ಇವು ಸಾಹಿತ್ಯವನ್ನು ತಮ್ಮ 'ಜೀವನ್ಮರಣದ ಪ್ರಶ್ನೆ'ಯೆಂದು ಘೋಷಿಸಿಕೊಂಡಿಲ್ಲವಾದರೂ ಸಾಹಿತ್ಯ ಜನರ ಜೀವನ್ಮರಣದ ಪ್ರಶ್ನೆಗೆ ಉತ್ತರದಾಯಿಯಾಗಿರಬೇಕು ಎಂದು ಬಯಸುತ್ತವೆ. ಬಿ.ಎಂ.ಶ್ರೀ ಇಂಗ್ಲಿಶಿನ ಶೈಲಿಯನ್ನು ಕನ್ನಡಕ್ಕೆ ತಂದಿದ್ದಾಗಲೀ, ಕುವೆಂಪು ಇಂಗ್ಲಿಶನ್ನು ದೂರದಲ್ಲಿಡಲು ಬಯಸಿದ್ದಾಗಲೀ ಲಂಕೇಶರು ಇಂಗ್ಲಿಶಿನ ಮೂಲಕ ಪಾಶ್ಚಾತ್ಯ ಸಾಹಿತ್ಯವನ್ನು ಪ್ರವೇಶಿಸಿ ಅದನ್ನು ಕನ್ನಡದ ಚಿಂತನೆಯೊಳಗೆ ಕಸಿಗೊಳಿಸಲು ಮಾಡುತ್ತಿದ್ದ ಪ್ರಯತ್ನವಾಗಲಿ ಜನಬದುಕಿನ ಜತೆ ಹೆಣೆದುಕೊಂಡಿರುವವು.

ಕನ್ನಡದ ಸಾಹಿತ್ಯವಾದಿ ನೆಲೆಯ ಚಿಂತನೆಗಳ ದೊಡ್ಡ ಮಿತಿ ಎಂದರೆ ಅವು ಕನ್ನಡದ ಚೈತನ್ಯ ಅಥವಾ ತೊಡಕು ಎಂದು ಗ್ರಹಿಸುತ್ತಾವೋ ಆ ಭಾಷೆಯ ಹಿಂದಿರುವ ಸಾಮ್ರಾಜ್ಯಶಾಹಿ ಹಿತಾಸಕ್ತಿಯನ್ನು, ಅಂತರಾಷ್ಟ್ರೀಯ ರಾಜಕಾರಣವನ್ನು ಅರಿಯಲು ಸೋಲುತ್ತವೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅದರ ಸಮಾಜವಾದಿ ಸಾಂವಿಧಾನಿಕ ಆಶಯಗಳು ಸಾಕಾರಗೊಳ್ಳಲು ಇಲ್ಲಿನ ಶಿಕ್ಷಣ ಮತ್ತು ಆಡಳಿತದ ಮಾಧ್ಯಮ ಜನಭಾಷೆಗಳಾದ್ದಾಗಿರಬೇಕು ಎಂದು ಸಾಹಿತ್ಯವಾದಿ ನೆಲೆಯ ಕನ್ನಡ ಅಸ್ಮಿತೆ ಪ್ರತಿಪಾದಿಸುತ್ತದೆ. ಈ ನೆಲೆಯ ಕನ್ನಡ ಅಸ್ಮಿತೆ ಇಂಗ್ಲಿಷನ್ನು ಒಂದು ಸಾಮ್ರಾಜ್ಯಶಾಹಿ ಭಾಷೆ ಎಂದು ಗ್ರಹಿಸಿದರೂ ಅದರ ಹುನ್ನಾರಗಳ ವ್ಯಾಪಕತೆಯನ್ನು, ಭಾಷೆಯನ್ನೇ ಸಾಧನವನ್ನಾಗಿ ಮಾಡಿಕೊಂಡು ಆರ್ಥಿಕ ಅಸಮಾನತೆಯನ್ನು ಸೃಷ್ಟಿ ಮಾಡುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳ ಬಗ್ಗೆ ಚಿಂತಿಸಿದಂತೆ ಕಾಣುವುದಿಲ್ಲ. ಮುಖ್ಯವಾಗಿ ಭಾಷೆಗೂ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಭಾಷೆಯ ಮೂಲಕ ನಿಯಂತ್ರಿಸುತ್ತಿರುವ ಅರ್ಥಿಕತೆಯ ನಡುವಿರುವ ಸಂಬಂಧದ ಚರ್ಚೆಗೆ ಈ ಚಿಂತನೆ ಪ್ರವೇಶ ಪಡೆಯುವುದಿಲ್ಲ. ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಜಾಗತೀಕರಣದ ಅಪಾಯದ ಬಗ್ಗೆ ದೇಶಿಭಾಷೆಗಳ ಚಿಂತನೆ ವಿಸ್ತರಣೆ ಪಡೆಯದಿರುವುದು ಒಟ್ಟು ಭಾರತದ ಸಾಹಿತ್ಯ

ಮತ್ತು ಬೌದ್ಧಿಕವಲಯದಲ್ಲಿಯೇ ಕಂಡು ಬರುತ್ತದೆ. ಈ ಮಿತಿಯ ಕೊರತೆಯನ್ನು ಕನ್ನಡದ ಸಂದರ್ಭದಲ್ಲಿಯೂ ಗುರುತಿಸಬಹುದು.

ಸ್ವಾತಂತ್ರ್ಯಪೂರ್ವದ ಸಾಹಿತ್ಯದ ನೆಲೆಯ ಕನ್ನಡ ಅಸ್ಮಿತೆಯಲ್ಲಿ ಸಾಮಾಜಿಕ ನೆಲೆಯೂ ಅಂತರ್ಗತವಾಗಿದೆ. ಸೆಕ್ಯುಲರ್ ಆದ ಸಮಾಜವಾದಿ ಮೌಲ್ಯಗಳು ಈ ನೆಲೆಯ ಚಿಂತನೆಯಲ್ಲಿದೆ. ಸಾಹಿತ್ಯವಾದಿ ನೆಲೆಯ ಒಟ್ಟು ಚಿಂತನೆ ಆಡುಭಾಷೆಯ ಕನ್ನಡದ ಪರವಾಗಿದ್ದು ಇಂದು ದ್ರಾವಿಡ ನೆಲೆಯ ಕನ್ನಡ ಅಸ್ಮಿತೆಯ ಚಿಂತಕರು ಮಂಡಿಸುತ್ತಿರುವ ಸಂಸ್ಕೃತರಹಿತ ಆಡುಭಾಷಾಪ್ರಧಾನವಾದ ಕನ್ನಡದ ಬೀಜಗಳು ಆ ಚಿಂತನೆಗಳಲ್ಲಿಯೇ ಇವೆ. ಇದು ಕನ್ನಡ ಅಸ್ಮಿತೆ ಕುರಿತ ಕಳೆದ ಶತಮಾನದ ಆರಂಭದಲ್ಲಿನ ಚಿಂತನೆಗಳು ಈವರೆಗೂ ವಿಸ್ತರಿಸುತ್ತ ಬಂದಿರುವುದನ್ನೂ, ಈ ಕಾರಣಕ್ಕಾಗಿಯೇ ಅವುಗಳ ಮಹತ್ವವನ್ನೂ ಸೂಚಿಸುತ್ತವೆ.

ಸಾಹಿತ್ಯವಾದಿ ನೆಲೆಯ ಕನ್ನಡ ಅಸ್ಮಿತೆಯ ಒಂದು ಧಾರೆಗೆ ಇಂಗ್ಲಿಶ್ ಮೂಲಕ ಪಾಶ್ಚಾತ್ಯ ಸಾಹಿತ್ಯದ ವಿಪುಲ ಓದಿನ ಹಿನ್ನೆಲೆ ಇದ್ದರೂ ವಸಾಹತುಭಾಷೆಯಾಗಿ ಇಂಗ್ಲಿಷಿನ ಅಪಾಯಗಳನ್ನು ಅರಿಯುವಲ್ಲಿ ಎಡವಿದೆ. ಒಂದು ಭಾಷೆಯ ಮೂಲಕ ಸಾಹಿತ್ಯವನ್ನು ಓದುವುದಕ್ಕೂ, ಆ ಭಾಷೆಯ ಮೂಲಕ ಮಾಡಲಾಗುತ್ತಿರುವ ಭಾಷಾ ರಾಜಕಾರಣವನ್ನು ಅರಿಯುವುದಕ್ಕೂ ವ್ಯತ್ಯಾಸವಿದೆ ಎನ್ನುವುದು ಇದರಿಂದ ಅರಿವಾಗುತ್ತದೆ. ಇದು ಕನ್ನಡ ಭಾಷೆ ಕುರಿತ ಈ ಚಿಂತನೆಯ ಒಂದು ಮಿತಿಯಾಗಿದೆ.

ಟಿಪ್ಪಣಿಗಳು

೧. ಬಿ.ಎಂ.ಶ್ರೀ., ಶ್ರೀ ಸಾಹಿತ್ಯ, ಪು. ೨೯೦
೨. ಅದೇ, ಪು. ೫೯
೩. ಅದೇ, ಪು. ೨೮೯
೪. ಅದೇ, ಪು. ೨೮೯
೫. ಅದೇ, ಪು. ೨೫೦
೬. ಅದೇ, ಪು. ೨೯೦, ೨೯೧
೭. ಅದೇ, ಪು. ೩೨೪
೮. ಅದೇ, ಪು. ೩೨೮
೯. ಅದೇ, ಪು. ೨೪೯
೧೦. ಅದೇ, ಪು. ೨೯೦
೧೧. ಕುವೆಂಪು, ಸಮಗ್ರ ಗದ್ಯ ಸಂಪುಟ-೨, ಪು. ೧೨೪
೧೨. ಅದೇ, ಪು. ೧೨೭,೮

೧೩. ಅದೇ, ಪು. ೧೨೬

೧೪. ಅದೇ, ಪು. ೧೨೭,೧೨೮

೧೫. ಅದೇ, ಪು. ೨೫೫

೧೬. ಅದೇ, ಪು. ೧೯೫

೧೭. ಅದೇ, ಪು. ೧೫೧-೨

೧೮. ಕುವೆಂಪು, ಸಮಗ್ರ ಗದ್ಯ,ಸಂಪುಟ.೧, ಪು. ೭೧೨

೧೯. ಕುವೆಂಪು, ಸಮಗ್ರ ಗದ್ಯ, ಸಂಪುಟ-೨, ಪು. ೧೫೪

೨೦. ಅದೇ, ಪು. ಪು. ೬೪೯

೨೧. ಅದೇ, ಪು. ೭೬೧

೨೨. ರಹಮತ್ ತರೀಕೆರೆ, ಚಿಂತನೆಯ ಪಾಡು, ಪು. ೨೧೮

೨೩. ರಹಮತ್ ತರೀಕೆರೆ, ನೇತುಬಿದ್ದ ನವಿಲು, ಪು. ೧೫೦

೨೪. ಕುವೆಂಪು,ಸಮಗ್ರ ಗದ್ಯ, ಸಂಪುಟ.೨, ಪು. ೫೨೯

೨೫. ಅದೇ, ಪು. ೬೨೭

೨೬. ಅದೇ, ಪು. ೬೧೩

೨೭. ಅದೇ, ಪು. ೧೪೪

೨೮. ನಾರಾಯಣ ಕೆ.ವಿ., ಕನ್ನಡ ಜಗತ್ತು - ಅರ್ಧ ಶತಮಾನ, ಪು. ೨೭೬-೧೭

೨೯. ರಾಜೇಂದ್ರ ಚೆನ್ನಿ, ಅಸಮಗ್ರ, ಪು. ೧೫೬

೩೦. ನಾರಾಯಣ ಕೆ.ವಿ., ಕನ್ನಡ ಜಗತ್ತು - ಅರ್ಧ ಶತಮಾನ, ಪು. ೩೧೦

೩೧. ಬಂಜಗೆರೆ ಜಯಪ್ರಕಾಶ, ಉಲಿಯ ಉಯ್ಯಲೆ, ಪು. ೬೦

೩೨. ಶ್ರೀಧರ್ ವಿ.ಎಸ್., ಸಾಹಿತಿ ಸಾಹಿತ್ಯ ವಿಮರ್ಶೆ, ಪು. ix

೩೩. ಲಂಕೇಶ್ ಪಿ, ಟೀಕೆ ಟಿಪ್ಪಣಿ, ಪು. ೫೭೩

೩೪. ಲಂಕೇಶ್. ಪಿ, ಬಿಟ್ಟು ಹೋದ ಪುಟಗಳು, ಪು. ೧೦

೩೫. ಶ್ರೀಧರ್., ವಿ.ಎಸ್, ಸಾಹಿತಿ ಸಾಹಿತ್ಯ ವಿಮರ್ಶೆ, ಪು. i

ಅಧ್ಯಾಯ ೩.

ಕನ್ನಡ ಅಸ್ಮಿತೆ : ಭಾಷಾ ಮೂಲಭೂತವಾದಿ ನೆಲೆ

೩.೧ ಪೀಠಿಕೆ

೩.೨ ಆಲೂರು ವೆಂಕಟರಾಯರ ಚಿಂತನೆಗಳು

೩.೨.೧ ಪೀಠಿಕೆ

೩.೨.೨ ಕರ್ನಾಟಕತ್ವದ ಮೇಲೆ ಸನಾತನ ಧರ್ಮದ ಪ್ರಭಾವ

೩.೨.೩ ಜೀವಪರ ಮೌಲ್ಯದ ಜಾಗದಲ್ಲಿ ಮತೀಯತೆಯ ವಿಕಾಸ

೩.೨.೪ ಶಂಬಾ ಸಂಶೋಧನೆಯನ್ನು ಒಪ್ಪಿಕೊಳ್ಳಲಾಗದ ಉಭಯಸಂಕಟ

೩.೨.೫ ಆಲೂರರ 'ಆಧ್ಯಾತ್ಮಿಕ ಪರಿಭಾಷೆ'ಯ ಸ್ವರೂಪ

೩.೨.೬ ಸುಧಾರಣೆಯನ್ನು ಒಲ್ಲದ ಕನ್ನಡ ಅಸ್ಮಿತೆ

೩.೨.೭ ಹಿಂದುವೇತರ ಜನಾಂಗಗಳ ಕೊಡುಗೆಯ ಅವಗಣನೆ

೩.೨.೮ ವೈಚಾರಿಕ ಕರ್ನಾಟಕ ಮತ್ತು ಹಿಂದುತ್ವದ ಕರ್ನಾಟಕ

೩.೨.೯ ಏಕೀಕರಣದ ಅಸಾಮಾನ್ಯತೆ, ಚಿಂತನೆಯ ಮಿತಿ

೩.೩ ಚಿದಾನಂದ ಮೂರ್ತಿ ಅವರ ಚಿಂತನೆಗಳು

೩.೩.೧ ಪೀಠಿಕೆ

೩.೩.೨ 'ವೀರತ್ವ'ವೇ ಪ್ರಧಾನವಾದ ಕರ್ನಾಟಕ ಸಂಸ್ಕೃತಿ

೩.೩.೨ ಅನ್ಯಭಾಷಿಕರ ವಿರುದ್ಧ ಯುದ್ಧ

೩.೩.೪ ಏಕಕಾಲದಲ್ಲಿ ಹಿಂದುತ್ವ ಮತ್ತು ಕನ್ನಡಪರ ವಕಾಲತ್ತು ತಂದ ಬಿಕ್ಕಟ್ಟು

೩.೩.೫ ಹಲವು ಜನಾಂಗಗಳ, ಧರ್ಮಗಳ ಕೊಡುಗೆಯ ಅವಗಣನೆ

೩.೪ ಮೂಲಭೂತವಾದಿ ನೆಲೆಯ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಅಧ್ಯಾಯ ೩.

ಕನ್ನಡ ಅಸ್ಮಿತೆ : ಭಾಷಾ ಮೂಲಭೂತವಾದಿ ನೆಲೆ

೩.೧ ಪೀಠಿಕೆ

ಜಗತ್ತಿನಲ್ಲಿ ಬೇರೆ ಭಾಷೆಗಳ ಪ್ರಭಾವಕ್ಕೆ ಒಳಗಾಗದ ಒಂದೂ ಭಾಷೆಯಿಲ್ಲ. ಭಾಷೆ ಬೆಳೆಯುವುದೇ ಹಲವು ಭಾಷೆಗಳ ಕೊಡು ಕೊಳುವಿಕೆಯ ನಿರಂತರ ಪ್ರಕ್ರಿಯೆಯಲ್ಲಿ. ಆದರೆ ತಾನು ಇತರ ಭಾಷೆಗಳ ಪ್ರಭಾವದಲ್ಲಿ ಪೂರ್ಣ ಕಳೆದುಹೋಗಬಹುದು ಎನ್ನುವ ಆತಂಕ ಪ್ರಭುತ್ವ ಭಾಷೆಗಳಿಗಿಲ್ಲ. ಯಾಕೆಂದರೆ ಇವು ಇನ್ನೊಂದು ಭಾಷೆಗೆ ಕೊಡುವ ಭಾಷೆಗಳೇ ವಿನಃ ಆ ಭಾಷೆಗಳಿಂದ ಸ್ವೀಕರಿಸುವ ಭಾಷೆಗಳಲ್ಲ. ಕಳೆದುಹೋಗುವ ಈ ಆತಂಕ ಸಾಮಾನ್ಯವಾಗಿ ಸದಾ ಕಾಡುತ್ತಲೇ ಇರುವುದು ದೇಶಿ ಭಾಷೆಗಳನ್ನು. ಈ ಹಿನ್ನೆಲೆಯಲ್ಲಿ ಎಲ್ಲ ಭಾಷೆಗಳಲ್ಲಿರುವಂತೆ ಹೇಗಾದರೂ ತನ್ನನ್ನು ಉಳಿಸಿಕೊಳ್ಳಬೇಕು ಎನ್ನುವ ಕಾಳಜಿ ಮತ್ತು ಹಠದ ನೆಲೆಯೊಂದು ಕನ್ನಡ ಅಸ್ಮಿತೆಗೂ ಇದೆ. ಆದರೆ ಹೀಗೆ ಉಳಿಸಿಕೊಳ್ಳುವ ಹಂಬಲದ ಹಿಂದಿನ ಕಾರಣಗಳು ಮತ್ತು 'ಉಳಿಸಿಕೊಳ್ಳಬಯಸುವ ಕನ್ನಡದ ಸ್ವರೂಪ' ಹಲವು ಬಗೆಯಲ್ಲಿವೆ. ಒಂದೂ ಅನ್ಯಭಾಷೆಯ ಶಬ್ದವನ್ನು ಬಳಸದೆ ಅಚ್ಚಕನ್ನಡವನ್ನು ಉಳಿಸಿಕೊಳ್ಳುವುದು ಈ ಸ್ವರೂಪಗಳಲ್ಲಿ ಒಂದು. ತೀನಂಶ್ರೀ ಮತ್ತು ಗೆಳೆಯರು ಈ ರೀತಿ ಅಚ್ಚಕನ್ನಡದಲ್ಲಿ ಮಾತನಾಡುವ ಸ್ಪರ್ಧೆಯನ್ನಿಟ್ಟು ಅದರಲ್ಲಿ ವಿಫಲರಾದ ಮೋಜಿನ ಪ್ರಸಂಗವಿದೆ. ಇಲ್ಲಿ ಸಾಮಾನ್ಯವಾಗಿ 'ಅಚ್ಚಕನ್ನಡ' ಎಂದರೆ 'ಇಂಗ್ಲಿಶ್'ನಿಂದ ಹೊರತಾದ ಕನ್ನಡ ಎನ್ನುವ ಅಭಿಪ್ರಾಯವೇ ಇರುವುದು.

ಸಂಸ್ಕೃತ ಕನ್ನಡಕ್ಕೆ ಹೊರೆಯಾಗುತ್ತಿದೆ ಎಂದು ಭಾವಿಸಿದ ಬಿ.ಎಂ.ಶ್ರೀ ಅವರು ಅಚ್ಚಕನ್ನಡದ ಬಳಕೆಯನ್ನು ಪ್ರತಿಪಾದಿಸಿದರು. ಇದೇ ಹಂಬಲ ಡಿ.ಎನ್. ಶಂಕರಭಟ್ಟರಿಗೆ ಸಂಸ್ಕೃತರಹಿತ 'ಹೊಸ ಬರಹ' ರಚಿಸಲು ಪ್ರೇರೇಪಿಸಿದೆ. ಬೆಂಗಳೂರಿನಲ್ಲಿರುವ ತಮಿಳು, ತೆಲುಗಿನಂತಹ ನೆರೆಯ ಭಾಷಿಕರು ಕನ್ನಡ ಕಲಿಯುತ್ತಿಲ್ಲವೆಂದು ಕನ್ನಡಿಗರಲ್ಲಿ ಅಸಮಾಧಾನ ವ್ಯಕ್ತವಾಗುವುದಿದೆ. ಹಾಗೇ ನೋಡಿದರೆ ತಮ್ಮದನ್ನು ಮೂಲದಲ್ಲಿ ಉಳಿಸಿಕೊಳ್ಳುವ ಹಠದ ಈ ಮನೋಭಾವ 'ಮೂಲಭೂತವಾದ' ಎನ್ನುವ ವ್ಯಾಖ್ಯಾನಕ್ಕೆ ಹೊಂದುವಂತಹದು. ಆದರೆ, ಇಲ್ಲಿ ಒಂದು ತೊಡಕಿದೆ. 'ಮೂಲಭೂತವಾದ' ಎಂದರೆ 'ಮೂಲಕ್ಕೆ ಹಠದಿಂದ ಜೋತುಬೀಳುವುದು' ಎನ್ನುವ ಸಾಮಾನ್ಯ ಅರ್ಥವಿದ್ದರೂ ಯಾವಾಗಲೂ 'ಮೂಲಭೂತವಾದ' ಎನ್ನುವುದನ್ನು ಬಳಸುವುದು ಮತೀಯ ಮೂಲಭೂತವಾದಕ್ಕೆ. ಮತೀಯ ಮೂಲಭೂತವಾದ ಹೊರನೋಟದಲ್ಲಿ ತಮ್ಮ ಧರ್ಮದ ಪಾವಿತ್ರ್ಯವನ್ನು ರಕ್ಷಿಸುವ ಏಕಮೇವ ಕಾರ್ಯದಲ್ಲಿರುವಂತೆ ತೋರ್ಪಡಿಸುತ್ತ, ಮರೆಯಲ್ಲಿ ಪುರುಷ ಪ್ರಾಧಾನ್ಯತೆ ಮತ್ತು ಮೇಲ್ವರ್ಗಗಳ ಹಿತಾಸಕ್ತಿ ಕಾಯುವ ಉದ್ದೇಶವನ್ನಿಟ್ಟುಕೊಂಡಿರುತ್ತದೆ. ಆದರೆ ಕನ್ನಡದ ಮೂಲರೂಪದಲ್ಲಿ

ಮಾತನಾಡಲು ಹಂಬಲಿಸುವ ಭಾಷಿಕ ಕಾಳಜಿಗೆ ಇಂತಹ ಬಚ್ಚಿಡಲ್ಪಟ್ಟ ಉದ್ದೇಶಗಳಿಲ್ಲ. ಇಲ್ಲಿರುವುದು ಕನ್ನಡಭಾಷೆ ಉಳಿಸಿಕೊಳ್ಳುವ ಕಾಳಜಿಯಷ್ಟೇ. ಆದ್ದರಿಂದ ಇದನ್ನು ಭಾಷಿಕ ಮೂಲಭೂತವಾದ ಎಂದು ಕರೆಯುವ ಬದಲಿಗೆ 'ಭಾಷಿಕ ಕಾಳಜಿ' ಎನ್ನಬಹುದಷ್ಟೇ.

'ಭಾಷೆಯೊಂದನ್ನು ಸರ್ವಶ್ರೇಷ್ಠವೆಂದೂ, ಉಳಿದ ಭಾಷೆಗಳೆಲ್ಲ ಕನಿಷ್ಠ ಅಥವಾ ಅಧೀನವೆಂದೂ ಭಾವಿಸುವ, ಭಾಷೆ-ಭಾಷೆಗಳ ನಡುವೆ ದ್ವೇಷ ಬಿತ್ತಿ ಭಾಷಾ ಸಮಾನತೆಯ ಕಲ್ಪನೆಯನ್ನು ವಿರೋಧಿಸುವ, ಒಟ್ಟು ಪ್ರತಿಪಾದನೆಯನ್ನು 'ಭಾಷಿಕ ಮೂಲಭೂತವಾದ' ಎಂದು ಕರೆಯಬಹುದು' ಎಂದು ಬರಗೂರು ರಾಮಚಂದ್ರಪ್ಪ ಅವರು ಅಭಿಪ್ರಾಯಪಡುತ್ತಾರೆ. ಬರಗೂರರು ಹೀಗೆ ಹೇಳುವಾಗ ಅವರ ಮನಸ್ಸಿನಲ್ಲಿ ತಮ್ಮನ್ನು ಸರ್ವಶ್ರೇಷ್ಠವೆಂದು ಬೀಗುವ ಸಂಸ್ಕೃತ ಮತ್ತು ಹಿಂದಿ ಭಾಷೆಗಳು ಇರಬಹುದೆಂದು ಅನ್ನಿಸುತ್ತದೆ. ಸಂಸ್ಕೃತವನ್ನಾಗಲಿ, ಹಿಂದಿಯನ್ನಾಗಲಿ ಭಾಷೆಗಳಾಗಿ ಯಾರೂ ವಿರೋಧಿಸಬೇಕಿಲ್ಲ. ಆದರೆ ಈ ಭಾಷೆಗಳನ್ನು ಸಾರ್ವಭೌಮ ಸ್ಥಾನಕ್ಕೆ ತರುವ ಪ್ರಜ್ಞಾಪೂರ್ವಕ ಪ್ರಯತ್ನದಲ್ಲಿ ಉಳಿದ ಭಾಷೆಗಳನ್ನು 'ಸಾಮಂತ' ಸ್ಥಾನದಲ್ಲೂ ಸ್ಥಾಪಿಸದೆ ಅಗಾಧ ಭಾಷಾ ಅಸಮಾನತೆಯನ್ನು ತೋರಿಸಿದ ಕೇಂದ್ರ ಸರ್ಕಾರದ ಧೋರಣೆಯನ್ನು 'ಭಾಷಿಕ ಮೂಲಭೂತವಾದ' ಎಂದು ಕರೆಯಬೇಕಾಗುತ್ತದೆ ಎಂದವರು ಎಚ್ಚರಿಸುತ್ತಾರೆ. 'ಭಾಷಿಕ ಮೂಲಭೂತವಾದ'ದ ಒಂದು ಚಹರೆಯಷ್ಟೇ ಇದಾಗಿದ್ದು ಬರಗೂರು ಅವರನ್ನೂ ಒಳಗೊಂಡಂತೆ ಕನ್ನಡದ ಹಲವು ಚಿಂತಕರು ಈ ಕುರಿತು ಹಲವು ಆಯಾಮಗಳಲ್ಲಿ ಚಿಂತಿಸಿದ್ದಾರೆ.

ಬ್ರಿಟೀಷ್ ವಸಾಹತುಶಾಹಿಯ ವಿರುದ್ಧ ರಾಷ್ಟ್ರೀಯ ಹೋರಾಟಗಳು ನಡೆಯುತ್ತಿದ್ದ ಸಂದರ್ಭದಲ್ಲೇ ನಮ್ಮ ದೇಶದಲ್ಲಿ ಪ್ರಾದೇಶಿಕ ಭಾಷೆಗಳ ಉಳಿವಿಗಾಗಿ ಎಚ್ಚರ ಮೂಡಿತು. ಇಡೀ ದೇಶದ ಸ್ವಾತಂತ್ರ್ಯ ಸಂಸ್ಕೃತಿಗಳ ಬಗ್ಗೆ ಮಾತನಾಡುವ ಉಸಿರಲ್ಲೇ ನಮ್ಮ ನಮ್ಮ ಭಾಷೆ-ಸ್ಥಳೀಯ ಸಂಸ್ಕೃತಿಗಳ ಪರವಾದ ದನಿಗಳು ಜಾಗೃತವಾದವು. ಹತ್ತೊಂಬತ್ತನೆಯ ಶತಮಾನದ ವೇಳೆಗೆ ಇಂಡಿಯಾದ ಜನರು ಅನೇಕ ರೀತಿಯ ಪಾಶ್ಚಿಮಾತ್ಯ ಮೌಲ್ಯ-ಚಿಂತನೆಗಳನ್ನು ಎರವಲು ಮಾಡಿಕೊಂಡಿದ್ದರು. ಅಂಥವುಗಳಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯೂ ಒಂದು. 'ರಾಷ್ಟ್ರೀಯತೆ' ಎಂಬುದು ನಿರ್ದಿಷ್ಟ ಜನಾಂಗೀಯ ಗುಂಪುಗಳು, ಭಾಷಿಕರು ಕಂಡುಕೊಳ್ಳುವ 'ಸ್ವಪ್ರಜ್ಞೆ'ಯ ಅರಿವೂ ಆಗಿರುತ್ತವೆ. ಈ ಅರಿವಿನ ಅಥವಾ ಪರಿಕಲ್ಪನೆಯ ಪರಿಧಿಗಳಲ್ಲಿ ಹುಟ್ಟಿಕೊಂಡದ್ದೇ 'ಏಕೀಕರಣ'. ಆದರೆ 'ಏಕೀಕರಣ'ದ ಪರಿಕಲ್ಪನೆಯು ಅನನ್ಯತೆಗೆ ಬಂದದ್ದು ಆಯಾ ಪ್ರಾಂತೀಯ ಮಟ್ಟಗಳಲ್ಲಿಯೇ. ಅಂಥವುಗಳಲ್ಲಿ ಪ್ರಾಂತ್ಯಾಭಿಮಾನ, ಸ್ವಾಭಿಮಾನ, ಸ್ವಭಾಷೆ, ಸ್ವಜನ, ಸ್ವಸಂಸ್ಕೃತಿ, ಸ್ವಪರಿಕಲ್ಪನೆಗಳು ಮುಖ್ಯವಾದವು. ಸಹಜವಾಗಿಯೇ ರಾಷ್ಟ್ರೀಯತೆಯ ಒಳ್ಳೆಯ ಮತ್ತು ಕೆಟ್ಟ ಪ್ರಭಾವಗಳಿಂದ ಏಕೀಕರಣ ಹೊರಗುಳಿಯಲಿಲ್ಲ ಎಂದು ಕರ್ನಾಟಕ ಏಕೀಕರಣ ಚಳುವಳಿ ಕುರಿತು ಅಧ್ಯಯನ ಮಾಡಿರುವ ಸಿ.ಆರ್. ಗೋವಿಂದರಾಜು ಅವರು ಅಭಿಪ್ರಾಯ ಪಡುತ್ತಾರೆ. ಈ ಸಂದರ್ಭದ ಸಾಹಿತ್ಯ

ನೋಡಿದರೆ ನಮಗೆ ಕರ್ನಾಟಕ ಏಕೀಕರಣವನ್ನು ಪ್ರಭಾವಿಸಿದ ಮೌಲ್ಯಗಳು ಕಾಣುತ್ತವೆ. ಕರ್ನಾಟಕ ಸಂಸ್ಕೃತಿಯ ಬಗ್ಗೆ ಬರೆದ ಆಲೂರು, ಬೆಟಗೇರಿ, ಸಿಂಪಿ, ಮಾಸ್ತಿಯವರ ಬರಹಗಳಲ್ಲಿ ವೈಭವೀಕರಣದ ಪುನರುತ್ಥಾನವಾದೀ ನಿಲುವುಗಳನ್ನು ಗುರುತಿಸುವ ರಹಮತ್ ತರೀಕೆರೆ ಅವರು ಇವರೆಲ್ಲರಿಗೆ ಬಹುಷಃ ಈ ನಿಲುವು ತಾಳುವುದು ಕರ್ನಾಟಕದ ಏಕೀಕರಣಕ್ಕಾಗಿಯೋ ವಸಾಹತುಶಾಹಿಯ ವಿರೋಧಕ್ಕಾಗಿಯೊ ಅಥವಾ ಕಳೆದುಹೋದ ತಮ್ಮ ಸಾಂಸ್ಕೃತಿಕ ಮುಖಚಹರೆಯ ಹುಡುಕಾಟಕ್ಕಾಗಿಯೋ, ಐತಿಹಾಸಿಕ ಅವಶ್ಯಕತೆಯಾಗಿತ್ತು ಎಂದು ವಿಶ್ಲೇಷಿಸುತ್ತಾರೆ.

ಆಗಿನ ಸ್ವಾತಂತ್ರ್ಯ ಚಳವಳಿಯ ಹಲವು ನೇತಾರರು ರಾಜಮಹಾರಾಜರ ಆಳ್ವಿಕೆಗಳನ್ನು ಕೀರ್ತಿಸುತ್ತಾ, 'ಭಗವದ್ಗೀತೆ'ಯ ಮುಖಾಂತರ ದೇಶಪ್ರೇಮವನ್ನು ಪ್ರತಿಪಾದಿಸುತ್ತಿದ್ದಾಗ ಮತ್ತೊಂದು ಕಡೆ ಬೆಳೆಯುತ್ತಿದ್ದ ಕರ್ನಾಟಕ ಏಕೀಕರಣದ ಚಳವಳಿ ವಿಜಯನಗರವನ್ನು, ತಾಯಿ ಭುವನೇಶ್ವರಿಯನ್ನು ಚಳವಳಿಯ ಪ್ರೇರಣಾ ಮಾದರಿಗಳಾಗಿ ಮುಂದಿಡುತ್ತಿದ್ದಾಗ ಕುವೆಂಪು ಅವರಲ್ಲಿ ಗಟ್ಟಿಗೊಂಡಿದ್ದ ಸ್ವವಿಮರ್ಶಾಪ್ರಜ್ಞೆಯಿಂದ ಮೂಡಿದ 'ನಮ್ಮವರೇ ಹದ ಹಾಕಿ ತಿವಿದರದು ಹೂವೆ' ಎಂಬ ಎಚ್ಚರ ಅತ್ಯಂತ ಪ್ರಸ್ತುತವಾದುದಾಗಿತ್ತು. ಏಕೀಕರಣ ಚಳುವಳಿಯನ್ನು ಸರಿದಿಕ್ಕಿನಲ್ಲಿ ಕೊಂಡೊಯ್ಯಬಹುದಾಗಿದ್ದ ಕುವೆಂಪು ಅವರ ಈ ಸ್ವವಿಮರ್ಶಾಪ್ರಜ್ಞೆ ಅಂದಿನ ನೇತಾರರಲ್ಲಾಗಲೀ, ಲೇಖಕರಲ್ಲಾಗಲೀ ಕಾಣುವುದಿಲ್ಲ ಎಂದು ಬಂಜಗೆರೆ ಜಯಪ್ರಕಾಶ ಅವರು ಅಭಿಪ್ರಾಯಪಡುತ್ತಾರೆ.

ವೈಭವೀಕರಣದ ಪುನರುತ್ಥಾನವಾದೀ ನಿಲುವುಗಳು ವಾಸ್ತವದಲ್ಲಿ ಆಚರಣೆಗೆ ಬಂದಿದ್ದು ವಿವಿಧ ಉತ್ಸವ ಮತ್ತು ಕಾರ್ಯಕ್ರಮಗಳ ಮೂಲಕ. ೧೯೩೬ ರ ಡಿಸೆಂಬರ್ ೨೫ ರಿಂದ ೨೭ ರವರೆಗೆ ಮೂರು ದಿನಗಳು ಹಂಪಿಯಲ್ಲಿ ವಿಜಯನಗರ ಸ್ಥಾಪನೆಯ ಆರು ನೂರು ವರ್ಷಗಳ ನೆನಪಿಗಾಗಿ 'ಷಟ್ ಶತಮಾನೋತ್ಸವ'ವನ್ನು ಆಚರಿಸಲಾಯಿತು. ಮುಂದೆ ನಡೆದ ನಿಜಗುಣ ಶಿವಯೋಗಿ, ಕುಮಾರವ್ಯಾಸ, ಪಂಪ, ವಿದ್ಯಾರಣ್ಯ, ಪುರಂದರ, ಬಸವೇಶ್ವರ ಇತ್ಯಾದಿ ಉತ್ಸವಗಳಿಗೆ ವಿಜಯನಗರ ಸ್ಮಾರಕೋತ್ಸವವೇ ಬುನಾದಿ. ಆ ಮೂಲಕ ಕನ್ನಡಿಗರಲ್ಲೂ ಸಾಹಿತ್ಯಕ, ಚಾರಿತ್ರಿಕ ಹಾಗೂ ಧಾರ್ಮಿಕ ಸಂಕೇತಗಳನ್ನು ಬಳಸುವುದು ವಾಡಿಕೆಗೆ ಬಂದಿತು. ಇದು ಮಹಾರಾಷ್ಟ್ರದ ತಿಲಕ್ ಪ್ರಭಾವಿತ ವ್ಯಕ್ತಿಗಳಿಂದಾದ ಪರಂಪರೆ ಆಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ. ಈ ಉತ್ಸವಗಳು ಮತ್ತು ಕಾರ್ಯಕ್ರಮಗಳು ನಿರ್ದಿಷ್ಟವಾದವುಗಳನ್ನು ಮುನ್ನಲೆಗೆ ತರುವ ಮತ್ತು ಕೆಲವನ್ನು ತೆರೆಯ ಹಿಂದೆ ಸರಿಸುವ ಕೆಲಸವನ್ನು ಮಾಡಿದವು. ಇದರ ಫಲವಾಗಿ ಕರ್ನಾಟಕದ ಪ್ರಸಿದ್ಧ ರಾಜವಂಶಗಳು, ಅವರ ವಿಜಯಗಳು, ಅದರಲ್ಲೂ ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯದ 'ಮುತ್ತು ರತ್ನಗಳನು ಬಳ್ಳದಿಂದ ಅಳೆದು ಮಾರಿದ' ವೈಭವ, ಪಂಪ-ರನ್ನ-ಕುಮಾರವ್ಯಾಸರು, ಕನ್ನಡಿಗರ ಉದಾರತೆ-ರಸಿಕತೆ-ಸಹಿಷ್ಣುತೆ, ಇವನ್ನು ಬಣ್ಣಿಸುವ ಶಾಸನಗಳು-ಹೀಗೆ ಕರ್ನಾಟಕದ ಸಂಸ್ಕೃತಿಯ ಚಿತ್ರಕ್ಕೆ ಒಂದು ರಮ್ಯಾದ್ಭುತವಾದ ಚೌಕಟ್ಟು ತಯಾರಾಗಿಬಿಟ್ಟವು. ಆದರೆ ಕರ್ನಾಟಕ ಸಂಸ್ಕೃತಿ ಎಂದ ತಕ್ಷಣ

ಮೂಡುವ ಈ ಕಣ್ಕೋರೈಸುವ ಚಿತ್ರದ ಜತೆಗೆ ತಕ್ಷಣ ಮೂಡದ ನಮ್ಮ ಸಣ್ಣತನ, ಸೋಲು, ಅಸಹಿಷ್ಣುತೆ, ಬಡತನಗಳು ಹಲವಾರು ಮಸುಕು ಚಿತ್ರಗಳು ತೆರೆಯ ಹಿಂದೆ ಸರಿದವು.

ಪರಂಪರೆಯೆಂದರೆ ಹಳೆಯದರ ವೈಭವೀಕರಣವಲ್ಲ. ನಿರ್ದಿಷ್ಟ ನೆಲೆಯೊಂದರ ಚಲನಶೀಲ ನಿರಂತರತೆಯೇ ಪರಂಪರೆ. ಪರಂಪರೆ ನಿಂತ ನೆಲೆಯಲ್ಲ; ವಿಕಾಸದ ಪ್ರಕ್ರಿಯೆ. ನಮ್ಮಲ್ಲಿ ಒಂದೇ ಮತವಿಲ್ಲ; ಒಂದೇ ಧರ್ಮವಿಲ್ಲ, ಒಂದೇ ಜೀವನವಿಧಾನವಿಲ್ಲ; ಒಂದೇ ಮಾದರಿಯ ಚರಿತ್ರೆ ಪುರಾಣಗಳಿಲ್ಲ. ನಗರದ ಜನರಿದ್ದಾರೆ; ಗ್ರಾಮೀಣ ಜನರಿದ್ದಾರೆ; ಗ್ರಾಮ-ನಗರಗಳನ್ನು ನೋಡದ ಬುಡಕಟ್ಟು ಜನರೂ ಇದ್ದಾರೆ. ಇವರೆಲ್ಲರನ್ನು ಒಳಗೊಂಡದ್ದು ಕರ್ನಾಟಕ ಎಂದು ಬರಗೂರು ರಾಮಚಂದ್ರಪ್ಪ ಅವರು ವ್ಯಾಖ್ಯಾನಿಸುತ್ತಾರೆ. ಆದರೆ ವೈಭವೀಕರಣದ ಪುನರುತ್ಥಾನವಾದದಲ್ಲಿ ಇವನ್ನೆಲ್ಲ ಮರೆಯಲಾಯಿತು. 'ಗತ'ದ ವೈಭವ ಪ್ರತಿಷ್ಠಾಪಿಸಬೇಕೆಂದರೆ 'ವರ್ತಮಾನದ' ಎಲ್ಲವನ್ನು ತಿರಸ್ಕರಿಸಬೇಕು. ಹಾಗಾಗಲು ಹುಸಿ ಶತ್ರುವನ್ನು ಸೃಷ್ಟಿಸಿ ಅಥವಾ ಕಲ್ಪಿಸಿ ಸಮಾಜವನ್ನು ಅಧೀರತೆ ಕಡೆಗೆ ಒಯ್ಯಬೇಕು ಎಂಬುದೇ ಮತೀಯವಾದಿ ಸಂಸ್ಕೃತಿ ಚಿಂತನೆಯ ಮುಖ್ಯ ಗಮನ. ಸಮಾಜಗಳಲ್ಲಿರುವ ಈ ತಲ್ಲಣವನ್ನು ನಿತ್ಯ ಕಾಪಾಡಿಕೊಂಡು ಮಾರುಕಟ್ಟೆಯ ಮೇಲೆ ಯಜಮಾನಿಕೆ ಸ್ಥಾಪಿಸುವುದೇ ವಸಾಹತುಶಾಹಿ ಆಸಕ್ತಿ. ಹಾಗಾಗಿ ಈ ಎರಡು ಚಿಂತನೆಗಳು ಏಕೀಭವಿಸಿ ಮೂಲಭೂತವಾದಿ ಚಿಂತನೆಗಳು ರೂಪುಗೊಳ್ಳುತ್ತಿರುತ್ತವೆ. ಈ ಚಿಂತನೆಯ ಮೂಲಾಧಾರವೇ ಶತ್ರು ಕಲ್ಪನೆಯನ್ನು ದಟ್ಟವಾಗಿಸುತ್ತಾ ಹೋಗುವುದು.[೧]

ಮೂಲಭೂತವಾದಿ ನೆಲೆಯ ಚಿಂತನೆಗಳು ಸೃಷ್ಟಿಸಿದ ಸಮಸ್ಯೆಗಳು ಹಲವು ಬಗೆ. ಅವು ಸಾಂಸ್ಕೃತಿಕವಾಗಿ ಯಜಮಾನವಾಗಿದ್ದ ಲಿಖಿತ ದಾಖಲೆಗಳನ್ನು ನೆಚ್ಚಿ ಸೃಷ್ಟಿಯಾದ ವೈದಿಕ ಸಂಸ್ಕೃತಿಯನ್ನೇ ಭಾರತೀಯ ಸಂಸ್ಕೃತಿ ಎಂದು ನಂಬಿದ್ದರಿಂದಾಗಿ ಆದ ಅನ್ಯಾಯವೆಂದರೆ 'ವೈವಿಧ್ಯದ ಕೊಂಬೆಗಳನ್ನು ಸವರಿ ಎದ್ದು ಕಾಣುವ ಕಾಂಡವೊಂದನ್ನೇ ಇಡೀ ಮರವೆಂದು ಪ್ರದರ್ಶಿಸಿದ್ದು.' ಹೀಗಾಗಿ ನಮ್ಮ ಸುತ್ತ ಬದುಕುತ್ತಿರುವ ಸಿದ್ದಿಯರು, ಕುಣುಬಿಯರು, ಗೊಂಡರು, ಕೊರಗರು, ಮನ್ಸರು, ಮೇರರು, ಯರವರು, ಸೋಲಿಗರು, ಹಸಲರು, ತೊದವರು, ಜೇನುಕುರುಬರು- ಹೀಗೆ ಎಷ್ಟೋ ಬುಡಕಟ್ಟುಗಳ ಬದುಕು ಕರ್ನಾಟಕ ಸಂಸ್ಕೃತಿಯ ಚರ್ಚೆಯಲ್ಲಿ ಸೇರದೇ ಹೋಯಿತು. ರಹಮತ್ ತರೀಕೆರೆ ಅವರು ಗುರುತಿಸುವಂತೆ ಕರ್ನಾಟಕ ಸಂಸ್ಕೃತಿಯ ವೈಭವೀಕರಣದ ನಿಲುವಿನ ಇನ್ನೊಂದು ಬಾಲಿಶ ಗುಣವೆಂದರೆ, ಇತಿಹಾಸದಲ್ಲಿ ದುಡಿವ ವರ್ಗದ ಮತ್ತು ಸ್ತ್ರೀಯರ ವಿರೋಧಿಯಾಗಿದ್ದ ಕೀಳ್ಗುಂಟೆ, ವೇಳೆವಾಳಿ, ಜೋಳದ ಪಾಳಿ ಮತ್ತು ಸತಿಹೋಗುವ ಕರಾಳ ಪದ್ಧತಿಗಳನ್ನು ಕನ್ನಡಿಗರ ತ್ಯಾಗದ ಸಂಕೇತಗಳಾಗಿ ಕೊಂಡಾಡುವುದು. ಯಾವುದೇ 'ಸಾಮ್ರಾಜ್ಯ' ಚಕ್ರಾಧಿಪತ್ಯ ಕಟ್ಟಬೇಕಾದರೆ ಏಕರೂಪದ ಧರ್ಮ ಇರಬೇಕು. ಏಕರೂಪದ ಆಚರಣಾ ವ್ಯವಸ್ಥೆ ಇರಬೇಕು. ಈ ಕಾರಣದಿಂದಲೇ ಎಲ್ಲ ಸಾಮ್ರಾಜ್ಯಗಳೂ, ಅವು ಯಾವುದೇ ಸಿದ್ಧಾಂತಕ್ಕೆ

ಸೇರಿದವುಗಳಾಗಿರಲಿ, ಬಲಾತ್ಕಾರವಾಗಿಯಾದರೂ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಏಕರೂಪ ತರಲು ಹವಣಿಸುತ್ತವೆ. ಭಿನ್ನರೂಪಗಳ ನಿರಾಕರಣೆ ಸಾಮಾಜಿಕ ಸ್ಥಿರತೆಯ ರೂಪ ತಾಳುತ್ತದೆ. ಬ್ರಿಟಿಶರ ಧಾರ್ಮಿಕ ಮತ್ತು ಸಾಂಸ್ಕೃತಿಕ ನೀತಿಯ ಗುರಿ ಇದ್ದದ್ದೇ ಈ ರೀತಿಯ ಏಕರೂಪತೆ ನಿರ್ಮಿಸುವ ಕಡೆಗೆ. ಬಹುರೂಪತೆಯನ್ನು ನಿರಾಕರಿಸುವ ಈಗಿನ ರಾಜಕೀಯ ಹಠದ ಉಗಮವಿರುವುದು ಬಹುಷಃ ಇಲ್ಲಿಯೇ ಎಂದು ಡಿ.ಆರ್ ನಾಗರಾಜ್ ಅವರು ವಿಶ್ಲೇಷಿಸುತ್ತಾರೆ.

ಪ್ರತಿಯೊಂದು ಭಾಷಿಕ ವಲಯದಲ್ಲೂ ಅಲ್ಲಿನ ಪ್ರಬಲ ಸಾಂಸ್ಥಿಕ ಧರ್ಮ ಭಾಷೆಯನ್ನು ತನ್ನ ಹಿತಾಸಕ್ತಿಗೆ ಬಳಸಿಕೊಳ್ಳಲು ಹವಣಿಸುತ್ತಿರುತ್ತದೆ. ಪಾಕಿಸ್ತಾನದಲ್ಲಿ ಇಸ್ಲಾಂ ಮೂಲಭೂತವಾದಿಗಳು ಉರ್ದುವನ್ನು, ಭಾರತದಲ್ಲಿ ಕನ್ನಡದಂತಹ ದೇಶಿ ಭಾಷೆಗಳನ್ನು ಹಿಂದುತ್ವದ ಮೂಲಭೂತವಾದಿಗಳು, ಉರ್ದುವನ್ನು ಇಸ್ಲಾಮಿನ ಮೂಲಭೂತವಾದಿಗಳು ಹೀಗೆ ಬಳಸಿಕೊಳ್ಳಲು ಪ್ರಯತ್ನಿಸುತ್ತವೆ. ಮೂಲಭೂತವಾದಿ ನೆಲೆಯ ಕನ್ನಡ ಅಸ್ಮಿತೆಯ ಚಿಂತನೆಯ ಬೇರುಗಳಿರುವುದು ಇಲ್ಲಿಯೇ. ಸಾರಾಂಶದಲ್ಲಿ 'ಕನ್ನಡ ಭಾಷಿಕ ಮೂಲಭೂತವಾದ'ದ ಮುಸುಕಿನಲ್ಲಿರುವುದು ಹಿಂದುತ್ವದ ಮೂಲಭೂತವಾದ. ಈ ಅಧ್ಯಯನ ಇದನ್ನೇ ಕನ್ನಡ ಅಸ್ಮಿತೆಯ ಮೂಲಭೂತವಾದಿ ನೆಲೆಯ ಚಿಂತನಾಧಾರೆ ಎಂದು ಗುರುತಿಸುತ್ತದೆ.

ವಿಜಯನಗರ ಸಾಮ್ರಾಜ್ಯದ ವೈಭವೀಕರಣ, ಕನ್ನಡದ ರಾಜರ ಪರಾಕ್ರಮ, ಕನ್ನಡ ಸೈನಿಕರ, ಜನರ ಶೂರತನ, ಮುಸಲ್ಮಾನ ವಿರೋಧ, ಸಂಸ್ಕೃತಪರ ನಿಲುವು, ಕನ್ನಡಕ್ಕೆ ಹಿಂದೂ ಮೇಲ್ವರ್ಗಗಳ ಸಂಸ್ಕೃತಿಯ ಕೊಡುಗೆಯ ಪರಿಗಣನೆ; ಹಿಂದೂ ಕೆಳವರ್ಗಗಳು ಮತ್ತು ಇತರ ಧರ್ಮಗಳ ಸಂಸ್ಕೃತಿಯ ಕೊಡುಗೆಯ ಅವಗಣನೆ, ಇಂಗ್ಲಿಶ್-ಹಿಂದಿಯ ಬಗ್ಗೆ ಮೇಲುಮಟ್ಟದ ವಿರೋಧ; ತಮಿಳು/ತೆಲುಗುನಂತಹ ನೆರೆಯ ಭಾಷೆಗಳ ಕಡುವಿರೋಧ, ಸಂಸ್ಕೃತಿಯ ರೂಪಕಾತ್ಮಕ ಸ್ವೀಕಾರ ; ಆಶಯದ ಬಗ್ಗೆ ಮೌನ, ಕನ್ನಡಕವಿ, ಸಾಹಿತಿಗಳ ಸ್ತುತಿ ; ಅವರ ಸಾಹಿತ್ಯದ ಜೀವಪರ ಮೌಲ್ಯಗಳ ಬಗ್ಗೆ ಮೌನ – ಇವು ಮೂಲಭೂತವಾದಿ ನೆಲೆಯ ಕನ್ನಡ ಅಸ್ಮಿತೆಯ ಚಿಂತನಾಧಾರೆಯ ಮುಖ್ಯ ಚಹರೆಗಳಾಗಿವೆ.

ಬಹುತ್ವದ ನೆಲೆಯ ಭಾಷಿಕ ಅಸ್ಮಿತೆಗೂ ಮೂಲಭೂತವಾದಿ ನೆಲೆಯ ಭಾಷಿಕ ಅಸ್ಮಿತೆಗೂ ಸದಾ ಸಂಘರ್ಷದ ಸಂಬಂಧ. ಭಾಷಿಕ ಮೂಲಭೂತವಾದದ ಮುಸುಕಿನಲ್ಲಿರುವ ಹಿಂದುತ್ವದ ಮೂಲಭೂತವಾದವನ್ನು ಕನ್ನಡವನ್ನೂ ಒಳಗೊಂಡಂತೆ ದೇಶಿ ಭಾಷೆಗಳು ಅನುಮೋದಿಸಿಲ್ಲ. 'ಕನ್ನಡ ಸಾಹಿತ್ಯದ ಪ್ರಮುಖ ಕವಿಗಳು ಧರ್ಮವನ್ನು ವಸ್ತುವಾಗಿ ಸ್ವೀಕರಿಸಿ ನಿರ್ವಹಿಸಿದ ರೀತಿ ಆಸಕ್ತಿದಾಯಕವಾಗಿದೆ. ಧರ್ಮವನ್ನು ಒಂದು ಸಂಸ್ಥೆಯಾಗಿ, ಶಾಸ್ತ್ರವಾಗಿ ಸ್ವೀಕರಿಸುವ ಕ್ರಮಕ್ಕೂ ಧಾರ್ಮಿಕವಾಗಿಸುವ ಸೃಜನಶೀಲ ಕ್ರಿಯೆಗೂ ವ್ಯತ್ಯಾಸವಿದೆ... ಸಾಂಸ್ಥಿಕ ಧರ್ಮ ಮತ್ತು ಧಾರ್ಮಿಕತೆಗಳಲ್ಲಿ ನಮ್ಮ ಕವಿಗಳ ಆಯ್ಕೆ ಧಾರ್ಮಿಕತೆಯೇ ಆಗಿತ್ತು. ಆದ್ದರಿಂದಲೇ ಪಂಪ, ರನ್ನ,

ರತ್ನಾಕರವರ್ಣಿ ಇತ್ಯಾದಿ ಕನ್ನಡದ ಪ್ರಮುಖ ಜೈನ ಕವಿಗಳು ಜೈನಧರ್ಮವನ್ನು ಶಾಸ್ತ್ರವಾಗಿ ಸ್ವೀಕರಿಸದೆ ಧಾರ್ಮಿಕರಾದರು. ಕುಮಾರವ್ಯಾಸ ವೈದಿಕ ಧರ್ಮ ಪ್ರಸಾರದ ಕವಿಯಾಗದೆ ಮಹಾಭಾರತದ ವಸ್ತು ವ್ಯಾಪ್ತಿಯಲ್ಲಿ ಧರ್ಮ ಸೂಕ್ಷ್ಮಗಳ ಜಿಜ್ಞಾಸೆಗೆ ಕಾರಣನಾದ. ವಚನಕಾರರು, ದಾಸರು ಜಡ ಧರ್ಮಗಳ ಶಾಸ್ತ್ರ ಸಂಕೋಲೆಗಳನ್ನು ಮೀರಿದ ಮನುಷ್ಯರಾದರು' ಎಂದು ಬರಗೂರರು ನಮ್ಮ ಕವಿಗಳು ಧರ್ಮಕ್ಕೆ ತಂದ ಜೀವಂತಿಕೆಯನ್ನು ವಿವರಿಸಿದರೆ ಕೆ.ವಿ. ಸುಬ್ಬಣ್ಣ ಅವರು 'ಕವಿರಾಜಮಾರ್ಗ'ದ ಕಾರಣಕರ್ತೃಗಳಾದ ನೃಪತುಂಗ – ಶ್ರೀವಿಜಯರು ಭಿನ್ನವಾದ ವೈದಿಕ – ಜೈನಧರ್ಮಗಳಿಗೆ ಸೇರಿದವರು; ಈಯಿಬ್ಬರೂ ಧರ್ಮದಲ್ಲಿ ಪರಮನಿಷ್ಠೆಯಿದ್ದವರು. ಹಾಗಾದರೂ ಇಡೀ ಗ್ರಂಥದ ಯಾವುದೇ ಮೂಲೆಯಲ್ಲಿಯೂ ಇವರ ಧರ್ಮಭಿನ್ನತೆಯ ಸೂಚನೆ ಕೂಡ ಕಾಣಿಸಿಕೊಳ್ಳುವುದಿಲ್ಲ ಎಂದು ಕನ್ನಡದ ಪ್ರಾಚೀನ ಕವಿಗಳ ಜಾತ್ಯತೀತ ನಿಲುವಿನತ್ತ ನಮ್ಮ ಗಮನ ಸೆಳೆಯುತ್ತಾರೆ. ಇದೇ ರೀತಿ ಭಾರತೀಯ ಸಂದರ್ಭದಲ್ಲಿ ಇಸ್ಲಾಂ ಮೂಲಭೂತವಾದಕ್ಕೆ ಉರ್ದು ಮಣಿಯಲಿಲ್ಲ. ಇಸ್ಲಾಂ ತಾನು ಹೋದೆಡೆಯಲ್ಲೆಲ್ಲ 'ಮೂಲ', 'ಶುದ್ಧ' ರೂಪದಲ್ಲಿ ಇಡಬೇಕು ಎಂಬ ಪರಿಷ್ಕರಣವಾದಿಗಳನ್ನು ಲೆಕ್ಕಿಸದೆ, ಸಂಗಾತಿ ಸಂಸ್ಕೃತಿಗಳೊಡನೆ ಕೊಡುಕೊಳೆ ನಡೆಸಿತು. ಇದನ್ನು ಸಾಧ್ಯಗೊಳಿಸಿದವರು ದುಡಿಮೆಗಾರರು, ಕವಿಗಳು, ಚಿತ್ರಕಾರರು, ತತ್ವಜ್ಞಾನಿಗಳು, ಸೂಫಿಸಂತರು, ಸಂಗೀತಗಾರರು. ಇಂಡಿಯಾದ ಬಹುಸಂಸ್ಕೃತಿ ಬಹುಭಾಷೆ ಬಹುಧರ್ಮಗಳು ಸೇರಿ ನಿರ್ಮಿಸಿರುವ ಕನ್ನಡಿಗಳೇ, ಕವಿ ಇಕ್ಬಾಲ್ ಅವರು ರಾಮನ ಕುರಿತು ಕವಿತೆ ಬರೆಯಲು, ಸೂಫಿಪಂಥ ಬೆಳೆಯಲು, ಹಿಂದೂಸ್ತಾನಿ ಸಂಗೀತ ಹುಟ್ಟಲು ಕಾರಣವಾದದ್ದನ್ನು ರಹಮತ್ ತರೀಕೆರೆ ಅವರು ನೆನಪಿಸುತ್ತಾರೆ.

ಮೂಲಭೂತವಾದಿ ನೆಲೆಯ ಕನ್ನಡ ಅಸ್ಮಿತೆಯನ್ನು ಅದರ ಹುಟ್ಟಿನ ಮೂಲದಲ್ಲೇ ಗುರುತಿಸಿ ವಿರೋಧಿಸಿಕೊಂಡು ಬರಲಾಗಿದೆ. 'ನಿನ್ನೆ ಹಾಗು ಇಂದುಗಳೊಳಗಿನ ಅಂತರವು ಹೆಚ್ಚಿದಂತೆ ಜೀವನದಲ್ಲಿ ಅಭಾಸವು ತಲೆದೋರುತ್ತದೆ. ಸಾಂಪ್ರದಾಯಿಕ ಘನಶ್ರದ್ಧೆಗೆ, ಏನೆಲ್ಲವೂ 'ನಿನ್ನೆ'ಗಳಲ್ಲಿ ಇದ್ದುದಾಗಿ ಕಾಣುತ್ತದೆ. ಆದರೆ, ನಾವು ಏನೆ ಕಲ್ಪಿಸಿಕೊಂಡರೂ ಇಡಿಯಾದ 'ನಿನ್ನೆ'ಯೆ 'ಇಂದು' ಆಗಿರಲಾರದು; ಆಗಬಾರದು. ನಿನ್ನೆಯ ಎಲ್ಲವನ್ನೂ ಇಂದಿನಲ್ಲಿ ಉಳಿಸಿಕೊಳ್ಳುವ ಹಂಬಲವು, ವಿಕೃತಬುದ್ಧಿಯ ಅವಾಸ್ತವ ಭಾವನಾತ್ಮಕತೆಯ ಲಕ್ಷಣ; ಜೀವಂತ ಚೈತನ್ಯದ ಅಂಕುರ 'ಹೊಚ್ಚಹೊಸ', 'ನೂತನ' ಎಂಬುದನ್ನರಿವ ಅದರಿಂದ ಆನಂದಿಸುವ ಮನೋಭಾವವು ಬಧಿರವಾದ ಲಕ್ಷಣವಿದು. ನಿನ್ನೆಯಲ್ಲಿಯೆ ಮುಗಿವ–ಪೂರ್ಣವಿರುವ 'ಸಂಸ್ಕೃತಿ' ಜೀವಂತ ಚೈತನ್ಯಕ್ಕೆ ಎರವಾದ ಸಂಸ್ಕೃತಿಯಾಗಿರಲಿಕ್ಕೆ ಸಾಕು. ಇಂದಿನಲ್ಲಿ ಚಿಗುರಿ, ನಾಳೆಯಲ್ಲಿ ಕುಡಿವರಿದು ಹಬ್ಬುವ ಸರ್ಜಕ ಪ್ರವೃತ್ತಿಯ ಅಂತಃಶಕ್ತಿ ಎಂದೂ ಕುಗ್ಗದಂತೆ ನೋಡಿಕೊಳ್ಳುವ ದಕ್ಷತೆಯು ಬೇಕು. ರಾಜಕೀಯ ಸಾಮಾಜಿಕ ನೇತಾರರದಲ್ಲಿ, ಈ ದಕ್ಷತೆಯ ಸಾಮಾಜಿಕ ಪ್ರಜ್ಞೆ ಇಲ್ಲದ ಸಂಸ್ಕೃತಿ, ವಿಕೃತ

ನಾಗರಿಕತೆಯಾಗಿ ಪರಿಣಮಿಸುತ್ತದೆ' ಎಂದು ಗತವನ್ನು ವೈಭವೀಕರಿಸುವ ಕುರಿತು ಹಿರಿಯ ಸಂಶೋಧಕ ಶಂಬಾ ಜೋಶಿ ಆಗಲೇ ಎಚ್ಚರಿಸಿದ್ದರು.

ಮೂಲಭೂತವಾದಿ ನೆಲೆಯ ಕನ್ನಡ ಅಸ್ಮಿತೆ ಒಳಗಿರುವ ಸಂಸ್ಕತ ಪ್ರೇಮವನ್ನೂ ಪ್ರಶ್ನಿಸಲಾಗಿದೆ. ರಾಷ್ಟ್ರದಲ್ಲಿ ಮತೀಯ ಮೂಲಭೂತವಾದಿಗಳ ಪ್ರಭಾವ ಹೆಚ್ಚಾಗುತ್ತಿದ್ದಂತೆ ಸಂಸ್ಕೃತದ ಪ್ರಭಾವವನ್ನು ವಿಸ್ತರಿಸುವ ಹುನ್ನಾರವೂ ಹೆಚ್ಚಾಗುತ್ತಿರುವುದು ಕಾಕತಾಳೀಯವಲ್ಲ. ಇವೆರಡಕ್ಕೂ ಪರಸ್ಪರ ಸಂಬಂಧವಿದೆ. ಯಾಕೆಂದರೆ ಸಂಸ್ಕೃತ ಕಲಿಕೆ ಇಂದು ಕನ್ನಡದಂಥ ಜನಭಾಷೆಯ ಕಲಿಕೆಯಂತೆ ಧರ್ಮನಿರಪೇಕ್ಷವಾಗಿಲ್ಲ. ಅದು ಮಠಮಾನ್ಯಗಳ 'ಪವಿತ್ರ ಭಾಷೆ'ಯಾಗಿ ಪರಿಗಣಿತವಾಗಿದೆ. ವೈದಿಕ ಮಠಮಾನ್ಯಗಳಷ್ಟೇ ಅಲ್ಲ, ವೀರಶೈವ, ಒಕ್ಕಲಿಗ, ಕುರುಬ, ನಾಯಕ – ಹೀಗೆ ಎಲ್ಲ ಮಠಗಳಲ್ಲಿ ಸಂಸ್ಕೃತಕ್ಕೆ ಇರುವ ಆದ್ಯತೆ, ಪವಿತ್ರತೆ ಕನ್ನಡಕ್ಕೆ ಇರುವುದಿಲ್ಲ. ಸಂಸ್ಕೃತದ ಬೋಧನಾಕ್ರಮದಲ್ಲೂ (ಪಠ್ಯಕ್ರಮವನ್ನು ಒಳಗೊಂಡಂತೆ) ಸನಾತನತೆಯದೇ ಮೇಲುಗೈಯಾಗಿದ್ದು ಇದು ಕನ್ನಡಕ್ಕೆ ಕುತ್ತು ತರುವ ಪ್ರಯತ್ನ ಎಂದು ಬರಗೂರರು ವಿರೋಧಿಸಿದ್ದಾರೆ.

ಮೂಲಭೂತವಾದಿ ನೆಲೆಯ ಚಿಂತನೆಗಳು ಖಚಿತ ಉದ್ದೇಶಕ್ಕಾಗಿಯೇ ಆಳಿದ ರಾಜರನ್ನು ವೈಭವೀಕರಿಸುವ ಕೆಲಸ ಮಾಡುತ್ತದೆ. ಈ ಸಂದರ್ಭದಲ್ಲಿ 'ರಾಜಮಹಾರಾಜರನ್ನೂ ಅವರ ಇಂತಹ ಕೆಲಸಗಳನ್ನು ಸ್ಮರಿಸುವಾಗ ಬೆವರು ಬಸಿದು ನಾಡು ಕಟ್ಟಿದ ಜನರನ್ನು ಮರೆಯಬಾರದು, ನಮ್ಮ ಪರಂಪರೆಯ ಎಲ್ಲ ಪ್ರತೀಕಗಳನ್ನು ಗೌರವಿಸುತ್ತಲೇ ಪ್ರಜಾಪ್ರಭುತ್ವದಲ್ಲಿ ಜನಪರಂಪರೆಯ ಪರಿಕಲ್ಪನೆಯನ್ನು ದೃಢಗೊಳಿಸುವುದು ಅಗತ್ಯ.' ಎಂಬ ಎಚ್ಚರ ಕನ್ನಡ ಚಿಂತನೆಯಲ್ಲಿ ಮೂಡಿದೆ. ಆದರೆ ನಿಜವಾದ ತೊಡಕಿರುವುದು ಪ್ರಜಾಪ್ರಭುತ್ವೀಯ ಮೌಲ್ಯಗಳಲ್ಲಿ ಅಚಲ ನಂಬಿಕೆಯಿರುವ ಕನ್ನಡದ ಪ್ರಮುಖ ಸಾಹಿತಿ–ಚಿಂತಕರಲ್ಲಿ ಆಳಿ ಹೋದ ರಾಜಪ್ರಭುತ್ವದ ಕೊಡುಗೆಯ ಬಗೆಗೆ ಅವಿಮರ್ಶಾತ್ಮಕ ಮೆಚ್ಚುಗೆ ಇರುವುದು. ನಿದರ್ಶನವಾಗಿ ಕುವೆಂಪು ಅವರ ನಾಡಗೀತೆಯಲ್ಲಿ ಇದನ್ನು ಗಮನಿಸಬಹುದು. ಸುಬ್ಬಣ್ಣ ಅವರು ಕವಿರಾಜಮಾರ್ಗವನ್ನು ವರ್ಣಿಸುವಾಗಲೂ ಇದನ್ನು ಗಮನಿಸಬಹುದು. 'ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವ ಈ ದಿನಗಳಲ್ಲಿ ಸಾಮಂತಶಾಹಿಯ ನೆನಪುಗಳನ್ನು ನಮ್ಮ ಪರಂಪರೆಯ ಹೆಮ್ಮೆ ಎಂದು ಹಾಡುವ ಗೀತೆ ಸಹಜವಾಗಿಯೇ ವಿವಾದಗಳಿಗೆ ಅನುವು ಮಾಡಿಕೊಡುತ್ತದೆ' ಎಂದು ಕೆ.ವಿ ನಾರಾಯಣ ಅವರು ವಿಶ್ಲೇಷಿಸುತ್ತಾರೆ.

ದೇಶದಲ್ಲಿ ಬೆಳೆಯುತ್ತಿರುವ ಕೋಮುವಾದ ಕನ್ನಡಕ್ಕೂ ಅಡ್ಡಿಯುಂಟುಮಾಡುತ್ತಿದೆ. ಕನ್ನಡವು ಹಿಂದೂ ಭಾಷೆಯೆಂಬ ಮೂಢನಂಬಿಕೆಯು ಕೋಮುವಾದಕ್ಕೆ ಪೂರಕವಾಗುವ ಅಪಾಯವಿದೆ. ವೈಭವೀಕರಣದ ಪುನರುತ್ಥಾನವಾದೀ ನಿಲುವು ಅಪಾಯಕಾರಿಯೂ ಅಗುತ್ತಿದೆ. ಯಾಕೆಂದರೆ ತನ್ನೊಟ್ಟಿಗೆ ಬದುಕುತ್ತಿರುವ ಕನ್ನಡೇತರ ಭಾಷಿಕ ಸಮುದಾಯಗಳನ್ನು ಮತ್ತು 'ಹಿಂದೂ'

ಅಲ್ಲದ ಧಾರ್ಮಿಕ ಸಮುದಾಯಗಳನ್ನು ಇಲ್ಲಿ ಶತ್ರುಗಳನ್ನಾಗಿ ರೂಪಿಸಿಕೊಳ್ಳಲಾಗುತ್ತದೆ. ನಿಜಶತ್ರುಗಳಾದ ಹಿಂದಿ ಇಂಗ್ಲಿಶ್ ಸಂಸ್ಕೃತಗಳ ಸಾಮ್ರಾಜ್ಯಶಾಹಿ ಹೇರಿಕೆಯ ರಾಜಕಾರಣವನ್ನು ಕಡೆಗಣಿಸಲಾಗುತ್ತದೆ. ಕಲ್ಪಿತ ಶತ್ರುವನ್ನು ಸೃಷ್ಟಿಸಿ ಸಮಾಜದ ಎರಡು ಸಮುದಾಯಗಳಿಗೆ ಸಂಘರ್ಷಕ್ಕೆ ಹಚ್ಚಿ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುತ್ತ ಸಾಮಾಜಿಕ ಮುಂಚಲನೆಯನ್ನು ತಡೆಯುವುದು ಮೂಲಭೂತವಾದ ಮತ್ತು ಕೋಮುವಾದದ ಆಳದ ಉದ್ದೇಶ. ಭಾಷೆಯ ಮುಸುಕಿನಲ್ಲಿರುವ ಮೂಲಭೂತವಾದವೂ ಇದಕ್ಕೆ ಹೊರತಲ್ಲ. ಬೆಂಗಳೂರು ದೂರದರ್ಶನವು ತನ್ನ ದಿನದ ಕಾರ್ಯಕ್ರಮಗಳಲ್ಲಿ ಕೆಲವು ನಿಮಿಷಗಳ ಕಾಲ ಉರ್ದು ಭಾಷೆಯ ವಾರ್ತಾ ಪ್ರಸಾರವನ್ನು ಮಾಡುವ ನಿರ್ಧಾರವನ್ನು ಪ್ರಕಟಿಸಿದ ಕೂಡಲೇ ಚಳುವಳಿ ಮೊದಲಾಯಿತು. ಈ ಚಳುವಳಿಯು ಉರ್ದು ಭಾಷೆಗೆ ದೊರೆತ ಅವಕಾಶವನ್ನು ವಿರೋಧಿಸುವ ಭರದಲ್ಲಿ ಆ ಭಾಷೆಯನ್ನಾಡುವ ಮುಸ್ಲಿಮರನ್ನು ಗುರಿಮಾಡಿಕೊಂಡಿತ್ತು. ಕಾವೇರಿ ಸಮಸ್ಯೆ, ಉರ್ದು ಪ್ರಸಾರ ಘಟನೆಗಳು ಕರ್ನಾಟಕದಲ್ಲಿ ಬೇರು ಬಿಟ್ಟಿದ್ದ ಭಾಷಿಕ ಅಸಹನೆಯನ್ನು ತೋರಿಸುತ್ತವೆ. ಬೆಂಗಳೂರು ಆಕಾಶವಾಣಿಯಲ್ಲಿ ಜನರ ಆಡುನುಡಿಯಲ್ಲದ ಸಂಸ್ಕೃತಭಾಷೆಯಲ್ಲಿ ವಾರ್ತಾಪ್ರಸಾರದ ಬಗ್ಗೆ ಚಕಾರ ಎತ್ತದೆ ದೂರದರ್ಶನದಲ್ಲಿ ಉರ್ದುಭಾಷೆಯಲ್ಲಿ ವಾರ್ತಾಪ್ರಸಾರ ವಿರೋಧಿಸಿ ನಡೆಸಿದ ಗಲಭೆಯ ಹಿಂದೆ ಮೂಲಭೂತವಾದಿ ನೆಲೆಯ ಅಂಶಗಳಿರುವುದನ್ನು ಕಂಡು ಆಕ್ರೋಶಗೊಂಡ ಬರಗೂರರು 'ಸಾವಿರಾರು ವರ್ಷಗಳಿಂದ ಭಾಷಿಕ ಮೂಲಭೂತವಾದವನ್ನು ವಿರೋಧಿಸಿಕೊಂಡು ಉಳಿದು ಬಂದ ಕನ್ನಡವನ್ನೇ ಭಾಷಿಕ ಮೂಲಭೂತವಾದದ ಭಾಗವಾಗಿಸುವ ಮನೋಧರ್ಮವೊಂದು ಇತ್ತೀಚೆಗೆ ಮೇಲುಗೈ ಪಡೆಯುತ್ತಿದ್ದು, ಈ ಕಾರಣದಿಂದಾಗಿ ಕನ್ನಡದ ಮೂಲಕ ಆಡಳಿತ, ಕನ್ನಡಿಗರಿಗೆ ಉದ್ಯೋಗದಲ್ಲಿ ಸಂಪೂರ್ಣ ಆದ್ಯತೆಯಂತಹ ಕನ್ನಡದ ಅಭಿವೃದ್ಧಿಯ ಆದ್ಯತೆಗಳು ಹಿಂದೆ ಸರಿಯುತ್ತಿವೆ' ಎಂದು ಎಚ್ಚರಿಸಿದರು.

ಮೂಲಭೂತವಾದಿ ಕನ್ನಡ ಅಸ್ಮಿತೆ ಮುಕ್ತ ಸಂಶೋಧನೆಗೂ ತಡೆ ಒಡ್ಡುತ್ತಿದೆ. ಇದರೊಂದಿಗೆ ತಮ್ಮ ಪೂರ್ವಗ್ರಹೀತಗಳನ್ನು ಸಾಧಿಸಲೆಂದೇ ಆಧಾರಗಳನ್ನು ಹುಡುಕಿ ಜೋಡಿಸುವ ಕನ್ನಡಾಭಿಮಾನಿ ಅಧ್ಯಯನಗಳ ಕೆಟ್ಟ ಪರಂಪರೆಯೂ ಆರಂಭವಾಗಿದೆ. 'ಶಂಗಂ ತಮಿಳಗಂ' ಕೃತಿ ತನ್ನ ವಿಶ್ಲೇಷಣೆಯಲ್ಲಿ ಕಂಡುಕೊಂಡ ನಿಜವನ್ನು ದಿಟ್ಟತನದಲ್ಲಿ ಮಂಡಿಸಿದಂತೆ ಕನ್ನಡದಲ್ಲಿ ಮಂಡಿಸುವುದು ಕಷ್ಟಕರವಾಗುತ್ತಿದೆ. ಏಕೆಂದರೆ 'ಶಂಗಂ ತಮಿಳಗಂ' ನಲ್ಲಿರುವ ಅನೇಕ ನಿರ್ಣಯಗಳನ್ನು ಮಂಡಿಸುವ ಕ್ರಮ ಮುಕ್ತವೂ, ಡೆಮಾಕ್ರಟಿಕ್ ಆಗಿದ್ದು ಇದಕ್ಕೆ ತದ್ವಿರುದ್ಧವೆನಿಸುವ, ಕನ್ನಡತನವನ್ನು ಒಂದು ಧಾರ್ಮಿಕ ನಿಷ್ಠೆಯನ್ನಾಗಿ ಅವಾಹಿಸಿಕೊಂಡು ಅದರ ಮೇಲೆ ಹುಂಬ ಅಭಿಮಾನ ಬೆಳೆಸುವ ಸಂಶೋಧಕರಿಗೂ, ಅವರ ಅನುಯಾಯಿಗಳಿಗೂ ಪ್ರಿಯವಾಗುವುದಿಲ್ಲ.

ಮೂಲಭೂತವಾದಿ ನೆಲೆಗೆ ವಿರುದ್ಧವಾಗಿ ಕನ್ನಡ ಭಾಷೆಯನ್ನು ಜಾತ್ಯತೀತ ಮತ್ತು ಧರ್ಮಾತೀತ ನೆಲೆಯಲ್ಲಿ ಕಟ್ಟಬಯಸುವ ಹಂಬಲ ಶತಮಾನದುದ್ದಕ್ಕೂ ಕ್ರಿಯಾಶೀಲವಾಗಿದೆ. ಅಂತಹ ಹಂಬಲವನ್ನು ಬಿ.ಎಂ.ಶ್ರೀ ಅವರ ಮಾತುಗಳಲ್ಲಿ ಕಾಣಬಹುದು : 'ನಮ್ಮ ಹಿರಿಯರು ಕೂಡಿಸಿಟ್ಟಿದ್ದ ನಿಕ್ಷೇಪ ಹಸ್ತಗತವಾಗಿ, ಸರ್ವರಿಗೂ ಸಮಾನವಾದ ಸಾಹಿತ್ಯವಾಗಿ, ಜೈನಕಾವ್ಯವೇ ಆಗಲಿ, ವೀರಶೈವ ಕಾವ್ಯವೇ ಆಗಲಿ, ಬ್ರಾಹ್ಮಣಕಾವ್ಯವೇ ಆಗಲಿ– ಆಗಲೇ ಸಿದ್ಧವಾಗಿರುವ ಕನ್ನಡದ ಬೈಬಲ್ ಜೊತೆಗೆ ಒಂದು ಕ್ರೈಸ್ತಕಾವ್ಯಮಾಲೆಯೂ ಮತ್ತು ಮಹಮ್ಮದೀಯರ ಕಾವ್ಯಮಾಲೆಯೂ ಶೀಘ್ರದಲ್ಲಿಯೇ ನಮ್ಮ ಇತರ ಸಾಹಿತ್ಯವಾಹಿನಿಗಳೊಡನೆ ತಾವೂ ಬಂದು ಕೂಡುವುದೆಂದು ನಾನು ಹಾರೈಸುತ್ತೇನೆ. ಯಾವ ಸಾಹಿತ್ಯದ ಶಾಖೆಯೇ ಆಗಲಿ ಎಲ್ಲವೂ ನಮ್ಮ ಕನ್ನಡವೆಂದೂ, ಆದುದರಿಂದ ನಮ್ಮದೆಂದೂ ಆದರಿಸುವ ಕಾಲ ಇದು. ಎಲ್ಲಾ ಸಂಸ್ಕೃತಿಗಳಲ್ಲಿಯೂ, ಎಲ್ಲಾ ಧರ್ಮಗಳಲ್ಲಿಯೂ, ಎಲ್ಲಾ ಕವಿತಾಮಾರ್ಗಗಳಲ್ಲಿಯೂ ವಿಮರ್ಶನಪೂರ್ವಕವಾದ ವಿಶ್ವಾಸವಿಟ್ಟು ಎಲ್ಲಾಕಡೆಗಳಿಂದಲೂ ಉತ್ತಮ ಪಕ್ಷವನ್ನು ಸ್ವೀಕಾರ ಮಾಡುವ ವಿಶಾಲಹೃದಯದ ಕಾಲ ಇದು.'

ಕನ್ನಡ ಚಳವಳಿ ಎನ್ನುವುದು ಕೇವಲ ಭಾಷಾಚಳವಳಿಯಲ್ಲ, ಮೂಲಭೂತವಾದದ ವಿರುದ್ಧ ದನಿ ಮಾಡುವ ಜನಸಂಸ್ಕೃತಿ ಚಳವಳಿ ಎಂದು ಕನ್ನಡ ಭಾಷಾ ಚಳುವಳಿ ಮೂಲಭೂತವಾದಿ ನೆಲೆಯತ್ತ ಹೊರಳಿದಾಗಲೆಲ್ಲಾ ಅದನ್ನು ಎಚ್ಚರಿಸುವ ಕೆಲಸವನ್ನು ಕನ್ನಡದ ಚಿಂತಕರು ಮಾಡುತ್ತಲೇ ಬಂದಿದ್ದಾರೆ. ಬಹಳಷ್ಟು ಜನ ವ್ಯತ್ಯಾಸ ವೈವಿಧ್ಯಗಳನ್ನು, ಭಿನ್ನ ಅಸ್ಮಿತೆಯವರನ್ನು ಸಹಿಸಲಾರರು. ಅವರನ್ನು ತಿರಸ್ಕರಿಸಿ, ದಾಳಿ ಮಾಡಿ ದಮನಿಸುವ ಅವಕಾಶಕ್ಕೆ ಕಾಯುತ್ತಿರುತ್ತಾರೆ. ರಾಷ್ಟ್ರೀಯ ಭಾವನೆಯಿಂದ, ಜನಾಂಗೀಯ ಭಾವನೆಯಿಂದ ಹುಟ್ಟಿದ ದ್ವೇಷದ ಪರಿಣಾಮ ಭಾಷೆಯ ಮೇಲೂ ಆಗುತ್ತದೆ. ಕನ್ನಡ ಚಿಂತನೆಯು ಮೂಲಭೂತವಾದಿ ನೆಲೆಯ ಈ ಅಪಾಯದ ವಿರುದ್ಧ ಮನುಷ್ಯ ಸಮಾನತೆಯಲ್ಲಿ ನಂಬಿಕೆ ಇರುವ ಪರಿಸರ ವೈವಿಧ್ಯದಲ್ಲಿ ಸಂತೋಷ ಕಾಣುವ, ಜೀವವೈವಿಧ್ಯದಂತೆಯೇ ನುಡಿ ವೈವಿಧ್ಯವನ್ನು ಉಳಿಸಿ ಬೆಳೆಸುವ ವಿವೇಕವನ್ನು ಉದ್ದಕ್ಕೂ ಮೂಡಿಸುತ್ತ ಬಂದಿದೆ.

೩.೨ ಆಲೂರು ವೆಂಕಟರಾಯರ ಚಿಂತನೆಗಳು

೩.೨.೧ ಪೀಠಿಕೆ

ಕರ್ನಾಟಕ ಏಕೀಕರಣ ಚಳುವಳಿಯ ಮುಂಚೂಣಿ ನಾಯಕರಾದ ಆಲೂರು ವೆಂಕಟರಾಯರು (೧೮೮೦–೧೯೬೪) ಧಾರವಾಡ ಮತ್ತು ಬಳ್ಳಾರಿಯನ್ನು ತಮ್ಮ ಕಾರ್ಯರಂಗವನ್ನಾಗಿ ಮಾಡಿಕೊಂಡಿದ್ದರು. ಏಕೀಕರಣ ಚಳುವಳಿಗೆ ತಮ್ಮನ್ನು ಪೂರ್ಣ ಅರ್ಪಿಸಿಕೊಳ್ಳುವ ಮುನ್ನ ಆಲೂರರು ಕಾಂಗ್ರೆಸ್ಸಿನ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರೀಯರಾಗಿದ್ದರು.

ವೃತ್ತಿಯಲ್ಲಿ ವಕೀಲರಾಗಿದ್ದ ಆಲೂರರು 'ಜಯಕರ್ನಾಟಕ' ಪತ್ರಿಕೆಯ ಸಂಪಾದಕ, ಪ್ರಕಾಶಕರಾಗಿ ಸೇವೆ ಸಲ್ಲಿಸುತ್ತ, ದೇಶಾಭಿಮಾನ, ಭಾಷಾಭಿಮಾನ ಮೂಡಿಸುವ ಪ್ರಯತ್ನ ಮಾಡಿದರು.

ಕರ್ನಾಟಕ ಏಕೀಕರಣ ಚಳವಳಿಯನ್ನು ಮುನ್ನಡೆಸಿದ ಆಲೂರು ವೆಂಕಟರಾಯರು ಅವರೇ ಸ್ವತಃ ದಾಖಲಿಸಿರುವಂತೆ ೧೨ ವರ್ಷಗಳ ಕಾಲ ಸ್ವಂತ ಖರ್ಚಿನಲ್ಲಿ ಕರ್ನಾಟಕದ ಇತಿಹಾಸ ಸಂಶೋಧಿಸಿದರು. ೧೯೧೦ ರಿಂದ ೧೯೧೬ ರವರೆಗೆ ಅವರು ಕರ್ನಾಟಕದಾದ್ಯಂತ ಪ್ರವಾಸ ಮಾಡಿ ಸಂಶೋಧನೆ ನಡೆಸಿದರು. ಅವರು ಪ್ರವಾಸ ಮಾಡಿದ ಸ್ಥಳಗಳಲ್ಲಿ ಮುಖ್ಯವಾದವು ಅಣ್ಣಿಗೇರಿ, ಲಕ್ಕುಂಡಿ, ಗುಡಿಗೇರಿ, ಲಕ್ಷ್ಮೇಶ್ವರ, ಹಳೇಬೀಡು, ಬೇಲೂರು (ಮುಂಬಯಿ ಹತ್ತಿರದ) ಕಾರ್ಲೆ, ಕಾನ್ಹೇರಿ, ಬಂಕಾಪುರ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಉತ್ತರದಲ್ಲಿ ವೇರೂಳ ಶ್ರವಣಬೆಳಗೊಳ, ಕಾರ್ಕಳ, ಚಿತ್ರದುರ್ಗ, ಮೂಡಬಿದಿರೆ. ಅವರ ಸಂಶೋಧನೆಯ ಫಲವಾಗಿ ತಿರುಪತಿಯಲ್ಲಿ ಕೃಷ್ಣದೇವರಾಯನ ಮೂರ್ತಿ, ಹಂಪಿಯಲ್ಲಿ ವಿದ್ಯಾರಣ್ಯ, ಹಕ್ಕ ಬುಕ್ಕರ ಚಿತ್ರಪಟಗಳು ದೊರೆತವು. ಇಷ್ಟು ಮಾತ್ರವಲ್ಲದೆ ಹಂಪನಾ ಅವರು ಅಭಿಪ್ರಾಯ ಪಡುವಂತೆ ತನ್ನ ಸ್ವಂತ ಗಳಿಕೆ ಮತ್ತು ಹಿರಿಯರ ಆಸ್ತಿಪಾಸ್ತಿಗಳನ್ನು ಸಾರ್ವಜನಿಕ ಜೀವನಕ್ಕಾಗಿ ಧಾರೆಯೆರೆದವರು ವೆಂಕಟರಾಯರು.

ಆಲೂರರ ಪ್ರಯತ್ನದ ಫಲವಾಗಿ ೧೯೨೦ರಲ್ಲಿ ಜರುಗಿದ ಅಖಿಲ ಕರ್ನಾಟಕ ರಾಷ್ಟ್ರೀಯ ಪರಿಷತ್ತಿನಲ್ಲಿ ೨೦೦೦ ಪ್ರತಿನಿಧಿಗಳು ಕೂಡಿ ಕರ್ನಾಟಕದ ಹಿತಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಚರ್ಚಿಸಿದರು. ಅಂದು ಚರ್ಚಿಸಲ್ಪಟ್ಟ ವಿಷಯಗಳ ವ್ಯಾಪ್ತಿ ತುಂಬ ದೊಡ್ಡದು. ರಾಜಕಾರಣ, ವಾಙ್ಮಯ, ವ್ಯಾಪಾರ, ವೃತ್ತಪತ್ರಿಕೆಗಳ ಬೆಳವಣಿಗೆ, ಕರ್ನಾಟಕದಲ್ಲಿನ ರೈಲ್ವೆಗಳ ತೊಂದರೆ, ಪೋಸ್ಟುಗಳ ತೊಂದರೆ, ಬಂದರು, ನೀರು ಕಾಲುವೆ, ಹೈಕೋರ್ಟ್, ವಿಶ್ವವಿದ್ಯಾಲಯ, ಮೋಟಾರಿನ ಅನಾನುಕೂಲತೆಗಳು, ರಸ್ತೆಗಳು, ಸೇತುವೆಗಳು, ಆಂಧ್ರ-ಮರಾಠ್ಠರ ಆಕ್ರಮಣ, ಕನ್ನಡ ಶಾಲೆ, ಕಾಲೇಜು, ಗಡಿನಾಡಿನ ಜಾಗೃತಿ, ಕರ್ನಾಟಕ ಸಂಗೀತ ಮತ್ತು ಕಲೆಗಳು, ನಾಟಕ, ಸಿನಿಮಾ, ವಾಚನಾಲಯ ಇತ್ಯಾದಿ ಅನೇಕ ವಿಷಯಗಳು ಅಂದು ಚರ್ಚಿಸಲ್ಪಟ್ಟವು.

'ಕರ್ನಾಟಕದ ಸರ್ವಾಂಗೀಣ ಉನ್ನತಿ' ಎಂಬೀ ಮೂರು ಶಬ್ದಗಳಲ್ಲಿ ನನ್ನ ಜಗತ್ತೆಲ್ಲವೂ ಅಡಕವಾಗಿದೆ[೨] ಎಂದು ಘೋಷಿಸಿಕೊಂಡಂತೆ ಆಲೂರರು ಕರ್ನಾಟಕ ಏಕೀಕರಣಕ್ಕಾಗಿ ಕೊನೆಯವರೆಗೂ ದುಡಿದರು. ವಾಚನಾಲಯಗಳು ಕರ್ನಾಟಕತ್ವದಲ್ಲಿ ರಾಜಕಾರಣ ಮತ್ತು ವಾಙ್ಮಯಗಳನ್ನು ಜೋಡಿಸುವ ಕೊಂಡಿಗಳು. ಅವು ಎಲ್ಲೆಡೆಗೂ ಸ್ಥಾಪಿತವಾದರೆ ಅಖಂಡ ಕರ್ನಾಟಕವು ನಿರ್ಮಾಣವಾಗುತ್ತವೆ ಎಂದು ಚಿಂತಿಸಿದ ಆಲೂರರು ಕರ್ನಾಟಕದಾದ್ಯಂತ ವಾಚನಾಲಯಗಳನ್ನು ಆರಂಭಿಸಲು ಕೊಪ್ಪಳದ ಶ್ರೀ ಜಯರಾಮಾಚಾರ್ಯರನ್ನು ನೇಮಿಸಿದರು.

ಕನ್ನಡವೆಂದರೆ ಕೇವಲ ಒಂದು ಭಾಷೆಯಲ್ಲ. ಆ ಭಾಷೆಯನ್ನಾಡುವ ಜನರ ಬದುಕೂ ಭಾಷೆಯಷ್ಟೇ ಮುಖ್ಯ ಎಂದು ಆಲೂರರು ಭಾವಿಸುತ್ತಾರೆ. 'ವಾಙ್ಮಯದಲ್ಲಿ ಕರ್ನಾಟಕತ್ವ –

ಕರ್ನಾಟಕತ್ವವೆಂದರೆ ಕನ್ನಡ ವಾಙ್ಮಯ ಮಾತ್ರವಲ್ಲ. ಕನ್ನಡ ನುಡಿಯೆಂದರೆ, ಕರ್ನಾಟಕ ಸರ್ವಸ್ವವೆಂದು ತಿಳಿಯುವ ಒಂದು ವರ್ಗವು ನಮ್ಮಲ್ಲಿದೆ. ಅದು ಅಷ್ಟು ಸರಿಯಲ್ಲ. "ಅತ್ಯತಿಷ್ಠತ್ ದಶಾಂಗುಲಂ" ಎಂಬಂತೆ ಕರ್ನಾಟಕತ್ವವು ವ್ಯಾಪಾರ, ಕಲೆ, ಭೂಸುಧಾರಣೆ, ಬಂದರ ಸುಧಾರಣೆ, ಆಯುರ್ವೇದ ಮುಂತಾದ ಅನೇಕ ವಿಚಾರಗಳನ್ನು ಒಳಗೊಂಡಿದೆ.' ಎನ್ನುವ ಸ್ಪಷ್ಟತೆ ಆಲೂರರಲ್ಲಿತ್ತು. ಕನ್ನಡವನ್ನು ಯಜಮಾನಭಾಷೆಯಾಗಿಯೂ ಇಲ್ಲಿರುವ ಉಪಭಾಷೆಗಳನ್ನು ಅಧೀನ ಭಾಷೆಯಂತೆ ನೋಡುವ ಮನೋಭಾವವನ್ನು ಆಲೂರರು ವಿರೋಧಿಸುತ್ತ 'ಕರ್ನಾಟಕದಲ್ಲಿ ಕನ್ನಡವಲ್ಲದೆ ತುಳು, ಕೊಂಕಣಿ, ಕೊಡಗು ಮುಂತಾದ ಉಪಭಾಷೆಗಳಿವೆ. ಈ ಜನರಿಗೆ ತಮ್ಮ ಮಾತೃಭಾಷೆಯ ಅಭಿಮಾನವನ್ನು ಬಿಡ ಹೇಳುವುದು ಸರಿಯಲ್ಲ' ಎನ್ನುತ್ತಾರೆ. ಇದರೊಂದಿಗೆ 'ಈಗಿನ ದಿವಸಗಳಲ್ಲಿ ಮಾತೃಭಾಷೆಗಿಂತ ದೇಶಭಾಷೆಗೆ ಒಂದು ಬಗೆಯ ಮಹತ್ವವಿದೆ. ಆದ್ದರಿಂದ ಎಲ್ಲರೂ ದೇಶಭಾಷೆಯನ್ನು ಕಲಿಯುವುದು ಅತ್ಯವಶ್ಯವು' ಎಂದು ಉಪಭಾಷೆಗಳನ್ನಾಡುವವರು ದೇಶಭಾಷೆಯ ಮಹತ್ವವನ್ನು ಅರಿತು ಅದನ್ನು ಕಲಿಯಬೇಕೆಂದು ಸೂಚಿಸುತ್ತಾರೆ. ಹೀಗಿದ್ದರೂ ಆಲೂರರಲ್ಲಿ ಕರ್ನಾಟಕತ್ವದ ನಿರ್ಮಿತಿಯಲ್ಲಿ ಭಾಷೆ ಒಂದು ಅಂತಸ್ಥ ಘಟಕ ಮಾತ್ರವಾಗಿರುತ್ತದೆ. ಅವರಿಗೆ ಕರ್ನಾಟಕತ್ವದ ಚರ್ಚೆಗೆ ಭಾಷೆ ಅಷ್ಟಾಗಿ ಮುಖ್ಯವಾಗುವುದಿಲ್ಲ. ಕರ್ನಾಟಕ ಸಾಹಿತ್ಯ ಪರಿಷತ್ತನ್ನು 'ಕನ್ನಡ ಸಾಹಿತ್ಯ ಪರಿಷತ್ತು' ಎಂದು ಬದಲಿಸಲು ಒಪ್ಪದೆ ಬಿ.ಎಂ.ಶ್ರೀ ಜತೆ ಭಿನ್ನಮತ ಹೊಂದಿ ಸಾಹಿತ್ಯ ಪರಿಷತ್ತಿಗೆ ಆಲೂರರು ರಾಜೀನಾಮೆ ನೀಡಿದ ಪ್ರಸಂಗ ಅವರ ಹೆಚ್ಚಿನ ಒತ್ತು ಭೌಗೋಳಿಕತೆಗೆ (ಕರ್ನಾಟಕ) ಇರುವುದನ್ನು ಹೇಳುತ್ತದೆ. ಇದರ ಹಿಂದಿರುವ ಚಿಂತನೆಯೆಂದರೆ ರಂಗನಾಥ ಕಂಟನಕುಂಟೆ ಅವರು ಅಭಿಪ್ರಾಯ ಪಡುವಂತೆ ಭೌಗೋಳಿಕವಾಗಿ ಕರ್ನಾಟಕ ಒಂದಾದರೆ ಅಲ್ಲಿನ ಸಮಸ್ಯೆಗಳು ಬಗೆಹರಿಯಬಹುದು ಎಂಬ ಅವರ ನಂಬಿಕೆ ಇದ್ದಿರಬಹುದು.

ಏಕೀಕರಣದ ಸಂದರ್ಭದಲ್ಲಿ ಹೈದರಾಬಾದ್ ಕರ್ನಾಟಕ ಮತ್ತು ಮೈಸೂರು ಕರ್ನಾಟಕ ಎಂಬ ಎರಡು ಗುಂಪುಗಳ ನಡುವೆ ಸದಾ ಸಂಘರ್ಷ ನಡೆಯುತ್ತಲೇ ಇತ್ತು. ಇದಕ್ಕೆ ರಾಜಕಾರಣ, ಜಾತಿಯಂತಹ ಭಾಷಿಕೇತರ ಕಾರಣಗಳು ಮುಖ್ಯವಾಗಿದ್ದವು. ಈ ಚಳುವಳಿಯ ಸಂದರ್ಭದಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತು ಧಾರವಾಡದಲ್ಲಿರಬೇಕೋ ಅಥವಾ ಮೈಸೂರಿನಲ್ಲಿರಬೇಕೋ ಎಂಬ ಚರ್ಚೆ ಏರ್ಪಟ್ಟಿತು. ಆಗ ಆಲೂರರು ತಮ್ಮ ಧಾರವಾಡ ಪ್ರಾಂತ್ಯದಲ್ಲಿಯೇ ಪರಿಷತ್ತು ಇರಬೇಕು ಎಂದು ಹಠ ಹಿಡಿಯದೆ ಅದು ಬೆಂಗಳೂರಿನಲ್ಲಿ ಸ್ಥಾಪಿತವಾಗಲು ಕಾರಣರಾದರು. ಆಲೂರರು ಧಾರವಾಡದಲ್ಲಿನ ಮರಾಠ ಲೈಬ್ರರಿಯನ್ನು ಸ್ವಲ್ಪ ಕಾಲ ಸ್ವತಃ ನಡೆಸಿ ನಂತರ ಅದನ್ನು ಮರಾಠಿಗರಿಗೆ ಬಿಟ್ಟು ಕೊಟ್ಟರು. ಆಲೂರರು ಕೊನೆಯವರೆಗೂ ತಮ್ಮ ಲೈಬ್ರರಿಯಲ್ಲಿ ನೂರಾರು ಮರಾಠಿ ಪುಸ್ತಕಗಳನ್ನು ಇಟ್ಟುಕೊಂಡಿದ್ದರು. 'ಮಾತೃಭಾಷೆಯ ಅಭಿಮಾನವನ್ನು ಬಿಡ ಹೇಳುವುದು ಸರಿಯಲ್ಲ' ಎಂದು ಉಪಭಾಷೆಗಳಿಗೆ ಹೇಳುವಾಗ ಆ ಪಟ್ಟಿಯಲ್ಲಿ ಉರ್ದು ಬಾರದಿರುವುದು ಒಂದು

ಕೊರತೆಯೆನಿಸಿದರೂ ಉಳಿದಂತೆ ಮೇಲ್ಕಂಡ ಎಲ್ಲವೂ ಆಲೂರರ ಉದಾರವಾದಿ ಹಾಗೂ ಮುಕ್ತ ಧೋರಣೆಗೆ ನಿದರ್ಶನಗಳಾಗಿವೆ. ಇವೆಲ್ಲವು ಆಲೂರರ ಕನ್ನಡ ಅಸ್ಮಿತೆ ಕುರಿತ ಚಿಂತನೆ ಮೂಲಭೂತವಾದಿ ನೆಲೆಯದ್ದೇ ಎಂಬುದನ್ನು ಮರುಪರೀಶೀಲಿಸುವಂತೆ ಒತ್ತಾಯಿಸುತ್ತವೆ.

೩.೨.೨ ಕರ್ನಾಟಕತ್ವದ ಮೇಲೆ ಸನಾತನ ಧರ್ಮದ ಪ್ರಭಾವ

ಆಲೂರರ 'ಕರ್ನಾಟಕತ್ವದ ವಿಕಾಸ' ಕೃತಿಗೆ ಮುನ್ನುಡಿ ಬರೆಯುತ್ತ ಹಂಪನಾ ಅವರು 'ಹಿಂದೂ ಸನಾತನ ಧರ್ಮ, ವರ್ಣಾಶ್ರಮ ಪದ್ಧತಿ, ಶ್ರೀಮನ್ಮಧ್ವಾಚಾರ್ಯರ ದ್ವೈತ ಸಭಾ ಇವುಗಳಲ್ಲಿ ಅವರಿಗಿದ್ದ ನಂಬಿಕೆಗನುಗುಣವಾಗಿಯೇ ಅವರು ಕೊನೆಯವರೆಗೂ ಬಾಳಿದರಾದರೂ ಇವನ್ನೆಲ್ಲ ತನ್ನ ಮನೆಯಮಟ್ಟಿಗಷ್ಟೇ ಇಟ್ಟುಕೊಂಡು ಸಾರ್ವಜನಿಕ ಜೀವನದಲ್ಲಿ ಎಂದೂ ತರಲಿಲ್ಲ' ಎಂದು ಅಭಿಪ್ರಾಯ ಪಡುತ್ತಾರೆ. ಹಂಪನಾ ಅವರ ಮಾತಿನಲ್ಲಿ ಎರಡು ದನಿಗಳು ಕೇಳುತ್ತಿವೆ. ಒಂದು, ವ್ಯಕ್ತಿಯ ವೈಯಕ್ತಿಕ ನಂಬಿಕೆಗಳು ಸಾರ್ವಜನಿಕ ಬದುಕನ್ನು ಹಾಳುಗೆಡವಬಹುದು ಎನ್ನುವ ತಿಳುವಳಿಕೆಯಿಂದ ಮೂಡಿದ ವೈಯಕ್ತಿಕ ನಂಬಿಕೆಗಳನ್ನು ಮನೆಗೆ ಸೀಮಿತವಾಗಿಟ್ಟುಕೊಳ್ಳುವುದು ಮತ್ತು ನಮ್ಮ ವೈಯಕ್ತಿಕ ನಂಬಿಕೆಗಳು ಸಾರ್ವಜನಿಕ ಬದುಕಿನ ನಮ್ಮ ನಡವಳಿಕೆಗಳಲ್ಲಿ ಮಧ್ಯಪ್ರವೇಶಿಸದಂತೆ ನೋಡಿಕೊಳ್ಳುವುದು ಒಂದು ಆದರ್ಶ ಎನ್ನುವ ರೀತಿಯಲ್ಲಿ ಸಮಾಜದಲ್ಲಿ ಚಾಲ್ತಿಯಲ್ಲಿರುವ ನಂಬಿಕೆ. ಎರಡನೆಯದು ಸಮಾಜದಲ್ಲಿ ಚಾಲ್ತಿಯಲ್ಲಿರುವ ಈ ನಂಬಿಕೆಗೆ ಚ್ಯುತಿ ಬಾರದಂತೆ ಆಲೂರು ಬದುಕಿದರು ಎನ್ನುವುದು. ಇದು ಚರ್ಚೆಯನ್ನು ಆಹ್ವಾನಿಸುವ ಸಂಗತಿಗಳಾಗಿವೆ.

ವ್ಯಕ್ತಿಯ ವೈಯಕ್ತಿಕ ಪ್ರಾಮಾಣಿಕವಾದ ನಂಬಿಕೆಗಳು ಆ ವ್ಯಕ್ತಿಯ ಸಾರ್ವಜನಿಕ ಬದುಕನ್ನು ಒಂದಲ್ಲಾ ಒಂದು ಬಗೆಯಲ್ಲಿ ಪ್ರಭಾವಿಸುತ್ತಲೇ ಇರುತ್ತವೆ. ತನ್ನ ವೈಯುಕ್ತಿಕ ನಂಬಿಕೆಗಳನ್ನು ಜನರೊಂದಿಗೆ ಒಡನಾಡುವ ಸಾರ್ವಜನಿಕ ಬದುಕಿನ ಸಂದರ್ಭದಲ್ಲಿ ಪರಿಷ್ಕರಿಸಿಕೊಳ್ಳಲು ಆ ವ್ಯಕ್ತಿಗೆ ಸಾಧ್ಯವಿದೆ. ಸ್ವತಃ ತನಗೇ ವಿಶ್ವಾಸವಿಲ್ಲದ, ತಾನು ನಂಬದ ನಂಬಿಕೆಗಳನ್ನು ರಾಜಕಾರಣವೂ ಸೇರಿದಂತೆ ತನ್ನ ಸಾರ್ವಜನಿಕ ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಪ್ರತಿಪಾದಿಸುವುದು ಮೊದಲಿನದರಗಿಂತ ಹೆಚ್ಚು ಅಪಾಯಕಾರಿಯಾಗಿದೆ. ಉದಾಹರಣೆಗೆ ಈ ಆಷಾಡಭೂತಿತನವನ್ನು ವೈಯಕ್ತಿಕವಾಗಿ ದೇವರ ಅಸ್ತಿತ್ವ ನಂಬದವನು ಸಾರ್ವಜನಿಕವಾಗಿ ಧಾರ್ಮಿಕನಂತೆ ಬಿಂಬಿಸಿಕೊಳ್ಳುವುದರಲ್ಲಿ ನೋಡಬಹುದು. ಆದರೆ ಆಲೂರರು ಖಂಡಿತ ಆಷಾಡಭೂತಿಗಳಾಗಿರಲಿಲ್ಲ. ನಿಸ್ಸಂಶಯವಾಗಿ ಆಲೂರರ ವೈಯಕ್ತಿಕ ನಂಬಿಕೆಗಳು ಅವರ ಸಾರ್ವಜನಿಕ ಬದುಕನ್ನು ಪ್ರಭಾವಿಸಿವೆ. ಇದಕ್ಕೆ ಆಲೂರರ 'ಕರ್ನಾಟಕತ್ವ'ದ ಸೂತ್ರಗಳೇ ಲಿಖಿತ ಸಾಕ್ಷಿ. ಆಲೂರರು ಮಂಡಿಸುವ ಕರ್ನಾಟಕತ್ವದ ಸೂತ್ರಗಳು ಯಾವುವೆಂದರೆ ವಿಶ್ವಬಂಧುತ್ವ, ಭಾರತೀಯ ಸಂಸ್ಕೃತಿ (ಸನಾತನ ಸಂಸ್ಕೃತಿ), ರಾಷ್ಟ್ರೀಯತ್ವ ಮತ್ತು ಕರ್ನಾಟಕತ್ವ

ಆಲೂರರ ಭಾರತೀಯ ಸಂಸ್ಕೃತಿ ಅಥವಾ ಸನಾತನ ಸಂಸ್ಕೃತಿಯಿಂದ ಹಿಂದುತ್ವ ರೂಪುಗೊಳ್ಳುತ್ತದೆ. ಹಿಂದುತ್ವದ ಒಂದು ಭಾಗವೇ ಕರ್ನಾಟಕತ್ವ, ಕರ್ನಾಟಕ ಏಕೀಕರಣ ಚಳುವಳಿ ಸಂದರ್ಭದಲ್ಲಿ ಆಲೂರರು ಮಾಡುವ ಚರ್ಚೆಗಳಲ್ಲಿ ಸದಾ ಎರಡು ಜನವರ್ಗಗಳು ಮಾತ್ರ ಬರುತ್ತವೆ ಅವುಗಳೆಂದರೆ ಹಿಂದೂಗಳು ಮತ್ತು ಮುಸ್ಲಿಮರು. ಮತ್ತೆ ಹಿಂದೂಗಳ ವಿಚಾರಕ್ಕೆ ಬಂದರೆ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು. ಕರ್ನಾಟಕತ್ವ ಕೃತಿಯಲ್ಲಿ ಬರುವ ಕೆಲವು ಮಾತುಗಳನ್ನು ಇದಕ್ಕೆ ನಿದರ್ಶನವಾಗಿ ನೋಡಬಹುದು. 'ಆಗಿನ ಕಾಲದಲ್ಲಿ ಶ್ರೀ ಹಳಕಟ್ಟಿ, ಶ್ರೀ ಜಂಗಿನ ಮುರಿಗೆಯ್ಯನವರೇ ಮುಂತಾದ ಬ್ರಾಹ್ಮಣೇತರಷ್ಟೇ ನಮಗೆ ಅನುಕೂಲ. ಸಾಮಾನ್ಯತಃ ಇಲ್ಲಿಯ ಬ್ರಾಹ್ಮಣೇತರರು ನಮಗೆ ಅನುಕೂಲರಾಗಿದ್ದಿಲ್ಲ. ಏಕೆಂದರೆ, ಆಗ ಸರ್ಕಾರದವರ ಮರ್ಜಿ ಹಿಡಿಯುವುದರಲ್ಲಿಯೇ ಅವರಿಗೆ ಲಾಭವಿತ್ತು', 'ರಾಷ್ಟ್ರೀಯ ಪರಿಷತ್ತಿನಲ್ಲಿ ಕೆಲ ಬ್ರಾಹ್ಮಣೇತರರು ಕರ್ನಾಟಕ ಏಕೀಕರಣದ ಗೊತ್ತುವಳಿಗೆ ವಿರುದ್ಧವಾಗಿ ಗೊತ್ತುವಳಿಯನ್ನು ತಂದಿದ್ದರು', 'ಬ್ರಾಹ್ಮಣರಿಗೆ ವಸ್ತುಶಃ ಕರ್ನಾಟಕತ್ವದಿಂದ ವಿಶೇಷ ಲಾಭವಿದ್ದಿಲ್ಲ, ಲಾಭವಿಲ್ಲ ಮತ್ತು ಮುಂಚೆ ನನಗೆ ಕೆಲವರು ಆ ಪ್ರಶ್ನೆಯನ್ನು ಕೇಳಿಯೂ ಇದ್ದರು'[೩]

ಕನ್ನಡ ಮತ್ತು ಸಂಸ್ಕೃತದ ನಡುವಿನ ಸಂಬಂಧ ಕುರಿತಂತೆ ಆಲೂರರ ಚಿಂತನೆಗಳೇನು ಎಂದು ಪರಿಶೀಲಿಸಿದರೆ ಅದು ಅವರ ಸನಾತನ ಧರ್ಮ ಮತ್ತು ಹಿಂದುತ್ವದೆಡೆಗಿನ ನಿಷ್ಠೆಗೆ ಅನುಸಾರವಾಗಿಯೇ ಇವೆ. ಸನಾತನ ಧರ್ಮ ಮತ್ತು ಹಿಂದುತ್ವಗಳು ಯಾವಾಗಲೂ ಸಂಸ್ಕೃತ ಮತ್ತು ಪ್ರಭುತ್ವದ ಪರವಾಗಿರುವ ನಿಲುವನ್ನು ಹೊಂದಿರುವಂತವು. ಮೈಸೂರು ಮಹಾರಾಜರಿಗೆ ಆಲೂರರು ಬರೆದ ಪತ್ರದಲ್ಲಿ ಕನ್ನಡದ ಅಸ್ಮಿತೆಯಾಗಿರುವ ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕ ವಿದ್ಯಾರಣ್ಯರು ಸಂಸ್ಕೃತ ಧಾರ್ಮಿಕ ಗ್ರಂಥಗಳಿಗೆ ಪ್ರೋತ್ಸಾಹ ಕೊಟ್ಟದ್ದನ್ನು ನೆನೆಸಿಕೊಳ್ಳುತ್ತಾರೆ. 'ಈ ಪತ್ರದಲ್ಲಿ ನಾನು, ಅವರನ್ನು (ಮಹಾರಾಜರನ್ನು) ವಿದ್ಯಾರಣ್ಯರ ತರುವಾಯದಲ್ಲಿ ವಿದ್ಯಾರಣ್ಯರು ಸಂಸ್ಕೃತ ಧಾರ್ಮಿಕ ಗ್ರಂಥಗಳಿಗೆ ಪ್ರೋತ್ಸಾಹ ಕೊಟ್ಟಂತೆ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ ಕೊಟ್ಟಿರುವುದಕ್ಕಾಗಿ ಅವರನ್ನು ಅಭಿನಂದಿಸಿ, ಇಡೀ ಕರ್ನಾಟಕಕ್ಕೇನೆ ತಮ್ಮನ್ನು ಅರಸರನ್ನಾಗಿ ಮಾಡುವ (ಆಗ ಇನ್ನೂ ಸಂಸ್ಥಾನವನ್ನು ನಿಲ್ಲಿಸಿಬಿಡುವ ಕಲ್ಪನೆ ಹೊರಟಿದ್ದಿಲ್ಲ) ನಮ್ಮ ಕಲ್ಪನೆಗೆ ತಾವು ಒಪ್ಪಬೇಕೆಂದು ಬೇಡಿಕೊಂಡಿದ್ದೆ'[೪] ಎಂದು ಹೇಳಿಕೊಂಡಿದ್ದಾರೆ. ರಾಜನ ಭೂಮಿಯ 'ಆಳ್ವಿಕೆ'ಯನ್ನು ಸಮರ್ಥಿಸುವ ವರ್ಗವೇ ನೆಲವನ್ನು ಪವಿತ್ರವೆಂದು ಹೇಳಿ ಪ್ರಜೆಗಳಿಗೆ ಬದ್ಧತೆಯನ್ನು ಭಾವನಾತ್ಮಕವಾಗಿ ಒತ್ತಾಯಿಸುವ 'ರಾಜಕೀಯ'ವೊಂದು ಚರಿತ್ರೆಯುದ್ದಕ್ಕೂ ಕೆಲಸ ಮಾಡಿಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿಯೂ ಆಲೂರರ ಪತ್ರವನ್ನು ಅವಲೋಕಿಸಬೇಕಾಗಿದೆ.

'ಕರ್ನಾಟಕತ್ವವು ಅತ್ಯಂತ ಪರಿಶುದ್ಧವಾದ ಭಾವನೆ. ಅತ್ಯಂತ ವಿಶಾಲವಾದ ಭಾವನೆ. ಅದು ಕರ್ನಾಟಕದ ಹಿತಗಳೆಲ್ಲವನ್ನೂ ತನ್ನಲ್ಲಿ ಅಡಗಿಸಿಕೊಂಡಿದೆ. ಕರ್ನಾಟಕತ್ವದಲ್ಲಿ ಧರ್ಮದ್ವೇಷಕ್ಕೆ ಇರವಿಲ್ಲವು. ಅವುಗಳಿಗೆ ಹೃದಯದಲ್ಲಿ ಯತ್ ಕಿಂಚಿತ್ತಾದರೂ ಸ್ಥಾನ ಕೊಡುವವನು

ಕರ್ನಾಟಕದ್ರೋಹಿಯೂ'[೫] ಎಂದೇನೋ ಆಲೂರರು ದಾರ್ಶನಿಕನಂತೆ ಮಾತಾಡುತ್ತಾರೆ. ಆದರೆ, ಆಲೂರರ ಕೃತಿ 'ಕರ್ನಾಟಕತ್ವದ ವಿಕಾಸ' ದ ಕೊನೆಯಲ್ಲಿ ಬರುವ ಈ ಮಾತುಗಳು ವಿಶ್ವಾಸಾರ್ಹತೆಯ ಕೊರತೆಯಿಂದ ಬಳಲುತ್ತವೆ. ಆಲೂರರ ಕರ್ನಾಟಕತ್ವವೆಂದರೆ ಭಾರತೀಯ ಸಂಸ್ಕೃತಿ. ಭಾರತೀಯ ಸಂಸ್ಕೃತಿ ಎಂದರೆ ಸನಾತನ ಧರ್ಮ. ಸನಾತನ ಧರ್ಮ ಎಂದರೆ ಹಿಂದುತ್ವ ಹಿಂದುತ್ವ ಎಂದರೆ ಬ್ರಾಹ್ಮಣತ್ವ ಸಾರಾಂಶದಲ್ಲಿ ಆಲೂರರ ಕರ್ನಾಟಕತ್ವವೆಂದರೆ ಬ್ರಾಹ್ಮಣತ್ವ

ಆಲೂರರ ವೈಯಕ್ತಿಕ ನಂಬಿಕೆಗಳು ಹುಟ್ಟಿಸಿದ ಚಿಂತನೆಗಳು ಅವರು ನಡೆಸಿದ ಕರ್ನಾಟಕ ಏಕೀಕರಣ ಚಳುವಳಿಯ ಮೇಲೆ ಒಳ್ಳೆಯ ಅಥವಾ ಕೆಟ್ಟ ಅಥವಾ ಎರಡೂ ಬಗೆಯ ಪರಿಣಾಮಗಳನ್ನು ಉಂಟು ಮಾಡಿರಬಹುದು. ಆದರೆ ಮರೆಯಲಾಗದ ಸಂಗತಿ ಎಂದರೆ ಪ್ರಭಾವವನ್ನಂತೂ ಬೀರಿವೆ ಎನ್ನುವುದು.

೩.೨.೩ ಜೀವಪರ ಮೌಲ್ಯದ ಜಾಗದಲ್ಲಿ ಮತೀಯತೆಯ ವಿಕಾಸ

೧೯೩೬ರಲ್ಲಿ ಹಂಪೆ ಮತ್ತು ವಿಜಯನಗರಗಳಲ್ಲಿ ನಡೆದ 'ವಿಜಯನಗರ ಸ್ಮಾರಕೋತ್ಸವದ ಕಾಲಕ್ಕೆ ಕರ್ನಾಟಕದ ಸಂಸ್ಕೃತಿಯನ್ನು ಪೋಷಿಸುವ ಸಕಲ ತರಹದ ಚಟುವಟಿಕೆಗಳು ಇಲ್ಲಿ ನಡೆದವು. ಐತಿಹಾಸಿಕ ಸಮ್ಮೇಳನ, ಐತಿಹಾಸಿಕ ಪ್ರದರ್ಶನ, ಸಾಹಿತ್ಯೋತ್ಸವ, ಸಂಪದಭಿವೃದ್ಧಿ ಸಭೆ, ಆಯುರ್ವೇದಕ್ಕೆ ಸಂಬಂಧಿಸಿದ ೩ ಸಮ್ಮೇಳನಗಳು, ವ್ಯಾಯಾಮ ಸಮ್ಮೇಳನ, ಶಕ್ತಿ ಪ್ರದರ್ಶನ, ಸಂಗೀತ ಕಛೇರಿ, ನಾಟಕಗಳು, ರಕ್ಕಸತಂಗಡಿಯ ಕಾಳಗದ ಭಸ್ಮದ ಮೆರವಣಿಗೆ' ಎಂದು ವಿವರವಾಗಿ ಆಲೂರರು ತಮ್ಮ 'ಕರ್ನಾಟಕತ್ವದ ವಿಕಾಸ' ಕೃತಿಯಲ್ಲಿ ದಾಖಲಿಸಿದ್ದಾರೆ.

ಕವಿರಾಜಮಾರ್ಗಕಾರ ಹೇಳುವ ಕನ್ನಡಿಗರ ಜೀವಪರ ಮೌಲ್ಯಗಳು, ಪಂಪನ 'ಮನುಷ್ಯಕುಲಂ ತಾನೊಂದೆ ವಲಂ' ಎನ್ನುವ ದಾರ್ಶನಿಕತೆ, ವಚನಕಾರರ ಸಮಾಜವಾದಿ ಆದರ್ಶಗಳಿಗೆ ಬದಲಾಗಿ ಯುದ್ಧದ ಕರಾಳ ನೆನಪುಗಳನ್ನು ಮರುಕಳಿಸುವ ಭಸ್ಮದ ಮೆರವಣಿಗೆ, ಅದಕ್ಕೆ ಸೇಡು ತೀರಿಸಿಕೊಳ್ಳುವೆವು ಎನ್ನುವ ಸಂದೇಶ ಸಾರುವ ಶಕ್ತಿ ಪ್ರದರ್ಶನ ಕನ್ನಡ ಅಸ್ಮಿತೆಗೆ ಲಗತ್ತಿಸುವ ಗುಣಗಳ ಸ್ವರೂಪವೇನು ಎಂಬುದು ಚರ್ಚಿಸಬೇಕಾದ ಸಂಗತಿಯಾಗಿದೆ. ಕರ್ನಾಟಕ ಮತ್ತು ಕನ್ನಡಿಗರ ದೃಷ್ಟಿಯಲ್ಲಿ ನೋಡುವುದಾದರೆ ಭಸ್ಮದ ಮೆರವಣಿಗೆ ಮಾಡುವುದಾದಲ್ಲಿ ಅದು ಮೈಸೂರಿನ ದೊರೆ ಟಿಪ್ಪು ಸುಲ್ತಾನರು ಬ್ರಿಟೀಷರ ವಿರುದ್ಧ ಹೋರಾಡಿ ರಣರಂಗದಲ್ಲೇ ಮಡಿದ ಶ್ರೀರಂಗಪಟ್ಟಣ ಯುದ್ಧದ ಭಸ್ಮದ ಮೆರವಣಿಗೆಯಾಗಬೇಕಿತ್ತು ಅಥವಾ ಬ್ರಿಟೀಷರ ವಿರುದ್ಧದ ಹೋರಾಟದಲ್ಲಿ ಮಡಿದ ಸಂಗೊಳ್ಳಿ ರಾಯಣ್ಣನಂತವರ ಹೋರಾಟಗಾರರನ್ನು ನೆನಪು ಮಾಡಿಕೊಳ್ಳುವಂತಹದ್ದಾಗಬೇಕಿತ್ತು. ಯಾಕೆಂದರೆ ವಿಜಯನಗರ ಸ್ಮಾರಕೋತ್ಸವ ನಡೆದ ಕಾಲಕ್ಕೆ (೧೯೩೬) ಡೆಕ್ಕನ್ ಸುಲ್ತಾನರು ಅಳಿದು ಕೆಲವು ಶತಮಾನಗಳೇ ಕಳೆದಿದ್ದವು. ಅವರಿಂದ

ಕನಸಿನಲ್ಲಿಯೂ ಕರ್ನಾಟಕಕ್ಕೆ ಭಯವಿರಲಿಲ್ಲ. ಎದುರಿಗಿರುವ ಪ್ರಬಲ ಶತ್ರುವಿನ ವಿರುದ್ಧ ಹೋರಾಟ ರೂಪಿಸಬೇಕಾದ ಸಂದರ್ಭದಲ್ಲಿ ಎಂದೊ ಅಧಿಕಾರಕ್ಕಾಗಿ ರಾಜಪ್ರಭುತ್ವವೊಂದು ನಡೆಸಿದ ಯುದ್ಧವನ್ನು ಕನ್ನಡಿಗರ ವಿರುದ್ಧದ ಯುದ್ಧವೆಂದು ನಿರ್ಣಯಿಸಿ ಆ ರಾಜಪ್ರಭುತ್ವ ಅಸ್ತಿತ್ವದಲ್ಲಿ ಇಲ್ಲದಿದ್ದರೂ ಯುದ್ಧದ ಭಸ್ಮದ ಮೆರವಣಿಗೆ ನಡೆಸುವುದು ವಿಚಿತ್ರವಾಗಿ ತೋರುತ್ತದೆ. ಆಗ ಕನ್ನಡಿಗರ ಎದುರಿಗಿದ್ದ ದೊಡ್ಡ ಶತ್ರುಗಳೆಂದರೆ ಬ್ರಿಟಿಷರು. ವ್ಯಂಗ್ಯವೆಂದರೆ ಬ್ರಿಟಿಷ್ ಅಧಿಕಾರಿಗಳಾದ ರಾಬರ್ಟ್ ಸಿವೆಲ್ಲರು ವರ್ಣಿಸಿದ 'ವಿಜಯನಗರದ ವೈಭವ', ಲಾರ್ಡ್ ಕರ್ಜನ್ನರು ಅಗೆದು ತೋರಿಸಿದ ಹಂಪಿಯಿಂದ ಆಲೂರರು ಪ್ರೇರಣೆ ಪಡೆಯುವುದು.

ಆಲೂರರ 'ವಿಜಯನಗರದ ವೈಭವ' ರೂಪ ಪಡೆಯುವ ರಾಬರ್ಟ್ ಸಿವೆಲ್ಲರ 'Forgotten Empire' (ಕನ್ನಡ ಅನುವಾದ : ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ 'ಮರೆತು ಹೋಗಿರುವ ಸಾಮ್ರಾಜ್ಯ : ವಿಜಯನಗರ') ಕೃತಿಯ ಬಗ್ಗೆಯೂ ನೋಡಬೇಕಿದೆ. ಈ ಬಗ್ಗೆ ಇತಿಹಾಸಕಾರ ಎಸ್ ಚಂದ್ರಶೇಖರ್ ಅವರು ತಮ್ಮ 'ವಸಾಹತುಕಾಲೀನ ಕರ್ನಾಟಕ' ಕೃತಿಯಲ್ಲಿ ವಿವರವಾಗಿ ಚರ್ಚಿಸುತ್ತಾರೆ. ಅವರು ಕಂಡುಕೊಂಡಂತೆ ಸಿವೆಲ್ಲರು ವಿಜಯನಗರದ ಅರಸರ ಮತ್ತು ಶಾಹಿ ಅರಸರ ಆಳ್ವಿಕೆಗೊಳಪಟ್ಟಿದ್ದ ರಾಜ್ಯಗಳನ್ನು ಹಿಂದೂ ಮತ್ತು ಮುಸ್ಲಿಂ ಸಾಮ್ರಾಜ್ಯಗಳೆಂದು ಬಣ್ಣಿಸುವುದರ ಜೊತೆಗೆ ಆ ರಾಜ್ಯಗಳ ಪ್ರಜೆಗಳನ್ನು ಸಾರಾಸಗಟಾಗಿ ಹಿಂದೂ ಮತ್ತು ಮುಸ್ಲಿಂ ಎಂದು ಸರಳೀಕರಿಸಿ ವಸಾಹತುಶಾಹಿಯ ಒಡೆದು ಆಳುವ ನೀತಿಗೆ ಬೆಂಬಲವಾಗುವ ಧೋರಣೆಯನ್ನು ಅನುಸರಿಸುತ್ತಾರೆ. ಈ ಧೋರಣೆ ಮತ್ತೆ ಮತ್ತೆ ಕೃತಿಯಲ್ಲಿ ಪ್ರಕಟವಾಗಿ ಹಿಂದೂ-ಮುಸ್ಲಿಂ ಒಡಕು ಶಾಶ್ವತವೇನೋ ಎನ್ನುವ ಅನುಮಾನಕ್ಕೆ ಆಸ್ಪದ ಮಾಡಿಕೊಡುತ್ತದೆ. ಆದರೆ ಸಿವೆಲ್ಲರು ಕೊಡುವ ವಿವರಗಳು ಅವರ ಈ ಮತೀಯ ವಿಶ್ಲೇಷಣೆಯನ್ನು ಪುಷ್ಟೀಕರಿಸುವುದಿಲ್ಲ. ಯಾಕೆಂದರೆ ಈ ಮತೀಯ ದ್ವೇಷ ಭಾರತೀಯ ಇತಿಹಾಸದಲ್ಲಿ ಕಾಣಿಸಿಕೊಂಡಿದ್ದು ವಸಾಹತುಶಾಹಿ ಯುಗದಿಂದ. ಸಿವೆಲ್ಲರು ಉದ್ಧರಿಸುವ ಯಾವುದೇ ದಾಖಲೆಯಲ್ಲೂ ಮತೀಯತೆಯನ್ನು ಬೆಂಬಲಿಸುವ ಉದಾಹರಣೆಗಳು ಇಲ್ಲ. ವಿಜಯನಗರದ ವಿವಿಧ ಅರಸು ಮನೆತನಗಳಲ್ಲಿ, ರಾಜ್ಯಕ್ಕಾಗಿ ನಡೆದ ಕುಟಿಲೋಪಾಯ, ಷಡ್ಯಂತ್ರ, ಕೊಲೆ ಮುಂತಾದವುಗಳ ಬಗ್ಗೆ ಹೇಗೆ ವಿವರಗಳಿವೆಯೋ, ಹಾಗೆಯೇ ಶಾಹಿ ಮನೆತನಗಳ ಬಗ್ಗೆಯೂ ವಿವರಗಳಿವೆ. ವಿಜಯನಗರದ ಅರಸರು ಹೇಗೆ ತಮ್ಮ ನೆರೆಯ ಅರಸರ ಮೇಲೆ ಹಿಂದೂ-ಮುಸ್ಲಿಮರೆನ್ನದೆ, ರಾಜ್ಯದಾಹದಿಂದ ಕದನಕ್ಕೆ ಇಳಿಯುತ್ತಿದ್ದರೋ ಹಾಗೆಯೇ ಶಾಹಿ ದೊರೆಗಳೂ ಮುಸ್ಲಿಂ ದೊರೆಗಳ ವಿರುದ್ಧ ಕದನಕ್ಕೆ ಇಳಿಯುತ್ತಿದ್ದ ಬಗ್ಗೆ ಸಿವೆಲ್ಲರು ಹೇರಳ ವಿವರಗಳನ್ನು ಕೊಡುತ್ತಾರೆ. ಹಾಗೆಯೇ ಪೂಜೆ ಸಲ್ಲಿಸುತ್ತಿದ್ದ ಸ್ಥಳಗಳ ಮೇಲಿನ ಆಕ್ರಮಣಗಳ ಬಗ್ಗೆಯೂ ವಿವರಗಳಿವೆ. ಈ ಆಕ್ರಮಣಗಳೆಲ್ಲಾ ಆ ಪೂಜಾಸ್ಥಳಗಳಲ್ಲಿ ಇದ್ದಿರಬಹುದಾದ ನಿಧಿಗಾಗಿ

ನಡೆದವೆಂದು ಆಕರಗಳನ್ನು ಉದ್ಧರಿಸುವ ಸಿವೆಲ್ಲರು, ಅದನ್ನು ಮತೀಯ ಕಾರಣಕ್ಕಾಗಿ ಮಾಡಲಾಯಿತೆಂದು ವಿಶ್ಲೇಷಿಸುವಾಗ ಎಲ್ಲಿಯೂ ಆಕರಗಳನ್ನು ಉದ್ಧರಿಸದಿರುವುದು ಗಮನಾರ್ಹ.[೬]

ಹಿಂದೂ–ಮುಸ್ಲೀಮರನ್ನು ಒಡೆದು ತಮ್ಮ ಆಳ್ವಿಕೆಯನ್ನು ಸುಗಮಗೊಳಿಸಿಕೊಳ್ಳುವ ಬ್ರಿಟೀಷರ ಹುನ್ನಾರ ಅವರ ರಾಜಕಾರಣದಂತೆ ಅವರು ಇತಿಹಾಸವನ್ನು ರಚಿಸುವುದರಲ್ಲಿಯೂ ಇದೆ. ರಾಬರ್ಟ್ ಸಿವೆಲ್ಲರ 'Forgotten Empire'ಕೃತಿಯೇ ಇದಕ್ಕೆ ನಿದರ್ಶನ. ಇಂತಹ ಕೃತಿಗಳಿಂದ ಪ್ರೇರಣೆಯನ್ನು ಪಡೆಯುವುದರ ಹಿಂದೆ ಕನ್ನಡ ಅಸ್ಮಿತೆಯನ್ನು ಮತೀಕರಣಗೊಳಿಸುವ ಉದ್ದೇಶವಲ್ಲದೆ ಬೇರೇನೂ ಇರಲು ಸಾಧ್ಯವಿಲ್ಲ. ರಕ್ಕಸತಂಗಡಿ ಯುದ್ಧ ನಡೆದಿದ್ದು ವಿಜಯನಗರ ಮತ್ತು ಡೆಕ್ಕನ್ ಸುಲ್ತಾನರ ನಡುವೆ. ವಿಜಯನಗರದ ರಾಜರನ್ನು ಹಿಂದೂ ದೊರೆಗಳೆಂದೂ, ಸುಲ್ತಾನರನ್ನು ಮುಸಲ್ಮಾನ ದೊರೆಗಳೆಂದೂ, ಇದು ಹಿಂದೂಗಳಿಗೂ ಮುಸಲ್ಮಾನರಿಗೂ ನಡುವೆ ನಡೆದ ಯುದ್ಧವೆಂದೂ, ಸಾರಾಂಶದಲ್ಲಿ ಮುಸಲ್ಮಾನರನ್ನು ಹಿಂದೂಗಳ ಶತ್ರಗಳೆಂದೂ ಬಿಂಬಿಸುವುದು. ಇಲ್ಲಿ ಹಿಂದೂಗಳನ್ನು ಕನ್ನಡಿಗರು ಎಂದು ಸಮೀಕರಿಸುತ್ತಿರುವುದರಿಂದ ಮುಸಲ್ಮಾನರು ಕನ್ನಡಿಗರ ಶತ್ರುಗಳೆಂದು ಬಿಂಬಿಸುವ ಉದ್ದೇಶವಷ್ಟೇ ಕಾಣುತ್ತದೆ. ರಾಜೇಂದ್ರ ಚೆನ್ನಿಯವರು ಸರಿಯಾಗಿಯೇ ಗುರುತಿಸುವಂತೆ ಗತಕಾಲದ ಪೌರುಷಗಾಥೆಗಳು, ಅನ್ಯಭಾಷಾ ಸಮುದಾಯಗಳು ಮತ್ತು ಮುಸ್ಲಿಂ ದಾಳಿಕೋರರು ಮಾಡಿದ ಚಾರಿತ್ರಿಕ ವಂಚನೆ–ಪ್ರಮಾದಗಳು ಹಾಗು ಕನ್ನಡತಾಯಿಯ ಬಗೆಗಿನ ಕರುಣಾಜನಕ ತ್ಯಾಗ ಬಲಿದಾನದ ಕಥೆಗಳಿಂದ ತುಂಬಿ ಹೋಗಿದ್ದ ಈ ಸ್ವರ್ಣಯುಗದ ನೆನಪುಗಳ ಮೂಲಕ ಕನ್ನಡದ ಅಸ್ಮಿತೆಯನ್ನು ನಿರ್ಮಿಸಬೇಕೆಂಬುದು ಆಲೂರರ ಆಗ್ರಹವಾಗಿತ್ತು. ಇದಕ್ಕೆ ಅನುಸಾರವಾಗಿಯೇ ಬ್ರಿಟಿಶ್ ಅಧಿಕಾರಿಗಳು ನೀಡಿದ ಗತಕಾಲದ ಕರ್ನಾಟಕದ 'ಸ್ವರ್ಣಯುಗದ ನೆನಪು'ಗಳನ್ನು ಅವು ಅಸಲಿಯೋ ಅಲ್ಲವೋ ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳದೆ ಆಲೂರರು ತಮಗೆ ಬೇಕಾದದ್ದನ್ನು ಮಾತ್ರ ಎಚ್ಚರದಿಂದ ಆಯ್ದುಕೊಳ್ಳುತ್ತಾರೆ.

ಆಲೂರರ 'ಕರ್ನಾಟಕತ್ವದ ವಿಕಾಸ' ಕೃತಿಯಲ್ಲಿ ಬರುವ ಕೆಲವು ಪರಿಭಾಷೆಗಳನ್ನು ಗಮನಿಸಬೇಕು : 'ಹಿಂದೂ ಜನರ ವೈಭವ', 'ಹಿಂದುತ್ವ', 'ಮುಸಲ್ಮಾನರನ್ನು ಹಿಮ್ಮೆಟ್ಟಿಸಿದ', 'ಮುಸಲ್ಮಾನರ ಕಾಲದಿಂದ', 'ಬ್ರಾಹ್ಮಣ', 'ಬ್ರಾಹ್ಮಣತ್ವ', 'ಬ್ರಾಹ್ಮಣೇತರರು'. ಯಾಕೆ ಆಲೂರರು ಸಂಕುಚಿತ ಅರ್ಥ ಹೊಮ್ಮಿಸುವ ಈ ರೀತಿಯ ಪರಿಭಾಷೆಗಳನ್ನು ಬಳಸುತ್ತಾರೆ? ಪದಬಳಕೆಯಲ್ಲಿನ ಅಚಾತುರ್ಯವೇ? ಖಂಡಿತ ಆಲೂರರು ಪದಬಳಕೆಯಲ್ಲಿ ಖಚಿತವಿದ್ದಾರೆ. ಅವರು ಎಚ್ಚರದಿಂದ ಬಳಸುವ ಮೇಲ್ಕಂಡ ಪರಿಭಾಷೆಗಳೇ ಆಲೂರರ ಕನ್ನಡ ಅಸ್ಮಿತೆ ಕುರಿತ ಅವರ ಚಿಂತನೆಯ ನೆಲೆಯನ್ನು ಹೇಳುತ್ತಿವೆ. ಅದು ಮೂಲಭೂತವಾದಿ ನೆಲೆ. ಆಲೂರರೇನಾದರೂ ಹಿಂದೂ ಜನರ ವೈಭವದ ಜಾಗದಲ್ಲಿ 'ಕನ್ನಡಿಗರ ವೈಭವ', ಹಿಂದುತ್ವ ಮತ್ತು 'ಬ್ರಾಹ್ಮಣತ್ವ'ದ ಜಾಗದಲ್ಲಿ 'ಸರ್ವಜನಾಂಗತ್ವ', ಮುಸಲ್ಮಾನರನ್ನು ಹಿಮ್ಮೆಟ್ಟಿಸಿದ ಜಾಗದಲ್ಲಿ 'ಮುಸಲ್ಮಾನ ದೊರೆಗಳನ್ನು

ಹಿಮ್ಮೆಟ್ಟಿಸಿದ', 'ಮುಸಲ್ಮಾನರ ಕಾಲದಿಂದ' ಜಾಗದಲ್ಲಿ 'ಮುಸಲ್ಮಾನ ದೊರೆಗಳ ಕಾಲದಿಂದ' ಎಂದು ಚಿಂತಿಸಲು ಸಾಧ್ಯವಾಗಿದ್ದರೆ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಮೂಲಭೂತವಾದಿ ನೆಲೆಯಿಂದ ಸಾಂಸ್ಕೃತಿಕ ನೆಲೆಗೆ ಜಿಗಿಯುತ್ತಿದ್ದವು. ಈ ಕಾರಣದಿಂದಲೇ 'ಕರ್ನಾಟಕದ ಸರ್ವಾಂಗೀಣ ಉನ್ನತಿ' ಎಂಬೀ ಮೂರು ಶಬ್ದಗಳಲ್ಲಿ ನನ್ನ ಜಗತ್ತೆಲ್ಲವೂ ಅಡಕವಾಗಿದೆ'[೧೧] ಎಂದು ಆಲೂರರು ಹೇಳುವಾಗಲೂ ಆಲೂರರ 'ಕರ್ನಾಟಕ'ದಲ್ಲಿ ಬರುವವರು ಯಾರು ಎಂಬ ಪ್ರಶ್ನೆ ಎದುರಾಗುತ್ತದೆ.

೩.೨.೪ ಶಂಬಾ ಸಂಶೋಧನೆಯನ್ನು ಒಪ್ಪಿಕೊಳ್ಳಲಾಗದ ಉಭಯಸಂಕಟ

ಆಲೂರ ವೆಂಕಟರಾಯರು ಶಂಬಾ ಜೋಶಿಯವರ 'ಕಣ್ಮರೆಯಾದ ಕನ್ನಡ' ಕೃತಿಯನ್ನು ವಿಮರ್ಶಿಸುತ್ತ ಶಂಬಾ ಅವರು ಪ್ರತಿಪಾದಿಸುವಂತೆ ಮಹಾರಾಷ್ಟ್ರದಲ್ಲಿ ಹಿಂದೆ ಕನ್ನಡ ಭಾಷೆಯು ಪ್ರಚಾರದಲ್ಲಿತ್ತೆನ್ನುವುದನ್ನು ಅನುಮೋದಿಸಿದರೂ 'ಶ್ರೀ ಜೋಶಿಯವರು ಈ ಗ್ರಂಥದಲ್ಲಿ ಕೊಟ್ಟ ಪ್ರತಿಯೊಂದು ಆಧಾರವು ನಿರ್ಬಾಧವಾಗಿದೆಯೆಂದು ನಾವು ಹೇಳುವುದಿಲ್ಲ. ಸಂಶೋಧನದ ಸೂಕ್ಷ್ಮ ಒರೆಗಲ್ಲಿಗೆ ಉಜ್ಜಿದರೆ, ಅವುಗಳಲ್ಲಿ ಕೆಲವು ಬಿದ್ದು ಹೋಗಬಹುದು'[೭] ಎಂಬ ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ಎಲ್ಲ ಸಂಶೋಧನೆಗಳ ಸಂದರ್ಭದಲ್ಲೂ ಈ ಸಾಧ್ಯತೆ ಒಂದಷ್ಟು ಇದ್ದೇ ಇರುತ್ತದೆ. ಆದರೆ ಆಲೂರರು ಇದನ್ನು ಯಾಕೆ ಒತ್ತಿ ಹೇಳುತ್ತಿದ್ದಾರೆ ಎಂದು ಅವಲೋಕಿಸಿದರೆ ಶಂಬಾ ಅವರಿಗೆ ಸಂಬಂಧಿಸಿದಂತೆ ಆಲೂರರು ಈ ಅಭಿಪ್ರಾಯಪಡಲು ಬೇರೆ ಕಾರಣಗಳಿರುವಂತಿದೆ. ಕನ್ನಡಪರವಾದ ಶಂಬಾ ಅವರ ಈ ಸಂಶೋಧನೆಯನ್ನು ಒಪ್ಪಿಕೊಂಡರೂ ಅವರ ಎಲ್ಲ ಸಂಶೋಧನೆಗಳನ್ನು ಒಪ್ಪಿಕೊಳ್ಳಲಾಗದು ಎಂಬುದನ್ನು ಹೇಳಬೇಕಾದ ಅಗತ್ಯ ಸೃಷ್ಟಿಸಿದ ಉಭಯಸಂಕಟ ಆಲೂರರಿಂದ ಈ ಮಾತನ್ನು ಹೊರಡಿಸಿರುವಂತಿದೆ. ಶಂಬಾ ಅವರ ಬರಹಗಳ ಕುರಿತ ಪ್ರತಿಕ್ರಿಯಾತ್ಮಕ ಬರಹಗಳ ಸಂಪುಟ 'ಪಾತಳಿ' ಕೃತಿಯಲ್ಲಿ ಶೇಷಶಾಸ್ತ್ರಿ ಅವರು ಅಭಿಪ್ರಾಯ ಪಡುವಂತೆ ಶಂಬಾ ನಮ್ಮ ವೇದ, ಪುರಾಣ, ಭಗವದ್ಗೀತೆಗಳನ್ನು ಕಟು ವಿಮರ್ಶೆ ಮಾಡುತ್ತಾರೆ ಎಂಬ ಕಾರಣದಿಂದಲೇ ಕೆಲವರ ತೀವ್ರ ಖಂಡನೆಗೂ ಮತ್ತೆ ಕೆಲವರ ಆದರಣೆಗೂ ಪಾತ್ರರಾಗಿದ್ದರು. ರಾಮಪ್ರಸಾದ್ ಅವರು 'ಪಾತಳಿ' ಕೃತಿಯಲ್ಲಿ ಸರಿಯಾಗಿಯೇ ಗುರುತಿಸುವಂತೆ ಶಂಬಾ ಅವರು ತಮ್ಮ ಸಂಶೋಧನೆಗಳ ಮೂಲಕ 'ವೇದ–ಉಪನಿಷತ್ತುಗಳ ಹೆಸರಿನಲ್ಲಿ ವಿಕೃತಾರ್ಥವನ್ನೇ ನೈಜವೆಂದು ನಂಬಿಸಿ, ಮಾನವನ ಬಯಕೆಗಳಿಗೇ ದೈವತ್ವ ಆರೋಪಿಸಿ ಪೂಜಾ ವಿಧಾನದ ಆಚಾರ–ಕರ್ಮಗಳ ಕ್ಷುಲ್ಲಕ ಮಾರ್ಗವನ್ನು ಪೋಷಿಸುತ್ತ ಬಂದಿರುವ ವ್ಯರ್ಥವೈರಾಗ್ಯದ ಸಂಪ್ರದಾಯದ ಜಾಡ್ಯಕ್ಕೆ ಶಂಬಾ ಕಿಚ್ಚಿಡಲು ಹೊರಟವರು' ವೇದ–ಉಪನಿಷತ್ತು–ಭಗವದ್ಗೀತೆಗಳನ್ನು ಮಾತ್ರವಲ್ಲ, ನಮ್ಮ ನಂಬಿಕೆಯ ದೇವಿ–ದೇವತೆಗಳ ವಿಚಾರದಲ್ಲೂ ಶಂಬಾ ಕೌತುಕ ಕೆರಳಿಸುವ ಜಿಜ್ಞಾಸೆಗೆ ತೊಡಗುತ್ತಾರೆ. ಪುರಾಣಗಳು ಕಥಾಕಲ್ಪದ ಮೇಲೆ ವೈಚಾರಿಕ ದೃಷ್ಟಿ ಹರಿಸುತ್ತಾರೆ. ಆಲೂರರ ಸನಾತನ ಧರ್ಮವನ್ನು ಆಧರಿಸಿದ

'ಕರ್ನಾಟಕತ್ವ'ಕ್ಕೆ ಶಂಬಾ ಅವರ ಇಂತಹ ಸಂಶೋಧನೆಗಳು ದೊಡ್ಡ ಪೆಟ್ಟು ನೀಡುವಂತಹದು. ರಹಮತ್ ಅವರು ಕಂಡುಕೊಂಡಂತೆ ಕನ್ನಡ ಪರಂಪರೆಯ ಒಳಗೆ, ಮತೀಯವಾದಕ್ಕೆ ಬೌದ್ಧಿಕ ಮುಖಾಮುಖಿಯು ಮೊದಲಿನಿಂದಲೂ ನಡೆದು ಬಂದಿದೆ. ಆಧುನಿಕ ಕಾಲದಲ್ಲಿ ಕಪಟರಾಳ ಕೃಷ್ಣರಾಯರು, ಶಂಬಾ ಜೋಶಿಯವರು ಇದನ್ನು ಶುರು ಮಾಡಿದರು ಆಲೂರರು ಶಂಬಾ ಅವರ ಸಂಶೋಧನೆಗಳನ್ನು ಪೂರ್ಣಪ್ರಮಾಣದಲ್ಲಿ ಒಪ್ಪಿಕೊಳ್ಳುವುದರಲ್ಲಿನ ತೊಡಕಿದು.

೩.೨.೫ ಆಲೂರರ 'ಆಧ್ಯಾತ್ಮಿಕ ಪರಿಭಾಷೆ'ಯ ಸ್ವರೂಪ

ತಮ್ಮ 'ಸಾಹಿತ್ಯ ಕಥನ' ಕೃತಿಯಲ್ಲಿ ಕರ್ನಾಟಕವೆಂಬ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಸ್ವೀಕರಿಸುವ ಮೂರು ಮಾದರಿಗಳನ್ನು ಗುರುತಿಸುವ ಡಿ.ಆರ್. ನಾಗರಾಜ್ ಅವರು ಮೂರನೇ ಮಾದರಿಯ ಬಗ್ಗೆ ಬರೆಯುತ್ತ 'ಕರ್ನಾಟಕ ಬಹುಮುಖೀ ವಾಸ್ತವವೆಂಬ ನಿಲುವು. ಕರ್ನಾಟಕವೆಂಬುದು ಸಾಂಸ್ಕೃತಿಕ ರಾಷ್ಟ್ರೀಯತೆಯ ಅಪೇಕ್ಷಣೀಯ ಅಭಿವ್ಯಕ್ತಿ. ಕರ್ನಾಟಕವೆಂಬುದು ನಿಜ. ಇಡೀ ಜಗತ್ತು ಆಧುನಿಕ ಬಂಡವಾಳಶಾಹಿಯ ಶೈಲಿಯಿಂದಾಗಿ ವಿಕಾರ ರೀತಿಯ ಏಕರೂಪೀಕರಣಕ್ಕೆ ಒಳಗಾಗುತ್ತಿದೆ. ಅದರ ವಿರುದ್ಧದ ಅಧಿಕೃತ ಪ್ರತಿಭಟನೆಗಳಲ್ಲೊಂದು ಕರ್ನಾಟಕತ್ವ ಪಶ್ಚಿಮದ ನಾಗರೀಕತೆಯ ವಿಕಟವಿಟಗಣದ ವಿರುದ್ಧದ ಪ್ರತಿಭಟನೆ ಇದು. ಆಲೂರರಲ್ಲಿ ಇದು ತನ್ನ ಆಧ್ಯಾತ್ಮಿಕ ಪರಿಭಾಷೆಯಲ್ಲಿ ಪ್ರಾರಂಭವಾಗಿದೆ' ಎಂದು ಬರೆಯುತ್ತಾರೆ.

ತನ್ನನ್ನು ತಾನರಿವ, ಮತೀಯತೆಯಿಂದ ಬಿಡುಗಡೆ ಪಡೆದ ರಾಮಕೃಷ್ಣ ಪರಮಹಂಸ, ಗಾಂಧಿಯಂತವರಲ್ಲಿ ಕಾಣುವ ಧಾರ್ಮಿಕತೆಯನ್ನು 'ಆಧ್ಯಾತ್ಮ' ಎಂದು ಗುರುತಿಸಲಾಗುತ್ತದೆ. ಇಲ್ಲಿ ಡಿ.ಆರ್ ನಾಗರಾಜ ಅವರು ಬಳಸುತ್ತಿರುವ ಆಧ್ಯಾತ್ಮಿಕ ಪರಿಭಾಷೆ ಎಂದರೇನು? ನಿಜಕ್ಕೂ ಆಲೂರರದು ಆಧ್ಯಾತ್ಮಿಕ ಪರಿಭಾಷೆಯೇ? ಡಿ.ಆರ್ ನಾಗರಾಜ ಅವರೇ ಉಲ್ಲೇಖಿಸುವ ಆಲೂರರ ಮುಂದಿನ ಸಾಲುಗಳು ಹೀಗಿವೆ : 'ಇಷ್ಟೊಂದು ಗಹನ ವಿಚಾರದಲ್ಲಿ ಬೀಳುವುದಕ್ಕಿಂತಲೂ ಸುಸೂತ್ರವಾಗಿ 'ಜಯಭಾರತ, ಜಯ ಭೂದೇವಿ' ಎಂಬಿವೇ ಮುಂತಾಗಿ ಸಹಜವಾಗಿ ಗೋಚರವಾಗುವ ವ್ಯಾಪಕವಾದ ಕಲ್ಪನೆಗಳನ್ನೇಕೆ ಇಟ್ಟುಕೊಳ್ಳಕೂಡದು ಎಂದು ಕೆಲವರು ಕೇಳಬಹುದು. ಅದಕ್ಕೆ ನಮ್ಮ ಉತ್ತರವೇನೆಂದರೆ, ಹಾಗೆ ಇಟ್ಟುಕೊಳ್ಳುವುದು ಆಧ್ಯಾತ್ಮ ದೃಷ್ಟಿಯಿಂದ ಸಂಕುಚಿತವಾದುದು, ಸನಾತನ ಸಂಸ್ಕೃತಿಯ ಸಂಪ್ರದಾಯಕ್ಕೆ ವಿರುದ್ಧವಾದುದು"[೮] ಆಲೂರರ ಈ ಮಾತುಗಳನ್ನೇ ನೋಡುವುದಾದರೆ ಅಧ್ಯಾತ್ಮ ದೃಷ್ಟಿಗೂ, ವರ್ಣವ್ಯವಸ್ಥೆಯ ತರತಮಗಳ ನೆಲೆಯ ಮೇಲೆ ನಿಂತ ಸನಾತನ ಸಂಸ್ಕೃತಿಗೂ ನಡುವೆ ಯಾವುದೇ ಫರಕಿಲ್ಲ. ಆಲೂರರ ಆಧ್ಯಾತ್ಮಕ್ಕೆ ಸನಾತನ ಸಂಸ್ಕೃತಿಯ ಬಗ್ಗೆ ಯಾವುದೇ ತಕರಾರುಗಳಿಲ್ಲ. ಸಾರಾಂಶದಲ್ಲಿ ಆಲೂರು ಪರಿಭಾವಿಸುವ ಆಧ್ಯಾತ್ಮ ಮತ್ತು ಸನಾತನ ಸಂಸ್ಕೃತಿ ಎರಡೂ ಒಂದೇ ಆಗಿದೆ. ಹೀಗಿರುವಾಗ ಡಿ.ಆರ್ ಅವರು ಹೇಳುವ

'ಪಶ್ಚಿಮದ ನಾಗರೀಕತೆಯ ವಿಕಟವಿಟಗಣದ ವಿರುದ್ಧದ ಪ್ರತಿಭಟನೆಯಾದ ಕರ್ನಾಟಕತ್ವ ಆಲೂರರಲ್ಲಿ ಆಧ್ಯಾತ್ಮಿಕ ಪರಿಭಾಷೆಯಲ್ಲಿ ಪ್ರಾರಂಭವಾಗಿದೆ' ಎನ್ನುವ ಮಾತು ತಪ್ಪು ಹೋಲಿಕೆಯಿಂದ ಕೂಡಿದೆ ಎನಿಸುತ್ತದೆ. ಆದರೆ ಮುಂದಿನ ಮಾತುಗಳಲ್ಲಿಯೇ 'ಕರ್ನಾಟಕದ ಬಿಕ್ಕಟ್ಟುಗಳಿಗೆ ಪರಿಹಾರ ಅನ್ಯದ್ವೇಷದಲ್ಲಿಲ್ಲ, ಕ್ಷಾತ್ರದ ಪರಿಭಾಷೆ ಇಲ್ಲಿ ತಪ್ಪು' ಎನ್ನುವುದರ ಮೂಲಕ ಅಲೂರರದು ನಿಜವಾದ ಆಧ್ಯಾತ್ಮದ ಕರ್ನಾಟಕತ್ವವಲ್ಲ ಎಂದು ಡಿ.ಆರ್ ನಾಗರಾಜ ಅವರು ಪರೋಕ್ಷವಾಗಿ ಸೂಚಿಸುತ್ತಿದ್ದಾರೆ.

೩.೨.೬ ಸುಧಾರಣೆಯನ್ನು ಒಲ್ಲದ ಕನ್ನಡ ಅಸ್ಮಿತೆ

ಭಾಷಿಕರ ಬದುಕು ಸುಧಾರಿಸದೆ ಭಾಷೆ ಸುಧಾರಿಸದು ಎಂಬುದನ್ನು ಕನ್ನಡ ಅಸ್ಮಿತೆ ಮೊದಲಿಂದಲೂ ಪ್ರತಿಪಾದಿಸುತ್ತ ಬಂದಿದೆ. ಮನುಷ್ಯನ ಹಿಂಸಾ ಪ್ರವೃತ್ತಿಯನ್ನು, ಮನುಕುಲದ ಘನತೆಗೆ ಕುಂದು ತರುವ ಅಸ್ಪೃಶ್ಯತೆ, ಜಾತಿ ವ್ಯವಸ್ಥೆ, ಲಿಂಗಭೇದದಂತಹ ರೋಗರುಜಿನಗಳನ್ನು ತೊಡೆದು ಹಾಕಲು ಸಮಾಜ ಸುಧಾರಕರು, ಸಾಹಿತಿಗಳು ನಿರಂತರ ಪ್ರಯತ್ನಿಸುತ್ತಲೇ ಬಂದಿದ್ದಾರೆ. ಹತ್ತನೆಯ ಶತಮಾನದ ಪಂಪನಿಂದ ಆರಂಭವಾಗಿ ಇಪ್ಪತ್ತನೆಯ ಶತಮಾನದ ಕುವೆಂಪು ಅವರಿಗೆ, ಹನ್ನೆರಡನೆ ಶತಮಾನದ ಬಸವಣ್ಣನಿಂದ ಆರಂಭವಾಗಿ ಇಪ್ಪತ್ತನೆಯ ಶತಮಾನದ ಕುಂದ್ಮಲ್ ರಂಗರಾಯರವರೆಗೆ ಈ ಪರಂಪರೆಯಿದೆ. ಕನ್ನಡ ಅಸ್ಮಿತೆಯ ಈ ಪ್ರಧಾನ ಗುಣಕ್ಕೆ ವ್ಯತಿರಿಕ್ತವಾಗಿ ಆಲೂರರ ಚಿಂತನೆಗಳಿವೆ. ಡಿ.ಆರ್. ನಾಗರಾಜ ಅವರು ಕಂಡುಕೊಂಡಂತೆ ಅಹಿಂಸೆ ಭಾರತೀಯ ಸಂಸ್ಕೃತಿಯ ಪರಮ ಮೌಲ್ಯ ಎನ್ನುವುದನ್ನು ಹಿಂದೂ ರಾಷ್ಟ್ರೀಯವಾದಿ ಚಿಂತನೆ ಒಪ್ಪುವುದಿಲ್ಲ, ಸಹಜವಾಗಿಯೇ ಗಾಂಧಿಯವರ ಅಹಿಂಸಾತತ್ವದ ಬಗ್ಗೆ ಆಲೂರರಿಗೆ 'ತತ್ವಭೇದ'. ನಿಃಶಸ್ತ್ರವೂ ನಿರ್ವೀರ್ಯವೂ ಆದವರು ಅನುಸರಿಸುವ ತತ್ವ ಇದೆಂದು ಆಲೂರರ ಅಭಿಮತ. ಆಲೂರರ ಅಹಿಂಸಾತತ್ವಕ್ಕೆ ವಿರೋಧಕ್ಕೆ ಮುಖ್ಯ ಕಾರಣವಾಗಿರುವುದು ಇದು ಸನಾತನಧರ್ಮಕ್ಕೆ ವಿರುದ್ಧವಾದುದು ಎನ್ನುವುದು. ಈ ನೆಲೆ ಅಹಿಂಸಾತತ್ವವನ್ನು ನೇರವಾಗಿಯೇ ವಿರೋಧಿಸುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿಯೇ ಗಾಂಧಿಯಂತಹ ನಾಯಕರು ಅಸ್ಪೃಶ್ಯತಾ ನಿವಾರಣೆಯ ಉದ್ದೇಶದ ಸಾಮಾಜಿಕ ಚಳುವಳಿಗಳಲ್ಲಿ ಭಾಗವಹಿಸುವುದನ್ನು, ಇಂತಹ ಸಾಮಾಜಿಕ ಚಳುವಳಿಗಳಿಗೆ ಸ್ವಾತಂತ್ರ್ಯ ಚಳವಳಿಗಳಲ್ಲಿ ಕ್ರೀಯಾಶೀಲವಾದ ರಾಜಕೀಯ ಪಕ್ಷಗಳು ವೇದಿಕೆ ಒದಗಿಸುವುದನ್ನು ಆಲೂರರು ವಿರೋಧಿಸಿದ್ದರು. ತಿಲಕರಿಂದ ಪ್ರಭಾವಿತರಾಗಿದ್ದ ಆಲೂರರು ರಾಷ್ಟ್ರೀಯ ಚಳುವಳಿಯಲ್ಲಿ ಅವರ ಅನುಯಾಯಿಯಾಗಿದ್ದರು. ಎಸ್. ಚಂದ್ರಶೇಖರ್ ಅವರು ಗುರುತಿಸುವಂತೆ ತಿಲಕರ ಅವಧಿಯ ರಾಷ್ಟ್ರೀಯವಾದಿಗಳ ಒಂದು ಪ್ರಧಾನವಾದ ಲಕ್ಷಣವೆಂದರೆ ಇವರಲ್ಲಿ ಯಾರೂ ಸಾಮಾಜಿಕ –ಧಾರ್ಮಿಕ ಸುಧಾರಣಾ ಚಳವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿರಲಿಲ್ಲ, ಆಲೂರರೂ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಭಾರತೀಯ ಸಾಮಾಜಿಕ ಅಧಿವೇಶನವನ್ನು (ಇಂಡಿಯನ್

ಸೋಶಿಯಲ್ ಕಾನ್‌ಫರೆನ್ಸ್) ಕಾಂಗ್ರೆಸ್ ವೇದಿಕೆಯಲ್ಲಿ (ಮಂಟಪ್) ನಡೆಸಬಾರದೆಂದು ತಿಲಕರು ೧೮೯೫ರಲ್ಲಿ ಖಡಾಖಂಡಿತವಾಗಿ ನಿರಾಕರಿಸಿದ ಬಳಿಕ ಕಾಂಗ್ರೆಸ್ಸು ಮತ್ತು ಭಾರತೀಯ ರಾಷ್ಟ್ರಿಯ ಚಳುವಳಿ ಗುಂಪಿನ ನಡುವಿನ ಸಂಬಂಧ ಕಡಿದುಹೋಯಿತು. ಕಾಂಗ್ರೆಸ್ಸು ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಳ್ಳುವುದರ ಬಗ್ಗೆ ಎಷ್ಟು ವಿರೋಧವಿತ್ತೆಂದರೆ ಗಾಂಧಿಯವರು ಸಾರ್ವಜನಿಕ ಜೀವನದಲ್ಲಿ ಕಾಣಿಸಿಕೊಂಡಾಗ ತಿಲಕರ ಕಟ್ಟಾ ಅನುಯಾಯಿಗಳು ಕಾಂಗ್ರೆಸ್ಸಿನೊಡನೆ ಸಂಬಂಧ ಕಡಿದುಕೊಂಡರು' ಕಾಂಗ್ರೆಸ್ಸು ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಳ್ಳುವುದರ ಬಗ್ಗೆ ತಿಲಕರ ಅನುಯಾಯಿಯಾದ ಆಲೂರರಿಗೂ ವಿರೋಧವಿತ್ತು. ಆಗ ಆಲೂರರು ಕಾಂಗ್ರೆಸ್ಸು ಮತ್ತು ರಾಷ್ಟ್ರೀಯ ಚಳುವಳಿಗಳಲ್ಲಿ ನೇರವಾಗಿ ಭಾಗವಹಿಸುವುದನ್ನು ಬಿಟ್ಟರು ಎಂದು ಹಂಪನಾ ಗುರುತಿಸುತ್ತಾರೆ. ತಮ್ಮ 'ಕರ್ನಾಟಕತ್ವದ ವಿಕಾಸ' ಕೃತಿಯಲ್ಲಿ ಅದನ್ನು ಸ್ಪಷ್ಟವಾಗಿಯೇ ಆಲೂರರು ದಾಖಲಿಸಿದ್ದಾರೆ. ಕಾಂಗ್ರೆಸ್ಸು ಮುಖ್ಯ ರಾಜಕಾರಣ ಸಂಸ್ಥೆಯಾಗಿದ್ದು, ಅದರಲ್ಲಿ ಸಮಾಜ ಸುಧಾರಣೆಯಂತಹ ವಿಷಯಗಳನ್ನು ತರುವುದು ಸರಿಯಲ್ಲವೆಂದು ಗಾಂಧಿಯವರಿಗೆ ಪತ್ರ ಬರೆದು ತಾನು ಕಾಂಗ್ರೆಸ್ಸಿಗೆ ರಾಜೀನಾಮೆ ನೀಡಿದೆನೆಂದು ಅವರು ದಾಖಲಿಸಿದ್ದಾರೆ. ಆಲೂರರ ಚಿಂತನೆಗಳು ಈ ಕಾರಣಕ್ಕಾಗಿ ಎಲ್ಲಿಯೂ ಸಾಮಾಜಿಕ ನೆಲೆ ಪ್ರವೇಶಿಸುವುದಿಲ್ಲ.

ಏಕೀಕರಣ ಚಳುವಳಿಯ ಸಂದರ್ಭದಲ್ಲಿ ಸುಧಾರಣೆಯನ್ನು ಒಪ್ಪದ ಆಲೂರರಂಥವರ ಧೋರಣೆಯ ಕುರಿತು ಅಸಮಾಧಾನವೂ ವ್ಯಕ್ತವಾಗಿತ್ತು. ೧೯೪೬ರ ಜನವರಿ ೧೯ರಂದು ಮುಂಬಯಿಯಲ್ಲಿ ಸೇರಿದ ಕರ್ನಾಟಕ ಏಕೀಕರಣ ಸಮ್ಮೇಳನದ ೧೦ನೆಯ ಅಧಿವೇಶನದಲ್ಲಿ ಸಮ್ಮೇಳನಾಧ್ಯಕ್ಷರಾದ ಬಾಳ ಗಂಗಾಧರ ಖೇರರವರ ಮಾತುಗಳಲ್ಲಿ ಇದನ್ನು ಕಾಣಬಹುದು: 'ಕೇವಲ ರಾಜಕೀಯ ಆಂದೋಲನದಿಂದ ತಲೆ ಕೆಡಿಸಿಕೊಳ್ಳದೆ ಸಾಮಾಜಿಕ ಸಮಸ್ಯೆಗಳಲ್ಲಿ ಮಾನವೀಯತೆಗೆ ಬೆಲೆ ಕೊಡಬೇಕು. ಸಾಮಾಜಿಕವಾಗಿ, ಧಾರ್ಮಿಕವಾಗಿ ಕನ್ನಡಿಗರಲ್ಲಿ ಭೇದಭಾವದ ಅಂಶಗಳಿವೆ. ಆದಕಾರಣ, ಈ ಸಮ್ಮೇಳನಕ್ಕೆ ಬಂದ ಎಲ್ಲ ಪ್ರತಿನಿಧಿಗಳಿಗೆ ನಾನು ಅಂತಃಕರಣಪೂರ್ವಕ ಭಿನ್ನವಿಸಿಕೊಳ್ಳುತ್ತೇನೆ. ಅವರೆಲ್ಲರೂ ಒಮ್ಮನದಿಂದ ಮಹಾತ್ಮಾ ಗಾಂಧಿಯವರ ವಿಧಾಯಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು. ಖಾದಿ, ಹಳ್ಳಿಯ ಕೈಗಾರಿಕೆ, ಹಳ್ಳಿಗಳ ಸುಧಾರಣೆ, ಸಾಕ್ಷರತೆ, ಪ್ರೌಢಶಿಕ್ಷಣ, ಹರಿಜನೋದ್ಧಾರ, ಕನ್ನಡ ಮತ್ತು ಹಿಂದೂಸ್ತಾನಿ ಅಭ್ಯಾಸ. ಇವಲ್ಲದೆ ಕೇವಲ ಪ್ರಾಂತೀಯ ಗಡಿಗಳನ್ನು ಸರಿಪಡಿಸುವುದರಿಂದ ನಿಜವಾದ ಲಾಭ ಒದಗದು. ಈ ಸೂಚನೆಗೆ ನೀವು ಸರಿಯಾದ ಗಮನ ಕೊಡಬೇಕೆಂದು ಬಯಸುತ್ತೇನೆ.' ನಾಡಿನ ಏಕೀಕರಣ ಎಂದರೆ ಜಾತ್ಯತೀತತೆ, ಕೋಮು ಸಾಮರಸ್ಯ, ಸಾಮಾಜಿಕ, ಆರ್ಥಿಕ ಸಮಾನತೆಯ ಮೂಲಕ ಮಾನಸಿಕವಾಗಿಯೂ ಜನರ ಐಕ್ಯತೆ ಸಾಧಿಸುವುದು, ಕೇವಲ ಭೌಗೋಳಿಕವಾಗಿ ಒಟ್ಟುಗೂಡುವುದಲ್ಲ, ಎನ್ನುವ ಟೀಕೆ ಈ ಮಾತುಗಳಲ್ಲಿ ವ್ಯಕ್ತವಾಗುತ್ತದೆ.

ಮೂಲಭೂತವಾದದ ಪ್ರದಾನ ಲಕ್ಷಣವೆಂದರೆ ಅದು ಯಥಾಸ್ಥಿತಿವಾದವನ್ನು ಸದಾ ಬಯಸುತ್ತದೆ. ಯಥಾಸ್ಥಿತಿಗೆ ಧಕ್ಕೆ ತರುವ ಸುಧಾರಣಾವಾದವನ್ನು ಅದು ಯಾವತ್ತೂ ಒಪ್ಪಿಕೊಳ್ಳುವುದಿಲ್ಲ. ಆಲೂರರ ಕನ್ನಡ ಅಸ್ಮಿತೆಯ ಚಿಂತನೆಯ ನೆಲೆ ಮೂಲಭೂತವಾದದ್ದು ಎನ್ನುವುದನ್ನು ಇದು ಸಾಕ್ಷೀಕರಿಸುತ್ತಿದೆ.

೩.೨.೭ ಹಲವು ಜನಾಂಗಗಳ, ಧರ್ಮಗಳ ಕೊಡುಗೆಯ ಅವಗಣನೆ

ಆಲೂರರು ತಮ್ಮ 'ಕರ್ನಾಟಕವು ಭರತಖಂಡದ ಸಂಸ್ಕೃತಿಯನ್ನೆಲ್ಲ ಪಚನ ಮಾಡಿಕೊಂಡಿರುವುದಲ್ಲದೆ, ತನ್ನ ವಿಶಿಷ್ಟ ಸಂಸ್ಕೃತಿಯನ್ನು ಅದರಲ್ಲಿ ಬೆರೆಸಿ, ಅದನ್ನು ಮತ್ತಷ್ಟು ಪುಷ್ಟವನ್ನಾಗಿಯೂ, ವ್ಯಾಪಕವನ್ನಾಗಿಯೂ ಮಾಡಿರುವುದು. ಅದು ಭರತಖಂಡದ ಧರ್ಮಕ್ಕೆ ಹೆಚ್ಚು ಉಜ್ವಲವಾದ ಸ್ವರೂಪವನ್ನು ಕೊಟ್ಟಿರುವುದು. ಆದ ಕಾರಣವೇ ನಾವು ನಮ್ಮ ಕರ್ನಾಟಕವು ಭರತಖಂಡಕ್ಕಿಂತ, ವಿಶ್ವಕ್ಕಿಂತ ವ್ಯಾಪಕವಾಗಿರುತ್ತದೆಂದೆನ್ನುತ್ತೇವೆ'[೯] ಎನ್ನುತ್ತಾರೆ. ಆಲೂರರ ಕರ್ನಾಟಕತ್ವದ ಮುಖ್ಯಭಾಗ 'ವಿಶ್ವಪ್ರಜ್ಞೆ'. ಈ 'ವಿಶ್ವಪ್ರಜ್ಞೆ' ಕುವೆಂಪು ಮತ್ತು ಸುಬ್ಬಣ್ಣ ಅವರ ವಿಶ್ವಮಾನವ ಪರಿಕಲ್ಪನೆಗೆ ತುಂಬ ಭಿನ್ನ. ಯಾಕೆಂದರೆ ಆಲೂರರ ಕರ್ನಾಟಕತ್ವ, 'ಹಿಂದೂ ಕ್ರೈಸ್ತ ಮುಸಲ್ಮಾನ ಜೈನರುದ್ಯಾನ' ಎಂದು ಕುವೆಂಪು ಅವರು ವ್ಯಾಖ್ಯಾನಿಸುವ ಕರ್ನಾಟಕವನ್ನಾಗಲೀ ಅಥವಾ 'ನಾವು ಕನ್ನಡಿಗರು ಜಗತ್ತಿನ ಬಹುತೇಕ ಎಲ್ಲಾ ಜನ-ಜನಾಂಗ-ಬುಡಕಟ್ಟು-ಧರ್ಮ-ಜಾತಿಗಳನ್ನೂ ಅರಗಿಸಿಕೊಂಡಿರುವ ವಿಶ್ವಮಾನವರು ಮತ್ತು ನಮ್ಮ ಕನ್ನಡವು ಜಗತ್ತಿನ ಅಸಂಖ್ಯ ಭಾಷೆಗಳನ್ನು ಅರಗಿಸಿಕೊಂಡಿರುವ ವಿಶ್ವಭಾಷೆ. ಹಾಗೆ ನಮ್ಮದು ಕನ್ನಡ ಕೂಪವಲ್ಲ, ಕನ್ನಡ ವಿಶ್ವ, ಕನ್ನಡ ಬ್ರಹ್ಮಾಂಡ' ಎಂಬ ಸುಬ್ಬಣ್ಣ ಅವರ ಕರ್ನಾಟಕವಾಗಲಿ ಅಲ್ಲ. ಆಲೂರರು ಪ್ರತಿಪಾದಿಸುತ್ತಿರುವ ಧರ್ಮ ಕುವೆಂಪು ಮತ್ತು ಸುಬ್ಬಣ್ಣ ಅವರಲ್ಲಿ ಕಾಣುವ 'ಮನುಷ್ಯಕುಲಂ ತಾನೊಂದೆ ವಲಂ' ಎಂಬ ಪಂಪನು ಹೇಳುವ ಮಾನವಧರ್ಮವಲ್ಲ.

'ಉತ್ತರ ಕಡೆಯಿಂದ ಒತ್ತಿ ಬಂದ ಮುಸಲ್ಮಾನರನ್ನು ಹಿಮ್ಮೆಟ್ಟಿಸಿದ ಮೊಟ್ಟ ಮೊದಲಿನ ಸಾಮ್ರಾಜ್ಯವೆಂದರೆ ಕರ್ನಾಟಕದ ಈ ವಿಜಯನಗರದ ಸಾಮ್ರಾಜ್ಯ ಒಂದೇ! ಕರ್ನಾಟಕಸ್ಥರಿಗೆ, ಅದೇಕೆ ಇಡೀ ಭಾರತಕ್ಕೇನೆ ಇದೇನು ಕಡಿಮೆ ಅಭಿಮಾನದ ಸಂಗತಿಯೇ? ವಿದ್ಯಾರಣ್ಯರು ಹಕ್ಕ-ಬುಕ್ಕರಲ್ಲಿ ಸ್ಫೂರ್ತಿ ತುಂಬಿ ಮುಸಲ್ಮಾನರನ್ನು ಹೊಡೆದೋಡಿಸಿ ಸಾಮ್ರಾಜ್ಯವನ್ನು ಕಟ್ಟಿಸಿದರು'[೧೦] ಎಂದು ಆಲೂರರು ಹೆಮ್ಮೆಯಿಂದ ನೆನೆಸಿಕೊಳ್ಳುತ್ತಾರೆ. ಇಲ್ಲಿ ಆಲೂರರು ಮುಸ್ಲಿಂ ಪ್ರಭುತ್ವ ಎನ್ನುವ ಅರ್ಥದಲ್ಲಿ 'ಮುಸಲ್ಮಾನರು' ಎಂದು ಹೇಳುತ್ತಿರಬಹುದು ಎನ್ನುವ ಸಂದೇಹವೂ ಉಂಟಾಗುತ್ತದೆ. ಯಾಕೆಂದರೆ ಅವರು 'ಕರ್ನಾಟಕತ್ವದಲ್ಲಿ ಧರ್ಮದ್ವೇಷಕ್ಕೆ ಇರವಿಲ್ಲವು. ಅವುಗಳಿಗೆ ಹೃದಯದಲ್ಲಿ ಯತ್ ಕಿಂಚಿತ್ತಾದರೂ ಸ್ಥಾನ ಕೊಡುವವನು ಕರ್ನಾಟಕದ್ರೋಹಿಯೂ'[೧೧] ಎಂದು ಆಲೂರರು

ಜಾತ್ಯತೀತತೆ ಕನ್ನಡತನದ ಪ್ರಮುಖ ಗುಣ ಎಂದು ಸಾರುತ್ತಾರೆ. ವಿಪರ್ಯಾಸವೆಂದರೆ ಅವರ 'ಕರ್ನಾಟಕದ ಗತವೈಭವ' ಮತ್ತು 'ಕರ್ನಾಟಕತ್ವದ ವಿಕಾಸ' ಕೃತಿಗಳಲ್ಲಿ ಕನ್ನಡ ಸಂಸ್ಕೃತಿಗೆ ಮುಸ್ಲಿಂ, ಕ್ರಿಶ್ಚಿಯನ್ ನಂತಹ ಅಲ್ಪಸಂಖ್ಯಾತ ಧರ್ಮಗಳ ಕೊಡುಗೆಯ ಸ್ಪಷ್ಟ ಪ್ರಸ್ತಾಪವೇ ಇಲ್ಲ. ಆಧುನಿಕ ಪೂರ್ವಯುಗದಾಚೆಗೆ ಕರ್ನಾಟಕ ರೂಪುಗೊಂಡದ್ದೇ ಮುಸ್ಲಿಂ ಹಾಗೂ ಕ್ರೈಸ್ತಧಾರೆಗಳಿಂದ. ೨೦ನೇ ಶತಮಾನದ ಹಿಂದಿನ ಕನ್ನಡ ಸಂಸ್ಕೃತಿಯ ಸಮೃದ್ಧತೆಗೆ, ಶಕ್ತಿಗೆ, ವೈವಿಧ್ಯತೆಗೆ ನಿಸ್ಸಂದೇಹವಾಗಿ ಇಸ್ಲಾಂ ಹಾಗೂ ಕ್ರೈಸ್ತ ಸಂವೇದನೆ, ಆಶಯಗಳ ಕೊಡುಗೆಯೇ ಅತ್ಯಂತ ಮಹತ್ವದ್ದು. ಈ ಹಿನ್ನೆಲೆಯಲ್ಲಿ ಡಿ.ಆರ್ ನಾಗರಾಜ್ ಅವರು ಗಮನಿಸುವಂತೆ 'ಕನ್ನಡ ಸಂಸ್ಕೃತಿಗೆ ಹಿಂದುವೇತರ ಜನಾಂಗಗಳ ಕೊಡುಗೆಯ ಸ್ಪಷ್ಟ ಪ್ರಸ್ತಾಪ ಆಲೂರರಲ್ಲೂ ಇಲ್ಲ'

ಆಲೂರರ ಕೃತಿಗಳಲ್ಲಿ 'ಕನ್ನಡಿಗರು' ಎನ್ನುವುದಕ್ಕೆ 'ಹಿಂದೂಗಳು' ಎಂದು ಬಳಕೆಯಾಗುವುದೇ ಹೆಚ್ಚು. ಇದಕ್ಕೆ ಪೂರಕವಾಗಿ ಅವರ ಈ ನುಡಿಗಳನ್ನು ಗಮನಿಸಬಹುದು. 'ವಿಜಯ ನಗರಕ್ಕೆ ಈಗಲೂ ಹೋಗಿ ಬನ್ರಿ, ಅಲ್ಲಿ ನಿಮಗೆ ಕಾಣುವ ಭವ್ಯ ಕಟ್ಟಡಗಳೂ, ವಿಶಾಲವಾದ ಕಲ್ಲು ಅಂಗಡಿ ಸಾಲುಗಳೂ, ಅರಸು ಮನೆಗಳೂ, ಕೋಟೆ ಕೊತ್ತಲಗಳೂ ಇವೆಲ್ಲವುಗಳು ಹಿಂದೂ ಜನರ ವೈಭವದ ಹಾಗು ವಿದ್ವತ್ತೆಯ ಸಾಕ್ಷಿಯನ್ನು ಕೊಡುವುದು'[೧೨] ಇಲ್ಲಿ ಹಿಂದೂಗಳ ಪ್ರಧಾನ ಶತ್ರುಗಳು ಎಂದರೆ ಕನ್ನಡದ ಪ್ರಧಾನ ಶತ್ರುಗಳು 'ಮುಸಲ್ಮಾನರು'. ಅದು ಚರಿತ್ರೆಯಿಂದಲೇ ಆರಂಭವಾಗುತ್ತದೆ. 'ಶಾಲೆಯಲ್ಲಿ ನಾವು ಕಲಿತ ಇತಿಹಾಸದುದ್ದಕ್ಕೂ 'ಕರ್ನಾಟಕ'ದ ಹೆಸರು ಶೂನ್ಯ. ಪರದಾಸ್ಯದಲ್ಲಿ ಸಿಕ್ಕಾಗಿನಿಂದ ಅಂದರೆ, ಮುಸಲ್ಮಾನರ ಕಾಲದಿಂದ ಪ್ರಾರಂಭವಾದ ಇತಿಹಾಸ ಇದು'[೧೩] ಎಂದು ಆಲೂರರು ವ್ಯಥೆ ಪಡುತ್ತಾರೆ. 'ಕೊಡಗು ಮುಸಲ್ಮಾನರ ಸಂಸ್ಕೃತಿ ಮತ್ತು ಆಡಳಿತದಿಂದ ಬದ್ಧವಾದ ಪ್ರದೇಶ. ಅಲ್ಲಿಯ ಕನ್ನಡಿಗರಿಗೆ ರಾಜಕಾರಣವೆಂದರೇನೆ ಗೊತ್ತಿಲ್ಲ'[೧೪] ಎಂದು ಮುಸಲ್ಮಾನರ ಬಗ್ಗೆ ತಮಗಿರುವ ಪೂರ್ವಗ್ರಹವನ್ನು ಹೊರಹಾಕುತ್ತಾರೆ. ಈ ಹಿನ್ನೆಲೆಯಲ್ಲಿ 'ಮುಸಲ್ಮಾನರನ್ನು ಓಡಿಸಿ ವಿಜಯನಗರ ಸ್ಥಾಪಿಸಿದ' ವಿದ್ಯಾರಣ್ಯರ ಉತ್ಸವ ಮಾಡಲಾರಂಭಿಸಿದುದರ ಹಿಂದೆ, ಮುಸ್ಲಿಂ ದೊರೆಗಳ ವಿರುದ್ಧದ ರಕ್ಕಸತಂಗಡಿಯ ಯುದ್ಧದ ಭಸ್ಮ ಪ್ರದರ್ಶನ ಕಾರ್ಯಕ್ರಮದ ಹಿಂದೆ ಆಲೂರರಿಗೆ ಮತೀಯ ಉದ್ದೇಶವಿರುವ ಗಾಢ ಅನುಮಾನಗಳನ್ನು ಹುಟ್ಟು ಹಾಕುತ್ತವೆ.

ಹಿಂದುತ್ವ ತನ್ನ ಮೊದಲ ಶತ್ರುವನ್ನಾಗಿ ಮುಸ್ಲಿಮರನ್ನು ನೋಡುತ್ತದೆ. ಕನ್ನಡ ರಾಷ್ಟ್ರೀಯತೆಯ ಪರಿಕಲ್ಪನೆಗೆ ಮೊದಲಿನಿಂದಲೂ ಹಿಂದುತ್ವ ಅಥವಾ ಹಿಂದೂ ರಾಷ್ಟ್ರೀಯತೆಯ ಜೊತೆಗೆ ಸಾವಯವ ಸಂಬಂಧ ಇದ್ದೇ ಇದೆ. ಭಾರತದಲ್ಲಿ ರಾಷ್ಟ್ರೀಯತೆ ಎಂದರೇನೇ ಹಿಂದೂ ರಾಷ್ಟ್ರೀಯತೆ ಎಂಬ ನಂಬಿಕೆ ಒಂದು ಘಟ್ಟದಲ್ಲಿ ತುಂಬ ಪ್ರಬಲವಾಗೇ ಬೆಳೆದು ಬಂದಿತ್ತು. ಅಲೂರರಲ್ಲೂ ಕೂಡ ಈ ಹಿಂದುತ್ವ ಮತ್ತು ಕನ್ನಡ ರಾಷ್ಟ್ರೀಯತೆಗಳ ಸಾವಯವ ಸಂಬಂಧದ ಪ್ರಸ್ತಾಪವಿದೆ. ಆದರೆ, ಡಿ.ಆರ್ ನಾಗರಾಜ ಅವರು ಗಮನಿಸುವಂತೆ, ಆಲೂರರ ಮುಖ್ಯ ಗುಣವೆಂದರೆ ತಮ್ಮ ಉಳಿದ ವಿಶಾಲ

ಹಾಗೂ ಸೂಕ್ಷ್ಮ ಪರಿಕಲ್ಪನೆಗಳ ಮೂಲಕ ಆ ಹಿಂದುತ್ವವನ್ನು ಮುಚ್ಚಲು ಪ್ರಯತ್ನಿಸುತ್ತಾರೆ. ಅವರಲ್ಲಿ ಹಿಂದುತ್ವ ಎಂಬುದು ವಿಶಿಷ್ಟ ವ್ಯಕ್ತಿತ್ವದ ಒಂದು ರೂಪವೇ ಹೊರತು, ಏಕಮಾತ್ರ ರೂಪವಲ್ಲ. ಇಷ್ಟಾದರೂ ಕನ್ನಡ ರಾಷ್ಟ್ರೀಯತೆ ಮತ್ತು ಹಿಂದುತ್ವಗಳ ನಡುವಿನ ಸಂಬಂಧ ಅಪಾಯಕಾರಿ ನೆಲೆಗಳಿಗೆ ತಿರುಗುವುದನ್ನು ಆಲೂರರಲ್ಲೇ ಗುರುತಿಸುವುದು ಸಾಧ್ಯ.

ಆಲೂರರು ಹಿಂದೂಯೇತರ ಧರ್ಮಗಳು ಕನ್ನಡ ಸಂಸ್ಕೃತಿಗೆ ಕೊಟ್ಟ ಕೊಡುಗೆಯನ್ನು ಪರಿಗಣಿಸದೇ ನಿರ್ಲಕ್ಷಿಸುತ್ತಾರೆ. ಹಾಗೆಂದು ಆಲೂರರು ಹಿಂದೂಧರ್ಮ ಕನ್ನಡ ಸಂಸ್ಕೃತಿಗೆ ಕೊಟ್ಟ ಕೊಡುಗೆಯನ್ನು ಪರಿಗಣಿಸುತ್ತಾರೆ ಎಂದರೆ ಅದು ಕೂಡ ಅವಾಸ್ತವಾದದ್ದು. ಯಾಕೆಂದರೆ ಆಲೂರರ ಹಿಂದೂಧರ್ಮ ಎಂದರೆ ಹಿಂದುತ್ವ. ಹಿಂದುತ್ವ ಪ್ರತಿಪಾದಿಸುವುದು ಹಿಂದೂ ಮೇಲ್ಜಾತಿಗಳ ಸಂಸ್ಕೃತಿಯನ್ನು ಮಾತ್ರ. ಆಲೂರರೂ ಇದಕ್ಕೆ ಹೊರತಲ್ಲ. ಹಿಂದೂ ಧರ್ಮದ ಅಸಂಖ್ಯಾತ ಜಾತಿ ಜನಾಂಗಗಳು ಕನ್ನಡ ಸಂಸ್ಕೃತಿಗೆ ಕೊಟ್ಟ ಕೊಡುಗೆಯ ಪ್ರಸ್ತಾಪ ಆಲೂರರಲ್ಲಿ ಬರುವುದಿಲ್ಲ.

೩.೨.೮ ವೈಚಾರಿಕ ಕರ್ನಾಟಕ ಮತ್ತು ಹಿಂದುತ್ವದ ಕರ್ನಾಟಕ

"ಕೊಲಂಬಸನು ಅಮೆರಿಕೆಯನ್ನು ಹುಡುಕಿ ತೆಗೆದಂತೆ, ನಾನೂ "ಕರ್ನಾಟಕ"ವನ್ನು ಹೊಸದಾಗಿ ಹುಡುಕಿ ತೆಗೆಯಬೇಕಾಯಿತು. ದೀರ್ಘ ವಿಚಾರ ಮಾಡಿ ಮತ್ತು ಅಭ್ಯಾಸ ಮಾಡಿ ಹುಡುಕಿ ತೆಗೆದೆ"[೧೫] ಎಂದು ಆಲೂರರು ತಮ್ಮನ್ನು ಕೊಲಂಬಸನಿಗೆ ಹೋಲಿಸಿಕೊಳ್ಳುತ್ತಾರೆ. ಆಲೂರರ ಈ ಹೋಲಿಕೆಯನ್ನು ಉಲ್ಲೇಖಿಸುತ್ತ ಡಿ.ಆರ್ ನಾಗರಾಜ್ ಅವರು 'ಆಲೂರರ ಈ ಮಾತುಗಳಿಗೆ ದೊಡ್ಡಕಾವ್ಯದಲ್ಲಿ ಬರುವ ರೂಪಕದ ಶಕ್ತಿ ಮತ್ತು ನಿಗೂಢತೆಗಳಿವೆ. ಚಾರಿತ್ರಿಕ ಸತ್ಯವೊಂದನ್ನು ಧಿಗ್ಗನೆ ಹೊಳೆಯಿಸುವ ಶಕ್ತಿ ಈ ಮಾತುಗಳಿಗೆ ಇದೆ' ಎಂದು ಅಭಿಪ್ರಾಯಪಡುತ್ತಾರೆ.

ಕನ್ನಡ ಚಿಂತನೆಯಲ್ಲಿ ಕೊಲಂಬಸ್‌ನ ಹೋಲಿಕೆ ಮತ್ತೊಂದು ಕಡೆ ಬರುತ್ತದೆ. ಹಿರಿಯ ಸಂಶೋಧಕ ಮಂಜೇಶ್ವರ ಗೋವಿಂದ ಪೈಗಳು ಶಂಬಾ ಅವರನ್ನು 'ಕೋಲಂಬಸ್' ಎಂದು ಕರೆಯುತ್ತಾರೆ. ನಮಗೆ ತಿಳಿಯದ ಇನ್ನೊಂದು ಕರ್ನಾಟಕವನ್ನು ನಿಮಗಿಂತ ಹೆಚ್ಚು ಆಳವಾಗಿ ಸಂಶೋಧನೆ ಮಾಡಿದವರನ್ನು ನಾನು ಅರಿಯೆ ಎನ್ನುತ್ತ ಶಂಬಾ ಅವರ ಸಂಶೋಧನೆಯನ್ನು 'ಕೋಲಂಬಸ್'ನ ಸಂಶೋಧನೆಗೆ ಪೈಗಳು ಹೋಲಿಸುತ್ತಾರೆ. 'ಪಾತಳಿ' ಕೃತಿಯಲ್ಲಿ ಉಲ್ಲೇಖವಾದಂತೆ ಅದು ಮುಂದಿನಂತಿದೆ : "So far I know, no spade else than yours has yet dived deeper into the dark and unknown part of Karnataka. Yours have been the greatest pains to reach the other side of that unknown past and I promise yours will be the glory of Columbus erelong" ಏಕೀಕರಣ ಚಳುವಳಿಯ ಮೂಲಕ ಭೌಗೋಳಿಕ ಕರ್ನಾಟಕವನ್ನು ಕಂಡು ಹಿಡಿದಿದ್ದರ ಶ್ರೇಯಸ್ಸಿನಲ್ಲಿನ ಸಿಂಹಪಾಲು ನಿಸ್ಸಂಶಯವಾಗಿ

ಆಲೂರರಿಗೆ ಸೇರಬೇಕು. ಆದರೆ ಈ ಭೌಗೋಳಿಕ ಕರ್ನಾಟಕದ ಮೇಲೆ ಅವರು ಕಟ್ಟಬಯಸಿದ್ದು ಸನಾತನ ಧರ್ಮ, ಹಿಂದುತ್ವ, ಬ್ರಾಹ್ಮಣತ್ವದಂತಹ ತರತಮಗಳನ್ನು ಪೋಷಿಸುವ ಮೌಲ್ಯಗಳ ಕರ್ನಾಟಕವನ್ನೇ ಹೊರತು ಸಾವಿರಾರು ವರ್ಷಗಳಿಂದ ಕನ್ನಡದ ಸಾಹಿತಿಗಳು, ವಚನಕಾರರು, ತತ್ವಪದಕಾರರು ಕಟ್ಟಿಟ್ಟಂತಹ ಜೀವಪರ ಮೌಲ್ಯಗಳುಳ್ಳ ಕರ್ನಾಟಕವನ್ನಲ್ಲ. ಇಂತಹ ಪರಂಪರೆಯ ವಾರಸುದಾರರು ವೈಚಾರಿಕವಾಗಿ ಕನ್ನಡಪ್ರಜ್ಞೆಯನ್ನು ರೂಪಿಸಲು ಯತ್ನಿಸಿದ ಶಂಬಾ ಜೋಶಿಯವರು. ಆಲೂರು ಮತ್ತು ಶಂಬಾ ಕಂಡು ಹಿಡಿದು ಕೊಟ್ಟ ಎರಡು 'ಕರ್ನಾಟಕಗಳಲ್ಲಿ" ಯಾವ ಕರ್ನಾಟಕವನ್ನು, ಯಾವ ಕರ್ನಾಟಕದ ಯಾವ ಅಂಶಗಳನ್ನು ಸ್ವೀಕರಿಸುತ್ತೇವೆ, ಯಾವ ಅಂಶಗಳನ್ನು ತ್ಯಜಿಸುತ್ತೇವೆ, ಒಟ್ಟಾರೆ ಯಾವ ಕರ್ನಾಟಕವನ್ನು ಮಾದರಿಯನ್ನಾಗಿ ಸ್ವೀಕರಿಸುತ್ತೇವೆ ಎನ್ನುವುದು ನಾವು ಕಟ್ಟಬಯಸುವ ಕರ್ನಾಟಕದ ಸ್ವರೂಪವನ್ನು ನಿರ್ಧರಿಸುವ ಸಂಗತಿಯಾಗಿದೆ.

೩.೨.೯ ಏಕೀಕರಣದ ಅಸಾಮಾನ್ಯತೆ, ಚಿಂತನೆಯ ಮಿತಿ

'ಕನ್ನಡದ ಏಕೀಕರಣದ್ದು ಅಸಾಮಾನ್ಯ ಸಾಹಸ. ಸ್ಥಳೀಯವಾಗಿರುವಂತಹ ಹಲವಾರು ತುಂಡುಗಳು, ಹಲವು ಸಂಸ್ಕೃತಿಗಳು, ಹಲವು ಇತಿಹಾಸಗಳು ಎಲ್ಲವನ್ನೂ ಸೇರಿಸಿಕೊಳ್ಳುವಂತಹ ಏಕೀಕರಣವದು.ಯಾವುದನ್ನು ಕುವೆಂಪು 'ಮೂಕ ಆಶಯ', ಯಾವುದನ್ನು ಸುಬ್ಬಣ್ಣ 'ಇನ್ನೂ ಮೂಡದ ಆಕೃತಿ' ಅಂತ ಗುರುತಿಸಿದ್ದರೋ ಅದಕ್ಕೆ ಮೂರ್ತ , ರಾಜಕೀಯ ಶರೀರವನ್ನು ಕೊಡುವ ಬಹುದೊಡ್ಡ ವೈಚಾರಿಕ ಸಾಹಸ. ಇವತ್ತು ಕರ್ನಾಟಕ ಇದೆ, ಕರ್ನಾಟಕದ ಗಡಿಗಳಿವೆ, ಕರ್ನಾಟಕದ ಮ್ಯಾಪ್‌ಗಳಿವೆ. ಅವು ಸುಲಭ ಸಾಧ್ಯವಾಗಿ ಕಾಣುತ್ತವೆ. ಆದರೆ ಏಕೀಕರಣಕ್ಕಾಗಿ ಹಲವಾರು ನೂರು ವರ್ಷಗಳವರೆಗೆ ತಮ್ಮದೇ ಸ್ವಂತ ಇತಿಹಾಸ ಸ್ಥಳೀಯ ಸಂಸ್ಕೃತಿಗಳು ಸೇರಿಕೊಂಡು ಕರ್ನಾಟಕ ಅಸ್ತಿತ್ವಕ್ಕೆ ಬರಬೇಕಾಗಿತ್ತು. ಏಕೀಕರಣವು ಇದನ್ನು ಸಾಧಿಸಿತು'. ಎಂದು ತಮ್ಮ 'ಅಸಮಗ್ರ' ಕೃತಿಯಲ್ಲಿ ರಾಜೇಂದ್ರ ಚೆನ್ನಿ ಅವರು ಅಭಿಪ್ರಾಯಪಡುತ್ತಾರೆ. ಇಂತಹ ಸಂಕೀರ್ಣವಾದ, ಸವಾಲಿನ, ದೀರ್ಘಕಾಲೀನ ಏಕೀಕರಣ ಚಳುವಳಿಯನ್ನು ಮುನ್ನಡೆಸಿದ ನಾಯಕರಲ್ಲಿ ಮುಂಚೂಣಿಯಲ್ಲಿದ್ದ ಆಲೂರರ ಕೊಡುಗೆ ಬಹಳ ಮಹತ್ವವಾದದ್ದು. ಆಲೂರರ ಇಂತಹ ಅಮೂಲ್ಯವಾದ ಕೊಡುಗೆಯನ್ನು ಏಕೀಕರಣಗೊಂಡ ಕರ್ನಾಟಕ ಉದ್ದಕ್ಕೂ ಗೌರವಿಸುತ್ತಲೇ ಬಂದಿದೆ. ಮುಂದೆಯೂ ಅವರಿಗೆ ಈ ಗೌರವ ಅಗತ್ಯ ಸಲ್ಲಲೇಬೇಕು. ಹೀಗೆ ಆಲೂರರನ್ನು ಗೌರವಿಸುವುದೂ, ಗೌರವಿಸುವ ಹೊತ್ತಿನಲ್ಲಿಯೂ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳ ಮಿತಿಗಳನ್ನೂ, ಅವು ಕನ್ನಡ ಬದುಕಿನ ಮೇಲೆ ಉಂಟುಮಾಡಿದ, ಉಂಟು ಮಾಡುತ್ತಿರುವ ಪರಿಣಾಮಗಳನ್ನೂ ಅರಿಯುವುದೂ ಕರ್ನಾಟಕದ ಜವಾಬ್ದಾರಿಯಾಗಿದೆ.

೩.೩ ಎಂ ಚಿದಾನಂದಮೂರ್ತಿ ಅವರ ಚಿಂತನೆಗಳು

೩.೩.೧ ಪೀಠಿಕೆ

ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರಾದ ಚಿದಾನಂದಮೂರ್ತಿ(೧೯೩೧) ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದವರು. 'ಕನ್ನಡ ಸಂಸ್ಕೃತಿ : ನಮ್ಮ ಹೆಮ್ಮೆ' ಪುಸ್ತಕ ಚಿದಾನಂದಮೂರ್ತಿ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳನ್ನು ಒಳಗೊಂಡಿದ್ದು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಬಹುಚರ್ಚಿತ ಕೃತಿಯಾಗಿದೆ. ಈ ಕೃತಿಯನ್ನೂ ಒಳಗೊಂಡ ಮೂರ್ತಿ ಅವರ ಸಮಗ್ರ ಬರಹಗಳ ಸಂಕಲನ 'ಚಿದಾನಂದಾಯಣ' ಪ್ರಕಟವಾಗಿದೆ.

'ಸ್ವಾಭಿಮಾನ ಮತ್ತು ಸಮನ್ವಯ'ಗಳನ್ನು ಕನ್ನಡ ಸಂಸ್ಕೃತಿಯ ತಿರುಳನ್ನಾಗಿ ಗ್ರಹಿಸುವ ಚಿದಾನಂದಮೂರ್ತಿ ಅವರು ಜನತೆಯ ಧರ್ಮ, ಮೌಲ್ಯ, ಕಲೆಗಳು, ಸಾಹಿತ್ಯ, ರಾಜಕೀಯ ವಿಧಾನ, ಉಡುಗೆ ತೊಡುಗೆ, ಆಹಾರ ವಿಧಾನಗಳು, ಉದ್ಯೋಗ, ಆರ್ಥಿಕ ಸ್ಥಿತಿ, ಕಾನೂನು, ಆಚರಣೆ ಇತ್ಯಾದಿ ಎಲ್ಲವನ್ನೂ ಸಂಸ್ಕೃತಿ ಒಳಗೊಳ್ಳುತ್ತದೆ[೧೬] ಎಂದು ವಿಶ್ಲೇಷಿಸುತ್ತಾರೆ. ಆದರೆ ಅನ್ಯಭಾಷಿಕರ ಯಜಮಾನ್ಯವನ್ನು ಒಪ್ಪಿಕೊಳ್ಳುವ ಗುಣ ದೌರ್ಬಲ್ಯವೇ ಹೊರತು ಸಮನ್ವಯವಲ್ಲ. ಕರ್ನಾಟಕಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ತನ್ನ ಭಾಷೆ, ಕಲೆ, ಜೀವನ ರೀತಿ, ಉದ್ಯೋಗಗಳನ್ನು ಅನ್ಯರ ಭಾಷೆ ಕಲೆಗಳು. ಅನ್ಯಜನ ಬಂದು ಆಕ್ರಮಿಸಿ ಆ ವೈಶಿಷ್ಟ್ಯದ ನಾಶವಾದರೆ ಅದು ಕನ್ನಡ ಸಂಸ್ಕೃತಿಯ ನಾಶವೇ ಸರಿ ಎಂದು ಅಭಿಪ್ರಾಯಪಡುವ ಚಿದಾನಂದಮೂರ್ತಿ ಅವರಿಗೆ, ಈ ರೀತಿ 'ಕನ್ನಡ ಸಂಸ್ಕೃತಿ' ಅನ್ಯಭಾಷಿಕರಿಂದ ನಾಶವಾಗುವ ನೆಲೆಗಳನ್ನು ಅರಿಯುವುದು ಮತ್ತು ಅದನ್ನು ತಡೆಯಲು ಮಾರ್ಗೋಪಾಯಗಳನ್ನು ಅರಸುವುದು ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಯ ಪ್ರಧಾನ ಭಿತ್ತಿಯಾಗಿದೆ.

೩.೩.೨ 'ವೀರತ್ವ'ವೇ ಪ್ರಧಾನವಾದ ಕರ್ನಾಟಕ ಸಂಸ್ಕೃತಿ

ಚಿದಾನಂದಮೂರ್ತಿ ಅವರು ಕರ್ನಾಟಕ ಸಂಸ್ಕೃತಿಯ ಉಗಮವನ್ನು ಗುರುತಿಸುವುದು ತಮಿಳುನಾಡಿನ ಪಲ್ಲವ ಕ್ಷತ್ರಿಯರಿಂದ ಅಪಮಾನಿತನಾಗಿ ಚಿತ್ರದುರ್ಗಕ್ಕೆ ಬಂದು ಸೈನ್ಯ ಕಟ್ಟಿ ಪಲ್ಲವರನ್ನು ಸೋಲಿಸಿ ಕದಂಬ ರಾಜ್ಯ ಕಟ್ಟಿದ ಮಯೂರಶರ್ಮನಿಂದ. "ಕರ್ನಾಟಕ ಸಂಸ್ಕೃತಿ ತನ್ನೆಲ್ಲ ವೈಶಿಷ್ಟ್ಯಗಳೊಡನೆ ರೂಪುಗೊಳ್ಳಲು ಆರಂಭವಾದದ್ದು ಒಂದು ಬಹು ಚಿಕ್ಕ, ಆದರೆ ಮುಂದಿನ ಪರಿಣಾಮಗಳ ದೃಷ್ಟಿಯಿಂದ ಅತ್ಯಂತ ಮಹತ್ವದ ಘಟನೆಯಿಂದ" ಎನ್ನುತ್ತ ಕನ್ನಡ ಸಂಸ್ಕೃತಿಯ ಉಗಮವನ್ನು ಚಿದಾನಂದಮೂರ್ತಿ ಅವರು ನಿರ್ದಿಷ್ಟಗೊಳಿಸುತ್ತಾರೆ. ಇದನ್ನು ವಿಶ್ಲೇಷಿಸುವ ಡಿ.ಆರ್ ನಾಗರಾಜ್ ಅವರು 'ಒಂದು ಚಿಕ್ಕ ಕುಸ್ತಿ ಎನ್ನಬಹುದಾದ ಘಟನೆಯನ್ನು ಚಿ.ಮೂ ಚಾರಿತ್ರಿಕ ರೂಪಕದ ಮಟ್ಟಕ್ಕೆ ಏರಿಸುತ್ತಾರೆ. ಜಗತ್ತಿನ ಯಾವುದೇ ಸಂಸ್ಕೃತಿಗಳ ಜತೆ ಎಲ್ಲ ದೃಷ್ಟಿಗಳಿಂದ

ಸಮನಾಗಿ ನಿಲ್ಲಬಲ್ಲ ಕನ್ನಡ ಸಂಸ್ಕೃತಿಯ ಪ್ರಾರಂಭ ಇಂಥ ಕ್ಷುದ್ರ ಘಟನೆಯಿಂದಲೇ ಎನ್ನಿಸಿ ಮನಸ್ಸು ಪೆಚ್ಚಾಗಿ ಬಿಡುತ್ತದೆ' ಎಂದು ವ್ಯಥೆಗೊಳ್ಳುತ್ತಾರೆ. ಆದರೆ ಸುಬ್ಬಣ್ಣನವರಂತೆ ಗೋವಿನ ಹಾಡು, ಕೆರೆಗೆ ಹಾರ, ಕವಿರಾಜಮಾರ್ಗ, ಪಂಪನ ಆದಿಪುರಾಣಗಳನ್ನು ಉಲ್ಲೇಖಿಸದೆ ಈ 'ಚಿಕ್ಕ ಕುಸ್ತಿ'ಯನ್ನೇ ಕರ್ನಾಟಕ ಸಂಸ್ಕೃತಿಯ ಉಗಮಕ್ಕೆ ಲಗತ್ತುಗೊಳಿಸುವ ಚಿದಾನಂದ ಮೂರ್ತಿ ಅವರಿಗೆ ನಿರ್ದಿಷ್ಟ ಉದ್ದೇಶವಿದೆ.

೧. **ಪಂಪ ಒಂದು ಕೈಯಲ್ಲಿ ಲೇಖನಿ, ಇನ್ನೊಂದು ಕೈಯಲ್ಲಿ ಖಡ್ಗ ಹಿಡಿದಿದ್ದನೆಂಬ ವ್ಯಾಖ್ಯಾನ :** ಸಾಹಿತ್ಯದ ಪ್ರಾಧ್ಯಾಪಕರಾದ ಮೂರ್ತಿ ಅವರು ಪಂಪನ 'ಮನುಷ್ಯ ಕುಲಂ ತಾನೊಂದೇ ವಲಂ' ಎಂಬ ಬಹುಪ್ರಸಿದ್ಧ ಸಾಲನ್ನು ಪ್ರಾಸಂಗಿಕವಾಗಿ ಉಲ್ಲೇಖಿಸುತ್ತರಾದರೂ ಅದರ ಅತ್ಯುನ್ನತ ಜೀವಪರ ಮೌಲ್ಯವನ್ನು ಪ್ರಸ್ತಾಪಿಸದೆ 'ಪಂಪನು ಸ್ವತಃ ಶೂರನೂ, ಕವಿಯೂ ಆಗಿದ್ದ. ಕೈಯಲ್ಲಿ ಲೇಖನಿ ಹಿಡಿದು ಕಾವ್ಯಗಳನ್ನು ಬರೆದಂತೆಯೇ ಖಡ್ಗವನ್ನು ಹಿಡಿದು ಯುದ್ಧವನ್ನು ಮಾಡುತ್ತಿದ್ದ'[೧೭] ಎಂದು ಆತನನ್ನು ಕ್ಷತ್ರೀಯ ವೀರನಂತೆ ಬಿಂಬಿಸಲು ಪ್ರಯತ್ನಿಸುತ್ತಾರೆ. ಪಂಪ ದಂಡನಾಯಕನಾಗಿದ್ದುದು ಆತ ಕವಿಯಾಗಿ ಗುರುತಿಸಿಕೊಳ್ಳುವುದಕ್ಕಿಂತ ಮುನ್ನ. ಕನಕದಾಸರು ಕೂಡ ಸೈನ್ಯದಲ್ಲಿ ದಂಡನಾಯಕರಾಗಿದ್ದರು ಎಂಬ ಐತಿಹ್ಯವಿದೆ. ನೋಬೆಲ್ ಪ್ರಶಸ್ತಿ ವಿಜೇತ ಅರ್ನೆಸ್ಟ್ ಹೆಮ್ಮಿಂಗ್ವೆ (೧೮೯೯-೧೯೬೧) ವಿಶ್ವದ ಮೊದಲ ಮಹಾಯುದ್ಧದಲ್ಲಿ ಭಾಗಿಯಾಗಿದ್ದ. ಈ ರೀತಿ ಅನೇಕರು ತಾವು ಲೇಖಕರಾಗಿ ಹೊರಮೊಮ್ಮುವ ಮುನ್ನ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದರು. ಇವರೆಲ್ಲ ಯುದ್ಧದ ದುರಂತಗಳನ್ನು ಅರಿತು ಅಲ್ಲಿಂದ ಹೊರಬಂದು ಸಾಹಿತ್ಯ ರಚನೆಯಲ್ಲಿ ತೊಡಗಿದ್ದವರು. ಏಕಕಾಲದಲ್ಲಿ 'ಕೈಯಲ್ಲಿ ಲೇಖನಿ ಹಿಡಿದು ಕಾವ್ಯಗಳನ್ನು ಬರೆದಂತೆಯೇ ಖಡ್ಗವನ್ನು ಹಿಡಿದು ಯುದ್ಧವನ್ನು ಮಾಡುವುದು ಸಾಧ್ಯವಿಲ್ಲ' ಎನ್ನುವುದು ಸಾಹಿತ್ಯದ ಪ್ರಾಧ್ಯಾಪಕರಾದ ಚಿದಾನಂದಮೂರ್ತಿ ಅವರಿಗೆ ಗೊತ್ತಿಲ್ಲದ ಸಂಗತಿಯಲ್ಲ. ಆದರೆ ಹಾಗೆ ಅವರು ಹೇಳದಿದ್ದರೆ ಅವರೇ ಮುಂದೆ 'ಕಟ್ಟಬಯಸುವ' ಕರ್ನಾಟಕ ಸಂಸ್ಕೃತಿಯ ಅಡಿಪಾಯ ಗಟ್ಟಿಯಾಗುವುದಿಲ್ಲ!

೨. **ಹ್ಯುಯೆನ್‌ತ್ಸಾಂಗನ ಪ್ರವಾಸ ಕಥನದ ಆಧಾರ :** ಚಿದಾನಂದಮೂರ್ತಿ ಅವರು ಉಲ್ಲೇಖಿಸುವ ಮುಂದಿನ ಸಂಗತಿಗಳನ್ನು ಗಮನಿಸಬೇಕು:

(ಅ)ಬಾದಾಮಿ ಚಾಲುಕ್ಯರ ಕಾಲವನ್ನು ಕರ್ನಾಟಕ ಸಂಸ್ಕೃತಿ ರೂಪುಗೊಂಡ ಕಾಲವೆಂದು ಚರಿತ್ರೆಕಾರರು ಗುರುತಿಸಿದ್ದಾರೆ. ಅವರ ಕಾಲದಲ್ಲಿ ಅದರಲ್ಲೂ ಇಮ್ಮಡಿ ಪುಲಕೇಶಿಯ ಕಾಲದಲ್ಲಿ (ಕ್ರಿ.ಶ. ೬೩೦) ಕನ್ನಡಿಗರ ಸ್ವಾಭಿಮಾನ, ಶೌರ್ಯ, ಧೈರ್ಯಗಳು ತಮ್ಮ ಚರಮಸೀಮೆಯನ್ನು ತಲುಪಿದವು.

(ಆ)ಉತ್ತರಾಪಥೇಶ್ವರನೆಂದು ಬೀಗುತ್ತಿದ್ದು ಹರ್ಷನನ್ನು ಸೋಲಿಸಿ ನರ್ಮದೆಗಿಂತ ಆಚೆಗೆ ಅಟ್ಟುವಷ್ಟು ಕರ್ನಾಟಕ ಸೇನೆಯು ಬಲಿಷ್ಠವಾಗಿತ್ತು.

(ಇ)ಹ್ಯುಯೆನ್ ತ್ಸಾಂಗನ ಪ್ರಕಾರ ಪುಲಕೇಶಿಯ ಪ್ರಜೆಗಳಾಗಿದ್ದ ಕನ್ನಡಿಗರು ಶೂರರೂ ಸ್ವಾಭಿಮಾನಗಳೂ ನಿಷ್ಠಾವಂತರೂ ಆಗಿದ್ದರು[೧೮]

ಇಲ್ಲೆಲ್ಲ ಚಿದಾನಂದಮೂರ್ತಿ ಅವರು ಕರ್ನಾಟಕ ಸಂಸ್ಕೃತಿಯನ್ನು ಗುರುತಿಸುವುದು ರಾಜರ ಶೌರ್ಯ, ಧೈರ್ಯ, ಅವರ ಸೈನ್ಯದ ಬಲಿಷ್ಠತೆ ಮತ್ತು ಸೈನಿಕರ, ಪ್ರಜೆಗಳ ಶೂರತನ ಮತ್ತು ನಿಷ್ಠಾವಂತಿಕೆಯ ಮೂಲಕ. ಪುಲಕೇಶಿಯ ಕಾಲದಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ್ದ ಚೀನಾದ ಯಾತ್ರಿಕ ಹ್ಯುಯೆನ್‌ತ್ಸಾಂಗನ ಪ್ರವಾಸ ಕಥನವನ್ನು ಉಲ್ಲೇಖಿಸಿ ಚಿದಾನಂದಮೂರ್ತಿ ಅವರು ಮಾಡುವ ಹೇಳಿಕೆಗಳು ಅನೇಕ ಪ್ರಶ್ನೆಗಳನ್ನು ಹುಟ್ಟಿಸುತ್ತವೆ. 'ಸ್ವಾಭಿಮಾನಿಗಳೂ, ನಿಷ್ಠಾವಂತರೂ ಆಗಿದ್ದ ಪುಲಕೇಶಿಯ ಪ್ರಜೆಗಳಾಗಿದ್ದ ಕನ್ನಡಿಗರಿಗೆ ಯುದ್ಧದಲ್ಲಿ ಸೋತು ತಿಳಿಯದು. ಅವರ ಹೆಂಡಿರು ಜಯವನ್ನು ಹಾರೈಸಿ ಯುದ್ಧರಂಗಕ್ಕೆ ಕಳಿಸಿಕೊಡುತ್ತಿದ್ದರು. ಒಂದು ವೇಳೆ ಸೋತು ಹಿಂತಿರುಗಿದರೆ ತಮ್ಮ ಪತ್ನಿಯರೇ ತಮಗೆ ಸೀರೆ ಬಳೆ ಕುಂಕುಮಗಳನ್ನು ಕೊಟ್ಟು ಅಪಮಾನ ಮಾಡಿಸುವರೆಂದು ಹೆದರಿ ಹೋರಾಡಿ ಮಡಿಯುತ್ತಿದ್ದರೇ ಹೊರತು ಸೋತು ಹಿಂದಕ್ಕೆ ಬರುತ್ತಿರಲಿಲ್ಲ. ತಾವೂ ಮದ್ಯವನ್ನು ಕುಡಿದು ಆನೆಗಳಿಗೂ ಮದ್ಯವನ್ನು ಕುಡಿಸಿ ಯುದ್ಧಕ್ಕೆ ನುಗ್ಗುತ್ತಿದ್ದ ಅವರನ್ನು ತಡೆಯುವ ಮತ್ತೊಂದು ಸೇನೆ ಅಂದಿನ ಭಾರತದಲ್ಲಿರಲಿಲ್ಲ. ಅಂತಹ ಶೂರ ಸೈನಿಕರ, ಸ್ವಾಭಿಮಾನಿ ಪ್ರಜೆಗಳ ಪ್ರೀತಿಯೇ ಪುಲಕೇಶಿಗೆ ನಿಜವಾದ ಕೋಟೆಯಾಗಿತ್ತು. ಹ್ಯುಯೆನ್‌ತ್ಸಾಂಗನ ಈ ಮಾತುಗಳು ಚಾಲುಕ್ಯರ ಕಾಲದ 'ವೀರಜೀವನಕ್ಕೆ ಒಂದು ಕಿಟಕಿ'ಯನ್ನು ಒದಗಿಸುತ್ತದೆ. ಕರ್ನಾಟಕದಲ್ಲಿ ದೊರಕುವಷ್ಟು ವೀರಗಲ್ಲುಗಳು ಭಾರತದ ಯಾವುದೇ ಭಾಗದಲ್ಲೂ ದೊರಕುವುದಿಲ್ಲ. ಶೂರರ ನಾಡು ಕರ್ನಾಟಕ.'[೧೯]

ಯಾವುದೇ ಪ್ರವಾಸಿಗನಿಗೆ ತನ್ನ ಪ್ರವಾಸದ ಕಾಲದಲ್ಲಿ ಒಂದು ನಾಡಿನ ಜೀವನವಿಧಾನ, ಸಂಸ್ಕೃತಿಯ ಪಕ್ಷಿನೋಟವಷ್ಟೇ ಸಿಗಬಹುದೇ ಹೊರತು ಸಂಪೂರ್ಣ ಚಿತ್ರಣವಲ್ಲ. ಇದನ್ನು ಮರೆತೂ ಹ್ಯುಯೆನ್ ತ್ಸಾಂಗ್ ಕೊಡುವ ಚಿತ್ರಣವನ್ನು ಒಪ್ಪಿಕೊಂಡರೂ ಸ್ತ್ರೀ ಅಸ್ಮಿತೆ, ಯುದ್ಧಗಳನ್ನು ಕುರಿತ ಚಿಂತನೆಗಳು ಅಭೂತಪೂರ್ವ ವಿಸ್ತಾರ ಪಡೆದ ಈ ಆಧುನಿಕ ಕಾಲಘಟ್ಟದಲ್ಲಿ ನಿಂತು ಆ ಪ್ರವಾಸಿಗ ಕೊಡುವ ಗತದ ಚಿತ್ರಣವನ್ನು ನೋಡುವ ಕ್ರಮ ಹೇಗಿರಬೇಕು ಎನ್ನುವುದು ಮುಖ್ಯವಾದ ಸಂಗತಿಯಾಗಿದೆ. ಇಲ್ಲಿ ಪ್ರಸ್ತಾಪವಾಗಿರುವುದು ರಾಜರ ನಡುವಿನ ಯುದ್ಧವೇ ಹೊರತು ಎರಡು ಭಾಷಿಕರ ನಡುವಿನ ಯುದ್ಧವಲ್ಲ. ಆದರೂ ಇದನ್ನು 'ಕರ್ನಾಟಕ ಸಂಸ್ಕೃತಿ'ಯಾಗಿ ಬಿಂಬಿಸುವುದರ ಹಿಂದೆ ಬೇರೆಯದೇ ಆದ ಉದ್ದೇಶಗಳಿರುವಂತಿವೆ. ಬಸವರಾಜ ಕಲ್ಗುಡಿ ಅವರು ಕಾಣುವಂತೆ 'ಕನ್ನಡದ ಸಂದರ್ಭದಲ್ಲಿ ಸಂಸ್ಕೃತಿಯ ಅಧ್ಯಯನದ ತಾಂತ್ರಿಕ ನೆಲೆಗಳು ಗಂಭೀರವಾಗಿ ನಡೆದಿರುವುದು ಬಹಳ ಕಡಿಮೆ. ಚರಿತ್ರೆಯ ಗತಿತರ್ಕವನ್ನು ರೂಪಿಸುವ ಅಸಂಖ್ಯಾತ ಸೃಜನಾತ್ಮಕ ಪ್ರಭೇದಗಳನ್ನು ಗೌಣವಾಗಿ ಕಂಡದ್ದು ಇದಕ್ಕೆ ಮುಖ್ಯ ಕಾರಣವಾದರೆ, ಇಡೀ ಕರ್ನಾಟಕ

ಸಂಸ್ಕೃತಿಯನ್ನು ಇತಿಹಾಸದ, ವೈಭವೀಕರಿಸಿದ ನೆನಪಿನ ಮಾದರಿಯ ಸ್ವರೂಪದಲ್ಲಿ ವಿವರಿಸಿದ್ದು ಇನ್ನೊಂದು ಕಾರಣ'

೩. ಚೈತನ್ಯದ ಆಶಯಗಳ ಬದಲಿಗೆ 'ವೀರತ್ವ'ದ 'ದೇಹತ್ಯಾಗ'ದ ಪ್ರತಿಪಾದನೆ : 'ಕನ್ನಡ ಶಾಸನಗಳು ಹಾಗೂ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಸಂಖ್ಯಾತವಾಗಿ ಸಿಗುವ ಹೋರಾಟ ಮಾಡುವ ಬಣಗಳ ದಾಖಲೆಗಳನ್ನು ಇಟ್ಟುಕೊಂಡು ಪ್ರಾಚೀನ ಕನ್ನಡ ಸಂಸ್ಕೃತಿಯಲ್ಲಿ 'ವೀರತ್ವ' ಒಂದು ಮೌಲ್ಯವಾಗಿತ್ತು ಎಂದು ನಿರ್ವಚಿಸಿದ ಉದಾಹರಣೆಗಳಿವೆ. ಹೋರಾಡಿ ಮಡಿದ ಸೈನಿಕರಿಗೆ ನೆಟ್ಟ ಸ್ಮಾರಕಗಳನ್ನು 'ವೀರಗಲ್ಲು' ಎಂದು ಅನೇಕ ಶಾಸನಗಳಲ್ಲೇ ಕರೆಯಲಾಗಿದೆ. ಅದು ದೊಡ್ಡ ಸಾಮ್ರಾಜ್ಯಗಳ ಅಳಿವಿನೊಡನೆ ಸಣ್ಣಪುಟ್ಟ ಅರಸುಮನೆತನಗಳು ಹುಟ್ಟಿಕೊಳ್ಳುತ್ತಿದ್ದ ಕಾಲ. ಅನಿವಾರ್ಯವಾಗಿ ಎಲ್ಲರೂ ತಮ್ಮ ತಮ್ಮ ಪ್ರದೇಶಗಳ ರಕ್ಷಣೆಗಾಗಿ ಹೋರಾಟವನ್ನು ಅವಲಂಬಿಸಿದ್ದ ಕಾಲ. ಆತ್ಮಬಲಿಯ ಹಲವು ಸ್ವರೂಪಗಳು ಹುಟ್ಟಿಕೊಂಡಿದ್ದು ಈ ಸಂದರ್ಭದಲ್ಲಿ. ಇದನ್ನು ವೀರಮೌಲ್ಯವೆಂದು ರಾಜಸತ್ತೆ ವಿಜೃಂಭಿಸಿ ನುಡಿಯುವುದು ಅನಿವಾರ್ಯವಾಗಿದೆ. ರಾಜಸತ್ತೆ ಮತ್ತು ಪುರೋಹಿತಶಾಹಿ ಕೂಡಿ ಪ್ರಚುರಪಡಿಸಿದ ಹೋರಾಟವನ್ನು ಕುರಿತ ಸಂಸ್ಕೃತ ಶ್ಲೋಕ ಶಾಸನಗಳಲ್ಲಿ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುತ್ತದೆ. ರಾಜಸತ್ತೆಯ ಪರವಾದ ಈ 'ವೀರತ್ವ' ಸಮಾಜದಲ್ಲಿ ಒಪ್ಪಿತವಾದ ಒಂದು ಮೌಲ್ಯವಾಗಿದ್ದರೆ, ಕನ್ನಡ ಸಂಸ್ಕೃತಿಯ ಈ ಪ್ರಶ್ನೆಯನ್ನು ಬಿಡಿಸಲಿಕ್ಕೆ ಶಾಸನಗಳನ್ನು ಹುಡುಕಿದರೆ ಯಾವ ಲಾಭವೂ ಇಲ್ಲ. ಜಾನಪದ ಅಭಿವ್ಯಕ್ತಿಗಳಲ್ಲಿ ಕಾವ್ಯದ ಸಾಂಸ್ಕೃತಿಕ ಧ್ವನಿಯನ್ನು ಹುಡುಕಹೊರಟರೆ ದೇಹಬಲಿಯ ವಿರುದ್ಧ ತೀವ್ರ ಆಕ್ರೋಶವು ಇಲ್ಲಿ ಜೀವಾಳವಾಗಿರುವುದು ಕಂಡುಬರುತ್ತದೆ. ಕರ್ನಾಟಕದ ಭಕ್ತಿ ಚಳುವಳಿಗಳಾದ ವಚನ ಚಳುವಳಿ ಮತ್ತು ದಾಸ ಚಳುವಳಿ ಮತ್ತು ಸೂಫಿಸಂತರ ಅಭಿವ್ಯಕ್ತಿಗಳಲ್ಲಿ ರಾಜಸತ್ತೆ ರೂಪುಗೊಳಿಸಿದ್ದ 'ದೇಹತ್ಯಾಗ'ದ ಮೌಲ್ಯಕ್ಕೆ ವಿರುದ್ಧವಾಗಿ ದೇಹ ಹಾಗೂ ಅದು ಬೆಳೆಸಿಕೊಳ್ಳಬೇಕಾದ ಚೈತನ್ಯದ ಆಶಯಗಳ ಕಡೆಗಿನ ಆಶಯವಿದೆ'[೨೦] ಆದರೆ ಕನ್ನಡ ಸಂಸ್ಕೃತಿಯಲ್ಲಿ 'ವೀರತನ'ವನ್ನೇ ಹುಡುಕಹೊರಡುವ ಚಿದಾನಂದಮೂರ್ತಿ ಅವರಿಗೆ ಅದರೊಳಗಿರುವ ವೈರುಧ್ಯಗಳಾಗಲೀ, ಇದಕ್ಕೆ ವಿರುದ್ಧವಾಗಿ ಕನ್ನಡ ಸಂಸ್ಕೃತಿ ಕಟ್ಟಿಕೊಂಡ ಜೀವಪರ ಮೌಲ್ಯಗಳ ಮಾದರಿಗಳಾಗಲೀ ಕಾಣುವುದಿಲ್ಲ. ಇದರ ಮೂಲ ಚಿದಾನಂದಮೂರ್ತಿ ಅವರ ಸಂಶೋಧನಾ ಮಾದರಿಯಲ್ಲಿಯೇ ಇದೆ. ಚಿದಾನಂದಮೂರ್ತಿ ಅವರ ಸಂಶೋಧನೆಯ ಮುಖ್ಯ ಚಹರೆಗಳೆಂದರೆ, ಅಲ್ಲಿ ಪ್ರಭುಗಳು ಮುಖ್ಯರಾಗಿರುತ್ತಾರೆ. ಜನ ಅವರಿಗೆ ಪೂರಕವಾಗಿರುತ್ತಾರೆ; ಅಲ್ಲಿ ಕೆಲವರ ಕಥನವಿರುತ್ತದೆ., ಬಹುಸಂಖ್ಯಾತರ ಬದುಕಿನ ವಿವರಗಳಿರುವುದಿಲ್ಲ; ಉಳ್ಳವರು ಕಟ್ಟಿಸಿದ ವಾಸ್ತುಶಿಲ್ಪಗಳಿರುತ್ತವೆ, ಅವನ್ನು ಕಟ್ಟಿದ ಕೆಲಸಗಾರರ ಸುಳಿವು ಕಾಣದು; ಅಲ್ಲಿ ಗತವಿರುತ್ತದೆ, ಅದಕ್ಕೆ ವರ್ತಮಾನದ

ಸಂಬಂಧದ ಕೊಂಡಿ ಕಳಚಿರುತ್ತದೆ; ಅಲ್ಲಿ ವಾಸ್ತವಿಕತೆಗಿಂತ ವೈಭವೀಕರಣ ಹೆಚ್ಚಿರುತ್ತದೆ. ಕಳೆದ ಬದುಕಿನ ಬಗ್ಗೆ ಹಳಹಳಿಕೆಯಿರುತ್ತದೆ. ಭವಿಷ್ಯದ ಕನಸಿರುವುದಿಲ್ಲ.[೨೧]

೪. ಅನ್ಯಭಾಷಿಕರ ವಿರುದ್ಧ ಯುದ್ಧ : ತಮ್ಮ ಹಿತಾಸಕ್ತಿಗಾಗಿ ರಾಜಸತ್ತೆ ಆದರ್ಶವೆಂದು ಬಿಂಬಿಸಿದ 'ವೀರತ್ವ' ಮೌಲ್ಯವನ್ನು ಪ್ರಜಾಪ್ರಭುತ್ವ ವ್ಯವಸ್ಥೆಯ ಸಮಕಾಲೀನ ಕಾಲಘಟ್ಟದಲ್ಲೂ ಪ್ರಜೆಗಳಲ್ಲಿ ನಿರೀಕ್ಷಿಸುವ ಚಿದಾನಂದಮೂರ್ತಿ ಅವರು ಹುಲಿಮರಿ 'ವನರಾಜ'ನಾಗಿ ಮೆರೆದ ಹುಲಿಮರಿ ಕುರಿಗಳೊಂದಿಗಿದ್ದಾಗಿನ ಕಥೆಯನ್ನು ಉಲ್ಲೇಖಿಸುತ್ತ ಕನ್ನಡಿಗರ 'ಸ್ವರೂಪಜ್ಞಾನ ಅವರಿಗೆ ತಾತ್ಕಾಲಿಕವಾಗಿ ಮರೆಯಾಗಿದೆ'[೨೨] ಎಂದು ವ್ಯಥೆಪಡುವುದು 'ಈಗ ಕನ್ನಡಿಗರು ಯಾರ ವಿರುದ್ಧ ಯುದ್ಧ ಮಾಡಬೇಕಾಗಿದೆ' ಎಂಬ ಪ್ರಶ್ನೆಯನ್ನು ಹುಟ್ಟು ಹಾಕುತ್ತದೆ.

ಚಿದಾನಂದಮೂರ್ತಿ ಅವರ ಚಿಂತನೆಗಳಲ್ಲಿಯೇ ಕಾಣುವಂತೆ ಕನ್ನಡಿಗರ ಶತ್ರುಗಳು ಅನ್ಯಭಾಷಿಕರು. ಇದಕ್ಕೆ ಉತ್ತರವನ್ನು ಚಿದಾನಂದಮೂರ್ತಿ ಅವರೇ ನೀಡುತ್ತಾರೆ. 'ಕ್ರಿ.ಶ.೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯವು ಮಣ್ಣುಪಾಲಾದ ರಕ್ಕಸತಂಗಡಿ ಯುದ್ಧದ ಬಳಿಕ ಕನ್ನಡಿಗನಿಗೆ ಜೀವಸತ್ವವನ್ನು ಒದಗಿಸುತ್ತಿದ್ದ ದೊಡ್ಡ ರಾಜಮನೆತನಗಳು ಮರೆಯಾದವು. ಇಲ್ಲಿಂದ ೨೦ನೆಯ ಶತಮಾನದವರೆಗಿನ ಚರಿತ್ರೆಯ ಘಟನೆಗಳು ಕನ್ನಡಿಗರನ್ನು ಅಧೀರರನ್ನಾಗಿ ಮಾಡಿದವು. ಕರ್ನಾಟಕವು ಅನ್ಯಭಾಷಿಕರ ಆಡಂಬೋಲವಾಯಿತು'[೨೩] 'ಏಳಿ ಎದ್ದೇಳಿ!, ಅನ್ಯಭಾಷೆಯ ಸೋದರರು ಕರ್ನಾಟಕಕ್ಕೆ ಬಂದು ಕರ್ನಾಟಕವು ತಮ್ಮ ವಸಾಹತುಗಳಾಗುವಂತೆ ಮಾಡುತ್ತಿದ್ದಾರೆ. ಇದನ್ನು ತಡೆಯದಿದ್ದರೆ ಕನ್ನಡವು ಸರ್ವನಾಶವಾಗುತ್ತದೆ. ಧೀರರಾದ ಅಸ್ಸಾಮ್ ಯುವಕರು ಹೋರಾಡಿ ತಮ್ಮ ಪ್ರಾಂತ್ಯವನ್ನು ವಿನಾಶದಿಂದ ತಪ್ಪಿಸಿದರು. ಅಂತಹ ಹೋರಾಟಕ್ಕೆ ಕನ್ನಡದ ಜನ ಸಿದ್ಧರಾಗಬೇಕಾಗಿದೆ. ಗಡಿಗಳಲ್ಲಿ ಮರಾಠಿಗರು, ತಮಿಳರು, ಮಲೆಯಾಳಿಗಳು ಕನ್ನಡವನ್ನು ಲೆಖ್ಖಿಸುತ್ತಿಲ್ಲ. ಭವಿಷ್ಯದ ಬೆಂಗಳೂರು ಗಾಬರಿಯನ್ನು ಹುಟ್ಟಿಸುತ್ತದೆ'[೨೪] ಎಂದವರು ಎಚ್ಚರಿಸುತ್ತಾರೆ.

ಜಾಗತೀಕರಣದ ಫಲವಾಗಿ ಬೆಂಗಳೂರಿಗೆ ದೌಡಾಯಿಸಿದ ಬಹುರಾಷ್ಟ್ರೀಯ ಕಂಪನಿಗಳು ಕಸಿದ ಸ್ಥಳೀಯ ಕನ್ನಡಿಗರ ಉದ್ಯೋಗವಕಾಶ, ಉದ್ಯಮವಕಾಶಗಳು ಚಿದಾನಂದಮೂರ್ತಿ ಅವರಲ್ಲಿ ಸಹಜ ಆತಂಕ ಸೃಷ್ಟಿಸಿದಂತೆ ತೋರುತ್ತದೆ. ಚಿದಾನಂದಮೂರ್ತಿ ಅವರು ಊಹಿಸಿಕೊಳ್ಳುವಂತೆ ಭವಿಷ್ಯದ ಬೆಂಗಳೂರು ಗಾಬರಿಯನ್ನು ಹುಟ್ಟಿಸುವುದು ಹೌದು. ಆದರೆ ಇದಕ್ಕಿಂತಲೂ ಹೆಚ್ಚಿನ ಗಾಬರಿ ಹುಟ್ಟಿಸುವುದು ಬೆಂಗಳೂರು ಸೇರಿದಂತೆ ಕರ್ನಾಟಕವು ಅನ್ಯಭಾಷಿಕರ ವಶವಾಗದಂತೆ ತಡೆಯಲು ಚಿದಾನಂದಮೂರ್ತಿ ಅವರು ಸೂಚಿಸುವ ಅಸ್ಸಾಮ್ ಯುವಕರ ರಕ್ತಸಿಕ್ತ ಹೋರಾಟಗಳ ಮಾದರಿ. ಬದುಕಿನ ಅನಿವಾರ್ಯ ಕಾರಣಕ್ಕೆ ಉದ್ಯೋಗವರಸಿ ಕರ್ನಾಟಕಕ್ಕೆ ವಲಸೆ ಬರುವ ಅನ್ಯಭಾಷಿಕರನ್ನು ಶತ್ರುಗಳೆಂದು ಗುರುತಿಸುವ ಈ ಚಿಂತನೆ ಕನ್ನಡಕ್ಕೆ ನಿಜಕ್ಕೂ ಕುತ್ತಾಗಿರುವ ಬಂಡವಾಳಿಗರು ಮತ್ತು ಬಹುರಾಷ್ಟ್ರೀಯ ಕಂಪನಿಗಳನ್ನು 'ಬೈಪಾಸು' ಮಾಡುತ್ತವೆ. ಈ ಚಿಂತನೆ

ಬಹುಬೇಗ ಬಲಪಂಥೀಯತ್ತ ಸಾಗುವ ಗುಣವನ್ನು ಹೊಂದಿದೆ. ಅಸ್ಸಾಮಿನ ಧೀರ ಯುವಕರ ಮಾದರಿಯ ಹೋರಾಟ ಅನ್ಯಭಾಷಿಕರನ್ನು ಸದೆಬಡಿದು ಕರ್ನಾಟಕವನ್ನು ರಕ್ಷಿಸಬಹುದು. ಆದರೆ ಇಲ್ಲಿ ಜೀವ ಕಳೆದುಕೊಳ್ಳುವವರು, ಅಂಗವಿಕಲರಾಗುವವರು ಆಳುವವರಲ್ಲ. ಬಡತನದ ಕಾರಣಕ್ಕೆ ಉದ್ಯೋಗವರಸಿ ಬಂದ ಬಡ ಅಸಹಾಯಕ ದುಡಿಯುವ ವರ್ಗದ ಜನ. 'ಬಡತನ ಮತ್ತು ನಿರುದ್ಯೋಗ ಕರ್ನಾಟಕದಲ್ಲಿ ಮಾತ್ರ ಇರುವುದಿಲ್ಲ. ಆ ಸಮಸ್ಯೆಗಳಿಗೆ ಕರ್ನಾಟಕ, ಬಿಹಾರ ಎಂಬ ಭೇದವಿಲ್ಲ. ಕರ್ನಾಟಕದಲ್ಲಿ ಬಲಿಷ್ಠರಾಗಿರುವ ಕನ್ನಡಿಗರೇ ಬಡಕನ್ನಡಿಗರಿಗೆ ಅನ್ನ, ವಸತಿ, ಶಿಕ್ಷಣ, ಆರೋಗ್ಯಗಳ ಕನಿಷ್ಟ ಸೌಲಭ್ಯಗಳನ್ನು ನಿರಾಕರಿಸುವ ವಾಸ್ತವದ ಬಗ್ಗೆ' ನಮ್ಮ ಪ್ರತಿಕ್ರಿಯೆ ಏನು ಎಂದು ಜಿ.ರಾಜಶೇಖರ್ ಅವರು ಕೇಳುವ ಪ್ರಶ್ನೆಗೆ ಚಿದಾನಂದಮೂರ್ತಿ ಅವರ ಚಿಂತನೆಗಳಲ್ಲಿ ಉತ್ತರ ಸಿಗುವುದಿಲ್ಲ.

'ಕನ್ನಡಿಗರ ರಕ್ತದಲ್ಲಿ ತ್ಯಾಗ, ಆಧ್ಯಾತ್ವ ಇವೆಯಾದರೂ ಅವು ಹೇಡಿತನದಿಂದ ಬಂದವಲ್ಲ; ಪೌರುಷ, ಆತ್ಮಾಭಿಮಾನದಿಂದ ಬಂದಂಥವು'' 'ಕರ್ನಾಟಕದಲ್ಲಿ ಕನ್ನಡ ಮಕ್ಕಳು ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ. ಕೇಂದ್ರದಲ್ಲಿ ಕನ್ನಡಿಗರ ಧ್ವನಿ ಇಲ್ಲವೇ ಇಲ್ಲ. ಇಂತಹ ಸಂದರ್ಭದಲ್ಲಿ ಕನ್ನಡ ಜನ ಒಗ್ಗಟ್ಟಿನಿಂದ ನಿಂತು ತಮ್ಮೆಲ್ಲ ಶಕ್ತಿಯನ್ನು ಬಳಸಿ ತಮ್ಮ ಆತ್ಮರಕ್ಷಣೆ ಮಾಡಿಕೊಳ್ಳಬೇಕಾಗಿದೆ'[೨೫] ಎಂದು ಭಾಷಿಕರನ್ನು ಸದಾ ಎಚ್ಚರಿಸುತ್ತಲೇ ಇರುವ ಮೂಲಭೂತವಾದಿ ನೆಲೆಯ ಚಿಂತನೆಗಳು ಯಾವತ್ತೂ ಪ್ರಜಾತಾಂತ್ರಿಕ ಮಾದರಿಯ ಪರಿಹಾರಗಳಿಗೆ ಬದಲು 'ವೀರತ್ವ' ದ ಮಾದರಿಗಳನ್ನೇ ನೆಚ್ಚುತ್ತದೆ. ಈ ಚಿಂತನೆಗಳು 'ತನ್ನೊಳಗಿನ ವರ್ಗ ವೈರುಧ್ಯಗಳನ್ನು ಮರೆಮಾಚುತ್ತವೆ, ಜಾತಿ, ಲಿಂಗ ಮುಂತಾದ ತರತಮ ಭಾವನೆಗಳನ್ನು ಮರೆತಂತೆ ಈ ಸಿದ್ಧಾಂತ ವರ್ತಿಸುತ್ತದೆ'[೨೬] ಇಂತಹ ಚಿಂತನೆಗಳಿಂದ ಪ್ರೇರಣೆ ಪಡೆದ ಸಂಘರ್ಷಗಳಲ್ಲಿನ ಜಯ-ಅಪಜಯಗಳೇನೇ ಇರಲಿ, ರಾಜಪ್ರಭುತ್ವದ ಕಾಲದಲ್ಲಾಗಲೀ, ಈಗಿನ ಪ್ರಜಾಪ್ರಭುತ್ವದ ಕಾಲದಲ್ಲಾಗಲೀ ಈ ವೀರತ್ವದ ಹೋರಾಟಗಳಲ್ಲಿ ಜೀವ ಕಳೆದುಕೊಳ್ಳುವವರು, ಬದುಕು ಕಳೆದುಕೊಳ್ಳುವವರು ಮಾತ್ರ ಯಾವಾಗಲೂ ಇದರ ಹಿಂದಿನ ರಾಜಕಾರಣ ಅರಿಯದ ಅಮಾಯಕ ಕೆಳವರ್ಗದ ಜನರೇ ಆಗಿರುತ್ತಾರೆ. ಇಂತಹ ಚಿಂತನೆಗಳನ್ನು 'ಕರ್ನಾಟಕವನ್ನೇ ಅಲಾಯದವಾಗಿಟ್ಟು ಅದೇ ಏಕಮಾತ್ರ ವಾಸ್ತವ, ಭಾಷಾಕೇಂದ್ರಿತ ವಾಸ್ತವ ಎಂದು ನೋಡುವ ಆತಂಕ ಕೇಂದ್ರಿತ ರಾಷ್ಟ್ರೀಯತೆ' ಎಂದು ಡಿ.ಆರ್ ನಾಗರಾಜ್ ಗುರುತಿಸುತ್ತಾರೆ. ಹೀಗೆ ಗುರುತಿಸುವ ಮೂಲಕ ಇಂತಹ ಜೀವ ವಿರೋಧಿ ಚಿಂತನೆಗಳಿಗೆ ಸೈದ್ಧಾಂತಿಕತೆ ಲಗತ್ತಿಸಿ ಗಹನತೆ ತಂದುಕೊಟ್ಟಿರುವುದು ಕನ್ನಡ ಚಿಂತನೆಯ ಒಂದು ಬೌದ್ಧಿಕ ಪ್ರಮಾದವಾಗಿದೆ.

ಆಲೂರರ ಚಿಂತನೆ ಏಕೀಕರಣ ಪೂರ್ವದಲ್ಲಿ ರೂಪುಗೊಂಡಿದ್ದರಿಂದ ಅವರ ಪ್ರಧಾನ ಆದ್ಯತೆ ಭೌಗೋಳಿಕ ಕರ್ನಾಟಕವನ್ನು ಕಟ್ಟುವುದಾಗಿತ್ತು. ಚಿದಾನಂದಮೂರ್ತಿ ಅವರು ಸ್ನಾತಕೋತ್ತರ ಪದವಿ ಪಡೆದು (೧೯೫೭) ಹೊರಬರುವ ವೇಳೆಗಾಗಲೇ ಭೌಗೋಳಿಕ ಕರ್ನಾಟಕ

ಸಾಕಾರವಾಗಿತ್ತು. ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರಪ್ರದೇಶಕ್ಕೆ ಕರ್ನಾಟಕದ ಗಡಿಭಾಗದ ಕೆಲವು ಊರುಗಳು ಸೇರಿದ್ದು ಈ ಕುರಿತ ಆಕ್ರೋಶ ಮತ್ತು ಇವು ಮರಳಿ ಕರ್ನಾಟಕಕ್ಕೆ ಸೇರ್ಪಡೆಯಾಗಬೇಕು ಎನ್ನುವ ಚಿದಾನಂದಮೂರ್ತಿ ಅವರ ಚಿಂತನೆಯಷ್ಟೇ ಭೌಗೋಳಿಕ ಕರ್ನಾಟಕಕ್ಕೆ ಸಂಬಂಧಿಸಿದ್ದಾಗಿತ್ತು. ಈ ಬೆಳವಣಿಗೆಯನ್ನು ಕುರಿತು '೮೦ ರ ದಶಕದ ಕರ್ನಾಟಕದ ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ನಡೆದ ಬದಲಾವಣೆಗಳು ಚಿದಾನಂದಮೂರ್ತಿಯರನ್ನು ಆಳವಾಗಿ ಪ್ರಭಾವಿಸಿರುವಂತಿದೆ. ವಲಸೆ ಸಮಸ್ಯೆ, ನಿರುದ್ಯೋಗ, ಜಾಗತೀಕರಣದ ಪೂರ್ವ ತಯಾರಿಯ ಫಲವಾಗಿ ಹರಿದು ಬಂದ ಬಂಡವಾಳ, ಕೇಂದ್ರದಲ್ಲಿ ಬಲಪಂಥೀಯ ಪಕ್ಷವು ಅಧಿಕಾರಕ್ಕೆ ಏರಲು ಪಡುತ್ತಿದ್ದ ಸಾಹಸ, ಇತ್ಯಾದಿಗಳೆಲ್ಲವೂ ಅವರ ಈ ಘಟ್ಟದ ಚಿಂತನೆಗಳ ಮೇಲೆ ಪ್ರಭಾವಿಸಿರುವಂತಿದೆ. ಇದರ ಫಲವಾಗಿಯೇ 'ಮಿಲಿಟೆಂಟ್' ಸ್ವರೂಪದ 'ಹಿಂದುತ್ವ' ರಾಷ್ಟ್ರ ಮಾದರಿಯನ್ನು ಮುಂದಿಡಲು ಪ್ರಾರಂಭಿಸುತ್ತಾರೆ. ಈ ಹಂತದಲ್ಲಿ, ಇಸ್ಲಾಂ, ಕ್ರೈಸ್ತ, ಬೌದ್ಧ ಧರ್ಮಗಳ ಕುರಿತು ನಿರಾಕರಣೆಯ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಭಾರತದ ಎಲ್ಲ ಕೇಡುಗಳಿಗೆ ಈ 'ಅನ್ಯಧರ್ಮ' 'ಅನ್ಯವಿಚಾರಗಳು' ಕಾರಣ ಎಂದು ಬಲವಾಗಿ ಪ್ರತಿಪಾದಿಸುತ್ತಿದ್ದಾರೆ'[೨೭] ಎಂದು ಕನ್ನಡ ಚಿಂತನೆ ವಿಶ್ಲೇಷಿಸಿದೆ. ಹೀಗೆ ವಿವರಿಸುವ ವಿಶ್ಲೇಷಣೆಯೂ ಉತ್ಪ್ರೇಕ್ಷೆಯಿಂದ ಕೂಡಿದೆ ಅನ್ನಿಸುತ್ತದೆ. ಸಮಾಜದಲ್ಲಿ ಉಂಟಾದ ತಲ್ಲಣಗಳನ್ನು ಕಂಡು ತಳಮಳಿಸುವ ಒಬ್ಬ ಸಂಶೋಧಕ ಇಂತಹ ತಲ್ಲಣಗಳಿಗೆ ನಿಜವಾದ ಕಾರಣಗಳನ್ನು ಸಂಶೋಧನಾ ವಿಧಾನದಲ್ಲಿ ಕಂಡು ಹಿಡಿಯದೆ ಕುರುಡಾಗಿ ಇಂತಹ ತಲ್ಲಣಗಳಿಗೆ ಒಂದು ಜನಸಮುದಾಯವನ್ನು ಗುರಿ ಮಾಡುತ್ತಾರೆ ಎಂದರೆ ಅವರ ತಳಮಳದ ಅಸಲೀತನದ ಬಗ್ಗೆಯೇ ಅನುಮಾನಗಳು ಹುಟ್ಟುತ್ತವೆ.

ಏಕೀಕರಣೋತ್ತರ ಸಂದರ್ಭದಲ್ಲಿ ಕನ್ನಡ ಭಾಷೆ ಎದುರಿಸಿದ ಸವಾಲುಗಳ ಮುಖಾಮುಖಿಯಲ್ಲಿ ಚಿದಾನಂದಮೂರ್ತಿ ಅವರ ಚಿಂತನೆಗಳು ರೂಪುಗೊಂಡಿವೆ. ಅದು ಶೈಕ್ಷಣಿಕ, ವೈಜ್ಞಾನಿಕ ಪ್ರಭಾವಗಳಿಂದ ರೂಪುಗೊಳ್ಳದೆ ಅಪ್ರಜಾತಾಂತ್ರಿಕ ರಾಜಕೀಯ ಚಿಂತನೆಗಳ ಪ್ರಭಾವದಿಂದ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ. ಹಾಗಾಗಿಯೇ ಕನ್ನಡಕ್ಕೆ ಕಂಟಕಗಳು ಎದುರಾಗಿವೆ ಅನ್ನಿಸಿದಾಗಲೆಲ್ಲಾ ತಮಿಳನ್ನೋ, ಉರ್ದುವನ್ನೋ, ಆಡಳಿತ ಕ್ಷೇತ್ರದಲ್ಲಿ ಕನ್ನಡ ಜಾರಿಗೊಳಿಸಲು ತೊಡಕಾಗಿರುವ ಅಧಿಕಾರಶಾಹಿಯನ್ನೋ ಗುರಿಯಾಗಿಸುತ್ತದೆ. ವಾಸ್ತವದಲ್ಲಿ ಕನ್ನಡ ಭಾಷೆಗೆ ನಿಜವಾಗಿ ಕಂಟಕವಾಗಿರುವ ಇಂಗ್ಲಿಶ್, ಹಿಂದಿ, ಸಂಸ್ಕೃತಗಳು ಮತ್ತು ಅದರ ಹಿಂದೆ ಕಾರ್ಯನಿರ್ವಹಿಸುತ್ತಿರುವ ಪ್ರಭುತ್ವ ಶಕ್ತಿಗಳು, ಆಳುವ ವರ್ಗಗಳು ಅವರ ಚಿಂತನೆಗಳಿಂದ ತಪ್ಪಿಸಿಕೊಳ್ಳುತ್ತವೆ. ಮೂಲತಃ ಅವರು ಭಾಷಾ ವಿದ್ವಾಂಸರು. ಆದರೆ ಭಾಷಾ ವೈಜ್ಞಾನಿಕ ಸಮಸ್ಯೆಗಳನ್ನು ನೋಡುವಲ್ಲಿ ವಿಫಲಗೊಂಡಿರುವುದು ಆಶ್ಚರ್ಯಕರ ಎಂಬ ರಂಗನಾಥ ಕಂಟನಕುಂಟೆ ಅವರ ಗ್ರಹಿಕೆ ಸರಿಯಾದುದ್ದಾಗಿದೆ.

೩.೩.೪ ಹಲವು ಜನಾಂಗಗಳ, ಧರ್ಮಗಳ ಕೊಡುಗೆಯ ಅವಗಣನೆ

ಚಿದಾನಂದಮೂರ್ತಿ ಅವರ 'ಕನ್ನಡ ಸಂಸ್ಕೃತಿ'ಯ ವ್ಯಾಖ್ಯಾನದಲ್ಲಿರುವ ಮೊದಲ ಪದವೇ 'ಧರ್ಮ'. ಒಂದು ಭಾಷೆಯ ಸಂಸ್ಕೃತಿಯ ನಿರ್ಮಿತಿಯಲ್ಲಿ 'ಧರ್ಮ' ವಹಿಸುವ ಪಾತ್ರವನ್ನು ದೊಡ್ಡ ವ್ಯಾಪ್ತಿಯಲ್ಲಿ ಈ ಚಿಂತಕರು ಗ್ರಹಿಸುತ್ತಾರೆ ಎಂಬ ಭಾವನೆಯನ್ನು ಇದು ಸಹಜವಾಗಿಯೇ ಮೂಡಿಸುತ್ತದೆ. ವಿವಿಧ ಧರ್ಮಗಳು ಕನ್ನಡ ಸಂಸ್ಕೃತಿಗೆ ಕೊಟ್ಟ ಕೊಡುಗೆಗಳನ್ನು ಕೊಡುಗೆಯ ಸ್ವರೂಪದಲ್ಲಿಯೇ ಚಿದಾನಂದಮೂರ್ತಿ ಅವರು ಗ್ರಹಿಸುತ್ತಾರೆ. 'ಕ್ರಿ.ಪೂ ೩ನೇ ಶತಮಾನದಲ್ಲಿ ಬಂದ ಬೌದ್ಧ ಧರ್ಮದಿಂದ ಏನಿಲ್ಲವೆಂದರೂ ಪರೋಕ್ಷವಾಗಿಯಾದರೂ ೧೨ನೇ ಶತಮಾನದ ಬೆಡಗಿನ ವಚನಗಳು ರೂಪುಗೊಂಡವು. ಕ್ರಿ.ಶ ೨ನೇ ಶತಮಾನದಲ್ಲಿ ಕರ್ನಾಟಕಕ್ಕೆ ಬಂದ ಜೈನಧರ್ಮವಂತೂ ಕರ್ನಾಟಕ ಸಂಸ್ಕೃತಿಗೆ ತನ್ನ ಸಾಹಿತ್ಯ, ಬೌದ್ಧಿಕ ಶಾಸ್ತ್ರ ಸಾಹಿತ್ಯ ಶಿಲ್ಪ ಶಾಸ್ತ್ರಗಳಿಗೆ ಅಪೂರ್ವ ಕೊಡುಗೆಗಳನ್ನು ಕೊಟ್ಟಿತು. ವೀರಶೈವ ಧರ್ಮವು ವಚನ ಸಾಹಿತ್ಯದ ಮೂಲಕ ಕನ್ನಡವನ್ನು ಶ್ರೀಮಂತಗೊಳಿಸಿತು. ವಿಷ್ಣುವರ್ಧನನ ಕಾಲದಲ್ಲಿ ಕರ್ನಾಟಕಕ್ಕೆ ಬಂದ ಶ್ರೀ ವೈಷ್ಣವ ಮತವು ಹಲವು ಸುಂದರ ದೇವಾಲಯಗಳಿಗೆ ಸ್ಫೂರ್ತಿ ನೀಡಿತು. ಬೌದ್ಧ, ಜೈನ, ಶೈವ, ವೈಷ್ಣವ ಮತಗಳಲ್ಲದೆ ಇನ್ನೂ ಹಲವಾರು ಪಂಥಗಳು ಜಾತಿಗಳು ಕರ್ನಾಟಕದಲ್ಲಿ ಶಾಂತಿ ಸೌಹಾರ್ದಗಳಿಂದ ಬಾಳಿದವು.'[೨೮] ಎಂದು ಅವರು ವಿವರಿಸುತ್ತಾರೆ. ಕನ್ನಡ ಸಂಸ್ಕೃತಿಯನ್ನು ಸಮೃದ್ಧಗೊಳಿಸುವ ಇಲ್ಲಿನ ಧರ್ಮಗಳಿಗೆ ಹೆಗೆಲೆಣೆಯಾಗಿ ನಿಂತಿದ್ದ ರಾಜರುಗಳನ್ನೂ ಚಿದಾನಂದಮೂರ್ತಿ ಅವರು 'ಕನ್ನಡ ಸಂಸ್ಕೃತಿಗೆ ವಿವಿಧ ರೂಪಗಳಲ್ಲಿ ಕೊಡುಗೆ ನೀಡಿದ ಎಲ್ಲಾ ಧರ್ಮಗಳಿಗೂ ಉದಾರ ಹೃದಯಿಗಳಾಗಿದ್ದ ಕರ್ನಾಟಕದ ದೊರೆಗಳು ಸಮಾನ ಪ್ರೋತ್ಸಾಹವನ್ನು ನೀಡಿದರು'[೨೮] ಎಂದು ಗುರುತಿಸುತ್ತಾರೆ. ಸಾಮಾಜಿಕ ವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿಡಲು ಧರ್ಮ ಹಾಗೂ ಪ್ರಭುತ್ವಗಳ ನಡುವೆ ಒಂದು ಅಲಿಖಿತ ಒಪ್ಪಂದವಿರುತ್ತದೆ ಎನ್ನುವ ಸಾಮಾಜಿಕ ಅಧ್ಯಯನಗಳ ಫಲಿತಗಳನ್ನು ಬದಿಗಿಟ್ಟು ನೋಡಿದರೂ ಕನ್ನಡ ಸಂಸ್ಕೃತಿಗೆ ಕೊಡುಗೆ ನೀಡಿದ ಧರ್ಮಗಳನ್ನು ದಾಖಲಿಸುವಾಗ ಮತ್ತು ಧರ್ಮಗಳಿಗೆ ಅವುಗಳ ಕಾರ್ಯಗಳಿಗೆ ಒತ್ತಾಸೆಯಾಗಿ ನಿಂತ ರಾಜಪ್ರಭುತ್ವಗಳನ್ನು ಹೆಸರಿಸುವಾಗ ಚಿದಾನಂದಮೂರ್ತಿ ಅವರು ಸತ್ಯದ ಪ್ರತಿಪಾದನೆಯ ಸಂಶೋಧನಾ ಬದ್ಧತೆಗೆ ಬದ್ಧರಾಗಿಲ್ಲ.

ಬುಕ್ಕರ ಶಾಸನವನ್ನು ಆಧರಿಸಿ ಬುಕ್ಕನು ಜೈನಧರ್ಮ ಮತ್ತು ಶ್ರೀವೈಷ್ಣವ ಧರ್ಮದ ಬಿಕ್ಕಟ್ಟು ಬಗೆಹರಿಸಿದ ದೃಷ್ಟಾಂತವನ್ನು ಉಲ್ಲೇಖಿಸುತ್ತ ಅದು ಕನ್ನಡದ ನೆಲದಲ್ಲಿದ್ದ ಧರ್ಮ ಸಮನ್ವಯಕ್ಕೆ ಉದಾಹರಣೆ ಎನ್ನುತ್ತಾರೆ. ಆದರೆ ಬಗೆಯರಿಯದೆ ಉಳಿದ, ಸಮಾಜದ ಅಶಾಂತಿಗೆ, ಅಪಾರ ಸಾವು ನೋವಿಗೆ ಕಾರಣವಾದ ವೈಷ್ಣವರಿಗೂ ಶೈವರಿಗೂ, ವೈದಿಕರಿಗೂ ಬೌದ್ಧ ಧರ್ಮೀಯರಿಗೂ, ವೈದಿಕರಿಗೂ ವೀರಶೈವರಿಗೂ ಆದ ಸಂಘರ್ಷದ ಪ್ರಸ್ತಾಪವೇ ಅವರಲ್ಲಿಲ್ಲ. ಆದರೆ ಹಿಂದೂ–ಮುಸ್ಲಿಂ

ದೊರೆಗಳ ಸಂಘರ್ಷಗಳನ್ನು ಹಿಂದೂ–ಮುಸ್ಲಿಂ ಜನರ ಸಂಘರ್ಷಗಳೆಂದು ಕರ್ನಾಟಕದ ಸಂದರ್ಭದಲ್ಲಿ ಕನ್ನಡಿಗರ ಮತ್ತು ಮುಸಲ್ಮಾನರ ಸಂಘರ್ಷಗಳೆಂದು ಮತ್ತೆ ಮತ್ತೆ ಉಲ್ಲೇಖಿಸುತ್ತಾರೆ.

ಧರ್ಮಕ್ಕೆ ಒತ್ತಾಸೆಯಾಗಿ ನಿಂತ ರಾಜರ ಕುರಿತು ಹೇಳುವಾಗ ಶೃಂಗೇರಿ ಮಠಕ್ಕೆ ನೆರವು ನೀಡಿದ ಟಿಪ್ಪು ಸುಲ್ತಾನರನ್ನು ನೆನಪಿಸುವುದಿಲ್ಲ. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಕ್ಕೆ ಮುಸಲ್ಮಾನರು ನೀಡಿದ ಕೊಡುಗೆಯನ್ನಾಗಲೀ, ಕ್ರಿಶ್ಚಿಯನ್ ಮಿಷಿನರಿಗಳು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನಾಗಲೀ, ಇವು ಒಟ್ಟಾರೆಯಾಗಿ ಇಲ್ಲಿನ ಜಾತಿವ್ಯವಸ್ಥೆಯನ್ನು ತೊಡೆದು ಹಾಕುವಲ್ಲಿ ಬೀರಿದ ಪ್ರಭಾವವನ್ನಾಗಲೀ ಚಿದಾನಂದಮೂರ್ತಿ ಅವರು ಪ್ರಸ್ತಾಪಿಸುವುದಿಲ್ಲ. ಕೆ.ವಿ. ಸುಬ್ಬಣ್ಣ ಅವರು ವಿವರಿಸುವಂತೆ ಕರ್ನಾಟಕದಲ್ಲಿ ಹಿಂದು ಮುಸ್ಲಿಂ ಸಂಸ್ಕೃತಿಗಳ ಕೂಟದಲ್ಲಿ ಹಲವು ಶಾಸ್ತ್ರಗಳು ಬೆಳೆದುಕೊಂಡವು. ಔತ್ತರೇಯ ಸಂಗೀತ, ಹಲವಾರು ನೃತ್ಯ ಪ್ರಕಾರಗಳು, ಉದ್ಯಾನಕಲೆ, ವಾಸ್ತುಶಿಲ್ಪ ಮುಂತಾದವು. ಲಖನವಿ ಎಂದು ಗಣ್ಯವಾದ ನಯವಂತಿಕೆಯ ನಾಗರಿಕತೆ– ಇತ್ಯಾದಿಗಳಲ್ಲಿ ಈ ಸಾಮರಸ್ಯದ ಫಲ ಕಾಣುತ್ತದೆ. ದಕ್ಷಿಣದಲ್ಲಿ, ಬಹಮನಿ ಆಡಳಿತ ಕಾಲದಲ್ಲಿ ಮತ್ತು ಆನಂತರ ಇಂಥ ಸಾಮರಸ್ಯದ ಪ್ರಕ್ರಿಯೆ ಮತ್ತು ಆಳವಾದ ಜನಪದಸ್ತರಗಳಲ್ಲಿ ನಡೆಯಿತು. ಮೊದಲು ದಖ್ಖಿಣಿ ಎನಿಸಿಕೊಂಡು ಬೆಳೆದ ಉರ್ದುಭಾಷೆ, ಅದರ ಕಾವ್ಯ ಮುಂತಾದುವಾಗಲಿ, ನಮ್ಮ ಆಡಳಿತ ವ್ಯವಸ್ಥೆ ವಾಸ್ತುಗಳಲ್ಲೂ ಜಾನಪದ ಕಾವ್ಯ–ರಂಗಭೂಮಿಗಳಲ್ಲೂ ಆ ಕಾಲಕ್ಕೆ ಮೂಡಿದ ಹೊಸ ರೂಪಗಳಾಗಲಿ ಅಥವಾ ಧರ್ಮಮೂಲವಾಗಿದ್ದೂ ಧಾರ್ಮಿಕ ಭಿನ್ನತೆಯನ್ನೂ ತೊಡೆದು ಹಾಕಿದ ದರ್ಗಾಗಳಂಥ ಜನಪದ ಸಂಸ್ಥೆಗಳಾಗಲಿ – ಈ ಪ್ರಕ್ರಿಯೆಯ ಅವಶೇಷ ಸಾಕ್ಷಿಗಳು. ಖಾದರ್‌ಲಿಂಗವೆಂಬ ಕಲ್ಪನೆ, ಶಿಶುನಾಳ ಶರೀಫನಂಥ ಕವಿ ಈ ಪ್ರಕ್ರಿಯೆಯ ಅಸಾಧಾರಣ ಫಲ. ಯಾವತ್ತೂ ಮಾನವ ಕುಲ ತಲೆಯಲ್ಲಿ ಮುಡಿದು ಬೀಗಿಕೊಳ್ಳಬಹುದಾದ ಚಂದದ ಹೂ ಅದು ಎಂದು ಸುಬ್ಬಣ್ಣ ಬಣ್ಣಿಸುತ್ತಾರೆ. ಇದನ್ನು ತೆರೆಯ ಹಿಂದೆ ಸರಿಸುವ ಚಿದಾನಂದಮೂರ್ತಿ ಅವರ ಚಿಂತನೆಗಳ ಉದ್ದೇಶವೇನು? ಹಾಗೆ ನೋಡಿದರೆ ಡಿ.ಆರ್. ನಾಗರಾಜರು ಗುರುತಿಸುವಂತೆ ಕನ್ನಡ ಸಂಸ್ಕೃತಿಗೆ ಹಿಂದುವೇತರ ಜನಾಂಗಗಳ ಕೊಡುಗೆಯ ಸ್ಪಷ್ಟ ಪ್ರಸ್ತಾಪ ಆಲೂರರಲ್ಲೂ ಇಲ್ಲ. ಚಿದಾನಂದಮೂರ್ತಿ ಅವರಲ್ಲಿಯೂ ಇಲ್ಲ. ಕನ್ನಡತನವನ್ನು ತನ್ನ ಮಧ್ವ ಸಿದ್ಧಾಂತ ಪಥದಲ್ಲಿಯ ಆಧ್ಯಾತ್ಮಿಕ ಪ್ರಯಾಣ ಎಂದು ಆಲೂರರು ಭಾವಿಸುವುದರಿಂದ ಅಲ್ಲಿ ಈ ಬಗೆಯ ಮೌನವನ್ನು ಅರ್ಥಮಾಡಿಕೊಳ್ಳಬಹುದು. ಆದರೆ , ಸಂಸ್ಕೃತಿಯನ್ನು ವಿವರಿಸುವಾಗ ಅನೇಕ ಆಧುನಿಕ ಸಾಂಸ್ಕೃತಿಕ ಮಾನವಶಾಸ್ತ್ರದ ಪರಿಕಲ್ಪನೆಗಳನ್ನು ಬಳಸಿಕೊಳ್ಳುವ ಚಿದಾನಂದಮೂರ್ತಿ ಅವರ ಮೌನ ಅನೇಕ ಗಂಭೀರ ಪ್ರಶ್ನೆಗಳನ್ನು ಎತ್ತುತ್ತದೆ. ಆಧುನಿಕ ಪೂರ್ವಯುಗದಾಚೆಗೆ ಕರ್ನಾಟಕ ರೂಪುಗೊಂಡದ್ದೇ ಮುಸ್ಲಿಂ ಹಾಗೂ ಕ್ರೈಸ್ತಧಾರೆಗಳಿಂದ. ೨೦ನೇ ಶತಮಾನದ ಹಿಂದಿನ ಕನ್ನಡ

ಸಂಸ್ಕೃತಿಯ ಸಮೃದ್ಧತೆಗೆ, ಶಕ್ತಿಗೆ, ವೈವಿಧ್ಯತೆಗೆ ನಿಸ್ಸಂದೇಹವಾಗಿ ಇಸ್ಲಾಂ ಹಾಗೂ ಕ್ರೈಸ್ತ ಸಂವೇದನೆ, ಆಶಯಗಳ ಕೊಡುಗೆಯೇ ಅತ್ಯಂತ ಮಹತ್ವದ್ದು.

ಶಂಬಾ ಅವರು ತಮ್ಮ 'ಶಿವರಹಸ್ಯ' ಎಂಬ ಕೃತಿಯ ಮುನ್ನುಡಿಯಲ್ಲಿ ತಮ್ಮ ಸಂಶೋಧನಾ ದೃಷ್ಟಿಕೋನವನ್ನು ಹೀಗೆ ವಿವರಿಸುತ್ತಾರೆ 'ಸತ್ಯವು ಯಾರ ಪಕ್ಷಪಾತಿಯೂ ಅಲ್ಲ. ಐತಿಹಾಸಿಕ ದೃಷ್ಟಿಯಿಂದ ನಿಜವನ್ನು ತಿಳಿಯ ಹೊರಟಾಗ ಅದರಲ್ಲಿ ಯಾವಾಗಲೂ ಒಂದೇ ಪಕ್ಷಕ್ಕೆ ಅನುಕೂಲವಾದ ಸಂಗತಿಗಳು ಕಾಣಿಸಿಕೊಳ್ಳುವವೆಂಬ ಭರವಸೆ ಇಲ್ಲ. ನಿಜವಾದ ಸಂಶೋಧಕನು ತನಗೆ ಕಂಡ, ಪ್ರತಿಕೂಲವಿರುವ ಸಂಗತಿಗಳನ್ನೂ ಸಂತೋಷದಿಂದ ಸ್ವೀಕರಿಸಬೇಕು. ಯಾವೊಂದು ಜಾತಿ, ಮತ, ಪಂಥಕ್ಕೂ ಕಟ್ಟುಬಿದ್ದ ಅಂಧಶ್ರದ್ಧೆಯವರು ಸಂಶೋಧನೆಗೆ ಎಂದೆಂದಿಗೂ ಅನರ್ಹರು. ಸಂಶೋಧನೆಗೆ ತೊಡಗಿದಾಗ ಅಂತರಾಳದ ಅಂತರಾಳದಲ್ಲಿಯೂ ತಾವು ಯಾವ ದೇಶ–ಕಾಲ–ಪಕ್ಷದವರೂ ಅಲ್ಲ ; ಸತ್ಯವೇ ತನ್ನ ಪರಮ ಗುರಿ ಎಂಬ ಪ್ರತಿಜ್ಞಾಬದ್ಧವಾಗಿರಬೇಕು. ಇಲ್ಲವಾದರೆ ಅವರಿಗೆ ಕಾಣುವುದೆಲ್ಲವೂ ಅವರ ಮತ ಪಂಥದ ಮಂಡನೆ ಪರವಾದ ಮಾತೇ, ಇವರು ತಮ್ಮ ಜಾತಿಯನ್ನು, ತಾವು ಸಂಶೋಧನಕ್ಕಾಗಿ ಕೈಕೊಂಡ ಕವಿ ಮಹಾ ಪುರುಷರಲ್ಲಿ ಕಾಣುತ್ತಾರೆ.' ಚಿದಾನಂದಮೂರ್ತಿ ಅವರ ಸಂಶೋಧನೆಗಳನ್ನು ಊಹಿಸಿಕೊಂಡೇ ಶಂಬಾ ಅವರು ಈ ಮಾತುಗಳನ್ನು ಹೇಳಿದ್ದಾರೇನೋ ಎನ್ನುವಂತೆ ಮೂರ್ತಿ ಅವರ ಇತ್ತೀಚಿನ ಸಂಶೋಧನೆಗಳಿವೆ. ರಹಮತ್ ಅವರು ಗುರುತಿಸುವಂತೆ ಚಿದಾನಂದಮೂರ್ತಿ ಅವರೀಗ ಸಂಶೋಧನೆಯ ಕೊನೆಗೆ ಮಾಡಬೇಕಾದ ನಿರ್ಣಯವನ್ನು ಅಂದರೆ ಥೀಸಿಸ್ಸನ್ನು ಮೊದಲೀಗೇ ಇಟ್ಟುಕೊಂಡು ಹೊರಡುತ್ತಾರೆ. ತಮ್ಮ ಪೂರ್ವಗ್ರಹಿಕೆಯನ್ನು ಬೆಂಬಲಿಸುವ ದಾಖಲೆಗಳನ್ನಷ್ಟೇ ಹೆಕ್ಕಿ ಜೋಡಿಸಿ, ಪೂರ್ವಗ್ರಹಿಕೆಯನ್ನು ದೃಢವೆಂದು ಸಾರಿ ವಿರಮಿಸುತ್ತಾರೆ. ಒಂದೊಮ್ಮೆ ತಮ್ಮ ಪೂರ್ವಗ್ರಹಿಕೆ ಬೆಂಬಲಿಸದ ಮಾಹಿತಿ ಅಥವಾ ದಾಖಲೆ ಸಿಕ್ಕರೆ, ಅದನ್ನು ಉಲ್ಲೇಖಿಸದೆ ಉಪಾಯವಾಗಿ ಕೈಬಿಡುತ್ತಾರೆ. ಇಲ್ಲವೇ ಖೊಟ್ಟಿ, ಪ್ರಕ್ಷಿಪ್ತ ಎಂದು ನಿರಾಕರಿಸುತ್ತಾರೆ. ಜಾಣ ವಕೀಲರು ತಮ್ಮ ಕಕ್ಷಿದಾರರ ಕೇಸನ್ನು ಗೆಲ್ಲಿಸಲು ಮಾಡುವ ಉಪಾಯವಿದು. ಇಂತಹ ಸಂಶೋಧನೆಗಳನ್ನು ಕನ್ನಡ ವಿಚಾರ ಸಾಹಿತ್ಯ ಮೊದಲಿನಿಂದಲೂ ಪ್ರತಿರೋಧಿಸುತ್ತ ಬಂದಿದೆ. ರಬಕವಿಯಲ್ಲಿ ನಡೆದ ೨೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾದ ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳ ಅವರು 'ಸಂಶೋಧನದ ನೆಪದಲ್ಲಿ ಅತಿ ಪಕ್ಕದ ಜನರು ಹುರುಳಿಲ್ಲದ ವಾದವಿವಾದಗಳನ್ನೆಬ್ಬಿಸಿ, ಇಲ್ಲದ ಸಮಸ್ಯೆಗಳನ್ನು ಹುಟ್ಟಿಸಿ ಮತಮತಗಳಲ್ಲಿ ವಿರಸವನ್ನು ಹುಟ್ಟಿಸುವಂತಹ–ಇವು ಬುದ್ಧ್ಯಾಪೂರ್ವಕವೆಂದು ಯಾವಾಗಲೂ ಹೇಳಲಾಗುವುದಿಲ್ಲವಾದರೂ – ಅಪಪ್ರಚಾರಗಳು ಅಲ್ಲಲ್ಲಿ ಕಂಡು ಬರುತ್ತವೆ. ಇಂತಹ ಪ್ರವೃತ್ತಿ–ಪ್ರಯತ್ನಗಳಿಗೆ ಆದಷ್ಟು ತೀವ್ರ ತಡೆ ಹಾಕುವುದವಶ್ಯಕ' ಎಂದು ಎಚ್ಚರಿಸಿದ್ದರು.

'ಕನ್ನಡ ಸಂಸ್ಕೃತಿಗೆ ಹಿಂದುವೇತರ ಜನಾಂಗಗಳ ಕೊಡುಗೆಯ ಸ್ಪಷ್ಟ ಪ್ರಸ್ತಾಪ ಚಿದಾನಂದಮೂರ್ತಿ ಅವರಲ್ಲಿ ಇರದಿರುವುದಕ್ಕೆ ಸೈದ್ಧಾಂತಿಕ ಕಾರಣ ಅವರಲ್ಲಿ ಕರ್ನಾಟಕ ಮಧ್ಯಯುಗದಲ್ಲೇ ನಿಂತು ಹೋಗಿರುವುದು' ಎಂದು ಡಿ.ಆರ್. ನಾಗರಾಜರು ಅಭಿಪ್ರಾಯ ಪಡುತ್ತಾರೆ. ಅವರ ಈ ಗ್ರಹಿಕೆಯನ್ನು ಒಪ್ಪುವುದು ಕಷ್ಟ. ಏಕೆಂದರೆ ಸಾಮಾನ್ಯವಾಗಿ ಇಂತಹ ಚಿಂತನೆಗಳ ಹಿಂದೆ ಕೆಲಸ ಮಾಡುವುದು ಮತೀಯ ಪೂರ್ವಗ್ರಹವೇ ವಿನಃ ಯಾವ ಕಾಲಘಟ್ಟದ ಚರಿತ್ರೆಯನ್ನು ಆಧರಿಸಿ ನಮ್ಮ ಚಿಂತನೆಗಳನ್ನು ರೂಪಿಸಿಕೊಳ್ಳುತ್ತೇವೆ ಎನ್ನುವುದಲ್ಲ.

೩.೩.೫ ಏಕಕಾಲದಲ್ಲಿ ಹಿಂದುತ್ವ ಮತ್ತು ಕನ್ನಡಪರ ವಕಾಲತ್ತು ತಂದ ಬಿಕ್ಕಟ್ಟು

೧. ಸಂಸ್ಕೃತದ ನೆರವಿಲ್ಲದೆ 'ಅಪ್ಪಟ ಕನ್ನಡದಲ್ಲಿ ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯ: ಚಿದಾನಂದಮೂರ್ತಿ ಅವರು 'ಸಂಸ್ಕೃತವು ಇಂದು ಕನ್ನಡದ ಮೇಲೆ 'ಸವಾರಿ' ಮಾಡುತ್ತಿಲ್ಲವೆಂದೂ, ಕನ್ನಡದಲ್ಲಿ ಸಂಸ್ಕೃತ ಪದಗಳ ಸಹಾಯವಿಲ್ಲದೆ ನಾವು ಯಾವುದೇ ಉತ್ತಮ ಭಾವನೆಯನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ'ವೆಂದೂ 'ಅಪ್ಪಟ ಕನ್ನಡದಲ್ಲಿ ಚಿಂತನೆ, ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವೇ ಇಲ್ಲ. ವಾಕ್ಯ, ಪದ, ಸ್ವರ, ವ್ಯಂಜನ ಇವುಗಳಿಗೆ ಸಮಾನವಾದ ಕನ್ನಡ ಪದಗಳೇ ಇಲ್ಲ'[೩೦] ಎಂದು ಅಭಿಪ್ರಾಯ ಪಡುತ್ತಾರೆ.

'ಬರಹದಲ್ಲಿ ಬಳಕೆಯಾಗುವ ಸಾವಿರಾರು ಸಂಸ್ಕೃತ ಪದಗಳನ್ನು ಜನರು ಬರವಣಿಗೆಯಲ್ಲಿ ಗಮನಿಸುವುದು ಸಾಧ್ಯವಾಗಿದೆಯೇ ಹೊರತು ತಮ್ಮ ಆಡುಮಾತಿನಲ್ಲಲ್ಲ. ಈ ಕಾರಣದಿಂದ ಕನ್ನಡ ಬರವಣಿಗೆಯಲ್ಲಿ ಸಂಸ್ಕೃತದ ಹೆಚ್ಚುವರಿ ಸೇರ್ಪಡೆಗೆ ನೀಡುವ ಸಮರ್ಥನೆಗಳು ಸಂಪೂರ್ಣವಾಗಿ ಸರಿಯಾಗುವುದಿಲ್ಲ' ಎನ್ನುವುದು ಕೆ.ವಿ ನಾರಾಯಣ ಅವರ ಅಭಿಪ್ರಾಯ. ಕನ್ನಡ ಸಾಹಿತ್ಯವಲಯವನ್ನು ಗಮನಿಸಿದರೆ ಸಂಸ್ಕೃತವು ಕನ್ನಡದ ಮೇಲೆ ಸವಾರಿ ಮಾಡುತ್ತಿದೆ, ಕನ್ನಡವು ಸಂಸ್ಕೃತದ ಹಂಗಿನಿಂದ ಹೊರಬರಬೇಕು ಎನ್ನುವ ಚಿಂತನೆ ವ್ಯಕ್ತವಾಗುತ್ತಿರುವುದು ಇಂದು ನಿನ್ನೆಯಿಂದಲ್ಲ. ಈ ಚಿಂತನೆ ೧೨ನೇ ಶತಮಾನದ ನಯಸೇನ, ಅಂಡಯ್ಯರ ಕಾಲದಿಂದ ಈವರೆಗೂ ಹರಿದು ಬಂದಿದೆ. ಅಂಡಯ್ಯ ತನ್ನ 'ಕಬ್ಬಿಗರ ಕಾವಂ' ಎಂಬ ಕಾವ್ಯದಲ್ಲಿ ಸಂಸ್ಕೃತವನ್ನು ತ್ಯಜಿಸಿ ಸಂಪೂರ್ಣವಾಗಿ ಅಚ್ಚಗನ್ನಡ ಪದಗಳಲ್ಲೇ ಕಾವ್ಯವನ್ನು ರಚಿಸಿದ್ದೇನೆ ಎಂದು ಹೇಳಿಕೊಂಡರೂ ಅನೇಕ ಸಂಸ್ಕೃತ ತದ್ಭವಗಳನ್ನು ತನ್ನ ಕಾವ್ಯದಲ್ಲಿ ಬಳಸಿಕೊಂಡಿದ್ದಾನೆ.[೩೧] ಎಂದು ಚಿದಾನಂದಮೂರ್ತಿ ಅವರು ಸಂಸ್ಕೃತವಿಲ್ಲದೆ ಕನ್ನಡವಿಲ್ಲ ಎಂಬ ತೀರ್ಮಾನಕ್ಕೆ ಬರುತ್ತಾರೆ. ಅಂಡಯ್ಯ ತನ್ನ ಪ್ರಯತ್ನದಲ್ಲಿ ಪೂರ್ಣ ಯಶಸ್ಸು ಪಡೆಯದಿದ್ದರೂ ಇಂತಹ 'ಸಂಸ್ಕೃತವಿಲ್ಲದಿದ್ದರೆ ಕನ್ನಡವಿಲ್ಲ ಎಂಬ ಭ್ರಮೆಯನ್ನು ಬಿತ್ತುವ ಪ್ರಯತ್ನಗಳನ್ನು ಹುಸಿಗೊಳಿಸುವ ದೃಷ್ಟಿಯಿಂದ ಅಂಡಯ್ಯನ ಪ್ರಯತ್ನಕ್ಕೆ ಚಾರಿತ್ರಿಕ ಮಹತ್ವವಿದೆ' ಎಂಬುದನ್ನು ಚಿದಾನಂದಮೂರ್ತಿ ಅವರು ಗಮನಿಸುವುದಿಲ್ಲ.

೨. ಕನ್ನಡ ರಾಷ್ಟ್ರೀಯತೆ ಕುರಿತ ಚಿಂತನೆಗೆ ಹಿಂದುತ್ವದ ಸಂಬಂಧ : ಕನ್ನಡವನ್ನು ಕುರಿತಂತೆ ಮತ್ತದರ ಉಳಿವು-ಬೆಳವಣಿಗೆ-ಅಳಿವು ಕುರಿತಂತೆ ಚಿದಾನಂದಮೂರ್ತಿ ಅವರ ಮೇಲೆ ಉಲ್ಲೇಖಿಸಿದ ಚಿಂತನೆಗಳನ್ನು ಗಮನಿಸಿದಾಗ ಸಾಮಾನ್ಯವಾಗಿ ಯಾರಾದರೂ ತಲುಪುವ ತೀರ್ಮಾನಗಳೆಂದರೆ : 'ಚಿದಾನಂದಮೂರ್ತಿ ಅವರು ಭಾಷಾವಿಜ್ಞಾನಿಯಂತೆ ಯೋಚಿಸುವುದಿಲ್ಲ, ಆದ್ದರಿಂದಲೇ ಕನ್ನಡ ಮತ್ತು ಸಂಸ್ಕೃತದ ಸಂಬಂಧ ಕುರಿತಂತೆ ಅವರು ಸಂಸ್ಕೃತ ಕನ್ನಡಕ್ಕಿಂತ ಹೆಚ್ಚು ಸತ್ವವುಳ್ಳ ಭಾಷೆ ಎಂದು ಗ್ರಹಿಸುತ್ತಾರೆ, ಸಂಸ್ಕೃತದಿಂದ ಕನ್ನಡವನ್ನು ಮುಕ್ತಗೊಳಿಸುವ ಪ್ರಯತ್ನಕ್ಕೆ ಅವರು ತೀವ್ರ ವಿರೋಧ ವ್ಯಕ್ತಪಡಿಸುತ್ತಾರೆ, ಒಟ್ಟಾರೆಯಾಗಿ ಚಿದಾನಂದಮೂರ್ತಿ ಅವರಿಗೆ ಕನ್ನಡ ಭಾಷೆಯ ಸತ್ವದ ಬಗ್ಗೆ ಆತ್ಮವಿಶ್ವಾಸವೇ ಇದ್ದಂತೆ ಕಾಣುವುದಿಲ್ಲ' ಎನ್ನುವುದು.

ಮೇಲ್ಕಂಡ ತೀರ್ಮಾನಗಳನ್ನು ಮರುಪರಿಶೀಲಿಸಬೇಕಾಗಿದೆ. ಡಿ.ಆರ್ ನಾಗರಾಜ್ ಅವರು ಗುರುತಿಸುವಂತೆ 'ಕನ್ನಡ ರಾಷ್ಟ್ರೀಯತೆ ಮತ್ತು ಹಿಂದುತ್ವದ ನಡುವಿನ ಸಂಬಂಧದ ಸ್ಪಷ್ಟ ಉಲ್ಲೇಖವನ್ನು ಆಲೂರರಲ್ಲಿ ಕಂಡರೆ, ಚಿದಾನಂದಮೂರ್ತಿಯವರಲ್ಲಿ ಅದು ಸುಪ್ತಪ್ರಜ್ಞೆಯ ಸತ್ಯವಾಗಿಬಿಟ್ಟಿದೆ.' ಡಿ.ಆರ್. ನಾಗರಾಜ ಅವರ ಗ್ರಹಿಕೆ ಪಾರ್ಶ್ವಿಕವಾಗಿ ಮಾತ್ರ ಸರಿಯಿದೆ. ಏಕೆಂದರೆ ಚಿದಾನಂದಮೂರ್ತಿಯವರಲ್ಲಿ ಕನ್ನಡ ರಾಷ್ಟ್ರೀಯತೆ ಮತ್ತು ಹಿಂದುತ್ವದ ನಡುವಿನ ಸಂಬಂಧದ ಉಲ್ಲೇಖ ಸುಪ್ತಪ್ರಜ್ಞೆಯಲ್ಲಿ ಮಾತ್ರ ಸತ್ಯವಾಗಿಲ್ಲ, ಬಹಿರಂಗದಲ್ಲೂ ಅದು ಸತ್ಯವಾಗಿದೆ. ಇದಕ್ಕೆ ನಿದರ್ಶನ ಚಿದಾನಂದಮೂರ್ತಿ ಅವರ ಮುಂದಿನ ಚಿಂತನೆಯಲ್ಲಿಯೇ ಇದೆ. ಚಿದಾನಂದಮೂರ್ತಿ ಅವರು ದಾಸಚಳವಳಿಯ ಕೊಡುಗೆಯನ್ನು ಪ್ರಸ್ತಾಪಿಸುತ್ತ 'ಕನ್ನಡವು ಶೂದ್ರರ ಭಾಷೆಯಾದ ಕಾರಣ, ಅದು ಪೂಜಾ ಸಮಯದಲ್ಲಿ ಬಳಕೆಯಾಗಲು ಅನರ್ಹವೆಂಬ ಭಾವನೆ ವೈದಿಕರಲ್ಲೂ ದಟ್ಟವಾಗಿದ್ದ ಕಾಲದಲ್ಲಿ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ ಅದನ್ನು ಪೂಜಾಕಾಲದಲ್ಲಿ ಬಳಸಿದ ಕೀರ್ತಿ ಶ್ರೀಪಾದರಾಯರಿಗೆ ಸಲ್ಲುತ್ತದೆ.[೨೨] ಎಂದು ಅಭಿಪ್ರಾಯಪಡುತ್ತಾರೆ. ಇಲ್ಲಿ ನಿರ್ದಿಷ್ಟ ಭಾವನೆಯನ್ನು ವ್ಯಕ್ತಪಡಿಸಲು ನಿರ್ದಿಷ್ಟ ಭಾಷೆಯೇ ಬೇಕು ಎನ್ನುವ ವೈದಿಕರ ನಿಲುವನ್ನು ಚಿದಾನಂದಮೂರ್ತಿ ಅವರು ಅಲ್ಲಗಳೆಯುತ್ತಿದ್ದಾರೆ. ಮತ್ತು ಇಂತಹ ತಪ್ಪು ಕಲ್ಪನೆಯನ್ನು ವೈದಿಕರ ಮನಸ್ಸಿನಿಂದ ಹೋಗಲಾಡಿಸಿದ ಕೀರ್ತಿಯನ್ನು ಶ್ರೀಪಾದರಾಯರ ಖಾತೆಗೆ ಜಮೆ ಮಾಡುತ್ತಿದ್ದಾರೆ.

'ಕನ್ನಡದಲ್ಲಿ ಸಂಸ್ಕೃತ ಪದಗಳ ಸಹಾಯವಿಲ್ಲದೆ ನಾವು ಯಾವುದೇ ಉತ್ತಮ ಭಾವನೆಯನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ'ವೆಂಬ ಚಿದಾನಂದಮೂರ್ತಿ ಅವರ ಮಾತುಗಳಿಗೆ ಶ್ರೀಪಾದರಾಯರ ಸಂದರ್ಭದಲ್ಲಿ ಅವರು ನುಡಿದ ಮಾತುಗಳೇ ಡಿಕ್ಕಿ ಹೊಡೆಯುತ್ತಿವೆ. ಏಕಕಾಲದಲ್ಲಿ ಹಿಂದುತ್ವ ಮತ್ತು ದೇಶಿ ಭಾಷೆಗಳ ಪರ ವಕಾಲತ್ತು ವಹಿಸಬೇಕಾಗಿ ಬಂದ ಮೂಲಭೂತವಾದಿ ನೆಲೆಯ ಎಲ್ಲಾ ಭಾಷೆಗಳ ಅಸ್ಮಿತೆ ಕುರಿತ ಚಿಂತನೆಗಳ ಎಂದೆಂದಿಗೂ ಬಗೆಹರಿಯಲಾಗದ ಬಿಕ್ಕಟ್ಟಿದು. ಭಾರತದಲ್ಲಿ ಸಂಸ್ಕೃತವು ಕೇವಲ ಭಾಷಿಕ ಅಥವಾ ಶೈಕ್ಷಣಿಕ ಸಂಗತಿ ಮಾತ್ರವಲ್ಲ, ಸಾಮಾಜಿಕ ಸಂಗತಿ ಕೂಡ.

ಅದನ್ನು ಹಿಂದುತ್ವವಾದ, ಬ್ರಾಹ್ಮಣವಾದ, ಜಡ ಸಂಪ್ರದಾಯ, ಜಾತಿ ಪದ್ಧತಿ ಕೋಮುವಾದಗಳ ಸರಪಳಿಯಿಂದ ಬಿಗಿಯಲಾಗಿದೆ. ಮೇಲ್ಕಂಡ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಸಂಸ್ಕೃತದ ಮೇಲೆ ಹೇರಲ್ಪಟ್ಟ ಈ ಎಲ್ಲ ಭಾಷಿಕೇತರ ಸಂಗತಿಗಳಿವೆ. ಹಿಂದುತ್ವವಾದದಂತಹ ಭಾಷಿಕೇತರ ಸಂಗತಿಗಳೇ ಚಿದಾನಂದಮೂರ್ತಿ ಅವರ ಚಿಂತನೆಗಳಿಗೆ ಕನ್ನಡಭಾಷೆಯನ್ನು ಸಂಸ್ಕೃತದ ಚೌಕಟ್ಟಿನಲ್ಲಿಯೇ ಮುಂದುವರೆಸುವ ಇರಾದೆಯನ್ನು ಸೃಷ್ಟಿಸಿದೆ. ಈ ಹಿಂದೆ ಭಾಷೆಯನ್ನು ಸಂಸ್ಕೃತದ ಚೌಕಟ್ಟಿಗೆ ಸಿಲುಕಿಸುವ ಪ್ರಯತ್ನ ಮೂಲಭೂತವಾಗಿ ಪುರೋಹಿತಶಾಹಿ ಪ್ರೇರಣೆಯನ್ನು ಪಡೆದಿತ್ತು. ಈ ಪ್ರೇರಣೆಯ ಪರಂಪರೆ ಚಿದಾನಂದಮೂರ್ತಿ ಅವರ ಮೂಲಕ ಮುಂದುವರೆದಂತೆ ಕಾಣುತ್ತದೆ.

೪.೫ ಮೂಲಭೂತವಾದಿ ನೆಲೆಯ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಆಲೂರರ ಮತ್ತು ಚಿದಾನಂದಮೂರ್ತಿಯವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳನ್ನು ಮೂಲಭೂತವಾದಿ ಚಿಂತನಾಧಾರೆ ಎಂದು ಒಂದೇ ನೆಲೆಯಲ್ಲಿ ಗುರುತಿಸಿದ್ದರೂ ಕೆಲವು ಭಿನ್ನತೆಗಳಿವೆ. ರಾಷ್ಟ್ರೀಯವಾದಿ ಚಿಂತನೆಯ ಮೂಲದಿಂದ ಹೊರಡುವ ಆಲೂರರ ಕನ್ನಡ ಅಸ್ಮಿತೆ ಕುರಿತ ಚಿಂತನೆ ಅವರ ಕಾಲದ ತುರ್ತಾದ ಎಲ್ಲೆಲ್ಲೂ ಚದುರಿದ್ದ ಕನ್ನಡದ ಭೌಗೋಳಿಕ ಪ್ರದೇಶಗಳನ್ನು ಏಕೀಕರಣಗೊಳಿಸುವುದಾಗಿತ್ತು. ಅಲೂರರ ಚಿಂತನೆಯಲ್ಲಿ ಕನ್ನಡಕ್ಕೆ ತೊಂದರೆ ಕೊಡುವ ಮರಾಠಿಯಂತಹ ನೆರೆಯ ಭಾಷೆಗಳ ಬಗ್ಗೆ ಸಿಟ್ಟಿದೆಯೇ ವಿನಃ ದ್ವೇಷವಿಲ್ಲ. ಮರಾಠಿ ಲೈಬ್ರರಿಯನ್ನು ನಡೆಸುವಷ್ಟು ಇತರ ಭಾಷೆಗಳೆಡೆಗಿನ ಸಹಿಷ್ಣು ಭಾವನೆ ಆಲೂರರಗಿದೆ. ಇದಕ್ಕೆ ವ್ಯತಿರಿಕ್ತವಾದುದು ಚಿದಾನಂದ ಮೂರ್ತಿ ಅವರ ಚಿಂತನೆ. 'ಗುಜರಾತಿನ ಚಾಲುಕ್ಯರು ಮೂಲತಃ ಕನ್ನಡಿಗರು. ಅವರು ಗುಜರಾತಿ ತಾಮ್ರಪಟಗಳಿಗೆ ಕನ್ನಡದಲ್ಲಿಯೇ ಸಹಿ ಮಾಡುತ್ತಿದ್ದರು'[೩೩] ಎಂದು ಸಂಭ್ರಮದಲ್ಲಿ ದಾಖಲಿಸುವ, ನೇಪಾಳದ ದೇವಾಲಯದಲ್ಲಿ ಕನ್ನಡಮೂಲದ ಅರ್ಚಕ ಕುಟುಂಬವಿದೆ[೩೪] ಎಂದು ಹುಡುಕಿ ಹೋಗುವ ಚಿದಾನಂದಮೂರ್ತಿ ಅವರಿಗೆ ಕನ್ನಡ ನೆಲದಲ್ಲಿಯೇ ಹುಟ್ಟಿ, ಬದುಕು ಕಟ್ಟಿಕೊಂಡು ಕನ್ನಡಭಾಷೆಗೆ ಅದನ್ನು ಬಳಸುವುದರ ಮೂಲಕವೇ ಜೀವಂತಿಕೆ ತಂದ ಕ್ರೈಸ್ತ-ಮುಸಲ್ಮಾನರ ಕೊಡುಗೆಯನ್ನು ಗುರುತಿಸಲು ಸಾಧ್ಯವಾಗುವುದಿಲ್ಲ.

ಕನ್ನಡ ಅಸ್ಮಿತೆ ಕುರಿತ ಮೂಲಭೂತವಾದಿ ನೆಲೆಯ ಚಿಂತನೆಗಳ ಮುಖ್ಯ ಚಹರೆಯೆಂದರೆ ಅವು ಹಿಂದುತ್ವವಾದಿ ಚಿಂತನೆಗಳೊಂದಿಗೆ ಲಗತ್ತಾಗಿರುವುದು. ಇವು ಭಾಷೆಯನ್ನು ಪವಿತ್ರವೆಂದು ಪೂಜಿಸುತ್ತವೆ ಹೊರತು ಆ ಭಾಷೆಯನ್ನಾಡುವವರನ್ನು ಜೊತೆಯಲ್ಲಿಟ್ಟು ನೋಡುವುದಿಲ್ಲ. ಇಂಗ್ಲಿಷಿನ ಕುರಿತು ಈ ನೆಲೆಗೆ ಹೆಚ್ಚಿನ ತಕರಾರುಗಳಿಲ್ಲ. ಹಿಂದಿ ಭಾಷೆಯ ಕುರಿತೂ ಹೆಚ್ಚಿನ ಪ್ರಶ್ನೆಗಳಿಲ್ಲ. ಈ ನೆಲೆ ಕಟ್ಟಿಕೊಡುವ ಕನ್ನಡದ ವೈಭವದ ಚರಿತ್ರೆಗೆ ಆಕರಗಳನ್ನು ಒದಗಿಸಿದವರು ಬ್ರಿಟಿಷರೇ.

ಇಸ್ಲಾಂ, ಕ್ರಿಶ್ಚಿಯನ್‌ನಂತಹ ಹಿಂದುವೇತರ ಧರ್ಮಗಳು ಕನ್ನಡಕ್ಕೆ ನೀಡಿದ ಕೊಡುಗೆಯನ್ನು ಮೂಲಭೂತವಾದಿ ನೆಲೆ ಮರೆಮಾಚಲು ಇರುವ ಕಾರಣಗಳನ್ನು ಅರಿಯಲು ಅದರ

ವರ್ಗಹಿತಾಸಕ್ತಿಯನ್ನು ಅರ್ಥ ಮಾಡಿಕೊಳ್ಳಬೇಕು. ಮೂಲಭೂತವಾದಿ ನೆಲೆಯ ಚಿಂತನೆಗಳು ಯಾವಾಗಲೂ ಸಮಾಜದ ಮೇಲ್ವರ್ಗಗಳ ಪರ ಇರುವಂತವು. ಇವು ಸಮಾಜವನ್ನು ಯಥಾಸ್ಥಿತಿಯಲ್ಲಿಡಲು ನಿರಂತರ ಪ್ರಯತ್ನಿಸುತ್ತವೆ. ಕ್ರಿಶ್ಚಿಯನ್ನರು ಬಂದಿದ್ದರಿಂದ ಗುರುಕುಲ ನಿಂತು ಹೋಗಿ ಸಾರ್ವಜನಿಕ ಶಾಲೆಗಳು ಬಂದವು. ಇವರು ಕೊಟ್ಟ ಶಿಕ್ಷಣ, ಸಾಹಿತ್ಯ ಮತ್ತು ವಿಚಾರದಿಂದ ಕೆಲವು ಸಮುದಾಯಗಳಿಗೆ ಹಕ್ಕು ಮಂಡಿಸುವ ಎಚ್ಚರವುಂಟಾಯಿತು. ಕ್ರಿಶ್ಚಿಯನ್ ಮತವು ದೊರಕಿಸಿಕೊಟ್ಟ, ವಿದ್ಯೆ, ಆರೋಗ್ಯ, ಶುಚಿತ್ವ, ಅಂತಸ್ತುಗಳು ಕೆಳವರ್ಗಗಳಿಗೆ ಬಿಡುಗಡೆಯೆನಿಸಿತು. ಹಿಂದೂ ಧರ್ಮದೊಳಗಿರುವಷ್ಟು ದೊಡ್ಡ ಪ್ರಮಾಣದ ಜಾತಿಯ ತರತಮಗಳಿಲ್ಲದ, ಅಸ್ಪೃಶ್ಯತೆಯಿಲ್ಲದ ಮುಸಲ್ಮಾನ ಧರ್ಮ ಹಿಂದೂ ಕೆಳವರ್ಗಗಳಿಗೆ ತಮ್ಮನ್ನು ತಾವೇ ನೋಡಿಕೊಳ್ಳಲು ಕನ್ನಡಿಯಾಯಿತು. ಹೀಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಹಿಂದೂ ಧರ್ಮದೊಳಗಿನ ಜಾತಿವ್ಯವಸ್ಥೆಯ ಭದ್ರಕೋಟೆಯೊಳಗೆ ಕ್ರಿಶ್ಚಿಯನ್, ಇಸ್ಲಾಂನಂತಹ ಧರ್ಮಗಳು ಮೂಡಿಸಿದ ಬಿರುಕುಗಳು ಸೃಷ್ಟಿಸಿದ ಅಸಹನೆಗಳು ಈ ಧರ್ಮಗಳು ಕನ್ನಡಕ್ಕೆ ಕೊಟ್ಟ ಕೊಡುಗೆಗಳನ್ನು ಮರೆಮಾಚಲು ಮೂಲಭೂತವಾದಿ ನೆಲೆಯ ಕನ್ನಡ ಚಿಂತನೆಗೆ ಪ್ರೇರಣೆ ಒದಗಿಸಿದಂತಿದೆ.

ಮೂಲಭೂತವಾದಿ ನೆಲೆಯ ವಿಚಿತ್ರ ಚಹರೆ ಅನಾವರಣವಾಗುವುದು ಅದು ಕನ್ನಡ ಮತ್ತು ಸಂಸ್ಕೃತದ ಸಂಬಂಧದ ಸಂದರ್ಭದಲ್ಲಿ ತೆಗೆದುಕೊಳ್ಳುವ ನಿಲುವುಗಳಿಂದ. ಬೇರೆಲ್ಲ ಸಂದರ್ಭಗಳಲ್ಲಿ ಕನ್ನಡಕ್ಕೆ ಕಡುನಿಷ್ಠವಾಗಿರುವಂತೆ ತೋರುವ ಈ ನೆಲೆ ಸಂಸ್ಕೃತದ ಸಂದರ್ಭದಲ್ಲಿ ಮಾತ್ರ ಕನ್ನಡಕ್ಕಿಂತ ಸಂಸ್ಕೃತದ ಕಡೆಗೇ ತನ್ನ ನಿಷ್ಠೆಯನ್ನು ಹೆಚ್ಚು ವಾಲಿಸುತ್ತದೆ. ಆಲೂರರಲ್ಲಿ ಇದನ್ನು 'ಧ್ವನ್ಯಾರ್ಥ'ದಲ್ಲಿ ಕಾಣಬಹುದಾದರೆ ಚಿದಾನಂದಮೂರ್ತಿ ಅವರಲ್ಲಿ 'ವಾಚ್ಯಾರ್ಥ'ವಾಗಿಯೇ ಗೋಚರಿಸುತ್ತದೆ.

ಅಂತರಾಷ್ಟ್ರೀಯ ರಾಜಕಾರಣದ ಕಾರಣವಾಗಿ ಪ್ರಭುತ್ವಗಳು ದೇಶಿ ಭಾಷೆಗಳ ಕಡೆ ಅಗತ್ಯ ಗಮನ ಕೊಡುತ್ತಿಲ್ಲ. ಇದರ ಫಲಶ್ರುತಿಯಾಗಿ ಇಂಗ್ಲಿಶ್ ಸಾವಿರಾರು ಸಣ್ಣ ಭಾಷೆಗಳನ್ನು ಅಪಾಯದ ಅಂಚಿಗೆ ಕೊಂಡೊಯ್ದಿದೆ. 'ಭಾರತದಲ್ಲಿ ಈ ಸಮಸ್ಯೆ ಇನ್ನೂ ತೀವ್ರತರವಾಗಿದ್ದರೂ ಕೋಮುವಾದ, ಧರ್ಮ, ಭ್ರಷ್ಟಾಚಾರ, ಜಾತಿ, ರಾಜಕೀಯ ಮತ್ತಿತರ ವಿಷಯಗಳ ಕುರಿತು ಇಲ್ಲಿ ಚರ್ಚೆ ನಡೆದ ಹಾಗೆ, ಅವಸಾನದ ಅಂಚಿನಲ್ಲಿರುವ ಭಾಷೆಗಳ ಉಳಿಯುವಿಕೆಯ ಕುರಿತು ಸಂವಾದ ನಡೆಯುತ್ತಿಲ್ಲ' ಎಂದು ಪುರುಷೋತ್ತಮ ಬಿಳಿಮಲೆ ಅವರು ಅಭಿಪ್ರಾಯಪಡುತ್ತಾರೆ. ಒಂದು ಕಡೆ ಭಾಷೆಯನ್ನೂ ಇನ್ನೊಂದು ಕಡೆ ಕೋಮುವಾದ, ಧರ್ಮ, ಭ್ರಷ್ಟಾಚಾರ, ಜಾತಿ, ರಾಜಕೀಯ ಮತ್ತಿತರ ವಿಷಯಗಳನ್ನು ಇಟ್ಟು ನೋಡುತ್ತ ಭಾಷೆ ಕುರಿತು ಆಗಬೇಕಾದಷ್ಟು ಚರ್ಚೆ ಆಗುತ್ತಿಲ್ಲ ಎನ್ನುವ ಕೊರಗಿದು. ಆದರೆ ಭಾಷಿಕ ಮುಸುಕಿನಲ್ಲಿಯೇ ಕೋಮುವಾದವನ್ನು, ಜಾತಿವಾದವನ್ನು ಹರಡುತ್ತಿರುವುದರ ಕುರಿತು ಚರ್ಚೆ ನಡೆಯಬೇಕಾಗಿರುವುದು ಕೂಡ ಆದ್ಯತೆಯಾಗಬೇಕಾಗಿದೆ ಎಂದು

ಕನ್ನಡ ಅಸ್ಮಿತೆ ಕುರಿತ ಮೂಲಭೂತವಾದಿ ನೆಲೆಯ ಚಿಂತನೆಗಳ ಅಪಾಯಕಾರಿ ಪರಿಣಾಮಗಳು ಒತ್ತಾಯಿಸುತ್ತಿವೆ.

ಟಿಪ್ಪಣಿಗಳು

೧. ವೆಂಕಟೇಶಯ್ಯ ನೆಲ್ಲುಕುಂಟೆ, ಆಧುನಿಕ ಸಾಹಿತ್ಯದಲ್ಲಿ ಕನ್ನಡ ರಾಷ್ಟ್ರೀಯತಾ ಚಿಂತನೆಯ ಆಯಾಮಗಳು, ಪು. ೧೯೩

೨. ಆಲೂರು ವೆಂಕಟರಾಯರು, ಕರ್ನಾಟಕತ್ವದ ವಿಕಾಸ, ಪು. ೫೬

೩. ಅದೇ, ಪು. ೮೪-೮೫

೪. ಅದೇ, ಪು. ೧೨೬

೫. ಅದೇ, ಪು. ೧೯೪

೬. ಚಂದ್ರಶೇಖರ್ ಎಸ್., ವಸಾಹತುಕಾಲೀನ ಕರ್ನಾಟಕ, ಪು. ೧೦

೭. ಆಲೂರು ವೆಂಕಟರಾಯರು, ಪಾತಳಿ, ಪು. ೭೩

೮. ಆಲೂರ ವೆಂಕಟರಾಯರು, ಕರ್ನಾಟಕತ್ವದ ವಿಕಾಸ, ಪು. ೧೭೪

೯. ಅದೇ, ಪು. ೧೭೨

೧೦. ಅದೇ, ಪು. ೫೯

೧೧. ಅದೇ, ಪು. ೧೯೪

೧೨. ಅದೇ, ಪು. ೬೦

೧೩. ಅದೇ, ಪು. ೬೫

೧೪. ಅದೇ, ಪು. ೧೧೯

೧೫. ಅಲೂರ ವೆಂಕಟರಾಯರು, ಕರ್ನಾಟಕತ್ವದ ವಿಕಾಸ, ಪು. ೧೫

೧೬. ಚಿದಾನಂದಮೂರ್ತಿ. ಎಂ., ಚಿದಾನಂದಾಯಣ, ಪು. ೧೧೪

೧೭. ಅದೇ, ಪು. ೧೧೭

೧೮. ಅದೇ, ಪು. ೧೧೫

೧೯. ಅದೇ, ಪು. ೧೧೭

೨೦. ಬಸವರಾಜ ಕಲ್ಗುಡಿ, ಪಾತಳಿ, ಪು೧೬೫-೧೬೭

೨೧. ರಹಮತ್ ತರೀಕರೆ, ನೇತುಬಿದ್ದ ನವಿಲು, ಪು.೧೦೨

೨೨. ಚಿದಾನಂದಮೂರ್ತಿ. ಎಂ., ಚಿದಾನಂದಾಯಣ, ಪು. ೧೨೮

೨೩. ಅದೇ, ಪು. ೧೩೦-೧

೨೪. ಅದೇ, ಪು. ೧೩೧

೨೫. ಅದೇ, ಪು. ೧೨೩, ೧೩೧

೨೬. ವೆಂಕಟೇಶಯ್ಯ ನೆಲ್ಲುಕುಂಟೆ, ಆಧುನಿಕ ಸಾಹಿತ್ಯದಲ್ಲಿ ಕನ್ನಡ ರಾಷ್ಟ್ರೀಯತಾ ಚಿಂತನೆಯ ಆಯಾಮಗಳು, ಪು. ೫೦

೨೭. ಅದೇ, ಪು. ೧೫೩

೨೮. ಚಿದಾನಂದಮೂರ್ತಿ. ಎಂ, ಚಿದಾನಂದಾಯಣ, ಪು. ೧೨೪

೨೯. ಅದೇ, ಪು. ೧೨೪

೩೦. ಅದೇ, ಪು. ೧೫೨

೩೧. ಅದೇ, ಪು.೧೫೩

೩೨. ಅದೇ, ಪು. ೧೨೭

೩೩. ಅದೇ, ಪು.೧೨೮

೩೪. ಅದೇ, ಪು.೧೩೭

ಅಧ್ಯಾಯ ೪
ಕನ್ನಡ ಅಸ್ಮಿತೆ : ಸಾಂಸ್ಕೃತಿಕ ಹುಡುಕಾಟದ ನೆಲೆ

೪.೧ ಪೀಠಿಕೆ

೪.೨ ಶಂಬಾ ಅವರ ಚಿಂತನೆಗಳು

೪.೨.೧ ಪೀಠಿಕೆ

೪.೨.೨ ಸಂಶೋಧನೆ

೪.೨.೩ ಸಂಸ್ಕೃತದಿಂದ ಕನ್ನಡವನ್ನು ಬಿಡುಗಡೆಗೊಳಿಸುವತ್ತ ಒಲವು

೪.೨.೪ ಇಂಗ್ಲಿಶಿನ ಅಪಾಯದ ಬಗ್ಗೆ ಹರಿಯದ ಗಮನ

೪.೨.೫ ಗ್ರಂಥಸ್ತ ರೂಪಗಳಿಗಿಂತ ವಾಡಿಕೆ ಮಾತುಗಳಲ್ಲಿ ನಂಬಿಕೆ

೪.೩ ಯು.ಆರ್ ಅನಂತಮೂರ್ತಿ ಅವರ ಚಿಂತನೆಗಳು

೪.೩.೧ ಪೀಠಿಕೆ

೪.೩.೨ ಪಶ್ಚಿಮದ ವೈಚಾರಿಕ ಭಿತ್ತಿಯಲ್ಲಿ ಕನ್ನಡ ಸಂಸ್ಕೃತಿಯ ಚಿಂತನೆ

೪.೩.೩ ಸಿದ್ಧಾಂತಗಳಿಗೆ ಕುರುಡಾಗದೆ ಸತ್ಯಕ್ಕೆ ಸ್ಪಂದನೆ

೪.೩.೪ ಏಕಸಂಸ್ಕೃತಿಯ ಹೇರಿಕೆಗೆ ವಿರೋಧ

೪.೩.೫ ವರ್ಗನೆಲೆಯಲ್ಲಿ ಭಾಷೆಯ ವರ್ತನೆಯ ಸೂಕ್ಷ್ಮ ವಿಶ್ಲೇಷಣೆ

೪.೩.೬ ಜಾಗತೀಕರಣ ಸೃಷ್ಟಿಸಿರುವ ಬಿಕ್ಕಟ್ಟಿಗೆ ಮುಖಾಮುಖಿಯಾಗದ ಚಿಂತನೆಯ ಮಿತಿ

೪.೩.೭ ಚಳುವಳಿಯನ್ನು ವಿಮರ್ಶಿಸುವ ದಿಟ್ಟತನದ ಚಿಂತನೆಗಳು

೪.೩.೮ 'ಸಾಂಸ್ಕೃತಿಕವಾಗಿ ಮಹತ್ವದ್ದಾಗಬಲ್ಲ ಬರವಣಿಗೆ'ಯ ತಹತಹಿಕೆ

೪.೪ ಕೆ.ವಿ ಸುಬ್ಬಣ್ಣ ಅವರ ಚಿಂತನೆಗಳು

೪.೪.೧ ಪೀಠಿಕೆ

೪.೪.೨ 'ಕವಿರಾಜಮಾರ್ಗ'ದ ಮೂಲಕ ಕನ್ನಡ ಅಸ್ಮಿತೆಯ ಚಿಂತನೆಯ ಸಾಧ್ಯತೆ ಮತ್ತು ಮಿತಿಗಳು

೪.೪.೩ ಸಾಂಸ್ಕೃತಿಕ ನೆಲೆಯ ಕಣ್ಣು ತಪ್ಪಿಸಿರುವ ಸಾಮಾಜಿಕ ನೆಲೆಯ ತೊಡಕುಗಳು

೪.೪.೪ ಸಾಹಿತ್ಯ ಪಠ್ಯಗಳಿಂದ ರೂಪಿತವಾದ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳ ಮಿತಿಗಳು

೪.೪.೫ ಪ್ರಜಾಪ್ರಭುತ್ವಕ್ಕೆ ಸಂವಾದಿಯಾಗಿ ಕನ್ನಡ ಭಾಷೆ

೪.೪.೬ ಪುರಾತನ ಆಧಾರದಿಂದ ಹುಟ್ಟಿದ ಕನ್ನಡ ಭವಿಷ್ಯದ ವಿಶ್ವಾಸ

೪.೫ ಸಾಂಸ್ಕೃತಿಕ ನೆಲೆಯ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಅಧ್ಯಾಯ ೪.

ಕನ್ನಡ ಅಸ್ಮಿತೆ : ಸಾಂಸ್ಕೃತಿಕ ಹುಡುಕಾಟದ ನೆಲೆ

೪.೧ ಪೀಠಿಕೆ

ಭಾಷೆ ಮಾನವನ ಒಂದು ವಿಶೇಷ ಮಾನಸಿಕ ಸಾಮರ್ಥ್ಯ. ಭಾಷಿಕರು ಸಾವಿರಾರು ವರ್ಷಗಳಿಂದ ತಮ್ಮ ಪರಿಸರವನ್ನು ಕುರಿತ ಅರಿವನ್ನು ತಮ್ಮ ನುಡಿಯಲ್ಲಿ ಬಿಂಬಿಸಿದ್ದಾರೆ. ಶಂಬಾ ಜೋಶಿಯವರು ವ್ಯಾಖ್ಯಾನಿಸುವಂತೆ ಭಾಷೆಯೊಂದಿಗೇ ಸಂಸ್ಕೃತಿಯ ಆರಂಭ. ಭಾಷೆಯಲ್ಲಿ ಮಾತ್ರ ಸಂಸ್ಕೃತಿಯ ಪ್ರತಿಬಿಂಬ. ಭಾಷೆಯ ಪ್ರಾಥಮಿಕ ಸ್ಥಿತಿಯಲ್ಲಿ ಮಾತು–ಹಾವಭಾವಗಳ ಹಾಸುಹೊಕ್ಕು, ಭಾಷೆ ಪ್ರೌಢವಾದಂತೆಲ್ಲ ಈ ಸ್ಥಿತಿಯಿಂದ ಮುಕ್ತವಾಗಿ ತಳೆಯುವುದು ಸಾಂಸ್ಕೃತಿಕ ರೂಪ. ಭಾಷೆಯು, ಸಂಕೇತದ ಮಟ್ಟ ಮುಟ್ಟದೆ ಹೋದರೆ ಭಾಷೆಯನ್ನು ಹಾಗೆನ್ನಲು ಸಾಧ್ಯವಿಲ್ಲ. ಇಂಥ ಭಾಷೆಯ ಹಿನ್ನೆಲೆಯಲ್ಲಿರುವುದು ಒಂದು ತಂತ್ರ. ಅದು ಮಾನವನಿಗೆ ವಿಶಿಷ್ಟವಾದ ಸ್ಮೃತಿ. ಮಾನವನನ್ನು ಪಶು–ಪಕ್ಷಿಗಳಿಂದ ಬೇರ್ಪಡಿಸುವ ಗುಣವಿಶೇಷವಿದು. ನಿನ್ನೆ ನಾಳೆಗಳನ್ನು ಜೋಡಿಸುವ, ಹಿಡಿದಿಡುವ ಸಂಕೇತ ತಂತ್ರವೇ ಮಾನವನ ಸ್ಮೃತಿ. ಇದರಿಂದ ವಿಕಾಸಗೊಳ್ಳುವುದು ಶಿಲ್ಪಭಾಷೆ' 'ಜ್ಞಾನದ ಆಧಾರವೂ ಭಾಷೆ. ಈ ಭಾಷೆ ಸಂಸ್ಕೃತಿ. ಜ್ಞಾನ ಇವು ನಿಧಿ–ನಿಕ್ಷೇಪದಂತೆ, ಸಿದ್ಧ–ಸಂಗ್ರಹರೂಪದಲ್ಲಿ, ಫಕ್ಕನೆ ದೊರೆತ ಸಂಗತಿಗಳಲ್ಲ. ಭಾಷೆಯೊಡನೆ ಜ್ಞಾನದ ಅಭಿವ್ಯಕ್ತಿ ಆರಂಭವಾಯಿತು.' ಭಾಷೆಗಳು ನಾಶವಾದರೆ ಈ ಅಪಾರ ಜ್ಞಾನ, ತಿಳಿವಳಿಕೆಯೂ ನಾಶವಾದಂತೆಯೇ ಸರಿ.

ಯಾವುದೇ ಜನಸಮುದಾಯವು ಆಲೋಚನೆಯ ಕ್ರಮಗಳನ್ನು ಮತ್ತು ಜ್ಞಾನರೂಪಗಳನ್ನು ಭಾಷೆಯ ಮೂಲಕವೇ ಪ್ರಕಟಗೊಳಿಸುವುದರಿಂದ ಸಹಜವಾಗಿಯೇ ಆ ಭಾಷೆಯೊಳಗೆ ಅದು ಅಡಕವಾಗಿರುತ್ತದೆ. ಆದ್ದರಿಂದ ಭಾಷೆಯೊಳಗೆ ಅಡಕವಾಗಿರುವ ಆಲೋಚನೆಗಳ ಮೊತ್ತ ಸಮುದಾಯವೊಂದರ 'ಸಾಂಸ್ಕೃತಿಕ ಸಮಷ್ಟಿ ಜೀವನದ ಉತ್ಪನ್ನ'ವಾಗಿರುತ್ತದೆ. ಇಂತಹ ಉತ್ಪನ್ನಗಳೇ ಸಮುದಾಯಗಳಿಗೆ ಅಸ್ಮಿತೆ ಹಾಗೂ ಅನನ್ಯತೆಯನ್ನು ತಂದು ಕೊಡುವುದು. ಅಂತಹ ಅನನ್ಯವಾದ ಆಲೋಚನೆಯ ಕ್ರಮಗಳನ್ನು, ಅರಿವಿನ ರೂಪಗಳನ್ನು ಭಾಷೆ ಮುಂದಿನ ಪೀಳಿಗೆಗೆ ರವಾನಿಸುತ್ತಿರುತ್ತದೆ. ಸಂಸ್ಕೃತಿ ಜಡವಾಗುವ, ಯಾಂತ್ರಿಕವಾಗುವ ಬಹುಮುಖ್ಯ ಆಯಾಮವೂ ಇದೆ. ಮೂಲಭೂತವಾಗಿ 'ಸಂಸ್ಕೃತಿಯು ವ್ಯಕ್ತಿಗತವಾಗಿರುತ್ತದೆ. ವ್ಯಕ್ತಿಯ ನಡೆವಳಿ, ಶಿಷ್ಟಾಚಾರ–ಸಂಪ್ರದಾಯವಾಗಿರುತ್ತದೆ. ಇದು 'ಸಮಯ' ರೂಪ ತಾಳುವಲ್ಲಿ ಒಂದು ನಾಗರಿಕತೆ ಆಕಾರ ಪಡೆಯುತ್ತದೆ. ಸಂಸ್ಕೃತಿಯು ನಿರ್ಮಿಸಿಕೊಂಡ ಈ ಸಮಯ; ಬೇಗನೆ ತನ್ನ ಗತಿಮಾನತೆಗೆ ಎರವಾಗಿ ಅದು ಒಂದು ಯಾಂತ್ರಿಕ ಸ್ವರೂಪದ ಸಾಂಪ್ರದಾಯಿಕ ನಿರ್ಜೀವ ಪಡಿಯಚ್ಚಿನ ರೂಪಕ್ಕೆ ಬಹು

ಬೇಗನೆ ತಿರುಗುತ್ತದೆ.' ಸಮಯವೆಂದರೆ ಭೌತಿಕ ಕಾಲವಲ್ಲ, ಸಾಂಸ್ಕೃತಿಕ ಸಾಮಾನ್ಯತೆಯುಳ್ಳ, ಅದರಲ್ಲಿ ಅದ್ದಿ ಹೋದ ಒಂದು ಪರಿಸರ ಎನ್ನುವುದು ಭಾಷೆ ಮತ್ತು ಸಂಸ್ಕೃತಿಯ ನಡುವಿನ ಸಂಬಂಧದ ಕುರಿತ ಶಂಬಾ ಅವರ ವಿಶ್ಲೇಷಣೆ.

ಆಂಗ್ಲ ವಿಮರ್ಶಕ ರೇಮಂಡ್ ವಿಲಿಯಮ್ಸ್ ಪ್ರಕಾರ ಕೈಗಾರಿಕಾ ಕ್ರಾಂತಿಗೆ ಮುನ್ನ 'ಕಲ್ಚರ್'ಪದಕ್ಕೆ ಜೈವಿಕ ಬೆಳವಣಿಗೆಯ ಪೋಷಣೆ ಎಂಬ ಅರ್ಥವಿತ್ತು. ಅಗ್ರಿಕಲ್ಚರ್, ಹಾರ್ಟಿಕಲ್ಚರ್, ಸಿರಿಕಲ್ಚರ್-ಪದಗಳ ಉದ್ಭವವಾದದ್ದು ಹೀಗೆ. ಈ ನೈಸರ್ಗಿಕ ಕ್ರಿಯೆಯನ್ನು ಸಾಂಕೇತಿಕವಾಗಿ ಮನುಷ್ಯನ ಅಭಿವರ್ಧನೆಗೂ ಅನ್ವಯಿಸುವುದರ ಮೂಲಕ, ೧೮ ಮತ್ತು ೧೯ನೇ ಶತಮಾನಗಳಲ್ಲಿ 'ಕಲ್ಚರ್' ಪದ ಸ್ವಯಂ ಇರುವ ಅಂದರೆ ಪ್ರತ್ಯೇಕ ಅಸ್ತಿತ್ವ ಪಡೆದ ತತ್ವವಾಯಿತು. ಹೀಗೆ ಒಂದು ಪರಿಪಕ್ವ ಮನೋಸ್ಥಿತಿ ಎಂಬ ಅರ್ಥ ಪಡೆದ ಈ ಶಬ್ದ ಮನುಷ್ಯನ ಪೂರ್ಣತ್ವದ ಅಪೇಕ್ಷೆಯನ್ನು ಪ್ರತಿನಿಧಿಸಿತು. ನಂತರ ಇಡೀ ಸಮಾಜದ ಬೌದ್ಧಿಕ ಪ್ರಗತಿ ಎಂಬ ಅರ್ಥ ಪಡೆಯಿತು. ಅಮೇಲೆ ಕಲೆಗಳಿಗೆ ಅನ್ವಯವಾಗುವ ಪದವಾಯಿತು. ಕೊನೆಯಲ್ಲಿ ಬೌದ್ಧಿಕ ಅಧ್ಯಾತ್ಮಿಕ ಹಾಗೂ ಪ್ರಾಪಂಚಿಕ ವಿದ್ಯಮಾನಗಳನ್ನು ಒಳಗೊಂಡಂತೆ ಇಡೀ ಜೀವನದ ರೀತಿಯನ್ನು ಹೇಳಬಲ್ಲ ಪದವಾಯಿತು ಎಂದು ಯು.ಆರ್ ಅನಂತಮೂರ್ತಿ ಅವರು ಗುರುತಿಸುತ್ತಾರೆ.

ಇದನ್ನು ವಿವರವಾಗಿ ನೋಡುವುದಾದರೆ 'ಸಂಸ್ಕೃತಿ'ಯ ವಿಭಿನ್ನ ನೆಲೆಗಳ ವ್ಯಾಖ್ಯಾನವನ್ನು ಗಮನಿಸಬಹುದು. ಡಿ.ಆರ್. ನಾಗರಾಜ್ ಅವರ ಪ್ರಕಾರ ಸಂಸ್ಕೃತಿ ಎನ್ನುವುದು ದೈನಂದಿನ ಕ್ರಿಯೆಗಳ ಸಾಧಾರಣ ಲಯಗಳು ಅಸಾಧಾರಣ ಕ್ರಿಯೆಗಳ ಜತೆಗೆ ಬೇರ್ಪಡಿಸಲಾಗದಂತೆ ಬೆರೆತಾಗ ಹುಟ್ಟುವ ವ್ಯವಸ್ಥೆ. ಸತ್ಯ, ಅಹಿಂಸೆ, ಪ್ರಾಮಾಣಿಕತೆಯಂತಹ ಆಯ್ದ ನೈತಿಕ ಮೌಲ್ಯಗಳು; ನಿರ್ದಿಷ್ಟ ಸಮಾಜದ ಆಲೋಚನಾ ಕ್ರಮ ಮತ್ತು ಅದಕ್ಕೆ ಲಗತ್ತಾದ ಆಚರಣೆಗಳು; ಸಾಹಿತ್ಯ, ಸಂಗೀತಗಳಂತಹ ಲಲಿತ ಕಲೆಗಳು; ಸಮಾಜ ಒಪ್ಪಿಕೊಂಡು ಬಂದಿರುವ ನಂಬಿಕೆ, ವಿಚಾರ, ಧರ್ಮ, ನಾಗರಿಕತೆ, ಭಾಷೆ ಮುಂತಾದ ಜ್ಞಾನಗಳ ಒಟ್ಟು ಸಾರ; ಒಟ್ಟಾರೆ ಒಂದು ಸಮಾಜದ ಜೀವನವಿಧಾನ ಹೀಗೆ ಆ ವ್ಯಾಖ್ಯಾನಗಳಿವೆ. ಸಂಸ್ಕೃತಿ ಎನ್ನುವುದು ರಾಜಕೀಯ ವ್ಯಾಖ್ಯಾನ. 'ರಾಷ್ಟ್ರೀಯತೆ' ಎಂಬ ಶುದ್ಧ ರಾಜಕೀಯ ವಿದ್ಯಮಾನ ಕುರಿತು ಸಂಸ್ಕೃತಿ ಎಂಬ ಗ್ರಹಿಕೆಯನ್ನು ವಿಶ್ಲೇಷಿಸಿದರೆ, ಅದು ನಿಸ್ಸಂದೇಹವಾಗಿ ರಾಜಕೀಯ ಗ್ರಹಿಕೆ ಎಂಬುದು ಅರ್ಥವಾಗುತ್ತದೆ. ಹಾಗಾಗಿ 'ಸಂಸ್ಕೃತಿ' ಎಂಬ ಗ್ರಹಿಕೆ ಬರೀ 'ಭಾವನಾತ್ಮಕ' ವಿಚಾರ ಎಂಬುದು ಸುಳ್ಳು ಎನಿಸುತ್ತದೆ. 'ರಾಜಕೀಯ ಹಿತಾಸಕ್ತಿ'ಯ ಭಾಗವಾಗಿಯೇ ಕ್ರಿಯಾಶೀಲವಾಗುವ ಧಾರೆಗಳ ಹಿಂದೆ 'ವರ್ಗ ಸ್ವಭಾವವೂ' ಕೆಲಸ ಮಾಡುತ್ತಿರುತ್ತದೆ. ಎನ್ನುವ ವೆಂಕಟೇಶಯ್ಯ ನೆಲ್ಲುಕುಂಟೆ ಅವರ ಮಾತು ಸತ್ಯವಾದುದು. ಬಲಪಂಥೀಯರು ಮುನ್ನೆಲೆಗೆ ತರುವ ಸಾಂಸ್ಕೃತಿಕ ಸಂಕೇತಗಳು ಕುಲೀನ ವರ್ಗದವೇ ಆಗಿರುವುದು ಈ ಕಾರಣಕ್ಕಾಗಿ. ಮೂಲಭೂತವಾದಿ ನೆಲೆಯನ್ನು ವಿಶ್ಲೇಷಣೆಗೊಳಪಡಿಸಿದಾಗ ಇದು ಹೆಚ್ಚು ಸ್ಪಷ್ಟವಾಗುತ್ತದೆ.

ಆಯಾ ಭಾಷೆಯನ್ನಾಡುವ ಜನರ ಸಂಸ್ಕೃತಿಯ, ನಾಗರಿಕತೆಯ ವಿಕಾಸವನ್ನು ಪ್ರತಿಬಿಂಬಿಸುವ ಭಾಷೆ, ಮಾನವನ ಎಲ್ಲ ಸಾಂಸ್ಕೃತಿಕ ಪರಂಪರೆಯ ಬುನಾದಿಯಾಗಿದೆ. ಸಂಸ್ಕೃತಿಯ ಮೂಲಕ ನಿರ್ಮಾಣವಾದ ಸಾಂಸ್ಕೃತಿಕ ಪರಂಪರೆಯನ್ನು ಭಾಷಿಕ ನೆಲೆಯಲ್ಲಿ ಪರಿಭಾವಿಸುವಾಗ ಇದನ್ನು ಆ ಭಾಷೆಯ ಇತಿಹಾಸ, ಆಳಿದ ರಾಜರು, ಭಾಷೆಯಲ್ಲಿ ನಿರ್ಮಾಣವಾದ ಸಾಹಿತ್ಯ, ಕಲೆ ಎಂದು ವ್ಯಾಖ್ಯಾನಿಸುವುದು ಸಾಮಾನ್ಯವಾದ ರೂಢಿಯಾಗಿದೆ. ಅದರಲ್ಲೂ ಭಾಷೆಯ ಇತಿಹಾಸವನ್ನು ಹೇಳುವಾಗ ಅದರ ಪ್ರಾಚೀನತೆ, ರಾಜರನ್ನು ಉಲ್ಲೇಖಿಸುವಾಗ ಅವರ ವೀರತ್ವ ಮತ್ತು ವೈಭವ, ಸಾಹಿತ್ಯಕ್ಕಿಂತ ಸಾಹಿತಿಗಳು ಸಂಸ್ಕೃತಿಯ ಕುರುಹುಗಳೆಂದು ಪರಿಗಣಿತವಾಗುವುದು ಹೆಚ್ಚು. ಈ ಸಂಗತಿಗಳಿಗೆ ಸಾಕಷ್ಟು ಉತ್ಪ್ರೇಕ್ಷೆ ಸೇರುವುದು ಇದೆ. ಹೀಗೆ ಮಾಡುವುದರ ಹಿಂದೆ ವರ್ತಮಾನದಲ್ಲಿ ನಮ್ಮ ಭಾಷೆಯ ಬಗ್ಗೆ ಹೆಮ್ಮೆ ಮೂಡಿಸುವುದು ಕಾಳಜಿಯಾಗಿರುವಂತೆ ತೋರುತ್ತದೆ. 'ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ'ಯಾಗುವ ಪ್ರಕ್ರಿಯೆಯಿದು.

ಭಾಷೆಯ ಪ್ರಾಚೀನತೆ ಯಾಕೆ ಮುಖ್ಯ? ಅದರ ಅಂತಸ್ಥ ಘನತೆಗೂ ಅದರ ಪ್ರಾಚೀನತೆಗೂ ಸಂಬಂಧ ಏನಾದರೂ ಇದೆಯೇ? ಎಂದು ಹುಡುಕಹೊರಟರೆ ಇಲ್ಲ ಎನ್ನುವುದು ಸರಳ ಉತ್ತರ. ಚರಿತ್ರೆ ಕೂಡಾ ಹಾಗೆಯೇ. ಅದು ಸದಾ ವೈಭವ, ವೀರತನದ ಸಂಗತಿಗಳಿಂದಲೇ ಕೂಡಿರುವುದಿಲ್ಲ. ಚರಿತ್ರೆ ಯಾವಾಗಲೂ ಒಳಿತು–ಕೆಡುಕುಗಳ, ಯಶಸ್ಸು–ವಿಫಲತೆಗಳ, ವೈಭವ–ಪತನಗಳ, ಸಂತೋಷ–ದುಃಖಗಳ, ವಿವೇಕ–ಅವಿವೇಕತನಗಳ, ಸಮೃದ್ಧಿ–ಕೊರತೆಗಳ, ಕ್ರಿಯಾಶೀಲತೆ–ಕ್ರಿಯಾಹೀನತೆಗಳ, ವೇಗ–ಸ್ಥಗಿತತೆಗಳ, ಕ್ರೌರ್ಯ–ಅಂತಃಕರಣಗಳ ಅಭಿನ್ನ ದ್ವಿಮುಖದ ಕಥಾನಕ. ಇದಕ್ಕೆ ಸಾಕ್ಷಿ ವರ್ತಮಾನವೇ. ವರ್ತಮಾನದಲ್ಲಿ ಅಭಿನ್ನ ದ್ವಿಮುಖವೇ ಇರುವುದರಿಂದ, ಇಂದಿನ ವರ್ತಮಾನವೇ ನಾಳಿನ ಚರಿತ್ರೆಯಾಗಿರುವಾಗ, ಆ ಚರಿತ್ರೆ ಏಕಮುಖವಾಗಿರಲು ಸಾಧ್ಯವಿಲ್ಲ.

ಕನ್ನಡದ ಸಂದರ್ಭದಲ್ಲಿ ಸಂಸ್ಕೃತಿಯ ಅಧ್ಯಯನದ ತಾಂತ್ರಿಕ ನೆಲೆಗಳು ಗಂಭೀರವಾಗಿ ನಡೆದಿರುವುದು ಬಹಳ ಕಡಿಮೆ. ಚರಿತ್ರೆಯ ಗತಿತರ್ಕವನ್ನು ರೂಪಿಸುವ ಅಸಂಖ್ಯಾತ ಸೃಜನಾತ್ಮಕ ಪ್ರಭೇದಗಳನ್ನು ಗೌಣವಾಗಿ ಕಂಡದ್ದು ಇದಕ್ಕೆ ಮುಖ್ಯ ಕಾರಣವಾದರೆ, ಇಡೀ ಕರ್ನಾಟಕ ಸಂಸ್ಕೃತಿಯನ್ನು ಇತಿಹಾಸದ, ವೈಭವೀಕರಿಸಿದ ನೆನಪಿನ ಮಾದರಿಯ ಸ್ವರೂಪದಲ್ಲಿ ವಿವರಿಸಿದ್ದು ಇನ್ನೊಂದು ಕಾರಣ ಎಂದು ಬಸವರಾಜ ಕಲ್ಗುಡಿ ಅವರು ವಿಶ್ಲೇಷಿಸುತ್ತಾರೆ. ಕನ್ನಡ ಶಾಸನಗಳು ಹಾಗೂ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಸಂಖ್ಯಾತವಾಗಿ ಸಿಗುವ ಹೋರಾಟ ಮಾಡುವ ಬಣಗಳ ದಾಖಲೆಗಳನ್ನು ಇಟ್ಟುಕೊಂಡು ಪ್ರಾಚೀನ ಕನ್ನಡ ಸಂಸ್ಕೃತಿಯಲ್ಲಿ 'ವೀರತ್ವ' ಒಂದು ಮೌಲ್ಯವಾಗಿತ್ತು ಎಂದು ನಿರ್ವಚಿಸಿದ ಉದಾಹರಣೆಗಳಿವೆ. ಹೋರಾಡಿ ಮಡಿದ ಸೈನಿಕರಿಗೆ ನೆಟ್ಟ ಸ್ಮಾರಕಗಳನ್ನು 'ವೀರಗಲ್ಲು' ಎಂದು ಅನೇಕ ಶಾಸನಗಳಲ್ಲೇ ಕರೆಯಲಾಗಿದೆ. ಅದು ದೊಡ್ಡ ಸಾಮ್ರಾಜ್ಯಗಳ ಅಳಿವಿನೊಡನೆ ಸಣ್ಣಪುಟ್ಟ ಅರಸುಮನೆತನಗಳು ಹುಟ್ಟಿಕೊಳ್ಳುತ್ತಿದ್ದ ಕಾಲ. ಅನಿವಾರ್ಯವಾಗಿ ಎಲ್ಲರೂ

ತಮ್ಮ ತಮ್ಮ ಪ್ರದೇಶಗಳ ರಕ್ಷಣೆಗಾಗಿ ಹೋರಾಟವನ್ನು ಅವಲಂಬಿಸಿದ್ದ ಕಾಲ. ಆತ್ಮಬಲಿಯ ಹಲವು ಸ್ವರೂಪಗಳು ಹುಟ್ಟಿಕೊಂಡಿದ್ದು ಈ ಸಂದರ್ಭದಲ್ಲಿ. ಇದನ್ನು ವೀರಮೌಲ್ಯವೆಂದು ರಾಜಸತ್ತೆ ವಿಜೃಂಭಿಸಿ ನುಡಿಯುವುದು ಅನಿವಾರ್ಯವಾಗಿದೆ. ರಾಜಸತ್ತೆ ಮತ್ತು ಪುರೋಹಿತಶಾಹಿ ಕೂಡಿ ಪ್ರಚುರಪಡಿಸಿದ ಹೋರಾಟವನ್ನು ಕುರಿತ ಸಂಸ್ಕೃತ ಶ್ಲೋಕ ಶಾಸನಗಳಲ್ಲಿ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುತ್ತದೆ. ಈ ಮೂಲಕ ಒಟ್ಟಾರೆಯಾಗಿ ನಿಚ್ಚಳವಾಗುವ ಸಂಗತಿಯೇನೆಂದರೆ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಗುರುತಿಸುವಾಗ ಉಲ್ಲೇಖಿಸುವ ಆಕೃತಿಗಳಿಗೂ, ಈ ಸಾಂಸ್ಕೃತಿಕ ಪರಂಪರೆಯನ್ನು ಮುನ್ನೆಲೆಗೆ ತರುತ್ತಿರುವ ವರ್ಗದ ಹಿತಾಸಕ್ತಿಗೂ ಸಂಬಂಧವಿದೆ ಎನ್ನುವುದು.

ಎಲ್ಲ ಭಾಷೆಗಳಿಗಿರುವಂತೆ ಕನ್ನಡ ಅಸ್ಮಿತೆಗೆ ಸಾಂಸ್ಕೃತಿಕ ಹುಡುಕಾಟದ ನೆಲೆಯೊಂದಿದೆ. ಆದರೆ ಭಾಷಾಶಾಸ್ತ್ರ ಸಾಂಸ್ಕೃತಿಕ ಚಿಂತನೆಗೆ ಒಂದು ಮುಖ್ಯ ವಿಧಾನವಾಗಿ ಬಳಕೆಯಾಗಿಲ್ಲ. ಅದು ಇಂದು ನಡೆಯಬೇಕಾಗಿರುವ ಅಗತ್ಯ' ವಾಗಿದೆ ಎಂದು ಎಸ್.ಎಸ್ ಹಿರೇಮಠ ಅವರು ಪ್ರದಿಪಾದಿಸುತ್ತಾರೆ. ಸಾಂಸ್ಕೃತಿಕ ನೆಲೆಗೂ ಮೂಲಭೂತವಾದಿ ನೆಲೆಗೂ ಇರುವ ಗಡಿರೇಖೆಗಳು ಅತ್ಯಂತ ತೆಳು. ಮೂಲಭೂತವಾದಿ ನೆಲೆ ಸಾಮಾನ್ಯವಾಗಿ ತನ್ನನ್ನು ತೋರ್ಪಡಿಸಿಕೊಳ್ಳುವುದು ಸಾಂಸ್ಕೃತಿಕ ನೆಲೆಯ ಮುಖವಾಡದಲ್ಲಿ. ಉದಾಹರಣೆಗೆ ಆಲೂರರನ್ನು ತೆಗೆದುಕೊಂಡರೆ ಮೇಲ್ನೋಟಕ್ಕೆ ಅವರು ಸಾಂಸ್ಕೃತಿಕ ನೆಲೆಯಲ್ಲಿ ಕನ್ನಡ ಅಸ್ಮಿತೆಯನ್ನು ಚಿಂತಿಸುತ್ತಿದ್ದಾರೆ ಎನಿಸುತ್ತದೆ. ಅವರು ಬಳಸುವ ಕನ್ನಡದ ಸಾಂಸ್ಕೃತಿಕ ಸಂಕೇತಗಳೆಂದರೆ ನಾಡಹಬ್ಬ, ವಿದ್ಯಾರಣ್ಯ ಉತ್ಸವ, ನಿಜಗುಣ ಶಿವಯೋಗಿಗಳ ಉತ್ಸವ ಮತ್ತು ಬಸವೇಶ್ವರರ ಉತ್ಸವ. ಬ್ರಾಹ್ಮಣ ಮತ್ತು ಲಿಂಗಾಯತ ಸಮುದಾಯದ ಈ ಉತ್ಸವಗಳನ್ನು ಹೊರತುಪಡಿಸಿದರೆ ಬೇರೊಂದಕ್ಕೆ ಅಲ್ಲಿ ಸ್ಥಾನವಿಲ್ಲ. ಸೂಫಿಗಳನ್ನಾಗಲೀ, ಮಲೆ ಮಹದೇಶ್ವರನನ್ನಾಗಲೀ ಕನ್ನಡದ ಸಾಂಸ್ಕೃತಿಕ ಸಂಕೇತಗಳನ್ನಾಗಿ ಅವರು ಎಲ್ಲೂ ಉದ್ಧರಿಸುವುದಿಲ್ಲ. ಆಳದಲ್ಲಿ ಮೂಲಭೂತವಾದಿಯಾಗಿರುವ ಸಾಂಸ್ಕೃತಿಕ ನೆಲೆಯ ಕನ್ನಡ ಅಸ್ಮಿತೆಯ ಚಹರೆಗಳಿವು. ಕನ್ನಡ ಅಸ್ಮಿತೆಯ ಸಾಂಸ್ಕೃತಿಕ ನೆಲೆಯ ಚಿಂತನೆಗಳನ್ನು ಗುರುತಿಸುವಾಗ ಈ ಅಧ್ಯಯನ ಮೇಲ್ಕಂಡ ಎಲ್ಲಾ ಆಯಾಮಗಳನ್ನು ಗಮನಿಸಿ ಮುಂಬರಿದಿದೆ.

೪.೨ ಶಂಬಾ ಜೋಶಿ ಅವರ ಚಿಂತನೆಗಳು

೪.೨.೧ ಪೀಠಿಕೆ

ತಮ್ಮ ವಿಶಿಷ್ಟ ಅಧ್ಯಯನ ಶಿಸ್ತು ಮತ್ತು ವಿಭಿನ್ನ ಮಾದರಿಗಳಿಂದ ಸಂಶೋಧನೆಗೊಂದು ಘನತೆ ಮತ್ತು ಮಹತ್ವ ತಂದುಕೊಟ್ಟವರು ಶಂಬಾ ಜೋಶಿ ಎಂದೇ ಪ್ರಸಿದ್ಧರಾದ ಶಂಕರರಾವ್ ಬಾಳ ದೀಕ್ಷಿತ ಜೋಶಿ (೧೮೯೬-೧೯೯೧). ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಜನಿಸಿದ ಶಂಬಾ

ಅವರು ಪುಣೆಯಲ್ಲಿ ವಿದ್ಯಾಭ್ಯಾಸ, ಉದ್ಯೋಗ ಮಾಡುತ್ತ ೧೯೩೦ರವರೆಗೆ ಅಲ್ಲಿದ್ದು ನಂತರ ಧಾರವಾಡಕ್ಕೆ ಬಂದು ಶಿಕ್ಷಕವೃತ್ತಿಯಲ್ಲಿ ತೊಡಗಿದರು.

ಶಂಬಾ ಅವರು ಹಲವು ಭಾಷೆಗಳಲ್ಲಿ ಪ್ರಭುತ್ವವನ್ನು ಹೊಂದಿದ್ದರು. ಪ್ರಾಕೃತ, ಅರ್ಧಮಾಗದಿ, ಮರಾಠಿ, ಸಂಸ್ಕೃತದೊಂದಿಗೆ ದಕ್ಷಿಣ ಭಾರತೀಯ ಭಾಷೆಗಳಲ್ಲಿ ಅವರಿಗೆ ತಿಳುವಳಿಕೆಯಿತ್ತು. ಇಂಗ್ಲಿಶಿನಲ್ಲಿ ಪ್ರಕಟಗೊಂಡ ಭಾಷಿಕ ಮತ್ತು ಜನಾಂಗಿಕ ಅಧ್ಯಯನಗಳನ್ನು ಸಂಸ್ಕೃತದಲ್ಲಿರುವ ವೇದ, ವೇದಾಂತ, ಪುರಾಣ, ಮಹಾಕಾವ್ಯಗಳನ್ನು ಶಂಬಾ ಆಳವಾಗಿ ಅಧ್ಯಯನ ಮಾಡಿದ್ದರು. ಇದಲ್ಲದೆ ಭಾಷಾಶಾಸ್ತ್ರ, ಐತಿಹ್ಯಶಾಸ್ತ್ರ (Mythology), ಧರ್ಮಶಾಸ್ತ್ರ, ಪುರಾತತ್ವಶಾಸ್ತ್ರ, ಮಾನವಶಾಸ್ತ್ರ ಮುಂತಾದವುಗಳನ್ನು ಸ್ವಪ್ರಯತ್ನದಿಂದಲೇ ಪರಿಚಯಿಸಿಕೊಂಡಿದ್ದವರಷ್ಟೇ ಅಲ್ಲದೆ ಆಳವಾಗಿ ಅಭ್ಯಸಿಸಿದವರು. ಭಾರತೀಯ ನಾಗರಿಕತೆಯ ಜೊತೆಗೆ ಜಗತ್ತಿನ ಇತರ ದೇಶಗಳ ಸಂಸ್ಕೃತಿ, ನಾಗರಿಕತೆಗಳನ್ನು ಅವರು ಅಧ್ಯಯನ ಮಾಡಿದ್ದರು. ಶಂಬಾ ಜೋಶಿಯವರ ಸಂಶೋಧನೆಯ ಹೆಗ್ಗಳಿಕೆಯೆಂದರೆ ಇವೆಲ್ಲವುಗಳ ತುಲನಾತ್ಮಕ ಅಭ್ಯಾಸ ಮತ್ತು ಸಮೀಕರಣ ಇಂದಿನ ದಿನಗಳಲ್ಲಿ ವಿಶೇಷಜ್ಞತೆ (Specialisation)ಎಂಬ ನೆವದಿಂದ ಸಂಕುಚಿತಗೊಳ್ಳುತ್ತಿರುವ ಸಂಶೋಧನ ಕ್ಷೇತ್ರಕ್ಕೆ ಹೊಸ ಆಯಾಮಗಳನ್ನು ಅವರು ಕಲ್ಪಿಸಿದರು. ಶ್ರೀನಿವಾಸ ರಿತ್ತಿ ಅವರು ಅಭಿಪ್ರಾಯಪಡುವಂತೆ ಇತಿಹಾಸ ಸಂಶೋಧನೆಗೆ ಭಾಷಾಶಾಸ್ತ್ರ ಮತ್ತು ಮಾನವಶಾಸ್ತ್ರಗಳನ್ನು ಯಶಸ್ವಿಯಾಗಿ ಬಳಸಿಕೊಂಡವರು ಇವರೊಬ್ಬರೇ ಎಂದರೂ ಸಲ್ಲುವುದು.

ಶಂಬಾ ಅವರ ವಿಶಿಷ್ಠತೆ ಇರುವುದು ಅವರು ಅದುವರೆಗಿನ ಸಂಶೋಧನಾ ಮಾರ್ಗವನ್ನು ತೊರೆದು ತಮ್ಮದೇ ಆದ ಮಾರ್ಗವೊಂದನ್ನು ಕಂಡುಕೊಂಡಿರುವುದರಲ್ಲಿ. 'ಮರ್ಹಾಠಿ ಸಂಸ್ಕೃತಿ' ಕೃತಿ ಕುರಿತು ಕೀರ್ತಿನಾಥ ಕುರ್ತಕೋಟಿ ಅವರು ಹೇಳುವ ಮುಂದಿನ ಮಾತುಗಳು ಅವರ ಎಲ್ಲ ಸಂಶೋಧನಾ ಕೃತಿಗಳಿಗೆ ಅನ್ವಯಿಸಬಹುದಾದ ಮಾತುಗಳಾಗಿವೆ : 'ಭಾಷೆ, ಕೌಟುಂಬಿಕ ಸಂಬಂಧಗಳು, ಧಾರ್ಮಿಕ ನಂಬಿಕೆಗಳು ಮತ್ತು ನಂಬಿಕೊಂಡಿರುವ ದೈವ ದೇವತೆಗಳ ವಿವರವಾದ ಮತ್ತು ಆಳವಾದ ಅಭ್ಯಾಸದಿಂದ ಅವರು ಹೊರತಂದಿರುವ ಸತ್ಯ ಮೌಲಿಕವಾಗಿದೆಯಲ್ಲದೆ ಬೆಲೆಯುಳ್ಳದ್ದು ಆಗಿದೆ. ಅದಕ್ಕಿಂತ ಹೆಚ್ಚು ಮಹತ್ವದ್ದಾಗಿರುವುದು ಈ ಗ್ರಂಥದಲ್ಲಿ ಅವರು ಉಪಯೋಗಿಸಿರುವ ಶಾಸ್ತ್ರ ವಿಧಾನ. ಪಾಶ್ಚಾತ್ಯ ವಿದ್ವಾಂಸರಿಂದ ಕಡ ತೆಗೆದುಕೊಂಡ ಶಾಸ್ತ್ರ ವಿಧಾನಗಳನ್ನು ನಮ್ಮ ಶಾಸ್ತ್ರಕಾರರು ಬಳಸುತ್ತಿರುವಾಗ ಶಂಬಾ ತಮಗೆ ಅನುಕೂಲವಾದ ವಿಧಾನವನ್ನು ತಾವೇ ಹುಡುಕಿ ತೆಗೆದರು'.

ಶಂಬಾ ಅವರ ಕಾಲಘಟ್ಟದಲ್ಲಿ ಮರಾಠಿ ಧಾರವಾಡ ಸೇರಿದಂತೆ ಉತ್ತರ ಕರ್ನಾಟಕದಲ್ಲಿ ಮರಾಠಿ ಪ್ರಾಬಲ್ಯ ಮೆರೆಯುತ್ತಿತ್ತು. ಶಾಲೆಯಲ್ಲಿ ಕನ್ನಡವನ್ನು ಕಡೆಗಣಿಸಲಾಗಿತ್ತು. ಅದನ್ನು

ಕಲಿಯುವವರು, ಕಲಿಸುವವರೂ ಅಲಕ್ಷ್ಯ ಮಾಡುತ್ತಲೇ ಬಂದಿದ್ದರು. ಶಿಕ್ಷಕವೃತ್ತಿಯಲ್ಲಿದ್ದ ಶಂಬಾ ಅವರು ಆ ಕೀಳರಿಮೆಯನ್ನು ತೊಡೆದು ಹಾಕಲು ಪ್ರಯತ್ನಿಸಿದ್ದರು.

೪.೨.೨ ಸಂಶೋಧನೆ

೧. ಸಂಸ್ಕೃತಿಯ ಬಹುತ್ವದೆಡೆಗೆ ಗಮನವಿಟ್ಟ ಸಂಶೋಧನೆ

ಶಂಬಾ ಅವರು ಸಂಶೋಧನೆಗೆ ಪ್ರಭುತ್ವ ನಿರ್ಮಿಸಿದ ಹೆದ್ದಾರಿಗಳಲ್ಲಿ ಸಾಗುವ ಬದಲು ತಾನೇ ನಿರ್ಮಿಸಿಕೊಂಡ ತನ್ನದೇ ಕಾಲು ದಾರಿಯಲ್ಲಿ ಸಾಗಿದ ಸಂಶೋಧಕರು. ಬ್ರಿಟಿಷರು ನಿರ್ಮಿಸಿದ ಈ ಹೆದ್ದಾರಿಯಲ್ಲಿ ಶಾಸನಗಳಿದ್ದವು, ಇತಿಹಾಸದ ಪುಸ್ತಕಗಳಿದ್ದವು. ಇವುಗಳನ್ನು ಮಾತ್ರ ನೆಚ್ಚಿದರೆ ಸಿಗುವ ಕರ್ನಾಟಕ ಸಂಸ್ಕೃತಿಯ ಚಿತ್ರಣದ ಸ್ವರೂಪವನ್ನು ಶಂಬಾ ಅವರು ಊಹಿಸಿದಂತೆ ತೋರುತ್ತದೆ. ಆದ್ದರಿಂದ ಅವರು ಕಾಲುದಾರಿಯಲ್ಲಿ ಸಿಗುವ ಊರುಗಳನ್ನು, ಅವುಗಳ ಹೆಸರಿನ ಹಿನ್ನೆಲೆಯನ್ನು, ಜನರ ಆಡುನುಡಿಯನ್ನು, ಜನಸಂಸ್ಕೃತಿ ಸೃಷ್ಟಿಸಿದ ಪುರಾಣಗಳನ್ನು ಅನ್ವೇಷಿಸುತ್ತ ಆ ಮೂಲಕ ಕರ್ನಾಟಕ ಸಂಸ್ಕೃತಿಯನ್ನು ಅರಿಯಲು ಪ್ರಯತ್ನಿಸಿದರು. 'ದಕ್ಷಿಣದ ತಲಕಾಡಿನಿಂದ ಉತ್ತರದ ಮರಹಟ್ಟ, ವಿದರ್ಭ, ನರ್ಮದಾ ತೀರದವರೆಗೆ ಹಬ್ಬಿದ ಈ ಜನರ ಸಂಸ್ಕೃತಿ ಮರವರು, ಕಳವರು, ದನಗಾಹಿ ಜನರದಾಗಿದೆ. 'ಕಣ್ಮರೆಯಾದ ಕಂನಡ', 'ಕನ್ನಡದ ನೆಲೆ', 'ಕಂನುಡಿಯ ಹುಟ್ಟು', 'ಕಂನುಡಿಯ ಜೀವಾಳ' ಮೊದಲಾದ ಗ್ರಂಥಗಳಲ್ಲಿ ಶಂಬಾ ಜೋಶಿ ಅವರು ಭಾಷಿಕ ಆಧಾರಗಳ ಮೂಲಕ ನಡೆಸಿದ ಸಂಶೋಧನೆಯು ನಾಡಿನ ಪ್ರಾಚೀನ ಅಸ್ತಿತ್ವವನ್ನು ಬೆಳಕಿಗೆ ತಂದುಕೊಟ್ಟಂತಾಗಿದೆ. ಸಂಸ್ಕೃತಿಗೂ ಭಾಷೆಗೂ ಇರುವ ಸಂಬಂಧ ಅವ್ಯಾಹತವಾದುದು. ಸಂಸ್ಕೃತಿಯ ಶೋಧನೆಗೆ ಭಾಷೆಯನ್ನು ಆಕರ ಸಾಮಗ್ರಿಯಾಗಿ ಬಳಸಿಕೊಳ್ಳುವ ವಿಧಾನವನ್ನು ಶಂಬಾ ಜೋಶಿಯವರು ತೋರಿಸಿಕೊಟ್ಟಿರುವುದು ಮಹತ್ವಪೂರ್ಣವಾಗಿದೆ. ಈ ದಿಶೆಯಲ್ಲಿ ಬಂದ 'ಎಡೆಗಳು ಹೇಳಿದ ಕಂನಾಡಕತೆ' ಹಾಗೂ 'ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ ಗ್ರಂಥಗಳು ಕನ್ನಡ ಸಂಸ್ಕೃತಿಯ ವಿಕಾಸವನ್ನು ಅರ್ಥಪೂರ್ಣವಾಗಿ ವಿದಿತಪಡಿಸುತ್ತವೆ' ಎಂಬ ಜಿ.ಎಂ. ಹೆಗಡೆ ಅವರ ಅಭಿಪ್ರಾಯ ನಿಜಸಂಗತಿಯಾಗಿದೆ.

ಭಾಷಿಕ ಪ್ರತಿಮೆಗಳ ವಿಶ್ಲೇಷಣೆಗಾಗಿ ಶಂಬಾ ಅವರು ಒಂದು ವಿಶಾಲವಾದ ವೈಚಾರಿಕ ಹಿನ್ನೆಲೆಯನ್ನು ಬಳಸಿಕೊಳ್ಳುತ್ತಾರೆ. ಅವರ ಪ್ರಕಾರ ಒಂದು ಸಂಸ್ಕೃತಿಯೆಂದರೆ 'ನೇತಾರ ಸಮಿತಿ', ಸಮಯ ಮತ್ತು ಅಭಿವ್ಯಕ್ತಿ ಮಾಧ್ಯಮಗಳ ಸಂಕೀರ್ಣವಾಗಿದೆ. ನೇತಾರ ಸಮಿತಿಯೆಂದರೆ ಸಂಸ್ಕೃತಿಯೊಂದರ ಮುಂಚೂಣಿಯಲ್ಲಿರುವ ಧೀಮಂತರ ಗುಂಪು. ಇವರು ಸಂಸ್ಕೃತಿಯ ರೂಪರೇಶೆಗಳನ್ನು ರೂಪಿಸುವ ವರ್ಚಸ್ಸುಳ್ಳವರಾಗಿರುತ್ತಾರೆ. ಸಮಯವೆಂದರೆ ಭೌತಿಕಕಾಲವಲ್ಲ. ಇತಿಹಾಸದ ಒಂದು ಕಾಲ ಭಾಗವೂ (Period) ಅಲ್ಲ. ಸಮಯವೆಂದರೆ ಸಾಂಸ್ಕೃತಿಕ

ಸಾಮಾನ್ಯತೆಯುಳ್ಳ, ಅದರಲ್ಲಿ ಅದ್ದಿ ಹೋದ ಒಂದು ಪರಿಸರ (Ambience). ಇದು ಕಾಲ ಮತ್ತು ದೇಶಗಳ ಚೌಕಟ್ಟಿನಲ್ಲಿ ಇರುವುದಾದರೂ ಅವುಗಳಿಗೆ ಸೀಮಿತವಾದದ್ದಲ್ಲ. ಏಕೆಂದರೆ ಒಂದು ಸಾಂಸ್ಕೃತಿಕ ಸಮಯದಲ್ಲಿ ಹುಟ್ಟಿಕೊಂಡ ಜೀವನದೃಷ್ಟಿ. ಅದಕ್ಕೆ ಪೂರಕವಾಗಿರುವ ಭಾಷಾಪ್ರತಿಮೆಗಳು ಇನ್ನೊಂದು ಕಾಲದಲ್ಲೂ ಪ್ರಭಾವಶಾಲಿಯಾಗಿರಬಹುದು. ಭಾಷೆ ಮನುಷ್ಯನ ಕಣ್ಣು. ಭಾಷಿಕ ಪ್ರತಿಮೆಗಳು ಮನುಷ್ಯನು ಯೋಚಿಸುವ ಅಥವಾ ಭಾವಿಸುವ ಕ್ರಿಯೆಯ ಮಿತಿಗಳನ್ನು ರೂಪಿಸುತ್ತವೆ. ಅವನು ತನ್ನ ಸುತ್ತಲಿನ ಜಗತ್ತನ್ನು ಅರ್ಥಮಾಡಿಕೊಳ್ಳುವುದು ಭಾಷೆಯ ಮೂಲಕವೇ. ಇದಕ್ಕೂ ಮುಖ್ಯ ವಿಚಾರವೆಂದರೆ ಈ ಭಾಷಾ ಪ್ರತಿಮೆಗಳು ಅವುಗಳು ಹುಟ್ಟಿಕೊಂಡ ಸಾಂಸ್ಕೃತಿಕ ಸಮಯದ ಸ್ಮೃತಿಗಳನ್ನು ನಿರಂತರವಾಗಿ ಹೊತ್ತು ತರುತ್ತವೆಯಾದ್ದರಿಂದ ಅವು ಸಂಸ್ಕೃತಿಯ ಇತಿಹಾಸದ ಮುಖ್ಯ ದಾಖಲೆಗಳು ಕೂಡ.

೨. ಸಂಶೋಧನೆಯ ಪರಮಮೌಲ್ಯವಾದ ಸತ್ಯಶೋಧನೆಗೆ ಬದ್ಧತೆ

ತಮ್ಮ ಪೂರ್ವಗ್ರಹಿಕೆಯನ್ನು ಬೆಂಬಲಿಸದ ಮಾಹಿತಿ ಅಥವಾ ದಾಖಲೆಗಳನ್ನು ಅದನ್ನು ಉಲ್ಲೇಖಿಸದೆ ಉಪಾಯವಾಗಿ ಕೈಬಿಡುವ, ಇಲ್ಲವೇ ಅವುಗಳ ಸಾಚಾತನವನ್ನೇ ಪ್ರಶ್ನಿಸಿ ನಿರಾಕರಿಸುವ ಮೂಲಕ ಸಂಶೋಧನೆಗೆ ಅಪಚಾರ ಎಸಗುವ ಮಾದರಿಯೂ ಇದೆ. ಸಂಶೋಧನೆಯ ಜೀವವಿರುವುದೇ ಅದರ ಪರಮಮೌಲ್ಯವಾದ ಸತ್ಯಶೋಧನೆಯಲ್ಲಿ. ಇದಕ್ಕೆ ಶಂಬಾ ಬದ್ಧರಾಗಿದ್ದರು. 'ಏನನ್ನೂ ಬಚ್ಚಿಡದೆ ಸಂಭವಿಸಿದ ಸಂಗತಿಗಳನ್ನು ಸಾಧಾರವಾಗಿ ಪ್ರಾಮಾಣಿಕವಾಗಿ ನಿವೇದಿಸುವುದು ಐತಿಹಾಸಿಕ ಸಮೀಕ್ಷೆಯ ಕೆಲಸ' ಈ ಮಾತು ಶಂಬಾ ಅವರ 'ಕರ್ನಾಟ ಸಂಸ್ಕೃತಿಯ ಪೂರ್ವ ಪೀಠಿಕೆ'ಯ ಕೊನೆಯ ಸಾಲು. ಈ ಪ್ರಾಮಾಣಿಕತೆ ಶಂಬಾ ಅವರ ಎಲ್ಲ ಸಂಶೋಧನಾ ಕೃತಿಗಳಲ್ಲಿ ಕಂಡುಬರುತ್ತವೆ.

ಸಂಶೋಧಕನಿಗೆ ಆಕರನಿಷ್ಠೆ ಅಪಾಯಕಾರಿ. ಏಕೆಂದರೆ ಆಕರಗಳೂ ಪೂರ್ಣ ನಂಬಲರ್ಹವಲ್ಲ. ಈ ಸಂದರ್ಭದಲ್ಲಿ ಬಳಸಬೇಕಾದ ಸಂಶೋಧನಾ ವಿಧಾನವೆಂದರೆ ಒಂದು ವಿಷಯವನ್ನು ಖಚಿತ ಮಾಡಿಕೊಳ್ಳಲು ಲಭ್ಯವಾಗುವ ಹಲವು ದಾಖಲೆಗಳನ್ನು ಸಂಗ್ರಹಿಸಿ ಪರಿಶೀಲಿಸುವುದು, ಅವು ಸ್ಪಷ್ಟ ನಿರ್ಣಯಕ್ಕೆ ಬರಲು ಸಹಕರಿಸದಿದ್ದರೆ ತಾತ್ಕಾಲಿಕವಾದ ಅನುಮಾನಿತ ನಿರ್ಧಾರ ಪ್ರಕಟಿಸುವುದು. ತಕ್ಕ ದಾಖಲೆ ಸಿಕ್ಕರೆ ಈ ಅನುಮಾನಿತ ನಿರ್ಧಾರವನ್ನು ಮರುಪರಿಶೀಲನೆ ಮಾಡುವುದು. ಆಕರನಿಷ್ಠಗಿಂತಲೂ ಅಪಾಯಕಾರಿ ಸಿದ್ಧಾಂತ ನಿಷ್ಠೆ. ನಿರ್ದಿಷ್ಟ ಸಿದ್ಧಾಂತಕ್ಕೆ ತನ್ನನ್ನು ತೆತ್ತುಕೊಳ್ಳುವ ಸಂಶೋಧಕ ಸಂಶೋಧನೆಗೆ ದ್ರೋಹವೆಸಗುತ್ತಾನೆ. ಶಂಬಾ ಅವರು ಇದರ ಬಗ್ಗೆ ಗಾಢ ಎಚ್ಚರವಿದ್ದ ಸಂಶೋಧಕರು. ಅವರು ಲಿಖಿತ ದಾಖಲೆಗಳನ್ನು ಮಾತ್ರವಲ್ಲದೆ ಸಂಕೇತ, ಆಚರಣೆ, ನಂಬಿಕೆಗಳನ್ನೂ ಆಕರವಾಗಿ ಬಳಸುತ್ತಿದ್ದರು. ತಮ್ಮ ನಿಲುವುಗಳನ್ನು ಹೊಸ ಓದು ಮತ್ತು

ಚಿಂತನೆಯ ಬೆಳಕಿನಲ್ಲಿ ಮತ್ತೆ ಮತ್ತೆ ಪುನರ್ ವಿಮರ್ಶೆ ಮಾಡಿಕೊಳ್ಳುತ್ತಿದ್ದರು. ವೈದಿಕ ಕುಟುಂಬದಿಂದ ಬಂದ ಶಂಬಾ ತಮ್ಮ ಸಂಶೋಧನೆಯ ಆರಂಭದ ದಿನಗಳಲ್ಲಿ ಭಕ್ತಿ–ಅಧ್ಯಾತ್ಮದ ಕಡೆ ಗಮನ ಹರಿಸಿದ್ದರೂ ಕೊನೆಯ ದಿನಗಳಲ್ಲಿ ಅವರು ತಮ್ಮ ವೈಚಾರಿಕ ನಿಲುವಿನಲ್ಲಿ ಬದಲಾದರು. ಗುರುಲಿಂಗ ಕಾಪಸೆ ಅವರು 'ಶಂ.ಬಾ ಸ್ಮೃತಿಗಂಧ' ಕೃತಿಯಲ್ಲಿ ತಿಳಿಸುವಂತೆ ಶಂಬಾ ಅವರು ಗೆಳೆಯರ ಗುಂಪಿನ ಆರಂಭದ ದಿನಗಳಲ್ಲಿ ಶ್ರೀ ಅರವಿಂದರ ಕಡೆಗೆ ವಾಲಿದ್ದರು. ಶ್ರೀ ಅರವಿಂದರ ಚರಿತ್ರೆಯನ್ನು ಕನ್ನಡದಲ್ಲಿ ಬರೆದ ಮೊದಲಿಗರು ಅವರು. ಹಾಗಿದ್ದರೂ, ಅವರು ಮಧುರಚೆನ್ನರಂತೆ, ಬೇಂದ್ರೆಯವರಂತೆ ಶ್ರೀಮಾತಾರವಿಂದರ ಅಪ್ಪಟ ಭಕ್ತರಲ್ಲ. ಅವರ ವೈಚಾರಿಕ ಅತೀಂದ್ರತೆಯಿಂದ ಬಿಡಿಸಿಕೊಂಡರು.' ಇದೇ ಕೃತಿಯಲ್ಲಿ ಎನ್ಕೆ ಕುಲಕರ್ಣಿ ಅವರು ತಿಳಿಸುವಂತೆ ಶಂಬಾ ಅವರು 'ಶ್ರೀ ಅರವಿಂದರ ಪ್ರಜ್ಞಾವಂತಿಕೆಯ ಪರಮಸಾಧನೆಯ ಬಗೆಗೂ ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ'

೩. ಬಹುಮುಖೀ ನೆಲೆಗಳನ್ನು ಒಳಗೊಂಡ ಸಂಶೋಧನೆ

ಸಂಶೋಧನೆಯಲ್ಲಿ ಮುಖ್ಯವಾಗಿ ಎರಡು ಪ್ರವೃತ್ತಿಗಳು ಕಂಡು ಬರುತ್ತವೆ. ಒಂದು– ಆಳವಾಗಿ ಅಧ್ಯಯನ ಮಾಡಿ ತಳವನ್ನು ಶೋಧಿಸಿ ತೆಗೆಯಲು ಪ್ರಯತ್ನಿಸುವುದು; ಇನ್ನೊಂದು – ಅಗಲವಾಗಿ, ವಿಶ್ವದ ಉದ್ದಗಲಗಳಲ್ಲಿ ಆದಷ್ಟು ದೂರದೃಷ್ಟಿಯನ್ನು ಚಾಚು ಸಮಗ್ರತೆಯಿಂದ ಸತ್ಯವನ್ನು ಪರಿಶೀಲಿಸುವುದು. ಆದರೆ ಶಂಬಾ ಯಾವುದೇ ಒಂದು ವಿಧಾನಕ್ಕೆ ಕಟ್ಟುಬೀಳುವುದಿಲ್ಲ. ಅವರಲ್ಲಿ ಇವೆರೆಡೂ ಪ್ರಬಲವಾಗಿದ್ದವು. ತಾಳ್ತಜೆ ವಸಂತಕುಮಾರ ಅವರು ಗ್ರಹಿಸುವಂತೆ ಶಂಬಾ ಅವರ ಚಿಂತನೆಗೆ ಎರಡು ನೆಲೆಗಳಿವೆ. ಒಂದು ವ್ಯಷ್ಟಿ ಪ್ರಜ್ಞೆಯದು. ಇಲ್ಲಿ ಅವರು ಮಾನವನ ಕುರಿತು ಚಿಂತಿಸುತ್ತಾರೆ. ಎರಡನೆಯದು ಸಮಷ್ಟಿ ಪ್ರಜ್ಞೆಯದು. ಶಂಬಾ ಅವರ ಸಂಸ್ಕೃತಿ ಪರವಾದ ಬರಹಗಳೆಲ್ಲವೂ ಈ ಎರಡನೆಯ ನೆಲೆಯಿಂದ ವಿನ್ಯಾಸಗೊಳ್ಳುವವೇ ಆಗಿವೆ.'

'ಕನ್ನಡ ಸಂಸ್ಕೃತಿಯ ಅಧ್ಯಯನದ ಮುಖಾಂತರ ಭಾರತೀಯ ಸಂಸ್ಕೃತಿಯ ಅಧ್ಯಯನವನ್ನೂ, ಭಾರತೀಯ ಸಂಸ್ಕೃತಿಯ ಅಧ್ಯಯನದ ಮುಖಾಂತರ ಕನ್ನಡ ಸಂಸ್ಕೃತಿಯ ಅಧ್ಯಯನವನ್ನೂ ಒಂದಕ್ಕೊಂದು ಪೂರಕವಾದ ವ್ಯಾಸಂಗವಾಗಿ ಜೋಶಿ ಅವರು ಬಳಸಿಕೊಂಡರು' ಎಂದು ಮಲ್ಲೇಪುರಂ. ಜಿ ವೆಂಕಟೇಶ ಅವರು ಅಭಿಪ್ರಾಯಪಡುತ್ತಾರೆ. ಶಂಬಾ ಅವರ ಸಂಶೋಧನೆಯ ಹಿನ್ನೆಲೆಯಲ್ಲಿ ಈ ಮಾತುಗಳು ಚರ್ಚೆಯನ್ನು ಬಯಸುತ್ತದೆ. ಮುಖ್ಯವಾಗಿ ಈ ಸಂದರ್ಭದಲ್ಲಿ 'ಭಾರತೀಯ ಸಂಸ್ಕೃತಿ' ಎನ್ನುವುದರ ವ್ಯಾಖ್ಯಾನವನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ನಿರ್ದಿಷ್ಟ ಭಾಷೆ, ಸಾಹಿತ್ಯ, ಜನವರ್ಗ ಹಾಗೂ ಜೀವನಕ್ರಮಗಳನ್ನು 'ಭಾರತೀಯ'ವೆಂದು ಕರೆಯುವ ಹಾಗೂ ಉಳಿದವನ್ನು ಪರಿಶಿಷ್ಟದಲ್ಲಿಡುವ ನಿಲುವು, ವಸಾಹತುಶಾಹಿ ಕಾಲದಲ್ಲಿ ಪ್ರಬಲವಾಗಿದ್ದ ರಾಷ್ಟ್ರೀಯ ರಾಜಕಾರಣದ ಒಂದು ಭಾಗವೇ ಆಗಿತ್ತು. ಈ 'ಭಾರತೀಯ' ಭಿತ್ತಿಯು ತೋರಿಕೆಗೆ

ವಿಶಾಲವಾಗಿದ್ದು ವಾಸ್ತವದಲ್ಲಿ ಸಂಕುಚಿತವಾಗಿದೆ. ಇದು ತನಗೆ ಪ್ರಿಯವಲ್ಲದ ಜಗತ್ತುಗಳನ್ನೆಲ್ಲ ಚೌಕಟ್ಟಿನಿಂದ ಹೊರಗಿಡುವ ರಾಜಕಾರಣ ಮಾಡುತ್ತದೆ. ವೇದ, ಗೀತೆ, ಗೋರಕ್ಷಣೆ, ಸಂಸ್ಕೃತ ಮುಂತಾದ ವೈದಿಕ ಸನಾತನವಾದಿ ಸಂಗತಿಗಳು 'ಭಾರತೀಯ ಸಂಸ್ಕೃತಿ' ಎಂದು ವ್ಯಾಖ್ಯಾನಗೊಳ್ಳುವುದರಿಂದ ಇವುಗಳ ಕುರಿತು ತಮ್ಮ ಸಂಶೋಧನೆಯ ಮೂಲಕ ಮೌಲಿಕ ಪ್ರಶ್ನೆಗಳನ್ನೆತ್ತಿದ ಶಂಬಾ ಅವರ ಸಂದರ್ಭದಲ್ಲಿ 'ಭಾರತೀಯ ಸಂಸ್ಕೃತಿ' ಎನ್ನುವುದನ್ನು ಸ್ಪಷ್ಟಗೊಳಿಸಿಕೊಳ್ಳಬೇಕಾಗಿದೆ. ಈ ಸ್ಪಷ್ಟತೆ ಯಾಕೆ ಬೇಕಾಗಿದೆಯೆಂದರೆ ಸ್ವತಃ ಶಂಬಾ ಅವರೇ ತಮ್ಮ ಕೊನೆಯ ದಿನಗಳಲ್ಲಿ ಭಾರತೀಯ ಸಂಸ್ಕೃತಿಯ ಸಂಕೇತಗಳಲ್ಲಿ ವ್ಯತ್ಯಾಸವಾಗಿರುವ ಬಗ್ಗೆ ಆತಂಕಿತರಾಗಿದ್ದರು. 'ಭಾರತೀಯ ಸಂಸ್ಕೃತಿಯ ಸಂಕೇತಗಳಲ್ಲಿ ವ್ಯತ್ಯಾಸವಾಗಿದೆಯೆಂದು ನನಗೆ ಅನ್ನಿಸುತ್ತಿದೆ. ಅದು ಇಂದ್ರಿಯರೂಪಕ್ಕೆ ಬಂದಿರುವುದನ್ನು ಅರಿತು ನನಗೆ ಗಾಬರಿಯಾಗಿದೆ' ಎಂದು ಪುಸ್ತಕವೊಂದರ ಅಭ್ಯಾಸದ ಹಿನ್ನೆಲೆಯಲ್ಲಿ ತನಗೆ ತಿಳಿಸಿದ್ದರೆಂದು ನಾ. ಗೀತಾಚಾರ್ಯ 'ಶಂಬಾ ಸ್ಮೃತಿಗಂಧ' ಕೃತಿಯಲ್ಲಿ ದಾಖಲಿಸಿದ್ದಾರೆ.

ಆರಂಭದಲ್ಲಿ ಹಲವು ವಿಚಾರಗಳಲ್ಲಿ ಚದುರಿ ಹೋದ ಶಂಬಾ ಅವರ ಚಿಂತನೆ ನಿಧಾನವಾಗಿ ಕನ್ನಡ ಭಾಷಾಶಾಸ್ತ್ರ ಮತ್ತು ಜನಪದದ ಕಡೆಗೆ ಹೊರಳಿತು. ಅದುವರೆಗಿನ ಸಾಂಪ್ರದಾಯಿಕ ಮಾರ್ಗವನ್ನು ತೊರೆದ ಶಂಬಾ ಸಾಧ್ಯವಾದ ಜ್ಞಾನದ ಎಲ್ಲ ಶಾಖೆಗಳನ್ನು ಜೀರ್ಣಿಸಿಕೊಂಡು ಸಂಶೋಧನೆಯಲ್ಲಿ ತಮ್ಮದೇ ಆದ ಹೊಸ ಮಾರ್ಗವೊಂದನ್ನು ಅನ್ವೇಷಿಸಿದರು. ಅವರ ಕೃತಿಗಳು ತೋರಿಕೆಗೆ ಭಾಷಾವಿಜ್ಞಾನದ ಪರಿಕರಗಳಿಂದ ಶೋಧನೆಗೆ ಹೊರಟಂತೆ ಕಂಡರೂ, ಅವುಗಳಲ್ಲಿ ಮಾನವ ವಿಕಾಸದ ಮಜಲುಗಳನ್ನು ಹುಡುಕಲು ಸಾಧ್ಯವಾಗುವ ಎಲ್ಲ ಸಾಹಿತ್ಯೇತರ ಜ್ಞಾನದ ಶಾಖೆಗಳು ಅಡಗಿವೆ. ಮಲ್ಲೇಪುರಂ ಜಿ. ವೆಂಕಟೇಶ ಅವರು ಗ್ರಹಿಸುವಂತೆ ಶಂಬಾ ಅವರ ಸಂಸ್ಕೃತಿ ಅಧ್ಯಯನ ಏಕರೂಪವಾದುದಲ್ಲ. ಅದು ಬಹುಮುಖೀ ನೆಲೆಗಳನ್ನು ಒಳಗೊಂಡಿದ್ದು, ಆ ನೆಲೆಗಳಲ್ಲಿ ಪ್ರಧಾನವಾದ ಗ್ರಹಿಕೆಯಿರುವುದೇ ತಾತ್ವಿಕವಾದ ಹುಡುಕಾಟದಲ್ಲಿ. ಈ ಹುಡುಕಾಟ ಕೇವಲ ಓದಿನಿಂದ ಅಧ್ಯಯನದಿಂದ ದತ್ತವಾದುದಲ್ಲ ; ಸೂಕ್ಷ್ಮವಾದ ಬದುಕಿನ ನಿರೀಕ್ಷಣದಿಂದ ಬಂದದ್ದು.

೪. ಜಾತ್ಯತೀತ ನೆಲೆಯ ಚಿಂತನೆಗಳು

ಕಂನಾಡಿನ ಬಗೆಗಿನ ಕುರುಡು ಶ್ರದ್ಧೆಯ ಮಾತುಗಳ ಹಿಂದೆ ಏನಾದರೂ ಸತ್ಯವಿದೆಯೇ ಎನ್ನುವುದನ್ನು ಹುಡುಕುವುದಕ್ಕಾಗಿ ಕಂನಾಡಿನ ಮೂಲಗಳನ್ನು ಇತಿಹಾಸದಲ್ಲಿ ಗುರುತಿಸಲು ಶಂಬಾ ಹೊರಡುತ್ತಾರೆ. ಹೀಗೆ ಹೊರಟ ಶಂಬಾ ಅವರ ಸಂಶೋಧನೆ ಕನ್ನಡದ ಇತಿಹಾಸ, ಅದರ ವಿಸ್ತಾರಗಳ ಕುರಿತಂತೆ ಕನ್ನಡಕ್ಕೆ ಹೊಸ ಚೈತನ್ಯವನ್ನು ತಂದಿದೆ. ಆತ್ಮವಿಶ್ವಾಸವನ್ನು ಮೂಡಿಸಿದೆ. ಕನ್ನಡ ಭಾಷೆ ಕುರಿತ ಅವರ ಕಳಕಳಿ ಎಣೆಯಿಲ್ಲದ್ದು. 'ನಿಮ್ಮ ನಾಲಗೆಯಲ್ಲಿ ಅಮೃತವಿದೆ, ನಿಮ್ಮ

ಕೈಯಲ್ಲಿ ಸಂಜೀವನದ ಶಕ್ತಿಯಿದೆ. ನೀವು ಮನಸ್ಸು ಮಾಡಿದರೆ ಆವುದು ಅಸಾಧ್ಯ? ನಿರ್ಜೀವಿಗಳಿಗೆ ಜೀವಕಳೆಯನ್ನಿತ್ತ ನೀವು, ಐದು ಸಾವಿರ ವರುಷಗಳಿಂದಲೂ ಇಂದಿಲ್ಲ ನಾಳೆ ತನಗೆ ಉಜ್ವಲವಾದ ಭವಿಷ್ಯತ್ಕಾಲವು ಇದ್ದೇ ಇದೆಯೆಂಬ ನಂಬುಗೆಯಿಂದ ಜೀವ ಹಿಡಿದುಕೊಂಡಿರುವ ಕನ್ನಡಕ್ಕೆ ನವಚೈತನ್ಯ ಎರೆಯಲಾರಿರಾ?'[1] ಎಂಬ ಅವರ ಮಾತುಗಳು ಬೇರೆಯವರ ವಿಷಯದಲ್ಲಾಗಿದ್ದರೆ ಕೇವಲ ಭಾವುಕವಾದವುಗಳೆನಿಸುತ್ತಿದ್ದವು. ಆದರೆ ಕನ್ನಡ ಕುರಿತ ಶಂಬಾ ಅವರ ಸಂಶೋಧನೆಯ ಆಳ ಮತ್ತು ವಿಸ್ತಾರ ಈ ಮಾತುಗಳಿಗೆ ಗಂಭೀರತೆಯನ್ನು ತರಿಸಿವೆ. ತಮ್ಮ ಬಹುಪಾಲು ಬದುಕನ್ನೇ ಕನ್ನಡ ಭಾಷೆ ಮತ್ತು ಕನ್ನಡ ಜನಾಂಗ ಕುರಿತ ಸಂಶೋಧನೆಗೆ ಮೀಸಲಿಟ್ಟ ಶಂಬಾ ಅವರ ಕನ್ನಡದೆಡೆಗಿನ ಅಭಿಮಾನ ಮತ್ತು ಬದ್ಧತೆ ಹೋಲಿಕೆಗೆ ನಿಲುಕದ್ದು. ಇದನ್ನೆಲ್ಲ ಅರಿತೂ ಹಲವು ಮುಖ್ಯಪ್ರಶ್ನೆ ಬಗೆಹರಿಯದೆ ನಿಂತಿವೆ.

ಕನ್ನಡಿಗರ ನಿರಭಿಮಾನ ಶಂಬಾ ಅವರ ಟೀಕೆಗೆ, ಆಕ್ರೋಶಕ್ಕೆ ಸದಾ ತುತ್ತಾಗುತ್ತಿದ್ದ ಸಂಗತಿ 'ಕಂನಾಡತಾಯ ಮಕ್ಕಳು ಈವರೆಗೆ ತಮ್ಮ ತಾಯನ್ನು ಮರೆತರು. ಕಂನಾಡಿನಲ್ಲಿ ಹುಟ್ಟಿ, ಕಂನಾಡ ಅನ್ನದಿಂದ ಬೆಳೆದರೂ ಈ ಭಾಷೆಗೆ ಕೃತಜ್ಞರಾಗಲಿಲ್ಲ. ಪರಭಾಷೆಗೆ ಒಲಿದು ಅದನ್ನೇ ತಮ್ಮದನ್ನಾಗಿ ಮಾಡಿಕೊಂಡು ಅದಕ್ಕೆ ಪ್ರೋತ್ಸಾಹವನ್ನೀವ ಕೆಲಸವು ಈ ದೇಶದಲ್ಲಿ ಬಹುಕಾಲದಿಂದ ನಡೆಯುತ್ತ ಬಂದಿತು. ಕರ್ಣಾಟ ರಮಾರಮಣ, ಕರ್ಣಾಟ ಸಿಂಹಾಸನಾಧೀಶನಾದ ವಿಜಯನಗರದ ಕೃಷ್ಣರಾಜನು ತೆಲುಗಿನ ಭಕ್ತ! ಕಂನಾಡಿನ ಕೊನೆಯ ಸಾಮ್ರಾಜ್ಯದ ಕೊನೆಯ ಮಹಾರಾಜನವರೆಗೂ ಇದೇ ಹಾಡು'[2] ಇಲ್ಲೆಲ್ಲ ಶಂಬಾ ಅವರು ಕನ್ನಡದ ಎದುರು ನಿಲ್ಲಿಸುತ್ತಿರುವ ಭಾಷೆಗಳು ಮರಾಠಿ, ತೆಲುಗುನಂತಹ ನಮ್ಮ ಸೋದರಭಾಷೆಗಳೇ ಎನ್ನುವುದು ಮುಖ್ಯವಾದ ಸಂಗತಿ. ಆದರೆ ಕನ್ನಡವನ್ನು ಕಟ್ಟಿ ಬೆಳೆಸಿದ ದೊರೆ ಎಂದು ಕೆಲವು ಚರಿತ್ರೆಗಳು ಮಾಡಿದ ಕೃಷ್ಣದೇವರಾಯನ ವೈಭವೀಕರಣವನ್ನು ಅಲ್ಲಗಳೆಯುತ್ತಾರೆ. ಇನ್ನೊಂದೆಡೆ ಅವರು ವಿಜಯನಗರ ಸಾಮ್ರಾಜ್ಯವನ್ನು 'ಕನ್ನಡ ರಕ್ಷಕ' ಸಾಮ್ರಾಜ್ಯವೆಂದು ಕರೆದು ಕೃಷ್ಣದೇವರಾಯನನ್ನು ಕುರಿತ ತಮ್ಮ ನಿಲುವಿಗೆ ವಿರುದ್ಧವಾದ ಅಭಿಪ್ರಾಯವನ್ನು ಮಂಡಿಸುತ್ತಾರೆ.

ಸಾವಿರಾರು ವರ್ಷಗಳಿಂದ ಬಾಳಿಕೊಂಡು ಬಂದ ಕನ್ನಡ ಭಾಷೆ ಕನ್ನಡಿಗರಿಂದಲೇ ನಿರ್ಲಕ್ಷಕ್ಕೆ ಒಳಗಾಗಿ ಅಳಿಯುತ್ತಿದೆ ಎಂಬ ವಿಷಾದ ಮತ್ತು ಆಕ್ರೋಶ ಕನ್ನಡ ಅಸ್ಮಿತೆ ಕುರಿತ ಬಹುಪಾಲು ಎಲ್ಲಾ ಚಿಂತನಾಧಾರೆಗಳಲ್ಲಿ ಕಂಡುಬರುತ್ತದೆ. ಇವುಗಳ ವಿಷಾದ ಮತ್ತು ಆಕ್ರೋಶಗಳ ತೀವ್ರತೆಯಲ್ಲಿ ವ್ಯತ್ಯಾಸವಿದೆ. ಜನಪ್ರಿಯ ನೆಲೆಯಲ್ಲಿ ಇದು ಅತಿವಾಚ್ಯವೆನಿಸುತ್ತದೆ. ಸಾಂಸ್ಕೃತಿಕ ನೆಲೆಯ ಕನ್ನಡ ಅಸ್ಮಿತೆಗೆ ಈ ವಿಷಾದ ಮತ್ತು ಆಕ್ರೋಶದೊಂದಿಗೆ ವ್ಯಂಗ್ಯವೂ ಸೇರ್ಪಡೆಯಾಗುತ್ತದೆ. ಇದು ಹೆಚ್ಚು ಪರಿಣಾಮ ಬೀರುವಂತಹದ್ದಾಗಿದೆ. ಈ ಹಿನ್ನೆಲೆಯಲ್ಲಿ ಶಂಬಾ ಅವರ ಈ ಮಾತುಗಳನ್ನು ಗಮನಿಸಬಹುದು 'ದಕ್ಷಿಣದವರು ಎಂದರೆ ಕನ್ನಡನು ಉತ್ ವೃತ್ತನಲ್ಲ; ಉತ್ ಹಟನೂ ಅಲ್ಲ.

'ಮಾತು ಬಂದಾಗ ಸೋತು ಹೋದವನೆ 'ಜಾಣ' ಎಂಬುದು ಕನ್ನಡರ ಆದರ್ಶ. ಅದಕ್ಕಾಗಿಯೇ ಅವರು ಸೋತುದು; ಹಿಂಜರಿದುದು. ತಮ್ಮ ಮನೆಮಾರುಗಳನ್ನು ಬಂದವರಿಗೆ ಕೊಟ್ಟು, ತಾವು ದೇಸಿಗರಾಗಿ ಇನ್ನಾದರೂ ನಾವು ಕೂಡಿಕೊಂಡು ಬಾಳುವ ನೆಮ್ಮದಿಯಿಂದ ಇರುವ ಎಂದು, ಹಾಗೆ ಆಚರಿಸಿ ಅರಿಕೆ ಮಾಡಿಕೊಂಡುದು. ಆದರೆ ಹೊರಗಿನವರು ಕನ್ನಡರ ಈ ಸ್ವಭಾವಕ್ಕೆ ತಿರುವುಮುರುವು ಅರ್ಥ ಮಾಡಿಕೊಂಡರು. 'ಮಾತು ಬಂದಾಗ ಸೊತು ಹೋಗುವುದು ಜಾಣತನ'ವೆಂದು ಕನ್ನಡರ ತಿಳುವಳಿಕೆ. ಸೋಲುವವರು ಕೈಲಾಗದವರು ಹೇಡಿಗಳು ಎಂದು ಉತ್ತರದವರ ಗ್ರಹಿಕೆ. ಕನ್ನಡರ ಸೋಲಿನ ರಹಸ್ಯವನ್ನು ಯಾರೂ ಅರಿತುಕೊಳ್ಳಲಿಲ್ಲ. ಸೋಲುವುದರಿಂದ ಸಮೂಲ ನಾಶಕ್ಕೆ ಒಳಗಾಗುವ ಹೊತ್ತು ಮಾತ್ರ ಬಂದೊದಗಿದೆ ಕನ್ನಡಿಗರಿಗೆ'[೩]

ಭೌಗೋಳಿಕ ಕರ್ನಾಟಕವನ್ನು ಪರರು ಒತ್ತುವರಿ ಮಾಡಿಕೊಳ್ಳದಂತೆ, ವಶಪಡಿಸಿಕೊಳ್ಳದಂತೆ ಕನ್ನಡಿಗರು ಎಚ್ಚರ ವಹಿಸಬೇಕೆಂಬುದಷ್ಟೇ ಶಂಬಾ ಕಾಳಜಿ. ಆಕ್ರಮಿಸುವವರು ಎಲ್ಲರೂ ಕನ್ನಡಕ್ಕೆ ವಿರೋಧಿಗಳೇ. ಚಿದಾನಂದಮೂರ್ತಿ ಅವರು ಕನ್ನಡ ನಾಡಿನ ಮೇಲೆ ಆಕ್ರಮಣ ಮಾಡಿದವರನ್ನು ಮತೀಯ ನೆಲೆಯಲ್ಲಿ ವಿಭಜಿಸಿ ನೋಡಿದಂತೆ ಶಂಬಾ ಪಕ್ಷಪಾತ ಮಾಡುವುದಿಲ್ಲ. ಶಂಬಾ ಅವರು ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಹಿಂದೂಗಳೇ ಆದ ಮರಾಠರ ಪಾತ್ರವನ್ನು ಮರೆಯದೆ ಉಲ್ಲೇಖಿಸುತ್ತಾರೆ. 'ಮರಾಠ್ಠರು ಈಗ 'ಹಿಂದೂಪದಪಾದಶಾಹಿ'ಯ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿದ್ದರೂ ವಿಜಯನಗರದ ಹಿಂದೂ ಸಿಂಹಾಸನವನ್ನು ಹಾಳುಮಾಡಲು ನೆರವಾದವರು ಮರಾಠ್ಠರೆ'[೪]

ಚರಿತ್ರೆಯಲ್ಲಿ ಕನ್ನಡದ ಮೇಲಿನ ಗಾಯಗಳಿಗೆ ವರ್ತಮಾನದಲ್ಲಿ ಸೇಡು ತೀರಿಸಿಕೊಳ್ಳಬೇಕೆಂಬ ಪ್ರೇರಣೆಯನ್ನು ಶಂಬಾ ಉತ್ತೇಜಿಸುವುದಿಲ್ಲ. ಕನ್ನಡದ ನಾಡಿನಲ್ಲಿ ಆಳಿ ಹೋದ ರಾಜರ ಕೊಡುಗೆಯನ್ನು ದಾಖಲಿಸುವಾಗಲೂ ಅದರ ವೈಭವೀಕರಣಕ್ಕೆ ಹೋಗದ ವಿಮರ್ಶಾತ್ಮಕ ಗುಣ ಶಂಬಾ ಅವರಲ್ಲಿದೆ. ಕಣ್ಮರೆಯಾದ ಕನ್ನಡ ಕೃತಿಯಲ್ಲಿ ಅವರ ನಿಲುವು ಸ್ಪಷ್ಟವಿದೆ: 'ಕನ್ನಡರು ಆತ್ಮವಿಶ್ವಾಸವುಳ್ಳವರಾದರೆ ಏನನ್ನೂ ಮಾಡಬಲ್ಲರೆಂಬುದನ್ನು ಜಗತ್ತಿಗೆ ಮನಗಾಣಿಸಿಕೊಡಲು ಇತಿಹಾಸವು ಸಿದ್ಧವಿದೆ. ಈಗ ಕೊರತೆಯಿರುವುದೇನು? ಶ್ರದ್ಧೆ ಬೇಕು. ಆತ್ಮವಿಶ್ವಾಸ ಬೇಕು, ಅಹಂಕಾರವಲ್ಲ. ಉನ್ಮಾದ ಮದೋನ್ಮತ್ತ ವೃತ್ತಿಯಲ್ಲ; ಬೇಕಾಗಿರುವುದು ಜ್ಞಾನಸಹಿತ ಸನ್ನಿಷ್ಠೆ ಕೃತಜ್ಞತೆ, ಕೃತಘ್ನರಿಂದ ಕನ್ನಡವು ಹಾಳಾಯಿತು. ನಾವು ಕೊಂಕಣಸ್ಥರು, ಅಯ್ಯರರು, ಅಯ್ಯಮಗಾರರು, ಸಾರಸ್ವತರು, ಮರ್ಹಾಟರು, ಮುಸಲ್ಮಾನರು ಎಂದು ಕನ್ನಡದ ಉಪ್ಪುಂಡವರಲ್ಲಿಯೇ ಕನ್ನಡಕ್ಕೆ ತಿರುಗಿಬಿದ್ದವರುಂಟು. ಧಾರ್ಮಿಕಾದಿ ಆಗ್ರಹಗಳಿಂದಲೂ ಕನ್ನಡಕ್ಕೆ ಆದ ಹಾನಿಯು ಎಣಿಸಲಾರದಷ್ಟು. ಕನ್ನಡದಲ್ಲಿ ಶ್ರದ್ಧೆಯನ್ನು ವಹಿಸುವವನಿಗೆ ಮತವಿಚಾರಗಳೂ ಅಡ್ಡಬರಲಾಗದು.'[೫]

೫. ಪ್ರಖರ ವೈಚಾರಿಕತೆ

ಶಂಬಾ ಶುದ್ಧ ಬೌದ್ಧಿಕರಲ್ಲ, 'ಕರ್ನಾಟ ಸಂಸ್ಕೃತಿಯ ಪೂರ್ವ ಪೀಠಿಕೆ'ಯಿಂದ ಈಚೆಗೆ ಅವರು ಬರೆದಿರುವ ಕೃತಿಗಳಲ್ಲಿ, ಅವರು ಸತ್ಯವನ್ನು ಹುಡುಕಲು ಉಪಯೋಗಿಸಿದ ತಂತ್ರಗಳೆಲ್ಲ ಕಾವ್ಯತಂತ್ರಗಳಾಗಿವೆ. ಎಂದು ಕೀರ್ತಿನಾಥ ಕುರ್ತಕೋಟಿ ಅವರು ವಿಮರ್ಶಿಸುತ್ತಾರೆ. ಆದರೆ ಚಿಂತನೆಯ ಸಂದರ್ಭದಲ್ಲಿ ಅವರು ಕವಿಯಂತೆ ಭಾವಾವೇಷಕ್ಕೆ ಎಂದೂ ಎಡಗೊಡದ 'ಪ್ರಖರ ವೈಚಾರಿಕರು' ಎಂಬ ಚಂದ್ರಶೇಖರ ಪಾಟೀಲರ ಗ್ರಹಿಕೆ ಶಂಬಾ ಚಿಂತನೆಗೆ ಹತ್ತಿರವಾದದ್ದು. ಹೀಗಿದ್ದರೂ ಕನ್ನಡದ ಪ್ರಶ್ನೆ ಬಂದಾಗ ಶಂಬಾ ಅವರು ಭಾವುಕರಾಗುವುದಿದೆ. ಶಂಬಾ 'ಕನ್ನಡವೆಂಬುದೆ ನಮ್ಮ ಸಂಜೀವಿನೀ ಮಂತ್ರ ; ಮೃತ್ಯಂಜಯ ಜಪ. ಅಲ್ಲದೆ, ಬೇರೆ ಚಿಲ್ಲರೆಗಳ ಆರಾಧನೆಯು ನಮಗೆ ಚೆಲ್ಲಾಪಿಲ್ಲಿ ಮಾಡಲು ಮಾತ್ರ ಕಾರಣ ; ಬುದ್ಧಿಭೇದಕ್ಕೆ ಔತಣ. ಆದುದರಿಂದ, ನಮ್ಮ ಏಳಿಗೆಯಾಗಬೇಕಾಗಿದ್ದರೆ 'ಕನ್ನಡ'ದ ಅಖಂಡ ನಾಮಸ್ಮರಣೆಯೊಂದೆ ದಾರಿಯಲ್ಲವೆ?'[೬] ಎಂದು ಕರೆಕೊಡುವಾಗ ಅವರು ಭಾವುಕರಾಗಿರುವುದು ಎದ್ದು ಕಾಣುತ್ತದೆ. ಕನ್ನಡಿಗರ ಒಗ್ಗಟ್ಟು, ಕನ್ನಡಭಾಷೆಯ ಬಗ್ಗೆ ಬದ್ಧತೆ ಕನ್ನಡವನ್ನು ಉಳಿಸುತ್ತದೆ ಎನ್ನುವ ವಿಶ್ವಾಸ ಶಂಬಾ ಅವರ ಈ ಮಾತಿನಲ್ಲಿದೆ. ಈ ನುಡಿಗಳು ಕುವೆಂಪು ಕನ್ನಡವನ್ನು 'ಕರ್ನಾಟಕವನ್ನು ಆಡುವ ನುಡಿ, ಮೆಟ್ಟುವ ನೆಲ, ಮುಟ್ಟುವ ಮರ, ಕುಡಿಯುವ ನೀರು' ಮುಂತಾದವುಗಳೊಂದಿಗೆ ಸಮೀಕರಿಸಿದಂತಿದೆ. ಆದರೆ ಕುವೆಂಪು ಅವರಿಗೆ ಈ ರೀತಿಯ ಭಾವುಕತೆ ಮಾತ್ರವೇ ಕನ್ನಡವನ್ನು ಉಳಿಸಲಾರದು ಎಂದು ಗೊತ್ತಿತ್ತು. ಆದ್ದರಿಂದಲೇ ಅವರು ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಕನ್ನಡ ಬದುಕಿನೊಳಗಿನ ತರತಮಗಳನ್ನು ನಿವಾರಿಸಿಕೊಳ್ಳುವ ಮೂಲಕ ಕನ್ನಡವನ್ನು ನೆಲೆಗೊಳಿಸುವುದರ ಬಗ್ಗೆ ಗಂಭೀರವಾಗಿ ಚಿಂತಿಸಿದರು. ನಮ್ಮ ಪೌರಾಣಿಕ ಪ್ರತಿಮೆಗಳಿಗೂ ನಮ್ಮ ವರ್ತಮಾನದ ಸಾಮಾಜಿಕ ರಚನೆ ಮತ್ತು ಸಮಸ್ಯೆಗಳಿಗೂ ಇರುವ ಸಂಬಂಧವನ್ನು ಕುರಿತು ಶಂಬಾ ಅವರು ಯೋಚಿಸಿದ್ದು ಬಹಳ ಮಹತ್ವದ ಸಾಂಸ್ಕೃತಿಕ ಪ್ರಸಂಗವಾಗಿದ್ದರೂ ಕುವೆಂಪು ಅವರಂತೆ ಅವರ ಚಿಂತನೆ ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ವರ್ತಮಾನದೊಂದಿಗೆ ಮುಖಾಮುಖಿಯಾಗದಿರುವ ಕಾರಣ ಅವರ ಮಾತುಗಳು ಜನಪ್ರಿಯ ನೆಲೆಯ ಕನ್ನಡ ಅಸ್ಮಿತೆಯ ಮಾತುಗಳಂತೆ ಘೋಷಣೆಗಳಾಗಿ ಬಿಡುವ ಅಪಾಯವನ್ನು ಎದುರಿಸುತ್ತಿವೆ. ಆದರೆ ಅವರ ಕನ್ನಡ ಕುರಿತ ಅರ್ಧಶತಮಾನಕ್ಕೂ ಹೆಚ್ಚಿನ ಗಂಭೀರ ಸಂಶೋಧನೆ ಇಂತಹ ಅಪಾಯದಿಂದ ಶಂಬಾ ಅವರನ್ನು ಪಾರು ಮಾಡುವಷ್ಟು ಶಕ್ತವಾಗಿವೆ.

೬. ಗತದ ಅವಿವೇಕದ ಗಾಯಗಳಿಗೆ ಮದ್ದು ಹುಡುಕುವ ಸಂಶೋಧನೆ

ಶಂಬಾ ಅವರಿಗೆ ಸಂಶೋಧನೆಯೊಂದು ಗೀಳಲ್ಲ. ಅದವರ ಪಾಂಡಿತ್ಯ ಪ್ರದರ್ಶನದ ಅಖಾಡವೂ ಆಗಿರಲಿಲ್ಲ. ಅಜೆಂಡಾವೊಂದನ್ನು ಪೋಷಿಸುವ ಮತ್ತು ಬಲಗೊಳಿಸುವ ಹಿತಾಸಕ್ತಿಯನ್ನೂ ಹೊಂದಿರಲಿಲ್ಲ. ಅವರ ಸಂಶೋಧನೆಗೆ ಒಂದು ನಿರ್ದಿಷ್ಟ ಗುರಿಯಿತ್ತು. ಸಂಶೋಧನೆಗಳು ಗತದ ಅವಿವೇಕದಿಂದ ಆದ ಗಾಯಗಳಿಗೆ ವರ್ತಮಾನದ ವಿವೇಕದ ಮದ್ದಾಗಬೇಕು. ನಿನ್ನೆಯ ಕುರಿತ ಸಂಶೋಧನೆಯಿಂದ ಕಂಡುಕೊಂಡದ್ದು ಇಂದಿನ ಬದುಕನ್ನು ಒಂದಿಷ್ಟಾದರೂ ಹಸನು ಮಾಡುವಂತಿರಬೇಕು ಎಂಬ ಆರೋಗ್ಯಕರ ಕಾಳಜಿಗಳನ್ನು ಹೊಂದಿತ್ತು. ಶಂಬಾ ಅವರ ಮಾತುಗಳಲ್ಲಿಯೇ ಹೇಳುವುದಾದರೆ 'ಯಾವುದೊಂದು ಸಂಸ್ಕೃತಿಯ ಐತಿಹಾಸಿಕ ಸ್ವರೂಪದ ಅನ್ವೇಷಣೆಯಿಂದ ಆ ಜನರ, ಆ ನಿನ್ನೆಗಳ ಫಲಿತವಾದ ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರವಾಗುತ್ತಿರಬೇಕು'. ಶಂಬಾ ಅವರು ತಮ್ಮ ಹಲವು ದಶಕಗಳ ಸಂಶೋಧನೆಗಳಿಂದ ಕಂಡುಕೊಂಡ ಸಂಶೋಧನೆಯ ಅಂತಿಮ ಉದ್ದೇಶ ಏನಾಗಿರಬೇಕೆಂಬ ಈ ಕಾಣ್ಕೆ ಎಲ್ಲಾ ಸಂಶೋಧಕರಿಗೆ ಮಾರ್ಗದರ್ಶಿ ಸೂತ್ರದಂತಿದೆ.

ಶಂಬಾ ಅವರು ತಮ್ಮ ಸಂಶೋಧನೆಯಲ್ಲಿ ಸತ್ಯಶೋಧನೆಗೆ ಎಷ್ಟು ಮಹತ್ವ ಕೊಡುತ್ತಿದ್ದರು ಎನ್ನುವುದಕ್ಕೆ ಆರ್ ಶೇಷಶಾಸ್ತ್ರಿಗಳು 'ಪಾತಳಿ' ಕೃತಿಯಲ್ಲಿ ಒಂದು ಘಟನೆಯನ್ನು ಉಲ್ಲೇಖಿಸುತ್ತಾರೆ : 'ಶಿವರಹಸ್ಯ'ವನ್ನು ಬರೆಯುತ್ತಿದ್ದ ಕಾಲದಲ್ಲಿ ಶಂಬಾ ಅವರ ಮಗನಿಗೆ ಟೈಫಾಯಿಡ್ ಬಂತು. ಇದೇ ಪುಸ್ತಕ ಪ್ರಕಟವಾದ ಕಾಲದಲ್ಲಿ ಆತನಿಗೆ ಮತ್ತೆ ಇದೇ ಖಾಯಿಲೆ ಮರುಕಳಿಸಿತು. ಆಗ ಶಂಬಾ ಅವರ ಆಪ್ತ ವಲಯದವರು ಇದು 'ಶಿವರಹಸ್ಯ'ವನ್ನು ಹೊರಗೆಡಹಿದುದರ ಫಲ ಎಂದು ಭಾವಿಸಿದರು. ಅವರ ಈ ಭಾವನೆ, ಮಾತುಗಳು ಶಂಬಾ ಅವರನ್ನು ಕೆಲಕಾಲ ದಂಗುಬಡಿಸಿತು. ಶಂಬಾ ಸ್ವವಿಮರ್ಶೆಗೆ ತೊಡಗಿದರು. 'ನಾನು ಬರೆದಿರುವುದು ಸತ್ಯ. ಈ ಸತ್ಯವನ್ನು ಹೊರಗೆಡಹಿದುದರಿಂದಾಗಿ ಆ 'ಶಿವ' ನನ್ನ ಮಗನನ್ನು 'ಕೊಂದ'ರೂ ಅಡ್ಡಿಯಿಲ್ಲ. ನನಗೆ ಸತ್ಯವೆಂದು ತೋರಿದ್ದನ್ನು ಹೇಳಿಯೇ ಇದ್ದೇನೆ' ಎಂಬ ಸಮಾಧಾನವನ್ನು ಪಡೆದರು. ಎಂದು ಆರ್. ಶೇಷಶಾಸ್ತ್ರಿ ನೆನಪು ಮಾಡಿಕೊಳ್ಳುತ್ತಾರೆ.

೭. ಕರ್ನಾಟಕತ್ವದ ಅನನ್ಯತೆಯ ಹುಡುಕಾಟ

ಶಂಬಾ ಜೋಶಿ ಅವರು ಸುಮಾರು ನಾಲ್ಕು ದಶಕಗಳಷ್ಟು ದೀರ್ಘಕಾಲ ತಮ್ಮನ್ನು ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದರು. ಭಾಷೆಯ ವಿವೇಚನೆಯು ಅದನ್ನಾಡುವ ಜನಸಮುದಾಯವನ್ನು ಗಮನದಲ್ಲಿರಿಸಿಕೊಳ್ಳದೇ ಸಾಧ್ಯವಾಗುವುದಿಲ್ಲ ಎಂದು ನಂಬಿದ್ದ ಶಂಬಾ ಸಂಸ್ಕೃತ ಮತ್ತು ಇಂಗ್ಲಿಷ್ ಕೃತಿಗಳೊಂದಿಗೆ ಜನರ ಆಚರಣೆ, ನಂಬಿಕೆ, ಸಂಕೇತಗಳ ಒಳಹೊಕ್ಕು ಆ

ಮೂಲಕ ಸತ್ಯವನ್ನು ಹೊರತೆಗೆಯುವ ವಿಭಿನ್ನವಾದ ಸಂಶೋಧನಾ ಶಿಸ್ತನ್ನು ಅನುಸರಿಸುತ್ತಿದ್ದರು. ಇವರ ಮುಖ್ಯವಾದ ಸಂಶೋಧನೆಗಳು 'ಕನ್ನಡ' ಮತ್ತು ಕನ್ನಡ 'ಜನಾಂಗ'ದ ಮೂಲದ ಹುಡುಕಾಟವಾಗಿವೆ. 'ಶಂಬಾ ಅವರು ಮರಾಠಿಯ ಸಂಬಂಧದಲ್ಲಿ ಕರ್ನಾಟಕ ಸಂಸ್ಕೃತಿಯ ಶೋಧಗೈದರೂ, ಅವರ ಮುಖ್ಯ ಹುಡುಕಾಟವು ಕರ್ನಾಟಕತ್ವದ ಅನನ್ಯತೆಯನ್ನು ಗುರುತಿಸುವತ್ತಲೇ ಇತ್ತು' ಎಂದು ತಮ್ಮ 'ಚಿಂತನೆಯ ಪಾಡು' ಕೃತಿಯಲ್ಲಿ ರಹಮತ್ ತರೀಕೆರೆ ಅವರು ಅಭಿಪ್ರಾಯ ಪಡುತ್ತಾರೆ.

೮ ಸಮಕಾಲೀನ ಮೌಲ್ಯಗಳಿಗೆ ಪ್ರತಿಸ್ಪಂದಿಸುವ ಚಿಂತನೆಗಳು

'ಶಂಬಾ ಎಂದೂ ಸೌಂದರ್ಯ ಲೋಲುಪರಾಗಿ ಪ್ರತಿಮೆಗಳ ಹಿಂದಿನ ಅರ್ಥವನ್ನು ಮರೆಯುವುದಿಲ್ಲ. ಅರ್ಥಕ್ಕಾಗಿಯೇ ಬಿಗಿ ಹುಬ್ಬಿನಿಂದ ಹೊರಡುವ ವಿದ್ವಾಂಸ, ಸಮಕಾಲೀನ ಮೌಲ್ಯಗಳಿಗೆ ಪ್ರತಿಸ್ಪಂದಿಸುವ ದಾರ್ಶನಿಕ. ಸರ್ವಾಧಿಕಾರ–ಜನತಂತ್ರ, ಅಪಾಯಕಾರಿ ವ್ಯಕ್ತಿವಾದ–ಅರ್ಥಪೂರ್ಣ ಸಮಷ್ಟಿವಾದ, ಧೂರ್ತಕಾಮ–ಲೋಕೋತ್ತರ ಪ್ರೇಮ, ಕತ್ತಲೆ–ಬೆಳಕು.. ಈ ರೀತಿಯ ಹಲವಾರು ಸಂಘರ್ಷಗಳ ಮೂಲ ರೂಪಗಳನ್ನು ವೈದಿಕ ಸಾಹಿತ್ಯದಲ್ಲೇ ಗುರುತಿಸುವ ದಾರ್ಶನಿಕ ಸಂಶೋಧಕ ಶಂಬಾ' ಎಂಬ ಡಿ.ಆರ್ ನಾಗರಾಜ್ ಅವರು 'ಪಾತಳಿ' ಕೃತಿಯಲ್ಲಿ ಹೇಳುವ ಮಾತುಗಳು ಶಂಬಾ ಅವರ ಸಂಶೋಧನೆಯ ಆಳವನ್ನು ಮತ್ತು ಸಂಕೀರ್ಣತೆಯನ್ನು ತಿಳಿಸುವುದರೊಂದಿಗೆ ಅವು ಯಾವತ್ತೂ ಕೇವಲ ಗತದತ್ತ ಮುಖ ಮಾಡದೆ ಸಮಕಾಲೀನ ಮೌಲ್ಯಗಳಿಗೆ ಸ್ಪಂದಿಸುತ್ತವೆ ಎನ್ನುವುದನ್ನು ಸೂಚಿಸುತ್ತಿವೆ. ಶಂಬಾ ಅವರ ಸಂಶೋಧನೆಯ ಮಹತ್ವವನ್ನು ಅವರ ಜೀವಿತ ಕಾಲದಲ್ಲಿ ಅರಿಯುವಲ್ಲಿ ಸಾರಸ್ವತ ವಲಯ ವಿಫಲವಾದಂತೆ ತೋರುತ್ತದೆ. ಆದರೆ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಒಂದು ಅಕಡೆಮಿಕ್ ಅಗತ್ಯವಾಗಿ ಬಳಕೆಯಾಗಲು ಆರಂಭಿಸತೊಡಗಿದಾಗ ಶಂಬಾ ಮಾದರಿ ಸಂಶೋಧನೆಯ ಅತ್ಯುತ್ತಮ ಮಾದರಿಗಳಲ್ಲಿ ಒಂದು ಎಂದು ಪರಿಗಣಿತವಾಗತೊಡಗಿತು.

'ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ಶಂಬಾ ಅವರು ಕೇಳಿಕೊಂಡ ಪ್ರಶ್ನೆಗಳು, ಹುಡುಕಿಹೊರಟ ವಿಧಾನಗಳು ಹಿಂದಣ ಬದುಕಿನ ನೆಲೆಗಳನ್ನು ನಮ್ಮೊಡನೆ ಜೋಡಿಸಿ ನೋಡುವುದು ಎಂದರೇನು? ಮತ್ತು ಅದನ್ನು ನೋಡುವುದು ಹೇಗೆ ಎನ್ನುವುದಕ್ಕೆ ಅತ್ಯಂತ ಪರಿಣಾಮಕಾರಿಯಾದ ದಾರಿಯನ್ನು ಹಿಡಿದವು ಎಂದೇ ಹೇಳಬೇಕು' ಎಂದು ಬಸವರಾಜ ಕಲ್ಗುಡಿ ಅವರು ವಿಶ್ಲೇಷಿಸುತ್ತಾರೆ. ಶಂಬಾ ಹೊಸ ತಲೆಮಾರಿನ ಸಂಶೋಧಕರಿಗೆ ಹೇಗೆ ಮಾದರಿಯಾಗಿದ್ದಾರೆ ಎನ್ನುವುದನ್ನೂ ಈ ವಿಶ್ಲೇಷಣೆ ಹೇಳುತ್ತಿದೆ.

ಶಂಬಾ ಅವರ ಸಂಶೋಧನೆಯ ವಿಶಿಷ್ಟತೆಯನ್ನು ಜಿ.ಭಾಸ್ಕರಮಯ್ಯ ಅವರು ಹೀಗೆ ಗುರುತಿಸುತ್ತಾರೆ: 'ಶಂಬಾ ಚಾರಿತ್ರಿಕ ಭಾಷಾ ವಿಜ್ಞಾನದ ರೂಪತತ್ವದ ಜತೆಗೆ ಅರ್ಥತತ್ವಕ್ಕೆ ವಿಶೇಷ ಮಹತ್ವವನ್ನು ಕೊಟ್ಟರು. ಸಾಮೂಹಿಕ ಸ್ತರದಲ್ಲಿ ಮಾನವ ಚೇತನವು ಹೇಗೆ ಕ್ರಿಯಾಶೀಲವಾಗುತ್ತದೆ ಎನ್ನುವುದಕ್ಕೆ ಭಾಷೆಯ ರಚನೆಯೇ ನಿದರ್ಶನವೆಂದು ತಿಳಿದು ಆ ಮೂಲಕ ಸಂಸ್ಕೃತಿಯ ಅಧ್ಯಯನಕ್ಕೆ ತೊಡಗಿ ಪ್ರಶ್ನೆಗಳನ್ನೆತ್ತಿದ ಶಂಬಾ– 'ಫೋನಿಮ್', 'ಮಾರ್ಫಿಮ್' ಮೊದಲಾದ ವಿದೇಶಿ ನಕಲಿನ ಯಾಂತ್ರಿಕ ಭಾಷಾ ವಿಜ್ಞಾನಿಗಳಿಗೆ ಸಹಜವಾಗಿಯೇ ನಿಲುಕಲಿಲ್ಲ. ಯಾಂತ್ರಿಕ ಭಾಷಾ ವಿಜ್ಞಾನಿಗಳಿಗೆ ಸಾಂಸ್ಕೃತಿಕ ಚೇತನವನ್ನು ಗುರುತಿಸುವ ಅದ್ವಿತಿಯ ಸಾಧನವು ಭಾಷೆಯೆಂಬುದು ತಿಳಿದಿಲ್ಲ. ಅವರ ದೃಷ್ಟಿಯಲ್ಲಿ ಆಕೃತಿ ಮತ್ತು ಧ್ವನಿ ಭಿನ್ನ ಭಿನ್ನ. ಶಂಬಾ ಅವುಗಳಲ್ಲಿ ಅವಿನಾಭಾವವನ್ನು ಕಂಡುಕೊಂಡುದರಿಂದಲೇ, ದರ್ಶನ ಶಾಸ್ತ್ರದ ನಿಷ್ಕರ್ಷೆಗಳನ್ನು ವಿವೇಕಪೂರ್ಣವಾಗಿ ತಮ್ಮದಾಗಿಸಿಕೊಂಡುದರಿಂದಲೇ ಜ್ಞಾನದ ಪರಂಪರೆಯಲ್ಲಿ ಹೊಸ ದರ್ಶನದ ಆವಿಷ್ಕಾರಕ್ಕೆ ಕಾರಣರಾದರು'.

೯. 'ನಮ್ಮದು' ಎನ್ನುವ ಏಕೈಕ ಕಾರಣಕ್ಕೆ ಒಪ್ಪಿಕೊಳ್ಳುವ ಧೋರಣೆಗೆ ಅಸಮ್ಮತಿ

ರಾಜೇಂದ್ರ ಚೆನ್ನಿ ಅವರು ಗುರುತಿಸುವಂತೆ 'ಇತ್ತೀಚೆಗೆ ಶುರುವಾದ ಇನ್ನೊಂದು ಮಾನಸಿಕ ವಿಕೃತಿಯೆಂದರೆ ಯುರೋಪಿನ ತಂತ್ರಜ್ಞಾನ ನಾಗರಿಕತೆ ಮನುಷ್ಯನ ಬದುಕಿಗೆ ಮಾರಕವಾಗುತ್ತಿರುವುದರಿಂದ ಈ ನಾಗರೀಕತೆಗಿಂತ ಹೆಚ್ಚು ಆರೋಗ್ಯಕರವಾದದ್ದು ನಮ್ಮ ಸಂಸ್ಕೃತಿಯಲ್ಲಿದೆ ಎನ್ನುವ ಮನೋಭಾವ. ಐಹಿಕವಾಗಿ ದರಿದ್ರವಾದರೇನು ಅಧ್ಯಾತ್ಮಿಕ ಸಂಪತ್ತು ಪೂರ್ವದಲ್ಲಿ ಹೇರಳವಾಗಿದೆ ಎಂದು ಹೇಳುತ್ತಿದ್ದ ಓರಿಯಂಟಲಿಸ್ಟರ ವಿಚಾರದ ಇನ್ನೊಂದು ಅವತಾರವೇ ಇದು. ಈ ಮನೋಭಾವಕ್ಕೆ ಶಂಬಾ ವಿರುದ್ಧವಾಗಿದ್ದರು. ಒಳ್ಳೆಯದು ಎಲ್ಲಿಂದಲೇ ಬರಲಿ, ಅದನ್ನು ಸ್ವೀಕರಿಸಬೇಕು, ನಮ್ಮದು ಎನ್ನುವ ಒಂದೇ ಕಾರಣದಿಂದ ಅಹಿತವಾದುದನ್ನೂ ಮುಂದುವರಿಸುವ ಸಮಾಜ ದುರಂತಕ್ಕೆ ಎಡೆ ಮಾಡಿಕೊಡುತ್ತದೆ, ಅಂತಿಮವಾಗಿ ಇದು ಸಂಸ್ಕೃತಿಯ ಪತನಕ್ಕೆ ಕಾರಣವಾಗುತ್ತದೆ ಎನ್ನುವ ವಿವೇಕವೇ ಅವರ ಸಂಶೋಧನಾ ವಿಧಾನವನ್ನು ರೂಪಿಸಿದೆ. 'ಶಂಬಾ ಅವರ ಒಳನೋಟಗಳಾಗಲೀ ಅವರು ಇಟ್ಟ ಹೊಸ ಹೆಜ್ಜೆಗಳಾಗಲಿ ನಮ್ಮ ಸಂವೇದನೆಯನ್ನು ಬದಲಾಯಿಸುವಂತಹ ಚರ್ಚೆಗಳನ್ನು ಹುಟ್ಟಿಸದಿದ್ದದ್ದು ನಮ್ಮ ಚಿಂತನೆಯ ಪರಂಪರೆಯ ಸೋಗಲಾಡಿತನವನ್ನು ತೋರಿಸುತ್ತದೆ' ಎಂಬ ರಾಜೇಂದ್ರ ಚೆನ್ನಿ ಅವರ ಅಭಿಪ್ರಾಯ ಸತ್ಯವನ್ನೇ ಹೇಳುತ್ತಿದೆ.

'ಸಂಸ್ಕೃತಿಯು ನಾಗರಿಕತೆಯಲ್ಲಿ ಮಾರ್ಪಟ್ಟ ಬಳಿಕ, ಅದು ಬೇಗನೆಯೆ ಅವನತ ಸ್ಥಿತಿಗೆ ಬರುವುದು. ಮಾನವನು ತನ್ನ ಏಳ್ಗೆಗೆಂದು ನಿರ್ಮಿಸಿಕೊಂಡ ಸಾಧನವಾದ ಸಂಪ್ರದಾಯ :

ಸಮಯವು, ಸಾಮಾಜಿಕ ಸನ್ನಿವೇಶದಲ್ಲಿ, ಬೇಗನೆಯೆ ನಿರ್ಜೀವ ಯಾಂತ್ರಿಕ ರೂಪಕ್ಕೆ ಇಳಿಯುತ್ತದೆ.'[೭] ಈ ರೀತಿ ಒಂದು ಕಾಲಘಟ್ಟದಲ್ಲಿ ಮಾನವ ಬದುಕಿನ ಜೀವಂತಿಕೆಗೆ ಕಾರಣವಾಗಿದ್ದ ಸಂಸ್ಕೃತಿ ಕ್ರಮೇಣ ನಿರ್ಜೀವವೆನಿಸುವ ಯಾಂತ್ರಿಕ ಕ್ರಿಯೆಯಾಗಿ ಮಾರ್ಪಡುವ ದುರಂತ ಶಂಬಾ ಅವರನ್ನು ಕಾಡಿದೆ. ಸಂಸ್ಕೃತಿಯನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುವ ನಾಗರಿಕರ ಕುರಿತು ಈ ವ್ಯಾಪಾರಿ ಮನೋಭಾವ ಮಾಡುವ ಪರಿಣಾಮಗಳ ಕುರಿತು ಶಂಬಾ ಅಸಮಾಧಾನ ಹೊಂದಿದ್ದರು. ಸಂಸ್ಕೃತಿಯ ದರ್ಶನವನ್ನು ಬಿಟ್ಟುಕೊಟ್ಟು ಅದನ್ನು ಕೇವಲ ಆಚರಣೆಗೆ ಸೀಮಿತಗೊಳಿಸಿಕೊಳ್ಳುವುದರಲ್ಲಿ, ಸಂಸ್ಕೃತಿಯ ರೂಪವು ಮುಂಚೂಣಿಗೆ ಬಂದು ಆಶಯವು ಹಿಂದಕ್ಕೆ ಸರಿಯುವ ಅಥವಾ ನಾಶವಾಗಿ ಹೋಗುವುದರ ಕುರಿತು, ಸಂಸ್ಕೃತಿಯ ಜೀವಪರ ಆಶಯಗಳನ್ನು ಮರೆತು ಅದನ್ನು ಲೌಕಿಕ ಪ್ರಯೋಜನಕ್ಕೆ ಬಳಸಿಕೊಳ್ಳುವುದರ ಬಗೆಗೆ ಅವರು ಚಿಂತಿತರಾಗಿದ್ದರು. ತಮ್ಮ 'ಕರ್ನಾಟ ಸಂಸ್ಕೃತಿಯ ಪೂರ್ವ ಪೀಠಿಕೆ'ಯಲ್ಲಿಯೇ ಅವರಿದನ್ನು ತೋಡಿಕೊಂಡಿದ್ದಾರೆ: 'ನಾಗರಿಕತೆಗೆ 'ಸ್ಥಿತಿ'ವಂತಿಕೆಯಲ್ಲಿ ಆಸಕ್ತಿ ಹೆಚ್ಚು. ಅದರಿಂದಾಗಿ, ಸಾಮಾನ್ಯ ಜನಕ್ಕೆ ಸಂಕೇತ-ಸಮಯಗಳ ಜೀವಂತ ಅರ್ಥಕ್ಕಿಂತ ಆ ಸಂಕೇತಗಳು ಆಗಲೆ ಪಡೆದಿರುವ ಲೌಕಿಕ (:ಸಾಮಾಜಿಕ) ಮೌಲ್ಯಗಳ ಪೇಟೆಯ ಧಾರಣೆಯ ಪ್ರಯೋಜನ ಪಡೆವ ಮೋಹವುಂಟಾಗುವುದು ಸ್ವಾಭಾವಿಕವಾಗಿದೆ'

೧೦. ಸಂಸ್ಕೃತಿ 'ಬೆಂಕಿ'ಯಾಗುವ ದುರಂತದ ಬಗ್ಗೆ ಎಚ್ಚರ

'ಸಂಸ್ಕೃತಿ' ಎಂಬ ಪಂಜು ಬಳಸುವವರ ಹಿತಾಸಕ್ತಿಗೆ ತಕ್ಕಂತೆ ಬೆಳಕಾಗುವ ಮತ್ತು ಬೆಂಕಿಯಾಗುವ ಸಾಧ್ಯತೆ ಮತ್ತು ದುರಂತಗಳ ಬಗ್ಗೆ ಶಂಬಾ ಚಿಂತಿಸಿದ್ದರು. ಸಂಸ್ಕೃತಿ 'ಬೆಂಕಿ'ಯಾಗುವ ದುರಂತವೇ ಅವರನ್ನು ಹೆಚ್ಚು ಕಾಡಿದಂತೆ ತೋರುತ್ತದೆ. ಕರ್ನಾಟಕ ಸಂಸ್ಕೃತಿಯನ್ನು ತಮ್ಮ ಅಜೆಂಡಾದ ಜಾರಿಗೆ ತಕ್ಕಂತೆ ಅರ್ಥೈಸುವ, ತಿರುಚುವ, ಬಳಸುವ ಮೂಲಭೂತವಾದಿಗಳ ಪ್ರಯತ್ನದ ಸ್ಪಷ್ಟ ಗ್ರಹಿಕೆ ಶಂಬಾ ಅವರಿಗಿತ್ತು. 'ಒಂದು ಕಾಲದ ನಡೆವಳಿ-ನುಡಿವಳಿಗಳು, ವೈಯಕ್ತಿಕವಾದ ಅಥವಾ ಒಂದು ವಿಶಿಷ್ಟ ಗುಂಪಿನ ಸ್ವಾರ್ಥ ಸಾಧನೆಗೇ ಹೆಚ್ಚು ಅನುಕೂಲವಿರುವುದು ಕಂಡು ಬರತೊಡಗಿದಂತೆ ಆ ಸಂಕೇತ: ಸಮಯಗಳ ದುಷ್ಪರಿಣಾಮಗಳು ಗಮನಕ್ಕೆ ಬರತೊಡಗುತ್ತವೆ'[೮] ಎಂದವರು ಎಚ್ಚರಿಸಿದ್ದರು.

'ಇರುತ್ತಾ ಬರೆಯಬೇಕು, ಆಡಬೇಕು. ಬರೆ ಮಾಡುವುದಾಗಲೀ, ಗೀಚುವುದಾಗಲೀ, ಹುಸಿ ಟೊಳ್ಳು ಶಬ್ದ. ಇರುತ್ತ ಬರೆಯದೆ, ಬರೆಯುವುದಕ್ಕಾಗಿ ಇರುವುದು ತನಗೂ ಲೋಕಕ್ಕೂ ಕೂಡಿಯೇ ಮೋಸ, ಎರಡಿಲ್ಲದ ಬಾಳು ಗುರಿಯಾದರೇನೆ ನಾಡಿನ ಏಳ್ಗೆಯಾಗುವುದು' ಎಂದು ನಂಬಿದ್ದ, ನಂಬಿದ್ದಂತೆಯೇ ನಡೆದವರು ಶಂಬಾ. ಈ ಕಾರಣಕ್ಕಾಗಿಯೇ ಶಂಬಾ ಒಂದು ವರ್ಗದ ಕನ್ನಡ

ಹೋರಾಟಗಾರರಿಗೆ, ಕನ್ನಡಿಗರಿಗೆ 'ಬಿಸಿತುಪ್ಪ'ವಾದವರು. ತಮ್ಮ ಜೀವಮಾನದ ಸಿಂಹಪಾಲನ್ನು ಕನ್ನಡ ನೆಲ-ನುಡಿಯ ಸಂಶೋಧನೆಗೆ ಮೀಸಲಿಟ್ಟ ಶಂಬಾರನ್ನು ಮತ್ತು ಕನ್ನಡಬದುಕಿನ ಆರೋಗ್ಯಕ್ಕೆ ಪೂರಕವಾದ ಅವರ ಚಿಂತನೆಗಳನ್ನು ನೆನೆಸಿಕೊಳ್ಳುವಲ್ಲಿ ಮತ್ತು ಬಳಸಿಕೊಳ್ಳುವಲ್ಲಿ ಕನ್ನಡ ಚಳುವಳಿಗಳು ನಿರ್ಲಕ್ಷ್ಯ ತೋರಲು ಶಂಬಾ ಚಿಂತನೆಗಳಲ್ಲಿನ ಈ 'ಬಿಸಿತುಪ್ಪ'ದ ಅಂಶಗಳೇ ಕಾರಣವಾದಂತಿವೆ.

೧೧. ಏಕಘನಾಕೃತಿಯ ಮಾದರಿಯ ಸಂಸ್ಕೃತಿಗೆ ವಿರೋಧ

ಶಂಬಾ ಏಕಘನಾಕೃತಿಯ ಮಾದರಿಯ ಸಂಸ್ಕೃತಿಯನ್ನು ಒಪ್ಪುವವರಲ್ಲ. ಸಂಸ್ಕೃತಿಯ ಬಹುತ್ವದೆಡೆಗೆ ಅವರ ಸಂಶೋಧನೆಗಳ ಗಮನ. ಇದು ಕರ್ನಾಟಕ ಸಂಸ್ಕೃತಿಯ ಸಂಶೋಧನೆಯಲ್ಲಿ ಕಂಡುಬರುವ ಮುಖ್ಯ ಚಹರೆ. ತನ್ನ ಭೌಗೋಳಿಕ ಪರಿಸರ, ವೃತ್ತಿ, ಭಾಷಿಕ ವಾತಾವರಣ ಹಾಗೂ ಕ್ರಮೇಣ ತನ್ನ ನೆಲಕ್ಕೆ ತಾನೇ ಎರವಾಗಬೇಕಾದ ಕಾರಣಗಳು ಹೀಗೆ – ಚಾರಿತ್ರಿಕ ಕಾಲನಕ್ಷೆಯಲ್ಲಿ ಸಾಂಸ್ಕೃತಿಕ ಸತ್ಯದ ಅನ್ವೇಷಣೆಯನ್ನು ಶಂಬಾ ಮಾಡಿದರು. ಅವರ ಸಂಶೋಧನೆಯಲ್ಲಿ ಅತ್ಯಂತ ಪ್ರಮುಖವಾದ ಗ್ರಹಿಕೆ ಯಾವುದೆಂದರೆ, ಕನ್ನಡ ಸಂಸ್ಕೃತಿಯು ಮೂಲದಲ್ಲಿ ಅನೇಕ ಕವಲುಗಳ ಸಂಗಮವೆನ್ನುವುದು. ಹಲವು ಜೀವನಕ್ರಮಗಳು, ಅವುಗಳ ಪರಸ್ಪರ ಹೊಂದಾಣಿಕೆ, ಕೊಡು-ಕೊಳೆಗಳು ಈ ಸಂಸ್ಕೃತಿಯನ್ನು ರೂಪಿಸಿದ ಜೀವಸತ್ವವೆನ್ನುವುದನ್ನು ಇಲ್ಲಿ ಗ್ರಹಿಸಿ ಕಾಣಿಸಲಾಗಿದೆ. ಹೀಗೆ ಸಮಷ್ಟಿಜೀವನವನ್ನು ರೂಪಿಸಿದ ಹತ್ತು ಹಲವು ಕವಲುಗಳು ತಮ್ಮ ಸ್ವರೂಪವನ್ನು ಕಳೆದುಕೊಂಡದ್ದೇ ಕನ್ನಡ ಸಂಸ್ಕೃತಿಯ ಅಧಃಪತನಕ್ಕೆ ಕಾರಣವೆಂದು ಶಂಬಾ ಗುರುತಿಸುತ್ತಾರೆ.[೬]

ಶಂಬಾರ ಇಡೀ ಜೀವನದ ಕೇಂದ್ರಾನುಭವವು ವೇದಾರ್ಥಗಳಿಗೆ ಸಂಬಂಧಪಟ್ಟದ್ದು. ಮತ್ತೆ ಮತ್ತೆ ವೈದಿಕ ಸಾಹಿತ್ಯಕ್ಕೆ ಶಂಬಾ ಜೀವನದುದ್ದಕ್ಕೂ ವಾಪಸಾದವರು. ಹಾಗೆಂದು ಅವರು ವೇದ, ಪುರಾಣಗಳನ್ನು ಯಥಾವತ್ತಾಗಿ ಒಪ್ಪಿಕೊಂಡವರೂ, ಅದರ ಆರಾಧಕರೂ ಆಗಿರಲಿಲ್ಲ. ಸಾಮಾಜಿಕ ತರತಮಗಳಿಗೆ ಕಾರಣವಾದ ಪುರಾಣ-ಭಗವದ್ಗೀತೆಯಂತಹ ಪಠ್ಯಗಳ ತಾತ್ವಿಕತೆಯನ್ನು ತಮ್ಮ ಸಂಶೋಧನೆಗಳ ಮೂಲಕ ನಿಷ್ಠುರವಾಗಿ ಬುಡಮೇಲು ಮಾಡಿದ ಶಂಬಾ ಅವರ ಚಿಂತನೆಗಳು ದಲಿತ ಬಂಡಾಯ ಚಳುವಳಿಗಳ ಸಂದರ್ಭದಲ್ಲಾದರೂ ಮುನ್ನಲೆಗೆ ಬರಬೇಕಿತ್ತು. ಕುವೆಂಪು ಚಿಂತನೆಗಳನ್ನು ಈ ಚಳುವಳಿಗಳು ತಮ್ಮ ಮಾರ್ಗದರ್ಶಿ ಸೂತ್ರಗಳನ್ನಾಗಿ ಸ್ವೀಕರಿಸಿದ್ದು ಯುಕ್ತವಾಗಿಯೇ ಇತ್ತು. ಆದರೂ ಮೂಲ ವೈದಿಕ ಪಠ್ಯಗಳ ವಿಧಿ, ಕರ್ಮ, ಪುನರ್ಜನ್ಮಗಳ ಪರವಾದ ಕುವೆಂಪು ಚಿಂತನೆಗಳು ಇಲ್ಲಿನ ತೊಡಕುಗಳೇ ಆಗಿವೆ. ಈ ಚಳುವಳಿಗಳು ಇಂತಹ ತೊಡಕುಗಳನ್ನು ಶಂಬಾ ಅವರ ಸಂಶೋಧನೆಗಳಿಂದ ಮೂಡಿಬಂದ ಚಿಂತನೆಗಳೊಂದಿಗೆ ಪರಿಹರಿಸಿಕೊಳ್ಳಬಹುದಿತ್ತು.

೧೨. ಶಂಬಾ ಚಿಂತನೆಯ ಮಹತ್ವ ಗುರುತಿಸುವಿಕೆಯ ಗೈರು

ಕುವೆಂಪು ಕಾದಂಬರಿಗಳಲ್ಲಿ ದಲಿತ ಪಾತ್ರಗಳ ಚಿತ್ರಣದ ಹಿಂದೆ ಅವರ ವರ್ಗಸ್ವಭಾವ ಕೆಲಸ ಮಾಡುತ್ತದೆ ಎಂಬ ವಾದ ಕನ್ನಡ ಸಾಹಿತ್ಯದಲ್ಲಿ ವಾಗ್ವಾದವನ್ನೂ ಸೃಷ್ಟಿಸಿದರೂ 'ಮುಖ್ಯ ಪ್ರಶ್ನೆ ಏನಪ್ಪಾ ಅಂದರೆ, ಈ ವ್ಯವಸ್ಥೆಗೆ ದುಡಿಮೆಗೂ ಕಾಮಕ್ಕೂ ದಲಿತರ ದೇಹ ಬೇಕಾಗಿದೆ. ಆದರೆ ದಲಿತ್ ಮೈಂಡ್ ಅಂತ ಒಂದಿದೆ. ಅದರ ಒಳಗಿರುವಂತಹ ಬ್ಯೂಟಿ ಇದೆಯಲ್ಲ, ಅದಕ್ಕೊಂದು ಎಕ್ಸ್‌ಪ್ರೆಶನ್ ಇದೆ; ಅದರದ್ದೇ ಆದ ಒಂದು ಅಸ್ತಿತ್ವ ಇದೆ. ಕುವೆಂಪು ಅದನ್ನು ಕಾಣಿಸ್ತಾರೆ. ಅದು ಬಹಳ ಮಹತ್ವದ್ದು'[೧೦] ಎಂದು ಕನ್ನಡ ಚಿಂತನೆ ನಿರ್ಣಯಿಸಿತು. ತಮ್ಮ ವರ್ಗಮೂಲದ ಕಾರಣಕ್ಕೆ ಕುವೆಂಪು ಎದುರಿಸಿದ ಈ ಬಗೆಯ ಪ್ರಶ್ನೆಗಳನ್ನು ಶಂಬಾ ಅವರೂ ಎದುರಿಸುತ್ತಿದ್ದಾರೆ. ಶಂಬಾ ಅವರ ಸಂದರ್ಭದಲ್ಲಿ ದಲಿತ ನೆಲೆಯ ಜೊತೆ ಬೌದ್ಧನೆಲೆಯೂ ಸೇರಿಕೊಂಡಿದೆ. ಮೊಗಳ್ಳಿ ಗಣೇಶ್ ಅವರ 'ಶಂಬಾ : ಸಂಶೋಧನೆ ವೈಧಾನಿಕತೆ' ಮತ್ತು ನಟರಾಜ ಬೂದಾಳು ಅವರ 'ಶಂಬಾ: ಮಾನವ ಸಂಸ್ಕೃತಿ' ಲೇಖನಗಳನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾತಿನಿಧಿಕವಾಗಿ ಇಲ್ಲಿ ಗಮನಿಸಬಹುದು. ಕುವೆಂಪು ಕಾದಂಬರಿಗಳಲ್ಲಿ ದಲಿತ ಪಾತ್ರಗಳ ಚಿತ್ರಣದ ಹಿಂದೆ ಅವರ ವರ್ಗಸ್ವಭಾವ ಕೆಲಸ ಮಾಡುತ್ತದೆ ಎನ್ನುವುದನ್ನು ಕನ್ನಡ ಚಿಂತನೆ ಅಲ್ಲಗಳೆದಿಲ್ಲ. ಆದರೆ ಕುವೆಂಪು ಸಾಹಿತ್ಯದಲ್ಲಿ ಯಾವುದು ಮಹತ್ವದ್ದು ಎನ್ನುವುದನ್ನು ಅದು ಅರಿತುಕೊಂಡಿದೆ. ಶಂಬಾ ಅವರ ಸಂಶೋಧನೆಗಳಲ್ಲಿ ದಲಿತ ಮತ್ತು ಬೌದ್ಧನೆಲೆಯಲ್ಲಿ ಅವರ ವರ್ಗಸ್ವಭಾವ ಕೆಲಸ ಮಾಡಿರುವುದರ ಕುರಿತ ಪ್ರಶ್ನೆಗಳು ಖಂಡಿತ ಚರ್ಚೆಗೊಳಪಡಬೇಕಾದ ಸಂಗತಿಗಳಾಗಿವೆ. ಇವುಗಳನ್ನು ಪರಿಗಣಿಸಿಯೂ ಕುವೆಂಪು ಸಂದರ್ಭದಲ್ಲಾದಂತೆ ಶಂಬಾ ಅವರ ಸಂಶೋಧನೆಯಲ್ಲಿ ಕರ್ನಾಟಕ ಸಂಸ್ಕೃತಿಗೆ ಮಹತ್ವದ್ದು ಯಾವುದು ಎನ್ನುವುದನ್ನು ಇನ್ನೂ ಅರಿಯಬೇಕಾಗಿದೆ ಎನಿಸುತ್ತದೆ. ಹೀಗೆ ಅರಿಯುವದರಲ್ಲಿನ ಕೊರತೆ ವರ್ತಮಾನದಲ್ಲಿ ಕನ್ನಡ ಬದುಕು ಎದುರಿಸುತ್ತಿರುವ ಹಲವು ಆಯಾಮದ ಬಿಕ್ಕಟ್ಟುಗಳ ಮೂಲದಲ್ಲಿದೆ.

೪.೨.೩ ಸಂಸ್ಕೃತದಿಂದ ಕನ್ನಡವನ್ನು ಬಿಡುಗಡೆಗೊಳಿಸುವತ್ತ ಒಲವು

ಬಹುತೇಕ ಭಾಷಾ ಶಾಸ್ತ್ರಜ್ಞರು ಕನ್ನಡದ ತಾಯಿಭಾಷೆ ಸಂಸ್ಕೃತ ಎಂದು ವಾದಿಸುತ್ತಿದ್ದಾಗ ಶಂಬಾ ಅವರು ಸಂಸ್ಕೃತ ಮತ್ತು ಮರಾಠಿಯನ್ನು ಒಳಗೊಂಡ ಆರ್ಯನ್ ಗುಂಪಿನ ಭಾಷೆಗಳಲ್ಲಿರುವ ಕನ್ನಡ ಪದಗಳ ಪಟ್ಟಿ ಮಾಡುತ್ತ ಅವು ಅಲ್ಲಿ ಸೇರಿಕೊಂಡಿರುವ ಬಗೆಗೆ ತಮ್ಮ ಸಂಶೋಧನೆಯ ಮೂಲಕ ಮಂಡಿಸುವ ವಿಚಾರಗಳು ಕನ್ನಡ ಅಸ್ಮಿತೆಗೆ ಶಕ್ತಿ ತುಂಬುವಂತಹದು.

'ಉತ್ತರ ಹಿಂದುಸ್ತಾನದಲ್ಲಿಯೇ ರಚಿಸಲ್ಪಟ್ಟ ಸಂಸ್ಕೃತ ಸಾಹಿತ್ಯದಲ್ಲಿ ಕಂದಮಿಳ ವರ್ಗದ ಮಾತುಗಳು ದೊರೆಯುವುದರಿಂದ ಆ ಪ್ರದೇಶದಲ್ಲಿ ಆಗ ಈ ಜನ ನೆಲೆಸಿದ್ದಿತೆಂದು

ನಿಶ್ಚಿತವಾಗುತ್ತದೆ' ಎಂದು ತಮ್ಮ ಸಂಶೋಧನೆಯ ಮೂಲಕ ಕಂಡುಕೊಳ್ಳುವ ಶಂಬಾ ಅವರು 'ಆರ್ಯಾವರ್ತವೆಂದು ಕರೆಯಲಾಗುತ್ತಿರುವ ಪ್ರದೇಶವೆಲ್ಲ ಒಂದೊಮ್ಮೆ ಕಂದಮಿಳು ಬಾಳಿ ಬದುಕಿದ ಪ್ರದೇಶಗಳು' ಎಂಬ ನಿರ್ಣಯಕ್ಕೆ ಬರುತ್ತಾರೆ. ಎಂ ಚಿದಾನಂದಮೂರ್ತಿ ಅವರ ಭಾಷಿಕ 'ಬೃಹತ್ ಕರ್ನಾಟಕ' (೨೦೦೫) ಗ್ರಂಥವು ಭಾಷೆಯಾಗಿ ಕನ್ನಡವು ಹಿಂದೆ, ಸಾವಿರ ವರ್ಷಗಳಿಗೂ ಹಿಂದೆ ಎಲ್ಲಿಯವರೆಗೆ ವ್ಯಾಪಿಸಿತ್ತು ಎಂಬುದೇ ಆಗಿದ್ದು ಶಂಬಾ ಅವರ ಸಂಶೋಧನೆಯನ್ನು ಅನುಮೋದಿಸುವಂತಿದೆ.

ಕನ್ನಡಭಾಷೆಯಲ್ಲಿ ಸಂಸ್ಕೃತಭಾಷೆಯನ್ನು ಬೆರೆಸಿ ಖುಷಿಪಡುವ ಮೇಲ್ವರ್ಗದ ಕನ್ನಡಿಗರ ಬಗ್ಗೆ ಶಂಬಾ ಅವರಿಗೆ ಕೋಪ. ಇದರಿಂದ ಕನ್ನಡಭಾಷೆಯ ಬೆಳವಣಿಗೆಗೆ ತೊಡಕುಂಟಾಗುತ್ತದೆಂಬುದು ಅವರ ಆತಂಕ. 'ಆರ್ಯರಿಗೆ ಸಂಸ್ಕೃತೀಕರಣದ ಎಷ್ಟೊಂದು ಹಂಬಲವಿದ್ದೀತೆಂಬುದನ್ನು ವಿಶೇಷ ಉದಾಹರಣೆಗಳಿಂದ ಸಿದ್ಧಮಾಡಿಕೊಡುವ ಅವಶ್ಯಕತೆಯೆ ಉಳಿದಿಲ್ಲ. ಏಕೆಂದರೆ ಸಂಶೋಧಕರಲ್ಲಿ ಸರ್ವಸಮ್ಮತವಾದ ಮಾತಿದು. ಎಲ್ಲಮ್ಮ ಎಂದರೆ ನಮಗೆ ರುಚಿಸದು. ಜಗದಂಬೆ ಎಂದರೆ ಪ್ರೀತಿ, ಮರಗವ್ವ ಎಂದರೆ ಆಗದು, ಉಃಮಹಾದೇವಿ ಎಂದರೆ ಭಯಭಕ್ತಿ. ಎಮ್ಮೆ ನಾಡು ಎಂದರೆ ಕಗ್ಗ; ಮಹಿಷದೇಶವೆಂದರೆ ಕುಸುರಿ. ನಾಡವರು ಎಂದರೆ ಕೀಳು, ರಾಷ್ಟ್ರಿಕ, ರಠಿಕ ಎಂದರೆ ಮೇಲು. ಅಂತೂ ಕ್ರಿ.ಶ.ಕ್ಕೆ ಮೊದಲು ಐದು-ಆರನೆಯ ಶತಮಾನದಲ್ಲಿ ಆರಂಭವಾಗಿ ಕ್ರಿ.ಶ. ಐದು-ಆರನೆಯ ಶತಮಾನದ ಸುಮಾರಿಗೆ ಕನ್ನಡಕ್ಕೆ ಅಡಿಯಿಂದ ಮುಡಿಯವರೆಗೆ (ಸು)ಸಂಸ್ಕೃತ ಸ್ವರೂಪವನ್ನು ಕೊಡುವ ಮಹಾಕಾರ್ಯವು ಕೊನೆಗೊಂಡಿತು.'[೧೧] ಈ ರೀತಿ ಕನ್ನಡಕ್ಕೆ ಬದಲು ಸಂಸ್ಕೃತಪದಗಳನ್ನು ಬಳಸುವ ಕುರಿತು ಪ್ರಶ್ನೆಗಳನ್ನು ಎತ್ತುವ ಪ್ರವೃತ್ತಿಯನ್ನು ಮುಂದೆ ಡಿ.ಎನ್ ಶಂಕರಭಟ್ಟರಲ್ಲಿ ಕಾಣುತ್ತೇವೆ. ಬಿ.ಎಂ.ಶ್ರೀ ಅವರ ಚಿಂತನೆಗಳಂತೆಯೇ ಬಹುಷಃ ಶಂಬಾ ಚಿಂತನೆಗಳು ಕೂಡ ಶಂಕರಭಟ್ಟರಿಗೆ ಈ ನಿಟ್ಟಿನಲ್ಲಿ ಪ್ರೇರಣೆಯನ್ನು ಕೊಟ್ಟಿರಬಹುದು.

ವರ್ಗಹಿತಾಸಕ್ತಿಯನ್ನು ತೊರೆದು ಸತ್ಯಶೋಧನೆ ಮತ್ತು ಜನಪರ ನಿಲುವನ್ನೇ ಮೌಲ್ಯವನ್ನಾಗಿಟ್ಟುಕೊಂಡು ಸಂಶೋಧನೆ ಮಾಡಿದವರು ಶಂಬಾ. ಅವರೆಲ್ಲ ಸಂಶೋಧನೆಗಳಂತೆ ಸಂಸ್ಕೃತ ಪಠ್ಯಗಳ ಕುರಿತ ಅವರ ಸಂಶೋಧನೆಗೂ ಈ ಮಾತು ಅನ್ವಯವಾಗುವಂತಹದು. ಆ ಕಾರಣದಿಂದಲೇ 'ವರ್ಗ ರಾಜಕಾರಣ' ಅವರನ್ನು ದೂರ ಮಾಡಿತು. 'ಸಂಸ್ಕೃತ ವಾಙ್ಮಯವನ್ನು ಜಡವೂ ಸಾಂಪ್ರದಾಯಿಕವೂ ಆದ ದೃಷ್ಟಿಕೋನಕ್ಕಿಂತ ಭಿನ್ನವಾಗಿ, ಜನಪರ ಆಶೋತ್ತರಗಳಲ್ಲಿ ಅಧ್ಯಯನ ಮಾಡುವವರಿದ್ದರೆ, ಅವರನ್ನು ಒಂಟಿಯಾಗಿಸಲಾಗುತ್ತದೆ. ದೊಡ್ಡ ವಿದ್ವಾಂಸರೂ ಸಂಸ್ಕೃತಿ ಚಿಂತಕರೂ ಆದ ಶಂಬಾ ಜೋಶಿಯವರ ವಿಷಯದಲ್ಲಿ ಈ ರಾಜಕಾರಣ ಮಾಡಲಾಯಿತು' ಎಂಬ ರಹಮತ್ ತರೀಕೆರೆ ಅವರ ವಿಷಾದವನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ.

ಸಂಸ್ಕೃತ ಭಾಷೆಯಲ್ಲಿನ ವೇದ, ಉಪನಿಷತ್ತುಗಳನ್ನೆಲ್ಲ ಆಳವಾಗಿ ಶಂಬಾ ಅಧ್ಯಯನ ಮಾಡಿದ್ದರು. ಬಿ.ಎಂ.ಶ್ರೀ ಕೂಡ ಸಂಸ್ಕೃತದಲ್ಲಿ ವಿದ್ವತ್ತನ್ನು ಹೊಂದಿದ್ದರು. ಈ ಪರಂಪರೆಯ ಮುಂದುವರಿಕೆಯಾಗಿ ಬಂದ ಡಿ.ಎನ್ ಶಂಕರಭಟ್ಟರು ಕೂಡ ಸಂಸ್ಕೃತಭಾಷೆಯಲ್ಲಿ ಪಾಂಡಿತ್ಯವನ್ನು ಹೊಂದಿದವರು. ಈ ಮೂವರು ಸಂಸ್ಕೃತವನ್ನು ತಮ್ಮ ಪ್ರತಿಷ್ಠೆಯನ್ನಾಗಿಸಿಕೊಂಡ ಮೇಲ್ವರ್ಗಗಳನ್ನು ಎದುರು ಹಾಕಿಕೊಂಡು ತಮ್ಮ ವಿದ್ವತ್ತು ಮತ್ತು ಸಂಶೋಧನೆಗಳ ಮೂಲಕ ಸಂಸ್ಕೃತ ಕನ್ನಡಕ್ಕೆ ಹೊರೆಯಾಗಿರುವುದನ್ನು ನಿಷ್ಠುರವಾಗಿ ಮಂಡಿಸಿದ್ದು ಕನ್ನಡದ ವಿದ್ವತ್ ಪರಂಪರೆಯ ದಿಟ್ಟತನಕ್ಕೆ ಸಾಕ್ಷಿಯಾಗಿದೆ.

೪.೨.೪ ಇಂಗ್ಲಿಶಿನ ಅಪಾಯದ ಬಗ್ಗೆ ಹರಿಯದ ಗಮನ

ನೆರೆಯ ಮರಾಠಿ, ತಮಿಳು ಭಾಷೆಗಳನ್ನು ಕನ್ನಡದ ಶತ್ರುಭಾಷೆಗಳು ಎಂದು ನಿರ್ಣಯಿಸಿರುವ ಶಂಬಾ 'ಪ್ರಭುತ್ವ'ದ ಭಾಷೆಯಾದ ಇಂಗ್ಲಿಷಿನ ಅಪಾಯದ ಬಗ್ಗೆ ಏನನ್ನೂ ಹೇಳುವುದಿಲ್ಲ. ಹಾಗೆ ನೋಡಿದರೆ ಬಿ.ಎಂ.ಶ್ರೀ ಅವರಿಗೆ ಬ್ರಿಟಿಷ್ ಪ್ರಭುತ್ವದ ಬಗೆಗಿದ್ದ ಅವಿರೋಧದ ನಿಲುವು ಶಂಬಾ ಅವರದ್ದಾಗಿರಲಿಲ್ಲ. ಇದಕ್ಕೂ ಹೆಚ್ಚಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯರಾಗಿದ್ದು ಆ ಕಾರಣಕ್ಕಾಗಿ ಸೆರೆಮನೆವಾಸವನ್ನೂ ಅನುಭವಿಸಿದವರು. ಆದರೆ ಅವರು ಇಂಗ್ಲಿಷ್ ಕುರಿತು ಕ್ರಿಟಿಕಲ್ ಆಗಿದ್ದಂತೆ ತೋರುವುದಿಲ್ಲ. 'ಬ್ರಿಟಿಷ್ ವಸಾಹತುಶಾಹಿಯ ಆರ್ಥಿಕ ಹಿತಾಸಕ್ತಿಯನ್ನು ಗುರುತಿಸಬಲ್ಲವರಾಗಿದ್ದ ಶಂಬಾ ಅದರ ಪರಿಣಾಮಗಳ ಬಗ್ಗೆ ಗಮನ ಹರಿಸದಿರುವುದು ಬೆರಗು ಮೂಡಿಸುತ್ತದೆ'[೧೨]

ಬಿ.ಎಂ.ಶ್ರೀ ಅವರಿಗೆ ಬ್ರಿಟಿಷ್ ಪ್ರಭುತ್ವದ ಬಗ್ಗೆ ಅವಿರೋಧದ ನೆಲೆಯಿದ್ದರೂ ಬ್ರಿಟಿಷರ ಮೂಲಕ ಇಂಗ್ಲಿಷ್ 'ದಿಗ್ವಿಜಯ'ಕ್ಕೆ ಬಂದಿದೆ ಎನ್ನುವ ಸ್ಪಷ್ಟ ಗ್ರಹಿಕೆಯಿತ್ತು. ಹೀಗೆ ದಿಗ್ವಿಜಯಕ್ಕೆ ಬಂದ ಇಂಗ್ಲಿಷ್ ಭಾಷೆಯಡಿಯಲ್ಲಿ ಕನ್ನಡ ನಾಶವಾಗದಂತೆ ತಡೆಯುವ ಎಚ್ಚರವಿತ್ತು. ಇಂಗಿಷಿನ ವಿರುದ್ಧ ಅವರದು ಕುರುಡು ವಿರೋಧವಾಗಿರಲಿಲ್ಲ. ಹಾಗಾಗಿಯೇ ಸಂಸ್ಕೃತದಿಂದ ಹರಿದುಬಂದ ಜಡವೆನಿಸುತ್ತಿದ್ದ ಕಾವ್ಯಮೀಮಾಂಸೆಯಿಂದ ಕನ್ನಡವನ್ನು ಪಾರುಮಾಡುವ ಸಲುವಾಗಿ ಇಂಗ್ಲಿಷಿನ ಹೊಸ ಶೈಲಿಯನ್ನು ಅವರು ಕನ್ನಡ ಸಾಹಿತ್ಯವಲಯಕ್ಕೆ 'ಇಂಗ್ಲಿಷ್ ಗೀತೆಗಳು' ಮೂಲಕ ತಂದರು. ಶಂಬಾ ಅವರಲ್ಲಿ ಇಂಗ್ಲಿಷ್ ಬಗ್ಗೆ ವಿರೋಧವೂ ಇಲ್ಲ. ಕನ್ನಡ ಕಟ್ಟುವಿಕೆಯಲ್ಲಿ ಬಿ.ಎಂ.ಶ್ರೀಯವರಂತೆ ಅದನ್ನು ಹೇಗೆ ಬಳಸಿಕೊಳ್ಳಬೇಕು ಎನ್ನುವ ಕಾಣ್ಕೆಯೂ ಇಲ್ಲ. ಬಹುಷಃ ಇದು ಸಂಶೋಧನೆಯಲ್ಲಿಯೇ ಮುಳುಗಿ ವರ್ತಮಾನ ಸಮಾಜದ ಆಗುಹೋಗುಗಳಿಗೆ ಬೆನ್ನು ಹಾಕಿದುದರ ಪರಿಣಾಮವಿರಬೇಕು. ಆದರೆ ಇವರ ಮೂಲಕ ಇಂಗ್ಲಿಶಿನಿಂದ ಕನ್ನಡಕ್ಕೆ ಆದ ಲಾಭ ಬೇರೆಯ ಬಗೆಯದು. ನಟರಾಜ ಬೂದಾಳು ಅವರು ಗುರುತಿಸುವಂತೆ ಕುವೆಂಪು ಮತ್ತು ಶಂಬಾ ಇಪ್ಪತ್ತನೆಯ ಶತಮಾನದ ಕನ್ನಡದ ಇಬ್ಬರು ಪ್ರಮಾಣಭಂಜಕರು. ಇವರಿಬ್ಬರಲ್ಲಿ ಇನ್ನೊಂದು ಸಾಮ್ಯವಿದೆ.

ಅದೇನೆಂದರೆ ಇಂಗ್ಲಿಶ್ ಮೂಲಕ ಬಂದ ವೈಚಾರಿಕತೆ ಇವರಿಬ್ಬರ ಪ್ರಜ್ಞೆಯನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿರುವುದು. ಅಂತಿಮವಾಗಿ ಇವು ಕನ್ನಡದ ಪ್ರಜ್ಞೆಯನ್ನು ವೈಚಾರಿಕವಾಗಿ ರೂಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿವೆ ಎನ್ನುವುದು ನಿರ್ವಿವಾದದ ಸಂಗತಿ.

೪.೨..೪ ಗ್ರಂಥಸ್ಥ ರೂಪಗಳಿಗಿಂತ ವಾಡಿಕೆ ಮಾತುಗಳಲ್ಲಿ ನಂಬಿಕೆ

'ನೃಪತುಂಗದೇವನು 'ಕನ್ನಡಂಗಳನ್ನೆಲ್ಲ ಹಿಂದೆ ದೂಡಿ 'ಸೊಗಯಿಸುವ ಒಂದು ಕನ್ನಡವನ್ನು' ಮುಂದೆ ತಂದಂತೆ ಆ ನಾಡು ಈ ನಾಡುಗಳೆಂದಿದ್ದ ಭಿನ್ನ ಭೇದಗಳನ್ನೆಲ್ಲ ಕಿತ್ತೊಗೆದು ಒಂದೇ ಕನ್ನಡವನ್ನು ನೆಲೆಗೊಳಿಸಿದನು'[೧೩] ಎಂದು ಶಂಬಾ ಅಭಿಪ್ರಾಯ ಪಡುತ್ತಾರೆ. ಮೇಲ್ನೋಟಕ್ಕೆ ಅವರ ಈ ನುಡಿಗಳಲ್ಲಿ ಪ್ರಮಾಣ ಕನ್ನಡದ ಒಲವು ಇರುವಂತೆ ತೋರಿದರೂ ಅದನ್ನವರು ಭೌಗೋಳಿಕ ಕನ್ನಡನಾಡಿನ ಏಕೀಕರಣಕ್ಕೆ ಹೋಲಿಕೆಯಾಗಿ ಮಾತ್ರ ಬಳಸುತ್ತಿದ್ದಾರೆ ಎನ್ನುವುದು ಮುಖ್ಯ. ಸಾಹಿತ್ಯದೊಳಗಿನ ಗ್ರಂಥಸ್ತ ರೂಪಗಳಿಗಿಂತ ಲೋಕ ವ್ಯವಹಾರಗಳ ವಾಡಿಕೆ ಮಾತುಗಳೆ ಹೆಚ್ಚು ನಂಬಲರ್ಹವಾಗಿರುತ್ತವೆ. ಏಕೆಂದರೆ ಅದು ಮೂಲರೂಪಕ್ಕೆ ಹೆಚ್ಚು ಹತ್ತಿರದಲ್ಲಿರುತ್ತದೆ ಎನ್ನುವುದು ಶಂಬಾ ಅವರ ಖಚಿತ ನಿಲುವು. 'ಶಂಬಾ ಜೋಶಿಯವರು ಸಂಶೋಧನೆ ಮಾಡುತ್ತಿದ್ದ ಕಾಲಘಟ್ಟದಲ್ಲಿ ಈ ಗ್ರಹಿಕೆಯನ್ನು ಹೇಳಲಿಕ್ಕೆ ಬಹಳ ಎದೆಗಾರಿಕೆ ಬೇಕಾಗಿತ್ತು' ಎಂಬ ಬಂಜಗೆರೆ ಜಯಪ್ರಕಾಶ ಅವರ ಮಾತು ಶಂಬಾ ಅವರು ಸಂಶೋಧನೆಯಲ್ಲಿ ಸತ್ಯಪ್ರತಿಪಾದನೆಗೆ ತೋರುತ್ತಿದ್ದ ದಿಟ್ಟತನವನ್ನು ಮಾತ್ರ ಹೇಳುತ್ತಿಲ್ಲ, ಭಾಷೆಯಂತಹ ಸಾಂಪ್ರದಾಯಿಕ ಅಧ್ಯಯನಕ್ಷೇತ್ರವೂ ವರ್ಗಹಿತಾಸಕ್ತಿಗಳ ಮಧ್ಯಪ್ರವೇಶದಿಂದ ಮುಕ್ತವಾಗಿಲ್ಲ ಎನ್ನುವುದನ್ನೂ ಸೂಚಿಸುತ್ತಿದೆ.

೪.೩ ಯು.ಆರ್. ಅನಂತಮೂರ್ತಿ ಅವರ ಚಿಂತನೆಗಳು

೪.೩.೧ ಪೀಠಿಕೆ

ತೀರ್ಥಹಳ್ಳಿಯ ಮೇಳಿಗೆಯಲ್ಲಿ ಜನಿಸಿದ ಯು.ಆರ್ ಅನಂತಮೂರ್ತಿ (೧೯೩೨-೨೦೧೪) ಮಲೆನಾಡಿನ ಸಮಾಜವಾದಿ ಚಳುವಳಿಯ ಪರಿಸರದಲ್ಲಿ ವೈಚಾರಿಕ ವ್ಯಕ್ತಿತ್ವ ರೂಪಿಸಿಕೊಂಡವರು. ಇಂಗ್ಲಿಶ್ ಪ್ರಾಧ್ಯಾಪಕರಾಗಿದ್ದ ಅನಂತಮೂರ್ತಿ ಅವರು ವಿಶ್ವವಿದ್ಯಾಲಯದ ಕುಲಪತಿಗಳಂತಹ ಹಲವು ಮಹತ್ವದ ಹುದ್ದೆಗಳನ್ನು ನಿರ್ವಹಿಸಿದವರು. ತಮ್ಮ ಚಿಂತನೆಗಳಲ್ಲಿ ನಿರಂತರ ಸಮಕಾಲೀನಗೊಳ್ಳುತ್ತ ಹೋದ ಕನ್ನಡದ ಮಹತ್ವದ ಲೇಖಕರಲ್ಲಿ ಅನಂತಮೂರ್ತಿ ಒಬ್ಬರು. ತೀವ್ರತರವಾದ ವಾಗ್ವಾದಗಳ ಜ್ವಾಲೆ ಸೃಷ್ಟಿಸುವ ಅಗ್ನಿಕುಂಡವಾದ ಭಾಷೆ ಮತ್ತು ಧರ್ಮದ ವಿಷಯಗಳಲ್ಲಿ ಅನಂತಮೂರ್ತಿ ಅವರ ಚಿಂತನೆ ಮತ್ತು ಬದ್ಧತೆ ಯಾವತ್ತೂ ವಿಶ್ರಾಂತಿಗೆ ತೆರಳಿದ್ದಿಲ್ಲ. ಗೋಕಾಕ್ ಚಳವಳಿ ಮತ್ತು ಜಾಗತೀಕರಣೋತ್ತರ ತೊಂಬತ್ತರ ದಶಕದ ನಂತರ ತೀವ್ರಗತಿಯಲ್ಲಿ

ಉಲ್ಬಣಗೊಂಡ ಕೋಮುವಾದಕ್ಕೆ ಮುಖಾಮುಖಿಯಾಗಿ ಅವರು ಮಂಡಿಸಿದ ಸಂಸ್ಕೃತಿ ಚಿಂತನೆಗಳು ಕನ್ನಡದ ಬೌದ್ಧಿಕ ಕಸುವನ್ನು ಬಲಗೊಳಿಸಿವೆ.

ಪ್ರಭುತ್ವದ ಯಾವುದಾದರೊಂದು ಅಧಿಕಾರಸ್ಥಾನದಲ್ಲಿರುತ್ತಿದ್ದ ಅನಂತಮೂರ್ತಿ ಆ ಕಾರಣಕ್ಕಾಗಿ ಟೀಕೆ–ಟಿಪ್ಪಣಿಗಳನ್ನು ಎದುರಿಸಬೇಕಾಯಿತು. ಆದರೆ ಈ ಸ್ಥಾನಗಳಲ್ಲಿದ್ದಾಗಲೇ ಪ್ರಭುತ್ವಕ್ಕೆ ವಿರೋಧವೆನಿಸುವ, ಇರುಸುಮುರುಸು ತರುವ ತಮ್ಮ ಅಭಿಪ್ರಾಯಗಳನ್ನು ನಿರ್ಭಿಡೆಯಿಂದ ವ್ಯಕ್ತಪಡಿಸುತ್ತಿದ್ದರು. ಕೇರಳದ ಎಡಪಂಥೀಯ ಸರ್ಕಾರ ಕೊಟ್ಟಾಯಂನ ಮಹಾತ್ಮ ಗಾಂಧಿ ವಿಶ್ವವಿದ್ಯಾಲಯಕ್ಕೆ ಉಪಕುಲಪತಿಯಾಗಿ ನೇಮಿಸಿದ ಅವಧಿಯಲ್ಲಿ ಚೀನಾಕ್ಕೆ ಹೋಗಿದ್ದ ಅನಂತಮೂರ್ತಿ ಅವರು ಅಲ್ಲಿನ ವಿದ್ಯಾರ್ಥಿ ಪ್ರತಿಭಟನೆಯನ್ನು ನಿರ್ದಯವಾಗಿ ಹತ್ತಿಕ್ಕಿ ಮಾರಣಹೋಮಕ್ಕೆ ಕಾರಣವಾದ ಅಲ್ಲಿನ ಕಮ್ಯುನಿಸ್ಟ್ ಸರ್ಕಾರವನ್ನು ಕಟುವಾಗಿ ಟೀಕಿಸಿ ಪತ್ರಿಕೆಗೆ ಲೇಖನ ಬರೆಯುತ್ತಾರೆ.

ಅನಂತಮೂರ್ತಿ ಅವರ ವಿಮರ್ಶೆ ಮತ್ತು ಸಂಸ್ಕೃತಿಚಿಂತನೆಗಳನ್ನು 'ಪ್ರಜ್ಞೆ ಮತ್ತು ಪರಿಸರ', 'ಸನ್ನಿವೇಶ', 'ಪೂರ್ವಾಪರ', 'ಬೆತ್ತಲೆಪೂಜೆ ಯಾಕೆ ಕೂಡದು?', 'ವಾಲ್ಮೀಕಿಯ ನೆವದಲ್ಲಿ', 'ಋಜುವಾತು' ಮತ್ತು 'ಹಿಂದುತ್ವ ಅಥವಾ ಹಿಂದ್ ಸ್ವರಾಜ್' ಕೃತಿಗಳಲ್ಲಿ ಪ್ರಧಾನವಾಗಿ ನಾವು ಗಮನಿಸಬಹುದು. ಹಿಂದುತ್ವ ಅಥವಾ ಹಿಂದ್ ಸ್ವರಾಜ್ ಕೃತಿಯೊಂದನ್ನು ಹೊರತುಪಡಿಸಿ ಉಳಿದ ಕೃತಿಗಳಲ್ಲೆಲ್ಲ ಭಾಷೆ ಕುರಿತ ಅವರ ಚಿಂತನೆ ನಿರ್ದಿಷ್ಟ ಲೇಖನಗಳಲ್ಲಿ ಇಲ್ಲವೇ ಸಂಸ್ಕೃತಿ ಕುರಿತ ಚರ್ಚೆಯ ಲೇಖನಗಳ ಭಾಗವಾಗಿ ಸೇರಿದೆ. ಆರಂಭಕಾಲದ ಲೇಖನಗಳ ಸಾರ ಮುಂದಿನ ಹಲವು ಲೇಖನಗಳಲ್ಲಿ ಪುನರಾವರ್ತಿತವಾಗಿರುವುದು ಇಲ್ಲಿನ ಒಂದು ಮಿತಿಯಾಗಿದೆ.

೪.೩.೨ ಪಶ್ಚಿಮದ ವೈಚಾರಿಕ ಭಿತ್ತಿಯಲ್ಲಿ ಕನ್ನಡ ಸಂಸ್ಕೃತಿಯ ಚಿಂತನೆ

ಸಾಹಿತ್ಯ ಮೀಮಾಂಸೆಗೆ, ಕನ್ನಡ ಚಿಂತನೆಗೆ ಸಂಕೀರ್ಣವಾದ ಸಂಗತಿಗಳನ್ನು ಧರಿಸುವ ಶಕ್ತಿಯನ್ನು ಕೊಟ್ಟವರಲ್ಲಿ ಅನಂತಮೂರ್ತಿ ಒಬ್ಬರು. ಉದ್ದಕ್ಕೂ, ಬೂಸಾ ಸಾಹಿತ್ಯ ಪ್ರಕರಣದಿಂದ ಬೆತ್ತಲೆಸೇವೆ ತನಕ, ಕರ್ನಾಟಕದ ಸಾರ್ವಜನಿಕ ಬದುಕಿಗೆ ಸಂಬಂಧಿಸಿದ ಸಂಗತಿಗಳ ಮೇಲೆ ದಿಟ್ಟವಾಗಿ ಪ್ರತಿಕ್ರಿಯಿಸುತ್ತ ಬಂದವರಲ್ಲಿ ಒಬ್ಬರು; ಕನ್ನಡ ಭಾಷೆ–ಸಾಹಿತ್ಯ ಕುರಿತು ಅವರು ಮಾಡುವ ಚರ್ಚೆ ಸಾಂಸ್ಕೃತಿಕ ಆಯಾಮ ಪಡೆದುಕೊಳ್ಳಲು ಸಾಧ್ಯವಾಗಿದ್ದು ಇದರಿಂದಲೇ. ಅನಂತಮೂರ್ತಿ ಅವರ ಸಂಸ್ಕೃತಿ ಚಿಂತನೆ ಪಶ್ಚಿಮದ ಅತ್ಯಂತ ಪ್ರಭಾವಶಾಲೀ ವೈಚಾರಿಕ ವಿಧಾನಗಳ ಜತೆಗೆ ದೇಶೀ ಚಿಂತನಾಕ್ರಮಗಳನ್ನು ಇಟ್ಟು ಮುಖಾಮುಖಿ ನಡೆಸುತ್ತದೆ. ಕನ್ನಡ ಸಂಸ್ಕೃತಿಯ ಆತ್ಮಜ್ಞಾನದ ಪರಂಪರೆಗಳನ್ನು ವಿಶಾಲ ಜಾಗತಿಕ ಸನ್ನಿವೇಶಗಳಲ್ಲಿಟ್ಟು ಅವುಗಳ ಸತ್ವವನ್ನು ವಿಸ್ತರಿಸಲು

ಪ್ರಯತ್ನಿಸುತ್ತದೆ. ಕನ್ನಡ ಸಂಸ್ಕೃತಿ ಕುರಿತಂತೆ ಇದುವೇ ಡಿ.ಆರ್ ನಾಗರಾಜ್ ಅವರ ಹಂಬಲವೂ ಆಗಿತ್ತು.

ವ್ಯಕ್ತಿಯಲ್ಲಿ ಹುಟ್ಟುವ ಸಾಹಿತ್ಯ ಸಮುದಾಯದ ಪ್ರಜ್ಞೆಯಾಗಿ ರೂಪಾಂತರವಾಗುತ್ತದೆ. ಅನಂತಮೂರ್ತಿ ಅವರು 'ಸಂಸ್ಕೃತಿ'ಯನ್ನು ಗ್ರಹಿಸುವ ಕ್ರಮದಲ್ಲಿ ಸಾಹಿತ್ಯದ ಈ ನೆಲೆಯಿದೆ. ಭಾರತೀಯ ಸಂದರ್ಭದಲ್ಲಿ 'ಸಂಸ್ಕೃತಿ' ನಾವು ಬಳಸುವ ಅರ್ಥದಲ್ಲಿ ನಮಗೂ ಹೊಸ ಪದವೇ. ಸಮುದಾಯಕ್ಕೂ ವ್ಯಕ್ತಿಗೂ ಒಟ್ಟಾಗಿ ಅನ್ವಯವಾಗುವ ಈ ಪದದ ಬದಲು ನಮ್ಮಲ್ಲಿದ್ದುದು ವ್ಯಕ್ತಿಗೆ ಮಾತ್ರ ಅನ್ವಯವಾಗುವ 'ಸಂಸ್ಕಾರ' ಎಂಬ ಪದ. ಇಂಗ್ಲೆಂಡಿನ ಕವಿ ಮ್ಯಾಥ್ಯೂ ಆರ್ನಾಲ್ಡ್‌ನ 'ಸಂಸ್ಕೃತಿ' ಕುರಿತ ಚಿಂತನೆ ಅನಂತಮೂರ್ತಿ ಅವರಿಗೆ ಹತ್ತಿರವಾದದ್ದು ಈ ಕಾರಣಕ್ಕಾಗಿಯೇ. ಆರ್ನಾಲ್ಡ್ ಪ್ರಕಾರ 'ಕಲ್ಚರ್' ಎಂದರೆ ವ್ಯಕ್ತಿಯ ಒಳಜೀವನದಲ್ಲಿ ನಡೆಯುವ ಕ್ರಿಯೆ. ಯಾವ ವ್ಯಕ್ತಿಯೂ ದ್ವೀಪವಲ್ಲ; ತನ್ನಷ್ಟಕ್ಕೆ ತನ್ನಲ್ಲೆ ಅವನು ಕಲ್ಚರ್ ಪಡೆಯಲಾರ. ಉಳಿದವರನ್ನೂ ತನ್ನ ಜೊತೆ ಒಯ್ಯದೇನೆ ಅವನು ಪರಿಪೂರ್ಣತೆಯತ್ತ ನಡೆಯಲಾರ.

೪.೩.೩ ಸಿದ್ಧಾಂತಗಳಿಗೆ ಕುರುಡಾಗದೆ ಸತ್ಯಕ್ಕೆ ಸ್ಪಂದನೆ

'ನಾನು ಕಣ್ಣಾರೆ ಕಂಡದ್ದನ್ನು, ಅನುಭವಿಸಿದ್ದನ್ನು ಹೇಳದೆ ಇರುವುದು ಸಾಧ್ಯವಿರಲಿಲ್ಲ. ಲೇಖಕನಾಗಿ ನಾನು ನನ್ನ ಆತ್ಮಕ್ಕೆ ದ್ರೋಹ ಬಗೆಯಲಾರೆ' ಎನ್ನುವ ಅನಂತಮೂರ್ತಿ ಅವರ ನಿಲುವು 'ಸಂಸ್ಕೃತಿ'ಯ ಪ್ರಾಥಮಿಕ ಗುಣವನ್ನು ಹೇಳುತ್ತದೆ. ಸಂಸ್ಕೃತಿ ನಿರ್ಮಾಣದಲ್ಲಿ ವ್ಯಕ್ತಿಯೊಬ್ಬ ತಾನು ಹುಟ್ಟಿದ, ಜಾತಿ, ವರ್ಗ, ದೇಶ ಮತ್ತು ತಾನು ನಂಬಿದ ಸಿದ್ಧಾಂತಗಳಿಗೆ ಕುರುಡಾಗದೆ ಆತ್ಮಸಾಕ್ಷಿಗೆ ಅನುಗುಣವಾಗಿ ತಾನು ಕಂಡ ಸತ್ಯಕ್ಕೆ ಬದ್ಧನಾಗಿರಬೇಕು ಎಂದು ಅನಂತಮೂರ್ತಿ ಬಯಸುತ್ತಾರೆ. ಅವರು ಬೀಜಿಂಗ್‌ಗೆ ಭೇಟಿಕೊಟ್ಟಾಗ ಕಂಡ ಎಡಪಂಥೀಯ ಪ್ರಭುತ್ವದ ಕ್ರೌರ್ಯವನ್ನು ಕುರಿತು ಬರೆಯುವ ಮುಂದಿನ ಮಾತುಗಳಲ್ಲಿ ಇದನ್ನು ಗಮನಿಸಬಹುದು: 'ಸೋವಿಯತ್ ರಷ್ಯಾಕ್ಕೆ ಹೋಗಿ ಬಂದ ಮುಖ್ಯ ಐರೋಪ್ಯ ಲೇಖಕರು, ಅಂದ್ರೆ ಜೀಡ್‌ನಂಥವರು ತಮ್ಮ ಸಮಾಜವಾದಿ ನಿಲುವು ಬದಲಾಯಿಸಿಕೊಳ್ಳದಂತೆ ಸೋವಿಯತ್ ರಷ್ಯಾವನ್ನು ಅತ್ಯಂತ ಕಟುವಾಗಿ ಟೀಕಿಸಿದ್ದಾರೆ. ಆದರೆ ನಾವು ಭಾರತೀಯರು ತುಂಬ ಅವಮಾನದಲ್ಲಿ ಒಪ್ಪಿಕೊಳ್ಳಬೇಕಾದ ಒಂದು ಸಂಗತಿಯಿದೆ. ನಮ್ಮ ಯಾವ ದೊಡ್ಡ ಪ್ರಗತಿಶೀಲ ಬರಹಗಾರನೂ ಸೋವಿಯತ್ ರಷ್ಯಾದಲ್ಲಿ ತಾವು ಕಂಡ ಸತ್ಯವನ್ನು ಬಾಯಿಬಿಚ್ಚಿ ಹೇಳಲಿಲ್ಲ. ಹಿರಿಯರಾದ ರಾಹುಲ ಸಾಂಕೃತ್ಯಾಯನರಿಂದ ಹಿಡಿದು, ನಮಗೆ ಪ್ರಿಯವಾದ ಭೀಷಮ್ ಸಹಾನಿವರೆಗೆ ಯಾರೂ ತಾವು ಕಂಡ ಸತ್ಯ ಹೇಳಲಿಲ್ಲ. ಅಮೇರಿಕನ್ ವ್ಯವಸ್ಥೆಯನ್ನು ಟೀಕಿಸುವ ಇವರ ಬೌದ್ಧಿಕತೆ, ನೈತಿಕತೆ ಸೋವಿಯತ್ ರಷ್ಯಾದ ಎಲ್ಲ ಕ್ರೌರ್ಯವನ್ನೂ ಕಣ್ಣುಮುಚ್ಚಿ ಒಪ್ಪಿಕೊಂಡಿದ್ದುದು ಈಗ ಇತಿಹಾಸ. ನಾವು ಲೇಖಕರಾಗಿ ಅವಮಾನದಿಂದ ಒಪ್ಪಿಕೊಳ್ಳಬೇಕಾದ ಇತಿಹಾಸ'[೧೪]

ಮೇಲ್ಕಂಡ ಮನೋಭಾವಕ್ಕೆ ವಿರುದ್ಧವೆನಿಸುವಂತಹ, ಚಳುವಳಿಯ ಸಮೂಹಸನ್ನಿಯಲ್ಲಿ ತಾನು ನೆಚ್ಚುವ ಸಿದ್ಧಾಂತದ ಉದಾತ್ತ ಮೌಲ್ಯಗಳಿಗೆ ಕುರುಡಾಗುವ ಲೇಖಕರದ್ದು ಸಂಸ್ಕೃತಿಗೆ ಎಸಗುವ ಇನ್ನೊಂದು ಬಗೆಯ ಅಪಚಾರ. ಗೋಕಾಕ್ ಚಳುವಳಿ ಸಂದರ್ಭದಲ್ಲಿ ನಮ್ಮ ಕೆಲವು ಮುಖ್ಯ ಲೇಖಕರು ಭಾಷೆಯ ನೆಲೆಯಲ್ಲಿ ಮೂಲಭೂತ ಪ್ರಜಾಪ್ರಭುತ್ವೀಯ ಮೌಲ್ಯಗಳ ಬಗ್ಗೆ ಕುರುಡಾದ ವಿಪರ್ಯಾಸದ ಬಗ್ಗೆ ಅನಂತಮೂರ್ತಿ ಅವರು ಹೇಳುವ ಮಾತುಗಳು ಇಲ್ಲಿ ಪ್ರಸ್ತುತವಾಗಿವೆ. 'ಶ್ರೀ ಬರಗೂರು ರಾಮಚಂದ್ರಪ್ಪನವರು ಮಾರ್ಕ್ಸ್‌ವಾದಿ ಲೇಖಕರು; ಆದರೆ ಇವರು ರಷ್ಯನ್ ಭಾಷೆಯನ್ನು ಒತ್ತಾಯದಿಂದ ಹೇರುವುದರ ಬಗ್ಗೆ ಲೆನಿನ್ ಹೇಳಿದ್ದನ್ನು ಯಾಕೆ ಉಪೇಕ್ಷಿಸುತ್ತಾರೆ.? ಲೋಹಿಯಾವಾದಿಗಳಾದ ಶ್ರೀ ಖಾದ್ರಿ ಶಾಮಣ್ಣ, ಶ್ರೀ ಪಿ.ಲಂಕೇಶ, ಶ್ರೀ ರಾಮದಾಸ, ಮತ್ತು ಶ್ರೀ ಚಂದ್ರಶೇಖರ ಪಾಟೀಲರು ಭಾರತೀಯ ಭಾಷೆಗಳ ಬಗ್ಗೆ ಮಹಾತ್ಮ ಗಾಂಧಿ ಮತ್ತು ಲೋಹಿಯಾ ಬರೆದಿದ್ದರ ಹಿಂದಿರುವ ಉದಾರ ಧೋರಣೆಯನ್ನು ಯಾಕೆ ಗೌರವಿಸುವುದಿಲ್ಲ ಎಂದು ನಾನು ಕೇಳಬಯಸುತ್ತೇನೆ'[೧೫] ಇಲ್ಲಿ 'ಯಾವ ದೊಡ್ಡ ಪ್ರಗತಿಶೀಲ ಬರಹಗಾರ' ಹಾಗೂ ಅವರು ಹೆಸರಿಸುವ ಲೇಖಕರ ಜಾಗದಲ್ಲಿ 'ಜನರು' ಎಂದು ಬದಲಿಸಿದರೆ ಅನಂತಮೂರ್ತಿ ಅವರ ಸಾಂಸ್ಕೃತಿಕ ಮೀಮಾಂಸೆ ಅರ್ಥವಾಗುತ್ತದೆ. ಲೇಖಕರಾಗಲಿ, ಒಂದು ನಾಡಿನ ಜನರಾಗಲಿ ತಾವು ನೆಚ್ಚಿದ ಸಿದ್ಧಾಂತಗಳಿಗೆ ಕುರುಡಾಗದೆ, ಆದರೆ ಆ ಸಿದ್ಧಾಂತಗಳ ಮಾನವೀಯ ಮೌಲ್ಯಗಳನ್ನು ಬಿಟ್ಟುಕೊಡದೆ, ಕಂಡ ಸತ್ಯಗಳಿಗೆ ಸ್ಪಂದಿಸುವುದು ಒಂದು ನಾಡಿನ 'ಸಂಸ್ಕೃತಿ'ಯನ್ನು ರೂಪಿಸುವ ಮಾರ್ಗವಾಗಿದೆ ಎನ್ನುವುದೇ ಈ ಮೀಮಾಂಸೆ.

೪.೩.೪ ಏಕಸಂಸ್ಕೃತಿಯ ಹೇರಿಕೆಗೆ ವಿರೋಧ

ನಾಡಿನ ಬಹುಮುಖಿ ಸಂಸ್ಕೃತಿಯನ್ನು ಅಳಿಸಿ ಏಕಮಾದರಿಯ ಸಂಸ್ಕೃತಿ ಪ್ರತಿಷ್ಠಾಪಿಸುವ ಆಧುನಿಕ ಬಂಡವಾಳಶಾಹಿಗಳ ಪ್ರಯತ್ನಗಳಿಗೆ ಅನಂತಮೂರ್ತಿ ಅವರ ಕನ್ನಡ ಅಸ್ಮಿತೆಯ ಕಡುವಿರೋಧವಿದೆ. ಡಿ.ಆರ್ ನಾಗರಾಜರು ಅಭಿಪ್ರಾಯಪಡುವಂತೆ ಅವರ ಈ ವಿರೋಧ ವ್ಯಕ್ತವಾಗುವುದು 'ಸಾಂಸ್ಕೃತಿಕ ರಾಷ್ಟ್ರೀಯತೆಯ ರೂಪದಲ್ಲಿ ಅಭಿವ್ಯಕ್ತಿ ಪಡೆಯುವ ಅವರ 'ಕರ್ನಾಟಕತ್ವ'ದಲ್ಲಿ'. ಭಾರತದ ಪ್ರಾಚೀನವನ್ನು ಕೇವಲ ಜಾತಿಯ ಧರ್ಮ ಸಂಸ್ಕೃತಿಗಳೆಂದು, ಅವು ಫ್ಯೂಡಲ್ ವರ್ಗದ ಹಿತಾಸಕ್ತಿಯನ್ನು ಮಾತ್ರ ಪ್ರತಿಬಿಂಬಿಸುತ್ತದೆ ಎನ್ನುವ, ಪ್ರಾಚೀನದ್ದೆಲ್ಲವನ್ನು ನಿರಾಕರಿಸುವ ಸಿನಿಕತನದ ಎಡಪಂಥೀಯ ಚಹರೆಯ ಸಂಸ್ಕೃತಿಯನ್ನಾಗಲೀ, ಪ್ರಾಚೀನದಿಂದ ಹಿಗ್ಗುವ ಸಂಭ್ರಮದಲ್ಲಿ ನಮ್ಮನ್ನು ಪೀಡಿಸುತ್ತಿರುವ ಇಂದಿನ ಹಲವು ಸಮಸ್ಯೆಗಳು ಪ್ರಾಚೀನಕ್ಕೂ ಚಾಚಿವೆ ಎಂಬುದನ್ನು ಮರೆಯುವ, ಅದನ್ನೆಲ್ಲ ಭಾರತೀಯತೆಯೆಂದು ಒಪ್ಪಿಕೊಳ್ಳುವ ಗೊಡ್ಡುತನದಿಂದ ಕೂಡಿದ ಬಲಪಂಥೀಯ ಚಹರೆಯ ಸಂಸ್ಕೃತಿಯನ್ನಾಗಲೀ ಅನಂತಮೂರ್ತಿ

ಅವರು ಅಪಾಯಕಾರಿ ಸಂಸ್ಕೃತಿಯೆಂದೇ ಗುರುತಿಸುತ್ತಾರೆ. ಇದಕ್ಕೆ ಪರ್ಯಾಯವಾಗಿ ಪ್ರಸ್ತುತದ ಬಿಕ್ಕಟ್ಟುಗಳ ನಿವಾರಣೆಗೆ ವೈಜ್ಞಾನಿಕ ಸಮಾಜವಾದ ಮಾತ್ರ ಪರಿಹಾರ ಎನ್ನುವುದನ್ನೂ ಅವರು ಒಪ್ಪುವುದಿಲ್ಲ.

ರಾಷ್ಟ್ರೀಯತೆ ಎನ್ನುವುದು ನೆನಪುಗಳ ನಿರ್ಮಿತಿ. ನೆನಪುಗಳ ಪುನರ್ ವಿಂಗಡಣೆಯಲ್ಲಿ ಹೊರಹೊಮ್ಮುವುದು ಸಾಂಸ್ಕೃತಿಕ ರಾಷ್ಟ್ರೀಯತೆ. ಕನ್ನಡ ಸಾಂಸ್ಕೃತಿಕ ರಾಷ್ಟ್ರೀಯತೆ ಕುರಿತ ಚಿಂತನೆಯಲ್ಲಿ ಅನಂತಮೂರ್ತಿ ಅವರು ಬಳಸುವ 'ಜೀರ್ಣಾಗ್ನಿ' ಪರಿಕಲ್ಪನೆ ಅರ್ಥಪೂರ್ಣವಾದುದು. ಎಲ್ಲವನ್ನೂ ಸ್ವೀಕರಿಸಿ ಅನಗತ್ಯವಾದುದನ್ನು ತ್ಯಾಜ್ಯವಾಗಿ ವಿಸರ್ಜಿಸಿ, ಪುಷ್ಟಿದಾಯಕವಾದುದನ್ನು ರಕ್ತವಾಗಿ ಪರಿವರ್ತಿಸುವ 'ಜೀರ್ಣ'ದ ರೂಪಕ ಸಂಸ್ಕೃತಿಯ ಸಂದರ್ಭದಲ್ಲಿ ವಿವೇಕವುಳ್ಳ ಕನ್ನಡ ಸಮುದಾಯ ಅನುಸರಿಸುತ್ತ ಬಂದಿರುವುದೂ, ಸದಾಕಾಲವೂ ಅನುಸರಣಯೋಗ್ಯವೂ ಆಗಿರುವಂತಹದು. ಅನಂತಮೂರ್ತಿ ಅವರ 'ಜೀರ್ಣಾಗ್ನಿ' ಪರಿಕಲ್ಪನೆಯನ್ನು 'ಕನ್ನಡ ರಾಷ್ಟ್ರೀಯತೆಯ ಮುಖ್ಯ ದಾಖಲೆಗಳಲ್ಲಿ ಒಂದು' ಎಂದು ಪರಿಗಣಿಸುವ ಡಿ.ಆರ್ ನಾಗರಾಜ ಅವರ ನಿಲುವು ಸಮರ್ಥನೀಯವಾಗಿದೆ. ಆದರೆ ಈ ಪರಿಕಲ್ಪನೆ ಪರಿಪೂರ್ಣವಾಗುವುದು 'ಹೊರಗಿನವು ಜೀರ್ಣವಾಗಿ ಪೂರಾ ಇಲ್ಲವಾಗುತ್ತದೆಯೋ, ಇಲ್ಲ ತಮ್ಮ ಸಹ ಅಸ್ತಿತ್ವವನ್ನು ಮುಂದುವರೆಸುತ್ತೆಯೋ' ಎನ್ನುವ ನಾಗರಾಜರೇ ಎತ್ತುವ ಪ್ರಶ್ನೆಯನ್ನು ಬಗೆಹರಿಸಿಕೊಂಡಾಗ. ಇತರ ಭಾಷಿಕರು, ಧಾರ್ಮಿಕ ಅಲ್ಪಸಂಖ್ಯಾತರು ಕರ್ನಾಟಕದಲ್ಲಿ ಕನ್ನಡ ಕಲಿತು ಕನ್ನಡ ಸಂಸ್ಕೃತಿಯಲ್ಲಿ ಬೆರೆಯಬೇಕು ಎನ್ನುವಾಗಲೇ ಅವರು ತಮ್ಮ ಮಾತೃಭಾಷೆಗಳನ್ನು ಕಲಿತು ಉಳಿಸಿಕೊಂಡು ಹೋಗಲು ಅವಕಾಶ ಮಾಡಿಕೊಡಬೇಕು ಎಂದು ಗೋಕಾಕ್ ಚಳುವಳಿಯ ಸಂದರ್ಭದಲ್ಲಿ ಅನಂತಮೂರ್ತಿ ಅವರು ವ್ಯಕ್ತಪಡಿಸಿದ ದಿಟ್ಟ ನಿಲುವೇ ಮೇಲಿನ ಪ್ರಶ್ನೆಯನ್ನು ಬಗೆಹರಿಸುತ್ತಿದೆ.

'ಭಾವನಾತ್ಮಕ ನನ್ನ ಒಲವು ಇರುವುದು ಎಡಪಂಥೀಯರಿಗೆ' ಎಂದು ಘೋಷಿಸಿಕೊಂಡಿದ್ದರೂ ಅನಂತಮೂರ್ತಿ ಅವರು ಎಡಪಂಥೀಯರಲ್ಲ. ಆಯ್ದ ಪ್ರಾಚೀನದ ಬಗ್ಗೆ ಒಲವಿದ್ದರೂ ಬಲಪಂಥೀಯರಲ್ಲ. ಅನಕ್ಷರಸ್ಥರಿಂದ ನಮ್ಮ ಸಂಸ್ಕೃತಿ ಉಳಿದಿದೆ ಎನ್ನುವಾಗಲೇ ಭಾರತದ ಸಮಸ್ತರೂ ಒಂದೆಡೆ ಕುಳಿತು ಕಲಿಯಬಹುದಾದ ಕಾಮನ್ ಸ್ಕೂಲ್‌ಗಳಿಗಾಗಿ ಆಗ್ರಹಿಸುತ್ತಾರೆ. ಜಾತಿ ಸೃಜನಶೀಲವಾಗಬಲ್ಲದು ಎನ್ನುವ ಹೊತ್ತಿನಲ್ಲೇ ಜಾತಿವ್ಯವಸ್ಥೆಯನ್ನು ಮರುಪ್ರತಿಷ್ಠಾಪಿಸುತ್ತಿರುವ ಖಾಸಗಿ ಶಿಕ್ಷಣವ್ಯವಸ್ಥೆಯನ್ನು ಖಂಡಿಸುತ್ತಾರೆ. ಇದನ್ನೆಲ್ಲ ಮೇಲ್ನೋಟದಲ್ಲಿ ಗ್ರಹಿಸಿದಾಗ ಅನಂತಮೂರ್ತಿ 'ದ್ವಂದ್ವಮೂರ್ತಿ' ಯಾಗಿ ಕಾಣುವುದೂ ಇದೆ. ಹೀಗೆ ಪರಸ್ಪರ ವಿರೋಧಾಭಾಸವೆನಿಸುವ ಚಿಂತನೆಗಳು ಕುವೆಂಪು ಅವರಲ್ಲಿಯೂ ಇದ್ದವು. ಹಲವು ಆಯಾಮಗಳನ್ನು ಪಡೆದ ಸಂಸ್ಕೃತಿ ಚಿಂತನೆಯಲ್ಲಿ ಇದು ಸಹಜವಾಗಿರುವಂತಹದು. ಮೇಲ್ನೋಟಕ್ಕೆ ವಿರೋಧಾಭಾಸವೆನಿಸುವ ಚಿಂತಕರ ಸಂಸ್ಕೃತಿ ಚಿಂತನೆಗಳಲ್ಲಿ ಬಹಳಷ್ಟು ವಿಶ್ಲೇಷಣೆಗೊಳಪಡಿಸಿದಾಗ

ಸ್ಪಷ್ಟತೆಯನ್ನು ಪಡೆಯುತ್ತವೆ. ಮಲೆನಾಡಿನ ಈ ಇಬ್ಬರು ಚಿಂತಕರ ವಿಚಾರದಲ್ಲಿಯೂ ಅನ್ವಯವಾಗುವ ಮಾತಿದು.

೪.೩.೫ ವರ್ಗನೆಲೆಯಲ್ಲಿ ಭಾಷೆಯ ವರ್ತನೆಯ ಸೂಕ್ಷ್ಮ ವಿಶ್ಲೇಷಣೆ

ಅನಂತಮೂರ್ತಿ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳನ್ನು ಅರಿಯಲು ಅವರ 'ಇಂಗ್ಲಿಶ್ ಬ್ರಾಹ್ಮಣ ಮತ್ತು ಕನ್ನಡ ಶೂದ್ರ' ಲೇಖನ ಉತ್ತಮ ಪ್ರವೇಶಿಕೆಯಾಗಿದೆ. 'ಇಂಗ್ಲಿಶ್ ಬ್ರಾಹ್ಮಣ ಮತ್ತು ಕನ್ನಡ ಶೂದ್ರ' ಲೇಖನವು 'ಕನ್ನಡದ ಅಥವಾ ಮಾತೃಭಾಷೆಗಳ ಮೂಲಕ ಬೌದ್ಧಿಕ ಚಟುವಟಿಕೆ ಮಾಡುವುದರ ಮಹತ್ವ ಕುರಿತು ಸೈದ್ಧಾಂತಿಕವಾಗಿ ಅಕೆಡಮಿಕ್ಕಾಗಿ ವಿವೇಚನೆ ಮಾಡಿದ ವಿರಳ ಲೇಖನಗಳಲ್ಲಿ ಒಂದು' ಎಂದು ಕನ್ನಡ ವಿದ್ವತ್ ವಲಯದಲ್ಲಿ ಮನ್ನಣೆಗೆ ಪಾತ್ರವಾಗಿದೆ. 'ಇಂಗ್ಲಿಷ್ ಬ್ರಾಹ್ಮಣ, ಕನ್ನಡ ಶೂದ್ರ' ಎಂಬ ಲೇಖನ ಭಾಷೆ ಕುರಿತು, ಅದರಲ್ಲೂ ನಿರ್ದಿಷ್ಟವಾಗಿ ಕನ್ನಡ ಭಾಷೆ ಕುರಿತು ಅನಂತಮೂರ್ತಿ ಅವರ ಚಿಂತನೆಗಳನ್ನು ಹೆಚ್ಚು ಖಚಿತವಾಗಿ ಮಂಡಿಸುವ ಬರೆಹವಾಗಿದೆ. ೧೯೬೫ ರಲ್ಲಿ ಪ್ರಕಟವಾದ ಈ ಲೇಖನ ಮುಖ್ಯವಾಗಿ ಭಾಷೆಯನ್ನು ಸಾಂಸ್ಕೃತಿಕ ನೆಲೆಯಲ್ಲಿ ವಿಶ್ಲೇಷಿಸುತ್ತದೆ. ಸಂಸ್ಕೃತಿ ಚಿಂತನೆಯ ಈ ಬರಹ 'ಇಂಗ್ಲಿಶ್ ವಿಚಾರಗಳ ಬೌದ್ಧಿಕತೆಯ, ಅಮೂರ್ತತೆಯ ನೆಲೆಯಲ್ಲಿರುವ ಭಾಷೆಯಾದರೆ ಕನ್ನಡ ಭಾವನೆಗಳ, ಸ್ವಾನುಭವದ ಮೂರ್ತತೆಯ ನೆಲೆಯ ಭಾಷೆಯೆಂದು ತೋರಿತು. ಬ್ರಾಹ್ಮಣ ಮತ್ತು ಶೂದ್ರ ಎಂಬ ಪದಗಳು ಜಾತಿವಾಚಿ ಆಗುವ ಬದಲು ಲೋಕಗ್ರಹಿಕೆಯ ಎರಡು ಮಾದರಿಗಳೆಂದು ಮಂಡಿಸಲಾಯಿತು. ಈಗ ಈ ಎರಡು ನೆಲೆಗಳ ನಡುವೆ ಶತ್ರುತ್ವಕ್ಕಿಂತ ಒಂದು ಇನ್ನೊಂದನ್ನು ಬಿಟ್ಟಿರಲಾರದ ಪೂರಕತೆಯ ನೆಲೆ ಮುಖ್ಯವಾಯಿತು.'[೧೬]

ಲೇಖನದ ಶೀರ್ಷಿಕೆ 'ಇಂಗ್ಲಿಷ್ ಬ್ರಾಹ್ಮಣ, ಕನ್ನಡ ಶೂದ್ರ' ಎನ್ನುವುದು 'ಅನುಭವರಹಿತ ಜ್ಞಾನಕ್ಕೂ, ಬೌದ್ಧಿಕತೆಯಿಲ್ಲದ ಅನುಭವಕ್ಕೂ ಸಂಬಂಧಿಸಿದ ಎದುರಾಳಿ ಪರಿಕಲ್ಪನೆಗಳಾಗಿವೆ'. ರಹಮತ್ ತರೀಕರೆ ಅವರು ಗುರುತಿಸುವಂತೆ, ಇದಕ್ಕೆ 'ಅನುಭವ–ಭಾವನೆ ಹಾಗೂ ಬುದ್ಧಿ–ಜ್ಞಾನಗಳನ್ನು ಸರಳವಾಗಿ ವಿಭಜಿಸುವ ಪರಿಕಲ್ಪನೆಗಳ ತಾತ್ವಿಕ ಪರಿಮಿತಿ'ಯಿದ್ದರೂ ಇದನ್ನೊಂದು 'ಬಾಲಿಶ ಪರಿಕಲ್ಪನೆ' ಎಂದು ವ್ಯಾಖ್ಯಾನಿಸಿದ ರಾಜೇಂದ್ರ ಚೆನ್ನಿ ಅವರ ಮಾತನ್ನು ಒಪ್ಪಲಾಗದು. ನಿಜದ ಸಂಗತಿಯೆಂದರೆ ಡಿ.ಆರ್. ನಾಗರಾಜ ಅವರು ಗುರುತಿಸುವಂತೆ 'ಅನಂತಮೂರ್ತಿ ಒಂದೆರೆಡು ತಲೆಮಾರುಗಳಲ್ಲಿಯೇ ಅತ್ಯಂತ ಆಕರ್ಷಕ ಲೇಖಕನಾಗಿದ್ದು ಹೊಸ ರೀತಿಯ ಮೌಲ್ಯಗಳ ಹರಿಕಾರನಾಗಿ. ಅವರು ಮುಖ್ಯವಾದದ್ದೇ ಆಕ್ರಾಂತ ಯುವಜನರ ಅತಂತ್ರ ವ್ಯಕ್ತಿತ್ವದ ಶೋಧನೆಗಾಗಿ. ಇಂಗ್ಲಿಶ್ ಬ್ರಾಹ್ಮಣತ್ವದ ವಿರುದ್ಧ ಕನ್ನಡ ಶೂದ್ರತ್ವವನ್ನು ಎತ್ತಿ ಹಿಡಿದಿದ್ದಕ್ಕಾಗಿ ಅನಂತಮೂರ್ತಿ ೧೯೬೦–೭೦ರ ದಶಕಗಳಲ್ಲಿ ಯುವಕರಿಗೆ ಪ್ರಿಯವಾದರು'. ಭಾರತೀಯ ಸಂದರ್ಭದಲ್ಲಿ ತರತಮದ ಮೂಲನೆಲೆ ಜಾತಿವ್ಯವಸ್ಥೆ. ಜಾತಿಯನ್ನೂ, ಭಾಷೆಯನ್ನೂ ಜತೆಗಿಟ್ಟು ನೋಡುವ ಈ ರೂಪಕಕ್ಕೆ

ಕಡುವಾಸ್ತವದ ಬೆಂಬಲವಿದೆ. ಬ್ರಿಟಿಷರ ಜತೆಗೆ, ಅವರ ಇಂಗ್ಲಿಶ್ ಭಾಷೆಯೊಂದಿಗೂ ಹೊಂದಿಕೊಂಡ ಹಿಂದೂ ಮೇಲ್ಜಾತಿಗಳು ಬ್ರಿಟಿಶ್ ಅಧಿಕಾರ ವ್ಯವಸ್ಥೆಯಲ್ಲಿ ತ್ವರಿತವಾಗಿ ಮೇಲ ಬಂದವು. ನವವಸಾಹತುಶಾಹಿ ಕಾಲಘಟ್ಟದ ಜಾಗತೀಕರಣೋತ್ತರ ಸಂದರ್ಭದಲ್ಲಿ ಕೂಡ ಇಂಗ್ಲಿಶಿನ ಲಾಭವನ್ನು ಪಡೆದದ್ದು ಇದೇ ವರ್ಗವೇ. ಮೊದಲ ಘಟ್ಟದಲ್ಲಿ ಬ್ರಿಟಿಷರಿಗೆ ಬೇಕಾದ ಗುಮಾಸ್ತರಾಗಿ ಎರಡನೆ ಘಟ್ಟದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಅಗತ್ಯವಾದ ಸಾಫ್ಟ್‌ವೇರ್ ಇಂಜಿನಿಯರುಗಳಾಗಿ ಕಾರ್ಯನಿರ್ವಹಿಸಿದ್ದು.

೪.೩.೬ ಜಾಗತೀಕರಣ ಸೃಷ್ಟಿಸಿರುವ ಬಿಕ್ಕಟ್ಟಿಗೆ ಮುಖಾಮುಖಿಯಾಗದ ಚಿಂತನೆಯ ಮಿತಿ

ಭಾಷೆಯೊಂದು 'ಸಾಂಸ್ಕೃತಿಕ ಸಮಷ್ಟಿ ಜೀವನದ ಉತ್ಪನ್ನ' ಎಂದು ವ್ಯಾಖ್ಯಾನಿಸುವ ಭಾಷಾವಿಜ್ಞಾನಿಗಳ ಪ್ರಮೇಯವನ್ನು ಅನಂತಮೂರ್ತಿ ಅವರು 'ಮನುಷ್ಯ ಮಾನವೀಯವಾಗಿ ಉಳಿಯಲು ಅವನಿಗೆ ತನ್ನ ಗತಕಾಲದಿಂದ ರಕ್ಷಿತವಾಗಿ ಬಂದ ಮೌಲ್ಯಗಳ, ಪೂರ್ವಿಕರಲ್ಲಿ ಶ್ರೇಷ್ಠರಾದವರ ತಪಸ್ಸು ಮತ್ತು ಸಾಧನೆಯ ಸ್ಮೃತಿಯಿರಬೇಕು. ಭಾಷೆ ಇಂತಹ ಸ್ಮೃತಿಯ ನಿಧಿ' ಎನ್ನುವ ಮೂಲಕ ಇನ್ನಷ್ಟು ವಿಸ್ತರಿಸಲು ಪ್ರಯತ್ನಿಸುತ್ತಾರೆ. ಇಂತಹ ಅಮೂಲ್ಯನಿಧಿಯಾದ ದೇಶೀಯ ಭಾಷೆಗಳು ಇಂಗ್ಲಿಷ್ ಸೃಷ್ಟಿಸಿದ ಅನಿವಾರ್ಯತೆಯಿಂದಾಗಿ ಕಣ್ಮರೆಯಾಗುತ್ತಿವೆಯಲ್ಲ ಎಂಬ ತಳಮಳ ಅವರದ್ದಾಗಿದೆ. ಆದರೆ ಇದಕ್ಕೆ ದ್ವಿಭಾಷಾ ಅನುಸರಣೆ ಪರಿಹಾರವಲ್ಲ, ದ್ವಿಭಾಷಾ ಅನುಸರಣೆಯಿಂದ 'ಬುದ್ಧಿಲೋಕ ಮತ್ತು ಭಾವಲೋಕಗಳ ನಡುವೆ ಗೋಡೆಯೊಂದನ್ನು ಕಟ್ಟಿಕೊಂಡು ಒಂದರಿಂದ ಇನ್ನೊಂದನ್ನು ಪುಷ್ಟಿಪಡಿಸಿಕೊಳ್ಳದೆ ಬದುಕುವ ಛಿದ್ರ ವ್ಯಕ್ತಿತ್ವ'ಗಳ ನಿರ್ಮಾಣವಾಗುತ್ತದೆಂಬ ಆತಂಕ ಅವರದು. 'ಭಾಷೆಯ ಮುಖ್ಯಕಾರ್ಯ ಸಾಧಿತವಾಗುವುದು 'ನಮ್ಮನ್ನು ಬೆನ್ನಟ್ಟಿ ಬಂದು ರಕ್ತಗತವಾಗಿರುವ ಭಾಷೆಯಿಂದಲೇ ಹೊರತು ಕಷ್ಟಪಟ್ಟು ನಮ್ಮ ಬುದ್ಧಿಶಕ್ತಿಯನ್ನೆಲ್ಲಾ ವೆಚ್ಚ ಮಾಡಿ ಕಲಿಯುವ ಪರಭಾಷೆಯಿಂದಲ್ಲ' ಎನ್ನುವ ಬಿ.ಎಂ.ಶ್ರೀ ಅವರ ಮಾತಿನ ಅನುಮೋದನೆಯಂತೆ ಈ ಮಾತುಗಳಿವೆ.

ಸಾರಾಂಶದಲ್ಲಿ 'ವಾಗತೀತವಾದ ಬರಿಯ ಚಿಹ್ನೆ ಫಾರ್ಮುಲಾಗಳಲ್ಲಿ ಬೆಳೆಯುವ ವಿಜ್ಞಾನ ಜಗತ್ತಿನ ಮೇಲೆ ತನ್ನ ವಜ್ರಮುಷ್ಟಿಯನ್ನು ಬಿಗಿ ಮಾಡುತ್ತಿದ್ದಂತೆ, ನಮ್ಮ ಮಾನವ್ಯಕ್ಕೆ ದ್ಯೋತಕವಾದ ಭಾಷೆಯನ್ನು, ಅಂದರೆ ಈ ಭಾಷೆಯ ಮೂಲಕ ಇಡೀ ಸಂಸ್ಕೃತಿಯನ್ನು , ನಾವು ಇನ್ನಷ್ಟು ಎಚ್ಚರದಿಂದ ಕಣ್ಣಿನಲ್ಲಿ ಎಣ್ಣೆಯಿಟ್ಟು ರಕ್ಷಿಸಬೇಕಾಗುತ್ತದೆ.' ಎಂಬ ಎಚ್ಚರಿಕೆ ಅನಂತಮೂರ್ತಿ ಅವರದ್ದಾಗಿದೆ. ಇದಕ್ಕೆ ಅವರು ಸೂಚಿಸುವ ಪರಿಹಾರವೆಂದರೆ 'ಗ್ರಹಿಕೆಗೆ ಮೂಲಭಾಷೆಯನ್ನಿಟ್ಟುಕೊಂಡು ಅಭಿವ್ಯಕ್ತಿಗೆ ನಮ್ಮ ಭಾಷೆಯನ್ನು ಬಳಸುವುದು.'

ಜಾಗತೀಕರಣೋತ್ತರ ಸಂದರ್ಭದಲ್ಲಿ ಭಾಷೆಯ ಆಯ್ಕೆ ಮನಃಶಾಸ್ತ್ರೀಯ ಮತ್ತು ಸಾಹಿತ್ಯಿಕ ಅಗತ್ಯಕ್ಕಿಂತ ಆರ್ಥಿಕ ಕಾರಣವೇ ಪ್ರಧಾನವಾಗಿರುವುದು ವಾಸ್ತವ. ಇದರ ಅರಿವು ಅನಂತಮೂರ್ತಿ ಅವರಿಗೆ ಇದೆ. 'ಇಂಗ್ಲಿಷ್ ಕವಿ, ವಿಮರ್ಶಕ ಅರ್ನಾಲ್ಡ್ ಹೇಳುವಂತೆ ಆತನ ನಾಡು ದೊಡ್ಡದಾಗಿರುವುದು ಕಲ್ಲಿದ್ದಿಲಿನ ಉತ್ಪಾದನೆಯಿಂದಲ್ಲ ; ಶೇಕ್ಸ್‌ಪಿಯರಿನಿಂದಾಗಿ ಎಂಬ ಮಾತು ಕೇವಲ ಆದರ್ಶದ್ದು, ಇಷ್ಟೇ ಉದಾತ್ತ ಧೋರಣೆಯ ಪೋರ್ಚುಗೀಸಿನ ಒಂದು ವಾಕ್ಯವನ್ನೋ, ಫ್ರೆಂಚಿನ ಒಂದು ವಾಕ್ಯವನ್ನೋ, ಜರ್ಮನ್ ಭಾಷೆಯ ಒಂದು ವಾಕ್ಯವನ್ನೋ ಉದ್ಧರಿಸುವ ಬದಲು ಇಂಗ್ಲೆಂಡಿನ ಶೇಕ್ಸ್‌ಪಿಯರನ ಮಾತನ್ನೇ ಜಗತ್ತು ಉದ್ಧರಿಸಲು ೧೯ನೇ ಶತಮಾನದ ಇಂಗ್ಲೆಂಡಿಗೆ ಕಲ್ಲಿದ್ದಿಲ್ಲಿನ ಬಲವಿದ್ದುದೇ ಕಾರಣ'[೧೭] ಎಂದು ಅವರು ಗುರುತಿಸುತ್ತಾರೆ. ಆದ್ದರಿಂದಲೇ 'ಸಾಂಸ್ಕೃತಿಕವಾಗಿ ಕನ್ನಡ ಭಾಷೆಯ ಬಗ್ಗೆ ನಾವು ತಾಳುವ ಅಭಿಮಾನಕ್ಕೂ ಈ ಅಭಿಮಾನ ನೈಜವಾಗಲು ಕನ್ನಡ ಮಾತಾಡುವ ಕರ್ನಾಟಕದ ಜನ ನೆಮ್ಮದಿಯಲ್ಲಿ ಬದುಕಿ ಬಾಳಲು ಅಗತ್ಯವಾದ ಸಂಪನ್ಮೂಲಗಳನ್ನು ಪಡೆದಿರಬೇಕೆಂಬ ಕಾಳಜಿಗೂ ಅಭಿನ್ನವಾದ ಸಂಬಂಧವಿದೆ' ಎಂದವರು ಪ್ರತಿಪಾದಿಸುತ್ತಾರೆ. ಆದರೆ ಜಾಗತೀಕರಣದಿಂದಾಗಿ ಹೆಚ್ಚುತ್ತಿರುವ ನಮ್ಮ ಸಾಮಾಜದ ವಿವಿಧ ಜನವರ್ಗಗಳ ನಡುವಿನ ಅಸಮಾನತೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಭಾಷೆಯನ್ನು ಆರ್ಥಿಕ ಹಿನ್ನೆಲೆಯಲ್ಲಿ ಪರ್ಯಾಲೋಚಿಸುವ ಚಿಂತನೆ ಅನಂತಮೂರ್ತಿ ಅವರಲ್ಲಿ ಗೈರಾದಂತೆ ಕಾಣುತ್ತದೆ.

ಬದಲಾಗುತ್ತಿರುವ ಸಮಾಜ ಅನಂತಮೂರ್ತಿ ಅವರ ಗ್ರಹಿಕೆಯನ್ನು ಮೀರಿದ ಸಂಕೀರ್ಣತೆಗಳನ್ನು ಒಳಗೊಂಡಿರುವುದೂ ಇದಕ್ಕೆ ಕಾರಣ. ಅನಂತಮೂರ್ತಿಯವರು ಬಹಳ ಪ್ರಭಾವಿಸಲ್ಪಟ್ಟ ಸಮಾಜವಾದಿ ಚಿಂತಕರಾದ ರಾಮಮನೋಹರ ಅವರ ಒಂದು ಅಭಿಪ್ರಾಯವನ್ನೇ ಇಲ್ಲಿ ನೆನಪಿಸಿಕೊಳ್ಳುವುದು ಸೂಕ್ತ. ಇಂಗ್ಲಿಷನ್ನು ಪ್ರತಿಷ್ಠೆ, ಅಧಿಕಾರ ಹಾಗು ಹಣ ಹಿಂಬಾಲಿಸುತ್ತಿರುವವರೆಗೆ ನಮ್ಮ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸುವುದು ಅನಿವಾರ್ಯ ಎಂದು ಅವರು ಅಭಿಪ್ರಾಯಪಡುತ್ತಾರೆ. ಈ ಮಾತುಗಳೇ 'ಬದಲಾಗುತ್ತಿರುವ ಸಮಾಜದ' ಸಂಕೀರ್ಣತೆಗೆ ಉದಾಹರಣೆಯಾಗಿದೆ.

ನಮ್ಮ ಸರ್ಕಾರದ ಶಿಕ್ಷಣ ಮಾಧ್ಯಮದ ನೀತಿಗಳು 'ಗ್ರಹಿಕೆಗೆ ಮೂಲಭಾಷೆಯನ್ನಿಟ್ಟುಕೊಂಡು ಅಭಿವ್ಯಕ್ತಿಗೆ ನಮ್ಮ ಭಾಷೆಯನ್ನು ಬಳಸಬೇಕೆನ್ನುವ' ಅನಂತಮೂರ್ತಿ ಅಂತವರ ಚಿಂತಕರ ಅಭಿಪ್ರಾಯಗಳಿಂದಲೇ ರೂಪ ಪಡೆದಂತವು. ಒಬ್ಬ ವ್ಯಕ್ತಿ ಅಥವಾ ವಿದ್ಯಾರ್ಥಿ ವಿಷಯವನ್ನು ಗ್ರಹಿಸಲು ಮತ್ತು ಆ ಮೂಲಕ ಅವನ ಮನೋವಿಕಾಸವಾಗಲು ಇದು ಸೂಕ್ತವಾದ ಹಾದಿಯಾಗಿದೆ ಎನ್ನುವುದು ಸರಿ. ಆದರೆ ಸಮಸ್ಯೆಗಳು ಭಾಷಾಮೂಲದಿಂದ ಬಾರದೆ ಭಾಷೆಯನ್ನು ನಿಯಂತ್ರಿಸುವ ಬಾಹ್ಯಶಕ್ತಿಗಳಿಂದ ಉಂಟಾಗುತ್ತಿರುವುದು ಹೆಚ್ಚು ಸಂಕೀರ್ಣತೆಯನ್ನು ಸೃಷ್ಟಿಸಿದೆ.

ಜಾಗತೀಕರಣ ಸೃಷ್ಟಿಸಿರುವ ಇಂಗ್ಲಿಷಿನ ಅನಿವಾರ್ಯತೆ ಮತ್ತು ಇದು ಸಮಾಜದಲ್ಲಿ ಹೆಚ್ಚಿಸಿರುವ ಅಸಮಾನತೆಗಳು ಭಾಷೆಯನ್ನು ಕೇವಲ ಜ್ಞಾನಕಲಿಕೆಯ ಮಾಧ್ಯಮವನ್ನಾಗಿ ನೋಡದಂತೆ ನಿರ್ಬಂಧಿಸಿವೆ. 'ಮೇಲ್ವರ್ಗಗಳು ಈಗಾಗಲೇ ಖಾಸಗಿ ಶಾಲೆಗಳ ಮೂಲಕ ಇಂಗ್ಲಿಷನ್ನು ಕಲಿತು ಜಾಗತೀಕರಣದ ಲಾಭ ಪಡೆಯುತ್ತಿದ್ದು 'ಕನ್ನಡ–ಮಾತೃಭಾಷಾ ಮಾಧ್ಯಮದ ವಿದ್ಯಾರ್ಥಿಗಳು 'ಆದರ್ಶ ಶಿಕ್ಷಣ ಮಾಧ್ಯಮದ ಮಾರಿ ಬಲಿಗೆ ಕೂಡಿಸಿರುವ ಹರಕೆಯ ಕೂಸು'ಗಳಾಗಿವೆ'.[೧೮] ಆದ್ದರಿಂದ ಹಿಂದುಳಿದ ಮತ್ತು ಬಡವರ್ಗದ ಮಕ್ಕಳಿಗೂ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಿ' ಎಂಬುದು ದಲಿತ ಸಂಘಟನೆಗಳು ಮತ್ತು ಪ್ರಗತಿಪರರ ಒಂದು ವರ್ಗದ ಒತ್ತಾಯವಾಗಿದೆ.

ಜಾಗತೀಕರಣ ಇಂಗ್ಲಿಷಿನ ಮೂಲಕ ಸೃಷ್ಟಿಸಿರುವ ಈ ಸಾಮಾಜಿಕ ಬಿಕ್ಕಟ್ಟುಗಳನ್ನು ಮುಖಾಮುಖಿ ಮಾಡಿಕೊಳ್ಳದೆ ಭಾಷಾಕೇಂದ್ರಿತವಾಗಿ ಮಾಡುವ ಎಂತಹ ಉನ್ನತವಾದ ಚಿಂತನೆಯೂ ಭಾಷೆಯನ್ನು ಉಳಿಸಿಕೊಳ್ಳುವಲ್ಲಿ ಪ್ರಾಯೋಗಿಕವಾಗಿ ವಿಫಲವಾಗುತ್ತದೆ. ಅನಂತಮೂರ್ತಿ ಅವರ ಭಾಷೆ ಕುರಿತ ಚಿಂತನೆಗಳೂ ಇಂತಹ ಬಿಕ್ಕಟ್ಟನ್ನು ಎದುರಿಸುತ್ತಿವೆ. ಆದರೆ ತಮ್ಮ ಬದುಕಿನ ಕೊನೆಯ ದಶಕದಲ್ಲಿ ಜಾಗತೀಕರಣ ಇಲ್ಲಿನ ಜಾತಿವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಿರುವುದರ ಬಗ್ಗೆ, ಬಡವ–ಶ್ರೀಮಂತರ ನಡುವಿನ ಅಂತರವನ್ನು ಹೆಚ್ಚಿಸುತ್ತಿರುವುದರ ಬಗ್ಗೆ ಗಾಢವಾಗಿ ಚಿಂತಿಸಿದ ಅನಂತಮೂರ್ತಿ ಅವರು ಮತ್ತೆ ಮತ್ತೆ ಪ್ರತಿಪಾದಿಸಿದ ಸರ್ವರೂ 'ಕಾಮನ್ ಸ್ಕೂಲ್'ಗಳಲ್ಲಿ ಓದಬೇಕು ಎನ್ನುವ ಚಿಂತನೆ ಜನಭಾಷೆಗಳನ್ನು ಉಳಿಸುವ ಮತ್ತು ಸಾಮಾಜಿಕ ಅಸಮಾನತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಅನುಷ್ಠಾನಯೋಗ್ಯ ಚಿಕಿತ್ಸೆಯ ಕ್ರಮವಾಗಿದೆ.

೪.೩.೭ ಚಳುವಳಿಯನ್ನು ವಿಮರ್ಶಿಸುವ ದಿಟ್ಟತನದ ಚಿಂತನೆಗಳು

ಗೋಕಾಕ್ ಚಳವಳಿ ಸಂದರ್ಭದಲ್ಲಿ ಅನಂತಮೂರ್ತಿ ಅವರು ಬರೆದ ಲೇಖನ 'ಗೋಕಾಕ್ ವರದಿ ಪರ ಚಳುವಳಿಯ ಅಂತರಂಗ ಬಹಿರಂಗ' (ಪೂರ್ವಾಪರ, ೧೯೯೦) ಕನ್ನಡ ಬದುಕಿಗೆ ಸಂಬಂಧಿಸಿದ ಸಂಗತಿಗಳ ಬಗ್ಗೆ ಮುಕ್ತವಾಗಿ ಮತ್ತು ದಿಟ್ಟತನದಿಂದ ಅನಂತಮೂರ್ತಿ ಅವರು ನಡೆಸುವ ಸಂವಾದ ಮತ್ತು ಚರ್ಚೆಗಳ ಸ್ವರೂಪಕ್ಕೆ ಪ್ರಾತಿನಿಧಿಕದಂತಿದೆ.

ಕರ್ನಾಟಕದ ಪ್ರೌಢಶಾಲೆಗಳಲ್ಲಿ ಸಂಸ್ಕೃತ ಶಿಕ್ಷಕರ ಹುನ್ನಾರದಿಂದ ಆ ಭಾಷೆಗೆ ಹೆಚ್ಚಿನ ಅಂಕ ಕೊಡುತ್ತಿದ್ದು ಸಹಜವಾಗಿಯೇ ಪೋಷಕರು ತಮ್ಮ ಮಕ್ಕಳಿಗೆ ಮೊದಲ ಭಾಷೆಯಾಗಿ ಕನ್ನಡದ ಬದಲು ಸಂಸ್ಕೃತವನ್ನೇ ಆಯ್ಕೆ ಮಾಡಿಸುತ್ತಿದ್ದರು. ಕನ್ನಡಕ್ಕೆ ಕುತ್ತು ತರುತ್ತಿದ್ದ ಈ ವಿಚಾರಗಳನ್ನು ಗಮನಿಸಿದ ವಿಚಾರವಂತರು ಸಂಸ್ಕೃತವನ್ನು ಸ್ಥಾನದಿಂದ ತೆಗೆದುಹಾಕುವಂತೆ ಸರ್ಕಾರವನ್ನು ಆಗ್ರಹಿಸಿದರು. ೧೯೭೯ರ ಅಕ್ಟೋಬರ್‌ನಲ್ಲಿ ಸರ್ಕಾರ ಸಂಸ್ಕೃತ ಭಾಷೆಯನ್ನು ತೃತೀಯ ಭಾಷೆಯಾಗಿ ಮಾತ್ರ ಓದಲು ಅವಕಾಶ ಕಲ್ಪಿಸಿ ಆದೇಶ ಹೊರಡಿಸಿತು. ಇದರ ವಿರುದ್ಧ ಸಂಸ್ಕೃತಪರವಾದಿಗಳು

ಉಚ್ಚನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು. ಇದು ವಿಧಾನಮಂಡಲಗಳಲ್ಲಿ ಚರ್ಚೆಯಾಗಿ ಈ ಕುರಿತು ಸಲಹೆ ನೀಡುವಂತೆ ಜುಲೈ ೫, ೧೯೮೦ರಂದು ವಿ.ಕೃ ಗೋಕಾಕ್ ಅವರ ನೇತೃತ್ವದಲ್ಲಿ ಒಂದು ಸಮಿತಿ ರಚಿಸಿತು. ಈ ಸಮಿತಿ ಪರಿಶೀಲಿಸಬೇಕಾಗಿದ್ದ ವಿಷಯಗಳೆಂದರೆ 'ಸಂಸ್ಕೃತವು ಶಾಲಾ ಪಠ್ಯವಿಷಯಗಳಲ್ಲಿ ಅಭ್ಯಾಸದ ಒಂದು ವಿಷಯವಾಗಿ ಉಳಿಯಬೇಕೆ? ಹಾಗಿದ್ದಲ್ಲಿ ಅದು ಕನ್ನಡಕ್ಕೆ ಪರ್ಯಾಯವಾಗದಂತೆ ಉಳಿಸಿಕೊಳ್ಳುವುದು ಹೇಗೆ? ಮತ್ತು ತ್ರಿಭಾಷಾ ಸೂತ್ರದಂತೆ ಕನ್ನಡವನ್ನು ಕಡ್ಡಾಯ ಮಾಡಿ ಮಿಕ್ಕ ಭಾಷೆಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೇ ಬಿಡುವುದು ಸೂಕ್ತವೇ?' ಎನ್ನುವುದು. ಸಮಿತಿ ಈ ಕುರಿತು ಸಲಹೆಗಳನ್ನು ನೀಡಬೇಕಾಗಿತ್ತು. ಈ ಸಮಿತಿ ತನ್ನ ವರದಿಯಲ್ಲಿ ಮಾಡಿದ ಶಿಫಾರಸ್ಸು ಏನೆಂದರೆ ಕನ್ನಡ ಕಡ್ಡಾಯ ಪ್ರಥಮ ಭಾಷೆಯಾಗಿರಬೇಕೆಂದೂ ಉಳಿದೆರೆಡು ಭಾಷೆಗಳು ವಿದ್ಯಾರ್ಥಿಯ ಅಥವಾ ಪೋಷಕರ ಅಥವಾ ಶಾಲೆಯ ಅಗತ್ಯಗಳಿಗೆ ಅನುಗುಣವಾಗಿ ಇರಬಹುದೆಂಬುದು. ಈ ವರದಿ ಜಾರಿಗೆ ಆಗ್ರಹಿಸಿ ನಡೆದ ದೊಡ್ಡಮಟ್ಟದ ಚಳುವಳಿಯೇ ಗೋಕಾಕ್ ಚಳುವಳಿ.

ಎಂಟನೆಯ ತರಗತಿಯ ಆನಂತರ ವಿದ್ಯಾರ್ಥಿಗಳು ಕನ್ನಡದ ಬದಲು ಸಂಸ್ಕೃತವನ್ನು ಪ್ರಥಮ ಭಾಷೆಯನ್ನಾಗಿ ಆಯ್ಕೆ ಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದರು. ಇದರಿಂದ ಕನ್ನಡಕ್ಕೆ ಸಿಗಬೇಕಾದ ಮನ್ನಣೆ ಸಿಗುತ್ತಿಲ್ಲ ಎಂದು ಪರಿಗಣಿಸಿದ್ದು ಸರಿ. ಆದರೆ ಸಂಸ್ಕೃತವನ್ನು ಮೊದಲ ಭಾಷೆಯ ಸ್ಥಾನದಿಂದ ತೆಗೆದು ಹಾಕಿದಾಗ ಅದರ ಜಾಗದಲ್ಲಿ ಅಂದರೆ ಪ್ರಥಮ ಭಾಷೆಯಾಗಿ ಈಗ ಜನ ಬಳಸುತ್ತಿರುವ ಭಾರತದ ಯಾವುದೇ ಒಂದು ಭಾಷೆ ಇರಬಹುದೆಂದು ಪರ್ಯಾಯ ಚಿಂತನೆಯೊಂದು ಮೂಡತೊಡಗಿತ್ತು. ಈಗ ಭಾಷಾ ಪ್ರಶ್ನೆಯೊಂದು ಸಮಾಜದ ಒಳಗಿದ್ದ ವೈರುಧ್ಯಗಳನ್ನು ಹೊರಹಾಕತೊಡಗಿತ್ತು. ಸಂಸ್ಕೃತದ ಸ್ಥಾನ ಪಲ್ಲಟವಾಗಿ ಆ ಜಾಗದಲ್ಲಿ ಕನ್ನಡದ ಜೊತೆಗೆ ಉರ್ದು, ತಮಿಳು, ತೆಲುಗು, ಮರಾಠಿಗಳು ಉಳಿಯುವುದು ಹಲವಾರು ಮಠಾಧಿಪತಿಗಳಿಗೆ ಸಹ್ಯವಾಗದ ವಿಷಯವಾಯಿತು. ಅವರಲ್ಲಿ ಹಲವರು ನೇರವಾಗಿ, ಮತ್ತೆ ಕೆಲವರು ಪರೋಕ್ಷವಾಗಿ, ಈ ಚಳುವಳಿಯನ್ನು ಬೆಂಬಲಿಸಿದರು. ಅಂತಿಮವಾಗಿ ಕನ್ನಡ ಪರವಾದ ಚಳುವಳಿ ಸಂಸ್ಕೃತ ಮತ್ತು ಉರ್ದುಗಳ ನಡುವಣ ಮುಖಾಮುಖಿಯಾಗಿ ರೂಪುಗೊಂಡಿತ್ತು. 'ಗೋಕಾಕ ಚಳವಳಿಯು ರಾಜ್ಯವ್ಯಾಪಿಯಾಗಿ ಕನ್ನಡ ಪರ ಹೋರಾಡಲು ಸಿದ್ಧವಿದ್ದ ಜನರ ಸಮುದಾಯವೊಂದನ್ನು ಬೆಳಕಿಗೆ ತಂದಿತ್ತು. ಈ ಸಮುದಾಯ ತನ್ನ ಸಾಮಾಜಿಕ ರಚನೆಯಲ್ಲಿ ಅಂತಿಮವಾಗಿ ಪಾರಂಪರಿಕ ಮೌಲ್ಯಗಳ ಸಮರ್ಥನೆಗೆ ಸಿದ್ಧವಿತ್ತು. ಜೊತೆಗೆ ಸಾಮಾಜಿಕ ಅಸಹನೆಯನ್ನು ಯಾವ ಮುಜುಗರವೂ ಇಲ್ಲದೆ ವ್ಯಕ್ತಪಡಿಸಲು ಸಿದ್ಧವಿತ್ತು. ಸಂಸ್ಕೃತವನ್ನು ಸಮರ್ಥಿಸುವ ಉರ್ದುವನ್ನು ವಿರೋಧಿಸುವ ನೆಲೆಗೆ ಈ ಚಳುವಳಿಯ ಹಂತ ಬಂದು ನಿಂತಿತ್ತು' ಎಂದು ಕೆ.ವಿ ನಾರಾಯಣ ಅವರು ವಿಶ್ಲೇಷಿಸುತ್ತಾರೆ. ಬಹುಷಃ ಇದನ್ನು ಅನಂತಮೂರ್ತಿ ಅವರು ಗ್ರಹಿಸಿದಂತೆ ತೋರುತ್ತದೆ. ಆದ್ದರಿಂದಲೇ, ಸರ್ಕಾರ

ನೇಮಿಸಿದ ಗೋಕಾಕರ ನೇತೃತ್ವದ 'ಭಾಷಾ ಸಮಿತಿ ವರದಿ'ಯಲ್ಲಿ 'ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರಿಗೆ ಮಾಧ್ಯಮಿಕ ಹಂತದಲ್ಲಿರುವ ಅವರ ಭಾಷಾ ಮಾಧ್ಯಮದ ಮಾಧ್ಯಮಿಕ ಶಾಲೆಗಳನ್ನು ತನ್ನ ವೆಚ್ಚದಿಂದ ಕೆಲವೆಡೆ ನಡೆಸುತ್ತಿರುವುದೂ ಉಂಟು. ಈ ತರಹದ ಔದಾರ್ಯ ಅನಿಷ್ಟವೆಂದು ಬೇರೆ ಹೇಳಬೇಕಾಗಿಲ್ಲ.' ಎಂಬ ಹೇಳಿಕೆ ಮಾಡಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸುತ್ತ ಅನಂತಮೂರ್ತಿ 'ಅವರವರ ಮಾತೃಭಾಷೆಯಲ್ಲಿ ಶಿಕ್ಷಣ ಕಲಿಸುವುದನ್ನು ಔದಾರ್ಯವೆಂದು ತಿಳಿಯುವುದು ಕೂಡ ಅಲ್ಪತನದ ಧೋರಣೆಯಾಗುತ್ತದೆ. ಶಿಕ್ಷಣದಂತಹ ವಿಷಯದಲ್ಲಿ ರಾಜಕೀಯಕ್ಕಾಗಲೀ, ಪ್ರತೀಕಾರಕ್ಕಾಗಲಿ ಸ್ಥಾನವಿಲ್ಲ' ಇದು ಕನ್ನಡದ ಸಂಸ್ಕೃತಿಯಲ್ಲ ಎನ್ನುವ ಅರ್ಥದಲ್ಲಿ ವಿರೋಧಿಸುತ್ತಾರೆ.

ಇದೇ ಭಾಷಾ ಸಮಿತಿಯ ವರದಿಯಲ್ಲಿ ರಾಜ್ಯದಲ್ಲಿ ವಾಸಿಸುವ ನೆರೆಭಾಷೆಯ ಜನ ಕರ್ನಾಟಕದಲ್ಲಿ ತಮ್ಮ ಮಾತೃಭಾಷೆಯನ್ನು ಒಂದು ವಿಷಯವನ್ನಾಗಿ ಶಾಲೆಯಲ್ಲಿ ಕಲಿಸುವಂತೆ ಬೇಡಿಕೆಯಿಟ್ಟರೆ ಆ ಭಾಷೆಯ ರಾಜ್ಯದಲ್ಲಿ ಕನ್ನಡ ವಿದ್ಯಾರ್ಥಿಗಳಿಗೂ ಅಂಥ ಸೌಲಭ್ಯ ದೊರಕುವುದೇ ಎಂದು ನಾವು ತಿಳಿದುಕೊಂಡಿರಬೇಕು ಎಂದು ಹೇಳಿರುತ್ತದೆ. ಇದನ್ನು ಖಂಡಿಸುವ ಅನಂತಮೂರ್ತಿ ಅವರು 'ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯವನ್ನು ಟ್ರೇಡ್ ಯೂನಿಯನ್ನಿನವರು ಮಾಲೀಕರ ಜೊತೆ ನಡೆಸುವ ಸಂಧಾನದಲ್ಲಿ ಅನುಸರಿಸುವ ಚೌಕಾಸಿ ರೀತಿಯಲ್ಲಿ ಕಾಣಕೂಡದು' ಎಂದು ಎಚ್ಚರಿಸುತ್ತಾರೆ. ಸಾಂಸ್ಕೃತಿಕ ವಿಷಯದಲ್ಲಿ 'ಇದು ಪ್ರಾಕ್ಟಿಕಲ್ಲೋ' ಎಂದು ಕೇಳುವುದನ್ನೇ ಅಭ್ಯಾಸ ಮಾಡಿಕೊಂಡವನು 'ಇದು ಸತ್ಯವೋ', 'ಇದು ಸರಿಯೋ' ಎಂದು ಕೇಳಬಲ್ಲ ಶಕ್ತಿಯನ್ನೇ ಕಳೆದುಕೊಳ್ಳುತ್ತಾನೆ. ಅಂದರೆ ವಸ್ತುನಿಷ್ಠ ಶೋಧವೇ ಅಂಥವನಿಗೆ ಅಸಾಧ್ಯವಾಗಿ ಹೋಗುತ್ತದೆ. ಪುಣೆಯ ಕನ್ನಡ ಶಾಲೆಯೊಂದರ ಕಿಟಕಿ ಗಾಜುಗಳನ್ನು ಶಿವಸೇನೆಯ ಕಾರ್ಯಕರ್ತರು ಒಡೆದಾಗ ಮರಾಠಿ ಹಿರಿಯ ಸಾಹಿತಿ ಶ್ರೀಪಾದ ಜೋಶಿ ಅವರು ಈ ದೌರ್ಜನ್ಯವನ್ನು ಖಂಡಿಸುವುದು ಇಡೀ ಮೊಹಲ್ಲಾದ ಎಲ್ಲ ಮರಾಠಿ ಜನರ ಜವಾಬ್ದಾರಿಯೆಂದು ತಿಳಿದು ತಲಾ ಎರಡು ರೂಪಾಯಿಯಂತೆ ಸಮಾನವಾಗಿ ಎಲ್ಲರಿಂದ ಸಂಗ್ರಹಿಸಿ ಒಡೆದ ಗಾಜುಗಳನ್ನು ದುರಸ್ತಿ ಮಾಡಿಸಿದ್ದನ್ನು ಉಲ್ಲೇಖಿಸುವ ಅನಂತಮೂರ್ತಿ ಒಂದು ಭಾಷೆಯಲ್ಲಿ ಇಂಥ ಜನರಿಲ್ಲವೆಂದರೆ 'ಯಾವ ಮೌಲ್ಯವನ್ನೂ ನಮ್ಮ ಸಂಸ್ಕೃತಿ ಕಾದಿಟ್ಟುಕೊಳ್ಳಲಾರದು' ಎಂದು ಎಚ್ಚರಿಸುತ್ತಾರೆ.

ಗೋಕಾಕ್ ಚಳುವಳಿ ಕನ್ನಡ ಭಾಷೆಯ ಉಳಿವಿಗೆ ನಡೆದ ಚಳುವಳಿಯಾದರೂ ಅದು ಕನ್ನಡ ಸಮಾಜದ ಒಳಗಿನ ತರತಮದ ನೆಲೆಗಳನ್ನು ಜಾಹೀರುಗೊಳಿಸಿತು. ಕನ್ನಡದ ಮುಸುಕಿನಲ್ಲಿ ಸಂಸ್ಕೃತದ ಪರವಾದ ನಿಲುವನ್ನೂ ಉರ್ದು ವಿರೋಧವಾಗಿ ಮತೀಯ ನಿಲುವನ್ನೂ ಅದು ಜಾಹೀರುಗೊಳಿಸಿತು. ಅನಂತಮೂರ್ತಿ ಅವರು ಈ ಹಿನ್ನೆಲೆಯಲ್ಲಿ ಗೋಕಾಕ್ ವರದಿಯನ್ನು ವಿಮರ್ಶಿಸಿ ಟೀಕಿಸಿದ್ದು ಗಮನಾರ್ಹ.

ಚಳುವಳಿ ಸಂದರ್ಭದಲ್ಲಿ ಅನಂತಮೂರ್ತಿ ಅವರು 'ಪ್ರಜಾವಾಣಿ' ಮತ್ತು 'ಕನ್ನಡಪ್ರಭ' ಪತ್ರಿಕೆಗಳಿಗೆ ಲೇಖನ ಬರೆದು ತಮ್ಮ ನಿಲುವನ್ನು ವ್ಯಕ್ತಪಡಿಸಿದರು. ಗೋಕಾಕ್ ವರದಿಯ ಪೂರ್ಣ ಅನುಷ್ಠಾನದ ಒತ್ತಾಯದಲ್ಲಿ ಭಾಷಾ ಅಲ್ಪಸಂಖ್ಯಾತರಿಗೆ ಆಗುವ ಅನ್ಯಾಯದ ಅಪಾಯದ ಬಗ್ಗೆ ಅನಂತಮೂರ್ತಿ ಎಚ್ಚರಿಸಿದ್ದರು. ಈ ಲೇಖನ ಅನಂತಮೂರ್ತಿ ಅವರೇ ಗ್ರಹಿಸಿದಂತೆ ಅವರ ಸಹವರ್ತಿಗಳಿಗೆ ಕಂಡದ್ದು ಭಿನ್ನ ಬಗೆಗಳಲ್ಲಿ. ಖಾದ್ರಿ ಶಾಮಣ್ಣನವರಿಗೆ ಇಂಗ್ಲಿಶ್ ಮೋಹದಿಂದ ಉತ್ಪನ್ನವಾದ 'ಅಧಃಪತನ'ದಂತೆ, ಚಂದ್ರಶೇಖರ ಪಾಟೀಲರಿಗೆ ಗುಪ್ತವಾಗಿರುವ 'ಸಂಸ್ಕೃತ ಪ್ರೇಮ'ದಂತೆ ಇನ್ನು ಕೆಲವರಿಗೆ ಅಧಿಕ ಪ್ರಸಂಗದಂತೆ, ಹಲವರಿಗೆ ಅಪ್ರಮಾಣಿಕ ವರ್ತನೆಯಂತೆ. ಲೇಖನದಿಂದ ಕುಪಿತರಾದವರ ಹಿಂಸೆಯ ಬೆದರಿಕೆಗೂ ಒಳಗಾಗಬೇಕಾಯಿತು.

'ಕನ್ನಡದ ಅನ್ನ ತಿಂದು ಕನ್ನಡ ಕಲಿಯದವರನ್ನು ಕರ್ನಾಟಕದಿಂದ ಓಡಿಸಿ' ಎಂಬ ಧೋರಣೆಯ ಮಾತುಗಳು ಸಾಹಿತಿಗಳಿಂದಲೇ ಬಂದಾಗ, ಮುಸ್ಲಿಮರಿಗೆ ವಿಶೇಷ ಮಾನ್ಯತೆಯಿದೆ ಎಂಬ ಅಸಹನೆ, ತಮಿಳರ ಬಗೆಗಿನ ಕೋಪಗಳು, ಕನ್ನಡದ ಹಿರಿಯ ಸಾಹಿತಿಗಳಲ್ಲಿಯೇ ಸೂಕ್ಷ್ಮವಾಗಿ ಕಂಡಾಗ ಭಾಷೆ ಕೂಡ ಧರ್ಮದಂತೆ ಮೂಲಭೂತವಾದಿಯಾಗಬಲ್ಲದು ಎನ್ನುವುದನ್ನು ಕನ್ನಡದ ಸಂದರ್ಭದಲ್ಲಿ ಅನಂತಮೂರ್ತಿ ಅವರಿಗೆ ಮನವರಿಕೆ ಮಾಡಿಕೊಟ್ಟಿತೆನಿಸುತ್ತದೆ. ಈ ಸಂದರ್ಭದಲ್ಲಿ ಇಂತಹ ಮನೋಭಾವಗಳು 'ಉದಾರಧೋರಣೆಯ ಜನತಂತ್ರ ವ್ಯವಸ್ಥೆಗೆ ಮಾರಕವಾಗಬಲ್ಲವು' ಎಂಬ ಅನಂತಮೂರ್ತಿ ಅವರ ಮಾತು ಭಾರತೀಯತ್ವದೊಳಗೆ ಕರ್ನಾಟಕತ್ವವನ್ನು ಕಟ್ಟಬಯಸುವ ಎಲ್ಲರೂ ಅಗತ್ಯ ಗಮನಿಸಲೇಬೇಕಾದ ಎಚ್ಚರಿಕೆಯಾಗಿದೆ. 'ಉರ್ದು, ತಮಿಳು, ಮರಾಠಿ ಇತ್ಯಾದಿ ಭಾಷೆಗಳನ್ನಾಡುವ ಜನ ಭಯಪಡುವಂತೆ ಗೋಕಾಕ್ ವರದಿಗಾಗಿ ನಡೆದ ಚಳುವಳಿಯ ಅಗ್ರಪಂಕ್ತಿಯಲ್ಲಿದ್ದ ಕೆಲವು ಜನ ಮಾತಾಡಿದರೆಂಬುದು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ನಾಚಿಕೆಯ ವಿಷಯವಾಗಬೇಕು' ಎಂಬಲ್ಲಿಯೂ ಕರ್ನಾಟಕತ್ವದ ಘನತೆಯ ಸಂವಿಧಾನದ ಪ್ರಣಾಳಿಕೆಯನ್ನೇ ಅನಂತಮೂರ್ತಿ ಅವರು ಮಂಡಿಸುತ್ತಿದ್ದಾರೆ. ವಿವೇಕ ಕಾಣೆಯಾಗುವ ಚಳುವಳಿಯ ಸಮೂಹಸನ್ನಿಗೆ ವಿವೇಕದ ವಿರೋಧದ ದನಿ ಚಳುವಳಿಯ ಮಧ್ಯದಿಂದಲೇ ಎದ್ದುಬರುತ್ತದೆ ಎನ್ನುವುದು ಸಾಂಸ್ಕೃತಿಕ ನೆಲೆಯ ಕನ್ನಡ ಅಸ್ಮಿತೆ ಕುರಿತ ಚಿಂತನೆ ಪಡೆದ ಆಳ ಮತ್ತು ಮಹತ್ವವನ್ನು ಹೇಳುತ್ತದೆ.

೪.೩.೮ 'ಸಾಂಸ್ಕೃತಿಕವಾಗಿ ಮಹತ್ವದ್ದಾಗಬಲ್ಲ ಬರವಣಿಗೆ'ಯ ತಹತಹಿಕೆ

'ಭಾಷೆಗೆ ಸಾವಿರ ವರ್ಷಗಳ ಇತಿಹಾಸವಿದ್ದರೂ ಚಾಲ್ತಿಯಲ್ಲಿರುವ ಭಾಷೆ ಕೆಲವು ದಶಕಗಳದ್ದು. ಪ್ರತಿ ಲೇಖಕನ ಸ್ವಂತದ ಭಾಷೆ ಇನ್ನೂ ಇಕ್ಕಟ್ಟಿನಲ್ಲಿ ಫಲಿಸಿದ್ದು ಎನ್ನಬಹುದು: ಲೇಖಕರಾಗಿ ನಾವು ಬಳಸುವ ಭಾಷೆ–ನಾವು ಬಾಲ್ಯದೆಸೆಯಿಂದಲೂ ಬೆಳೆಯುತ್ತ ಹೋಗುವಾಗ ದಕ್ಕಿಸಿಕೊಂಡದ್ದಾಗಿರುತ್ತದೆ. ಸಾಹಿತ್ಯದ ಮಾಂತ್ರಿಕ ಶಕ್ತಿಯಿರುವುದು ಅನುಭವದ ಹೊಸ ಮುಖಗಳನ್ನು

ಕಾಣುವುದರಲ್ಲಿ; ಒಂದು ವಿಶಿಷ್ಟ ಅನುಭವವನ್ನು ನಿಜವಾಗಿಸುತ್ತ ಅದರಾಚಿನದನ್ನೂ ಧ್ವನಿಸುವುದರಲ್ಲಿ; ಮೂಕವೂ ಅಮೂರ್ತವೂ ಆಗಿ ಉಳಿದಿರುವ ವಲಯಗಳಿಗೆ ಚಾಚುತ್ತ ಅವನ್ನು ಅನುಭವಕ್ಕೆ ಬರುವ ಭಾಷೆಯಾಗಿ ವಶಪಡಿಸಿಕೊಳ್ಳುವುದರಲ್ಲಿ ಎನ್ನಬಹುದು' ಎಂದು ಅನಂತಮೂರ್ತಿ ಅವರು ಭಾಷೆ ಮತ್ತು ಸಾಹಿತ್ಯದ ನಡುವಿನ ಸಂಬಂಧ ಕುರಿತು ತಮ್ಮ 'ಸನ್ನಿವೇಷ' (೧೯೭೪) ಕೃತಿಯಲ್ಲಿ ವಿಶ್ಲೇಷಿಸುತ್ತಾರೆ. ಅನಂತಮೂರ್ತಿ ಅವರು ಸಾಹಿತ್ಯಿಕ ಬರವಣಿಗೆಯಲ್ಲಿ ಮಹತ್ವವಾದುದನ್ನು ನಿರೀಕ್ಷಿಸುತ್ತಾರೆ. ತಮ್ಮ ನಿರೀಕ್ಷೆಯ ಮಹತ್ವದ್ದು ಕಾಣದಾದಾಗ ಅತೃಪ್ತಿಯಿಂದ ತಳಮಳಿಸುತ್ತಾರೆ.

ಸಾಹಿತ್ಯವನ್ನು ಒಂದು ಖಚಿತ ನೆಲೆಯಲ್ಲಿ ಗಂಭೀರವಾಗಿ ಪರಿಗಣಿಸುವ ಅನಂತಮೂರ್ತಿ ಈ ಕಾರಣಕ್ಕಾಗಿಯೂ ಸದಾ ಅತೃಪ್ತಿಯಲ್ಲಿ ಚಡಪಡಿಸುತ್ತಾರೆ. ಇದೇ ಕೃತಿಯಲ್ಲಿ ೮೦ರ ದಶಕದ ಕನ್ನಡದ ಪ್ರಮುಖ ಲೇಖಕರ ಸಾಹಿತ್ಯವನ್ನು ಮೌಲ್ಯಮಾಪನ ಮಾಡುವ ಅನಂತಮೂರ್ತಿ ಅವರು ಪ್ರತಿಯೊಬ್ಬರ ವಿಶಿಷ್ಟತೆಯನ್ನು ಗುರುತಿಸುತ್ತಲೇ ಇಂತಹ ಅತೃಪ್ತಿಯನ್ನು ಹೊರಹಾಕುತ್ತಾರೆ.

'ಯಾಕೆ ನಮ್ಮ ವಾರಿಗೆಯ ಲೇಖಕರ ನಂತರ ಜೀವಂತವಾದ ಒಂದು ಹೊಸ ಜನಾಂಗ ಹುಟ್ಟಲೇ ಇಲ್ಲ? ಅಲನಹಳ್ಳಿ, ಗೋಪಿ ಮತ್ತು ಗಾಂಡಲೀನದ ಲಕ್ಷ್ಮಣರಾವ್, 'ಸಾಕ್ಷಿ'ಯಲ್ಲಿ ಈಚೆಗೆ ಕಥೆ ಪ್ರಕಟಿಸಿದ ರಾಮಚಂದ್ರದೇವ ತುಂಬ ಸ್ವಾರಸ್ಯವಾಗಿ ಬರೆಯುತ್ತಾರೆ ನಿಜ; ಆದರೆ ಏನು ಹೊಸದನ್ನೂ ಇವರು ಹೇಳುವಂತೆ ಕಾಣುವುದಿಲ್ಲವಲ್ಲ' ಎಂಬ ಉದ್ಗಾರವೇಳುತ್ತದೆ. 'ಹಳ್ಳಿಯ ಅನುಭವಗಳನ್ನು ಚೆನ್ನಾಗಿ ಬರೆದಷ್ಟು ಆಲನಹಳ್ಳಿ (ಕೃಷ್ಣ) ನಗರದ ಅನುಭವವನ್ನು ಯಾಕೆ ಬರೆಯುವುದಿಲ್ಲ?', 'ಬಿಜ್ಜಳ ಬಸವಣ್ಣರಿಬ್ಬರನ್ನೂ ನಿಜವಾಗಿ ಮುಖಾಮುಖಿಯಾಗಿಸಿದಲ್ಲಿ ಲಂಕೇಶ್ ಈ ಕಾಲದ ಒಂದು ಅತ್ಯುತ್ತಮ ಕೃತಿಯನ್ನು ಬರೆದಂತೆ. ಆದರೆ 'ಸಂಕ್ರಾಂತಿ'ಯಲ್ಲಿ ಲಂಕೇಶರು ಈ ದೃಷ್ಟಿಯಿಂದ ಯಶಸ್ವಿಯಾಗಿದ್ದಾರೆ ಎನ್ನಿಸುವುದಿಲ್ಲ. 'ಗಿರೀಶ್ (ಕಾರ್ನಾಡ್) ತನ್ನನ್ನು ತಾನು ಕೊಟ್ಟುಕೊಳ್ಳುವುದಿಲ್ಲ. ಅಲ್ಲವೇ? ಯಯಾತಿ, ತುಘಲಖ್ ನಾಟಕಗಳ ತುರ್ತು 'ಹಯವದನ' ದಲ್ಲಿ ಇಲ್ಲ ಅಲ್ಲವೇ? ನಾಟಕ ಕ್ಲೆವರ್ ಆಯಿತು ಎಂದು ಅನ್ನಿಸಲ್ಲವೇ?' 'ಯಾವ ಕಥೆಯನ್ನಾದರೂ (ಚಂದ್ರಶೇಖರ) ಪಾಟೀಲರು ಯಾಕೆ ಲಿರಿಕಲ್ ಆಗಿ ಬರೆದು ಬಿಡುತ್ತಾರೆ? ಸೀಳಿಕೊಂಡು ಬರುವುದಿಲ್ಲ? ಜೀವದ ಬೇರು ಅಲುಗುವಂತೆ ಬರೆಯುವುದಿಲ್ಲ? ಬೆಳೆಯುವುದಿಲ್ಲ?, '(ಆದರೆ) ತನ್ನದೇ ಆದ ದೃಷ್ಟಿಕೋನವನ್ನು ಇನ್ನೂ ಕವನಗಳಲ್ಲಿ ಇವರು (ಕೆ.ವಿ ತಿರುಮಲೇಶ್) ಸಾಧಿಸಿಕೊಂಡಿಲ್ಲ. take off ಸ್ಥಿತಿಯಲ್ಲಿರುವಂತೆ ಕಾಣುತ್ತದೆ.' ಒಟ್ಟಾರೆ ಅನಂತಮೂರ್ತಿ ಅವರ ಅತೃಪ್ತಿಗೆ ಕಾರಣ 'ಸಾಂಸ್ಕೃತಿಕವಾಗಿ ಮಹತ್ವದ್ದಾಗಬಲ್ಲ ಬರವಣಿಗೆಗೆ ಬೇಕಾದ ಕಳಕಳಿ ಯಾರಲ್ಲೂ ಕಾಣಿಸುವುದಿಲ್ಲ' ಎನ್ನುವುದು.

ಸಾಹಿತ್ಯ ವಿಮರ್ಶೆಯಲ್ಲಿ ಗಂಭೀರವಾಗಿ ತೊಡಗಿಕೊಳ್ಳುವವರು ಅಲ್ಲಿಗೆ ನಿಲ್ಲದೆ ಸಮಾಜವಿಮರ್ಶೆಯತ್ತ ಹೊರಳುತ್ತಾರೆ. ಇದಕ್ಕೆ ಕನ್ನಡದಲ್ಲಿ ಲಂಕೇಶ್ ಮತ್ತು ಅನಂತಮೂರ್ತಿ

ಅವರೇ ಉತ್ತಮ ಉದಾಹರಣೆಗಳು. ಲ್ಯಾಟಿನ್ ಅಮೆರಿಕಾದ ಅನೇಕ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಹೇಳಹೆಸರಿಲ್ಲದಂತಾದ್ದರ ಬಗ್ಗೆ ಕವಿ ಅಕ್ಟೋವಿಯಾ ಪಾಜ್ ಒಂದು ಮಾತು ಹೇಳುತ್ತಾನೆ : 'ಇಲ್ಲಿನ ಪ್ರಜಾಪ್ರಭುತ್ವದ ಸೋಲು ಎಂದರೆ ವಿಮರ್ಶೆಯ ಸೋಲು' ಎಂದರ್ಥ[೨೦]. ಅಂದರೆ ಸಾಹಿತ್ಯವಿಮರ್ಶೆ ಅಲ್ಲಿಗೆ ನಿಲ್ಲದೆ ಬೇರೆ ಕ್ಷೇತ್ರಗಳತ್ತ ವಿಸ್ತರಿಸುತ್ತದೆ ಎಂಬ ತಿಳುವಳಿಕೆ ಇಲ್ಲಿದೆ. ಅನಂತಮೂರ್ತಿ ಅವರ ಸಂದರ್ಭದಲ್ಲಿ ಸಾಹಿತ್ಯವಿಮರ್ಶೆ ಸಾಂಸ್ಕೃತಿಕ ನೆಲೆಯತ್ತ ಚಾಚುವುದನ್ನು ಅವರ ವಿಮರ್ಶಾ ಬರಹಗಳಲ್ಲೆಲ್ಲ ಗಮನಿಸಬಹುದು.

ಅನಂತಮೂರ್ತಿ ಅವರ ಭಾಷೆ ಕುರಿತ ಚಿಂತನೆಗಳ ಕಾಲಾನುಕ್ರಮದ ಹರಿಯುವಿಕೆಯನ್ನು ಗಮನಿಸಿದಾಗ ಆರಂಭದಲ್ಲಿ ಸಾಹಿತ್ಯಿಕ ನೆಲೆ ಮತ್ತು ಸಾಂಸ್ಕೃತಿಕ ನೆಲೆ ಕೇಂದ್ರಿತವಾಗಿದ್ದು ಕ್ರಮೇಣ ಅದು ಸಂಪೂರ್ಣವಾಗಿ ಸಾಮಾಜಿಕ ನೆಲೆಯನ್ನು ಪಡೆದುಕೊಂಡಿದ್ದನ್ನು ಗಮನಿಸಬಹುದು. ಹೆಚ್ಚು ನಿರ್ದಿಷ್ಟವಾಗಿ ಕೊನೆಯ ದಶಕದಲ್ಲಿ ಭಾಷೆಯನ್ನು ಸಾಮಾಜಿಕ ನೆಲೆಯಲ್ಲಿ ನೋಡುವ ಚಿಂತನೆ ಅವರಲ್ಲಿ ಹರಳುಗಟ್ಟಿದ್ದನ್ನು ಗಮನಿಸಬಹುದು. ೨೦೦೬ರಲ್ಲಿ ಪ್ರಕಟವಾದ 'ವಾಲ್ಮೀಕಿಯ ನೆವದಲ್ಲಿ' ಹಾಗೂ ೨೦೦೭ರಲ್ಲಿ ಪ್ರಕಟವಾದ 'ಋಜುವಾತು' ಕೃತಿಗಳಲ್ಲಿನ ಭಾಷೆ ಕುರಿತ ಲೇಖನಗಳು ಈ ಅಂಶವನ್ನು ದೃಢೀಕರಿಸುತ್ತವೆ. ಆದರೆ ಅನಂತಮೂರ್ತಿ ಅವರ ಭಾಷೆ ಕುರಿತ ಸಾಮಾಜಿಕ ನೆಲೆಯ ಚಿಂತನೆಗಳೂ ಸಾಂಸ್ಕೃತಿಕ ನೆಲೆಯ ಮೂಲದಿಂದ ಬಂದವುಗಳಾಗಿದ್ದು ಹೆಚ್ಚು ದಟ್ಟತೆಯನ್ನೂ, ಸಂಕೀರ್ಣತೆಯನ್ನೂ ಪಡೆದಿವೆ. ಭಾಷೆಯನ್ನು ಕುರಿತು ಚಿಂತಿಸುವಾಗ ಸಾಹಿತ್ಯಿಕ ನೆಲೆಗೆ ಒತ್ತು ಕೊಡುವ ಬಿ.ಎಂ.ಶ್ರೀ, ಸಾಂಸ್ಕೃತಿಕ ನೆಲೆಯಿಂದ ಹೊರಡುವ ಕೆ.ವಿ.ಸುಬ್ಬಣ್ಣ ಮತ್ತು ಸಾಮಾಜಿಕ ನೆಲೆಯನ್ನು ಪ್ರಮುಖವೆಂದು ಪರಿಗಣಿಸುವ ಬರಗೂರು ರಾಮಚಂದ್ರಪ್ಪ ಅವರ ಚಿಂತನೆಗಳನ್ನೂ ಅನಂತಮೂರ್ತಿ ಅವರ ಚಿಂತನೆಗಳ ಜತೆಗಿಟ್ಟು ನೋಡಿದಾಗ ಇದು ಹೆಚ್ಚು ಸ್ಪಷ್ಟವಾಗುತ್ತದೆ.

೪.೩ ಕೆ.ವಿ. ಸುಬ್ಬಣ್ಣ ಅವರ ಚಿಂತನೆಗಳು

೪.೩.೧ ಪೀಠಿಕೆ

ಕರ್ನಾಟಕದಲ್ಲಿ ಮಾತ್ರವಲ್ಲದೆ ದೇಶದ ರಂಗಕ್ಷೇತ್ರದಲ್ಲಿ ತಾವು ಕಟ್ಟಿದ 'ನೀನಾಸಂ' ಮೂಲಕ ಪ್ರಸಿದ್ಧರಾದವರು ರಂಗಕರ್ಮಿ ಕೆ.ವಿ. ಸುಬ್ಬಣ್ಣ (೧೯೩೨–೨೦೦೪) ಅವರು. ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪಡೆದಿರುವ ಸುಬ್ಬಣ್ಣ ಸಾಹಿತ್ಯಮೀಮಾಂಸಕರೂ, ರಾಜಕೀಯ ಚಿಂತಕರೂ ಹೌದು. ಕನ್ನಡ ರಂಗಭೂಮಿಗೆ ತಮ್ಮ ಸಂಘಟನಾಶಕ್ತಿ ಮತ್ತು ಸೃಜನಶೀಲತೆಯಿಂದ ಚೈತನ್ಯ ತುಂಬಿದ ಸುಬ್ಬಣ್ಣ ಈ ಮೂಲಕವೇ ಕನ್ನಡ ಭಾಷೆಗೂ ಶಕ್ತಿ ತುಂಬಿದವರು. ದೇಶದ ಚಿಕ್ಕ ಹಳ್ಳಿ ಸಾಗರ ತಾಲ್ಲೂಕು ಹೆಗ್ಗೋಡನ್ನು ವಿಶ್ವದ ರಂಗಭೂಪಟದಲ್ಲಿ ಎದ್ದು ಕಾಣುವಂತೆ ಮಾಡುವ ಮೂಲಕವೇ ದೇಶಿ ಭಾಷೆ ಕನ್ನಡದ ಮಹತ್ವವನ್ನು ದಾಖಲಿಸಿದವರು.

ಮೈಸೂರಿನಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದ ಸುಬ್ಬಣ್ಣ ಕನ್ನಡದ ಇನ್ನೊಬ್ಬ ಮಹತ್ವದ ಲೇಖಕರಾದ ತೇಜಸ್ವಿ ಅವರಂತೆ ಶೈಕ್ಷಣಿಕ ಅರ್ಹತೆಯ ಮೂಲಕ ಉದ್ಯೋಗವನ್ನು ಅರಸಿ ಪಟ್ಟಣಗಳಿಗೆ ಹೋಗದೆ ತನ್ನ ಹಳ್ಳಿ ಹೆಗ್ಗೋಡಿಗೆ ಮರಳಿ ಕೃಷಿಕನಾಗಿ ಬದುಕುತ್ತ, ತನ್ನ ಕ್ರಿಯಾಶೀಲತೆ ಮತ್ತು ಪ್ರತಿಭೆಯನ್ನು ಹಳ್ಳಿಯಲ್ಲಿಯೇ ತೊಡಗಿಸಿದವರು. ಸ್ವತಃ ತಾವು ಪ್ರಭಾವಿತರಾದ ಕುವೆಂಪು ಅವರ 'ಕಾನೂರು ಹೆಗ್ಗಡತಿ' ಕಾದಂಬರಿಯ ಪಾತ್ರ ಹೂವಯ್ಯನಂತೆ ಜನರ ಬದುಕನ್ನು ಸೃಜನಶೀಲವಾಗಿ ಬದಲಿಸಲು ಪ್ರಯತ್ನಿಸಿದವರು.

ಗಾಂಧಿ ಮಾತೃಭಾಷೆ ಗುಜರಾತಿಯ ಪರವಾಗಿದ್ದರೂ ಇಂಗ್ಲಿಷಿನ ವಿರೋಧಿಯಾಗಿರಲಿಲ್ಲ. ವ್ಯಕ್ತಿಗಳಾಗಿ ಬ್ರಿಟೀಷರನ್ನು ವಿರೋಧಿಸದೆ ಸಾಮ್ರಾಜ್ಯಶಾಹಿಯಾಗಿ ಅವರು ಬ್ರಿಟೀಷರನ್ನು ವಿರೋಧಿಸಿದರು. 'ಹರಿಜನ', 'ಯಂಗ್ ಇಂಡಿಯಾ' ಪತ್ರಿಕೆಗಳನ್ನು ಅವರು ಇಂಗ್ಲಿಷಿನಲ್ಲಿಯೇ ತಂದರು. ಗಾಂಧಿಯವರನ್ನು ಬಹುವಾಗಿ ಪ್ರಭಾವಿಸಿದ 'ಅನ್ ಟು ಲಾಸ್ಟ್' ಕೃತಿ ಇಂಗ್ಲಿಷ್ ಭಾಷೆಯದು. ಭಾರತದ ಉದ್ಧಾರ ಸಾಧ್ಯವಾಗುವುದಾದರೆ ಅದು ಹಳ್ಳಿಗಳ ಮೂಲಕವೇ ಎಂದು ಭಾವಿಸಿದ್ದ ಗಾಂಧಿ ಜಗತ್ತಿನ ಅತ್ಯುತ್ತಮ ಚಿಂತನೆಗಳನ್ನು ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಇಂಗ್ಲಿಷ್ ಕುರಿತ ಗಾಂಧಿ ಚಿಂತನೆ, ಹಳ್ಳಿಗಳೊಂದಿಗಿನ ಅವರ ಪ್ರಯೋಗ, ಸುಬ್ಬಣ್ಣ ಅವರ ಚಿಂತನೆ ಮತ್ತು ಕ್ರಿಯೆಗಳಲ್ಲಿ ಬಹಳ ಪ್ರಭಾವ ಬೀರಿವೆ. ಗಾಂಧಿಯ ಬೌದ್ಧಿಕ ವಿಸ್ತರಣೆಯಂತಿರುವ ಲೋಹಿಯಾ ಅವರ ಚಿಂತನೆಗಳು ಕೂಡ ಸುಬ್ಬಣ್ಣ ಅವರನ್ನು ಪ್ರಭಾವಿಸಿವೆ. ಕಾನೂರು ಹೆಗ್ಗಡತಿಯ ಹೂವಯ್ಯನ ವ್ಯಕ್ತಿತ್ವದೊಂದಿಗೆ ತಮ್ಮ ತಲೆಮಾರನ್ನು ಹೋಲಿಸಿಕೊಳ್ಳುತ್ತಿದ್ದ ಸುಬ್ಬಣ್ಣ ಅವರು ಹೂವಯ್ಯನ ಪ್ರಯೋಗಗಳನ್ನೇ ಇನ್ನೊಂದು ರೀತಿಯಲ್ಲಿ ತಮ್ಮ ಹೆಗ್ಗೋಡಿನಲ್ಲಿ ಮಾಡಿದರು. ಪಂಪನಿಂದ ಆರಂಭಗೊಂಡ ಪ್ರಾಚೀನ ಕನ್ನಡ ಸಾಹಿತ್ಯದಿಂದ ಕುವೆಂಪು, ಅನಂತಮೂರ್ತಿ ಅವರ ಆಧುನಿಕ ಸಾಹಿತ್ಯದವರೆಗೆ ಸುಬ್ಬಣ್ಣ ಅರಿತವರಾಗಿದ್ದರು. ಸಾರಾಂಶದಲ್ಲಿ ಗಾಂಧಿಯೊಂದಿಗಿನ ಮುಖಾಮುಖಿ, ಹಳ್ಳಿಯಲ್ಲಿನ ಪ್ರಯೋಗ ಮತ್ತು ಪ್ರಾಚೀನ ಮತ್ತು ಆಧುನಿಕ ಕನ್ನಡ ಸಾಹಿತ್ಯ ಸುಬ್ಬಣ್ಣನವರ ಕನ್ನಡ ಅಸ್ಮಿತೆಯನ್ನು ಪ್ರಭಾವಿಸಿದೆ. ಸೂತ್ರರೂಪದಲ್ಲಿ ಇದನ್ನು ಮಂಡಿಸಬಹುದಾದರೆ, ಸುಬ್ಬಣ್ಣ ಅವರ ಕನ್ನಡ ಅಸ್ಮಿತೆ = ಗಾಂಧಿ + ಪಂಪ + ಹೂವಯ್ಯ ಎನ್ನಬಹುದು.

ಕೋಮುವಾದದ ಬಗೆಗಿನ ನಮ್ಮ ನಿಲುವು ಈಗ ನಮ್ಮೆಲ್ಲ ಸಂಸ್ಕೃತಿ ಚಿಂತನೆ ಬೌದ್ಧಿಕ ಸೂಕ್ಷ್ಮತೆಗಳನ್ನು ಅಳೆಯುವ ಮಾನದಂಡ ಆಗಿಬಿಟ್ಟಿದೆ. ಈ ವಿಷಯದಲ್ಲಿ ಸುಬ್ಬಣ್ಣನವರು ಖಚಿತವಾಗಿದ್ದಾರೆ. ಕನ್ನಡದ ಚರಿತ್ರೆ ಕುರಿತ ಕಡು ಅಭಿಮಾನ, ಈ ಚರಿತ್ರೆಯ ಹಿನ್ನೆಲೆಯಲ್ಲಿ ವರ್ತಮಾನ ಮತ್ತು ಭವಿಷ್ಯದಲ್ಲಿ ಕನ್ನಡ ಎಂತಹ ಸವಾಲುಗಳನ್ನಾದರೂ ಎದುರಿಸಿ ಬದುಕಿ ಬಾಳಬಲ್ಲದು ಎನ್ನುವ ದಟ್ಟ ವಿಶ್ವಾಸ ಸುಬ್ಬಣ್ಣನವರ ಕನ್ನಡ ಕುರಿತ ಬಹುತೇಕ ಎಲ್ಲ ಚಿಂತನೆಗಳ ಸ್ಥಾಯಿಭಾವವಾಗಿದೆ.

೪.೪.೨ 'ಕವಿರಾಜಮಾರ್ಗ'ದ ಮೂಲಕ ಕನ್ನಡ ಅಸ್ಮಿತೆಯ ಚಿಂತನೆಯ ಸಾಧ್ಯತೆ ಮತ್ತು ಮಿತಿಗಳು

'ನನ್ನ ಕನ್ನಡ ಜಗತ್ತು', 'ಕವಿರಾಜಮಾರ್ಗವು ನಿರ್ಮಿಸಿದ ಕನ್ನಡ ಜಗತ್ತು' ಮತ್ತು 'ಕನ್ನಡವು ದಕ್ಕಿಸಿಕೊಂಡ ಅರಿವು ಮತ್ತು ಎಚ್ಚರ' ಸುಬ್ಬಣ್ಣನವರ ಈ ಮೂರು ಮುಖ್ಯ ಲೇಖನಗಳು 'ಕನ್ನಡ'ವನ್ನು ಒಳಗೊಂಡ ಶೀರ್ಷಿಕೆಯನ್ನು ಒಳಗೊಂಡಿದೆ. 'ಕನ್ನಡ ಜಗತ್ತು' ಎನ್ನುವುದು ಎರಡು ಶೀರ್ಷಿಕೆಗಳಲ್ಲಿದ್ದರೆ 'ಅರಿವು ಮತ್ತು ಎಚ್ಚರ' ಇನ್ನೊಂದರ ಶೀರ್ಷಿಕೆಯಲ್ಲಿದೆ. ಮೂರನೆಯ ಲೇಖನ 'ಗೋವಿನ ಹಾಡು' ಮತ್ತು ಕೆರೆಗೆ ಹಾರ' ಎಂಬ ಕನ್ನಡದ ಎರಡು ಜಾನಪದ ಕಿರು ಕಥನಗೀತೆಗಳನ್ನು ಆಧರಿಸಿದ ಲೇಖನವಾಗಿದೆ. ಲೇಖನಗಳನ್ನು ಓದಿನ ಮೂಲಕ ಪ್ರವೇಶಿಸುವ ಮೊದಲೇ ಈ ಚಿಂತಕ ಕನ್ನಡ ಅಸ್ಮಿತೆಯನ್ನು ಸಾಂಸ್ಕೃತಿಕ ನೆಲೆಯಲ್ಲಿ ಕಟ್ಟಿಕೊಳ್ಳುತ್ತಿದ್ದಾರೆ ಎನ್ನುವುದಕ್ಕೆ ಇವು ಮಹತ್ವದ ಸುಳಿವುಗಳಾಗಿವೆ.

ಸುಬ್ಬಣ್ಣನವರ ಕನ್ನಡ ಅಸ್ಮಿತೆಯನ್ನು ಕವಿರಾಜಮಾರ್ಗ, ಕೆರೆಗೆ ಹಾರ ಮತ್ತು ಗೋವಿನ ಹಾಡು ಈ ಪಠ್ಯಗಳಿಗೆ ಅವರು ತೋರಿದ ಪ್ರತಿಕ್ರಿಯೆಯ ಮೂಲಕ ಗ್ರಹಿಸಬಹುದಾಗಿದೆ. ಸುಬ್ಬಣ್ಣನವರ ಕನ್ನಡ ಅಸ್ಮಿತೆ ಪ್ರಧಾನವಾಗಿ ಆಕಾರ ಪಡೆದಿರುವುದು ಅಮೇರಿಕಾದ ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಷೆಲ್ಡನ್ ಪೊಲಾಕ್ ಅವರು 'ತೋರಿದ' 'ಕವಿರಾಜಮಾರ್ಗ'ದ ಮೂಲಕ. ಅದರ ಲಕ್ಷಣಗಳನ್ನು ಹೀಗೆ ವಿವರಿಸಬಹುದು: ಎಲ್ಲ ಧರ್ಮದ ಜನರೊಂದಿಗೆ ಬದುಕುವ ಜೀವನಪ್ರೀತಿ, ತನ್ನ ಭಾಷೆಯೊಳಗೆ ಅನ್ಯಭಾಷೆಗಳನ್ನೂ ಒಳಗೊಳ್ಳುವ ಮಡಿವಂತಿಕೆಯಿಲ್ಲದ ಗುಣ, ತನ್ನ ಬಗೆಗಿನ ದೃಢತೆ, ಪ್ರಜಾಪ್ರಭುತ್ವೀಯ ಗುಣ, ಮತ್ತು ಭಾಷಾ-ಸಂಸ್ಕೃತಿ ಸಮುದಾಯವು ತರ್ಕಬದ್ಧವಾಗಿಯೂ ಒಂದು ದೃಢ ರಾಜ್ಯವಾಗಿ ನಿಲ್ಲಬಲ್ಲುದು ಎಂಬ ಹೊಸದೊಂದು ತಾತ್ವಿಕ ಸೂತ್ರದ ಶೋಧ.

ಸುಬ್ಬಣ್ಣನವರು ತಮಿಳು, ಸಂಸ್ಕೃತ ಮತ್ತು ಇತರ ಭಾಷೆಗಳೊಂದಿಗೆ ಹೋಲಿಸಿ ನೋಡಿ 'ಕವಿರಾಜಮಾರ್ಗ'ದ ಮೂಲಕ ಗುರುತಿಸುವ ಕನ್ನಡದ ವಿಶಿಷ್ಟತೆಗಳೆಂದರೆ ಅನುಸಂಧಾನ ಮಾರ್ಗ, ಮುಕ್ತತೆ ಮತ್ತು ಉದಾರವಾದಿ ದೃಷ್ಟಿಕೋನ ಹಾಗೂ ಕಡು ಆತ್ಮವಿಶ್ವಾಸ. ಅವುಗಳನ್ನು ಕೆಳಗಿನಂತೆ ವಿವರಿಸಬಹುದು.

೧. **ಅನುಸಂಧಾನ ಮಾರ್ಗ** : ಮೂರು ಕಡೆ ಸಮುದ್ರ ಮತ್ತು ಇನ್ನೊಂದು ಕಡೆ ಕಾವೇರಿ ನದಿಯ ರಕ್ಷಣೆಯಲ್ಲಿ ತಮಿಳುನಾಡು ನೆಮ್ಮದಿಯಿಂದ ಇದ್ದುದು, ಇದಕ್ಕೆ ಪ್ರತಿಯಾಗಿ ಕನ್ನಡವು ಈ ರೀತಿಯ ಯಾವುದೇ ರಕ್ಷಣೆಯಿಲ್ಲದೆ ಸತತ ಕ್ಷೋಭೆಗಳನ್ನೆದುರಿಸುತ್ತ ಅನುಸಂಧಾನದ

ತಂತ್ರಗಳನ್ನು ಅಳವಡಿಸಿಕೊಳ್ಳುತ್ತ ಬಾಳುವೆ ಮಾಡಿಕೊಂಡು ಬಂದುದು ಅದರ ವ್ಯಕ್ತಿತ್ವದಲ್ಲಿ ಹೊಂದಾಣಿಕೆ ಗುಣ ಬರಲು ಕಾರಣವಾಯಿತು.

೨. **ಮುಕ್ತತೆ ಮತ್ತು ಉದಾರವಾದಿ ದೃಷ್ಟಿಕೋನ** : ತಮಿಳು ಭಾಷೆಯು ತನ್ನ ಲಿಪಿವ್ಯವಸ್ಥೆಯನ್ನು ರೂಪಿಸಿಕೊಳ್ಳುವಾಗ, ಮೂಲ ಬ್ರಾಹ್ಮೀ ಲಿಪಿಯ ಐವತ್ತಕ್ಕೂ ಮಿಕ್ಕಿದ ಅಕ್ಷರಗಳ ಲಿಪಿಮಾಲೆಯಲ್ಲಿ ತನ್ನ ಉಚ್ಚಾರಣೆಗೆ ಬೇಕಾದ ಇಪ್ಪತ್ತಾರು ಅಕ್ಷರಗಳನ್ನಷ್ಟೇ ಕರಾರುವಾಕ್ಕಾಗಿ ಆಯ್ದುಕೊಂಡಿತು. ಕನ್ನಡವು ತನ್ನ ಲಿಪಿಮಾಲೆಯನ್ನು ರೂಪಿಸಿಕೊಳ್ಳುವಾಗ, ತನ್ನ ಉಚ್ಚಾರಣೆಗೆ ಅಗತ್ಯವಿಲ್ಲದಿದ್ದಾಗ್ಯೂ ಅದೇ ಬ್ರಾಹ್ಮಿಯ ಬಹುತೇಕ ಅಷ್ಟೂ ಅಕ್ಷರಗಳನ್ನು ಇರಲಿ ಅಂತ ಉಳಿಸಿಕೊಂಡಿತು. ಇದು ಬರೆಹರೂಪಿ ಕನ್ನಡದ ಮುಕ್ತ ಮತ್ತು ಉದಾರವಾದಿ ಗುಣವನ್ನು ತೋರುತ್ತದೆ.

೩. **ಕಡು ಆತ್ಮವಿಶ್ವಾಸ** : 'ಮಾರ್ಗಭಾಷೆ'ಯೆನ್ನುವಂತಿದ್ದ ಸಂಸ್ಕೃತದೊಡನೆಯೂ ಪ್ರಾಕೃತ ಮತ್ತು ಪೈಶಾಚಿ ಅಪಭ್ರಂಶ ಇತ್ಯಾದಿ ಇನ್ನಿತರ ದೇಶಿಭಾಷೆಗಳೊಡನೆಯೂ ಒಡನಾಡಿಕೊಳ್ಳುತ್ತ, ಕೊಳು ಕೊಡುಗೆಯ ಅನುಸಂಧಾನದಲ್ಲಿ ಬೆಳೆದುಕೊಳ್ಳುತ್ತ ಬಂದಿತು. ಅಲ್ಲಿಂದ ಮುಂದಿನ ಈ ತನಕದ ಸಹಸ್ರಮಾನದಲ್ಲಿ ಕೂಡಾ ಅರಬ್ಬಿ–ಫಾರ್ಸಿ–ಪೋರ್ತುಗೀಸ್–ಇಂಗ್ಲಿಷ್‌ಗಳು ಯಜಮಾನಿಕೆಯಲ್ಲಿ ಹೆಗಲೇರಿ ಕೂತಿದ್ದಾಗಲೂ ಕನ್ನಡವು ಎದೆಗುಂದಿ ಕುಗ್ಗದೆ ಆ ಭಾಷೆಗಳಿಂದ ಸಾಧ್ಯವಾದ ಲಾಭಗಳನ್ನೆಲ್ಲ ಪಡೆದುಕೊಂಡಿತು.

ತಮಿಳಿನ ಜಿಗುಟುತನ ಮತ್ತು ಕನ್ನಡದ ಮುಕ್ತಭಾವದ ಗುಣ ಈ ಗುಣಗಳು ಕೆಟ್ಟ ಅಥವಾ ಒಳ್ಳೆಯ ಗುಣಗಳು ಎನ್ನುವುದಕ್ಕಿಂತ ಈ ಎರಡು ಭಾಷೆಗಳ ಗುಣಗಳು ಅವುಗಳ ಅಸ್ತಿತ್ವ ಮತ್ತು ಬೆಳವಣಿಗೆಯಲ್ಲಿ ಸಹಕಾರಿಯಾಗಿವೆಯೇ ಅಥವಾ ತೊಡಕಾಗಿವೆಯೇ ಎಂಬ ಸಂಗತಿ ಮುಖ್ಯವಾಗುತ್ತವೆ. ಕೇಂದ್ರ ಸರ್ಕಾರ ಹಿಂದಿಯನ್ನು ತನ್ನ ಮೇಲೆ ಹೇರಿಕೆ ಮಾಡಿದಾಗ ತಮಿಳು ತೋರಿದ ಪ್ರತಿರೋಧ ಮತ್ತು ತನ್ನ ಹೋರಾಟದಲ್ಲಿ ಪಡೆದ ಯಶಸ್ಸು ಭಾರತದ ಎಲ್ಲ ದೇಶಿ ಭಾಷೆಗಳಿಗೆ ಮಾದರಿಯಾಗುವಂತಿದೆ. ಶಾಸ್ತ್ರೀಯ ಸ್ಥಾನಮಾನ ಒಂದು ಭಾಷೆಯ ಬೆಳವಣಿಗೆಯಲ್ಲಿ ಎಷ್ಟರಮಟ್ಟಿಗೆ ಪ್ರಯೋಜನಕಾರಿ ಎಂಬ ಚರ್ಚೆಯನ್ನು ಬದಿಗಿಟ್ಟು ನೋಡಿದಾಗ ಈ ಸ್ಥಾನಮಾನವನ್ನು ಬಹುಬೇಗ ಕೇಂದ್ರಸರ್ಕಾರದಿಂದ ಪಡೆದುಕೊಂಡ ತಮಿಳಿನ ಶಕ್ತಿ ಗೋಚರಿಸುತ್ತದೆ. ತಮಿಳಿನ ಜಿಗುಟುತನದ ಗುಣ ಹೇಗಿದ್ದರೂ ಅದು ಇದುವರೆಗೂ ಮರಾಠಿಯಂತೆ ಮತೀಯ ಶಕ್ತಿಗಳ ತೆಕ್ಕೆಗೆ ಹೋಗದಿರುವುದು ಗಮನಿಸಬೇಕಾದ ಸಂಗತಿ. ಭಾಷಾ ರಾಜಕಾರಣ ತೀವ್ರವಾಗಿರುವ ತಮಿಳುನಾಡಿನಲ್ಲಿ ಕರ್ನಾಟಕದ ಜಯಲಲಿತಾ ಅವರು ದಶಕಗಳ ಕಾಲ ಮುಖ್ಯಮಂತ್ರಿಯಾಗಿದ್ದುದು, ಕರ್ನಾಟಕದ (ಶಿವಾಜಿರಾವ್) ರಜನಿಕಾಂತ್ ತಮಿಳು ಚಿತ್ರರಂಗದ ಸೂಪರ್ ಸ್ಟಾರ್ ಆಗಿರುವುದು

ತಮಿಳುಭಾಷಾ ಜಿಗುಟುತನದ ಸ್ವರೂಪವನ್ನು ಕೂಡಿದೆ ಎಂಬ ಅಭಿಪ್ರಾಯವನ್ನೇ ಮರುಪರಿಶೀಲಿಸುವಂತೆ ಮಾಡಿದೆ.

ತನ್ನ ಉಚ್ಚಾರಣೆಗೆ ಅನಗತ್ಯವಾಗಿದ್ದರೂ ಕನ್ನಡ ಹೆಚ್ಚುವರಿ ಬ್ರಾಹ್ಮಿಲಿಪಿಗಳನ್ನು ತನ್ನಲ್ಲಿ ಉಳಿಸಿಕೊಂಡದ್ದನ್ನು ಸಮರ್ಥಿಸಿಕೊಳ್ಳುತ್ತಿದ್ದರೂ ಕನ್ನಡದ ಆಡುರೂಪಗಳು ಈ ಹೆಚ್ಚುವರಿ ಲಿಪಿಗಳನ್ನು ಬಳಸದೆ ಇರುವುದು ಇದಕ್ಕೆ ಬಹುಸಂಖ್ಯಾತ ಕನ್ನಡಿಗರ ಅನುಮೋದನೆ ಇಲ್ಲದಿರುವುದನ್ನು ಸೂಚಿಸುತ್ತದೆ. ಆದರೆ ಸಂಸ್ಕೃತದಿಂದ ಬಂದ ಈ ಹೆಚ್ಚುವರಿ ಅಕ್ಷರಗಳು ಕನ್ನಡದಲ್ಲಿ ಸಾಹಿತ್ಯಸೃಷ್ಟಿಯ ಸಂದರ್ಭದಲ್ಲಿ ಬಳಕೆಯ ಉದ್ದೇಶವನ್ನು ಹೊಂದಿದ್ದು ಕ್ರಮೇಣ ಬರೆಹದ ಭಾಷೆಯಾಗಿಯೂ ಬಳಕೆಯಾಗತೊಡಗಿದ್ದನ್ನು ಕಾಣಬಹುದಾಗಿದೆ.

೪.೪.೩ ಸಾಂಸ್ಕೃತಿಕ ನೆಲೆಯ ಕಣ್ಣು ತಪ್ಪಿಸಿರುವ ಸಾಮಾಜಿಕ ನೆಲೆಯ ತೊಡಕುಗಳು

ಕವಿರಾಜಮಾರ್ಗವನ್ನು ಬಗೆ ಬಗೆಯಾಗಿ ವಿವರಿಸುವ ಸುಬ್ಬಣ್ಣನವರ ಉತ್ಸಾಹದಲ್ಲಿಯೇ ಭಾಷೆ ಆಧಾರಿತ ರಾಜ್ಯಾಧಿಕಾರದ ಒಲವು ನಿಚ್ಚಳವಾಗಿದೆ. ಆದರೆ ತಮಿಳುನಾಡಿನ ದ್ರಾವಿಡ ಚಳವಳಿ ಒಂದು ಪ್ರಖರ ಸಾಮಾಜಿಕ–ಸಾಂಸ್ಕೃತಿಕ ಚಳವಳಿಯಾಗಿ ಮುಂದೆ ಅಧಿಕಾರವನ್ನು ಹಿಡಿದಿದ್ದನ್ನು ಸುಬ್ಬಣ್ಣನವರು ಗಮನಿಸದಿರುವುದು ವಿಚಿತ್ರವೆನಿಸುತ್ತದೆ. ಯಾಕೆಂದರೆ ಬರಗೂರು ಅವರು ಗುರುತಿಸುವಂತೆ ದ್ರಾವಿಡ ಚಳವಳಿಯಲ್ಲಿ ಭಾಷಿಕ–ಸಾಂಸ್ಕೃತಿಕ ಸಂಗತಿಗಳೇ ಪ್ರಮುಖವಾಗಿದ್ದವು.

ಸುಬ್ಬಣ್ಣನವರು ಸೋದಾಹರಣವಾಗಿ ಗುರುತಿಸುವ ಕನ್ನಡದ ಹೊಂದಾಣಿಕೆ ಮತ್ತು ಉದಾರವಾದಿ ಗುಣಗಳು ಮೇಲ್ನೋಟಕ್ಕೆ ನಿಜವೆನ್ನಿಸುತ್ತವೆ. ಅದರೆ ಚರಿತ್ರೆ ಮತ್ತು ವರ್ತಮಾನವನ್ನು ಗಮನಿಸಿದರೆ ಸುಬ್ಬಣ್ಣನವರ ಗುರುತಿಸುವಿಕೆಯ ಹಿಂದೆ ವಾಸ್ತವಕ್ಕಿಂತ ಭಾವುಕತೆ ಹೆಚ್ಚು ಪ್ರಭಾವ ಬೀರಿರುವುದು ಸ್ಪಷ್ಟವಾಗುತ್ತವೆ. ಭಾರತೀಯ ಜಾತಿಗ್ರಸ್ತ ಸಮಾಜಕ್ಕೆ ನಮ್ಮ ಕನ್ನಡದ ನೆಲ ಯಾವತ್ತೂ ಹೊರತಾಗಿರಲಿಲ್ಲ. ಸುಬ್ಬಣ್ಣನವರು ಕಟುವಾಗಿ ಟೀಕಿಸುವ 'ಶ್ರೇಷ್ಠತೆಯ ವ್ಯಸನ' ಕರ್ನಾಟಕದಲ್ಲಿ ಬೇರೆಡೆಗಳಂತೆಯೇ ಜಾತಿ, ಧರ್ಮ, ಆರ್ಥಿಕತೆ, ಲಿಂಗ, ಪ್ರದೇಶಗಳ ಕಾರಣಕ್ಕಾಗಿ ದಟ್ಟವಾಗಿಯೇ ಇತ್ತು. ಈಗಲೂ ಇದೆ. ಈ 'ಶ್ರೇಷ್ಠತೆಯ ವ್ಯಸನ' ಭಾಷೆಯ ಕಾರಣಕ್ಕಾಗಿಯೂ ಕನ್ನಡದ ನೆಲದಲ್ಲಿ ಇತ್ತು. ಇಲ್ಲಿ ತುಳು, ಲಂಬಾಣಿಯಂತಹ ಕಿರುಭಾಷೆಗಳ ಎದುರು ಕನ್ನಡವು ಯಜಮಾನ ಭಾಷೆಯಂತೆ ವರ್ತಿಸಿದೆ. ಗ್ರಾಮ್ಯ ಕನ್ನಡ ನಗರಕನ್ನಡದ ಎದುರು ಕೀಳರಿಮೆಯನ್ನು ಅನುಭವಿಸಿದೆ.

ಕವಿರಾಜಮಾರ್ಗ ರಚನೆಯಾದ ಮುನ್ನೂರು ವರ್ಷಗಳ ತರುವಾಯ ಕರ್ನಾಟಕದಲ್ಲಿ ನಡೆದ ವಚನಚಳುವಳಿಯ ಹಂಬಲವೇ ಜಾತಿ, ಲಿಂಗ ಮತ್ತು ಸಂಪತ್ತಿನ 'ಶ್ರೇಷ್ಟತೆಯ ವ್ಯಸನ'ವನ್ನು ತೊಡೆದು ಹಾಕಿ ಸಮಾನತೆಯನ್ನು ತರುವುದಾಗಿತ್ತು. 'ಚಂಪೂ'ವಿನಂತ 'ಮಾರ್ಗ'ವನ್ನು ಬಿಟ್ಟು ಜನರ

ಆಡುಮಾತಿನ 'ದೇಸಿ'ಕನ್ನಡದಲ್ಲಿ ವಚನಗಳನ್ನು ಬರೆಯುವ ವಚನಕಾರರ ನಿರ್ಧಾರವೇ ಭಾಷೆ ಒಂದೇ ಆದರೂ ಅದು ಹುಟ್ಟುಹಾಕುವ ತರತಮಗಳನ್ನು ನಿವಾರಿಸುವುದಾಗಿತ್ತು.

'ಗೋವಿನ ಹಾಡು' ಮತ್ತು 'ಕೆರೆಗೆ ಹಾರ' ಜಾನಪದ ಗೀತೆಗಳು 'ಕನ್ನಡತನದ ಅರ್ಕವನ್ನು ಎರಕಹೊಯ್ದ ಎರಡು ಅಂಗೈ ಪ್ರತಿಮೆಗಳು' ಎನ್ನುವ ನಂಬಿಕೆ ಸುಬ್ಬಣ್ಣ ಅವರದು. ಈ ಎರಡು ಪಠ್ಯಗಳ ಮೂಲಕ ಕನ್ನಡತನದ ಅಂತಃಕರಣ, ಕೇಡು–ಪಾಪ–ಹಿಂಸೆಯ ಬಗೆಗಿನ ಚಿಂತನೆ, ಭೋಗ ಸಂಯಮಗಳನ್ನು ಸಾಮುದಾಯಿಕ ನೆಲೆಯಲ್ಲಿ ಅರಿವುಗೊಳಿಸುವ ವಿಶಿಷ್ಟತೆಯನ್ನು ಸುಬ್ಬಣ್ಣ ಕಾಣುತ್ತಾರೆ. ಕನ್ನಡ ಅಸ್ಮಿತೆಯನ್ನು ಈ ರೀತಿ ಸಾಂಸ್ಕೃತಿಕ ನೆಲೆಯಲ್ಲಿ ಕಾಣುವ ಅವರಿಗೆ ಸಾಮಾಜಿಕ ನೆಲೆಯಲ್ಲಿ 'ಗೋವಿನ ಹಾಡು' ಅನಾವರಣಗೊಳಿಸುತ್ತಿರುವ ಆಹಾರ ಸಂಸ್ಕೃತಿಯ ವಿರೋಧ, 'ಕೆರೆಗೆ ಹಾರ' ಅನಾವರಣಗೊಳಿಸುತ್ತಿರುವ ಕನ್ನಡ ಜಗತ್ತಿನ ಮೂಢ ನಂಬಿಕೆಗಳು ಮತ್ತು ಇದಕ್ಕೆ 'ಬಲಿ'ಯಾಗುತ್ತಿರುವ ಮಹಿಳೆಯರ ಪರಿಸ್ಥಿತಿಗಳು ಪ್ರಧಾನವಾಗುವುದಿಲ್ಲ.

೪.೪.೪ ಸಾಹಿತ್ಯ ಪಠ್ಯಗಳಿಂದ ರೂಪಿತವಾದ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳ ಮಿತಿಗಳು

ಕನ್ನಡದ ಸಂಸ್ಕೃತಿ ಚಿಂತಕರಲ್ಲಿ ಒಬ್ಬರಾದ ಕೆ.ವಿ.ಸುಬ್ಬಣ್ಣನವರ ಕನ್ನಡ ಅಸ್ಮಿತೆ ಬಹುತೇಕ ಸಾಹಿತ್ಯ ಪಠ್ಯಗಳಿಂದ ರೂಪಿತವಾಗಿದೆ. ಪಠ್ಯಗಳ ಮೂಲಕ ಅಸ್ಮಿತೆಯ ಚರ್ಚೆ ಮಾಡುವಾಗ ಆ ಚರ್ಚೆ ಆ ಭಾಷೆಯನ್ನು ಬಳಸುವ ನಿರ್ದಿಷ್ಟ ವರ್ಗದ ಆಶೋತ್ತರಗಳನ್ನು ಬಿಂಬಿಸುವ ಸಂಗತಿಯಾಗಿರುತ್ತದೆ. ಆಗ ಸಹಜವಾಗಿ ಭಾಷೆಯನ್ನು ಬಳಸುವ ಇತರ ಸಮುದಾಯಗಳ ಚರ್ಚೆ ಹೊರಗುಳಿಯುತ್ತದೆ. ಸುಬ್ಬಣ್ಣ ಅವರು ಸಾಹಿತ್ಯದಲ್ಲಿ ಯಾವುದು ಉತ್ತಮ ಮತ್ತು ಸಾಮಾನ್ಯ ಎಂಬ ತರತಮ ಸೂಕ್ಷ್ಮತೆಯನ್ನುಳ್ಳವರು. ಜೊತೆಗೆ ಸಾಮಾಜಿಕ ವಾಸ್ತವಗಳ ವಿಷಯ ಬಂದಾಗ, ಅವರು ಸಾಹಿತ್ಯದ ಪರಿಮಿತ ಆಸಕ್ತಿಗಳ ಆಚೆಗೂ ಹೋಗಬಲ್ಲ ಸಾಮಾಜಿಕ ಚಿಂತಕರು. ಜಾಗೃತ ಸಾಹಿತ್ಯ ಸಮಾವೇಶದ ಅವರ 'ಶ್ರೇಷ್ಠತೆಯ ವ್ಯಸನ' ಭಾಷಣ ಮತ್ತು 'ಶೂದ್ರ ತಪಸ್ವಿ' ವಾಗ್ವಾದದಲ್ಲಿ ಅವರ ಪ್ರತಿಕ್ರಿಯೆಗಳನ್ನು ಇಲ್ಲಿ ನೆನೆಯಬಹುದು. ಇವೆಲ್ಲವೂ ಸುಬ್ಬಣ್ಣನವರ ಕನ್ನಡ ಅಸ್ಮಿತೆ ಡೆಮಾಕ್ರಟಿಕ್ ಎಂದು ಸಾಕ್ಷಿ ನುಡಿಯುತ್ತವೆ. ಹೀಗಿರುವಾಗಲೂ ಅವರ ಚಿಂತನೆ ಒಂದು ವರ್ಗದ ಆಲೋಚನಾಕ್ರಮಕ್ಕೆ ಸೀಮಿತವಾಗುವ ಮಿತಿ ಹೊಂದಿದೆ. ಇದನ್ನು ಬರಗೂರು ರಾಮಚಂದ್ರಪ್ಪ ಮತ್ತು ಇತರರು ಮಾಡುವ ಚರ್ಚೆಗೆ ಹೋಲಿಸಿದರೆ ಇನ್ನಷ್ಟು ಸ್ಪಷ್ಟವಾಗುತ್ತದೆ. ಈ ಮೂಲಕ ತಿಳಿಯುವ ಸಂಗತಿಯೆಂದರೆ ಭಾಷಿಕ ಅಸ್ಮಿತೆಯ ಚರ್ಚೆ ಆಯಾಯ ಚಿಂತಕರ ಯಾವ ಲೋಕದ ಉಲ್ಲೇಖಗಳ ಮೂಲಕ ಮಾಡುತ್ತಾರೆ ಎನ್ನುವುದು ಅದರ ತಾತ್ವಿಕ ನೆಲೆಯನ್ನು ಸೂಚಿಸುತ್ತದೆ ಎನ್ನುವುದು.

೪.೩.೫ ಪ್ರಜಾಪ್ರಭುತ್ವಕ್ಕೆ ಸಂವಾದಿಯಾಗಿ ಕನ್ನಡ ಭಾಷೆ

ಪ್ರಜಾಪ್ರಭುತ್ವದ ಭಾಗವಾಗಿ ಭಾಷೆಯ ಆಯ್ಕೆಗಳನ್ನು ಸುಬ್ಬಣ್ಣ ನೋಡುತ್ತಾರೆ. ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ಪ್ರಧಾನ ಮೌಲ್ಯಗಳು. ಪ್ರಜಾಪ್ರಭುತ್ವಗಳ ನಾಶವನ್ನು ಪ್ರತಿರೋಧವಿಲ್ಲದೆ ಒಪ್ಪಿಕೊಳ್ಳುತ್ತ ಕೇವಲ ಕನ್ನಡ ಮಾಧ್ಯಮಕ್ಕಾಗಿ ಆಗ್ರಹಿಸುವುದು ಆತ್ಮವಂಚನೆ. ಜಾಗತೀಕರಣದ ಭಾಗವಾಗಿ ಇಂಗ್ಲಿಶ್ ನಮ್ಮ ನಾಡನ್ನು ಪ್ರವೇಶಿಸಿದೆ. ಜಾಗತೀಕರಣವನ್ನು ವಿರೋಧಿಸದೆ ಅದರ ಉಪ ಉತ್ಪನ್ನವಾದ ಇಂಗ್ಲಿಶನ್ನು ವಿರೋಧಿಸುವುದು ಫಲಕಾರಿಯಾಗದು ಎನ್ನುವುದು ಸುಬ್ಬಣ್ಣ ಅವರ ನಿಲುವು. 'ನಮ್ಮ ಸಾಹಿತಿಗಳು ಯಾರೊಬ್ಬರೂ ತಪ್ಪಿ ಕೂಡ ನಮ್ಮ ಪ್ರಜಾಪ್ರಭುತ್ವವು ನಶಿಸುತ್ತಿರುವುದರ ಬಗ್ಗೆ ಚಕಾರವೆತ್ತುವುದಿಲ್ಲ. ಇದನ್ನೆಲ್ಲ ಒಪ್ಪಿಕೊಂಡು ಕನ್ನಡ ಮಾಧ್ಯಮ ಆಡಳಿತ ಭಾಷೆಗಳನ್ನು ಒತ್ತಾಯಿಸುತ್ತಾರೆ. ಹೀಗೆ ಪ್ರಜಾಪ್ರಭುತ್ವಕ್ಕೆ ಸಂವಾದಿಯಾಗಿ ಕನ್ನಡ ಭಾಷೆ ಎನ್ನುವುದನ್ನು ಗ್ರಹಿಸದೆ ಕೇವಲವಾಗಿ ಕನ್ನಡವೆಂಬುದನ್ನೇ ಎತ್ತಿಕೊಂಡರೆ, ಇವತ್ತಿನ ಹಿನ್ನೆಲೆಯಲ್ಲಿ ಏನು ಸಂಭವಿಸಬಹುದು?'[೭೧] ಎನ್ನುವ ಆತಂಕ ಅವರದು. ಆಧುನಿಕ ಸಂದರ್ಭದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಕಡು ಸಮರ್ಥಕರಾದ ಸುಬ್ಬಣ್ಣ ಚರಿತ್ರೆಯ ದೊರೆಗಳು ಕನ್ನಡಕ್ಕೆ ನೀಡಿದ ಕೊಡುಗೆಗಳನ್ನು ನೆನೆಯುವಾಗ ಆರ್ದ್ರರಾಗುತ್ತ ಪ್ರಜಾಪ್ರಭುತ್ವ ಮತ್ತು ರಾಜಪ್ರಭುತ್ವ ವ್ಯವಸ್ಥೆಯ ನಡುವಿನ ಗೆರೆಯನ್ನು ಮರೆತು ಬಿಡುತ್ತಾರೆ. ಕುವೆಂಪು ಅವರನ್ನು ಒಳಗೊಂಡಂತೆ ನಮ್ಮ ಅನೇಕ ಸಾಹಿತಿಗಳಲ್ಲಿ ಈ ಬಗೆಯ ವೈರುಧ್ಯವಿದೆ.

'ಅಶೋಕ ಚಕ್ರವರ್ತಿಯ ಕಾಲಕ್ಕೆ – 'ಸಾಮ್ರಾಜ್ಯ ನಿರ್ಮಾಣದ ಬುನಾದಿಯೆಂದರೆ ಕೇವಲ ರಾಜ್ಯಶಾಸ್ತ್ರ ಆಡಳಿತಶಾಸ್ತ್ರಗಳಿಂದ ಅಧಿಕಾರಿಗಳನ್ನು ಸಜ್ಜುಗೊಳಿಸುವುದಷ್ಟೇ ಅಲ್ಲ, ಅಷ್ಟೇ ಮುಖ್ಯವಾಗಿ ಸಮರ್ಥವಾದ ಭಾಷೆಯ ಮೂಲಕ ಪ್ರಜಾಜನರ ಮನಸ್ಸನ್ನು ಆಕರ್ಷಿಸಿ ಆದೇಶಿಸಿ ಸಂಸ್ಕಾರಗೊಳಿಸಬೇಕಾದ್ದೂ ಅಗತ್ಯ' ಎಂಬ ತಿಳಿವು ಹೊಳೆದಿರಬೇಕು' ಎನ್ನುವುದು ಸುಬ್ಬಣ್ಣನವರ ಗ್ರಹಿಕೆ. ನೃಪತುಂಗನು 'ಭಾರತೀಯ ರಾಜಕಾರಣದಲ್ಲಿ ಅದುವರೆಗೆ ಸಾಮಾನ್ಯಸೂತ್ರವಾಗಿದ್ದ 'ಪರಾಕ್ರಮದ ಸಾರ್ವಭೌಮತ್ವ'ವೆಂಬುದಕ್ಕೆ ಪ್ರತಿಯಾಗಿ 'ಭಾಷಾಜನಪದದ ಸಾರ್ವಭೌಮತ್ವ'ವೆಂಬ ಹೊಸ ಸೂತ್ರವೊಂದನ್ನು ಆವಿಷ್ಕಾರಗೊಳಿಸಿದ'[೨೨] ಎಂದು ಸುಬ್ಬಣ್ಣ ಅವರು ಅಭಿಪ್ರಾಯಪಡುತ್ತಾರೆ. ರಾಜಪ್ರಭುತ್ವದ ರಾಜಕೀಯ ವ್ಯವಸ್ಥೆಯಲ್ಲಿ 'ಭಾಷಾಜನಪದದ ಸಾರ್ವಭೌಮತ್ವ' ಎಂಬ ರಾಜಕೀಯ ಪರಿಕಲ್ಪನೆ ಆಕರ್ಷಕವಾಗಿ ಕಂಡರೂ ಪ್ರಜಾಪ್ರಭುತ್ವೀಯ ಮೌಲ್ಯಗಳನ್ನು ತನ್ನ ಒಡಲೊಳಗೆ ಅಡಗಿಸಿಟ್ಟುಕೊಂಡಿರುವ ಈ ಪರಿಕಲ್ಪನೆ ಕ್ರಿಯಾಶೀಲವಾಗಿರಲು ಸಾಧ್ಯವಿಲ್ಲ. ಇದೇ ಕಾಲಘಟ್ಟದ ಇನ್ನೊಂದು ಉದಾಹರಣೆಯೊಂದಿಗೆ ಇದನ್ನು ಪರಿಶೀಲಿಸಬಹುದು. ಕವಿರಾಜಮಾರ್ಗ ಕಾವೇರಿಯಿಂದ ಗೋದಾವರಿಯವರೆಗಿನ ಪ್ರದೇಶವನ್ನು ಚಾರಿತ್ರಿಕವಾಗಿ ಕನ್ನಡದ ವ್ಯಾಪ್ತಿಯ

ಪ್ರದೇಶವೆಂದು ಹೇಳುತ್ತದೆ. ಆದರೆ 'ವಾಸ್ತವವಾಗಿ ಅದು ಕನ್ನಡದ ಅರಸರ ಆಳ್ವಿಕೆಯ ಪ್ರದೇಶಗಳಾಗಿದ್ದವು. ಅಲ್ಲಿ ಕನ್ನಡ ಮತ್ತು ಇತರ ಭಾಷೆಗಳನ್ನಾಡುವವರು ಜನರು ವಾಸಿಸುತ್ತಿದ್ದರು'.[೨೪] ಕನ್ನಡದ ಅರಸರ ಆಳ್ವಿಕೆಯ ಪ್ರದೇಶವನ್ನು ಮತ್ತು ಕನ್ನಡ ವ್ಯಾಪ್ತಿಯ ಪ್ರದೇಶವನ್ನು ಒಂದೇ ಎಂದು ನಿರ್ಣಯಿಸುವಲ್ಲಿನ ಇಲ್ಲಿನ ಸಮಸ್ಯೆ 'ಭಾಷಾಜನಪದದ ಸಾರ್ವಭೌಮತ್ವ'ವೆಂಬ ವಿಚಾರದಲ್ಲಿಯೂ ಇದೆ.

ಕವಿರಾಜಮಾರ್ಗ ಕೃತಿಯನ್ನು ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಕೃತಿಯಂತೆ ಭಾವಿಸುವುದರಲ್ಲಿಯೇ ತೊಡಕಿದೆ. ಏಕೆಂದರೆ ರಹಮತ್ ತರೀಕೆರೆ ಅವರು ಅಭಿಪ್ರಾಯಪಡುವಂತೆ ಕರ್ನಾಟಕತ್ವ, ತಮಿಳಗಂ ಅಥವಾ ಭಾರತೀಯತೆ ಮುಂತಾದ ರಾಷ್ಟ್ರೀಯತಾ ಪರಿಕಲ್ಪನೆಗಳು, ನಿರ್ದಿಷ್ಟ ವರ್ಗದ ಹಿತಾಸಕ್ತಿಯ ರಾಜಕಾರಣವನ್ನು ಒಳಗೊಂಡಿರುತ್ತವೆ. 'ಶಂಗಂ ತಮಿಳಗಂ' ಕೃತಿಯೇ ಪರೋಕ್ಷವಾಗಿ ಸೂಚಿಸುವಂತೆ ತಮಿಳಗಂ ಮುಖ್ಯವಾಗಿ ರಾಜರ ಮತ್ತು ಕವಿಗಳ ಒತ್ತಾಸೆಯಾಗಿದೆ. ಆದರೆ ಕೃತಿಯು ತಮಿಳಗಂ ಅನ್ನು ಸಮಗ್ರ ತಮಿಳು ಭಾಷಿಕರ ಒತ್ತಾಸೆಯೆಂಬಂತೆ ವ್ಯಾಖ್ಯಾನಿಸುತ್ತದೆ. ಇದನ್ನು ಒಪ್ಪುವುದು ಕಷ್ಟ.

ಷೆಲ್ಡನ್ ಪೊಲಾಕ್ ಅವರು ಬರೆದ ಎರಡು ಲೇಖನಗಳನ್ನು ('ದ ಕಾಸ್ಮೋಪಾಲಿಟನ್ ವೆರ್ನಾಕ್ಯುಲರ್' ಮತ್ತು 'ಕಾಸ್ಮೋಪಾಲಿಟನ್ ಎಂಡ್ ವರ್ನಾಕ್ಯುಲರ್ ಬಿಫೋರ್ ಮಾಡರ್ನಿಟಿ : ಕಲ್ಚರ್ ಎಂಡ್ ಪವರ್ ಇನ್ ಸೌಥ್ ಏಷಿಯಾ ಟು ೧೫೦೦') ಪ್ರಮುಖವಾಗಿ ಆಧರಿಸಿ ಸುಬ್ಬಣ್ಣನವರು ಕಟ್ಟಿಕೊಳ್ಳುವ ಕವಿರಾಜಮಾರ್ಗ ಮತ್ತು ಅದು ಪ್ರತಿಪಾದಿಸುತ್ತದೆಂದು ಸುಬ್ಬಣ್ಣ ಗ್ರಹಿಸುವ 'ಭಾಷಾಜನಪದದ ಸಾರ್ವಭೌಮತ್ವ'ದ ಕುರಿತು, ಈ ಎರಡು ಲೇಖನಗಳ ಕುರಿತೇ ಪೃಥ್ವಿದತ್ತ ಚಂದ್ರಶೋಭಿ ಅವರು ಎತ್ತುವ ಕೆಳಗಿನ ಪ್ರಶ್ನೆಗಳನ್ನು ಅನ್ವಯಿಸಬಹುದಾಗಿದೆ. 'ಸಂಸ್ಕೃತ ಮತ್ತು ಕನ್ನಡಗಳ ಅಭಿಜಾತ ಸಾಹಿತ್ಯ ಪರಂಪರೆಗಳ– ಶಾಸನ, ಕಾವ್ಯ ಮತ್ತು ಅಲಂಕಾರ ಗ್ರಂಥಗಳ– ಅಧ್ಯಯನದ ಮೂಲಕವೇ ದಕ್ಷಿಣ ಏಷ್ಯಾದ ಶಕ್ತಿ–ಅಧಿಕಾರ ಮತ್ತು ಸಂಸ್ಕೃತಿಗಳ ಸಂಬಂಧದ ಅನಾವರಣ ಸಾಧ್ಯವೇ? ಇಲ್ಲಿ ಪೊಲಾಕ್ ಅವರು ಅಭ್ಯಸಿಸುವ ಎರಡು ಸಾಂಸ್ಕೃತಿಕ ಸಂರಚನೆಗಳೂ ಸಹ ಶಕ್ತಿ–ಅಧಿಕಾರಗಳ ಕೇಂದ್ರದಲ್ಲಿ ಇರುವಂಥವು ಮತ್ತು ಆಯ್ಕೆಯ ಪ್ರಕ್ರಿಯೆಯಲ್ಲಿ ಗೆಲುವನ್ನು ಸಾಧಿಸಿರುವ ಸಾಂಸ್ಕೃತಿಕ ರೂಪಗಳು. ಹಾಗಾದಾಗ, ಪ್ರಾಬಲ್ಯ ಮತ್ತು ಅಧೀನತೆಗಳ ಸಂಬಂಧಗಳ ಬಗ್ಗೆ ಸರಿಯಾದ ಚಿತ್ರ ಈ ಅಧ್ಯಯನಮಾರ್ಗದಿಂದ ನಮಗೆ ದೊರೆಯಬಲ್ಲುದೇ? ಹಾಗೆಯೇ, ಅಧೀನ ಜನಸಮುದಾಯಗಳ ಸಾಂಸ್ಕೃತಿಕ ಸಂರಚನೆಗಳನ್ನು ಅಭ್ಯಸಿಸಿದರೆ, ಹೊಸ ಬಗೆಯ ಶಕ್ತಿ–ಅಧಿಕಾರ ಮತ್ತು ಸಂಸ್ಕೃತಿಗಳ ಸಂಬಂಧ ಅದರಿಂದ ಹೊರಹೊಮ್ಮುತ್ತದೆಯೇ? ಅಂದರೆ, ಬೆದಂಡೆ ಚತ್ತಾಣಗಳೇ ಆಗಲಿ ಅಥವಾ ಇಂದು ಮಾಯವಾಗಿರುವ ಮಧ್ಯಕಾಲೀನ ಶೈವಸಂನ್ಯಾಸಿಗಳ ಹಾಡುಗಳೇ ಆಗಲಿ, ಇವುಗಳ ನೆಲೆಯಿಂದ ಸಂಸ್ಕೃತ ಸಾಹಿತ್ಯಮೀಮಾಂಸೆಯನ್ನೂ ಹಾಗೂ

ಕವಿರಾಜಮಾರ್ಗವನ್ನೂ ವಿಮರ್ಶಿಸಿದಾಗ ನಮಗೆ ದೊರಕುವ ಪ್ರಭುತ್ವದ ಸ್ವರೂಪ ಯಾವ ರೀತಿಯದ್ದು?'

'ನಾವು ಕನ್ನಡಿಗರು ಜಗತ್ತಿನ ಬಹುತೇಕ ಎಲ್ಲಾ ಜನ-ಜನಾಂಗ-ಬುಡಕಟ್ಟು-ಧರ್ಮ-ಜಾತಿಗಳನ್ನೂ ಅರಗಿಸಿಕೊಂಡಿರುವ ವಿಶ್ವಮಾನವರು ಮತ್ತು ನಮ್ಮ ಕನ್ನಡವು ಜಗತ್ತಿನ ಅಸಂಖ್ಯ ಭಾಷೆಗಳನ್ನು ಅರಗಿಸಿಕೊಂಡಿರುವ ವಿಶ್ವಭಾಷೆ. ಹಾಗೆ ನಮ್ಮದು ಕನ್ನಡ ಕೂಪವಲ್ಲ, ಕನ್ನಡ ವಿಶ್ವ ಕನ್ನಡ ಬ್ರಹ್ಮಾಂಡ.' ಎಂಬ ಸುಬ್ಬಣ್ಣನವರ ಕನ್ನಡದೆಡೆಗಿನ ಭಾವುಕ ನುಡಿಗಳು ಮೇಲ್ಕಂಡ ಸುಡುಹಗಲ ವಾಸ್ತವದ ಎದುರು ಕರಗದೆ ಉಳಿಯುವ ಶಕ್ತಿಯನ್ನು ಪಡೆದಿಲ್ಲ.

ಮೇಲ್ಜಾತಿಯ ಲಿಂಗಾಯತರು ಮತ್ತು ಕೆಳಜಾತಿಯ ದೀವ ಸಮುದಾಯದ ನಡುವಿನ ಜಾತಿಸಂಘರ್ಷದ ಹಿನ್ನೆಲೆ ಕಾಗೋಡು ಚಳವಳಿಗಿದೆ. ಕಾಗೋಡು ಊರು ಇರುವುದು ಸುಬ್ಬಣ್ಣ ಅವರು ನಿರ್ಮಿಸಿರುವ 'ನೀನಾಸಂ' ಇರುವ ಹೆಗ್ಗೋಡಿನ ಸನಿಹವೇ. ಇಂತಹ ಪರಿಸರದಲ್ಲಿ ಸುಬ್ಬಣ್ಣನವರು ಆಡುತ್ತಿರುವ ಮೇಲ್ಕಂಡ ಮಾತುಗಳು ಅವಾಸ್ತವಿಕ ಎನಿಸುತ್ತವೆ.

'ನನಸಾದ ಪ್ರಜಾತಂತ್ರಾತ್ಮಕ ಭಾರತದ ಕನಸು, ಭಾರತದ ದೇಹಚ್ಛೇದ, ಬಹುರಾಜ್ಯ, ಕರ್ನಾಟಕ ರಾಜ್ಯದ ಉದಯ, ಕಾಶ್ಮೀರದ ಆಕ್ರಮಣ, ಜನಾಂಗ, ಧರ್ಮ, ಜಾತಿಗಳ ಹಾಗೆಯೇ ಭಾಷೆಯೂ ಛಿದ್ರೀಕರಣಕ್ಕೆ ದಾರಿ ಮಾಡೀತು ಎನ್ನುವ ವಾದ, ನಾಲ್ಕು ಮೂಲೆಗಳಲ್ಲಿ ಕನ್ನಡದ ನೆಲವು ಕತ್ತರಿಸಿ ಹೋದದ್ದು, ಬಾಂಗ್ಲಾವಿಭಜನೆಗೆ ಭಾರತದ ಕುಮ್ಮಕ್ಕು, ಕರ್ನಾಟಕದಲ್ಲಿನ ಕನ್ನಡ ಚಳುವಳಿಗಳು, ಗೋಕಾಕ್ ವರದಿ ವಿರುದ್ಧ ಬರೆದ ಡೆಕ್ಕನ್ ಹೆರಾಲ್ಡ್ ಸಂಪಾದಕೀಯಕ್ಕೆ ಪ್ರತಿಭಟನೆ, ಕೊಡಗು, ಉತ್ತರ ಕರ್ನಾಟಕ ಮುಂತಾದ ಪ್ರತ್ಯೇಕತೆಯ ಕೂಗುಗಳು.. ಹೀಗೆ ನಡೆದಿರುವ ಇತಿಹಾಸ ಸರಣಿಯಲ್ಲಿ ನಾವು ಯಾವ ಯಾವ ಸಮಸ್ಯೆ ಸವಾಲುಗಳನ್ನು ಎದುರಿಸುತ್ತ ಕಂಗೆಟ್ಟಿದ್ದೇವೋ ಕಳವಳಗೊಂಡಿದ್ದೇವೋ ಅಂಥ ಸಮಸ್ಯೆಗಳ ಮೂಲವನ್ನು ಎಂದರೆ ಪ್ರಾಯಃ, ಕನ್ನಡತನದ ತಾತ್ವಿಕತೆ ಮತ್ತು ಅನುಷ್ಠಾನದ ಸಮಸ್ಯೆಗಳನ್ನು ಸಂಭೋದಿಸಿಯೇ 'ಕವಿರಾಜಮಾರ್ಗ' ಮಾತಾಡುತ್ತಿದೆ ಹಾಗೂ ಈ ಸಮಸ್ಯೆಗಳ ಜೊತೆ ಅನುಸಂಧಾನಕ್ಕೆ ಬೇಕಾದ ವಿವೇಕ-ಉಪಾಯಗಳ ಬಗ್ಗೆ ಚಿಂತಿಸಿದೆ ಅಂತ ಕಂಡಿತು.'[೨೫] ಎಂದು ಸುಬ್ಬಣ್ಣ ಸ್ವಾತಂತ್ರೋತ್ತರ ಭಾರತದ ಸಕಲ ಸಮಸ್ಯೆಗಳಿಗೂ ಸಾವಿರ ವರ್ಷಗಳಿಗಿಂತಲೂ ಹಿಂದಿನ ಈ ಕೃತಿ ಪರಿಹಾರ ಸೂಚಿಸುತ್ತಿದೆ ಎಂದು ಭಾವಿಸುತ್ತಾರೆ.

ಸಾಮ್ರಾಜ್ಯಶಾಹಿಗಳು ಆಫ್ರಿಕಾ ಖಂಡದಲ್ಲಿ ಸ್ಥಳೀಯ ಭಾಷೆಗಳನ್ನು ನಿರ್ದಯವಾಗಿ ಹತ್ತಿಕ್ಕಿದ್ದರ ಬಗ್ಗೆ ಮತ್ತು ಭಾರತವನ್ನೂ ಒಳಗೊಂಡು ವಿಶ್ವದ ಬಹುಭಾಗದಲ್ಲಿ ನವವಸಾಹತು ಶಕ್ತಿಗಳು ಇಂಗ್ಲೀಷನ್ನು ಅನಿವಾರ್ಯಗೊಳಿಸಿ ಕನ್ನಡದಂತಹ ದೇಶಿ ಭಾಷೆಗಳನ್ನು ನಾಶ ಮಾಡುತ್ತಿರುವುದರ ಬಗ್ಗೆ ಆಫ್ರಿಕಾದ ಲೇಖಕ ಗೂಗಿ ವಾ ಥಿಯಾಂಗೋ ತನ್ನ 'ಡಿಕಾಲೋನೈಸಿಂಗ್ ದಿ ಮೈಂಡ್' ಅಪೂರ್ವವಾದ ಒಳನೋಟಗಳನ್ನು ನೀಡಿದ್ದಾನೆ. ವಾಸ್ತವವಾದಿ ನೆಲೆಗಟ್ಟಿನಲ್ಲಿ

ಜಾಗತೀಕರಣದ ಹುನ್ನಾರಗಳನ್ನೂ, ಅದನ್ನು ಎದುರಿಸುವ ಬಗೆಯನ್ನೂ ಅರಿಯಲು ಈ ಕೃತಿ ನೆರವಾಗುತ್ತದೆ.

'ಕವಿರಾಜಮಾರ್ಗ'ದ ಮೂಲಕ ಸುಬ್ಬಣ್ಣ ಅವರು ಇಲ್ಲಿ ಸಂಭ್ರಮದಿಂದ ಕನ್ನಡ ಭಾಷೆ ಕೆಲವು ಸಾವಿರ ವರ್ಷಗಳಲ್ಲಿ ಹುಟ್ಟಿ ಬೆಳೆದಿರುವುದನ್ನು ಕುತೂಹಲದಿಂದ, ಸಂಭ್ರಮದಿಂದ ಪ್ರಸ್ತಾಪಿಸುತ್ತಾರೆ. ಹೀಗೆ ಬೆಳೆದುಬಂದ ಕನ್ನಡ ಜಾಗತೀಕರಣ ಪ್ರವೇಶಿಸಿದ ಕೇವಲ ಒಂದು ದಶಕದ (ಈ ಕೃತಿ ೨೦೦೦ ರಲ್ಲಿ ಪ್ರಕಟವಾದದ್ದು) ಅವಧಿಯಲ್ಲಿ ಅದರ ಪ್ರಭಾವದಲ್ಲಿ ತನ್ನತನವನ್ನು ಕಳೆದುಕೊಳ್ಳುತ್ತಿರುವುದರ ಚಹರೆಗಳನ್ನು ಗಮನಿಸಿ ಅವರು ದಿಗ್ಭ್ರಮೆಗೊಳ್ಳುತ್ತಾರೆ.

ಜಾಗತೀಕರಣದ ಪ್ರವಾಹದಲ್ಲಿ ಕನ್ನಡ ಕೊಚ್ಚಿಕೊಂಡು ಹೋಗುವುದರ ಬಗ್ಗೆ ಕಳವಳದಿಂದ ಚಿಂತಿಸುವಾಗ ಕವಿರಾಜಮಾರ್ಗ ಸುಬ್ಬಣ್ಣ ಅವರಿಗೆ ಭರವಸೆಯನ್ನು ಮೂಡಿಸುತ್ತದೆ. ಈ ಭರವಸೆಗೆ ಮೂಲವಾದದ್ದು ಜಾಗತೀಕರಣದ ಕಾರಣದಿಂದ ಈಗ ಕನ್ನಡಕ್ಕೆ ಎದುರಾಗಿರುವ ಸಂಕಷ್ಟಕ್ಕಿಂತ ದೊಡ್ಡ ಬಿಕ್ಕಟ್ಟುಗಳು ಕವಿರಾಜಮಾರ್ಗಕಾರನ ಸಂದರ್ಭದಲ್ಲಿ ಇತ್ತು ಎನ್ನುವ ತಿಳುವಳಿಕೆ.

ಆಗ ಇದ್ದ ಬಿಕ್ಕಟ್ಟೆಂದರೆ ('ಕನ್ನಡ ನಾಡೆಂ' ಎಂಬ) ಈ ಭಾಗವು ಬಹು ಸಂಕೀರ್ಣವಾದ ಒಂದು ಜನಪದವಾಗಿ ಬೆಳೆದಿತ್ತು. ಇಲ್ಲಿದ್ದ ಜನಾಂಗ–ಧರ್ಮ–ಜಾತಿ–ಮತ–ಕುಲ–ನಡಾವಳಿ–ಭಾಷೆ–ಉಪಭಾಷೆಗಳ ಅಪಾರ ವೈವಿಧ್ಯ ವೈರುಧ್ಯಗಳೂ ವಿದೇಶ ಸಂಪರ್ಕ–ಸಂಚಾರ–ವಾಸ್ತವ್ಯಗಳಿಂದ ಉದ್ಭವಿಸುತ್ತಿದ್ದ ಹೊಸಹೊಸ ಸಮಸ್ಯೆಗಳೂ ಈ ಜನಪದವನ್ನು ಆಸ್ಫೋಟಕಗರ್ಭದ ನಿರಂತರ ಜ್ವಾಲಾಮುಖಿಯನ್ನಾಗಿಸಿದ್ದವು. ಹೊರಗಿನಿಂದ ಎರಗಿಬರುವ ಆಕ್ರಮಣಗಳಿದ್ದವು. ಅಲ್ಲಿಯೂ ಶತ್ರುತ್ವ ಮಿತ್ರತ್ವಗಳು ದಿನದಿಂದ ದಿನಕ್ಕೆ ಪಲ್ಲಟಿಸುತ್ತಿದ್ದವು. ಒಂದು ಸಮಯದಲ್ಲಿ ನೃಪತುಂಗನ ಮಗ ಕೃಷ್ಣನೇ ಶತ್ರುಗಳ ಜೊತೆಗೆ ಕೈಜೋಡಿಸಿ ವಿಪ್ಲವವನ್ನು ಹುಟ್ಟಿಸಿದ್ದ'

ಜಾಗತೀಕರಣದ ಪ್ರಭಾವದಲ್ಲಿ ಕನ್ನಡ ಭಾವಜಗತ್ತು ಅಳಿಸಿ ಹೋಗುತ್ತಿರುವುದರ ಬಗೆಗಿನ ಸುಬ್ಬಣ್ಣನವರ ಆತಂಕ ಅವರ ಕನ್ನಡ ಚಿಂತನೆ ಕುರಿತ ಬರಹಗಳಲ್ಲೆಲ್ಲ ವ್ಯಾಪಿಸಿದೆ. ಆದರೆ 'ಕವಿರಾಜಮಾರ್ಗ'ವನ್ನು ಕುರಿತು ಬರೆಯುತ್ತ ಆಗಿನ ಸಂದರ್ಭ ಈಗಿನ ಕನ್ನಡಕ್ಕೆ ಎದುರಾಗಿರುವ ಸಂದರ್ಭಕ್ಕಿಂತ ಹೆಚ್ಚಿನ ಸವಾಲಿನದ್ದಾಗಿದ್ದು, ಕನ್ನಡ ಸಮಕಾಲೀನ ಬಿಕ್ಕಟ್ಟನ್ನು ಜೀರ್ಣಿಸಿಕೊಳ್ಳುತ್ತದೆ ಎಂಬ ವಿಶ್ವಾಸ ತಾಳುತ್ತಾರೆ. ಆದರೆ ಈ ವಿಶ್ವಾಸಕ್ಕೆ ಆಧಾರಗಳನ್ನು ನೀಡುವುದಿಲ್ಲ. ಈ ಕಾರಣದಿಂದ ಲೇಖಕ ತೋರುವ ಈ ಬಗೆಯ ವಿಶ್ವಾಸ ಕನ್ನಡಕ್ಕೆ ಎದುರಾದ ಅಪಾಯವನ್ನು ಮರೆಯಲು ಲೇಖಕ ತಾಳುವ ಸ್ವಸಮಾಧಾನದ ಮಾತುಗಳಂತೆ ತೋರುತ್ತವೆ.

ಜಾಗತೀಕರಣ ಮತ್ತು ಅದರ ಸಹ ಉತ್ಪನ್ನವಾದ ಮತೀಯತೆ ಕನ್ನಡದ ಮೇಲೆ ನಿಚ್ಚಳವಾಗಿ ತನ್ನ ಪ್ರಭಾವವನ್ನು ತೋರಿಸಲಾರಂಭಿಸಿದ ಹೊತ್ತಿನಲ್ಲಿ ಮೂಡಿಬಂದ ಸುಬ್ಬಣ್ಣನವರ ಚಿಂತನೆಗಳು

ಹತ್ತಿರದ ಭವಿಷ್ಯದಲ್ಲಿ ಕನ್ನಡದ ಅಸ್ತಿತ್ವದ ಬಗ್ಗೆ ಸ್ವಭರವಸೆ ತಾಳಲು, ಕನ್ನಡತ್ವದ ಶಕ್ತಿ ಸಾಮರ್ಥ್ಯದ ಕುರಿತು ಲೇಖಕರು ನಡೆಸಿದ ಆರ್ದ್ರ ಹುಡುಕಾಟದಂತೆ ಮಾತ್ರ ಕಾಣುತ್ತದೆ.

ತಮ್ಮ ಚಿಂತನೆಗಳಲ್ಲಿ ಡೆಮಾಕ್ರಟಿಕ್ ಆಗಿರುವ ಸುಬ್ಬಣ್ಣ ಜನಸಾಮಾನ್ಯರ ಪರವಾಗಿ ಪ್ರಭುತ್ವದ ವಿರುದ್ಧ ಆಗಿಂದಾಗ್ಗೆ ದನಿ ಎತ್ತುವವರು. ಆದರೆ ಭಾಷೆ ಕುರಿತ ಅವರ ಚಿಂತನೆ ಜನಕೇಂದ್ರಿತ ನೆಲೆಯಿಂದ ಹೊರಡದೆ ಪ್ರಭುತ್ವದ ನೆಲೆಯಿಂದ ಹೊರಡುವುದು ಭಾಷೆಯ ಸಂದರ್ಭದಲ್ಲಿ ಸಮುದಾಯದ ಬಗೆಗಿನ ಅಪನಂಬಿಕೆಯಂತೆಯೂ, ಪ್ರಭುತ್ವದ ಹಸ್ತಕ್ಷೇಪ ಅಗತ್ಯವೆಂತಲೂ ಪ್ರತಿಪಾದಿಸಿದಂತಿದೆ. ಕನ್ನಡವನ್ನು ವಿಶ್ವಾತ್ಮಕ ದೇಶಭಾಷೆಯಾಗಿ ನೋಡುವ ಸುಬ್ಬಣ್ಣ ಅವರ ಚಿಂತನೆ ಉದಾತ್ತ ಆದರ್ಶದಂತೆ ಕಂಡರೂ ಜಾಗತೀಕರಣ ತಂದೊಡ್ಡಿರುವ ಬಿಕ್ಕಟ್ಟುಗಳಲ್ಲಿ ಸಿಲುಕಿಕೊಂಡಿರುವ ಕನ್ನಡಕ್ಕೆ ಬಿಡುಗಡೆಯ ಹಾದಿಯನ್ನು ತೋರುವಲ್ಲಿ ವಿಫಲ ಪ್ರಯತ್ನವಾಗಿದೆ.

೪.೩.೬ ಪುರಾತನ ಆಧಾರದಿಂದ ಹುಟ್ಟಿದ ಕನ್ನಡ ಭವಿಷ್ಯದ ವಿಶ್ವಾಸ

ಸುಬ್ಬಣ್ಣ ಅವರ ಕನ್ನಡ ಅಸ್ಮಿತೆ ಪ್ರಭುತ್ವಭಾಷೆಯ ಎದುರು ದೈನ್ಯಕ್ಕೊಳಗಾಗಿ, ಸಹಭಾಷೆಗಳೊಂದಿಗೆ ಗರ್ವ ತೋರಿ ವಿಕಾರಕ್ಕೊಳಗಾಗದ ಆರೋಗ್ಯವಂತ ಗುಣವುಳ್ಳದ್ದು. 'ಕವಿರಾಜಮಾರ್ಗ' ಸುಬ್ಬಣ್ಣ ಅವರಿಗೆ ತುಂಬ ಹತ್ತಿರವಾಗುವುದು ಇದೇ ಕಾರಣಕ್ಕೆ. 'ಕವಿರಾಜಮಾರ್ಗ'ವು ಕನ್ನಡದ ಬಗ್ಗೆ ಗರ್ವ ತಾಳಿಯೋ ಅಥವಾ ಸಂಸ್ಕೃತದ ಬಗ್ಗೆ ದೈನ್ಯ ತಾಳಿಯೋ ಕ್ಲೇಶಗೊಳ್ಳದ ಸ್ವಸ್ಥಚಿತ್ತವುಳ್ಳದ್ದಾಗಿದೆ. ನಿಸ್ಸಂದೇಹವಾಗಿ ಇದೊಂದು ಆರೋಗ್ಯಕಾರಿ ನಿಲುವಾಗಿದೆ. ಆದರೆ 'ಕವಿರಾಜಮಾರ್ಗ' ಹೇಗೆ ಸಂಸ್ಕೃತದಿಂದ ವಿಚಲಿತವಾಗುವುದಿಲ್ಲವೋ ಸುಬ್ಬಣ್ಣ ಕೂಡ ಇಂಗ್ಲಿಶಿನಿಂದ ಕನ್ನಡಕ್ಕೆ ಅಪಾಯವಿದೆ ಎಂದು ವಿಚಲಿತರಾಗುವುದಿಲ್ಲ. ಇದು ಚರ್ಚೆಯನ್ನು ಆಹ್ವಾನಿಸುವ ಸಂಗತಿಯಾಗಿದೆ.

ಕನ್ನಡ ಅಸ್ಮಿತೆಯನ್ನು ಸಾಂಸ್ಕೃತಿಕ ನೆಲೆಯಲ್ಲಿ ನೋಡುವ ಸುಬ್ಬಣ್ಣ ಅವರಿಗೆ 'ಕನ್ನಡವನ್ನು ರಕ್ಷಿಸಿಕೊಂಡು ಬಂದವರು ಅನಕ್ಷರಸ್ಥರು' ಎನ್ನುವ ಅನಂತಮೂರ್ತಿ ಮಾತು ಮೂಡಿಸಿದ ಕನ್ನಡಕ್ಕೆ ಅಪಾಯವಿಲ್ಲ ಎಂಬ ವಿಶ್ವಾಸವಿದೆ. ಕನ್ನಡ ಉಳಿಸುವ ಚಿಂತನೆಗಳನ್ನು ಅಪಹಾಸ್ಯ ಮಾಡುವಷ್ಟು ಈ ವಿಶ್ವಾಸ ಅವರಲ್ಲಿ ದಟ್ಟವಾಗಿದೆ. ಈ ವಿಶ್ವಾಸಕ್ಕೆ ಕಾರಣವೆಂದರೆ 'ಸುಬ್ಬಣ್ಣ ಅವರು ಕನ್ನಡತನವನ್ನು ಚರಿತ್ರೆಯಾಗಿಯೇ ನೋಡುತ್ತಾರೆ. ಮೂಲದ್ರವ್ಯವಾದ, ಚಿತ್ ಪ್ರದೇಶವಾದ ಕನ್ನಡ, ಅದು ಆಯಾ ಕಾಲದ ಒತ್ತಡಗಳಿಗೆ ತಕ್ಕ ಹಾಗೆ ಸ್ಪಂದಿಸಿ ಬೆಳೆಯುತ್ತಾ ಹೋಗುತ್ತದೆ ಎಂಬ ನಂಬಿಕೆ ಸುಬ್ಬಣ್ಣ ಅವರಲ್ಲಿತ್ತು. ಗಾಂಧಿ 'ಹಿಂದ್ ಸ್ವರಾಜ್' ಮತ್ತಿತರ ಬರಹಗಳಲ್ಲಿ 'ಯುಗಧರ್ಮ'ದ ಬಗ್ಗೆ ಇದನ್ನೇ ಹೇಳುತ್ತಾರೆ. ಭಾರತೀಯತೆ, ಭಾರತೀಯ ಸಂಸ್ಕೃತಿ, ಸಮಾಜ ಎಂದು ಗುರುತಿಸಲ್ಪಡುವಂಥದ್ದು ಯಾವುದೋ ಕಾಲದಲ್ಲಿ ಸ್ಥಗಿತವಾಗುವಂಥದ್ದಲ್ಲ. ಹಾಗಿರೋದು ಭಾರತೀಯ ಸಂಸ್ಕೃತಿ ಅಲ್ಲ.

ಯಾವುದು ಯುಗಧರ್ಮಕ್ಕೆ ಸ್ಪಂದಿಸುತ್ತದೋ, ಯುಗದ ಸವಾಲುಗಳಿಗೆ ಸ್ಪಂದಿಸುತ್ತದೋ ಅದು ಮಾತ್ರ ಭಾರತೀಯ ಸಂಸ್ಕೃತಿ, ಸಮಾಜ. ಹಾಗೆಯೇ ಕನ್ನಡದ ಚಿಂತಕರೂ ಕೂಡ ಕನ್ನಡದ ಮೂಲದ್ರವ್ಯವನ್ನು ಆಕಾಶದಲ್ಲಿ ಕೂಡಿಸುವುದಿಲ್ಲ. ಆ ಮೂಲದ್ರವ್ಯ ಚರಿತ್ರೆಯ ಘಾತ, ವೈಶಿಷ್ಟ್ಯತೆ ಹಾಗೂ ಸವಾಲುಗಳಿಗೆ ಸ್ಪಂದಿಸಿ ಬೆಳೆದು ಹೇಗೆ ಮೂರ್ತಸ್ವರೂಪ ತಾಳಿದೆ ಎಂಬುದರ ಕುರಿತ ಅಪಾರ ಕುತೂಹಲವನ್ನು ಕುವೆಂಪು, ಸುಬ್ಬಣ್ಣ ಅವರಲ್ಲಿ ಕಾಣುತ್ತೇವೆ.'[೨೬]

ಸುಬ್ಬಣ್ಣ ಅವರು ಗ್ರಹಿಸುವಂತೆ ಚಿಂತಕರೆಂದುಕೊಳ್ಳುವ ನಾವು ಚಿತಗೇರಿಸಲ್ಪಟ್ಟವರ ಹಾಗೆ, ಕನ್ನಡವನ್ನುಳಿಸಬೇಕು ಎಂದು ಹಪಹಪಿಸುತ್ತಿದ್ದರೆ ಪತ್ರಿಕೆಗಳನ್ನೋದಿ ಚರ್ಚಿಸಿ ಊಹಾಪೋಹ ನಡೆಸದಿರುವಂಥ 'ಅವಿದ್ಯಾವಂತ – ಸಾಮಾನ್ಯಜನ'ರೆಂಬುವವರು ಅಂಥ ತಹತಹವಿಲ್ಲದೆ, ತಮ್ಮ ಪಾಡಿಗೆ ತಾವು ಕನ್ನಡದ ಮಡಿಲಲ್ಲಿದ್ದುಕೊಂಡು ಅದನ್ನು ಬಳಸಿಕೊಳ್ಳುತ್ತ ಬಾಳಿಕೊಳ್ಳುತ್ತಿದ್ದಾರೆ. ಉದಾಹರಣೆಗೆ, ಗ್ಯಾರೇಜ್ ವರ್ಕ್‌ಶಾಪ್‌ಗಳಲ್ಲಿರುವ ಜನರು ಅಥವಾ ಹೊಲದಲ್ಲಿ ಗೆಯ್ಯುವ ರೈತರು, ಇವತ್ತು ಹೊಸಹೊಸ ತಾಂತ್ರಿಕ ಸಲಕರಣೆಗಳು ಸರಬರಾಜಾಗಿ ಬರುತ್ತಿರುವಂತೆ, ಅವುಗಳಿಗೆ ಕನ್ನಡದ ಹೆಸರು ಸೃಷ್ಟಿಸಿಕೊಟ್ಟು ಕೊಳ್ಳುತ್ತ, ತದ್ಭವಗಳನ್ನು ನಿರ್ಮಿಸಿಕೊಳ್ಳುತ್ತ, ಆ ಸಲಕರಣೆ ತಾಂತ್ರಿಕ ಕಲೆಗಳನ್ನು ಕನ್ನಡದೊಳಕ್ಕೆ ತಂದುಕೊಳ್ಳುತ್ತಿದ್ದಾರೆ.[೨೭] ರೈತರು, ಅನಕ್ಷರಸ್ಥ ಕುಶಲಕರ್ಮಿಗಳು ಕನ್ನಡವನ್ನು ಯಾವ ಸಂದರ್ಭದಲ್ಲೂ ಬಳಸುತ್ತಿದ್ದಾರೆ ಎನ್ನುವುದು ನಿಜ. ಆದರೆ ಜಾಗತೀಕರಣೋತ್ತರ ಸಂದರ್ಭದಲ್ಲಿ ಭಾರತದೆಲ್ಲೆಡೆಯಂತೆ ಕರ್ನಾಟಕದಲ್ಲೂ ಕೃಷಿವಲಯ ವೇಗವಾಗಿ ಸಂಕುಚಿತಗೊಳ್ಳುತ್ತಿರುವುದು, ಈ ಬೆಳವಣಿಗೆಯ ಸಹಜ ಪರಿಣಾಮವಾಗಿ ಕೃಷಿಯನ್ನು ಆಧರಿಸಿದ ಕುಶಲಕರ್ಮಿಗಳು ನೆಲೆ ಕಳೆದುಕೊಳ್ಳುತ್ತಿರುವುದು, ಬೃಹತ್ ಕಂಪನಿಗಳು ಗ್ಯಾರೇಜುಗಳು ಮುಚ್ಚಲು ಕಾರಣವಾಗುತ್ತಿರುವುದು ನಿತ್ಯದ ವಿದ್ಯಮಾನವಾಗಿದೆ. ಸಾರಾಂಶದಲ್ಲಿ ದುರ್ಬಲ ವರ್ಗಗಳು, ರೈತರು, ಬುಡಕಟ್ಟು ಜನಾಂಗದವರು, ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಗಳು, ಸ್ಥಳೀಯ ಜ್ಞಾನ ಪ್ರಕಾರಗಳು ನಾಶವಾಗುತ್ತಿವೆ.[೨೮] ಸುಬ್ಬಣ್ಣ ಅವರು ಇದನ್ನು ಬರೆಯುತ್ತಿರುವ ಸಂದರ್ಭದಲ್ಲಿಯೇ ಸರ್ಕಾರದ ಅಂಕೆ ಸಂಖ್ಯೆಯ ಪ್ರಕಾರವೇ ದೇಶದಲ್ಲಿ ೩.೮ ಕೋಟಿ ಪದವೀಧರ ನಿರುದ್ಯೋಗಿಗಳಿದ್ದರು. ೭ ಲಕ್ಷ ಸಣ್ಣ ಕೈಗಾರಿಕೆಗಳು ಮುಚ್ಚಿದ್ದವು.[೨೯] ಇದರೊಂದಿಗೆ ಶಿಕ್ಷಣವೇ ಕೃಷಿ ಮತ್ತು ದೈಹಿಕ ಶ್ರಮವನ್ನಾಧರಿಸಿದ ಉದ್ಯೋಗಗಳ ಬಗ್ಗೆ ಕೀಳರಿಮೆಯನ್ನು ಮೂಡಿಸುತ್ತಿದೆ. ಇದೆಲ್ಲದರ ಒಟ್ಟು ಪರಿಣಾಮದಲ್ಲಿ ಹಳ್ಳಿಗಳು ನಿರ್ಜನವಾಗುತ್ತಿದ್ದರೆ ನಗರಗಳು ಅತಿಜನಸಾಂದ್ರತೆಯಿಂದ ಬೆಳೆಯುತ್ತಿವೆ. ನಗರ ಬದುಕು, ಆಧುನಿಕತೆ, ಇಂಗ್ಲಿಶ್ ಮೇಲರಿಮೆಯ ಸಮೀಕರಣವಾದರೆ ಇದಕ್ಕೆ ವಿರುದ್ಧವಾಗಿ ಹಳ್ಳಿ ಬದುಕು, ಕೃಷಿ ಮತ್ತು ಕನ್ನಡದ ಸಮೀಕರಣ ಕೀಳರಿಮೆಗೆ ಕಾರಣವಾಗುತ್ತಿದೆ. ಸಾರಾಂಶದಲ್ಲಿ ಸುಬ್ಬಣ್ಣ ಅವರು ಕನ್ನಡದ ಭವಿಷ್ಯವನ್ನು ರೈತರಲ್ಲಿ, ಕುಶಲಕರ್ಮಿಗಳಲ್ಲಿ ನೋಡುತ್ತ ತಾಳುವ ವಿಶ್ವಾಸ ತಳ ಒಡೆದ ದೋಣಿಯಲ್ಲಿ ಪಯಣಿಸುತ್ತ ಕಾಣುವ

ಗಮ್ಯ ತಲುಪುವ ಕನಸಿನಂತಿದೆ. ಈ ಹಿನ್ನೆಲೆಯಲ್ಲಿ, 'ನಾಡಿನ ಮತ್ತು ಅಂತಾರಾಷ್ಟ್ರೀಯ ರಾಜಕೀಯ ವಿದ್ಯಮಾನಗಳ ಗಾಢ ಅರಿವಿನಲ್ಲಿ ಹುಟ್ಟುವ ಸುಬ್ಬಣ್ಣ ಅವರ ವಿಶ್ಲೇಷಣೆಗಳು, ಸಾಹಿತ್ಯಕವಾದ ಸಂಕುಚಿತ ನೆಲೆಯಿಂದ ಮೇಲೇಳುತ್ತವೆ'[೩೦] ಎನ್ನುವ ರಹಮತ್ ತರೀಕೆರೆ ಅವರ ಅಭಿಪ್ರಾಯವನ್ನು ಸುಬ್ಬಣ್ಣ ಅವರ ಕನ್ನಡ ಅಸ್ಮಿತೆ ಕುರಿತ ಚರ್ಚೆಯ ಚೌಕಟ್ಟಿನಲ್ಲಿ ಪೂರ್ಣವಾಗಿ ಒಪ್ಪಿಕೊಳ್ಳುವುದು ಕಷ್ಟ. ಕವಿರಾಜಮಾರ್ಗಕಾರನ ಸಂದರ್ಭಕ್ಕೂ ಇಂದಿನ ಜಾಗತೀಕರಣದ ಸಂದರ್ಭಕ್ಕೂ ಕನ್ನಡವನ್ನು ಪರಿಭಾವಿಸುವ ರೀತಿಯಲ್ಲಿ ದೊಡ್ಡದೊಂದು ಪಲ್ಲಟವಾಗಿದೆ. ಬಹುಷಃ ಕವಿರಾಜಮಾರ್ಗಕಾರನ ಕಾಲದಲ್ಲಿದ್ದಿರಬಹುದಾದ 'ಆ ಸಾಂಸ್ಕೃತಿಕ ಸುಭದ್ರತೆಯಲ್ಲಿ ಹುಟ್ಟಿದ ಆಶಾವಾದದ ಭಾವನೆ ಇವತ್ತಿನ ಜಾಗತೀಕರಣದ ಸಂದರ್ಭದಲ್ಲಿಲ್ಲ. ಇವತ್ತಿನ ಜಾಗತೀಕರಣವು ಕನ್ನಡದ ಗುರುತಿನ ಬಗ್ಗೆ, ಕನ್ನಡತ್ವದ ಸಂಸ್ಕೃತಿ ಬಗ್ಗೆ ಕೀಳರಿಮೆ ಬೆಳೆಸಿದೆ.'[೩೧] ಆದ್ದರಿಂದಲೇ ಸುಬ್ಬಣ್ಣ ಅವರೇ ಭಾವಿಸುವಂತೆ 'ಕನ್ನಡ ಅಂತ ಇದ್ದ ಒಂದು ವಿಶ್ವ ಅನ್ನೊ ಕಲ್ಪನೆ ಈ ತಲೆಮಾರಿನವರಿಗೆ ಒಂದು ಕೂಪವಾಗಿ ಕಾಣುತ್ತಾ ಇದೆ.'[೩೨]

೪.೫ ಸಾಂಸ್ಕೃತಿಕ ನೆಲೆಯ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಮೂಲಭೂತವಾದಿ ನೆಲೆ ಕನ್ನಡ ನಾಡಿನ ಮೇಲೆ ಆಕ್ರಮಣ ಮಾಡಿದವರನ್ನು ಮತೀಯ ನೆಲೆಯಲ್ಲಿ ವಿಭಜಿಸಿ ನೋಡಿದಂತೆ ಸಾಂಸ್ಕೃತಿಕ ನೆಲೆ ಪಕ್ಷಪಾತ ಮಾಡುವುದಿಲ್ಲ. ಚರಿತ್ರೆಯಲ್ಲಿ ಕನ್ನಡದ ಮೇಲಿನ ಗಾಯಗಳಿಗೆ ವರ್ತಮಾನದಲ್ಲಿ ಸೇಡು ತೀರಿಸಿಕೊಳ್ಳಬೇಕೆಂಬ ಪ್ರೇರಣೆಯನ್ನು ಸಾಂಸ್ಕೃತಿಕ ನೆಲೆ ಉತ್ತೇಜಿಸುವುದಿಲ್ಲ. ಕನ್ನಡದ ನಾಡಿನಲ್ಲಿ ಆಳಿ ಹೋದ ರಾಜರ ಕೊಡುಗೆಯನ್ನು ದಾಖಲಿಸುವಾಗಲೂ ಅದರ ವೈಭವೀಕರಣಕ್ಕೆ ಹೋಗದ ಒಂದು ವಿಮರ್ಶಾತ್ಮಕ ದೃಷ್ಟಿಕೋನ ಸಾಂಸ್ಕೃತಿಕ ನೆಲೆಯ ಕನ್ನಡ ಅಸ್ಮಿತೆಯ ಚಿಂತನಾಧಾರೆಗಿದೆ.

ಶಂಬಾ, ಅನಂತಮೂರ್ತಿ ಮತ್ತು ಸುಬ್ಬಣ್ಣ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಸಾಂಸ್ಕೃತಿಕ ನೆಲೆಯದ್ದಾದರೂ ಅದು ಏಕರೂಪಿಯಾಗಿಲ್ಲ. ಶಂಬಾ ಜೋಶಿ ಅವರದು ಚರಿತ್ರೆ–ಪುರಾಣ–ಎಡೆಗಳ ಒಳಹೊಕ್ಕು ಅನ್ವೇಷಿಸುವ ಮಾರ್ಗವಾದರೆ ಅನಂತಮೂರ್ತಿ ಅವರ ಕನ್ನಡ ಅಸ್ಮಿತೆ ರೂಪ ಪಡೆಯುವುದು ವರ್ತಮಾನದೊಳಗಿನ ಮುಖಾಮುಖಿಯಲ್ಲಿ. ಸಾಹಿತ್ಯಿಕ ಪಠ್ಯ ಮತ್ತು ಕ್ರಿಯಾತ್ಮಕ ಪ್ರಯೋಗಶೀಲತೆಯಲ್ಲಿ ಸುಬ್ಬಣ್ಣ ಅವರ ಕನ್ನಡ ಅಸ್ಮಿತೆ ಆಕಾರ ಪಡೆಯುತ್ತದೆ. ಶಂಬಾ ಅವರ ದೃಷ್ಟಿ ಉತ್ಖನನದಲ್ಲಿ ನೆಟ್ಟಿದ್ದರೆ ಸುಬ್ಬಣ್ಣ ಅವರ ದೃಷ್ಟಿ ಕನ್ನಡವನ್ನು ವಿಶ್ವಾತ್ಮಕ ನೆಲೆಯಲ್ಲಿ ಪರಿಭಾವಿಸುವುದರತ್ತ ಇದೆ. ಇವರಿಬ್ಬರಿಗೂ ವರ್ತಮಾನ ಕರ್ನಾಟಕವನ್ನು ನೋಡುವ ದೃಷ್ಟಿ ದಕ್ಕಿರುವುದು ಗತದಿಂದಲೇ. ವರ್ತಮಾನದ ಕರ್ನಾಟಕವನ್ನು ಉತ್ಖನನದಿಂದ ಮೇಲೆದ್ದು ನೋಡುವ ಶಂಬಾ ಅವರಿಗೆ ಅದು ನಿರಾಶೆಗೆ ಕಾರಣವಾದರೆ, ಚರಿತ್ರೆಯ ಪ್ರೇರಣೆಯಿಂದಲೇ ಪಡೆದ ವಿಶ್ವಾತ್ಮಕ

ನೆಲೆ ಸುಬ್ಬಣ್ಣ ಅವರಿಗೆ ಭರವಸೆ ಮೂಡಿಸುತ್ತದೆ. ಆದರೆ ವರ್ತಮಾನದ ಸುಡುವಾಸ್ತವಕ್ಕೆ ಮುಖಾಮುಖಿಯಾಗುವ ಅನಂತಮೂರ್ತಿ ಅವರಿಗೆ ಇತಿಹಾಸ ನಿರಾಶೆಯನ್ನಾಗಲೀ, ಭರವಸೆಯನ್ನಾಗಲೀ ತರುತ್ತಿಲ್ಲ. ಬದಲಿಗೆ ಅವರಿಗೆ ಅದೊಂದು ಪಾಠ. ನಿರಂತರ ಬದಲಾಗುತ್ತಿರುವ ಕರ್ನಾಟಕಕ್ಕೆ ತಳಮಳದಲ್ಲಿ ಮಿಡಿಯುವ ಈ ಚಿಂತಕನಿಗೆ ಪ್ರಾಚೀನದ ರೋಗಿಷ್ಟ ಅಂಗವನ್ನು ಕತ್ತರಿಸಿ ಚೈತನ್ಯದ ಭಾಗವನ್ನಷ್ಟೇ ಕಸಿ ಮಾಡುವ ಹಂಬಲ. ಸುಬ್ಬಣ್ಣನವರ ವಿಶ್ವಾತ್ಮಕ ನೆಲೆ ಪರಮ ಆದರ್ಶದ್ದಾದರೂ ಅದನ್ನು ಅನುಸರಿಸದೆಯೂ ಅನುಸರಿಸದಂತೆ ಅಭಿನಯಿಸಿ ಅದನ್ನು ಅಪ್ರಸ್ತುತಗೊಳಿಸಬಲ್ಲ ತಂತ್ರಗಾರಿಕೆ ಕನ್ನಡ ಅಸ್ಮಿತೆಯನ್ನು ತಮ್ಮ ಇಚ್ಛಾನುಸಾರ ರೂಪಿಸುವ ವರ್ಗಹಿತಾಸಕ್ತ ವಲಯಕ್ಕೆ ಪರಂಪರೆಯಿಂದಲೇ ದತ್ತವಾಗಿದೆ. ಆದರೆ ಅದಕ್ಕೆ ನಿಜಕ್ಕೂ ಸವಾಲಾಗಿರುವುದು ಸಂಸ್ಕೃತಿಯ ಉತ್ಖನನದಿಂದ ಅಸಲಿ ಅದಿರನ್ನು ತರುವ ಶಂಬಾ ಮತ್ತು ವರ್ತಮಾನದಲ್ಲಿ ಮನುಷ್ಯವಿವೇಕದಲ್ಲಿ ಮುಖಾಮುಖಿಯಾಗುವ ಅನಂತಮೂರ್ತಿ ಅವರ ಕನ್ನಡ ಅಸ್ಮಿತೆಗಳು.

ಟಿಪ್ಪಣಿಗಳು

೧. ಜೋಶಿ ಶಂಬಾ, ಕಂನುಡಿಯ ಹುಟ್ಟು, ಶಂಬಾ ಕೃತಿ ಸಂಪುಟ–೨, ಪು. ೨೬೪

೨. ಜೋಶಿ ಶಂಬಾ, ಎಡೆಗಳು ಹೇಳುವ ಕಂನಾಡ ಕತೆ, ಶಂಬಾ ಕೃತಿ ಸಂಪುಟ ೨, ಪು. ೨೪೪, ೨೪೫

೩. ಜೋಶಿ ಶಂಬಾ, ಕಣ್ಮರೆಯಾದ ಕನ್ನಡ, ಪು. ೬೭

೪. ಅದೇ, ಪು. ೭೦

೫. ಅದೇ, ಪು. ೬೮

೬. ಅದೇ, ಪು. ೭೧

೭. ಜೋಶಿ ಶಂಬಾ, ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ, ಪು. ೩೪೭

೮. ಅದೇ, ಪು. ೩೪೬

೯. ಬಸವರಾಜ ಕಲ್ಗುಡಿ, ಪಾತಳಿ, ಪು. ೧೭೦

೧೦. ರಹಮತ್ ತರೀಕೆರೆ, (ಕೆ.ರಾಮಯ್ಯ ಅವರ ಮಾತು), ಕನ್ನಡ ಸಾಹಿತ್ಯ ವಾಗ್ವಾದಗಳು, ಪು. ೧೨೬

೧೧. ಜೋಶಿ ಶಂಬಾ, ಕಣ್ಮರೆಯಾದ ಕನ್ನಡ, ಪು.೩೮

೧೨. ವೆಂಕಟೇಶಯ್ಯ ನೆಲ್ಲುಕುಂಟೆ, ಆಧುನಿಕ ಸಾಹಿತ್ಯದಲ್ಲಿ ಕನ್ನಡ ರಾಷ್ಟ್ರೀಯತಾ ಚಿಂತನೆಯ ಆಯಾಮಗಳು, (ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಸಂಶೋಧನಾ ಪ್ರಬಂಧ), ಪು. ೭೩

೧೩. ಜೋಶಿ ಶಂಬಾ, ಕಣ್ಮರೆಯಾದ ಕನ್ನಡ, ಪು. ೨

೧೪. ಅನಂತಮೂರ್ತಿ ಯು.ಆರ್., ಪೂರ್ವಾಪರ, ಪು.೧೯೫

೧೫. ಅದೇ, ಪು.೯೨

೧೬. ನಾರಾಯಣ ಕೆ.ವಿ., ಕನ್ನಡ ಜಗತ್ತು - ಅರ್ಧ ಶತಮಾನ, ಪು. ೨೬೦

೧೭. ಅನಂತಮೂರ್ತಿ ಯು.ಆರ್., ಬೆತ್ತಲೆ ಪೂಜೆ ಯಾಕೆ ಕೂಡದು?, ಪು. ೨

೧೮. ಬರಗೂರು ರಾಮಚಂದ್ರಪ್ಪ, ಕನ್ನಡ ಪ್ರಜ್ಞೆ, ಪು.೧೦೦-೨

೧೯. ಅನಂತಮೂರ್ತಿ ಯು.ಆರ್., ಸನ್ನಿವೇಷ, ಪು.೬

೨೦. ನಟರಾಜ್ ಹುಳಿಯಾರ್, ಗಾಳಿ ಬೆಳಕು, ಪು.೧೩೪

೨೧. ಸುಬ್ಬಣ್ಣ ಕೆ.ವಿ., ಅರೆಶತಮಾನದ ಅಲೆಬರಹಗಳು, ಪು.೧೮೮

೨೨. ಅದೇ, ಪು.೪೩೩,೪೩೬

೨೩. ನಾರಾಯಣ.ಕೆ.ವಿ., ಕನ್ನಡ ಜಗತ್ತು ಅರ್ಧಶತಮಾನ, ಕನ್ನಡ ವಿ.ವಿ, ಹಂಪಿ, ೨೦೦೭, ಪು.೫

೨೪. ಸುಬ್ಬಣ್ಣ, ಕೆ.ವಿ., ಅರೆಶತಮಾನದ ಅಲೆಬರೆಹಗಳು ಪು.೪೦೯

೨೫. ಅದೇ, ಪು.೪೩೩,೪

೨೬. ರಾಜೇಂದ್ರ ಚೆನ್ನಿ, ಅಸಮಗ್ರ, ಪು.೧೮೫

೨೭. ಸುಬ್ಬಣ್ಣ ಕೆ.ವಿ, ಕವಿರಾಜ ಮಾರ್ಗ ಮತ್ತು ಕನ್ನಡ ಜಗತ್ತು, ಪಉ.೧೨೮

೨೮. ರಾಜೇಂದ್ರ ಚೆನ್ನಿ, ಜಾಗತೀಕರಣ ಒಂದು ಸಮಗ್ರ ಮಂಥನ, ಪು.vii

೨೯. ರಂಜಾನ್ ದರ್ಗಾ, ಜಾಗತೀಕರಣ ಒಂದು ಸಮಗ್ರ ಮಂಥನ, ಸಂ.ರಾಜೇಂದ್ರ ಚೆನ್ನಿ, ಪು.೨೧೩

೩೦. ರಹಮತ್ ತರೀಕೆರೆ, ಕನ್ನಡ ಸಾಹಿತ್ಯ ವಾಗ್ವಾದಗಳು, ಪು.೧೭೮

೩೧. ರಾಜೇಂದ್ರ ಚೆನ್ನಿ, ಅಸಮಗ್ರ, ಪು.೧೮೯

೩೨. ಸುಬ್ಬಣ್ಣ ಕೆ.ವಿ., ಅರೆಶತಮಾನದ ಅಲೆಬರಹಗಳು, ಪು.೪೦೯

ಅಧ್ಯಾಯ ೫

ಕನ್ನಡ ಅಸ್ಮಿತೆ : ಜನಪ್ರಿಯ ನೆಲೆ

೫.೧ ಪೀಠಿಕೆ

೫.೨ ಅ.ನ.ಕೃ ಅವರ ಚಿಂತನೆಗಳು

೫.೨.೧ ಪೀಠಿಕೆ

೫.೨.೨. ಭಾಷಿಕರ ನಿರಭಿಮಾನ ಕುರಿತ ಆಕ್ರೋಶ

೫.೨.೩ ನೆರೆಭಾಷೆಗಳೊಂದಿಗಿನ ಸಂಬಂಧ

೫.೨.೪ ಹಿಂದಿ ವಿರೋಧ

೫.೨.೫ ಕನ್ನಡಕ್ಕೆ ಸಂಸ್ಕೃತದ 'ಚಿನ್ನದ ಸಂಕೋಲೆಯ' ನಿರಾಕರಣೆ

೫.೨.೬ ಪ್ರಜಾಪ್ರಭುತ್ವ ವ್ಯವಸ್ಥೆ ಕುರಿತ ಕಟಿಬದ್ಧತೆ

೫.೨.೭ ಜಾತ್ಯತೀತ ನೆಲೆಯ ಚಿಂತನೆಗಳು

೫.೨.೮ ಜನಪ್ರಿಯ ನೆಲೆಯಿಂದ ಸಾಂಸ್ಕೃತಿಕ ನೆಲೆಗೆ ವಿಸ್ತರಣೆ ಪಡೆಯುವ ಚಿಂತನೆಗಳು

೫.೨.೯ ಜನಪ್ರಿಯ ನಾಯಕತನದ ಅನಿವಾರ್ಯತೆ

೫.೩ ಕರ್ನಾಟಕ ರಕ್ಷಣಾ ವೇದಿಕೆಯ ಚಿಂತನೆಗಳು

೫.೩.೧ ಪೀಠಿಕೆ

೫.೩.೨ ನೆರೆಭಾಷಿಕರೊಂದಿಗಿನ ಸಂಬಂಧ

೫.೩.೩ ಇಂಗ್ಲಿಶ್ ಕುರಿತು ಸಕಾರಣ ವಿರೋಧ

೫.೩.೪ ಭಾಷಿಕ ಶತ್ರುವನ್ನು ಗುರುತಿಸಲು ವಿಫಲ

೫.೩.೫ ಮತೀಯ ಅಜೆಂಡಾ ಹೊಂದಿಲ್ಲದ ಸಂಘಟನೆ

೫.೩.೬ ಕರ್ನಾಟಕ ರಕ್ಷಣಾ ವೇದಿಕೆ ಮತ್ತು ಕರ್ನಾಟಕ ವಿಮೋಚನಾ ರಂಗ : ಭಿನ್ನತೆಗಳು

೫.೪ ಜನಪ್ರಿಯ ನೆಲೆಯ ಕನ್ನಡ ಅಸ್ಮಿತೆಯ ತೌಲನಿಕ ವಿಶ್ಲೇಷಣೆ

ಅಧ್ಯಾಯ ೫

ಕನ್ನಡ ಅಸ್ಮಿತೆ : ಜನಪ್ರಿಯ ನೆಲೆ

೫.೧ ಪೀಠಿಕೆ

ಜನಪ್ರಿಯ ನೆಲೆ ಎನ್ನುವುದನ್ನು ಪದಶಃ ಅರ್ಥೈಸಿದರೆ ಜನರಿಗೆ ಪ್ರಿಯವಾಗುವಂತಹ ಚಿಂತನೆಗಳು ಎನ್ನುವ ಅರ್ಥ ಕೊಡುತ್ತದೆ. ಇವುಗಳ ಸ್ವರೂಪವನ್ನು ಗಮನಿಸಿದಾಗ ಇವು ತಕ್ಷಣದಲ್ಲಿ ಜನರಿಗೆ ಇಷ್ಟವಾಗುವ ಚಿಂತನೆಗಳು ಎಂದೂ ಭಾವಿಸಬಹುದು. ಜನಪ್ರಿಯ ನೆಲೆಯ ಚಿಂತನೆಗಳು ಭಾವನಾತ್ಮಕವಾಗಿ ತಮ್ಮ ಭಾಷಾ ಅಸ್ಮಿತೆಯನ್ನು ಕಟ್ಟಿಕೊಳ್ಳುವಾಗ ಸಾಮಾನ್ಯವಾಗಿ ಧರ್ಮ, ಭಾಷೆಯಂತಹ ಭಾವನಾತ್ಮಕ ಸಂಗತಿಗಳ ಕುರಿತೇ ಇರುತ್ತವೆ. ಇದರೊಂದಿಗೆ ಆದರ್ಶದ ನೆಲೆಗಳೂ ಸೇರಿಕೊಂಡಿರುತ್ತವೆ. ಹಾಗೆಂದು ಜನಪ್ರಿಯ ನೆಲೆಯ ಚಿಂತನೆಗಳನ್ನು ಹಗುರವಾಗಿ ನೋಡಬೇಕಾಗಿಲ್ಲ. ನಾಡಿನ ಮುಂಚಲನೆಗೆ ಈ ಚಿಂತನೆಗಳ ಪಾತ್ರವೂ ಗಮನಾರ್ಹವಾಗಿದೆ. ಈ ಚಿಂತನೆಗಳು ಎಲ್ಲಿಯವರೆಗೆ 'ತನ್ನತನ'ದ ವಿಶಿಷ್ಟತೆಗಳ ಮೂಲಕ 'ಸ್ವರಕ್ಷಣೆ'ಯ ಉದ್ದೇಶವನ್ನು ಹೊಂದಿ ಕ್ರಿಯಾಶೀಲವಾಗಿರುತ್ತವೆಯೋ ಅಲ್ಲಿಯವರೆಗೆ ಇವು ನಾಡಿನ ಶಕ್ತಿಯಾಗಿರುತ್ತವೆ. ಈ ಗಡಿಯನ್ನು ದಾಟಿದ ತಕ್ಷಣ ತೊಡಕುಗಳು ಆರಂಭವಾಗುತ್ತವೆ.

'ಜನಪ್ರಿಯ' ಎಂದು ಕರೆಯಲಾಗುವ ಈ ಚಿಂತನೆಗಳು ಒಳಗೊಳ್ಳುವ 'ಜನ' ನಾಡಿನ ಬಹುಸಂಖ್ಯಾತರಾಗಿರುತ್ತಾರೆ. ಆದ್ದರಿಂದಲೇ ಈ ಚಿಂತನೆಗಳು ಭಾವನಾತ್ಮಕವಾಗಿ ತಮ್ಮ ಭಾಷಾ ಅಸ್ಮಿತೆಯನ್ನು ಕಟ್ಟಿಕೊಳ್ಳುವಾಗ ಬಳಸಿಕೊಳ್ಳುವ ಸಂಸ್ಕೃತಿ, ಇತಿಹಾಸ ಅಲ್ಲಿನ ಬಹುಸಂಖ್ಯಾತರದ್ದೇ ಆಗಿರುತ್ತದೆ. ಭಾಷೆಯ ವಿಚಾರಕ್ಕೆ ಬಂದರೆ ಭಾಷೆಯ ಹಿರಿಮೆ, ಅದರ ಇತಿಹಾಸವನ್ನು ಬಿತ್ತರಿಸುತ್ತ ಭಾವನಾತ್ಮಕವಾಗಿ ತಮ್ಮ ಭಾಷಾ ಅಸ್ಮಿತೆಯನ್ನು ಕಟ್ಟಿಕೊಳ್ಳುವ ವರ್ಗ ಸಾಮಾನ್ಯವಾಗಿ ಪ್ರತಿಯೊಂದು ಭಾಷೆಯಲ್ಲಿಯೂ ಇರುತ್ತದೆ. ಈ ವರ್ಗ ಬಹುತೇಕ ಆ ನಿರ್ದಿಷ್ಟ ಭಾಷಾ ಹೋರಾಟಗಾರರದ್ದಾಗಿರುತ್ತದೆ. ಜನಪ್ರಿಯ ನೆಲೆಯಲ್ಲಿ ಭಾವನಾತ್ಮಕ ನೆಲೆಗಳೂ ಮತ್ತು ಆದರ್ಶದ ನೆಲೆಗಳೂ ಮಿಳಿತಗೊಂಡಿರುತ್ತವೆ.

ಭಾಷಿಕ ಜನರಲ್ಲಿ ಒಗ್ಗಟ್ಟನ್ನು ಮೂಡಿಸುವುದು, ಆ ಮೂಲಕ ನೆರೆಯ ಭಾಷೆಗಳ ಆಕ್ರಮಣಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವುದು ಹೊರನೋಟಕ್ಕೆ ಜನಪ್ರಿಯ ನೆಲೆಯ ಉದ್ದೇಶವಾಗಿರುವಂತೆ ತೋರುತ್ತದೆ. ಇದರೊಂದಿಗೆ ಜನಪ್ರಿಯ ನೆಲೆಯ ಒಂದು ಧಾರೆ ತನ್ನ ನೆರೆ ರಾಜ್ಯದ ಭಾಷೆಯನ್ನು, ಭಾಷಿಕರನ್ನು ದ್ವೇಷಿಸುವುದನ್ನು ಕಾಣುತ್ತೇವೆ. ಮಹಾರಾಷ್ಟ್ರ, ತಮಿಳುನಾಡುಗಳಲ್ಲಿ ಈ ಧಾರೆ ಢಾಳಾಗಿ ಗೋಚರಿಸುತ್ತವೆ. ಕರ್ನಾಟಕದಲ್ಲಿ

ತೀವ್ರವಾಗಿಯಲ್ಲದಿದ್ದರೂ ನೆರೆಯ ಭಾಷೆಗಳೊಂದಿಗಿನ ವಿವಾದಗಳ ಸಂದರ್ಭಗಳಲ್ಲಿ ಈ ಧಾರೆ ತನ್ನ ಅಸ್ತಿತ್ವವನ್ನು ತೋರಿಸುತ್ತದೆ. ಜನಪ್ರಿಯ ನೆಲೆ ಎಚ್ಚರ ತಪ್ಪಿದರೆ ಮತೀಯವಾದದತ್ತ ಹೊರಳಿಬಿಡುತ್ತದೆ.

ಜನಪ್ರಿಯ ನೆಲೆಯ ಚಿಂತನೆಗಳು ಕರ್ನಾಟಕದ ಸಂದರ್ಭದಲ್ಲಿ ಏಕೀಕರಣ ಚಳುವಳಿಯ ಸಂದರ್ಭದಲ್ಲೂ, ಏಕೀಕರಣದ ನಂತರದ ಕಾಲಘಟ್ಟದಲ್ಲೂ ಕ್ರಿಯಾಶೀಲವಾಗಿರುವುದನ್ನು ಗಮನಿಸಬಹುದು. ಭೌಗೋಳಿಕ ಕರ್ನಾಟಕವನ್ನು ಕಟ್ಟುವುದು, ಏಕೀಕರಣದ ಕುರಿತು ಮೈಸೂರು ಪ್ರಾಂತ್ಯದಲ್ಲಿದ್ದ ಒಂದು ವರ್ಗದ ಭಿನ್ನಾಭಿಪ್ರಾಯವನ್ನು ಬಗೆಹರಿಸಿ ಒಮ್ಮತ ಮೂಡಿಸುವುದು, ಹಲವು ರಾಜ್ಯಗಳಲ್ಲಿ ಹಂಚಿಹೋದ ಕನ್ನಡ ಭಾಷಿಕ ಪ್ರದೇಶಗಳನ್ನು ಒಟ್ಟುಗೂಡಿಸಿ ಪ್ರತ್ಯೇಕ ಕರ್ನಾಟಕ ರಾಜ್ಯಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದು ಏಕೀಕರಣ ಪೂರ್ವದ ಜನಪ್ರಿಯ ನೆಲೆಯ ಚಿಂತನೆಗಳ ಪ್ರಧಾನ ಕಾಳಜಿಯಾಗಿದ್ದರೆ ಏಕೀಕರಣದ ನಂತರದಲ್ಲಿ ಕೇಂದ್ರದ ಹಿಂದಿ ಹೇರಿಕೆ, ಗಡಿ– ನದಿನೀರು ಹಂಚಿಕೆ ವಿವಾದಗಳಲ್ಲಿ ಕನ್ನಡದ ಹಿತರಕ್ಷಣೆ ಮಾಡುವುದು ಅದರ ಗುರಿಯಾಗಿತ್ತು. ಈ ಕುರಿತಂತೆ 'ಅರವತ್ತರ ಸುಮಾರಿನ ಕನ್ನಡ ಪರ ಚಳುವಳಿಗಳು ಒಂದು ಕಡೆ ಕನ್ನಡಿಗರ ಅವಕಾಶಗಳನ್ನು ವಿಸ್ತರಿಸಬೇಕೆಂಬ, ಕಾಯ್ದುಕೊಳ್ಳಬೇಕೆಂಬ ಅಪೇಕ್ಷೆಯನ್ನು ಹೊಂದಿದ್ದವು. ಇನ್ನೊಂದೆಡೆ ಕನ್ನಡ ಪ್ರಜ್ಞೆಯನ್ನು ಜಾಗೃತಗೊಳಿಸುವ ಉದ್ದೇಶವನ್ನು ಹೊಂದಿದ್ದವು. ಕನ್ನಡ ಪ್ರಜ್ಞೆಯ ಬಗ್ಗೆ ಜಾಗೃತಿ ಮೂಡಿಸಲು ಏಕೀಕರಣದ ಸಂದರ್ಭದಲ್ಲಿ ಅನುಸರಿಸಿದ ಚಾರಿತ್ರಿಕ ಮರುಗಳಿಕೆಯ ವಿಧಾನವನ್ನೇ ಈಗಲೂ ಮುಂದುವರೆಸಲಾಯಿತು' ಎಂದು ಕೆ.ವಿ. ನಾರಾಯಣ ಅವರು ವಿಶ್ಲೇಷಿಸುತ್ತಾರೆ.

ಏಕೀಕರಣಪೂರ್ವ ಮತ್ತು ಏಕೀಕರಣೋತ್ತರವಾದ ಎರಡು ಕಾಲಘಟ್ಟಗಳ ತಲಾ ಒಂದೊಂದು ಕನ್ನಡ ಅಸ್ಮಿತೆ ಕುರಿತ ಜನಪ್ರಿಯ ನೆಲೆಯ ಚಿಂತನೆಗಳನ್ನು ಪ್ರಾತಿನಿಧಿಕವಾಗಿ ಈ ಅಧ್ಯಯನ ಅವಲೋಕಿಸಿದೆ. ಅವರಲ್ಲಿ ಒಬ್ಬರು ವ್ಯಕ್ತಿಯಾಗಿದ್ದು ಇನ್ನೊಂದು ಕನ್ನಡಪರ ಸಂಘಟನೆಯಾಗಿದೆ. ವ್ಯಕ್ತಿಯಾಗಿ ಏಕೀಕರಣ ಚಳುವಳಿಯ ಮುಂದಾಳುಗಳಲ್ಲೊಬ್ಬರಾದ ಸಾಹಿತಿ ಅನಕೃ ಅವರನ್ನು, ಕನ್ನಡಪರ ಸಂಘಟನೆಯಾಗಿ ಕರ್ನಾಟಕ ರಕ್ಷಣಾ ವೇದಿಕೆಯನ್ನು ಆಯ್ದುಕೊಳ್ಳಲಾಗಿದೆ.

೫.೨ ಜನಪ್ರಿಯ ನೆಲೆ : ಅನಕೃ ಅವರ ಚಿಂತನೆಗಳು

೫.೨.೧ ಪೀಠಿಕೆ

ಅನಕೃ ಎಂದೇ ಹೆಸರಾದ ಅರಕಲಗೋಡು ನರಸಿಂಗರಾಯ ಕೃಷ್ಣರಾಯ (೧೯೦೮–೧೯೭೧) ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಮುಖಪತ್ರಿಕೆ 'ಕನ್ನಡ ನುಡಿ'ಯ ಸಂಪಾದಕರಾಗಿ ಬರೆದ ಸಂಪಾದಕೀಯಗಳು, ಲೇಖನಗಳು ಕನ್ನಡ ಬದುಕಿನ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿವೆ.

‘ವಿಶ್ವವಾಣಿ’ ಪತ್ರಿಕೆಯ ಸಂಪಾದಕರಾಗಿಯೂ ಅನಕೃ ದುಡಿದರು. ಐವತ್ತರ ದಶಕದಲ್ಲಿ ‘ಕರ್ನಾಟಕ ಪ್ರಗತಿಶೀಲ ಸಂಘ’ವನ್ನು ಕಟ್ಟಿ ಪ್ರಗತಿಶೀಲ ಸಾಹಿತ್ಯ ಚಳುವಳಿಗೆ ಶಕ್ತಿ ತುಂಬಿದರು. ಪ್ರಗತಿಶೀಲ ಲೇಖಕರಲ್ಲಿ ಪ್ರಮುಖರಲ್ಲೊಬ್ಬರಾದ ಅನಕೃ ಅವರು ತಮ್ಮ ಕಾದಂಬರಿಗಳ ಮೂಲಕ ವ್ಯಾಪಕ ಪ್ರಮಾಣದ ಓದುಗರನ್ನು ಪಡೆದಿದ್ದರು. ಕರ್ನಾಟಕೀ ಮತ್ತು ಹಿಂದೂಸ್ತಾನಿ ಸಂಗೀತ ಬಲ್ಲವರಾಗಿದ್ದ ಅನಕೃ ಅವರು ಸಂಗೀತ ಕ್ಷೇತ್ರವಲ್ಲದೆ ರಂಗಭೂಮಿ, ಸಿನಿಮಾ ಹೀಗೆ ಹಲವು ಕಲಾಮಾಧ್ಯಮಗಳಲ್ಲಿ ಆಸಕ್ತಿ ಮತ್ತು ಪರಿಣತಿಯನ್ನು ಹೊಂದಿದ್ದರು. ತಮ್ಮ ಭಾಷಣಗಳಿಂದಲೂ ಖ್ಯಾತರಾಗಿದ್ದ ಅನಕೃ ಅವರು ತಮ್ಮ ಕಾಲದಲ್ಲಿ ಜನಪ್ರಿಯತೆ ಪಡೆದ ಪ್ರಭಾವಶಾಲಿಯಾದ ಸಾರ್ವಜನಿಕ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು.

ಏಕೀಕರಣ ಚಳುವಳಿಯಲ್ಲಿ ತೊಡಗಿಸಿಕೊಂಡು ಮುಂದೆ ಈ ಚಳುವಳಿಯ ಮುಂದಾಳುಗಳಲ್ಲೊಬ್ಬರಾಗಿ ಹೊಮ್ಮಿದ ಅನಕೃ ಆರಂಭದಲ್ಲಿ ಆಲೂರು ವೆಂಕಟರಾಯರು ಮತ್ತು ಮುದವೀಡು ಕೃಷ್ಣರಾಯರ ಪ್ರಭಾವಕ್ಕೆ ಒಳಗಾಗಿದ್ದರು. ಕರ್ನಾಟಕ ಏಕೀಕರಣಪೂರ್ವ ಮತ್ತು ಏಕೀಕರಣೋತ್ತರ ಸಂದರ್ಭದ ಅನಕೃ ಅವರ ಚಿಂತನೆಗಳು ಈ ಅಧ್ಯಯನದ ವಸ್ತುವಾಗಿದ್ದು ಅವರ ಸಮಗ್ರ ವಿಚಾರಸಾಹಿತ್ಯ ಒಳಗೊಂಡ ‘ಅ.ನ. ಕೃಷ್ಣರಾಯರ ಸಾಹಿತ್ಯ ಶ್ರೇಣಿ’(೨೦೧೧) ಯ ಸಂಪುಟಗಳು ಮುಖ್ಯ ಆಕರವಾಗಿವೆ.

೫.೨.೨ ಭಾಷಿಕರ ನಿರಭಿಮಾನ ಕುರಿತ ಆಕ್ರೋಶ

ಅನಕೃ ಅವರ ವಿಚಾರ ಸಾಹಿತ್ಯದಲ್ಲಿ ಕನ್ನಡಿಗರ ಭಾಷೆ ಕುರಿತ ನಿರಭಿಮಾನದ ವಿರುದ್ಧ ಮತ್ತೆ ಮತ್ತೆ ಆಕ್ರೋಶ ವ್ಯಕ್ತವಾಗುತ್ತದೆ. ‘ಸ್ವಭಾಷೆ, ಸಂಸ್ಕೃತಿಗಳ ದ್ರೋಹಿಗಳಾದ (ಕನ್ನಡ ಮರೆತ, ತೆಲುಗು, ಮರಾಠಿ, ತಮಿಳು ಹಿಂದಿಯನ್ನು ವೈಭವೀಕರಿಸುವ) ಈ ಜನವೇ ನಮ್ಮ ಪರಮಶತ್ರುಗಳು; ಇವರನ್ನು ನಿರ್ದಾಕ್ಷಣ್ಯದಿಂದ ಮೆಟ್ಟಬೇಕು’[೧] ಎಂಬ ಮಾತುಗಳಲ್ಲಿ ಅನಕೃ ಅವರ ಆಕ್ರೋಶದ ತೀವ್ರತೆ ಕಾಣುತ್ತದೆ. ‘ಕನ್ನಡಿಗರು ರಸಿಕರು, ದಯಾಧನರು, ಸಾತ್ವಿಕರು– ನಿಜ, ಹೇಡಿಗಳಲ್ಲ! ವೀರರೂ ಆಗಿದ್ದರೆಂಬುದನ್ನು ಮರೆಯಬೇಡಿ. ನಮ್ಮಲ್ಲಿ ಪಂಪ, ರನ್ನ, ಹರಿಹರ, ಕುಮಾರವ್ಯಾಸಾದಿ ಕವಿಗಳಾಗಿ ಹೋದಂತೆ ತೈಲಪ, ಪುಲಕೇಶಿ, ಕೃಷ್ಣದೇವರಾಯ, ಚಿಕ್ಕ ದೇವರಾಜಾದಿ ವೀರರೂ ಆಗಿಹೋಗಿದ್ದನ್ನು ಮರೆಯಬೇಡಿ. ಕಣ್ಣನತ್ತ ಹೊರಳಿಸಿ ನೋಡಿ– ಹಂಪೆ, ಶ್ರೀರಂಗಪಟ್ಟಣ, ಕೊಡಗುಗಳಲ್ಲಿ ಕಾದು ಮಡಿದು ಕೀರ್ತಿ ಕಾಯರಾಗಿರುವ ನಮ್ಮ ವೀರರನ್ನು ಸ್ಮರಿಸಿಕೊಳ್ಳಿ, ಕನ್ನಡಿಗರು ಕವನಕಲಿಗಳು ಹೇಗೋ ಹಾಗೆ ಕದನಕಲಿಗಳೂ ಆಗಿದ್ದಾರೆ. ಆದರೆ ಅವರನ್ನು ನಿರ್ವಿಣ್ಣತೆ, ನಿರಭಿಮಾನಗಳು ಬಾಧಿಸುತ್ತಿವೆ. ಜೀರ್ಣವಾದ ವಸ್ತುಗಳನ್ನು ತ್ಯಜಿಸುವಂತೆ ನಮ್ಮ ನೈಚ್ಯಾನುಸಂಧಾನವನ್ನು ತೊರೆಯಬೇಕಾದ ಕಾಲ ಈಗ ಬಂದಿದೆ. ಕನ್ನಡ ಸೇವೆಗಾಗಿ ಕಲಿಗಳೇ ಸಿದ್ಧರಾಗಿ’[೨] ಅನಕೃ ಅವರು

ಕನ್ನಡಿಗರು ಕವಿಗಳಂತೆ ವೀರರೂ ಹೌದು ಎನ್ನುವಲ್ಲಿ ವೀರ ಶೂರತನವನ್ನು ಕನ್ನಡದ ಅಸ್ಮಿತೆಯಾಗಿ ಗುರುತಿಸುತ್ತಿದ್ದಾರೆ.

ಇಂಗ್ಲಿಶಿನ ವ್ಯಾಮೋಹದಲ್ಲಿ ಕನ್ನಡದ ಕಣ್ಣು ಕುರುಡಾಗದಿರಲಿ ಎಂಬ ಕಾಳಜಿ ಅವರ 'ಈ ಬೆಳಕು ಕನ್ನಡದ ಮನೆ ಮನಚಿತ್ತಗಳನ್ನು ಬೆಳಗಬೇಕು. ಆದರೆ ಬೆಳಕನ್ನು ಬಳಸಿಕೊಳ್ಳುವ ಬಗೆಯನ್ನು ಕನ್ನಡಿಗರು ಮರೆಯಬಾರದು. ಕಣ್ಣು ಕಳೆದುಕೊಂಡು ಒಣ ಮೋಹಕ್ಕೆ ಪಕ್ಕಾಗಿ ತಮ್ಮ ಆತ್ಮನ ಮಹತಿಯನ್ನು ನೀಗಿಕೊಳ್ಳಬಾರದು'[೩] ಎಂಬ ಮಾತುಗಳಲ್ಲಿದೆ. 'ಕನ್ನಡವು ಕನ್ನಡ ನಾಡಿಗೆ ಮೊದಲನೆಯದು. ಕನ್ನಡ ತಾಯಿಯ ಪೂಜೆಯ ನಂತರವೇ ಇತರ ಭಾಷಾ ದೇವಿಯ ಪೂಜೆ'[೪] ಎಂದು ಕನ್ನಡವೇ ಪ್ರಧಾನ ಎಂದು ಎಚ್ಚರಿಸುತ್ತಾರೆ.

ಭಾಷಾ ನಿರಭಿಮಾನದ ಕಾರಣಕ್ಕೆ ಅನಕೃ ಅವರ ಆಕ್ರೋಶಕ್ಕೆ ಗುರಿಯಾದವರು ಕೇವಲ ಕನ್ನಡಿಗರು ಮಾತ್ರವಲ್ಲ. ಶಕ್ತಿಶಾಲಿ ಪತ್ರಿಕೆಗಳ ವಿರುದ್ಧವೂ ಅವರು ಕಿಡಿಕಾರುತ್ತಿದ್ದರು. 'ಕನ್ನಡನಾಡಿನಲ್ಲಿರುವ ಕನ್ನಡ ಪತ್ರಿಕೆಗಳೇ ಕನ್ನಡಕ್ಕೆ ವಿರೋಧವಾಗಿ ಹೋಗಿರುವವರು. ಕನ್ನಡಕ್ಕೆ ಎಷ್ಟು ಪ್ರೋತ್ಸಾಹವನ್ನು ಅವು ಯುಕ್ತವಾಗಿ ಕೊಡಬಹುದೋ ಅಷ್ಟನ್ನು ಕೊಡುತ್ತಿಲ್ಲ. ಹಿಂದಿಗೆ ಕೊಡುತ್ತಿರುವಷ್ಟು ಪ್ರೋತ್ಸಾಹವನ್ನೂ ಕೊಡುತ್ತಿಲ್ಲ.'[೫] ಎಂದು ಪತ್ರಿಕೆಗಳನ್ನು ಅವರು ಕುಟುಕುತ್ತಿದ್ದರು. ಅನಕೃ ಅವರ ಟೀಕೆಗಳಿಂದ ಪತ್ರಿಕೆಗಳು ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಿದ್ದುದೂ ಉಂಟು. ಅದಕ್ಕೊಂದು ನಿದರ್ಶನ 'ವಂದೇ ಮಾತರಂ' ಚಿತ್ರವಿವಾದ.

'ವಿಜಯನಗರ ಯಾರದು' ಎಂಬ ಶೀರ್ಷಿಕೆಯ ಲೇಖನದಲ್ಲಿ 'ವಂದೇ ಮಾತರಂ' ಚಿತ್ರದಲ್ಲಿ ಹಂಪೆ ಆಂಧ್ರಕ್ಕೆ ಸೇರಿದ್ದೆಂಬ ಮಾತುಗಳಿರುವುದಾಗಿಯೂ ಅದನ್ನು ಸೆನ್ಸಾರ್ ಮಾಡಬೇಕೆಂದೂ, ಇಲ್ಲದಿದ್ದರೆ ಕನ್ನಡಿಗರು ಚಿತ್ರವನ್ನು ಬಹಿಷ್ಕರಿಸಬೇಕೆಂದು ಪತ್ರಿಕೆಗಳಿಗೆ ವಾಚಕರು ಪತ್ರ ಬರೆಯುತ್ತಾರೆ. ಇದನ್ನು ಸಮರ್ಥಿಸಿ 'ತಾಯಿನಾಡು' ಪತ್ರಿಕೆಯಲ್ಲಿ 'ನಗರಸಂಚಾರಿ' ಎನ್ನುವವರು ಪತ್ರ ಬರೆದು ಕನ್ನಡ ಸಾಹಿತ್ಯ ಪರಿಷತ್ತು ಇದನ್ನು ಗಮನಿಸಬೇಕೆಂದು ಸೂಚಿಸುತ್ತಾರೆ. ಈ ಬಗ್ಗೆ 'ವಿಶ್ವಕರ್ನಾಟಕ' ಪತ್ರಿಕೆಯಲ್ಲಿ ಹಂಪೆ ಕನ್ನಡಿಗರದೆಂಬ ವಾದವನ್ನು ಕುಚೋದ್ಯ ಮಾಡುವ ಲೇಖನ ಪ್ರಕಟವಾಗುತ್ತದೆ. ಈ ಬಗ್ಗೆ ಪತ್ರಿಕೆಯ ಲೇಖನವನ್ನು ಕಟುವಾಗಿ ಟೀಕಿಸಿ ಅನಕೃ ಪರಿಷತ್ತಿನ ಮುಖವಾಣಿ 'ಕನ್ನಡನುಡಿ'ಯಲ್ಲಿ ಲೇಖನ ಬರೆಯುತ್ತಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ 'ವಿಶ್ವಕರ್ನಾಟಕ' ಪತ್ರಿಕೆ ತನ್ನ ತಪ್ಪನ್ನು ಒಪ್ಪಿಕೊಂಡು ಲೇಖನ ಪ್ರಕಟಿಸುತ್ತದೆ. ಅದರ ಕೆಲವು ವಾಕ್ಯಗಳು.. " 'ಕನ್ನಡ ನುಡಿ' ಯಂತೂ ನಮ್ಮ ಮೇಲೆ "ಕನ್ನಡ ದ್ರೋಹ" ದ ಆರೋಪಣೆಯನ್ನೇ ಮಾಡಿಬಿಟ್ಟಿದೆ. ಕೋಪಕ್ಕೆ ಅವಕಾಶವನ್ನು ಉಂಟು ಮಾಡಿಕೊಟ್ಟ ತಪ್ಪು ನಮ್ಮದು. 'ವಿಶ್ವ ಕರ್ನಾಟಕ'ವು ಹುಟ್ಟಿರುವುದು ಕರ್ನಾಟಕದ ಸೇವೆಗಾಗಿ. ೧೫-೧೬ ವರ್ಷಗಳಿಂದ ಅದು ಮಾಡುತ್ತಿರುವುದು ಕರ್ನಾಟಕದ ಸೇವೆ" (೧೬.೫.೩೯)[೬]

ಕನ್ನಡಿಗರಲ್ಲಿ ಕನ್ನಡದ ಬಗೆಗಿನ ಅಭಿಮಾನ ಕುಂದಲು ಕಾರಣಗಳೇನು ಎನ್ನುವುದು ಅನಕೃ ಅವರನ್ನು ಸದಾ ಕಾಡುವ ಸಂಗತಿಯಾಗಿತ್ತು. 'ನಮ್ಮಲ್ಲಿ ಆತ್ಮವಿಶ್ವಾಸ, ಹೆಮ್ಮೆ, ಸ್ವಾಭಿಮಾನಗಳ ಕೊರತೆ ಕಾಣಬರುತ್ತಿರುವುದೇತಕ್ಕೆ? ಅಂದು ಸಾಮ್ರಾಜ್ಯವಾಗಿದ್ದ ಕನ್ನಡ ನಾಡು ಇಂದು ಹರಿದು ಹಂಚಿ ಹೋಗಿರುವುದೇತಕ್ಕೆ? ಕನ್ನಡ ಮಕ್ಕಳು ತಾವು ಕನ್ನಡಿಗರೆಂದು ಹೇಳಿಕೊಳ್ಳಲು ಹಿಂಜರಿಯುತ್ತಿರುವುದೇತಕ್ಕೆ?[2] ಎಂಬ ಪ್ರಶ್ನೆಯನ್ನು ಅವರು ಕೇಳಿಕೊಳ್ಳುತ್ತಿದ್ದರು.

ಏಕೀಕರಣದ ಸಂದರ್ಭದಲ್ಲಿ ಕರ್ನಾಟಕದೊಳಗೆ ಸೇರಲು ಮೀನಮೇಷ ಎಣಿಸುತ್ತಿದ್ದ ಸಂಸ್ಥಾನೀಕರನ್ನು ಕಟುವಾಗಿ ಟೀಕಿಸುತ್ತಿದ್ದ ಪ್ರಜಾಪ್ರಭುತ್ವವಾದಿ ನಿಲುವಿನ ಅನಕೃ ಕರ್ನಾಟಕ 'ಸಾಮ್ರಾಜ್ಯ'ವಾಗಿತ್ತು ಎಂದು ನೆನಸುವುದು ವೈರುಧ್ಯವಾಗಿದೆ. ಮೂಲಭೂತವಾದಿ ನೆಲೆಯಿಂದ ಚಿಂತಿಸದ ಅನಕೃ 'ಪೂಜೆ', 'ಮುಕ್ತಿ'ಯಂತಹ ಧಾರ್ಮಿಕ ಪರಿಭಾಷೆ ಬಳಸುವುದೂ ಕೂಡ ಗೊಂದಲಕಾರಿಯಾಗಿದೆ. ಅನಕೃ ಅವರು ಕರ್ನಾಟಕವನ್ನು ಆಳಿದ ಸಾಮ್ರಾಜ್ಯಗಳ ವೈಭವದ ಚರಿತ್ರೆಯನ್ನು ನೆನಪಿಸುವ ಮತ್ತು 'ಪೂಜೆ', 'ಮುಕ್ತಿ'ಯಂತಹ ಧಾರ್ಮಿಕ ಪರಿಭಾಷೆ ಬಳಕೆಯ ಹಿಂದೆ ಕನ್ನಡಿಗರ ನಿರಭಿಮಾನವನ್ನು ಹೊರದೂಡಿ ಅಭಿಮಾನ ಮೂಡಿಸುವ ಉದ್ದೇಶವಿರುವಂತಿದೆ. ಸಾರಾಂಶದಲ್ಲಿ ಕನ್ನಡದ ಬಗೆಗಿನ ಕಳಕಳಿ, ನಿರಭಿಮಾನಿ ಕನ್ನಡಿಗರ ಬಗ್ಗೆ ಆಕ್ರೋಶಗಳಿಂದ ಕೂಡಿರುವ ಅನಕೃ ಅವರ ಆವೇಶದ ಭಾಷಣಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡಿಗರಲ್ಲಿ ಸ್ಫೂರ್ತಿ ತುಂಬುವ ಉದ್ದೇಶವನ್ನು ಹೊಂದಿರುವುದು ಕಾಣುತ್ತದೆ. ಅನಕೃ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಭಾಷಣಗಳ ಮೂಲಕ ವ್ಯಕ್ತವಾದ ಸಂದರ್ಭಗಳೇ ಹೆಚ್ಚಿದ್ದು 'ಭಾಷಣಗಳ ಮಿತಿ' ಚಿಂತನೆಗಳನ್ನೂ ಪ್ರಭಾವಿಸಿರುವಂತಿದೆ.

ಸಮಾಜದ ದೊಡ್ಡ ಸಮುದಾಯವಾದ ಕೆಳವರ್ಗಗಳಿಗೆ 'ಭಾಷಿಕ ಅಸ್ಮಿತೆ' ಎನ್ನುವುದು ಆತಂಕದ ಸಂಗತಿಯಲ್ಲ. ಅವುಗಳ ಸಂಕಟಗಳೇ ಬೇರೆ. ಭಾಷಿಕರ ನಿರಭಿಮಾನವೆಂದು ಕಾಣುವ ಮನೋಭಾವಕ್ಕೆ ಆ ಭಾಷಿಕರು ವರ್ತಮಾನದಲ್ಲಿ ಎದುರಿಸುತ್ತಿರುವ ಸಂಕಟಗಳೂ, ಬಿಕ್ಕಟ್ಟುಗಳೂ ಕಾರಣವಾಗಿರಬಹುದು. ಗತದಲ್ಲಿ ಇತ್ತು ಎನ್ನುವ ವೈಭವದ ಇತಿಹಾಸವನ್ನು ಕನವರಿಸುತ್ತ ಅದನ್ನು ವರ್ತಮಾನಕ್ಕೆ ತಾಳೆ ಹಾಕಿ ನೋಡುವ ಕ್ರಮವೇ ಅತಾರ್ಕಿಕವಾಗಿದೆ. ಈ ಮಿತಿ ಅನಕೃ ಅವರ ಚಿಂತನೆಗಳಿಗೂ ಇದೆ.

೫.೨.೩ ನೆರೆಭಾಷೆಗಳೊಂದಿಗಿನ ಸಂಬಂಧ

'ನೆರೆ ಪ್ರಾಂತಗಳ ಮೇಲೆ ದಾಳಿ ಮಾಡುವ ಉದ್ದೇಶ ಕನ್ನಡಿಗರಿಗಿಲ್ಲ. ಅವರ ಏಕೀಕರಣ ಚಳುವಳಿ ಸಂಘಟನಾತ್ಮಕವಾದುದು. ಕನ್ನಡಿಗರು ತಮಗೊಂದು ಪ್ರಾಂತ್ಯವಾಗಬೇಕೆಂದು ಬಯಸುತ್ತಿರುವಂತೆಯೇ ಆಂಧ್ರರು, ತಮಿಳರು, ಮಲೆಯಾಳಿಗಳು ಬಯಸುತ್ತಿರುವುದು ಸಹಜವೇ

ಆಗಿದೆ. ಅಂಥ ಚಳುವಳಿಗಳಿಗೆ ಕನ್ನಡಿಗರ ನೈತಿಕ ಬೆಂಬಲವಿದೆ.' ಇವು ೧೯೪೬ರ ಜನವರಿ ೧೯ರಂದು ಮುಂಬಯಿಯಲ್ಲಿ ಸೇರಿದ ಕರ್ನಾಟಕ ಏಕೀಕರಣ ಸಮ್ಮೇಳನದ ೧೦ನೆಯ ಅಧಿವೇಶನದಲ್ಲಿ ವಕೀಲರಾದ ಜಹಗೀರದಾರ ರಂಗಾಚಾರ್ಯರು ಸಭೆಗೆ ವಿವರಿಸಿದ 'ಕರ್ನಾಟಕ ಏಕೀಕರಣ' ಚಳುವಳಿಯ ನಿಲುವುಗಳು. ಏಕೀಕರಣದ ಮುಂದಾಳುಗಳಾಗಿ ಈ ನಿಲುವುಗಳನ್ನು ಅನುಮೋದಿಸುವ ಅನಕೃ[೮] ಅವರು ೧೯೪೫ರ 'ಸುಗ್ಗಿಯ ಮೈಸೂರು' ಪತ್ರಿಕೆಯ ದೀಪಾವಳಿ ಸಂಚಿಕೆಯ ಲೇಖನದಲ್ಲಿ ನೆರೆಭಾಷಿಕರ ಕುರಿತು ಕಟುವಾಗಿ ಬರೆಯುತ್ತಾರೆ: "ಮಹಾರಾಷ್ಟ್ರದಿಂದ ಜನ ಬಂದು ಹೊಟ್ಟೆಪಾಡಿಗಾಗಿ ಕರ್ನಾಟಕವನ್ನು ಸೇರಿಕೊಂಡರು. ಹಾಗೆ ಆಂಧ್ರ ಕೇರಳ ತಮಿಳುನಾಡುಗಳಿಂದ ಬಂದರು. ಕರ್ನಾಟಕದಲ್ಲಿ ನೌಕರಿ ಮಾಡಿದರು, ವ್ಯಾಪಾರ ಮಾಡಿದರು. ಹೊಟ್ಟೆ ತುಂಬಿಕೊಂಡರು. ನಾವು ಇದಕ್ಕಾಗಿ ವಿಷಾದಿಸುವುದಿಲ್ಲ. ಕನ್ನಡ ತಾಯಿ ಈ ಜನಕ್ಕೆ ಅನ್ನವಿಟ್ಟಿದ್ದಾಳೆ. ಆದರೆ ಈ ಜನ ಕನ್ನಡ ತಾಯಿಗೆ ದ್ರೋಹವನ್ನೆಸಗಬಾರದು.'

ಏಕೀಕರಣದ ಸಂದರ್ಭದಲ್ಲಿನ ಜನಪ್ರಿಯ ನೆಲೆಯ ನೆರೆಯ ಭಾಷಿಕರ ಕುರಿತಾಗಿನ ಇಂತಹ ಬಿರುನುಡಿಗಳು ಅದನ್ನು ಮೂಲಭೂತವಾದಿ ನೆಲೆಗೆ ತಳ್ಳುವುದಿದೆ. ದೇಶಿ ಭಾಷೆಗಳ ನಿಜವಾದ ಶತ್ರುಗಳು ಯಾರು ಎಂದು ಗುರುತಿಸುವಲ್ಲಿ ಸ್ಪಷ್ಟತೆ ಇರದಿರುವುದು ನೆರೆಯ ಭಾಷಿಕರನ್ನು ಕನ್ನಡದ ವಿರೋಧಿಗಳನ್ನಾಗಿ ನೋಡಲು ಒಂದು ಕಾರಣವಾದರೆ ಏಕೀಕರಣ ಸಂದರ್ಭದಲ್ಲಿ ಸಂಘರ್ಷಗಳಾಗುತ್ತಿದ್ದುದೇ ನೆರೆಯ ಭಾಷಿಕರೊಂದಿಗೆ ಆಗಿದ್ದುದು ಜನಪ್ರಿಯ ನೆಲೆಯ ನಿಲುವು ಮೂಲಭೂತವಾದಿ ನೆಲೆಯ ನಿಲುವುಗಳಂತೆ ಕಾಣಲು ಕಾರಣವಾಗಿವೆ. ಆದರೆ ಏಕೀಕರಣದ ನಂತರವೂ ಜನಪ್ರಿಯ ನೆಲೆ ಕನ್ನಡದ ನಿಜವಾದ ವೈರಿಯನ್ನು ಗುರುತಿಸಿಕೊಳ್ಳದೆ ನೆರೆ ಭಾಷಿಕರೊಂದಿಗಿನ ಸಂಘರ್ಷಕ್ಕೆ ತನ್ನ ತ್ರಾಣವನ್ನೆಲ್ಲ ವಿನಿಯೋಗಿಸುತ್ತಿರುವುದು ಕಂಡು ಬರುತ್ತದೆ.

೫.೨.೪ ಹಿಂದಿ ವಿರೋಧ

ಹಿಂದಿಯ ಬಗೆಗಿನ ವಿರೋಧ ಏಕೀಕರಣ ಚಳುವಳಿಯ ಹಲವು ಮುಂದಾಳುಗಳಲ್ಲಿತ್ತು. ಅನಕೃ ಅವರಿಗೆ ಹಿಂದಿ ಮುಂದೊಂದು ದಿನ ಕನ್ನಡಕ್ಕೆ ಎರವಾಗಬಹುದು ಎಂಬ ಆತಂಕವಿತ್ತು. 'ಹಿಂದಿಯು ಮೊದಲು ಕಾಲು ಹಾಕಿದುದು ಕೇವಲ ವ್ಯವಹಾರಿಕ ಭಾಷೆಯಾಗಿ; ಈಗ ಅದು ಆಶಿಸುತ್ತಿರುವುದು ದೇಶಭಾಷೆಗಳ ಸಮಾನವಾದ ಸ್ಥಾನ; ಮುಂದೆ ಅದು ಆಕ್ರಮಿಸುವುದು ದೇಶಭಾಷೆಗಳನ್ನು ಮೆಟ್ಟಿದ ಅಗ್ರಪೀಠ.'[೯] ಎಂದವರು ಎಚ್ಚರಿಸಿದ್ದರು. ಹಿಂದಿಯನ್ನು ಮೈಸೂರು ವಿವಿಯು ಡಿಗ್ರಿ ಕೋರ್ಸುಗಳಲ್ಲಿ ಸೇರಿಸುವುದನ್ನು ಪ್ರಬಲವಾಗಿ ವಿರೋಧಿಸಿದ್ದ ಅನಕೃ ಅವರು 'ಇದು ಕನ್ನಡಿಗರ ವಿಷಮಕಾಲ.' ಎಂದೇ ಬಣ್ಣಿಸಿದ್ದರು. ಪ್ರಗತಿಶೀಲ ಸಾಹಿತ್ಯ ಚಳುವಳಿಯ ಇನ್ನೊಬ್ಬ ಪ್ರಮುಖ ಲೇಖಕರಾದ ಬಸವರಾಜ ಕಟ್ಟೀಮನಿ ಅವರೂ ಕೂಡ 'ಕನ್ನಡವನ್ನೂ ಇನ್ನಿತರ ದ್ರಾವಿಡ

ಭಾಷೆಗಳನ್ನೂ ತುಳಿದು, ಹತ್ತಿಕ್ಕಿ ಅಪಮಾನಗೊಳಿಸುತ್ತಿರುವ ಹಿಂದಿ ಸಾಮ್ರಾಜ್ಯವಾದಿಗಳನ್ನು ನಾವು ಖಂಡಿಸಲೇ ಬೇಕಾಗುತ್ತದೆ' ಎಂದು ಎಚ್ಚರಿಸಿದ್ದರು.

ಕನ್ನಡಕ್ಕೆ ಅಪಾಯವಿರುವುದು ಇಂಗ್ಲಿಶಿನಿಂದಲ್ಲ, ಹಿಂದಿಯಿಂದ ಎಂದು ಸಮಕಾಲೀನ ಕನ್ನಡ ವಿಚಾರ ಸಾಹಿತ್ಯದ ಒಂದು ವಲಯ ಭಾವಿಸುತ್ತಿದೆ. ಕೆ.ವಿ. ನಾರಾಯಣ ಅವರು ತಮ್ಮ 'ಕನ್ನಡ ಜಗತ್ತು-ಅರ್ಧ ಶತಮಾನ ಕೃತಿಯಲ್ಲಿ ವಿವರಿಸುವಂತೆ ಇಂಗ್ಲಿಶ್ ಈಗ ಸಂಸ್ಕೃತದ ಜಾಗದಲ್ಲಿ ಕುಳಿತಿದೆ. ಆಳುವ ವರ್ಗದ ಒತ್ತಾಸೆ ಆ ಭಾಷೆಗೆ ಇರುವುದು ಇದಕ್ಕೆ ಮುಖ್ಯ ಕಾರಣ. ಇದರಿಂದ ಸ್ಪಷ್ಟವಾಗುವ ಇನ್ನೊಂದು ಸಂಗತಿ ಎಂದರೆ ಆಳುವ ವರ್ಗದ ಗುಣ ಲಕ್ಷಣಗಳು ಬದಲಾದರೆ ಸಹಜವಾಗಿಯೇ ಇಂಗ್ಲಿಶಿನ ಸ್ಥಾನ ಕುಸಿಯುತ್ತದೆ. ಸದ್ಯದ ಸಂಭವನೀಯ ಪ್ರವೃತ್ತಿಯನ್ನು ಕಂಡರೆ ಇಂಗ್ಲಿಶಿನ ಜಾಗವನ್ನು ತುಂಬಲು ಸಿದ್ಧವಾಗಿ ನಿಂತಿರುವ ಭಾಷೆಯೆಂದರೆ ಹಿಂದಿ' ಈ ಮುನ್ನೋಟ ಅನಕೃ ಅವರಲ್ಲಿ ಆಗಲೇ ಇತ್ತು.

೫.೨.೫ ಕನ್ನಡಕ್ಕೆ ಸಂಸ್ಕೃತದ 'ಚಿನ್ನದ ಸಂಕೋಲೆಯ' ನಿರಾಕರಣೆ

ಕನ್ನಡದ ಚಿಂತಕರು ಕನ್ನಡ ಭಾಷೆ ಮತ್ತು ಸಂಸ್ಕೃತದ ನಡುವಿನ ಸಂಬಂಧವನ್ನು ಹೇಗೆ ಗ್ರಹಿಸುತ್ತಾರೆ ಎನ್ನುವುದು ಆ ಚಿಂತಕರ ಆದ್ಯತೆ ಭಾಷೆಯೋ ಅಥವಾ ವರ್ಗ ಹಿತಾಸಕ್ತಿಯಂತಹ ಭಾಷಿಕೇತರ ಸಂಗತಿಗಳೋ ಎಂಬುದನ್ನು ಕೂಡ ನಿರ್ಧರಿಸುವ ಅಂಶವಾಗಿರುತ್ತದೆ. ಅನಕೃ ಅವರ ಚಿಂತನೆಗಳಲ್ಲಿ ಸಂಸ್ಕೃತ ಕುರಿತ ಎರಡು ಭಿನ್ನ ನಿಲುವುಗಳು ವ್ಯಕ್ತವಾಗುತ್ತವೆ. 'ಕನ್ನಡಕ್ಕೂ ಸಂಸ್ಕೃತಕ್ಕೂ ತಾಯಿ ಮಕ್ಕಳ ಮಧುರ ಬಾಂಧವ್ಯ ಬೆಳೆದುಬಂದಿದೆ. ಇದನ್ನು ಕನ್ನಡದ ಸಾಹಿತಿಗಳು, ಬೆಳೆಸುತ್ತಿದ್ದಾರೆಂದೇ ನಮ್ಮ ನಂಬಿಕೆ. ಆ ದೃಷ್ಟಿಯ ಕಡೆಗೇ ಹೆಚ್ಚು ಲಕ್ಷ್ಯ ಕೊಡುವುದು ಎಲ್ಲ ವಿದ್ವತ್ ಪ್ರೇಮಿಗಳ ಕರ್ತವ್ಯವೆಂದು ನಾವು ವಿನಯದಿಂದ ಸೂಚಿಸಲಿಚ್ಚಿಸುತ್ತೇವೆ'[೧೦] ಎಂದು ಸಂಸ್ಕೃತದೊಂದಿಗೆ ಸಂಬಂಧ ಮುಂದುವರಿಸುವ ಇಂಗಿತ ವ್ಯಕ್ತಪಡಿಸುವ ಅನಕೃ ಅವರೇ 'ಸಂಸ್ಕೃತ ಕನ್ನಡಿಗರ ಕುತ್ತಿಗೆಯ ಮೇಲಿನ ನೊಗವಾಗಬಾರದು ಎಂಬ ಭಾವನೆಯನ್ನು ಕನ್ನಡ ಕವಿಗಳು ಆಗಿಂದಾಗ್ಗೆ ವ್ಯಕ್ತಪಡಿಸುತ್ತಾ ಬಂದಿದ್ದಾರೆ' ಆದ್ದರಿಂದ 'ಸಾಹಿತ್ಯಕ್ಕೂ, ಜನಜೀವನಕ್ಕೂ ಹೆಚ್ಚು ಸಂಬಂಧ ಬೆಳೆಯಬೇಕೆಂದು ಹಾರೈಸುವ ದಿವಸದಲ್ಲಿ ಸಂಸ್ಕೃತದ ಚಿನ್ನದ ಸಂಕೋಲೆ ಬೇಡ ಎಂದು ಹೇಳುವುದು ಯಥಾರ್ಥವಾಗಿಯೇ ಇದೆ'[೧೧] ಎಂದು ಸಂಸ್ಕೃತದ ಹಂಗನ್ನು ಕಿತ್ತೊಗೆಯುವ ಅನಿವಾರ್ಯತೆಯನ್ನೂ ತಿಳಿಸುತ್ತಾರೆ.

ಅನಕೃ ಅವರ ಕನ್ನಡ ಅಸ್ಮಿತೆ ಕುರಿತ ಬಹುಪಾಲು ಚಿಂತನೆಗಳು ಆಕಾರ ಪಡೆಯುವುದೇ ಕನ್ನಡ, ಕರ್ನಾಟಕ ಕುರಿತ ಘಟನೆಗಳು ಮತ್ತು ಅಭಿಪ್ರಾಯಗಳಿಗೆ ಪ್ರತಿಕ್ರಿಯೆ ರೂಪದಲ್ಲಿ. ಕನ್ನಡ-ಸಂಸ್ಕೃತ ಸಂಬಂಧ ಕುರಿತ ಅನಕೃ ಅವರ ಚಿಂತನೆಗಳಿಗೂ ಇದು ಅನ್ವಯಿಸುತ್ತದೆ. 'ವಿಶ್ವ ಕರ್ನಾಟಕ'

ಪತ್ರಿಕೆಯಲ್ಲಿ ತಿರುಮಲೆ ತಾತಾಚಾರ್ಯ ಶರ್ಮ ಅವರು ಸಂಸ್ಕೃತಪರ ವಹಿಸಿ ಲೇಖನಗಳನ್ನು ಬರೆದಾಗ ಅದಕ್ಕೆ ವ್ಯಕ್ತವಾದ ಅನಕೃ ಅವರ ಪ್ರತಿಕ್ರಿಯೆಗಳು ಇದಕ್ಕೆ ನಿದರ್ಶನವಾಗಿದೆ.

ತಿರುಮಲೆ ತಾತಾಚಾರ್ಯ ಶರ್ಮ 'ವಿಶ್ವಕರ್ನಾಟಕ' ಪತ್ರಿಕೆಯ ೧೮.೧೧.೪೫ ರ ಸಂಚಿಕೆಯಲ್ಲಿ ಹೀಗೆ ಬರೆಯುತ್ತಾರೆ: 'ಕಾಡುನುಡಿಯ ಅವಸ್ಥೆಯಿಂದ ಮುಂದುವರೆದು ಕನ್ನಡ ಭಾಷೆಯು ಒಂದು ಮಟ್ಟದ ಸಂಸ್ಕಾರ ಹೊಂದಿತು. ಈ ಸಂಸ್ಕಾರ ಆರ್ಯಮುದ್ರೆಯದು. ಇದನ್ನು ವಿಸ್ತಾರಗೊಳಿಸಬೇಕಾದ ಅವಶ್ಯಕತೆ ಇಲ್ಲ. ಕನ್ನಡ ಭಾಷೆಯು ದ್ರಾವಿಡವರ್ಗಕ್ಕೆ ಸೇರಿದುದೆಂದು ಒಪ್ಪೋಣ. ಕನ್ನಡ ಮತ್ತು ತೆಲುಗಿನಲ್ಲಿ ಕೆಲವು ಮಾತುಗಳನ್ನು ಧಾತುಗಳನ್ನು ಕೆಲವು ಭಾಷಾ ಮರ್ಯಾದೆಗಳನ್ನು ಬಿಟ್ಟರೆ ಉಳಿದುದೆಲ್ಲ ಸಂಸ್ಕೃತವೇ.' ಇದಕ್ಕೆ ಅನಕೃ ಅವರ ಪ್ರತಿಕ್ರಿಯೆ ಹೀಗಿದೆ: 'ಕನ್ನಡ ಸಂಸ್ಕೃತದಿಂದ ಹುಟ್ಟಿತೋ, ದ್ರಾವಿಡಭಾಷೆಗಳಿಂದ ಹುಟ್ಟಿತೋ ಎಂಬುದು ವಿವಾದವಸ್ಥೆಯಲ್ಲಿಯೇ ಇದೆ. ತಮಿಳು ಸಂಸ್ಕೃತಗಳಿಗಿಂತಲೂ ಕನ್ನಡ ಪುರಾತನ ಭಾಷೆ ಎಂಬ ವಾದವೊಂದನ್ನು ರೆವರೆಂಡ್ ಫಾದರ್ ಹೆರಾಸ್ ರವರು ಆರಂಭಿಸಿದ್ದಾರೆ.' ಎಂದು ನೆನಪಿಸುತ್ತ 'ಪ್ರಗತಿಗಾಮಿಯಾದ ಎಲ್ಲ ಭಾಷೆ ಸಂಸ್ಕೃತಿಗಳೂ ಹೊರಭಾಷೆ, ಸಂಸ್ಕೃತಿಗಳ ಸತ್ವವನ್ನು ಹೀರಿಕೊಳ್ಳುತ್ತವೆ.'[೧೨]
ಎಂಬ ಭಾಷಾಶಾಸ್ತ್ರ ಹೇಳುವ ಭಾಷೆಯ ಬೆಳವಣಿಗೆ ಕುರಿತ ಪ್ರಮೇಯವನ್ನು ಮಂಡಿಸುತ್ತಾರೆ.

'ಇತ್ತೀಚೆಗೆ ಹಲವರು ಕನ್ನಡ ಭಾಷೆಯ ಮೇಲೆ ಸಂಸ್ಕೃತ ಪ್ರಭಾವ ವಿಶೇಷವಾಗಿ ಬಿದ್ದು ಕನ್ನಡವು ತನ್ನ ಸ್ವರೂಪವನ್ನು ಕಳೆದುಕೊಳ್ಳುವಂತಾಗಿದೆ. ಇದರಿಂದ ಕನ್ನಡದ ವ್ಯಕ್ತಿತ್ವವನ್ನು ಉಳಿಸಬೇಕು ಎಂಬುದಾಗಿ ವಾದಿಸತೊಡಗಿದ್ದಾರೆ. ಬರೇ ವಾದವಲ್ಲ. ಉದ್ದಿಶ್ಯಸಾಧನೆಗಾಗಿ ಹಲವು ಪ್ರಯತ್ನಗಳನ್ನಾರಂಭಿಸಿದ್ದಾರೆ. ಈ ಪ್ರಯತ್ನಗಳಲ್ಲಿ ಈಗ ಕನ್ನಡ ಭಾಷೆಯಲ್ಲಿ ಬಳಕೆಯಲ್ಲಿರುವ ಸಂಸ್ಕೃತ ಪದಗಳನ್ನು ಬಿಟ್ಟು ರೂಢಿಯಲ್ಲಿ ಇಲ್ಲದ ಕನ್ನಡ ಪದಗಳನ್ನೇ ಹುಡುಕಿ ಹುಡುಕಿ ಬಳಸುತ್ತಾ ಬರುವುದು, ಕನ್ನಡಕ್ಕೂ, ತಮಿಳಿಗೂ ನಿಕಟವಾದ ಸಂಬಂಧವುಂಟೆಂದು ಹೇಳಿ ತಮಿಳು ಪದಗಳನ್ನು ಉಪಯೋಗ ಮಾಡುವುದು ಕಂಡು ಬರುತ್ತದೆ. ಕನ್ನಡ ಭಾಷಾಭಿಮಾನವು ಸಂಸ್ಕೃತಭಾಷೆಯ ಕುರಿತ ದುರಭಿಮಾನದ ರೂಪವನ್ನು ತಾಳಬೇಕೆ? ಸಂಸ್ಕೃತದಿಂದ ಕನ್ನಡಕ್ಕೆ ಉಪಯೋಗವಾಗಿಲ್ಲವೇ? ಸಂಸ್ಕೃತಕ್ಕೆ ಬಹಿಷ್ಕಾರ ಹಾಕುವುದರಿಂದ ಕನ್ನಡಕ್ಕೆ ನಷ್ಟವೆಂಬುದನ್ನು ಕನ್ನಡಿಗರು ನೆನಪಿನಲ್ಲಿಡಬೇಕು. ಸಂಸ್ಕೃತ ಶಬ್ದಗಳನ್ನು ಸಂಸ್ಕೃತ, ವ್ಯಾಕರಣ, ಛಂದಸ್ಸು, ಅಲಂಕಾರ, ಸಂಸ್ಕೃತಿ ಇತ್ಯಾದಿಗಳನ್ನೆಲ್ಲ ಬಿಟ್ಟುಬಿಟ್ಟ ಮೇಲೆ ಕನ್ನಡದಲ್ಲಿ ಉಳಿಯುವುದಾದರೂ ಏನು?' ಎನ್ನುವುದು ತಿರುಮಲೆ ತಾತಾಚಾರ್ಯರ ಪ್ರಶ್ನೆ.

ಶರ್ಮರ ಪ್ರಶ್ನೆಗಳಿಗೆ ಸಾವಧಾನದಿಂದ ಪ್ರತಿಕ್ರಿಯಿಸುವ ಅನಕೃ ಅವರು ಕನ್ನಡ-ಸಂಸ್ಕೃತ ವಾದಗಳ ಚರಿತ್ರೆಯನ್ನು ನೆನಪಿಸುತ್ತ ೧೨ ಮತ್ತು ೧೩ನೇ ಶತಮಾನಗಳ ನಯಸೇನ, ಅಂಡಯ್ಯ,

ಕೇಶಿರಾಜ, ೧೯ನೇ ಶತಮಾನದ ಮುದ್ದಣ, ೨೦ನೇ ಶತಮಾನದ ಬಿ.ಎಂ.ಶ್ರೀ ಅವರು ಕನ್ನಡವನ್ನು ಸಂಸ್ಕೃತದ ಭಾರದಿಂದ ಮುಕ್ತಗೊಳಿಸಲು ಮಾಡಿದ ಪ್ರಯತ್ನಗಳನ್ನು ಉದ್ಧರಿಸುತ್ತಾರೆ. ಸಂಸ್ಕೃತಕ್ಕೆ ಹೋಲಿಸಿ ಕನ್ನಡದಲ್ಲಿ ಏನಿದೆ ಎಂದು ಹೀಗೆಳೆಯುವ ಶರ್ಮರ ವ್ಯಂಗ್ಯ ಅನಕೃ ಅವರನ್ನು ಕೆರಳಿಸುತ್ತದೆ. 'ಕನ್ನಡಕ್ಕೆ ಸಂಸ್ಕೃತ ಶಬ್ದಗಳನ್ನೇ ಸೇರಿಸಬೇಕೆಂಬ ಕಾಯಿದೆ ಏನಾದರೂ ಉಂಟೇನು? ಬೇರೆ ಭಾಷೆಗಳ ಶಬ್ದಗಳನ್ನು ಕನ್ನಡಕ್ಕೆ ತಂದು ಕೊಳ್ಳಬಾರದೆಂಬ ವಿಧಿ ನಿಷೇಧಗಳೇನಾದರೂ ಉಂಟೇನು? ಕಾಲಗತಿಯನ್ನುನುಸರಿಸಿ ಬೆಳೆಯುತ್ತಿರುವ ಕನ್ನಡ, ಸಂಸ್ಕೃತ, ತಮಿಳು ಇಂಗ್ಲಿಶ್ ಭಾಷೆಗಳೆಂಬ ಶಬ್ದಗಳನ್ನು ಎತ್ತುಕೊಂಡು ತನ್ನ ಕೋಶಕ್ಕೆ ಸೇರಿಸಿಕೊಳ್ಳುತ್ತದೆ.'[೧೩] ಎಂದು ಖಾರವಾಗಿ ಉತ್ತರಿಸುತ್ತಾರೆ.

ತಿರುಮಲೆ ತಾತಾಚಾರ್ಯರ ಮಾತುಗಳಲ್ಲಿ ಕಾಣುವುದು ಸಂಸ್ಕೃತ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತದೆ ಎಂಬ ಆತಂಕ. ಕನ್ನಡದಲ್ಲಿರುವುದೆಲ್ಲ ಸಂಸ್ಕೃತದಿಂದ ಬಂದಿದ್ದು ಎನ್ನುವ ತಿಳುವಳಿಕೆ. ಕನ್ನಡ ಮತ್ತು ತಮಿಳು ಕೆಳಸ್ಥರದ ಭಾಷೆ ಎಂಬ ನಿಲುವು. ಬಿ.ಎಂ.ಶ್ರೀ ಅವರು "ಅಶ್ವತ್ಥಾಮನ್" ನಾಟಕಾನಂತರ ಕನ್ನಡ ಮತ್ತು ತಮಿಳಿಗೂ ಬಂದಿರುವ ಬಾಂಧವ್ಯವನ್ನು ಹೇಳಲಾರಂಭಿಸಿದ ಮೇಲೆ ಇದು ಸಂಸ್ಕೃತದ ಅನುಯಾಯಿಗಳಿಗೆ ಸೃಷ್ಟಿಸಿದ ಆತಂಕವೂ ಇಲ್ಲಿದೆ. ಕನ್ನಡ–ಸಂಸ್ಕೃತದ ಸಂಬಂಧದ ಚರ್ಚೆ–ವಾಗ್ವಾದಗಳಿಗೂ ಮೂಲವಾದ ಭಾಷಿಕನೆಲೆ ಮತ್ತು ವರ್ಗನೆಲೆ ಕುರಿತು ಚಿಂತಿಸಬೇಕು. ತಿರುಮಲೆ ತಾತಾಚಾರ್ಯ ಶರ್ಮ ವರ್ಗನೆಲೆಯಲ್ಲಿ ಚಿಂತಿಸುತ್ತಿದ್ದರೆ ಬಿ.ಎಂ.ಶ್ರೀ. ಭಾಷಿಕ ನೆಲೆಯಲ್ಲಿ ಚಿಂತಿಸುತ್ತಿದ್ದಾರೆ. ಇಲ್ಲಿ ಅ.ನ.ಕೃ ಅವರು ಬಿ.ಎಂ.ಶ್ರೀ ಅವರನ್ನು ಅನುಮೋದಿಸುತ್ತಿರುವುದು ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಭಾಷಿಕ ನೆಲೆಯದ್ದು ಎನ್ನುವುದನ್ನು ಖಚಿತಪಡಿಸುತ್ತಿವೆ.

ಬಿ.ಎಂ.ಶ್ರೀ ಅವರ ಹಾದಿಯಲ್ಲಿ ಸಾಗುತ್ತ ಈಗ ಕನ್ನಡಕ್ಕೆ ಸಂಸ್ಕೃತದಿಂದ ಮುಕ್ತವಾದ 'ಹೊಸ ಬರಹ'ವನ್ನು ರೂಪಿಸುತ್ತಿರುವ ಡಿ.ಎನ್ ಶಂಕರ ಭಟ್ಟರ ಪ್ರಯತ್ನಕ್ಕೆ ಅ.ನ.ಕೃ ಅವರ ಸಹಮತವಿದೆ. 'ಪಟ್ಟಣಗಳ ನಾಗರಿಕತೆ ಬೆಳೆದು ಭಾಷೆಯ ಬುಡವನ್ನೇ ನಾವು ಮರೆಯುತ್ತಿದ್ದೇವೆಂಬುದು ನಿರ್ವಿವಾದ. ಕಾಡುಗಳಲ್ಲಿ, ಹಳ್ಳಿಗಳಲ್ಲಿ ವಾಸಿಸುತ್ತಾ, ಬೇರೆ ನಾಗರಿಕತೆ, ಭಾಷೆ ಪರಿಚಯವಿಲ್ಲದ ಕನ್ನಡ ನಾಡವರು ಹಲವರಲ್ಲಿ ಕನ್ನಡದ ಅಪೂರ್ವ ಶಬ್ದ ಭಂಡಾರವಿದೆ. ಅವುಗಳ ಅರಿವಿಲ್ಲದೆ ನಾವು ಬೇರೆ ಭಾಷೆಯ ಶಬ್ದಗಳನ್ನು ತಂದುಕೊಂಡು ಕನ್ನಡದ ನುಡಿಜಾಡನ್ನೇ ಬಿಡುತ್ತಿದ್ದೇವೆ. ರೂಢಿಯಲ್ಲಿರುವ ಕನ್ನಡ ಶಬ್ದಗಳನ್ನು ಉಪಯೋಗಿಸಬೇಕಾದುದು ರೂಢಿ ತಪ್ಪಿರುವ ಕನ್ನಡ ಶಬ್ದಗಳನ್ನು ಮತ್ತೆ ಉಪಯೋಗಕ್ಕೆ ತಂದುಕೊಳ್ಳುವುದು ನಮ್ಮ ಕರ್ತವ್ಯ' ಎಂಬ ಅವರ ಮಾತುಗಳಲ್ಲಿ ಇದು ಸ್ಪಷ್ಟವಾಗಿವೆ.

೫.೨.೬ ಪ್ರಜಾಪ್ರಭುತ್ವ ವ್ಯವಸ್ಥೆ ಕುರಿತ ಕಟಿಬದ್ಧತೆ

ಏಕೀಕರಣ ಚಳುವಳಿಯಲ್ಲಿ ಕನ್ನಡ ಅಸ್ಮಿತೆಯ ಮೂಲಭೂತವಾದಿ ಮತ್ತು ಜನಪ್ರಿಯ ನೆಲೆಗಳೆರೆಡೂ ಕ್ರಿಯಾಶೀಲವಾಗಿದ್ದವು. ಸ್ವಾತಂತ್ರ್ಯ ಚಳುವಳಿ ಮತ್ತು ಏಕೀಕರಣ ಚಳುವಳಿ ಏಕಕಾಲದಲ್ಲಿ ನಡೆಯುತ್ತಿದ್ದರೂ ಮೂಲಭೂತವಾದಿ ನೆಲೆಗೆ ಕರ್ನಾಟಕ ಏಕೀಕರಣ ಮತ್ತು ಪ್ರಜಾಪ್ರಭುತ್ವ ಎರಡನ್ನೂ ಒಂದೇ ಎಂದು ಗ್ರಹಿಸುವ ಕೊರತೆಯಿತ್ತು. ಅದು ಕರ್ನಾಟಕವನ್ನು ಆಳಿದ ಅರಸರನ್ನು ಕೊಂಡಾಡುತ್ತಿದ್ದಂತೆ ವರ್ತಮಾನದಲ್ಲಿ ಆಳುತ್ತಿದ್ದ ಅರಸರನ್ನೂ ಕೊಂಡಾಡುತ್ತಿತ್ತು. ಆದರೆ ಜನಪ್ರಿಯ ನೆಲೆ ಏಕೀಕರಣ ಮತ್ತು ಪ್ರಜಾಪ್ರಭುತ್ವವನ್ನೂ ಅಖಂಡವಾಗಿ ಗ್ರಹಿಸಿತ್ತು. ಮೈಸೂರು ಅರಸರ ಬಗ್ಗೆ ಆಲೂರು ಮತ್ತು ಅ.ನ.ಕೃ ಅವರು ಹೊಂದಿದ್ದ ವಿಭಿನ್ನ ದೃಷ್ಟಿಕೋನಗಳೇ ಇದಕ್ಕೆ ಸಾಕ್ಷಿ. ನಿದರ್ಶನವಾಗಿ ಆಲೂರರು ಮೈಸೂರು ಮಹಾರಾಜರಿಗೆ ಬರೆದ ಒಂದು ಪತ್ರದಲ್ಲಿ 'ಇಡೀ ಕರ್ನಾಟಕಕ್ಕೇನೆ ಅವರನ್ನು ಅರಸರನ್ನಾಗಿ ಮಾಡುವ' ಬಯಕೆಯನ್ನು ವ್ಯಕ್ತಪಡಿಸಿದ್ದನ್ನು ಗಮನಿಸಬಹುದು. ಇದಕ್ಕೆ ವ್ಯತಿರಿಕ್ತವಾಗಿ ಅನಕೃ ಅವರು ರಾಜಸತ್ತೆಗೆ ಪ್ರಬಲ ವಿರೋಧವನ್ನು ವ್ಯಕ್ತಪಡಿಸುತ್ತಾರೆ. 'ಸಾಮ್ರಾಜ್ಯವಾದಿಗಳ ಕಪಿಮುಷ್ಟಿಗಿಂತ ಕನ್ನಡಿಗರ ಭಯಭೀತಿ, ನೈಚ್ಯಾನುಸಂಧಾನಗಳೇ ಪ್ರಗತಿಗೆ ಕಂಟಕವಾಗಿರುವುದು. ಇಂದಿನ ತಮ್ಮ ಭದ್ರತೆಗಾಗಿ ನಾಳಿನ ಹಿತವನ್ನು ಅವರು ನಿರ್ದಾಕ್ಷಿಣ್ಯವಾಗಿ ನಿರಾಕರಿಸಲು ಹಿಂದೆಗೆಯುವುದಿಲ್ಲ. ಇಂತಹವರಲ್ಲಿ ಮೈಸೂರಿನ ರಾಜಭಕ್ತರ ತಂಡವೊಂದು. ಕರ್ನಾಟಕ ಏಕೀಕರಣವಾದರೆ ಶ್ರೀಮನ್ಮಹಾರಾಜರವರ ಸ್ವಾಮ್ಯಕ್ಕೆ ಕುಂದುಂಟಾಗುವುದೆಂಬ ಕೂಗು.' ಎಂಬ ಅವರ ಮಾತುಗಳಲ್ಲಿ ರಾಜಸತ್ತೆಗೆ ವಿರೋಧವಲ್ಲದೆ ರಾಜಸತ್ತೆಯನ್ನು ಬೆಂಬಲಿಸುವ ಕನ್ನಡಿಗರ ಬಗೆಗಿನ ವಿರೋಧವನ್ನೂ ಕಾಣಬಹುದು.

ಪ್ರಜಾಪ್ರಭುತ್ವ ವ್ಯವಸ್ಥೆಗೂ ನಾಡಿನ ಪ್ರಗತಿಗೂ ಇರುವ ಸಂಬಂಧದ ಸ್ಪಷ್ಟತೆ ಅನಕೃ ಅವರಿಗಿತ್ತು. 'ಕರ್ನಾಟಕದಲ್ಲಿ ಅನೇಕ ಆಶ್ರಿತ ಸಂಸ್ಥಾನಗಳಿವೆ. ಕೆಲವು ಮೈಸೂರು, ಹೈದರಾಬಾದು, ಕೊಲ್ಹಾಪುರಗಳಂತೆ ದೊಡ್ಡವು. ಕೆಲವು ಈಚಲಕರಂಜಿ, ಸಂಡೂರು, ಕುರಂದವಾಡಗಳಂತೆ ಅತಿ ಸಣ್ಣವು. ಈ ಸಣ್ಣ ಸಂಸ್ಥಾನಗಳನ್ನು ದೊಡ್ಡ ಸಂಸ್ಥಾನಗಳೊಂದಿಗೆ ಸೇರಿಸುವ ಪ್ರಯತ್ನ ಆರಂಭವಾಗಿದೆ. ಮುಂದೆ ಕೆಲವೇ ಸಂಸ್ಥಾನಗಳು ಕರ್ನಾಟಕದಲ್ಲಿ ಉಳಿಯಬಹುದೆಂದು ಭಾವಿಸೋಣ. ಇವುಗಳ ಭವಿಷ್ಯವೇನು? ಬ್ರಿಟಿಷ್ ಕರ್ನಾಟಕ ಸರ್ವತೋಮುಖವಾದ ಪ್ರಗತಿಯನ್ನೈದುತ್ತಿದ್ದರೆ ಆಶ್ರಿತ ಸಂಸ್ಥಾನಗಳು ಅದೇ ಮಧ್ಯಕಾಲದ ರಾಜ್ಯಶಾಸನದಲ್ಲಿ ಮಗ್ನವಾಗಿರಬೇಕೇ? ಆಶ್ರಿತ ಸಂಸ್ಥಾನಗಳ ಪ್ರಜೆಗಳಿಗೆ ಮುಕ್ತಿಯೇ ಇಲ್ಲವೇ?'[೧೪] ಎಂಬ ಕಳಕಳಿ ರಾಜಸತ್ತೆಯ ವಿರೋಧಕ್ಕೆ ಕಾರಣವಾಗಿತ್ತು.

ಕರ್ನಾಟಕದ ಸಂಸ್ಥಾನಿಕರನ್ನು ಅದುವರೆಗೆ ಟೀಕಿಸುತ್ತಿದ್ದರೂ ರಾಜಕೀಯ ನಿಪುಣತೆಯಿಂದ ಸಂಯಮದಿಂದ ಮಾತನಾಡುತ್ತಿದ್ದ ಅನಕೃ ಅವರ ಭಾಷೆ ಭಾರತ ಬ್ರಿಟಿಷರಿಂದ ಸ್ವತಂತ್ರವಾಗುತ್ತಿದ್ದಂತೆ

ಹೆಚ್ಚು ಕಠೋರತೆ ಮತ್ತು ದಿಟ್ಟತೆಯನ್ನು ಪಡೆದವು. ೧೯೪೭ರಲ್ಲಿ ಸಂಸ್ಥಾನಿಕರ ಬಗ್ಗೆ ಅವರ ಮಾತುಗಳಲ್ಲಿ ಇದನ್ನು ಕಾಣಬಹುದು. 'ರೂಕ್ಷ ಸರ್ಕಾರವನ್ನು ರಚಿಸಿ, ಪ್ರಜೆಗಳನ್ನು ಕಾಡು ಮೃಗಗಳಂತೆ ಬೇಟೆಯಾಡುತ್ತಿರುವ ಉತ್ತರ ಕರ್ನಾಟಕ ಸಂಸ್ಥಾನಗಳ ಅರಸರ ಅಧಿಕಾರ ಭಾರತ ಇತಿಹಾಸದ ಒಂದು ರಕ್ತಪುಟ. ಜನತೆಯ ಹಿತದ ದೃಷ್ಟಿಯಿಂದ ಈ ಚಂದನದ ಗೊಂಬೆಗಳನ್ನು ಕಪಾಟು ಸೇರಿಸದ ಹೊರತು ಗತ್ಯಂತರವಿಲ್ಲ. ಹತ್ತು ಜನ ಸುಖಲೋಲುಪ ಅರಸರ ಹಿತಕ್ಕೆ ಲಕ್ಷಾಂತರ ದೀನ ಜನರನ್ನು ಬಲಿಗೊಡುವುದು ತರವಲ್ಲ. ಹಿಂದೆ ಪಾಳೆಯಗಾರರಿಗೆ ಮಾಸಾಶನ ಕೊಟ್ಟು ಮನೆಗೆ ಕಳಿಸಿದಂತೆ ಈ ಸಂಸ್ಥಾನಿಕರನ್ನು ಅಧಿಕಾರದಿಂದ ನಿವೃತ್ತಿ ಮಾಡಿ ಉತ್ತರ ಕರ್ನಾಟಕ ಸಂಸ್ಥಾನಗಳನ್ನು ಕರ್ನಾಟಕ ಪ್ರಾಂತ್ಯದೊಳಗೆ ಸೇರಿಸಿಕೊಳ್ಳಬೇಕು.' ಕರ್ನಾಟಕ ಪ್ರಾಂತ್ಯದಲ್ಲಿ ಸಂಪೂರ್ಣವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸುವ ಹಂಬಲ ಈ ಕಠೋರ ಮಾತುಗಳಲ್ಲಿ ಅಂತರ್ಗತವಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆ ಎಂದರೆ ಜನರು ರಾಜಕೀಯ ಅಧಿಕಾರ ಪಡೆಯುವುದು ಎಂಬ ಸೀಮಿತ ವ್ಯಾಖ್ಯಾನವೂ ಇದೆ. ಇಲ್ಲಿ ರಾಜಸತ್ತೆಯ ಕಾಲದಲ್ಲಿ ಯಾವ ಬಗೆಯ ಸಾಮಾಜಿಕ ವ್ಯವಸ್ಥೆಗಳಿದ್ದವೋ ಬದಲಾದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ಅವು ಅದೇ ಬಗೆಯಲ್ಲಿ ಮುಂದುವರೆಯುತ್ತವೆ. ಈ ವ್ಯಾಖ್ಯಾನದ ವಕ್ತಾರರಾದ ಆಲೂರರು ಗಾಂಧಿಯವರ ಸುಧಾರಣಾ ಆಂದೋಲನವನ್ನು ಒಪ್ಪದೆ ಕಾಂಗ್ರೆಸ್ಸಿನಿಂದಲೇ ಹೊರಬರುತ್ತಾರೆ. ಈ ವಿಚಾರದಲ್ಲಿ ಅನಕೃ ಗಾಂಧಿ ಚಿಂತನೆಗಳ ಪರವಾಗಿದ್ದವರು. 'ಎಂದಿನವರೆಗೆ ಭಾರತ ಹಾಗೂ ಹಿಂದೂ ಸಮಾಜ ಅಸ್ಪೃಶ್ಯತೆಯನ್ನು ಮಾನಿಸುವುದೋ ಅಂದಿನವರೆಗೆ ಪೂರ್ಣ ಸ್ವರಾಜ್ಯ ಕನಸಿನ ಗಂಟು. ಹಿಂದೂಧರ್ಮ ಉಳಿಯಬೇಕಾದರೆ ಅಸ್ಪೃಶ್ಯತೆ ಬುಡಸಹಿತ ನಾಶವಾಗಬೇಕು' ಎಂಬ ಖಚಿತ ನಿಲುವು ಅವರದು. ಮಹಿಳೆಯರ ವಿಚಾರದಲ್ಲಿ ಗಾಂಧಿಗಿಂತ ಒಂದು ಹೆಜ್ಜೆ ಮುಂದೆ ಹೋಗಿಯೇ ಅ.ನ.ಕೃ ಚಿಂತಿಸುತ್ತಾರೆ. 'ಇಂದಿನ-ಹಾಗೂ ನಾಳೆಯ ಜಗತ್ತಿನಲ್ಲಿ ರಾಮಾಯಣ, ಭಾರತ ಕಾಲಗಳನ್ನು ಅನುಕರಿಸುವುದು ಸಾಧ್ಯವಿಲ್ಲ. ಸ್ತ್ರೀಯರ ಸಮಸ್ಯೆಗಳು ಪರಿಸ್ಥಿತಿಗನುಗುಣವಾಗಿ ಚಿತ್ರ ವಿಚಿತ್ರ ಸ್ವರೂಪಗಳನ್ನು ತಳೆಯುತ್ತಿವೆ. ಸ್ತ್ರೀಯರಲ್ಲಿ ಸಂತಾನಸಂಯಮ ಸಾಧನೋಪಾಯಗಳ ಶಾಸ್ತ್ರೀಯ ಪ್ರಸಾರವಾಗಬೇಕು. ಕಾಮ ವಿಜ್ಞಾನ ಹೆಣ್ಣುಮಕ್ಕಳ ಶಾಲೆಗಳಲ್ಲಿ ಪಠ್ಯವಾಗಬೇಕು. ಸ್ತ್ರೀಯರಿಗೆ ದಾಂಪತ್ಯ ವಿಚ್ಛೇದನದ ಹಕ್ಕು ಇರಬೇಕು. ಹೆಣ್ಣು ಮಕ್ಕಳ ವಿವಾಹ ಸಮ್ಮತಿ ವಯಸ್ಸು ೧೮ಕ್ಕೇರಬೇಕು' ಎಂಬ ಅವರ ಮಾತುಗಳಲ್ಲಿ ಸ್ತ್ರೀಯರ ಕುರಿತ ಕಳಕಳಿ ಕಾಣಬಹುದು.

ಜನಪ್ರಿಯ ನೆಲೆಯ ನಾಯಕರು ಯಾವಾಗಲೂ ಭಾವುಕ ಸಂಗತಿಗಳತ್ತಲೇ ಗಮನ ಕೊಡುವುದು ಸಾಮಾನ್ಯವಾದುದು. ಒಂದು ವರ್ಗದ ವಿರೋಧಕ್ಕೆ ಕಾರಣವಾಗುವ ಜಾತಿವ್ಯವಸ್ಥೆ, ಲಿಂಗ ತಾರತಮ್ಯ, ಕೋಮುವಾದದಂತಹ ಸಮಾಜವನ್ನು ನಿತ್ಯ ಬೇಗುದಿಯಲ್ಲಿಡುವ ಸಂಗತಿಗಳ

ಬಗ್ಗೆ ಅವರು ಜಾಣ ಮೌನವಹಿಸುವುದೇ ಹೆಚ್ಚು. ಆದರೆ ಅ.ನ.ಕೃ ತಮ್ಮ 'ಜನಪ್ರಿಯ ನಾಯಕ'ನ ಇಮೇಜನ್ನು ಲೆಖ್ಖಿಸದೆ ತಮ್ಮ ಚಿಂತನೆಗಳನ್ನು ಮಂಡಿಸಿರುವುದು ಜನಪ್ರಿಯ ನೆಲೆಯ ಕನ್ನಡ ಅಸ್ಮಿತೆಗಿರುವ ಚೌಕಟ್ಟನ್ನು ಮೀರುವ ಪ್ರಯತ್ನದಂತೆ ತೋರುತ್ತದೆ.

೫.೨.೭ ಜಾತ್ಯತೀತ ನೆಲೆಯ ಚಿಂತನೆಗಳು

ಅನಕೃ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಜನಪ್ರಿಯ ನೆಲೆಯದ್ದಾದರೂ ಅವು ಬಹುಸಂಖ್ಯಾತರನ್ನು ಓಲೈಸಲು ಅಲ್ಪಸಂಖ್ಯಾತರನ್ನು ಕಡೆಗಣಿಸುವುದಿಲ್ಲ ಅಥವಾ ಕನ್ನಡಕ್ಕೆ ಅವರ ಕೊಡುಗೆಯನ್ನು ಮರೆಮಾಚುವುದಿಲ್ಲ. ಕರ್ನಾಟಕದ ವೈಭವದ ಚರಿತ್ರೆಯನ್ನು ನೆನೆಸಿಕೊಳ್ಳುವಾಗ ಅವರಲ್ಲಿ ಹಂಪೆ ಮತ್ತು ಶ್ರೀರಂಗಪಟ್ಟಣಗಳಲ್ಲಿ ತರತಮಗಳಿಲ್ಲ. ಅವರ ಭಾಷಣಗಳಲ್ಲಿ ಕನ್ನಡದ ಸಂಶೋಧಕರು ಉಲ್ಲೇಖಿಸದಿರುವ ಕನ್ನಡದ ವಿವಿಧ ಕ್ಷೇತ್ರಗಳಿಗೆ ನೀಡಿದ ಕೊಡುಗೆಯ ಅನನ್ಯ ಸ್ವರೂಪ ಮತ್ತು ಸತ್ವ ತುಂಬಿದ ನೂರಾರು ಅಲ್ಪಸಂಖ್ಯಾತ ಸಮುದಾಯದ ಹೆಸರುಗಳಿವೆ. ಕರ್ನಾಟಕದಲ್ಲಿ ನಡೆದ ಧಾರ್ಮಿಕ ಕೊಳುಕೊಡುವಿಕೆಯ ನಿದರ್ಶನಗಳಿವೆ. ಅ.ನ.ಕೃ ಅವರು ಯಾವುದೋ ಸಂದರ್ಭದಲ್ಲಿ ನಿರ್ದಿಷ್ಟ ಉದ್ದೇಶವನ್ನಿಟ್ಟುಕೊಂಡು ಈ ಪ್ರಸ್ತಾಪವನ್ನು ಮಾಡುವುದಿಲ್ಲ ಎನ್ನುವುದು ಬಹಳ ಮುಖ್ಯವಾದ ಸಂಗತಿ. ಅವರ ವಿಚಾರ ಸಾಹಿತ್ಯದ ಉದ್ದಕ್ಕೂ ಇಂತಹ ಪ್ರಸ್ತಾಪಗಳು ಕಂಡುಬರುತ್ತವೆ.

ಅ.ನ.ಕೃ ಅವರ ಕೆಲವು ಮಾತುಗಳು ಹೀಗಿವೆ: 'ಕರ್ನಾಟಕಕ್ಕೂ ಮುಸಲ್ಮಾನರಿಗೂ ೧೪ನೇ ಶತಮಾನದಿಂದ ಸಂಬಂಧ ಬೆಳೆದುಬಂದಿದೆ. ಅವರು ಕರ್ನಾಟಕಕ್ಕೆ ಬಂದು ಕೊಳ್ಳೆ ಹೊಡೆದು ಹೊರಟು ಹೋಗದೆ ಇಲ್ಲಿಯೇ ನಿಂತು ರಾಜ್ಯಗಳನ್ನು ಕಟ್ಟಿ ವೈಭವದಿಂದ ಆಳಿದರು. ಶಿಲ್ಪ, ಚಿತ್ರ, ಸಂಗೀತ ಕಲೆಗಳಲ್ಲಿ ತಮ್ಮ ಸಂಪ್ರದಾಯದ ಪರಿಚಯವನ್ನು ಮಾಡಿಕೊಟ್ಟ ಗೋಲ್ಕಂಡ, ಬಿಜಾಪುರ, ಶ್ರೀರಂಗಪಟ್ಟಣಗಳಲ್ಲಿ ಸುಂದರ ಶಿಲ್ಪಸೌಧಗಳನ್ನು ರಚಿಸಿದರು. ಕಟುಧರ್ಮದ ಸುನ್ನಿಪಂಗಡಕ್ಕೆ ಸೇರಿದವರಾಗಿದ್ದರೂ ಟಿಪ್ಪುಸುಲ್ತಾನನು ಶೃಂಗೇರಿ ಜಗದ್ಗುರುಗಳೊಂದಿಗೆ ಮಧುರ ಮೈತ್ರಿಯನ್ನಿಟ್ಟುಕೊಂಡು ಅವರನ್ನು ಗುರುಗಳಂತೆ ಭಾವಿಸುತ್ತಿದ್ದನು. ಬಾಬಾಬುಡನ್ ಬೆಟ್ಟದ ಮೇಲಿರುವ ದತ್ತಾತ್ರೇಯ ಪೀಠ ಹಿಂದೂ-ಮುಸಲ್ಮಾನರ ಭಕ್ತಿ ಗೌರವಗಳ ಕುರುಹಾಗಿದೆ. ಕನ್ನಡ ಸಂಸ್ಕೃತಿಗೆ ಮುಸಲ್ಮಾನರು ನಾನಾರೀತಿಯಲ್ಲಿ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಶಿಶುನಾಳ ಶರೀಫ ಸಾಹೇಬರು ತಮ್ಮ ಅಧ್ಯಾತ್ಮಶಕ್ತಿಯಿಂದ ಹಿಂದೂ ಮುಸಲ್ಮಾನರ ಧಾರ್ಮಿಕ ತತ್ವಗಳನ್ನು ಒಂದುಗೂಡಿಸಿದರು. ತಮ್ಮ ಅಮರವಾದ ಹಾಡುಗಬ್ಬಗಳಿಂದ, ಈಶ್ವರನ ಏಕತ್ವವನ್ನೂ, 'ಅಲ್ಲಾ-ಅನಂತ'ರ ಏಕತ್ವವನ್ನೂ, ಹಿಂದೂ ಮುಸಲ್ಮಾನರ ಬಂಧುತ್ವವನ್ನೂ ಸ್ಥಾಪಿಸಿದರು'

ಕರ್ನಾಟಕದಲ್ಲಿ ಹಿಂದೂ–ಮುಸ್ಲೀಮರ ಸಹಜ ಬಾಂಧವ್ಯ ಮತ್ತು ಪ್ರೇಮಗಳ ಬಗ್ಗೆಯೂ ಅ.ನ.ಕೃ ಬೆಳಕು ಚೆಲ್ಲುತ್ತಾರೆ. 'ಹಿಂದೂಗಳಲ್ಲಿ ಪಂಡಿತ ತಾರಾನಾಥರು ಸಾಂಸ್ಕೃತಿಕವಾಗಿ ಹಿಂದೂ ಮುಸಲ್ಮಾನರಲ್ಲಿ ಬಾಂಧವ್ಯ, ಪ್ರೇಮಗಳು ಮೂಡಲು ಕಾರಣರಾಗಿದ್ದಾರೆ. ಡಿ.ವಿ.ಜಿ ಉಮರ್ ಖಯ್ಯಾಂನ 'ರುಭಾಯಿ–ಯತ್' ಕಾವ್ಯವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಗೋವಿಂದ ಪೈಗಳೂ ಇದೇ ಕಾವ್ಯವನ್ನು ಕನ್ನಡಕ್ಕೆ ತಂದಿದ್ದಾರೆ. ಸಿ.ಕೆ.ವೆಂಕಟರಾಮಯ್ಯ ಹಜರತ್ ಮಹಮದ್ ಪೈಗಂಬರರ ಜೀವನ ಚರಿತ್ರೆಯನ್ನು ಉದಾತ್ತ ರೀತಿಯಲ್ಲಿ ಬರೆದಿದ್ದಾರೆ.'[೧೫] ಹಿಂದೂ–ಮುಸ್ಲೀಮರ ಬಾಂಧವ್ಯವನ್ನು ಉಲ್ಲೇಖಿಸುವ ಹಿಂದೆ ಅ.ನ.ಕೃ ಅವರಿಗೆ ಇರುವ ಉದ್ದೇಶ ವರ್ತಮಾನ ಮತ್ತು ಭವಿಷ್ಯದಲ್ಲೂ ಈ ಬಾಂಧವ್ಯ ಮುಂದುವರೆದು ಅದರ ಲಾಭ ಕನ್ನಡಕ್ಕೆ, ಕರ್ನಾಟಕಕ್ಕೆ ದಕ್ಕಬೇಕು ಎನ್ನುವುದೇ ಆಗಿದೆ. ಆದ್ದರಿಂದಲೇ ಅವರು 'ಹಿಂದುಗಳು ಮಹಮದ್ ಪೈಗಂಬರರ ಜನ್ಮದಿನೋತ್ಸವವನ್ನು , ಮುಸಲ್ಮಾನರು ಕೃಷ್ಣ ಜಯಂತಿಯನ್ನು ಆಚರಿಸಬೇಕು. ಹಿಂದುಗಳು, ಮುಸಲ್ಮಾನರು ಧರ್ಮದ ಹೆಸರಿನಲ್ಲಿ ತಾವು ಬಿಮ್ಮನೆ ಬಿಗಿದಪ್ಪಿರುವ , ಮೂಢಭಾವನೆಗಳನ್ನು, ತಪ್ಪು ಅಭಿಪ್ರಾಯಗಳನ್ನೂ ದೂರ ಮಾಡಬೇಕು. ಕನ್ನಡನಾಡನ್ನೇ ತಮ್ಮ ಆರಾಧ್ಯ ದೈವವನ್ನಾಗಿ ಮಾಡಿಕೊಂಡು ಒಮ್ಮತದಿಂದ ವಿಶ್ವಧರ್ಮದ ಆರಾಧಕರಾಗಬೇಕು'[೧೬] ಎಂದು ಹಂಬಲಿಸುತ್ತಾರೆ. ಇದರ ಹಿನ್ನೆಲೆಯಲ್ಲಿರುವುದು 'ಕನ್ನಡನಾಡು ಎಲ್ಲ ದೃಷ್ಟಿಯಿಂದಲೂ ಒಂದಾಗಬೇಕು' ಎಂಬ ಅ.ನ.ಕೃ ಅವರ ಬಯಕೆ.

ಏಕೀಕರಣ ಚಳವಳಿಯೊಳಗಿದ್ದ ಮೂಲಭೂತವಾದಿ ನೆಲೆಯ ಕನ್ನಡ ಅಸ್ಮಿತೆಯ ಬಗ್ಗೆ ಅ.ನ.ಕೃ ಅವರಿಗೆ ಅರಿವಿದ್ದಂತೆ ತೋರುತ್ತದೆ. ಮೂಲಭೂತವಾದಿ ನೆಲೆಗೆ ಆಕರವನ್ನು ಒದಗಿಸುವ ಮತೀಯ ಹಿತಾಸಕ್ತಿಯ ಸಂಶೋಧನೆಗಳನ್ನು ವಿರೋಧಿಸುತ್ತಾರೆ. 'ಬೇರೊಂದು ಜಾತಿ, ಪಂಗಡ, ಮತದ ಮೇಲೆ ಮಾಡುವ ಇಲ್ಲಸಲ್ಲದ ಟೀಕೆಯೇ ಸಂಶೋಧನೆಯೆಂಬ ಹೆಸರಿನಲ್ಲಿ ಪ್ರಸಾರವಾಗುತ್ತಿದೆ. ಇಂತಹ ಸಂಶೋಧನೆ ನಿಂತುಹೋದರೂ ಕನ್ನಡ ನಾಡಿಗೆ ಏನೂ ನಷ್ಟವಿಲ್ಲ. ವಿದ್ಯೆಯ ಹೆಸರಿನಲ್ಲಿ ಸಮಾಜವನ್ನು, ದೇಶವನ್ನು ಒಡೆದು ಛಿದ್ರ ಛಿದ್ರ ಮಾಡುವ ಮನೋವೃತ್ತಿ ಹೋಗಬೇಕಾದರೆ ಪರಿಷತ್ತು ಅಧಿಕೃತ ರೀತಿಯಲ್ಲಿ ಸಂಶೋಧನಾ ಕಾರ್ಯವನ್ನು ಕೈಗೊಳ್ಳಬೇಕು ಮತ್ತು ವಿದ್ವನ್ಮಂಡಲಿಯಲ್ಲಿ ಸರಿಯಾದ ಮನೋವೃತ್ತಿ ಮಾಡಲು ತಕ್ಕ ಪ್ರಸಾರಕಾರ್ಯವನ್ನು ಕೈಗೊಳ್ಳಬೇಕು. ದ್ವೇಷಾಸೂಯೆಗಳನ್ನೂ, ಒಳಜಗಳವನ್ನೂ ಬಿತ್ತುವಂತಹ ಸಂಶೋಧಕ ಕೃತಿ ಹೊರಬಿದ್ದರೆ ಅದನ್ನು ಅಧಿಕಾರವಾಣಿಯಿಂದ ಪರಿಷತ್ತು ಖಂಡಿಸಬೇಕು'[೧೭] ಎಂದು ಕರೆ ಕೊಡುತ್ತಾರೆ.

ಉನ್ನತ ಶೈಕ್ಷಣಿಕ ವಲಯದಲ್ಲಿ ಜಾತಿ–ಕೋಮುಗಳ ವಿಷ ಹರಡುತ್ತಿರುವುದನ್ನು ಅ.ನ.ಕೃ ಗಮನಿಸಿ 'ನಮ್ಮ ಜನಜೀವನದಲ್ಲಿ ಮಾತ್ರವಲ್ಲದೆ ವಿಶ್ವವಿದ್ಯಾಲಯಗಳೇ ಮೊದಲಾದ ಶಾರದಾ ಮಂದಿರಗಳಲ್ಲಿಯೂ ಕೋಮುವಾರು ಭೂತವು ತಲೆಹಾಕಿದೆ. ಇದರ ಪರಿಹಾರಕ್ಕೆ ಮನಸ್ಸು ಕೊಡುವುದು ಸಾಹಿತಿಯ ಧರ್ಮವಲ್ಲವೇನು? ಜೀವನವು ಸರ್ವತೋಮುಖವಾಗಿ

ಸುಂದರವಾಗಬೇಕೆಂದು ಬಯಸುವ ಸಾಹಿತಿಯು ಈ ವ್ಯಾಧಿಯನ್ನು ನಿವಾರಿಸದ ಹೊರತು ತನ್ನ ಆಶಯವನ್ನು ಹೇಗೆ ಸಾಧಿಸಬಲ್ಲ?' ಎಂದು ಸಾಹಿತ್ಯದ ಪ್ರಧಾನ ಕಾಳಜಿ ಕೋಮುವಾದವನ್ನು ಅಳಿಸಿ ಹಾಕುವುದಾಗಿದೆ ಎಂದು ಪ್ರತಿಪಾದಿಸುತ್ತಾರೆ.

ಕನ್ನಡ ಅಸ್ಮಿತೆಯ ಜನಪ್ರಿಯ ನೆಲೆಯ ಚಿಂತನೆಗಳ ಗಂಭೀರ ತೊಡಕು ಇರುವುದು ಧಾರ್ಮಿಕತೆ ಮತ್ತು ಮತೀಯತೆಯ ನಡುವಿನ ವ್ಯತ್ಯಾಸವನ್ನು ಅರಿಯುವಲ್ಲಿ ತೋರದಿರುವ ಎಚ್ಚರ. ಆದರೆ ಅ.ನ.ಕೃ ಅವರಿಗೆ ಈ ಬಗ್ಗೆ ಸ್ಪಷ್ಟತೆಯಿದ್ದು ತಮ್ಮ ಹೋರಾಟದ ಉದ್ದಕ್ಕೂ ಅವರು ಕನ್ನಡ ಅಸ್ಮಿತೆಗೆ ಮತೀಯತೆಯ ಸೋಂಕು ತಗಲುವುದನ್ನು ತಪ್ಪಿಸಲು ಹೆಣಗಿದ್ದಾರೆ.

೫.೨.೮ ಜನಪ್ರಿಯ ನೆಲೆಯಿಂದ ಸಾಂಸ್ಕೃತಿಕ ನೆಲೆಗೆ ವಿಸ್ತರಣೆ ಪಡೆಯುವ ಚಿಂತನೆಗಳು

ಸಂಗೀತ ಮತ್ತು ರಂಗಭೂಮಿ ಕ್ಷೇತ್ರದಲ್ಲಿ ಕರ್ನಾಟಕದ ಗುರುತನ್ನು ಸ್ಪಷ್ಟವಾಗಿ ಮೂಡಿಸಲು ಅ.ನ.ಕೃ ನಿರಂತರ ಪ್ರಯತ್ನಿಸಿದರು. ಕನ್ನಡ ಸಂಗೀತ ಕನ್ನಡ ಭಾಷೆಯಲ್ಲಿಯೇ ಆಗಬೇಕು, ಕನ್ನಡ ನಾಡಿನಾದ್ಯಂತ ಈ ಸಂಗೀತವೇ ಪ್ರಸಾರದಲ್ಲಿರಬೇಕು, ಕರ್ನಾಟಕದಲ್ಲಿ ರಂಗಭೂಮಿ ಪುನರುದ್ಧಾರವಾಗಬೇಕೆಂಬುದು ಅ.ನ.ಕೃ ಕಾಳಜಿಯಾಗಿತ್ತು.

ಸಂಗೀತ ಕ್ಷೇತ್ರದಲ್ಲಿ ಕನ್ನಡ ಸಂಗೀತಗಾರರಿಗೆ ಪ್ರಾಮುಖ್ಯತೆ ಸಿಗಬೇಕೆಂದು ಅವರು ಹೋರಾಟಗಳನ್ನು ಹಮ್ಮಿಕೊಂಡಿದ್ದು ವಿಶಿಷ್ಟವಾಗಿದೆ. 'ಕನ್ನಡನಾಡಿನ ದೃಷ್ಟಿಯಲ್ಲಿ ಮಾತ್ರವೇ ಅಲ್ಲ– ಭಾರತೀಯ ಸಂಸ್ಕೃತಿಯ ದೃಷ್ಟಿಯಿಂದಲೂ ಕನ್ನಡ ಕೀರ್ತನೆಗಳು ಪ್ರಸಾರಕ್ಕೆ ಬರಬೇಕು. ಕನ್ನಡ ನಾಡಿನ ಸಾಹಿತಿಗಳು, ಸಂಗೀತಗಾರರು, ಸಂಗೀತ ಸಂಸ್ಥೆಗಳು ಸಂಘಟಿತರಾಗಿ ಕನ್ನಡ ಸಂಗೀತ ಸಮ್ಮೇಳನ ಕರೆಯಬೇಕು. ಕನ್ನಡ ಸಂಗೀತಜ್ಞರ ಒಂದು ಪರಿಷತ್ತನ್ನು ಸ್ಥಾಪಿಸಬೇಕು. ಕನ್ನಡ ಜನತೆಯ ಅಭಿರುಚಿಯನ್ನು ಸುಧಾರಿಸುವ ಕನ್ನಡ ಕೀರ್ತನೆಗಳನ್ನು ಊರು ಊರು ಹಳ್ಳಿ ಹಳ್ಳಿಗಳಲ್ಲಿ ಹಾಡಿ ಕನ್ನಡದ ದೀಧಿತಿಯನ್ನು ಬೆಳಗಿಸಬೇಕು' ಎನ್ನುವುದು ಅವರ ಹಂಬಲವಾಗಿತ್ತು.

ಕರ್ನಾಟಕದ ರಾಜಧಾನಿಯಲ್ಲಿ ಸನ್ಮಾನಿತರಾಗಿ ಸಂಗೀತ ಕಛೇರಿಗಳನ್ನು ನಡೆಸುವ ಅವಕಾಶ ಕನ್ನಡ ಸಂಗೀತಗಾರರಿಗೆ ಸಿಗಬೇಕೆಂದು, ಅನ್ಯ ಭಾಷೆಯ ಸಂಗೀತಗಾರರು ತಮ್ಮ ಕಛೇರಿಗಳಲ್ಲಿ ಕನ್ನಡ ಕೃತಿಗಳನ್ನು ಪ್ರಸ್ತುತಪಡಿಸಬೇಕು ಎಂಬ ಆಗ್ರಹಗಳನ್ನಿಟ್ಟುಕೊಂಡು ಅ.ನ.ಕೃ ಅವರು ಬೇರೆ ಭಾಷೆಯ ಸಂಗೀತಗಾರರೇ ತುಂಬಿರುತ್ತಿದ್ದ ಬೆಂಗಳೂರಿನ ಕೋಟೆ ಮೈದಾನದ ಶ್ರೀ ರಾಮೋತ್ಸವದ ಸಂಗೀತ ಕಛೇರಿಗಳಲ್ಲಿ ಪ್ರತಿಭಟನೆಗಳನ್ನು ನಡೆಸುತ್ತಿದ್ದರು. ಈ ಎಲ್ಲಾ ಕ್ರಿಯೆಗಳ ಹಿಂದೆ ಕನ್ನಡ ಕೇಂದ್ರಿತವಾದ ಒಂದು ಸಂಗೀತ ಪರಂಪರೆಯನ್ನು ರೂಪಿಸಬೇಕೆಂಬ ಉದ್ದೇಶ ಅ.ನ.ಕೃ ಅವರಿಗಿತ್ತು. 'ಈ ಮೂಲಕ ಕನ್ನಡ ಭಾಷೆಯ ಸಂವೇದನೆಯ ಬಹುಳತೆಯನ್ನು ಮಂಡಿಸಲು ಸಾಧ್ಯವಾಗುವುದೆಂದು ಅ.ನ.ಕೃ ತಿಳಿದಂತೆ ತೋರುತ್ತದೆ.'[೧೮] ಕನ್ನಡನಾಡಿನ ರಂಗಭೂಮಿಯಲ್ಲಿ

ಆಗಿರುವ ಸಾಧನೆಯ ಬಗ್ಗೆ ಅತೀವ ಅತೃಪ್ತಿ ಅನಕೃ ಅವರನ್ನು ಕಾಡುತ್ತಿತ್ತು. 'ಎಲ್ಲ ದೃಷ್ಟಿಯಿಂದ ಕನ್ನಡನಾಡಿನಲ್ಲಿ ಆಗಿರುವ ನಾಟಕ ಪ್ರಯತ್ನ ಹೆಮ್ಮೆ ಪಡುವಂತಿಲ್ಲ. ಅಲ್ಲೊಂದು ಇಲ್ಲೊಂದು ಒಳ್ಳೆಯ ನಾಟಕ, ಅಲ್ಲೊಬ್ಬ ಇಲ್ಲೊಬ್ಬ ಒಳ್ಳೆಯ ನಟ–ಆಗಲೋ ಈಗಲೋ ಒಂದೊಂದು ಬದುಕುವ ನಾಟಕ– ಇಲ್ಲಿಗೆ ಮುಗಿಯಿತು. ನಮ್ಮ ಸಾಧನ ಸಿದ್ಧಿಗಳ ಕಥೆ' ಎಂಬ ಕೊರಗು ಅವರಲ್ಲಿತ್ತು. 'ನಾಟಕದ ಪುನರುದ್ಧಾರವಾಗಬೇಕು. ಅದು ನಮ್ಮ ವೈಯಕ್ತಿಕ, ಸಾಂಘಿಕ , ರಾಷ್ಟ್ರೀಯ ಜೀವನಕ್ಕೆ ಬೆಳಕನ್ನು, ಶಕ್ತಿಯನ್ನು, ಸ್ಥೈರ್ಯವನ್ನು ನೀಡುವಂತಾಗಬೇಕೆಂಬ'[೯೯] ಹಂಬಲ ಅವರದಾಗಿತ್ತು. ಕರ್ನಾಟಕ ಏಕೀಕರಣ ಚಳುವಳಿಗೆ ರಂಗಭೂಮಿಯನ್ನು ಬಳಸಿಕೊಳ್ಳುವ ಉದ್ದೇಶ ಅ.ನ.ಕೃ ಅವರಿಗಿತ್ತು. ಜನಜಾಗೃತಿಗೆ ರಷ್ಯಾ ರಂಗಭೂಮಿಯನ್ನು ಬಳಸಿಕೊಂಡದ್ದು ಇದಕ್ಕೆ ಅ.ನ.ಕೃ ಅವರಿಗೆ ಪ್ರೇರಣೆಯನ್ನೊದಗಿಸಿತ್ತು. ರಂಗಭೂಮಿಯನ್ನು ಪುನಶ್ಚೇತನಗೊಳಿಸುವ ಕೆಲಸವನ್ನು ಸ್ವತಃ ಅ.ನ.ಕೃ ಕೈಗೊಂಡರಲ್ಲದೆ ನಗರಸಭೆಗಳು ರಂಗಮಂದಿರಗಳನ್ನು ಕಟ್ಟಿ ಪ್ರದರ್ಶನ ಸಂಸ್ಥೆಗಳನ್ನು ನಡೆಸುವ ಮೂಲಕ ರಂಗಭೂಮಿಯನ್ನು ಪುನಶ್ಚೇತನಗೊಳಿಸುವ ಕೆಲಸ ಮಾಡಬೇಕೆಂದು ಸೂಚಿಸಿದರು. ಸಂಗೀತ ನಾಟಕಗಳಲ್ಲದೆ ಕರ್ನಾಟಕದಲ್ಲಿನ ಶಿಲ್ಪಕಲೆ, ಲಲಿತಕಲೆ, ಸಾಹಿತ್ಯ ಕ್ಷೇತ್ರಗಳು ಹೊಸ ಚೈತನ್ಯ ಪಡೆಯಬೇಕಾದ ಅಗತ್ಯವನ್ನೂ ಅನಕೃ ಪ್ರತಿಪಾದಿಸಿದ್ದಾರೆ.

ಕರ್ನಾಟಕ ಏಕೀಕರಣವನ್ನು ಅದರ ಪೂರ್ಣತೆಯಲ್ಲಿ ಅನಕೃ ಗ್ರಹಿಸಿರುವುದಕ್ಕೆ ಅವರು ಕರ್ನಾಟಕ ಏಕೀಕರಣಕ್ಕೆ ಜನರನ್ನು ಒಂದುಗೂಡಿಸುವ ಉತ್ಸಾಹಭರಿತ ಭಾಷಣಗಳಿಗೆ ಸೀಮಿತವಾಗದೆ ಸಂಗೀತ ಕ್ಷೇತ್ರದಲ್ಲಿ ಕರ್ನಾಟಕ ಸಂಗೀತಕ್ಕೆ, ಕನ್ನಡ ಸಂಗೀತಗಾರರಿಗೆ ಆಗುತ್ತಿದ್ದ ಅನ್ಯಾಯವನ್ನು ಗಮನಿಸಿ ನ್ಯಾಯ ದೊರಕಿಸಲು ಮಾಡಿದ ಪ್ರಯತ್ನಗಳು, ರಂಗಭೂಮಿಯನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಮಾಡಿದ ಚಿಂತನೆಗಳು, ಮತ್ತು ಪ್ರಯತ್ನಗಳು, ಶಿಲ್ಪಕಲೆ, ಲಲಿತಕಲೆ, ಸಾಹಿತ್ಯ ಕ್ಷೇತ್ರಗಳತ್ತ ನೀಡಿದ ಗಮನ ನಿದರ್ಶನವಾಗಿವೆ. ಇವು ಅ.ನ.ಕೃ ಅವರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಜನಪ್ರಿಯ ನೆಲೆಯಿಂದ ಸಾಂಸ್ಕೃತಿಕ ನೆಲೆಗೆ ವಿಸ್ತರಣೆ ಪಡೆದದ್ದನ್ನೂ ಸೂಚಿಸುತ್ತವೆ.

೫.೨.೯ ಜನಪ್ರಿಯ ನಾಯಕತನದ ಅನಿವಾರ್ಯತೆ

ಮೂಲಭೂತವಾದಿ ನೆಲೆಯ ಕನ್ನಡ ಅಸ್ಮಿತೆಯಂತೆ ಜನಪ್ರಿಯ ನೆಲೆಯ ಕನ್ನಡ ಅಸ್ಮಿತೆಯೂ ಪ್ರಭುತ್ವದ ರಾಜ್ಯವಿಸ್ತಾರದ ಹಪಾಹಪಿಗೆ ಪ್ರಾಣತೆತ್ತ ಸೈನಿಕರ ವೀರಗಲ್ಲುಗಳನ್ನು ಕನ್ನಡನಾಡಿನ ಹೆಮ್ಮೆಯ ಸಂಕೇತಗಳನ್ನಾಗಿ ನೋಡುತ್ತದೆ. ಅ.ನ.ಕೃ ಅವರು ಕೂಡ ಇದಕ್ಕೆ ಹೊರತಾಗಿಲ್ಲ ಎನ್ನುವುದು ಅಚ್ಚರಿಯ ಸಂಗತಿಯಾಗಿದೆ.

'ಕನ್ನಡನಾಡು ವೀರರ ಭೂಮಿ. ಊರು ಊರುಗಳಲ್ಲಿ ಹಳ್ಳಿ ಹಳ್ಳಿಗಳಲ್ಲಿ ವೀರಗಲ್ಲುಗಳು, ಶಾಸನಗಳು ಇಂದಿಗೂ ಅವರ ಹುತಾತ್ಮ ಜೀವನದ ಹೆಚ್ಚಳವನ್ನು ಎತ್ತಿ ಸಾರುತ್ತದೆ'.[೯೮] ಅನಕೃ ಅವರ

ಈ ಮಾತುಗಳ ಹಿನ್ನೆಲೆಯಲ್ಲಿ ಎಡಪಂಥೀಯ ಸಿದ್ಧಾಂತಗಳಿಂದ ಪ್ರೇರಿತರಾಗಿ ಪ್ರಗತಿಶೀಲ ಸಾಹಿತ್ಯದ ಹುಟ್ಟಿಗೆ ಕಾರಣರಾದ ಅ.ನ.ಕೃ ಅವರೇ ವೀರಗಲ್ಲುಗಳ ಚಾರಿತ್ರಿಕ ಹಿನ್ನೆಲೆಯನ್ನು ಅರಿಯದೆ ಅದನ್ನು ಕನ್ನಡನಾಡಿನ ಹೆಮ್ಮೆಯ ಸಂಕೇತವಾಗಿ ನೋಡುತ್ತಿರುವುದು ವೈರುಧ್ಯವಾಗಿದೆ. ಕನ್ನಡದ ಲೇಖಕರು ಚಳುವಳಿಗಳ ಸಂದರ್ಭಗಳಲ್ಲಿ ಕೆಲವೊಮ್ಮೆ ತಮ್ಮ ಸಾಹಿತ್ಯದ ಜೀವನದೃಷ್ಟಿಗೆ ವಿರುದ್ಧವಾಗಿ ಮಾತನಾಡಿರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಈ ನಿಲುವು ಅ.ನ.ಕೃ ಅವರಿಗೆ ಅರಿವಿನ ಕೊರತೆಯಿಂದಲೂ ಉಂಟಾಗಿರಬಹುದು ಅಥವಾ ಅರಿವಿದ್ದೂ, ಕನ್ನಡ ಚಳುವಳಿಯ ಜನಪ್ರಿಯ ನಾಯಕತನದ ಅನಿವಾರ್ಯತೆ ರೂಪಿಸಿದ್ದೂ ಆಗಿರಬಹುದು.

೫.೩ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ಚಿಂತನೆಗಳು

೫.೩.೧ ಪೀಠಿಕೆ

ಕರ್ನಾಟಕ ಎಂಬ ಕಲ್ಪನೆ ಮೂರ್ತ ರೂಪವನ್ನು ಪಡೆಯುವ ಮುನ್ನವೇ ಕನ್ನಡ ಭಾಷೆಯ ಹಿತರಕ್ಷಣೆಗೆ ಕರ್ನಾಟಕ ವಿದ್ಯಾವರ್ಧಕ ಸಂಘದಂತಹ ಸಂಸ್ಥೆಗಳು, ಕರ್ನಾಟಕ ಏಕೀಕರಣ ಚಳುವಳಿಯಂತಹ ಆಂದೋಲನಗಳು ಇಲ್ಲಿ ಆರಂಭವಾಗಿತ್ತು. ಇದು ಕೇವಲ ಕನ್ನಡಕ್ಕೆ ಸಂಬಂಧಿಸಿದ ವಿದ್ಯಮಾನವಾಗಿರದೆ ಭಾರತದ ಬಂಗಾಳಿ, ಒರಿಯಾ, ಮರಾಠಿಯಂತಹ ದೇಶಿ ಭಾಷೆಗಳು ಕೂಡ ತಮ್ಮ ಅಸ್ತಿತ್ವ ಕಾಪಾಡಿಕೊಳ್ಳುವುದಕ್ಕಾಗಿ ಚಳುವಳಿ ರೂಪಿಸುತ್ತಿದ್ದವು. ಭಾಷೆಯ ಆಧಾರದ ಮೇಲೆ ರಾಜ್ಯಗಳ ರಚನೆಯಾದ ನಂತರ ಪ್ರತಿಯೊಂದು ಭಾಷೆಯಲ್ಲಿಯೂ ಆ ಭಾಷೆಗಳ ಹಿತರಕ್ಷಣೆಗಾಗಿ ಹತ್ತು ಹಲವು ಸಂಘಟನೆಗಳು ಹುಟ್ಟಿಕೊಂಡವು. ಈ ಸಂಘಟನೆಗಳು ತಮ್ಮ ಮಿತಿಯಲ್ಲಿ ಭಾಷಾಪರ ಕೆಲಸ ಮಾಡುತ್ತಿರುವುದನ್ನೂ, ಕೆಲವು ಸಂಘಟನೆಗಳು ಭಾಷೆಯ ಮುಸುಕಿನಲ್ಲಿ ವೈಯಕ್ತಿಕ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುತ್ತಿರುವುದನ್ನೂ ಗಮನಿಸಲಾಯಿತು. ಇದನ್ನು ಗಮನಿಸಿದ ಲಂಕೇಶರು 'ನಮ್ಮ ನೆಲದ ಭಾಷೆಯ ಅರ್ಥ, ಅನುರಣನ, ಗಾಂಭೀರ್ಯಕ್ಕೆ ನಾನು ವಂಚನೆ ಬಗೆದೊಡನೆ ನನ್ನ ಎಲ್ಲ ತಿಳಿವಳಿಕೆಯೂ ವ್ಯರ್ಥವಾಗುತ್ತದೆ. ಈ ಚಳವಳಿಗಳು ಕೆಡುತ್ತವೆ, ಸರ್ಕಾರಗಳು ಭ್ರಷ್ಟವಾಗುತ್ತವೆ, ಸಂಸ್ಥೆಗಳು ಮುಗ್ಗರಿಸುತ್ತವೆ' ಎಂದು ಎಚ್ಚರಿಸಿದ್ದರು. ಆದರೂ 'ಕನ್ನಡದಂಥ ಚಳವಳಿಯನ್ನು ಬಿಟ್ಟುಬಿಡುವುದು ಸರಿಯಲ್ಲ. ಈ ಗದ್ದಲ ದೇಶದ ಕಟ್ಟಳೆ, ಭಾಷೆಯ ಮರ್ಯಾದೆ, ಜನರ ಸ್ವಾಭಿಮಾನ ಕಾಪಾಡಲು ಬೇಕು.'[೨೦] ಎಂದು ಕನ್ನಡಪರ ಚಳುವಳಿಯ ಅಗತ್ಯವನ್ನು ಪ್ರತಿಪಾದಿಸಿದ್ದರು.

ಕಳೆದ ಒಂದೂವರೆ ದಶಕಗಳಲ್ಲಿ ಕರ್ನಾಟಕದಲ್ಲಿ ಕನ್ನಡ ನೆಲ, ಜಲ, ಭಾಷೆಯ ರಕ್ಷಣೆಯ ಉದ್ದೇಶದ ಪ್ರಣಾಳಿಕೆಯನ್ನಿಟ್ಟುಕೊಂಡು ಅನೇಕ ಸಂಘಟನೆಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಮುಂಚೂಣಿಯಲ್ಲಿರುವುದು ಕರ್ನಾಟಕ ರಕ್ಷಣಾ ವೇದಿಕೆ (ಕರವೇ). ರೈತಸಂಘ, ದಲಿತ

ಸಂಘಟನೆಗಳಂತೆ ಕರವೇ ಕೂಡ ಕಳೆದ ಒಂದು ದಶಕದಲ್ಲಿ ಹಲವು ಬಣಗಳಾಗಿ ಒಡೆದು ಪ್ರತ್ಯೇಕ ಅಸ್ತಿತ್ವವನ್ನು ಪಡೆದುಕೊಂಡಿವೆ. ಇವುಗಳಲ್ಲಿ ಮುಖ್ಯವಾದವು ಟಿ.ಎ ನಾರಾಯಣಗೌಡ ಬಣ, ಶಿವರಾಮೇಗೌಡ ಬಣ ಮತ್ತು ಪ್ರವೀಣ್ ಶೆಟ್ಟಿ ಬಣಗಳು. ಟಿ.ಎ ನಾರಾಯಣಗೌಡ ಅವರ ನೇತೃತ್ವದ ಕರ್ನಾಟಕ ರಕ್ಷಣಾ ವೇದಿಕೆ ಹಲವು ಹೋರಾಟಗಳ ಮೂಲಕ ಮುಂಚೂಣಿಯಲ್ಲಿದೆ. ಈ ಬಣ ತನ್ನ ಮುಖವಾಣಿಯಾಗಿ 'ಕರವೇ ನಲ್ನುಡಿ' ಎಂಬ ಪತ್ರಿಕೆಯನ್ನು ತರುತ್ತಿದೆ. ಪತ್ರಿಕೆಯಲ್ಲಿನ ಸಂಪಾದಕೀಯ, ಸಂಘಟನೆಯ ಅಧ್ಯಕ್ಷರಾದ ಟಿ.ಎ ನಾರಾಯಣಗೌಡರ 'ನೇರ ನುಡಿ' ಅಂಕಣ ಮತ್ತು ಇಲ್ಲಿ ಪ್ರಕಟವಾದ ಲೇಖನಗಳು ಕರವೇ ಸಂಘಟನೆಯ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳ ಸ್ವರೂಪವನ್ನು ಅರಿಯಲು ಮುಖ್ಯ ಆಕರಗಳಾಗಿವೆ. 'ಕರ್ನಾಟಕ ರಕ್ಷಣಾ ವೇದಿಕೆ ಹೋರಾಟದ ಸಂಘಟನೆ. ನಾಡು ನುಡಿ ಜಲ ಗಡಿ ರಕ್ಷಣೆಗಾಗಿ ಟೊಂಕ ಕಟ್ಟಿ ನಿಂತಿರುವ ಲಕ್ಷಾಂತರ ಕಾರ್ಯಕರ್ತರನ್ನೊಳಗೊಂಡ ಬೃಹತ್ ಸೈನ್ಯವಿದು' ಎಂದು ಕರವೇ ಮೇ ೨೦೧೨ರ ತನ್ನ ಸಂಪಾದಕೀಯದಲ್ಲಿ ವಿವರಿಸಿಕೊಳ್ಳುತ್ತದೆ. ಇದೇ ಸಂಪಾದಕೀಯದಲ್ಲಿ 'ಕರವೇ ನಲ್ನುಡಿ' ಪತ್ರಿಕೆಯ ಉದ್ದೇಶವನ್ನು ವಿವರಿಸುತ್ತ 'ಕನ್ನಡ ಚಳವಳಿಯನ್ನು ವಿವರಿಸುವ, ವಿಸ್ತರಿಸುವ, ಸ್ಫೂರ್ತಿ ನೀಡುವ ಕೆಲಸವನ್ನೂ ಮಾಡಬೇಕು ಎಂಬುದು ನಮ್ಮ ಮಹಾದಾಸೆಯಾಗಿತ್ತು' ಎನ್ನುತ್ತದೆ.

ಕರವೇ ತನ್ನ ದಶಮಾನೋತ್ಸವ ಸಮಾರಂಭದಲ್ಲಿ ತೆಗೆದುಕೊಂಡ ನಿರ್ಣಯಗಳ ಮೂಲಕವೂ ಈ ಸಂಘಟನೆಯ ಕನ್ನಡಪರ ಹೋರಾಟದ ಸ್ವರೂಪವನ್ನು ಅರಿಯಬಹುದಾಗಿದೆ. ಸರೋಜಿನಿ ಮಹಿಷಿ ವರದಿ ಜಾರಿ ಮಾಡುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸುವುದು, ಮಹಾಜನ್ ವರದಿ ಜಾರಿ ಮಾಡುವ ಮೂಲಕ ಕಾಸರಗೋಡು, ಸೊಲ್ಲಾಪುರ ಜಿಲ್ಲೆಗಳನ್ನು ಕರ್ನಾಟಕಕ್ಕೆ ಸೇರಿಸಿಕೊಳ್ಳುವುದು, ಕರ್ನಾಟಕದ ಬಾಕಿ ಉಳಿದಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದು, ರಾಷ್ಟ್ರೀಯ ಜಲನೀತಿ ಅನ್ವಯವೇ ನೀರಿನ ಹಂಚಿಕೆ, ಪ್ರಾದೇಶಿಕ ಅಸಮತೋಲನದ ನಿವಾರಣೆಗೆ ಡಾ.ನಂಜುಂಡಪ್ಪ ವರದಿ ಜಾರಿಗೊಳಿಸುವುದು, ಕೇಂದ್ರ ಸರ್ಕಾರ ಹಿಂದಿ ಹೇರಿಕೆಯನ್ನು ವಾಪಸು ತೆಗೆದುಕೊಳ್ಳುವುದು, ಕರ್ನಾಟಕದ ಆಡಳಿತಭಾಷೆಯಾಗಿ ಕನ್ನಡವನ್ನು ಜಾರಿ ಮಾಡುವುದು ಕರವೇ ತೆಗೆದುಕೊಂಡ ನಿರ್ಣಯಗಳಾಗಿವೆ.

೫.೩.೨ ನೆರೆಭಾಷಿಕರೊಂದಿಗಿನ ಸಂಬಂಧ

ಜನಪ್ರಿಯ ನೆಲೆಯ ಕನ್ನಡ ಅಸ್ಮಿತೆ ಕುರಿತ ಜನಪ್ರಿಯ ನೆಲೆಯ ಚಿಂತನೆಗಳು ಯಾವಾಗಲೂ ಅನ್ಯಭಾಷಿಕರನ್ನು ಶತ್ರುಗಳನ್ನಾಗಿ ನೋಡುತ್ತವೆ. ನಮ್ಮೆಲ್ಲಾ ಭಾಷಿಕ ಸಮಸ್ಯೆಗಳಿಗೆ ಅನ್ಯಭಾಷಿಕರೇ ಕಾರಣ ಎನ್ನುವುದು 'ಭ್ರಮಾತ್ಮಕ ವಾಸ್ತವ'ವಾಗಿದೆ. 'ಸಾಮಾಜಿಕ ವಿನ್ಯಾಸದಲ್ಲಿ ಆರ್ಥಿಕ

ಏರುಪೇರುಗಳು ನಡೆದಿರುವುದು ಈಗಾಗಲೇ ಅಧ್ಯಯನಗಳಿಂದ ಹೊರಬಿದ್ದಿದೆ. ಕೆಲವೊಮ್ಮೆ ಈ ಏರುಪೇರಿಗೆ ಒಳಗಿನ ಕಾರಣಗಳಿಗಿಂತ ಹೊರಗಿನಿಂದ ಬಂದ ಅನ್ಯಭಾಷಿಕರೇ ಕಾರಣ ಎಂಬ ವಿವರಣೆಯನ್ನು ನೀಡಲಾಗಿದೆ. ಇಂತಹ ವ್ಯಾಖ್ಯೆಗಳು ತೋರಿಕೆಗೆ ತರ್ಕಬದ್ಧವಾಗಿ ಕಂಡರೂ ಜನರಲ್ಲಿ ಸ್ವ-ಅನ್ಯ ಎಂಬ ಭಾವವನ್ನು ಹುಟ್ಟುಹಾಕುತ್ತವೆ. ಸ್ವ-ಎಂಬುದು ಯಾವಾಗಲೂ ಶೋಷಿತವಾದ ಅನ್ಯಾಯಕ್ಕೊಳಗಾದ ನೆಲೆಯಾಗಿದ್ದು ಅನ್ಯ ಎಂಬುದು ಶೋಷಕ ಸ್ಥಾನದಲ್ಲಿ ಸದಾ ಆಕ್ರಮಣಶೀಲ ನೆಲೆಯಲ್ಲಿ ಇರುವಂತೆ ಚಿತ್ರಿತವಾಗುತ್ತದೆ. ಇದೊಂದು ಭ್ರಮಾತ್ಮಕ ವಾಸ್ತವ. ಎಷ್ಟೋ ಸಂದರ್ಭಗಳಲ್ಲಿ ಜನ ಸಮುದಾಯ ತಮ್ಮ ಸ್ಥಿತಿಗೆ ನಿಜ ಕಾರಣಗಳೇನು ಎಂಬುದನ್ನು ಗುರುತಿಸಲಾಗದಂತೆ ಈ ಭ್ರಮೆಯು ಅವರಿಗೆ ಕಣ್ಕಟ್ಟು ಮಾಡುತ್ತದೆ. ಆದ್ದರಿಂದ ಸ್ವ-ಅನ್ಯ ಸಮೀಕರಣಕ್ಕೆ ಕಾರಣವಾಗುವ ಭಾಷಿಕ ನೆಲೆಯ ವ್ಯಾಖ್ಯಾನದ ಬಗೆಗೆ ಜಾಗ್ರತರಾಗಿರುವುದು ಅಗತ್ಯವಾಗಿದೆ ಎನ್ನುವುದು ಕೆ.ವಿ. ನಾರಾಯಣ ಅವರ ಎಚ್ಚರಿಕೆಯಾದರೆ ಅನ್ಯಭಾಷಿಕರನ್ನು ಶತ್ರುಗಳನ್ನಾಗಿ ನೋಡುವ ಚಳುವಳಿಗಳು ಬಹುಬೇಗ ಗಲಭೆಗಳಾಗಿ ಪರಿವರ್ತಿತವಾಗುತ್ತವೆ. ಏಕೆಂದರೆ 'ಇದರ ಜತೆಗೆ ಜನರ ಭಾವಾವೇಶವೂ ಕೂಡಿಕೊಂಡು ಬಿಡುತ್ತದೆ. ಆದ್ದರಿಂದಲೇ ಅವುಗಳ ಪರಿಣಾಮ ಸಮಾಜದ ಮೇಲೆ ತೀವ್ರವಾಗಿರುತ್ತದೆ.' ಎಂದು ರಹಮತ್ ತರೀಕೆರೆ ಅವರು ವಿಶ್ಲೇಷಿಸುತ್ತಾರೆ. ಕರ್ನಾಟಕದಲ್ಲಿ ನೆರೆ ರಾಜ್ಯದ ಭಾಷೆ ಹಾಗೂ ಭಾಷಿಕರನ್ನು ದ್ವೇಷಿಸುವುದು ಜನಪ್ರಿಯ ಕನ್ನಡ ಚಳುವಳಿಗಳ ಒಂದು ಲಕ್ಷಣವಾಗುತ್ತಿದ್ದು ಇಂತಹ ಹಗೆತನದ ಮತ್ತು ಸಂಘರ್ಷಕಾರಿ ಸಂಬಂಧಕ್ಕೆ ಕೆಲವು ಕನ್ನಡ ಸಂಶೋಧಕರೂ ಕೈ ಜೋಡಿಸಿದ್ದಾರೆ. ಈಗ ಈ ಸಂಘರ್ಷವು ಕೇವಲ ಮತಭೇದದ ಮಟ್ಟದಲ್ಲಿ ಉಳಿದಿಲ್ಲ; ಬದಲಿಗೆ ದೈಹಿಕ ಹಲ್ಲೆ, ಸೊತ್ತಿನ ನಾಶ, ಊರುಬಿಟ್ಟು ಓಡಿಸುವುದೇ ಮೊದಲಾದ ಅಮಾನುಷ ಕೃತ್ಯಗಳಿಗೂ ವಿಸ್ತರಿಸಿದೆ. ಇಂತಹ ಸನ್ನಿವೇಷದಲ್ಲಿ ನೆರೆಯ ಭಾಷೆ ಮತ್ತು ಭಾಷಿಕರನ್ನು ಸಾಂಸ್ಕೃತಿಕ ಕೊಡುಕೊಳುವಿಕೆಯ ನೆಲೆಯಲ್ಲಿ ಚಾರಿತ್ರಿಕವಾಗಿ ಅರ್ಥ ಮಾಡಿಕೊಳ್ಳುವುದು ಮುಖ್ಯವೆಂದು ಅವರು ಎಚ್ಚರಿಸುತ್ತಾರೆ.

ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಅಧಿಕಾರ ಹಿಡಿಯುವ ವಿಷಯ ಮರಾಠಿ-ಕನ್ನಡಿಗರ ನಡುವಿನ ಸಂಘರ್ಷಕ್ಕೆ ಎಡೆಯಾಗುವುದು ವಾಡಿಕೆಯಂತಾಗಿದೆ. ಪ್ರಭುತ್ವ ಇಲ್ಲಿ ಕನ್ನಡಿಗರು ಅಧಿಕಾರ ವಂಚಿತರಾಗಲು ಕಾರಣವಾಗಿರುವ ಸಮಸ್ಯೆಗಳನ್ನು ಬಗೆಹರಿಸದೇ ಅದನ್ನೊಂದು ಬೀದಿ ಕಾಳಗವಾಗಿ ಜೀವಂತವಾಗಿಟ್ಟಿದೆ. ಕನ್ನಡಪರ ಸಂಘಟನೆಗಳಾದರೂ ಈ ಸಮಸ್ಯೆಯ ಮೂಲವನ್ನು ಅರಿತು ಅದರ ನಿವಾರಣೆಗೆ ಪ್ರಯತ್ನಿಸದೆ ಪ್ರಭುತ್ವವೇ ಪ್ರಾಯೋಜಿಸುತ್ತಿರುವ ಬೀದಿ ಕಾಳಗದಲ್ಲಿ ಸ್ಪರ್ಧಿಗಳಾಗಿ ಕಾದಾಡುತ್ತಿರುವುದು ವಿಪರ್ಯಾಸಕರ ವಿದ್ಯಮಾನವಾಗಿದೆ. ಕರವೇ ಬೆಳಗಾವಿ ಸಮಸ್ಯೆಯನ್ನು ನೋಡುವ ದೃಷ್ಟಿಕೋನವೇ ಇದಕ್ಕೆ ನಿದರ್ಶನವಾಗಿದೆ. ಟಿ.ಎ ನಾರಾಯಣಗೌಡರ ಮಾತುಗಳನ್ನೇ ಇದಕ್ಕೆ ನಿದರ್ಶನವಾಗಿ ಗಮನಿಸಬಹುದು. 'ಎಂಇಎಸ್ ಮತ್ತಿತರ ಮಹಾರಾಷ್ಟ್ರದಿಂದ ಆಗಾಗ ಬಂದು

ಕಿರುಕುಳ ನೀಡುವ ಗೂಂಡಾಶಕ್ತಿಗಳು ಇಡೀ ಬೆಳಗಾವಿಯನ್ನು ತಮ್ಮ ಅಂಕೆಗೆ ತಂದುಕೊಂಡಿದ್ದರು. ಅದನ್ನು ಬದಲಾಯಿಸುವುದು ಅಷ್ಟು ಸುಲಭದ ದಾರಿಯೇನೂ ಆಗಿರಲಿಲ್ಲ. ಆದರೆ ಅಸಾಧ್ಯದ ಮಾತೂ ಕೂಡ ಆಗಿರಲಿಲ್ಲ. ಯಾಕೆಂದರೆ ಕನ್ನಡದ ಶಕ್ತಿಯೇ ಅಂಥದ್ದು. ಎಂಥ ದುಷ್ಟಶಕ್ತಿಗಳನ್ನಾದರೂ ಸದೆಬಡಿಯುವ ಶಕ್ತಿ ಕನ್ನಡಕ್ಕಿದೆ.'[೨೧] 'ಭಾಷಾಂಧ ಮರಾಠಿಗರು ಆರಂಭಿಸಿದ ಈ ವಿವಾದಕ್ಕೆ ತುಪ್ಪ ಸುರಿದುಕೊಂಡು ಬಂದವರು ಮಹಾರಾಷ್ಟ್ರದ ರಾಜಕಾರಣಿಗಳು. ಮಹಾರಾಷ್ಟ್ರ ಏಕೀಕರಣ ಸಮಿತಿ ಎಂಬ ರಾಜದ್ರೋಹಿ ಸಂಘಟನೆಗೆ ಶಕ್ತಿ ತುಂಬಿದವರೇ ಮಹಾರಾಷ್ಟ್ರದ ರಾಜಕಾರಣಿಗಳು.'

ಬೆಳಗಾವಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಕನ್ನಡ ಅಭ್ಯರ್ಥಿಗಳು ಉರ್ದು ಭಾಷಿಕರ ಬೆಂಬಲ ಪಡೆದು ಅಧಿಕಾರ ಹಿಡಿದದ್ದು ವ್ಯಂಗ್ಯದಂತೆಯೂ, ಹಲವು ಸಾಧ್ಯತೆಗಳ ಆಶಾಕಿರಣದಂತೆಯೂ ತೋರುತ್ತದೆ. ಮರಾಠಿ, ಕನ್ನಡ, ಉರ್ದು ಎಲ್ಲವೂ ದೇಸಿ ಭಾಷೆಗಳು. ಆದರೆ ಇವುಗಳನ್ನೆಲ್ಲ ಪರಸ್ಪರ ಶತ್ರುಭಾಷೆಗಳಂತೆ ಬಿಂಬಿಸಲಾಗುತ್ತದೆ. ಮತೀಯ ಶಕ್ತಿಗಳು ಉರ್ದುವನ್ನು ಕನ್ನಡದ ಶತ್ರುಭಾಷೆಯೆಂದು ಬಿಂಬಿಸುತ್ತ ಆ ಮೂಲಕ ಕನ್ನಡಿಗ ಮುಸ್ಲಿಮರು-ಹಿಂದುಗಳ ನಡುವೆ ಕಂದಕ ಸೃಷ್ಟಿಸಲು ನಿರಂತರ ಪ್ರಯತ್ನಿಸುತ್ತವೆ. ಈ ಪ್ರಯತ್ನದ ಪರಿಣಾಮವೆಂಬಂತೆ ಬೆಂಗಳೂರು ದೂರದರ್ಶನದಲ್ಲಿ ಉರ್ದು ವಾರ್ತೆ ಪ್ರಸಾರವನ್ನು ವಿರೋಧಿಸಿ ಗಲಭೆ ಹುಟ್ಟುಹಾಕಲಾಯಿತು. ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಕನ್ನಡಿಗರು ಅಧಿಕಾರ ಪಡೆಯಲು ಪಾಲಿಕೆಯ ಉರ್ದು ಭಾಷಿಕ ಸದಸ್ಯರನ್ನು ಬಳಸಿಕೊಳ್ಳಲಾಯಿತು. ಅಂದರೆ ಉರ್ದುಭಾಷೆಯನ್ನು ಕನ್ನಡಿಗರು ಬೇಕಾದಾಗ ಬಳಸಿಕೊಳ್ಳುವ, ಉಳಿದಂತೆ ದೂರ ಇಡುವ ಪ್ರಯತ್ನದಂತೆ ಇದು ತೋರುತ್ತದೆ. ಕನ್ನಡದ ಸ್ಥಾನವನ್ನು ಗಟ್ಟಿಮಾಡಲು ಬಳಸಿಕೊಂಡದ್ದು ಹಲವು ಸಾಧ್ಯತೆಗಳ ಚಿಂತನೆಗೆ ಅವಕಾಶ ಕಲ್ಪಿಸಿದೆ. ಮರಾಠಿಯ ಸ್ಥಾನದಲ್ಲಿ ಇಂಗ್ಲಿಷನ್ನು ಇಟ್ಟು ಮರಾಠಿ, ಉರ್ದು, ಕನ್ನಡದಂತಹ ಸ್ಥಳೀಯ ಭಾಷೆಗಳೆಲ್ಲ ಒಟ್ಟಾದರೆ ಇಂಗ್ಲಿಷ್ ಭಾಷೆಯನ್ನು 'ಮಣಿಸಬಹುದು' ಎನ್ನುವುದು ಅಂತಹದ್ದೊಂದು ಸಾಧ್ಯತೆ.

ಬೆಳಗಾವಿ ಮಹಾನಗರ ಪಾಲಿಕೆ ಚುನಾವಣೆಯ ಸಂದರ್ಭದಲ್ಲಿ ಕರವೇ ಬಳಸಿದ ಶಕ್ತಿ ಪ್ರದರ್ಶನದ ಹೋರಾಟದ ಮಾದರಿ ಅದರ ಸರಿಸುಮಾರು ಎಲ್ಲ ಹೋರಾಟಗಳಲ್ಲೂ ಕಂಡುಬರುತ್ತದೆ. ಸಾಮಾನ್ಯ ಜನರೂ ಇಂತಹ ಹೋರಾಟದ ಮಾರ್ಗಗಳಿಗೆ ಮೌನ ಸಮ್ಮತಿ ವ್ಯಕ್ತಪಡಿಸಿದಂತೆ ತೋರುತ್ತದೆ. ಕರವೇ ಕಾರ್ಯಕರ್ತರು ಎಂಇಎಸ್‌ನ ಮೇಯರ್ ವಿಜಯ್ ಮೋರೆ ಅವರ ಮುಖಕ್ಕೆ ಮಸಿ ಬಳಿದಾಗ ಇದನ್ನು ಬೆಂಬಲಿಸುವ ಮೂಲಕ ತೇಜಸ್ವಿ ಅವರೂ ಒಂದು ವಿಧದಲ್ಲಿ ಕರವೇ ಹೋರಾಟದ ಮಾದರಿಯನ್ನು ಅನುಮೋದಿಸಿದ್ದರು.

ಮುಧೋಳದಲ್ಲಿ ಕೆಲವರು ಕನ್ನಡ ಬಾವುಟವನ್ನು ಏರಿಸಲು ಅಡ್ಡಿಪಡಿಸಿದರು ಎಂಬುದಕ್ಕೆ ಅನಕೃ 'ಕನ್ನಡಿಗರನ್ನು ಒಂದುಗೂಡಿಸುವ ಸಾಧನ-ಸಂಕೇತ 'ಕನ್ನಡ ಬಾವುಟ'. ಇದಕ್ಕೆ

ಅಪಮಾನವಾದರೆ ಕನ್ನಡಿಗರು ರಕ್ತತರ್ಪಣ ಕೊಡಲು ಸಿದ್ಧರಾಗಿದ್ದಾರೆ.' ಎಂಬ ಆವೇಶಭರಿತ ಹೇಳಿಕೆ ನೀಡಿದ್ದರು. ಅನಕೃ ಈ ಹೇಳಿಕೆ ನೀಡುವ ಸಂದರ್ಭ ಸೃಷ್ಟಿಯಾದದ್ದು ಅನ್ಯಭಾಷಿಕರಿಂದಲ್ಲ. ರಾಷ್ಟ್ರಧ್ವಜ ಮತ್ತು ಕನ್ನಡ ಬಾವುಟದ ನಡುವಿನ ಆಯ್ಕೆಯ ಗೊಂದಲದಲ್ಲಿ ಉಂಟಾದದ್ದು. ಆದರೂ ಅನಕೃ ಅನೇಕ ಸಂದರ್ಭಗಳಲ್ಲಿ ಈ ರೀತಿಯ ಹೇಳಿಕೆ ನೀಡಿದ್ದಾರೆ. ಈ ಬಗೆಯ ಸಂಘರ್ಷಕ್ಕೆ ಎಡಮಾಡಿಕೊಡುವುದು ಜನಪ್ರಿಯ ನೆಲೆಯ ಒಂದು ಚಹರೆಯಾಗಿದೆ. ಕರ್ನಾಟಕ ರಕ್ಷಣಾ ವೇದಿಕೆಯ ಮುಖಂಡರೂ ಇಂತಹ ಹೇಳಿಕೆಗಳನ್ನು ನೀಡುವುದನ್ನು ಗಮನಿಸಬಹುದು.

ಬೆಳಗಾವಿಯಲ್ಲಿ ಮಹಾನಗರ ಪಾಲಿಕೆಯ ಅಧಿಕಾರವನ್ನು ಹಿಡಿಯುವ ಸಂಗತಿಯಾಗಿರಲಿ, ಕಾವೇರಿ ಜಲ ವಿವಾದದ ಸಂಗತಿಯೇ ಆಗಿರಲಿ ಪ್ರಜಾಪ್ರಭುತ್ವ ರಾಷ್ಟ್ರವೊಂದರಲ್ಲಿ ಇವೆಲ್ಲವೂ ಚರ್ಚೆ, ಸಂವಾದಗಳ ಮೂಲಕ ಬಗೆಹರಿಸಬೇಕಾದ ಸಮಸ್ಯೆಗಳು. ಇಂತಹ ಸಂದರ್ಭಗಳಲ್ಲಿ ಕರವೇಯಂತಹ ಸಂಘಟನೆಗಳು ಹಮ್ಮಿಕೊಳ್ಳುವ ಶಕ್ತಿಪ್ರದರ್ಶನ ಮಾಡುವಂತಹ ಹೋರಾಟದ ಮಾದರಿಗಳು ಪ್ರಶ್ನಾರ್ಹ ಎನಿಸುವುದು ಸಹಜವೇ. ಆದರೆ ಇದಕ್ಕೆಲ್ಲ ಕರವೇ ಅಂತಹ ಸಂಘಟನೆಗಳೇ ಸಂಪೂರ್ಣ ಕಾರಣ ಎನ್ನುವುದು ಸತ್ಯವಲ್ಲ. ಗಡಿ, ನೆಲ, ಜಲ ವಿವಾದಗಳ ಸಮಸ್ಯೆಗಳು ಎದುರಾದಾಗ ಸರ್ಕಾರಗಳೇ ಬಂದ್‌ಗಳಿಗೆ ಕರೆಕೊಡುತ್ತ ಪರೋಕ್ಷವಾಗಿ ಬೀದಿ ಕಾಳಗಗಳನ್ನು ಪ್ರಚೋದಿಸುತ್ತಿರುವುದು ಇದರ ಮೂಲದಲ್ಲಿದೆ. ಸಾರಾಂಶದಲ್ಲಿ ಈ ರೀತಿಯ ಒತ್ತಡ, ಬೆದರಿಕೆ, ಶಕ್ತಿ ಪ್ರದರ್ಶನದ ಮೂಲಕವೇ ಪರಿಹಾರಗಳು ಮರೀಚಿಕೆಯಾದರೂ ವಿವಾದಗಳನ್ನು ಎದುರುಗೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆತಂಕಕಾರಿಯಾದ ಬೆಳವಣಿಗೆಯಾಗಿದೆ.

೫.೩.೩ ಇಂಗ್ಲಿಶ್ ಕುರಿತು ಸಕಾರಣ ವಿರೋಧ

ಕರವೇ ಸಂಘಟನೆಗೆ ಇಂಗ್ಲಿಷಿನ ಬಗ್ಗೆ ವಿರೋಧವಿದೆ. ನ್ಯಾಯಾಲಯಗಳಲ್ಲಿ ಕನ್ನಡದಲ್ಲಿಯೇ ಕಲಾಪಗಳು ನಡೆಯಬೇಕೆಂದು ಅದು ಆಗ್ರಹಿಸುತ್ತದೆ.[೨೨] ಮಕ್ಕಳ ಶಿಕ್ಷಣ ಯಾವ ಮಾಧ್ಯಮದಲ್ಲಿರಬೇಕು ಎಂಬುದನ್ನು ಪೋಷಕರ ಆಯ್ಕೆಗೆ ಬಿಡಬೇಕೆನ್ನುವ ವಾದವನ್ನು ಕರವೇ ಸಕಾರಣವಾಗಿಯೇ ಟೀಕಿಸುತ್ತದೆ. ಪ್ರಾಥಮಿಕ ಶಿಕ್ಷಣದಲ್ಲಿ ಖಾಸಗಿ ಸಹಭಾಗಿತ್ವವನ್ನು ವಿರೋಧಿಸುವ ಕರವೇ ಇದು ಭವಿಷ್ಯದಲ್ಲಿ ಈ ಶಾಲೆಗಳು ಸಂಪೂರ್ಣ ಖಾಸಗಿ ಸಂಸ್ಥೆಗಳ ಮಾಲೀಕತ್ವಕ್ಕೆ ಒಳಪಡುತ್ತವೆ ಎಂದು ಸರಿಯಾಗಿಯೇ ಭವಿಷ್ಯ ನುಡಿಯುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸಲು ಒತ್ತಾಯಿಸುತ್ತದೆ. ಶಿಕ್ಷಣ ಮಾಧ್ಯಮವನ್ನು ನಿರ್ಧರಿಸಬೇಕಾದವರು ಅದರ ಎಲ್ಲ ಆಯಾಮಗಳನ್ನು ಬಲ್ಲ ಚಿಂತಕರೇ ವಿನಃ ಪೋಷಕರಲ್ಲ. ಶಿಕ್ಷಣದಲ್ಲಿ ಖಾಸಗಿ ಸಹಭಾಗಿತ್ವವೆಂದರೆ ಶಿಕ್ಷಣದ ಖಾಸಗೀಕರಣ ಎಂದೇ ಅರ್ಥ, ಶಿಕ್ಷಣ

ರಾಷ್ಟ್ರೀಕರಣಗೊಳ್ಳಬೇಕು, ಸಮಾನ ಶಿಕ್ಷಣ ನೀತಿ ಜಾರಿಗೊಳ್ಳಬೇಕು, ಸರ್ಕಾರಿ ಶಾಲೆಗಳನ್ನು ಸದೃಢಗೊಳಿಸಬೇಕು ಎನ್ನುವ ಪ್ರತಿಪಾದನೆಗಳು ಕನ್ನಡಭಾಷೆ ಮತ್ತು ಭಾಷೆಯ ಉಳಿವಿಗೆ ಕಾರಣವಾಗುವ ಶಿಕ್ಷಣದ ಕುರಿತ ಚರ್ಚೆಯಲ್ಲಿರುವ ಉನ್ನತಮಟ್ಟದ ಚಿಂತನೆಗಳಾಗಿವೆ. ಇದನ್ನು ಒಂದು ಕನ್ನಡಪರ ಹೋರಾಟದ ಸಂಘಟನೆಯಾದ ಕರ್ನಾಟಕ ರಕ್ಷಣಾ ವೇದಿಕೆಯ ಮುಖವಾಣಿಯಾದ 'ಕರವೇ ನಲ್ನುಡಿ' ಅನುಮೋದಿಸುತ್ತಿರುವುದು ಅದರ ಸ್ಪಷ್ಟತೆಯನ್ನು ತೋರಿಸುತ್ತದೆ.

೫.೩.೪ ಭಾಷಿಕ ಶತ್ರುವನ್ನು ಗುರುತಿಸುವಲ್ಲಿ ವಿಫಲ

ಜಾಗತೀಕರಣದ ಮೂಲಕ ದೇಶದೊಳಗೆ ಪ್ರವೇಶಿಸಿರುವ ಬಂಡವಾಳಶಾಹಿ ಶಕ್ತಿಗಳು ಶಿಕ್ಷಣ ಕ್ಷೇತ್ರವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿರುವುದು, ದೇಶದೊಳಗಿನ ಉದ್ಯಮಪತಿಗಳು ಇದಕ್ಕೆ ಕೈಜೋಡಿಸಿರುವುದು, ಅಗತ್ಯ ಕ್ರಮಗಳ ಮೂಲಕ ಸ್ಥಳೀಯ ಭಾಷೆಗಳನ್ನು ರಕ್ಷಿಸಬೇಕಾದ ಸರ್ಕಾರಗಳನ್ನು ಮುನ್ನಡೆಸುವ ನೇತಾರರೇ ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲೀಕರಾಗಿರುವುದು– ಇಂತಹ ವಾಸ್ತವದ ಎದುರಿನಲ್ಲಿ ಯಾವ ಸ್ವರೂಪದ ಹೋರಾಟಗಳು ನಮ್ಮ ಭಾಷೆಯನ್ನು ರಕ್ಷಿಸಿಕೊಳ್ಳುವಲ್ಲಿ ಸಫಲವಾಗಬಲ್ಲವು ಎಂಬ ಕುರಿತು ಕರವೇ ಗಾಢವಾಗಿ ಚಿಂತಿಸಿದಂತಿಲ್ಲ. ಮಾರುಕಟ್ಟೆಯ ಭಾಷೆ ಇಂಗ್ಲಿಷಿನ ಮೂಲಕ ಸ್ಥಳೀಯ ಭಾಷೆಯನ್ನು ನಾಶಮಾಡುತ್ತಿರುವ ಅಂತರಾಷ್ಟ್ರೀಯ ರಾಜಕಾರಣವನ್ನು ಕರವೇ ಅರ್ಥ ಮಾಡಿಕೊಂಡಿಲ್ಲ ಅಥವಾ ಈ ಬಗ್ಗೆ ಬೇಕೆಂದೇ ಮೌನವಾಗಿದೆ. ಈ ಕಾರಣದಿಂದಲೇ ಕರವೇಯ ಹೋರಾಟ ಮರಾಠಿ ಅಥವಾ ತಮಿಳಿನ ವಿರುದ್ಧ ಪ್ರಖರವಾಗಿರುವಷ್ಟು ಇಂಗ್ಲಿಷಿನ ವಿರುದ್ಧ ಇಲ್ಲ. ಮರಾಠಿ ಭಾಷೆಯನ್ನು ಮಹಾರಾಷ್ಟ್ರದ ಜನತೆಯ ಮೂಲಕ ವಿರೋಧಿಸಿದಂತೆ, ತಮಿಳು ಭಾಷೆಯನ್ನು ತಮಿಳರ ಮೂಲಕ ವಿರೋಧಿಸಿದಂತೆ ದೇಶಿ ಜನರ ಪ್ರಜ್ಞೆಯ ಭಾಗವಾಗಿರುವ ಇಂಗ್ಲಿಷೆಂಬ ಈ ಅಗೋಚರ ಶತ್ರುವನ್ನು ವಿರೋಧಿಸುವ ಬಗೆಯನ್ನು ಕಂಡು ಹಿಡಿಯುವುದು ಕರವೇ ಹೋರಾಟದ ಸ್ವರೂಪಕ್ಕೆ ತೊಡಕಾದಂತೆ ತೋರುತ್ತದೆ.

ಟಿ.ಎ ನಾರಾಯಣಗೌಡರೇ ಕರವೇ ಸಂಘಟನೆಯ ಚಾಲಕಶಕ್ತಿ. ಕರವೇ ಮುಖಪುಟದಲ್ಲಿ ಖಾಯಂ ಆಗಿ ಇರುವ ಗೌಡರ ಭಾವಚಿತ್ರ ಕರವೇ ಒಂದು ವ್ಯಕ್ತಿಕೇಂದ್ರಿತ ಸಂಘಟನೆ ಎಂಬುದನ್ನೂ ಸೂಚಿಸುತ್ತದೆ. ಆರಂಭದಿಂದಲೂ ಇಲ್ಲಿ ಗೌಡರೇ ಅಧ್ಯಕ್ಷರಾಗಿರುವುದು ಇದನ್ನು ಸಮರ್ಥಿಸುತ್ತವೆ. ರೈತ, ದಲಿತ ಸಂಘಟನೆಗಳು ಕೂಡ ಇಂತಹ ಸಾಂಸ್ಥಿಕ ಸಂರಚನೆಯನ್ನು ಹೊಂದಿದ್ದು ಕರವೇ ಸಾಂಸ್ಥಿಕ ಸಂರಚನೆಯನ್ನು ಮಾತ್ರ ಪ್ರಶ್ನಿಸುವುದು ಉಚಿತವೆನಿಸದು. ಆದರೆ ಈ ಎಲ್ಲಾ ಸಂಘಟನೆಗಳೂ ಪ್ರಜಾಪ್ರಭುತ್ವ ಮಾದರಿಯಲ್ಲಿ ತಮ್ಮ ಸಾಂಸ್ಥಿಕ ಸಂರಚನೆಯನ್ನು

ರೂಪಿಸಿಕೊಳ್ಳುವುದು ವಿಶಾಲ ವ್ಯಾಪ್ತಿಯ ಜನಸಮುದಾಯದ ವಿಶ್ವಾಸಾರ್ಹತೆಯನ್ನು ಪಡೆಯುವ ನಿಟ್ಟಿನಲ್ಲಿ ಅಗತ್ಯವಾಗಿದೆ.

೫.೩.೫ ಮತೀಯ ಅಜೆಂಡಾ ಹೊಂದಿಲ್ಲದ ಸಂಘಟನೆ

ಕನ್ನಡಪರ ಸಂಘಟನೆಗಳು ಮತೀಯ ಚಳವಳಿಯಾಗಿಯೋ, ಜಾತಿಪರ ಹೋರಾಟವಾಗಿಯೋ ಅಥವಾ ನಿರ್ದಿಷ್ಟ ರಾಜಕೀಯ ಪಕ್ಷದ ಪರವಾದ ಸಂಘವಾಗಿಯೋ ಕಂಡುಬರುತ್ತವೆ. ಇದಕ್ಕೆ ಕರವೇ ಕೂಡ ಹೊರತಲ್ಲ. 'ಕನ್ನಡ ಚಳವಳಿಯು ತನ್ನ ಸಾಮಾಜಿಕ – ಆರ್ಥಿಕ ಸೈದ್ಧಾಂತಿಕತೆಯನ್ನು ಗುರುತಿಸಿಕೊಂಡು ಆ ಮೂಲಕ ಕ್ರಿಯಾಶೀಲವಾದರೆ ಮಾತ್ರ ಅರ್ಥಪೂರ್ಣವಾದೀತು. ಇಲ್ಲದಿದ್ದರೆ, ಮೂಲಭೂತವಾದಿಗಳ, ಬಂಡವಾಳಶಾಹಿಗಳ 'ವಸಾಹತು' ವಾಗುವ ಅಪಾಯವಿದೆ.' ಎಂದು ಬರಗೂರು ರಾಮಚಂದ್ರಪ್ಪನವರು ಎಚ್ಚರಿಸುತ್ತಾರೆ. ಕರವೇ ನಿಲುವುಗಳು ಕೆಲವೊಮ್ಮೆ ಮತೀಯ ಎನ್ನಿಸಿದರೂ ಅದು ಪ್ರಜ್ಞಾಪೂರ್ವಕವಾಗಿ ಮತೀಯ ಅಜೆಂಡಾವನ್ನು ಹೊಂದಿರುವ ಸಂಘಟನೆಯಲ್ಲ. ಹಿಂದೂ ಮತೀಯವಾದಿಗಳು ಮಂಗಳೂರಿನ 'ಮಾರ್ನಿಂಗ್ ಮಿಸ್ಟ್' ಹೋಮ್ ಸ್ಟೇ ಮೇಲೆ ದಾಳಿ ಮಾಡಿ ಮಹಿಳೆಯರ ಮೇಲೆ ಅಮಾನುಷವಾಗಿ ದೌರ್ಜನ್ಯವೆಸಗಿದಾಗ ಕರವೇ ನಲ್ನುಡಿ 'ಧರ್ಮದ ಹೆಸರಿನ ರಾಕ್ಷಸರು' ಎಂದು ಕಟುವಾಗಿ ಟೀಕಿಸಿ ಲೇಖನ ಪ್ರಕಟಿಸುತ್ತದೆ. ಆದರೆ ಈ ಸಂಘಟನೆಯ ನಿಲುವುಗಳು, 'ಕರವೇ ನಲ್ನುಡಿ'ಯ ಕೆಲವೊಂದು ಲೇಖನಗಳು ಇದನ್ನು ಒಕ್ಕಲಿಗ ಜಾತಿ ಮತ್ತು ಕರ್ನಾಟಕದಲ್ಲಿ ಒಕ್ಕಲಿಗ ಜಾತಿಯ ಪರವಾದ ಪಕ್ಷವೆಂದು ಗುರುತಿಸಲಾದ ಜನತಾದಳದ ಪರವಾಗಿದೆ ಎನ್ನುವ ಅನುಮಾನ ಮೂಡಿಸುವಂತಿವೆ.

ಕರವೇ ಅಧ್ಯಕ್ಷರನ್ನು 'ನೀವು ಕರ್ನಾಟಕದ ಬಾಳಾ ಠಾಕ್ರೆಯಾಗಬೇಕು' ಎಂದು ಸಲಹೆ ಕೊಟ್ಟವರಿದ್ದಾರೆ. ಅಂದರೆ ಕರ್ನಾಟಕದ ಕನ್ನಡಪರ ಸಂಘಟನೆಗಳನ್ನು ಶಿವಸೇನೆಯ ಮಾದರಿಯಲ್ಲಿ ಕಟ್ಟಬೇಕೆನ್ನುವ ಹಂಬಲವಿದು. ಶಿವಸೇನೆ ಎಂದರೆ ಭಾಷಾ ದುರಭಿಮಾನ ಮತ್ತು ಹಿಂದೂ ಕೋಮುವಾದ ಎರಡನ್ನೂ ಎರಕ ಹೋಯ್ದು ರೂಪಿಸಿದ ಪಕ್ಷ. ಕರವೇಯ ಸಂಘಟನೆ ಭುವನೇಶ್ವರಿಯ ಚಿತ್ರ, ತಿಲಕದಂತಹ ಹಿಂದೂ ಸಂಕೇತಗಳನ್ನು ಬಳಸಿದರೂ ಇದರ ಒಳಗಡೆ ಬಹುಸಂಖ್ಯಾತ ಮತೀಯವಾದ ಪ್ರವೇಶಿಸಿದಂತಿಲ್ಲ. ಕರ್ನಾಟಕ ರಕ್ಷಣಾ ವೇದಿಕೆ ಶಿವಸೇನೆಯಂತೆ ಜನಪ್ರಿಯ ಹೋರಾಟದ ಮಾದರಿಗಳನ್ನು ಅನುಸರಿಸುತ್ತದೆ. ಶಿವಸೇನೆಯಂತೆ ಭಾವನಾತ್ಮಕ ಭಾಷಾಭಿಮಾನ ಕರವೇ ಹೋರಾಟದ ತಳಹದಿಯಾಗಿದೆ. ಕರವೇಯ ಕೆಲವು ಹೋರಾಟಗಳಲ್ಲಿ ಭಾಷಾಭಿಮಾನ ದುರಭಿಮಾನದತ್ತ ವಾಲಿದ ಸಂದರ್ಭಗಳೂ ಇವೆ.

ಕನ್ನಡಪರ ಹೋರಾಟಗಳು ಭಾಷೆಯ ಹೆಸರಿನಲ್ಲಿ ಜಾತಿ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ವೇದಿಕೆಯಾಗುತ್ತಿರುವುದನ್ನು ಬರಗೂರರು ವಿರೋಧಿಸಿದ್ದರು. ನೈರುತ್ಯ ರೈಲ್ವೆ ವಲಯ ಎಲ್ಲಿ ಸ್ಥಾಪನೆಯಾಗಬೇಕೆಂಬ ವಿವಾದವನ್ನು ಕುರಿತು 'ಮೊದಲು ಹುಬ್ಬಳ್ಳಿಯಲ್ಲಿ ಇರಲಿ ಎಂದವರು

ಆನಂತರ ತಜ್ಞರ ವರದಿಯ ಕಾರಣ ನೀಡಿ ಬೆಂಗಳೂರಿಗೆ ಇರಲಿ ಎಂದದ್ದೂ, ಮೊದಲು ಬೆಂಗಳೂರಲ್ಲಿ ಇರಲಿ ಎಂದವರು ನಂತರ ಹುಬ್ಬಳ್ಳಿಗೇ ಇರಬೇಕೆಂದು ಉಗ್ರವಾಗಿ ವಾದಿಸಿದರು. ಈ ವಿವಾದವು ಕನ್ನಡಪರ ಅಥವಾ ಕರ್ನಾಟಕಪರ ನೆಲೆಗಿಂತ, ಕರ್ನಾಟಕದ ಎರಡು ಪ್ರಮುಖ ಜಾತಿಗಳ ನಡುವಿನ ಜಗಳದಂತೆ ಕಾಣಿಸಿದ್ದು, ಕನ್ನಡಪರ ಹೋರಾಟಗಳು ತೆಗೆದುಕೊಳ್ಳುತ್ತಿರುವ ಅನಪೇಕ್ಷಿತ ತಿರುವುಗಳಿಗೆ ಕನ್ನಡಿ ಹಿಡಿಯುತ್ತವೆ' ಎಂದು ವಿಷಾದಿಸಿದ್ದರು. ಇಂತಹ ವಿಚಾರಗಳ ಬಗ್ಗೆ ಕರವೇಯಂತಹ ಕನ್ನಡಪರ ಸಂಘಟನೆಗಳು ಜಾಗೃತವಾಗಿರಬೇಕಾಗುತ್ತದೆ.

ಕನ್ನಡದ ಉಳಿವಿಗೆ ಆಗಬೇಕಾಗಿರುವ ವಿಷಯಗಳ ಕುರಿತು ಕರವೇಗೆ ಸಾಕಷ್ಟು ಸ್ಪಷ್ಟತೆ ಇದ್ದರೂ ಅವುಗಳನ್ನು ಸಾಕಾರಗೊಳಿಸುವ ನಿರಂತರವಾದ ಹೋರಾಟವನ್ನು ಕರವೇ ಹಮ್ಮಿಕೊಂಡಿಲ್ಲ. ಕರವೇ ಸಂಘಟಿಸುವ ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುವುದನ್ನು ಬಿಟ್ಟರೆ ಕನ್ನಡದ ಲೇಖಕ-ಬುದ್ಧಿಜೀವಿ ವರ್ಗ ಕರವೇ ಜೊತೆ ಗುರುತಿಸಿಕೊಂಡಿಲ್ಲ. ಇದು ಬೌದ್ಧಿಕವಾಗಿ ಸಂಘಟನೆಯನ್ನು ಕಟ್ಟುವಲ್ಲಿ ಇರುವ ತೊಡಕಿಗೆ ಕಾರಣವಾಗಿದೆ.

೫.೩.೬ ಕರ್ನಾಟಕ ರಕ್ಷಣಾ ವೇದಿಕೆ ಮತ್ತು ಕರ್ನಾಟಕ ವಿಮೋಚನಾ ರಂಗ : ಭಿನ್ನತೆಗಳು

ಕನ್ನಡವನ್ನು ಉಳಿಸಿಕೊಳ್ಳುವ ಹೋರಾಟದ ಸ್ವರೂಪದ ಕುರಿತು ತೊಂಬತ್ತರ ದಶಕದಲ್ಲಿ ಕ್ರಿಯಾಶೀಲವಾಗಿದ್ದ ಕರ್ನಾಟಕ ವಿಮೋಚನಾ ರಂಗಕ್ಕೆ ಹೆಚ್ಚು ಸ್ಪಷ್ಟತೆಯಿತ್ತು. 'ತಮ್ಮ ಮಾತೃಭಾಷೆಗಳನ್ನು ಉಳಿಸಿಕೊಳ್ಳುವುದು, ಆಡಳಿತ ಶಿಕ್ಷಣಗಳಲ್ಲಿ ಅವುಗಳನ್ನು ಯೋಗ್ಯವಾಗುವಂತೆ ರೂಢಿಸುವುದು ಇಂದು ಜನತೆಯ ಮುಂದಿರುವ ಕರ್ತವ್ಯವಾಗಿದೆ. ಕಾರಣವೇನೆಂದರೆ ಸರ್ಕಾರಗಳು ಇಂದು ಮಾತೃಭಾಷೆಗಳ ಪರವಾಗಿ ವರ್ತಿಸುತ್ತಿಲ್ಲ. . .. ಕೇಂದ್ರ ಸರ್ಕಾರ ಹತ್ತು ಹಲವು ರೀತಿಯಲ್ಲಿ ಹಿಂದಿಯನ್ನು ಹೇರುತ್ತಿದೆ. ಇಂಗ್ಲಿಶನ್ನು ಸಹಾಯಕ ಭಾಷೆಯೆಂದು ಕರೆದರೂ ಎಲ್ಲಾ ರಂಗದಲ್ಲಿ ಹಿಂದಿಗೆ ಮೊದಲು ಇಂಗ್ಲಿಷ್ ಪ್ರಮುಖ ಸ್ಥಾನದಲ್ಲಿದೆ. ಇದರೊಂದಿಗೆ ಸಂಸ್ಕೃತ ಭಾಷೆ ಪ್ರಥಮ ಭಾಷೆಯಾಗಿ ಸೇರಿಸಲ್ಪಟ್ಟಿದೆ. .. ..ಇದರಿಂದಾಗಿ ಕನ್ನಡ ಪ್ರಯೋಜನಕ್ಕೆ ಬಾರದ ಭಾಷೆಯಂತಾಗಿದೆ. ಆದ್ದರಿಂದ ಕನ್ನಡ ಭಾಷಾಭಿವೃದ್ಧಿಗೆ ತಡೆಗಲ್ಲಾಗಿರುವ ಹಿಂದಿ, ಇಂಗ್ಲಿಷ್, ಸಂಸ್ಕೃತಗಳನ್ನು ತೀವ್ರವಾಗಿ ವಿರೋಧಿಸಬೇಕು'[೨೩] ಕವಿರಂ ಚಿಂತನೆಯ ಮೂಲ ಕುವೆಂಪು ಅವರಲ್ಲಿತ್ತು.

'ಹಿಂದಿ-ಇಂಗ್ಲಿಷ್ ಭಾಷೆಗಳನ್ನು ಕನ್ನಡದ ಮೇಲೆ ಹೇರುತ್ತಿರುವುದಕ್ಕೆ ಕಾರಣ ಸ್ಪಷ್ಟವಾಗಿದೆ. ಆಳುವ ವರ್ಗದ ಭಾಷೆಗಳೇ ಆಳುವ ಭಾಷೆಗಳಾಗಿರುತ್ತವೆ. ಭಾರತದ ಮೇಲೆ ದಲ್ಲಾಳಿ ಬಂಡವಾಳಿಗರ ಹಾಗೂ ಸಾಮ್ರಾಜ್ಯಶಾಹಿಗಳ ಆರ್ಥಿಕ, ರಾಜಕೀಯ ನಿಯಂತ್ರಣವಿದೆ... .. ಇಂಗ್ಲಿಷ್ ಅವಲಂಬನೆ ಇರುವುದು ಆ ಭಾಷೆಯ ಶ್ರೇಷ್ಠತೆಯನ್ನಾಧರಿಸದೆ ಐರೋಪ್ಯ ದೇಶಗಳ ಮೇಲೆ

ನಮಗಿರುವ ಆರ್ಥಿಕ ಅವಲಂಬನೆಯನ್ನಾಧರಿಸಿದೆ’[೨೪] ಎನ್ನುವ ಕವಿರಂಗೆ ಪ್ರಭುತ್ವಗಳು ಇಂಗ್ಲಿಷಿನ ಹಿಂದೆ ಬಿದ್ದಿರುವ ಹಿಂದಿನ ಅಂತರಾಷ್ಟ್ರೀಯ ರಾಜಕಾರಣದ ಅರಿವು, ಗೂಗಿ ವಾ ಥಿಯಾಂಗೋನ ಮೂಲಕ ಲಭ್ಯವಾದ ಆಫ್ರೀಕಾದಲ್ಲಿ ಇಂಗ್ಲಿಶು ಮಾಡಿದ ಅನಾಹುತಗಳ ಅರಿವಿತ್ತು. ಆದ್ದರಿಂದಲೇ ಅದು ಕನ್ನಡದ ಸಂಕಟಕ್ಕೆ ಮರಾಠಿ, ತಮಿಳಿನಂತಹ ದೇಸಿ ಭಾಷೆಗಳನ್ನು ದೂರುವುದಿಲ್ಲ.

ಭಾಷೆಯನ್ನು ಉಳಿಸಿಕೊಳ್ಳುವ ಚಳವಳಿಗಳು ಜನತೆಯಿಂದ ಆರಂಭವಾಗಬೇಕು ಎನ್ನುವ ನಿಲುವು ಕವಿರಂ ಸಂಘಟನೆಯದ್ದು. ಎಲ್ಲ ಜನಪರ ಚಳವಳಿಗಳ ಸಂಘಟನೆಗಳು ಈ ಮಾತುಗಳನ್ನು ಬಳಸುತ್ತವೆ. ಕರವೇ ಕೂಡ ಇದಕ್ಕೆ ಹೊರತಲ್ಲ. ಆದರೆ ವ್ಯಕ್ತಿಗಳನ್ನು ವೈಭವೀಕರಿಸುವ ನಾಯಕತನ ಗುಣ ಕರವೇ ಸಂಘಟನೆಯಲ್ಲಿ ಢಾಳಾಗಿ ಕಾಣುತ್ತದೆ. ಕನ್ನಡವೂ ಸೇರಿದಂತೆ ಭಾರತೀಯ ದೇಸಿ ಭಾಷೆಗಳಿಗೆ ಕಂಟಕವಾಗಿರುವುದು ಇಂಗ್ಲಿಶ್, ಹಿಂದಿ ಮತ್ತು ಸಂಸ್ಕೃತಗಳೇ ಹೊರತು ಮರಾಠಿ, ತಮಿಳಿನಂತಹ ಸೋದರ ದೇಸಿ ಭಾಷೆಗಳಲ್ಲ ಎನ್ನುವ ಖಚಿತತೆ ಕವಿರಂನಲ್ಲಿದ್ದರೆ ಕರವೇಯಲ್ಲಿ ಅದು ವ್ಯತಿರಿಕ್ತವಾಗಿದೆ.

ಸೈದ್ಧಾಂತಿಕ ಚೌಕಟ್ಟಿನಲ್ಲಿ ಭಾಷೆಯ ಪರವಾಗಿ ಕೆಲಸ ಮಾಡುವ ಸಂಘಟನೆಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಜನರನ್ನು ತಲುಪಿದ್ದು ಪ್ರಮುಖವೆನಿಸುವ ಮಿತಿಗಳಿದ್ದರೂ ಜನಪ್ರಿಯ ನೆಲೆಯ ಕನ್ನಡ ಅಸ್ಮಿತೆಯನ್ನು ಹೊಂದಿರುವ ಕರವೇಯಂತಹ ಕನ್ನಡಪರ ಸಂಘಟನೆಗಳೇ. ಇವು ನಾಡಿನ ನೆಲ, ಜಲ, ಭಾಷೆಗೆ ಎದುರಾದ ಕಂಟಕಗಳಾದರೂ ಭಾವನಾತ್ಮಕ ಮತ್ತು ಜನಪ್ರಿಯ ಸಂಗತಿಗಳನ್ನೇ ಹೋರಾಟದ ವಸ್ತುಗಳನ್ನಾಗಿ ತೆಗೆದುಕೊಂಡದ್ದು ಇದಕ್ಕೆ ಪ್ರಮುಖ ಕಾರಣ. ವರ್ಗದೃಷ್ಟಿಯಿಂದ ನೋಡುವ, ಕಡು ಎಡಪಂಥೀಯ ನಿಲುವನ್ನು ಹೊಂದಿದ್ದ ಕವಿರಂನಂತಹ ಭಾಷಾ ಸಂಘಟನೆಗಳ ಜಿಗುಟುತನ ಅದರ ವಿಸ್ತರಣೆಗೆ ಅಡ್ಡಿಯಾದಂತೆ ತೋರುತ್ತದೆ. ನೆರೆರಾಜ್ಯದೊಂದಿಗೆ ವಿವಾದ ಭುಗಿಲೆದ್ದಾಗ ಈ ಎರಡೂ ಬಗೆಯ ಸಂಘಟನೆಗಳು ಪ್ರತಿಕ್ರಿಯಿಸುವ ರೀತಿಯನ್ನು ಉದಾಹರಣೆಯನ್ನಾಗಿ ತೆಗೆದುಕೊಂಡರೆ ಒಂದು ಇನ್ನೊಂದು ಭಾಷಿಕರನ್ನು ವೈರಿ ಸ್ಥಾನದಲ್ಲಿ ನೋಡಿ ಜನರ ಬೆಂಬಲ ಪಡೆದರೆ ಮತ್ತೊಂದು ಪರಭಾಷಿಕರಾಗಿ ನೋಡದೆ, ಬದುಕು ರೂಪಿಸಿಕೊಳ್ಳಲು ಕರ್ನಾಟಕಕ್ಕೆ ಬಂದ ಬಡವರ್ಗದ ಜನರೆಂದು ಪರಿಗಣಿಸಿ ಈ ವಿವಾದಕ್ಕೆ ಪ್ರಭುತ್ವದ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಯೇ ಕಾರಣವೆಂದು ಅದರ ವಿರುದ್ಧ ಹೋರಾಟ ಹಮ್ಮಿಕೊಳ್ಳುತ್ತದೆ. ಇದುವೇ ಕಾರಣದಿಂದ ಜನರನ್ನು ಒಳಗೊಳ್ಳುವುದರಲ್ಲಿ ಹಿನ್ನಡೆಯನ್ನು ಅನುಭವಿಸುತ್ತದೆ. ಆದರೆ ಈ ಎರಡೂ ಸಂಘಟನೆಗಳು ನಡೆಸಿದ ಹೋರಾಟದ ಫಲಶ್ರುತಿಗೂ ಅವುಗಳ ವಿಸ್ತರಣೆಯ ಪ್ರಮಾಣಕ್ಕೂ ಸಂಬಂಧವಿಲ್ಲ ಎನ್ನುವುದು ಮುಖ್ಯವಾದ ಸಂಗತಿ.

೫.೪ ಜನಪ್ರಿಯ ನೆಲೆಯ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಜನಪ್ರಿಯ ನೆಲೆಯ ಕನ್ನಡ ಅಸ್ಮಿತೆಯ ಚಿಂತನೆಗಳು ಜನಸಮುದಾಯವನ್ನು ಬೇಗನೇ ಆಕರ್ಷಿಸುವ ಗುಣಗಳನ್ನು ಹೊಂದಿದ್ದು ಇದನ್ನು ಬಳಸುವ ಬಗೆಯಲ್ಲಿ ಭಾಷಿಕರಿಗೆ ಬೆಳಕಾಗುವ ಮತ್ತು ಬೆಂಕಿಯಾಗುವ ಎರಡೂ ಬಗೆಯ ಪರಿಣಾಮಗಳನ್ನು ಬೀರಬಲ್ಲದ್ದಾಗಿವೆ. ಕನ್ನಡ ಅಸ್ಮಿತೆ ಕುರಿತ ಜನಪ್ರಿಯ ನೆಲೆಯ ಚಿಂತನೆಗಳು ನೆರೆಯ ಮರಾಠಿಯಲ್ಲಾದಂತೆ ಒಟ್ಟಾರೆಯಾಗಿ ಇದುವರೆಗೂ ಮತೀಯ ನೆಲೆಗೆ ಹೊರಳಿಲ್ಲ. ಆದರೆ ಈ ಚಿಂತನೆಗಳು ಭಾಷೆಯೊಂದಿಗೆ ಕನ್ನಡ ಭಾಷಿಕರ ನಿತ್ಯ ಬದುಕಿನ ಸಂಕಟಗಳ ಕುರಿತಂತೆ ವಿಸ್ತರಿಸುವ ಅಗತ್ಯವಿದೆ. 'ಭಾಷಾ ಚಳುವಳಿ ಮತ್ತು ಹಿಂದುತ್ವ – ಎರಡೂ ದೊಡ್ಡ ಸಂಖ್ಯೆಯಲ್ಲಿ ಜನರು ಭಾಗವಹಿಸುವ ರಾಜಕೀಯ ಕಾರ್ಯಕ್ರಮಗಳಾದರೂ, ಅವುಗಳ ನಿಜವಾದ ಉದ್ದೇಶ ಜನರ ಸ್ವಾತಂತ್ರ್ಯವನ್ನು ಹತ್ತಿಕ್ಕುವುದು ಅಥವಾ ಪ್ರಭುತ್ವದ ಶಕ್ತಿಯನ್ನು ಹೆಚ್ಚಿಸುವುದು. ಜನರನ್ನು ಒಂದು ಪ್ರಧಾನ ಭಾಷೆ ಮತ್ತು ಧರ್ಮಕ್ಕೆ ಕಟ್ಟಿಹಾಕುವುದು'[೨೫] ಎಂದು ಜಿ.ರಾಜಶೇಖರ್ ವಿಶ್ಲೇಷಿಸುತ್ತಾರೆ. ಹಿಂದುತ್ವದಂತಹ ಮತೀಯ ಅಜೆಂಡಾ ಹೊಂದಿರುವ ಸಂಘಟನೆಗಳಿಗೆ ಈ ಮಾತುಗಳನ್ನು ಪೂರ್ಣಪ್ರಮಾಣದಲ್ಲಿ ಅನ್ವಯಿಸಬಹುದಾದರೂ ಕರ್ನಾಟಕದ ಸಂದರ್ಭದಲ್ಲಿ ಎಲ್ಲಾ ಭಾಷಾ ಚಳುವಳಿಗಳಿಗೆ ಲಗತ್ತಿಸಲಾಗದು.

ಕನ್ನಡ ಭಾಷಿಕ ಅಸ್ಮಿತೆಗೆ ಜೀವಪರ ಮೌಲ್ಯಗಳನ್ನು ತುಂಬಿದ ಪ್ರಾಚೀನ ಕವಿಗಳು, ವಚನಕಾರರು, ಕೀರ್ತನೆಕಾರರು, ತತ್ವಪದಕಾರರು, ಹೊಸಗನ್ನಡದ ಸಾಹಿತಿಗಳನ್ನು ರೂಪಮಾತ್ರವಾಗಿ ಸ್ವೀಕರಿಸುವ ಮಿತಿ ಜನಪ್ರಿಯ ನೆಲೆಯ ಚಿಂತನೆಗಳಿಗಿದ್ದು ಆಶಯಾತ್ಮಕವಾಗಿಯೂ ಇವರನ್ನೆಲ್ಲ ತಮ್ಮದನ್ನಾಗಿ ಮಾಡಿಕೊಳ್ಳುವ ಮೂಲಕ ಈ ಮಿತಿಯನ್ನು ಮೀರಬಹುದಾಗಿದೆ.

ಕರ್ನಾಟಕ ಭೌಗೋಳಿಕವಾಗಿ ಸಾಕಾರವಾಗದಿದ್ದಾಗಿನ ಸಂದರ್ಭದಲ್ಲಿ ನೆರೆಭಾಷೆಗಳೊಂದಿಗಿನ ವಾಗ್ವಾದಗಳು ಆ ಕಾಲಘಟ್ಟದಲ್ಲಿ ಸಹಜಸ್ವರೂಪದ್ದೆನಿಸುತ್ತಿದ್ದು ವರ್ತಮಾನದಲ್ಲಿ ಅವುಗಳನ್ನು ಮುಂದುವರೆಸಿವುದರಲ್ಲಿ ಔಚಿತ್ಯವಿಲ್ಲ. ಏಕೆಂದರೆ ವರ್ತಮಾನದ ಕನ್ನಡದ ಶತ್ರುವೇ ಬೇರೆ ಸ್ವರೂಪದ್ದಾಗಿದೆ. ಜಾಗತೀಕರಣದ ಭಾಷಿಕ ರಾಜಕಾರಣವನ್ನು ಅರ್ಥೈಸುವುದರ ಮೂಲಕ ಜನಪ್ರಿಯ ನೆಲೆಯ ಚಿಂತನೆಗಳು ಅದನ್ನು ಕಂಡುಕೊಳ್ಳಬೇಕಾಗಿದೆ.

ಟಿಪ್ಪಣಿಗಳು

೧. ಕೃಷ್ಣರಾಯ. ಅ.ನ., ಅ.ನ. ಕೃಷ್ಣರಾಯರ ಸಾಹಿತ್ಯ ಶ್ರೇಣಿ (ಸಂಪುಟ.೩), ಪು. ೧೦೪

೨. ಅದೇ, ಪು. ೧೦೪

೩. ಅದೇ, ಪು. ೨೩೩

೪. ಅದೇ, ಪು. ೧೦೫

೫. ಅದೇ, ಪು. ೧೦೫

೬. ಅದೇ, ಪು. ೧೪೮–೧೫೩

೭. ಅದೇ, ಪು. ೨೩೧ – ೭

೮. ಅದೇ, ಪು. ೨೮೩–೪

೯. ಅದೇ, ಪು. ೧೨೫

೧೦. ಅದೇ, ಪು. ೧೩೯

೧೧. ಅದೇ, ಪು. ೧೩೫

೧೨. ಅದೇ, ಪು. ೧೩೯–೧೪೦

೧೩. ಅದೇ, ಪು. ೧೪೩

೧೪. ಅದೇ, ಪು. ೨೩೩

೧೫. ಅದೇ, ಪು. ೧೧೭–೧೯

೧೬. ಅದೇ, ಪು. ೧೧೭–೧೯

೧೭. ಅದೇ, ಪು. ೧೬೯

೧೮. ನಾರಾಯಣ ಕೆ.ವಿ, ಕನ್ನಡ ಜಗತ್ತು – ಅರ್ಧ ಶತಮಾನ, ಪು. ೯

೧೯. ಕೃಷ್ಣರಾಯ. ಅ.ನ., ಅ.ನ.ಕೃಷ್ಣರಾಯರ ಸಾಹಿತ್ಯ ಶ್ರೇಣಿ (ಸಂಪುಟ.೩), ಪು. ೨೩೨

೨೦. ಲಂಕೇಶ್ ಪಿ, ಟೀಕೆ ಟಿಪ್ಪಣಿ, ಪು. ೨೧೧

೨೧. ನಾರಾಯಣಗೌಡ ಟಿ, ಕರವೇ ನಲ್ನುಡಿ ಮಾಸ ಪತ್ರಿಕೆ, ಡಿಸೆಂಬರ್ ೨೦೧೨, ಪು. ೬

೨೨. ವಿಶಾಲಾಕ್ಷಿ, ಕರವೇ ನಲ್ನುಡಿ ಮಾಸ ಪತ್ರಿಕೆ, ಜುಲೈ ೨೦೧೧, ಪು. ೩

೨೩. ಕರ್ನಾಟಕ ವಿಮೋಚನಾ ರಂಗ, ಪ್ರಣಾಳಿಕೆ ಹಾಗೂ ಸಂವಿಧಾನ, ಪು. ೩೫–೩೬

೨೪. ಅದೇ, ಪು. ೩೫–೩೬

೨೫. ರಾಜಶೇಖರ್ ಜಿ, ಜಿ.ರಾಜಶೇಖರ ಅವರ ಆಯ್ದ ಬರಹಗಳು, ಪು.೯೪

ಅಧ್ಯಾಯ ೬

ಕನ್ನಡ ಅಸ್ಮಿತೆ : ದ್ರಾವಿಡ ಶೋಧದ ನೆಲೆ

೬.೧ ಪೀಠಿಕೆ

೬.೨ ಡಿ.ಎನ್ ಶಂಕರ ಭಟ್ಟ ಅವರ ಚಿಂತನೆಗಳು

೬.೨.೧ ಪೀಠಿಕೆ

೬.೨.೨ ಕನ್ನಡದ ಮೇಲಿನ ಸಂಸ್ಕೃತದ ಹೊರೆ ಇಳಿಸುವ ಕಾಯಕ

೬.೨.೩ ಮಹಾಪ್ರಾಣಾಕ್ಷರಗಳನ್ನು ಕೈಬಿಡುವುದಕ್ಕೆ ಪರ ಮತ್ತು ವಿರೋಧ

೬.೨.೪ 'ಹೊಸ ಬರಹ'ವೂ ಒಂದು ಪ್ರಮಾಣಿತ ಕನ್ನಡವೇ?

೬.೨.೫ 'ಹೊಸ ಬರಹ'ಕ್ಕೆ ಸಾಹಿತ್ಯಕ ಉದ್ದೇಶವನ್ನು ಈಡೇರಿಸಲಾಗದ ಮಿತಿ?

೬.೨.೬ ಸಂಸ್ಕೃತದ ಜಾಗದಲ್ಲಿ ಇಂಗ್ಲಿಶನ್ನಿಟ್ಟು ನೋಡದ ಚಿಂತನೆಯ ಮಿತಿ

೬.೨.೭ 'ಹೊಸ ಬರಹ' ಎತ್ತುತ್ತಿರುವ ಪ್ರಶ್ನೆಗಳು

೬.೨.೮ 'ಹೊಸ ಬರಹ' ಕುರಿತ ಮತ್ತಷ್ಟು ಪ್ರಶ್ನೆಗಳು ಮತ್ತು ಉತ್ತರಗಳು

೬.೩ ಕೆ.ವಿ. ನಾರಾಯಣ ಅವರ ಚಿಂತನೆಗಳು

೬.೩.೧ ಪೀಠಿಕೆ

೬.೩.೨ ಕನ್ನಡದ ಆತಂಕ ದೂರಮಾಡುವಷ್ಟು ಶಕ್ತವಾದ ವೈಜ್ಞಾನಿಕ ಹಿನ್ನೆಲೆಯ ಗ್ರಹಿಕೆಗಳು

೬.೩.೩ ಕನ್ನಡ–ಇಂಗ್ಲಿಶ್ ಸಂಬಂಧ ಕುರಿತ ಗ್ರಹಿಕೆಗಳು

೬.೩.೪ ಈವರೆಗಿನ ಗ್ರಹಿಕೆಯಾಚೆಗೆ ವಿಸ್ತರಿಸುವ ಚಿಂತನೆಗಳು

೬.೩.೫ ಸಂಸ್ಕೃತಕ್ಕೆ ಪಾವಿತ್ರ್ಯದ ನಂಟು, ಇಂಗ್ಲಿಶಿಗೆ ಆಧುನೀಕತೆಯ ಚಹರೆ

೬.೩.೬ ಪ್ರಜಾಪ್ರಭುತ್ವೀಯ ನಿಲುವು

೬.೩.೭ ಚಳುವಳಿಗಳ ಆಳದ ಉದ್ದೇಶಗಳ ಬಗ್ಗೆ ಸಕಾರಣ ಗುಮಾನಿಗಳು

೬.೩.೮ ಬಿಡುಗಡೆ/ಮರುಸ್ಥಾಪನೆ/ಪರ್ಯಾಯಗಳ ಸಂಸ್ಕೃತದೊಂದಿಗಿನ ಸಂಬಂಧದ ವಿಶ್ಲೇಷಣೆ

೬.೪ ದ್ರಾವಿಡ ನಲೆಯ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಅಧ್ಯಾಯ ೬

ಕನ್ನಡ ಅಸ್ಮಿತೆ : ದ್ರಾವಿಡ ಶೋಧದ ನೆಲೆ

೬.೧ ಪೀಠಿಕೆ

'ದ್ರಾವಿಡ' ಎಂಬ ಪದವು ದೇಶವಾಚಕವಾಗಿ, ಜನಾಂಗವಾಚಕವಾಗಿ ಸಾಮಾನ್ಯವಾಗಿ ರೂಢಿಯಲ್ಲಿದೆ. ದ್ರಾವಿಡಭಾಷೆ ಎಂದಾಗ ಅದು ಒಂದು ಭಾಷಾವರ್ಗವನ್ನು ಹೆಸರಿಸುತ್ತದೆ. 'ಸಾಮಾನ್ಯವಾಗಿ ನಾವು ದಕ್ಷಿಣ ಭಾರತವನ್ನು ದೃಷ್ಟಿಯಲ್ಲಿರಿಸಿಕೊಂಡು ಅದನ್ನು ದ್ರಾವಿಡ ನಾಡೆಂದು, ಇಲ್ಲಿ ವಾಸ ಮಾಡುವ ಜನರನ್ನು ದ್ರಾವಿಡರೂ ಎಂದು ಗುರುತಿಸುವುದಿದೆ.' ಎಂದು ಮೋಹನ ಕುಂಟಾರ್ 'ದ್ರಾವಿಡಶಾಸ್ತ್ರ' ಕೃತಿಯಲ್ಲಿ ತಿಳಿಸುತ್ತಾರೆ. ಇನ್ನೂ ನಿರ್ದಿಷ್ಟವಾಗಿ 'ದ್ರಾವಿಡ ಪದವನ್ನು ವ್ಯಾಪಕವಾಗಿ 'ತಮಿಳ' ಪದಕ್ಕೆ ಪರ್ಯಾಯವಾಗಿ ಬಳಸಲಾಗಿದೆ. ಸಂಸ್ಕೃತ ವಿದ್ವಾಂಸರ ಪ್ರಕಾರ ದ್ರಾವಿಡ ಎಂಬುದು ದಕ್ಷಿಣ ಭಾರತದ ಒಂದು ಭೂಭಾಗವೇ ಆಗಿದೆ. ಸಂಸ್ಕೃತದ ಮಹಾವಿದ್ವಾಂಸನಾದ ಫೆಡ್ರಿಕ್ ಮ್ಯಾಕ್ಸ್ ಮುಲ್ಲರ್ ಮೊತ್ತಮೊದಲ ಬಾರಿಗೆ ಹತ್ತೊಂಬತ್ತನೆಯ ಶತಮಾನದ ದಶಕದಲ್ಲಿ ದ್ರಾವಿಡ ಭಾಷೆಗಳನ್ನು ವಿಭಾಗಿಸಿದ. ಅಲ್ಲಿಂದ ಮುಂದೆ 'ದ್ರಾವಿಡ' ಎಂಬುದು ಒಂದು ಭಾಷಿಕ ಪರಿಕಲ್ಪನೆಯಾಗಿ ಭಾರತದಲ್ಲಿ ನಿರ್ದಿಷ್ಟವಾದ ಒಂದು 'ಭಾಷಾ ಪರಿವಾರ' ಎಂಬರ್ಥದಲ್ಲಿ ಪ್ರಕಟಗೊಂಡಿತು ಎಂದು ಇದೇ ಕೃತಿಯಲ್ಲಿ ಮಾಧವ ಪೆರಾಜೆ ವಿವರಿಸುತ್ತಾರೆ.

ಶಂಬಾ ಅವರು ಪಾಶ್ಚಾತ್ಯ ಮಾನವಶಾಸ್ತ್ರಜ್ಞರು ಮತ್ತು ದೇಶಿ ವಿದ್ವಾಂಸರ 'ದ್ರಾವಿಡ' ಅಧ್ಯಯನಗಳನ್ನು ಆಧರಿಸಿ, 'ದ್ರಾವಿಡ' ಪದಕ್ಕಿರುವ ಅರ್ಥವ್ಯಾಪ್ತಿಯನ್ನು ಚರ್ಚಿಸುತ್ತಾರೆ. 'ದ್ರಾವಿಡ' ಪ್ರಯೋಗ ವೈದಿಕ ವಾಙ್ಮಯದಲ್ಲಿ 'ದಸ್ಯು'ಗಳನ್ನು ನಿರ್ದೇಶಿಸುವ ಪದ. ಆರ್ಯರೊಂದಿಗೆ ಹೋರಾಡಿದ ದಸ್ಯುಗಳೇ ದ್ರಾವಿಡರಾಗಿದ್ದು, ದ್ರಾವಿಡ ಮೂಲದ 'ಬ್ರಾಹೂಯಿ' ಭಾಷೆ ಇಂದಿಗೂ ಬಲೂಚಿಸ್ಥಾನದ ಪರಿಸರದಲ್ಲಿರುವುದು, ಸಿಂಧು ಸಂಸ್ಕೃತಿಯ ದ್ರಾವಿಡರ ಅಸ್ತಿತ್ವಕ್ಕೆ ಪ್ರಬಲ ಪುರಾವೆಯೆನ್ನುವುದು ಶಂಬಾ ಅವರ ವಾದ. ಇಂದಿನ ತಮಿಳರು ಮತ್ತು ಕನ್ನಡಿಗರು ಮೂಲ ದ್ರಾವಿಡ ಪಂಗಡಕ್ಕೆ ಸೇರಿದವರೆನ್ನುವುದನ್ನು ಹಳಗನ್ನಡ ಮತ್ತು ತಮಿಳು ಭಾಷೆಗಳೆರೆಡು ಒಡೆಯುವ ಪೂರ್ವದಲ್ಲಿದ್ದ ಏಕರೂಪ 'ಕಂದಮಿಳ' ಭಾಷೆ. ಕಂದಮಿಳ ಭಾಷೆಯನ್ನಾಡುವವರೇ 'ಕಂದಮಿಳರು', ದ್ರಾವಿಡ ಸಂಸ್ಕೃತಿಯ ಮೂಲಿಗರಾದ 'ಕಂದಮಿಳರು' ಕ್ರಿಸ್ತಪೂರ್ವ ಸು.೨೦೦೦ ವರ್ಷಗಳ ಹಿಂದೆ ನರ್ಮದೆಯ ಪರಿಸರದಲ್ಲಿ ಅಂದರೆ ಇಂದಿನ ಗುಜರಾಥ(ಲಾಟ), ಬಂಗಾಲ, ಮಹಾರಾಷ್ಟ್ರದಲ್ಲಿ ನೆಲೆಸಿದ್ದರು ಎಂದು ಶಂಬಾ ಅವರು ನಿರ್ಣಯಕ್ಕೆ ಬರುತ್ತಾರೆ.

ದ್ರಾವಿಡಶೋಧದ ನೆಲೆಯಲ್ಲಿ ಕನ್ನಡ ಅಸ್ಮಿತೆಯನ್ನು ಕಟ್ಟಿಕೊಳ್ಳುವ ಪ್ರಯತ್ನದ ಹಿಂದಿನ ಪ್ರೇರಣೆಗಳಿಗೆ ಹಲವು ಆಯಾಮಗಳಿವೆ. ತಿಳಿವಳಿಕೆಯ ಕೊರತೆಯಿಂದ ಆಗಿರಬಹುದಾದ ಸಂಸ್ಕೃತವೇ ಕನ್ನಡದ ಮೂಲ ಎಂಬ ಸಮಾಜದಲ್ಲಿದ್ದ ನಂಬಿಕೆ ಸಂಶೋಧನೆಗಳು ನಡೆದು ಸತ್ಯ ತಿಳಿದ ನಂತರ ಸ್ವಲ್ಪಮಟ್ಟಿಗೆ ಬದಲಾಯಿತು. ಆದರೆ ಸಂಸ್ಕೃತವೇ ಕನ್ನಡದ ಮೂಲ ಎಂಬ ವಾದವನ್ನು ಒಂದು ವರ್ಗ ಮುಂದುವರೆಸಿದ್ದು ಇದರ ಹಿಂದೆ ನಿರ್ದಿಷ್ಠ ಉದ್ದೇಶ ಇರುವುದನ್ನು ಹೇಳಿತು. ಈ ಉದ್ದೇಶ ಭಾಷಾಮೂಲದ್ದಾಗಿರದೆ ವರ್ಗ ಹಿತಾಸಕ್ತಿಯದ್ದಾಗಿತ್ತು.

ಭಾರತದಲ್ಲಿ ಬ್ರಿಟಿಶ್ ಅಧಿಕಾರಿಗಳು ದಕ್ಷಿಣ ಭಾರತದ ಭಾಷೆಗಳ ಮೂಲವನ್ನು ಅರಿಯಲು ಸಂಶೋಧನೆಗೆ ತೊಡಗಲು ಭಾಷಾ ಸಂಬಂಧಿ ಆಸಕ್ತಿ ಮತ್ತು ಸ್ಥಳೀಯ ಭಾಷೆಗಳನ್ನು ಅರ್ಥಮಾಡಿಕೊಳ್ಳುವುದು ಪ್ರಮುಖ ಪ್ರೇರಣೆಯಾಗಿದ್ದಂತೆ ತೋರುತ್ತದೆ. ಆದರೆ ಈ ಸಂಶೋಧಕರು ಹೊರಗೆಡಹಿದ ಫಲಿತಗಳು ಮಾತ್ರ ಭಾರತದ ಸಾಮಾಜಿಕ ವಲಯದಲ್ಲಿ ಸಂಚಲನೆಗೆ ಕಾರಣವಾಯಿತು. ಪುರೋಹಿತಶಾಹಿ ವರ್ಗದವರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತಿದ್ದ, ಬಹುಸಂಖ್ಯಾತ ಕೆಳವರ್ಗದವರಿಗೆ ಅಲಭ್ಯವಾಗಿದ್ದ ಶಿಕ್ಷಣ ಸೌಲಭ್ಯವೇ ಕಾರಣವಾಗಿ ಸಮಾಜದಲ್ಲಿ ಜಾತಿ ತಾರತಮ್ಯ, ಅವಮಾನ, ಆರ್ಥಿಕ ಅಸಮಾನತೆಗಳಿಗೆ ಕಾರಣವಾಗಿತ್ತು. ಸಂಸ್ಕೃತ ಪುರೋಹಿತಶಾಹಿ ವರ್ಗದ ಭಾಷೆಯಾಗಿದ್ದು ಈ ಭಾಷೆಯನ್ನು ಕಲಿಯಲು ಬೇರೆಯವರಿಗೆ ನಿರ್ಬಂಧವಿತ್ತು. ಪರಿಣಾಮವಾಗಿ ಭಾರತೀಯ ಬಹುಸಂಖ್ಯಾತ ಕೆಳವರ್ಗದಲ್ಲಿ ಪುರೋಹಿತಶಾಹಿ ಮತ್ತು ಸಂಸ್ಕೃತದ ಮೇಲಿನ ಸಿಟ್ಟು ಬೇರ್ಪಡಿಸಲಾಗದಂತಿತ್ತು. ಆದರೂ ಕನ್ನಡದ ಮೂಲಭಾಷೆ ಸಂಸ್ಕೃತ ಎನ್ನುವ ಪ್ರಚಲಿತದಲ್ಲಿದ್ದ ನಂಬಿಕೆಯ ಹಿನ್ನೆಲೆಯಲ್ಲಿ ಆ ಸಿಟ್ಟು ವ್ಯಕ್ತವಾಗುತ್ತಿರಲಿಲ್ಲ. ಯಾವಾಗ ಕನ್ನಡ ಸಂಸ್ಕೃತದಿಂದ ಟಿಸಿಲೊಡೆದ ಭಾಷೆ ಅಲ್ಲ, ಇದು ದ್ರಾವಿಡಭಾಷಾ ಕುಟುಂಬದಿಂದ ಬಂದ ಭಾಷೆ ಎನ್ನುವ ಸತ್ಯ ಅನಾವರಣವಾಯಿತೋ ಅದು ಕೆಳವರ್ಗದವರಲ್ಲಿ ಸ್ವಾಭಿಮಾನದ ಸಂಗತಿಯಾಗಿ ಹೊರಹೊಮ್ಮತೊಡಗಿತು. ಅಂದರೆ ಕನ್ನಡವನ್ನು ಸಂಸ್ಕೃತದಿಂದ ಬೇರ್ಪಡಿಸಿ, ದ್ರಾವಿಡ ನೆಲೆಯಿಂದ ನೋಡುವುದು ಭಾಷಿಕ ಕಾರಣಕ್ಕಿಂತ ಸಾಮಾಜಿಕ ಕಾರಣಕ್ಕಾಗಿ ಮುನ್ನೆಲೆಗೆ ಬಂದಿತು. ಈ ಅಂಶಗಳು ದ್ರಾವಿಡಮೂಲದ ಕನ್ನಡವನ್ನು ಪುನರೂಪಿಸುವ ಪ್ರಯತ್ನದ ಹಿಂದೆಯೂ ದಟ್ಟವಾಗಿರುವುದನ್ನು ಗುರುತಿಸಬಹುದು.

ಕನ್ನಡ ಅಸ್ಮಿತೆಯನ್ನು ದ್ರಾವಿಡ ನೆಲೆಯಿಂದ ನೋಡುವ ಚಿಂತನಾಕ್ರಮದ ಹಿಂದೆ ಭಾಷಿಕ ಕಾರಣವೂ ಇದೆ. ಈ ಭಾಷಿಕ ಕಾರಣವೂ ಸಾಮಾಜಿಕ ನೆಲೆಯಲ್ಲಿ ಅಂತರ್ಗತವಾಗಿದೆ. ಬರಹದ ಭಾಷೆ ಸಂಸ್ಕೃತದಿಂದ ಪ್ರಭಾವಿತವಾಗಿದ್ದು ಆಡುಭಾಷೆಗಿಂತ ಭಿನ್ನವಾಗಿದೆ. ಬರಹದ ಭಾಷೆಯ ಎದುರು ಆಡುಭಾಷೆ ಕೀಳರಿಮೆಯನ್ನು ಅನುಭವಿಸುತ್ತಿದ್ದು, ಮುಖ್ಯವಾಗಿ ಕೆಳವರ್ಗದವರಿಗೆ ಇದು ಬಳಕೆಯ ಸಂದರ್ಭದಲ್ಲಿ ತೊಡಕಾಗಿ ಪರಿಣಮಿಸುತ್ತಿದೆ. ಆಡುಭಾಷೆಯ ಕನ್ನಡ ಹೆಚ್ಚು ಸಂಸ್ಕೃತ

ಪದಗಳಿಲ್ಲದ ಮೂಲ ಕನ್ನಡ ಭಾಷೆಗೆ ಹತ್ತಿರವಾಗಿದೆ. ಇದು ಕೆಳವರ್ಗದವರಿಗೆ ಬಳಸಲು ಸುಲಭವಾಗಿದೆ. ಆಡುಭಾಷೆಯ ಕನ್ನಡವನ್ನೇ ಬರಹದಲ್ಲಿಯೂ ಬಳಸುವಂತೆ ದ್ರಾವಿಡ ನೆಲೆಯ ಕನ್ನಡ ಅಸ್ಮಿತೆ ಒತ್ತಾಯಿಸುತ್ತದೆ. ಈ ಒತ್ತಾಯದ ಹಿಂದೆ ಎರಡು ಉದ್ದೇಶಗಳಿವೆ. ಮೊದಲನೆಯದು ಸಂಸ್ಕೃತದ ವಿರೋಧ. ಒಂದು ಭಾಷೆಯ ಹೇರಿಕೆಯ ವಿರೋಧ, ಆ ಸಂಸ್ಕೃತಿಯ ವಿರೋಧವೂ ಆಗಿಬಿಡುತ್ತದೆ. ಎರಡನೆಯದು ಸಂಸ್ಕೃತದ ಹಿಡಿತದಿಂದ ಹೊರಬರುವ ಮತ್ತು ಕೆಳವರ್ಗದ ಕನ್ನಡ ಭಾಷೆಯನ್ನು ಮೇಲ್ಚಲನೆಗೊಳಪಡಿಸುವ ಉದ್ದೇಶ.

ದ್ರಾವಿಡಶೋಧದ ನೆಲೆಯ ಕನ್ನಡ ಅಸ್ಮಿತೆಯ ಮುಖ್ಯ ಚಹರೆಯೆಂದರೆ ಸ್ವವಿಮರ್ಶೆಯ ಗುಣ. ಇದು ಇಂಗ್ಲಿಶನ್ನೋ ಅಥವಾ ನೆರೆಯ ಭಾಷೆಯನ್ನೋ ಕನ್ನಡದ ವೈರಿಭಾಷೆಯೆಂದು ಪರಿಗಣಿಸುವುದಿಲ್ಲ. ಸಂಸ್ಕೃತವನ್ನು ಕನ್ನಡಕ್ಕೆ ಕಂಟಕ ತರುತ್ತಿದೆ ಎಂದು ಭಾವಿಸಿದರೂ ಅಲ್ಲಿ ಮುಖ್ಯವಾಗಿರುವುದು ಭಾಷೆಯಾಗಿ ಸಂಸ್ಕೃತಕ್ಕಿಂತಲೂ ಸಂಸ್ಕೃತದ ಮೂಲಕ ತಮ್ಮ ಶ್ರೇಷ್ಠತೆಯನ್ನು ಪ್ರತಿಷ್ಠಾಪಿಸಲು ಬಯಸುವ ಸಾಮಾಜಿಕ ವರ್ಗ. ದ್ರಾವಿಡಶೋಧದ ನೆಲೆ ಕನ್ನಡದೊಳಗೆ ಪರಿವರ್ತನೆ ಮತ್ತು ಸುಧಾರಣೆಯ ಮೂಲಕ ಕನ್ನಡವನ್ನು ಉಳಿಸಲು ಮತ್ತು ಬೆಳೆಸಲು ಪ್ರಯತ್ನಿಸುತ್ತದೆ. ಇದು ಕನ್ನಡದೊಳಗೇ ಇರುವ ವಿವಿಧ ಸಾಮಾಜಿಕ ವರ್ಗಗಳ ಹಿತಾಸಕ್ತಿಗಳು ಕನ್ನಡಕ್ಕೆ ಉಂಟು ಮಾಡುತ್ತಿರುವ ತೊಡಕುಗಳನ್ನು ಪ್ರಧಾನವಾಗಿ ಗಮನಿಸುತ್ತದೆ.

ಕನ್ನಡದಲ್ಲಿ ದ್ರಾವಿಡಶೋಧದ ನೆಲೆಯಲ್ಲಿ ಕನ್ನಡ ಅಸ್ಮಿತೆಯನ್ನು ಕಟ್ಟಿಕೊಡುತ್ತಿರುವವರಲ್ಲಿ ಡಿ.ಎನ್ ಶಂಕರಭಟ್ಟರು ಮತ್ತು ಕೆ.ವಿ ನಾರಾಯಣ ಅವರು ಪ್ರಮುಖರು. ಡಿ.ಎನ್ ಶಂಕರಭಟ್ಟರು ದ್ರಾವಿಡಮೂಲದ ಕನ್ನಡವನ್ನು ಪುನರ್ ರೂಪಿಸುವ ಪ್ರಯತ್ನದಲ್ಲಿದ್ದಾರೆ. ಕೆ.ವಿ ನಾರಾಯಣ ಅವರು ಜಾಗತಿಕ ಪರಿವರ್ತನೆಗಳು, ಆಧುನಿಕ ತಂತ್ರಜ್ಞಾನ, ಸಾಮಾಜಿಕ ಚಲನೆಗಳು, ವೈಜ್ಞಾನಿಕವಾಗಿ ಕಂಡುಕೊಂಡ ಕಲಿಕೆಯ ಸಾಮರ್ಥ್ಯ, ಹೀಗೆ ಎಲ್ಲ ಆಯಾಮಗಳಿಂದಲೂ ಕನ್ನಡಕ್ಕೆ ಆಗುವ ಪರಿಣಾಮಗಳನ್ನು ಮುಕ್ತವಾಗಿ ಚಿಂತಿಸಿದರೂ ಈ ಚಿಂತನೆಗಳು ದ್ರಾವಿಡ ಮೂಲದಿಂದ ಹೊರಡುತ್ತವೆ ಎನ್ನುವುದು ಮುಖ್ಯವಾದ ಸಂಗತಿ.

೬.೨ ಡಿ.ಎನ್ ಶಂಕರ ಭಟ್ಟ ಅವರ ಚಿಂತನೆಗಳು

೬.೨.೧ ಪೀಠಿಕೆ

ಡಿ.ಎನ್ ಶಂಕರಭಟ್ಟರು (೧೯೩೫) ಸಂಸ್ಕೃತ ಮತ್ತು ಭಾಷಾವಿಜ್ಞಾನದಲ್ಲಿ ಉನ್ನತ ವ್ಯಾಸಂಗ ಮಾಡಿ ಭಾರತ ಮತ್ತು ಹಲವು ದೇಶಗಳಲ್ಲಿ ಸಂಶೋಧಕರಾಗಿ, ಭಾಷಾವಿಜ್ಞಾನ ಕ್ಷೇತ್ರದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಇಂದು ಬಳಸುತ್ತಿರುವ ಕನ್ನಡ ಬರಹದ ಸ್ವರೂಪವೂ ಕೆಳವರ್ಗದ ಜನರನ್ನು ಬರಹದ ಕಲಿಕೆಯಿಂದ ದೂರ ಉಳಿಯುವಂತೆ ಮಾಡಿದೆ. ಯಾಕೆಂದರೆ ಈ

ಬರಹ ಸಾಮಾನ್ಯ ಜನರ ಮಾತಿನಿಂದ ದಿನದಿಂದ ದಿನಕ್ಕೆ ಭಿನ್ನವಾಗುತ್ತದೆ. ಅವರು ಮಾತಿನಲ್ಲಿ ಬಳಸುವ ಪದಗಳಿಗೂ ಕನ್ನಡದ ಬರಹಗಳಲ್ಲಿ, ಬಳಕೆಯಾಗುತ್ತಿರುವ ಪದಗಳಿಗೂ ಅಂತರ ಹೆಚ್ಚುತ್ತಿದೆ. ಇದರಿಂದ ಕನ್ನಡ ಕಲಿಯುವ ಕೆಲಸ ಕೆಳವರ್ಗದವರಿಗೆ ಜಟಿಲವಾಗುತ್ತಿದೆ ಎಂದು ಭಾವಿಸಿದ ಶಂಕರಭಟ್ಟರು ಇದನ್ನು ಪರಿಹರಿಸುವ ನಿಟ್ಟಿನಲ್ಲಿ ಕನ್ನಡದಲ್ಲಿ 'ಹೊಸ ಬರಹ'ವನ್ನು ರೂಪಿಸುವಲ್ಲಿ ನಿರತರಾಗಿದ್ದಾರೆ. ಕೀರ್ತನೆಕಾರರು, ವಚನಕಾರರು ಮತ್ತು ಹೊಸಗನ್ನಡದ ಸಂದರ್ಭದಲ್ಲಿ ಮೈಸೂರಿನ ಬರಹಗಾರರು ಮಾಡಿದ ಬದಲಾವಣೆಗಳಿಗೆ ಮೂಲವಾದ ಆಡುಮಾತೇ ಭಟ್ಟರ 'ಹೊಸ ಬರಹ'ಕ್ಕೆ ಆಕರವಾಗಿದೆ.

ಕನ್ನಡ ಭಾಷೆಯ ಚರಿತ್ರೆಯನ್ನು ಇದುವರೆಗೆ ಕಟ್ಟಲಾದ ಮಾದರಿಗಿಂತ ತೀರ ಭಿನ್ನವಾಗಿ ಡಿ.ಎನ್ ಶಂಕರಭಟ್ಟರು ಕಟ್ಟಲು ಪ್ರಯತ್ನಿಸಿದ್ದಾರೆ. ಕೇವಲ ಲಿಖಿತ ಆಧಾರಗಳಿಂದಷ್ಟೇ ಒಂದು ಭಾಷೆಯ ಚರಿತ್ರೆಯನ್ನು ನಿರೂಪಿಸಲು ಸಾಧ್ಯ ಎಂದು ತಿಳಿದಿದ್ದ ನಮಗೆ ಕನ್ನಡ ಭಾಷೆಯ ಆಂತರಿಕ ರಚನೆಯ ಮೂಲಕವೇ ಅದರ ಚರಿತ್ರೆ ಕಟ್ಟಲು ಸಾಧ್ಯ ಎನ್ನುವುದನ್ನು ಸಾಬೀತುಪಡಿಸಿದ್ದಾರೆ ಎಂದು ಅಶೋಕ ಕುಮಾರ ರಂಜೇರೆ ಅಭಿಪ್ರಾಯ ಪಡುತ್ತಾರೆ. ಕನ್ನಡ ಭಾಷೆಯ ಚರಿತ್ರೆಯನ್ನು ರಚಿಸುವಲ್ಲಿ ನಾವು ಹೊಸ ಪ್ರಶ್ನೆಗಳನ್ನು ಎತ್ತಿಕೊಂಡಿಲ್ಲ. ಇದಕ್ಕೆ ಒಂದು ಪ್ರಮುಖ ವಿನಾಯಿತಿ ಎಂದರೆ ಡಿ.ಎನ್ ಶಂಕರ ಭಟ್ (ಅವರ 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ') ಎನ್ನುವ ಕೆ.ವಿ.ನಾರಾಯಣ ಅವರು, ಶಂಕರ ಭಟ್ ಅವರು ಮೂವತ್ತು ವರ್ಷಗಳ ಅವಧಿಯಲ್ಲಿ ಈ ನಿಟ್ಟಿನ ತಮ್ಮ ಚಿಂತನೆಯನ್ನು ವಿಸ್ತರಿಸಿದ್ದಾರೆ ಎಂದು ಗುರುತಿಸುತ್ತಾರೆ. ಶಂಕರ ಭಟ್ಟರು ಭಾಷೆಯ ಚರಿತ್ರೆಯನ್ನು ರಚಿಸುವಾಗ ಲಿಖಿತ ದಾಖಲೆಗಳನ್ನು ಮಾತ್ರ ಅವಲಂಬಿಸದೆ ಇಂದಿನ ಆಡುರೂಪಗಳನ್ನು ಕೂಡ ಪರಿಗಣಿಸುವುದು ವಿಶಿಷ್ಟವಾದದ್ದು.

ಶಂಕರಭಟ್ಟರು ಕನ್ನಡ ಭಾಷೆಗೆ ಸಂಬಂಧಿಸಿದಂತೆ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳೆಂದರೆ 'ಬಾಶೆಯ ಬಗೆಗೆ ನೀವೇನು ಬಲ್ಲಿರಿ?'(೧೯೭೦), 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ' (೧೯೯೫), 'ಕನ್ನಡ ಪದಗಳ ಒಳರಚನೆ'(೧೯೯೯), 'ಕನ್ನಡದ ಸರ್ವನಾಮಗಳು'(೨೦೦೩), 'ಕನ್ನಡಕ್ಕೇ ಬೇಕು ಕನ್ನಡದ್ದೇ ವ್ಯಾಕರಣ'(೨೦೦೦), 'ಕನ್ನಡ ವಾಕ್ಯಗಳ ಒಳರಚನೆ'(೨೦೦೪), 'ಕನ್ನಡ ಬರಹವನ್ನು ಸರಿಪಡಿಸೋಣ!'(೨೦೦೫), 'ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದು?'(೨೦೦೫), 'ಕನ್ನಡ ನುಡಿ ನಡೆದು ಬಂದ ದಾರಿ'(೨೦೦೭), ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು'(೨೦೦೮), ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸುವರ್ಣ ಸಾಹಿತ್ಯ ಗ್ರಂಥಮಾಲೆ ಅಡಿಯಲ್ಲಿ ಶಂಕರ ಭಟ್ಟರ ಈ ಎಲ್ಲಾ ಕೃತಿಗಳನ್ನು 'ಕನ್ನಡ ನುಡಿಯ ಬಗೆಗೆ ಚಿಂತನೆ'(೨೦೦೬) ಎನ್ನುವ ಶೀರ್ಷಿಕೆಯಲ್ಲಿ ಸಮಗ್ರವಾಗಿ ಪ್ರಕಟಿಸಿದೆ.

೬.೨.೨ ಕನ್ನಡದ ಮೇಲಿನ ಸಂಸ್ಕೃತದ ಹೊರೆ ಇಳಿಸುವ ಕಾಯಕ

"ನಾನು ಜೇನುಗೂಡಿಗೆ ಕಯ್ ಇಟ್ಟಿದ್ದೇನೆ; ಜೇನು ಎದ್ದಿದೆ; ಅದು ನನ್ನನ್ನು ಕಡಿದರೆ ಚಿಂತೆ ಇಲ್ಲ. ನಮ್ಮ ಜನಕ್ಕೆ ಜೇನುತುಪ್ಪ ದೊರಕಿದರೆ ಸಾಕು" ಇದು ತಮ್ಮ 'ಕನ್ನಡ ಬರಹವನ್ನು ಸರಿಪಡಿಸೋಣ' ಪುಸ್ತಕದ ಮುನ್ನುಡಿಯಲ್ಲಿ ಡಿ.ಎನ್ ಶಂಕರಭಟ್ಟರು ತಮಗೆ ಅನ್ವಯಿಸಿಕೊಂಡು ಉದ್ಧರಿಸುವ ಎ.ಆರ್ ಕೃಷ್ಣಶಾಸ್ತ್ರಿಗಳ ಮಾತುಗಳು. ಇಲ್ಲಿಯೇ ಶಂಕರಭಟ್ಟರು ತಮ್ಮ ಪುಸ್ತಕವೊಂದನ್ನು ಓದಿದ ಮಿತ್ರರೊಬ್ಬರು ತಮ್ಮನ್ನು "ಸಂಸ್ಕೃತ ದ್ವೇಶಿ" ಎಂದು ಜರಿದಿದ್ದನ್ನು ನೆನಪಿಸಿಕೊಳ್ಳುತ್ತಾರೆ.

ಇಲ್ಲಿ ಜೇನುಗೂಡು ಒಂದೇ ಆದರೂ 'ತುಪ್ಪ ಕೊಡುವ ಜೇನು' ಮತ್ತು 'ಕಚ್ಚುವ ಜೇನು'ಗಳು ಬೇರೆ ಬೇರೆಯಾಗಿವೆ. ಇಲ್ಲಿ 'ತುಪ್ಪ ಕೊಡುವ ಜೇನು' ಸಂಸ್ಕೃತದ ಹೊರೆಯಿಂದ ಬಿಡಿಸಿಕೊಂಡ ಕನ್ನಡ ಎಂದೂ 'ಕಚ್ಚುವ ಜೇನು' ಸಂಸ್ಕೃತದ ಹೊರೆಯಿಂದ ಕನ್ನಡವನ್ನು ಬಿಡಿಸಲೊಪ್ಪದ ಸಂಸ್ಕೃತಪ್ರೇಮಿಗಳು ಎಂದೂ ಮೇಲ್ನೋಟಕ್ಕೆ ಗ್ರಹಿಸಬಹುದಾಗಿದೆ. ಯಾವುದೇ ಭಾಷೆಗೆ ಚೈತನ್ಯ ಕೊಡುವ ಶಕ್ತಿ ಅಥವಾ ಕಚ್ಚುವ ಗುಣ ಪ್ರಾಪ್ತವಾಗುವುದು ಆ ಭಾಷೆ ಯಾರ ಕೈಯಲ್ಲಿ ಯಾವ ರೀತಿಯ ಹತಾರವಾಗಿದೆ ಎಂಬುದರ ಮೇಲೆ. 'ಸಂಸ್ಕೃತ ವಾಙ್ಮಯವನ್ನು ಜಡವೂ ಸಾಂಪ್ರದಾಯಿಕವೂ ಆದ ದೃಷ್ಟಿಕೋನಕ್ಕಿಂತ ಭಿನ್ನವಾಗಿ, ಜನಪರ ಆಶೋತ್ತರಗಳಲ್ಲಿ ಅಧ್ಯಯನ ಮಾಡುವವರಿದ್ದರೆ, ಅವರನ್ನು ಒಂಟಿಯಾಗಿಸಲಾಗುತ್ತದೆ. ದೊಡ್ಡ ವಿದ್ವಾಂಸರೂ ಸಂಸ್ಕೃತಿ ಚಿಂತಕರೂ ಆದ ಶಂಬಾ ಜೋಶಿಯವರ ವಿಷಯದಲ್ಲಿ ಈ ರಾಜಕಾರಣ ಮಾಡಲಾಯಿತು. ಈಗ ಸಂಸ್ಕೃತದ ಯಜಮಾನಿಕೆಯಿಂದ ಕನ್ನಡವನ್ನು ಹೊರತಂದು ಅದರ ಸ್ವಂತಿಕೆ ಶೋಧಿಸುತ್ತಿರುವ ಸಂಸ್ಕೃತ ಮತ್ತು ಕನ್ನಡ ವಿದ್ವಾಂಸರಾದ ಡಿ.ಎನ್ ಶಂಕರಭಟ್ಟರ ವಿಷಯದಲ್ಲೂ ಸೂಕ್ಷ್ಮವಾದ ಹಲ್ಲೆಗಳನ್ನು ಆಯೋಜಿಸಲಾಗುತ್ತದೆ.'[೧] ಇಲ್ಲಿ ಡಿ.ಎನ್ ಶಂಕರಭಟ್ಟರ ಮೇಲೆ ಸೂಕ್ಷ್ಮವಾದ ಹಲ್ಲೆಗಳನ್ನು ಮಾಡುತ್ತಿರುವುದು ಶಂಕರಭಟ್ಟರು ಹೇಳುವ ಕಚ್ಚುವ ಜೇನುಗಳು.

ಕನ್ನಡ ಮತ್ತು ಸಂಸ್ಕೃತಗಳ ಸಂಬಂಧ ಕುರಿತಂತೆ ಡಿ.ಎನ್ ಶಂಕರಭಟ್ಟ ಅವರು ಆಳವಾಗಿ ಚಿಂತಿಸಿದ್ದಾರೆ. ಅವರ ಇಂತಹ ಚಿಂತನೆಗಳು 'ಕನ್ನಡ ಬರಹವನ್ನು ಸರಿಪಡಿಸೋಣ ಬನ್ನಿ' ಕೃತಿಯಲ್ಲಿದ್ದು ಅವನ್ನು ಹೀಗೆ ಸಂಗ್ರಹವಾಗಿ ನೋಡಬಹುದು. ೧. ಕನ್ನಡದ ಮೂಲ ಸಂಸ್ಕೃತವಲ್ಲ. ಆದರೆ ಸಂಸ್ಕೃತದಿಂದ ಅನೇಕ ಅಕ್ಷರಗಳು ಮತ್ತು ಪದಗಳು ಕನ್ನಡಕ್ಕೆ ಬಂದಿವೆ. ಕೆಲವು ವಿಶಿಷ್ಟವಾದ ಚಾರಿತ್ರಿಕ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಇದುವರೆಗೆ ಕನ್ನಡ ಬರಹ ಸಂಸ್ಕೃತವನ್ನು ಅವಲಂಬಿಸಿತ್ತು. ಹಾಗೆ ಅವಲಂಬಿಸಬೇಕೆಂದೇನೂ ಇಲ್ಲ. ಸ್ವತಂತ್ರವಾಗಿ ತನ್ನ ಕಾಲ ಮೇಲೆ ನಿಲ್ಲುವ ಶಕ್ತಿ ಕನ್ನಡಕ್ಕಿದೆ. ೨. ಸಂಸ್ಕೃತದಿಂದ ಬಂದ ಅಕ್ಷರ ಮತ್ತು ಪದಗಳು ಕನ್ನಡಕ್ಕೆ ಲಾಭ ತಂದಿರುವುದಕ್ಕಿಂತ ಹೆಚ್ಚು ಹೊರೆಯಾಗಿ ಪರಿಣಮಿಸಿದೆ. ಕನ್ನಡದವೇ ಆದ ಪದಗಳನ್ನು ಬರೆಯಲು ೩೧ ಅಕ್ಷರ ಸಾಕು. ಆದರೆ ಈಗ ಬಳಸುತ್ತಿರುವುದು ೫೧. ಈ ಹೆಚ್ಚುವರಿ ಅಕ್ಷರಗಳು ಸಂಸ್ಕೃತದಿಂದ

ಬಂದಿರುವುದು. ಇದನ್ನು ನಿವಾರಿಸಿಕೊಳ್ಳಲು ಎರಡು ಬಗೆಯ ಕ್ರಾಂತಿಯಾಗಬೇಕು. ಒಂದನೆಯದು ಕನ್ನಡಕ್ಕೆ ಬೇಕಾಗಿರುವ ಅಕ್ಷರಗಳನ್ನು ಮಾತ್ರವೇ ಬಳಸುವಂತಹ ಲಿಪಿಕ್ರಾಂತಿ. ಎರಡನೆಯದು ಸಾಧ್ಯವಿರುವಲ್ಲೆಲ್ಲ ಕನ್ನಡದವೇ ಆದ ಪದಗಳನ್ನು ಬಳಸಲು ತೊಡಗುವ ಪದಕ್ರಾಂತಿ.'

ಕನ್ನಡಕ್ಕೊಂದು 'ಹೊಸ ಬರಹ' ಹುಡುಕುವ ಹಂಬಲಕ್ಕೆ ತನ್ನದೇ ಆದ ಚರಿತ್ರೆಯಿದೆ. ಈ ಹಂಬಲ ೧೨ನೇ ಶತಮಾನದ ವಚನಕಾರರಿಂದ ಆರಂಭವಾಗಿ ನಯಸೇನ, ಅಂಡಯ್ಯ, ಕೇಶಿರಾಜ, ಮುದ್ದಣ ಅವರನ್ನು ಹಾದು ಬಿ.ಎಂ.ಶ್ರೀರವರೆಗೆ ಹರಿದು ಬಂದಿದೆ. ಇಂತಹ ಪರಂಪರೆ ನಮ್ಮ ಬೆನ್ನಿಗಿರುವುದರಿಂದಲೇ ಆಧುನಿಕ ಸಾಹಿತ್ಯದ ವರ್ತಮಾನದಲ್ಲೂ 'ವಚನಕಾರರ ನಂತರ ಕನ್ನಡದ ಹಿತವನ್ನು ತಾತ್ವಿಕ ನೆಲೆಯಲ್ಲಿ ನೋಡಿ ಪರ್ಯಾಯ ಚಿಂತನೆಯ ದಿಟ್ಟತನವನ್ನು ತೋರಿಸಲು ನಮ್ಮ ಪ್ರಾಚೀನ–ಮಧ್ಯಕಾಲೀನ ಕವಿಗಳಿಗೆ ಸಾಧ್ಯವಾದಂತೆ ಈ ಆಧುನಿಕರಿಗೆ ಯಾಕೆ ಸಾಧ್ಯವಾಗುತ್ತಿಲ್ಲ?'[೨] ಎಂಬ ತಾತ್ವಿಕ ಪ್ರಶ್ನೆ ಮೂಡಿದೆ. ಈ ತಾತ್ವಿಕ ಪ್ರಶ್ನೆಯ ಲಿಪಿಯ ಆಯಾಮಕ್ಕೆ ಉತ್ತರಿಸುವ ಜವಾಬ್ದಾರಿಯನ್ನು ಶಂಕರ ಭಟ್ಟರು ತಮ್ಮ ಹೆಗಲಿಗೇರಿಸಿಕೊಂಡಂತೆ ಕಾಣುತ್ತದೆ.

೧೯೧೫ರಲ್ಲಿ ನಡೆದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿಯೇ ಸಮ್ಮೇಳನಾಧ್ಯಕ್ಷರಾದ ಎಚ್.ವಿ ನಂಜುಂಡಯ್ಯ ಅವರು 'ಈಗ ಪ್ರಕಟವಾಗುತ್ತಿರುವ ಗ್ರಂಥಗಳಲ್ಲಿ ಸಂಸ್ಕೃತವು ವಿಶೇಷವಾಗಿ ಬೆರೆತಿರುವುದರಿಂದ ಸಾಮಾನ್ಯ ಜನರಿಗೆ ಇಂತಹ ಗ್ರಂಥಗಳಿಂದ ಆಗುವ ಸಹಾಯವು ಎಲ್ಲಿಯೋ ಬಹು ಅಲ್ಪವಾಗಿದೆ.' ಎಂದು ಕನ್ನಡದ ಮೇಲಿನ ಸಂಸ್ಕೃತದ ಹೊರೆಯನ್ನು ಇಳಿಸಬೇಕಾದ ತುರ್ತನ್ನು ಗುರುತಿಸಿದ್ದರು. ಗೋವಿಂದ ಪೈ ಅವರೂ ಕೂಡ ಕನ್ನಡದಲ್ಲಿ ಹೊಸ ಶಬ್ದಗಳನ್ನು ಸೃಷ್ಟಿಸಬೇಕಾದ ಅಗತ್ಯವನ್ನು ಮನಗಂಡಿದ್ದರು. ಇದಕ್ಕೆ ಅವರು ಇತರ ದ್ರಾವಿಡ ಶಬ್ದಗಳ ನೆರವನ್ನು ಪಡೆಯಲೂ ಸೂಚಿಸುತ್ತಾರೆ. 'ಕೈಲಾದ ಮಟ್ಟಿಗೆ ಹೊಸ ಶಬ್ದಗಳನ್ನು ಸೃಷ್ಟಿಸಿ ನಮ್ಮ ಶಬ್ದಸ್ತೋಮವನ್ನು ಹೆಚ್ಚಿಸಬೇಕು. ಏಕೆಂದರೆ ಈಗ ಹೊಸ ಹೊಸ ಭಾವನೆಗಳು ಹುಟ್ಟುತ್ತಿರುವಲ್ಲಿ, ಅವುಗಳನ್ನು ಯಥಾವತ್ತಾಗಿ ಮೂಡಿಸಲಿಕ್ಕೆ ಹಳೆಯ ಶಬ್ದ ಸಂಗ್ರಹ ಸಾಲದು. ಈ ಕೆಲಸದಲ್ಲಿ ಮೊದಲ ಹೆಜ್ಜೆಗಳೆಂದರೆ, ಸಂಸ್ಕೃತ ಶಬ್ದಗಳಿಗೆ ಕನ್ನಡ ಪ್ರತ್ಯಯಗಳನ್ನು ಹಚ್ಚಿ ಹೊಸ ಕ್ರಿಯಾಪದಗಳನ್ನು, ಹೊಸ ನಾಮಪದಗಳನ್ನು ಸೃಷಿಸಬೇಕು. ಕನ್ನಡದ ಸೋದರಿಯರಾದ ಇತರ ದ್ರಾವಿಡ ಭಾಷೆಗಳಿಂದ ಬೇಕಾದ ಶಬ್ದಗಳನ್ನು ಬೇಕಾದಂತೆ ಕನ್ನಡಿಸಿ ಎರಕೊಳ್ಳಬೇಕು. ಇತರ ಭಾಷೆಗಳ ಚಲೋದಾದ ನುಡಿಗಟ್ಟನ್ನು ಅನುವಾದಿಸಿ ನಮ್ಮದಾಗಿಸಿಕೊಳ್ಳಬೇಕು' ಎಂದವರು ಬಯಸಿದ್ದರು. ಬಿ.ಎಂ.ಶ್ರೀ ಅವರೂ ಸಂಸ್ಕೃತ ಕನ್ನಡಕ್ಕೆ ಹೊರೆ ಎಂದೇ ಭಾವಿಸಿದ್ದರು. ಕನ್ನಡವನ್ನು ಪುಷ್ಟಿಗೊಳಿಸುವುದಕ್ಕೆ, ಕನ್ನಡದ ಜ್ಞಾನಭಂಡಾರವನ್ನು ಹೆಚ್ಚಿಸುವುದಕ್ಕೆ ಹಿಂದಿನ ಕಾಲದ ಮಹನೀಯರು ಬಳಸಿದ ಸಂಸ್ಕೃತ ಕನ್ನಡದ ಶಕ್ತಿಗೆ ಮೀರಿ ಬಂದಿದ್ದು ಆ ಹೆಚ್ಚಿನ ಹೊರೆಯನ್ನು ಇಳಿಸಿ, ಕನ್ನಡವನ್ನು ತಿಳಿ ಮಾಡಬೇಕೆಂದು ಬಿ.ಎಂ.ಶ್ರೀ ಬಯಸಿದ್ದರು. ಹಾಗೆ ನೋಡಿದರೆ ಸಂಸ್ಕೃತದ ಹಂಗಿನಿಂದ ತಪ್ಪಿಸಿ, ಕನ್ನಡ ಕರ್ನಾಟಕಗಳ

ಕಥನವನ್ನು ದ್ರಾವಿಡ ಚೌಕಟ್ಟುಗಳ ಮೂಲಕ ನೋಡಲು ಮೊದಲು ಯತ್ನಿಸಿದವರು ಬಿ.ಎಂ ಶ್ರೀಯವರೇ. ಅವರು ಹಾಕಿಕೊಟ್ಟ ಹಾದಿಯಲ್ಲಿ ಡಿ.ಎನ್ ಶಂಕರ ಭಟ್ಟರು ಭಾಷಾಕ್ಷೇತ್ರದಲ್ಲಿ ಪ್ರವೇಶಿಸುತ್ತಿದ್ದಾರೆ.

ಬಿ.ಎಂ.ಶ್ರೀ ಅವರು ಆರಂಭಿಸಿದ ಕನ್ನಡ-ಸಂಸ್ಕೃತ ವಾಗ್ವಾದವನ್ನು ಬೇರೊಂದು ಪರಿಯಲ್ಲಿ ಮುಂದುವರೆಸುತ್ತಿರುವಂತೆ ಕಾಣುವ ಶಂಕರಭಟ್ಟರು, ವ್ಯಾಕರಣ, ವಾಕ್ಯರಚನೆ, ಪದ ರಚನೆಗಳಲ್ಲಿ ಸಂಸ್ಕೃತದ ಯಜಮಾನಿಕೆಯನ್ನು ಪ್ರಶ್ನಿಸುತ್ತಿದ್ದಾರೆ. 'ಬೀದಿಯಲ್ಲಿರುವ ಆಡುನುಡಿಯ ಪರವಾದ ಅವರ ವಾದಗಳು, ದಲಿತ-ಕೆಳಜಾತಿಗಳ ಭಾಷಿಕ ಅಭಿವ್ಯಕ್ತಿಗಳ ಪರವಾಗಿಯೂ ಇವೆ. ಕನ್ನಡದಲ್ಲಿ ಭಾಷೆಯ ವಾಗ್ವಾದವು ಸಾಮಾಜಿಕ ರಾಜಕೀಯ ಆಯಾಮವನ್ನು ಪಡೆಯುವುದು ಸಾಮಾನ್ಯವಾಗಿದೆ. ಶಂಕರಭಟ್ಟರು ಕನ್ನಡ ನುಡಿಯನ್ನು ಜನರು ಆಡುರೂಪಕ್ಕೆ ಸಮೀಪವಿರುವ ಹಾಗೆಯೇ ಬರೆಯಬೇಕೆಂದೂ ಸಂಸ್ಕೃತದವರು ಉಚ್ಚರಿಸುವ ರೀತಿಯಲ್ಲಿ ಬರೆಯಬಾರದೆಂದೂ ಘೋಷಿಸಿ, ತಮ್ಮ ಬರೆಹದ ರೀತಿಯನ್ನೇ ಬದಲಿಸಿಕೊಳ್ಳುತ್ತಿದ್ದಾರೆ. ಅವರ ಈ ಉಪಕ್ರಮವು ಕನ್ನಡ ಭಾಷೆಯನ್ನು ಸಂಸ್ಕೃತ ಶಬ್ದಗಳ ಹಂಗಿಲ್ಲದೆ ರೂಪಿಸುವತ್ತ ಕರೆದುಕೊಂಡು ಹೋಗುತ್ತಿದೆ. ಇದು ಶ್ರೀಯವರು 'ಕನ್ನಡ ಬಾವುಟ'ದಲ್ಲಿ ಕನ್ನಡ ಬರೆಹವನ್ನು ಸುಧಾರಿಸಲು ಮಾಡಿದ ಪ್ರಯೋಗವನ್ನೂ ನೆನಪಿಸುತ್ತಿದೆ ಎಂದು ರಹಮತ್ ತರೀಕೆರೆ ಅವರು ಅಭಿಪ್ರಾಯ ಪಡುತ್ತಾರೆ. ಶಂಬಾ ಜೋಶಿ ಅವರು ಕೂಡ ಶಂಕರ ಭಟ್ಟರಂತೆ ಸಾಹಿತ್ಯದೊಳಗಿನ ಗ್ರಂಥಸ್ಥ ರೂಪಗಳಿಗಿಂತ ನಿತ್ಯ ಬದುಕಿನ ಆಡುಮಾತುಗಳೆ ಹೆಚ್ಚು ನಂಬಲಿಕ್ಕೆ ಅರ್ಹವಾದುದು, ಏಕೆಂದರೆ ಅದು ಮೂಲರೂಪಕ್ಕೆ ಹೆಚ್ಚು ಹತ್ತಿರದಲ್ಲಿರುತ್ತದೆ ಎಂದು ಪ್ರತಿಪಾದಿಸುತ್ತಿದ್ದರು.

ಕರ್ನಾಟಕದ ನಗರಗಳಲ್ಲಿ ವಾಸಿಸುವ ಶ್ರೀಮಂತ ಮತ್ತು ಮಧ್ಯಮವರ್ಗಕ್ಕೆ ಕನ್ನಡ ಬೇಡವಾಗಿದೆ. ಯಾಕೆಂದರೆ ಬರಹದ ಮೂಲಕ ಪಡೆಯಬಹುದಾದ ಎಲ್ಲ ಪ್ರಯೋಜನಗಳನ್ನು ತಾವು ಇಂಗ್ಲಿಶಿನ ಮೂಲಕವೇ ತಾವು ಪಡೆಯಬಲ್ಲೆವು ಎಂದು ಅವರು ನಂಬಿದ್ದಾರೆ. ಉಳಿದವರೂ ಇದೇ ಹಾದಿ ಹಿಡಿದರೆ ಕನ್ನಡ ಭಾಷೆ ನಾಶವಾಗುತ್ತದೆ. ಕನ್ನಡ ಕೇವಲ ಕೆಲವೇ ವಿದ್ವಾಂಸರ ಅಗತ್ಯವಾಗಿ ಮಾತ್ರ ಉಳಿಯುತ್ತದೆ. ಹಾಗಾಗದಂತೆ ತಡೆಯಲು ಮಡಿವಂತಿಕೆಯನ್ನು ಕೈಬಿಟ್ಟು ಬರಹಕ್ಕೆ ಜೀವಂತಿಕೆ ತುಂಬುವ ಮೂಲಕ ಅದು ಎಲ್ಲರಿಗೂ ಬೇಕಾಗುವ ಹಾಗೆ ಮಾಡುವುದು 'ಹೊಸ ಬರಹ'ವನ್ನು ರೂಪಿಸುವ ಹಿಂದಿನ ತನ್ನ ಉದ್ದೇಶವೆಂದು ತಮ್ಮ 'ಕನ್ನಡ ಬರಹವನ್ನು ಸರಿಪಡಿಸೋಣ ಬನ್ನಿ' ಕೃತಿಯಲ್ಲಿ ಶಂಕರಭಟ್ಟರು ಹೇಳಿದ್ದಾರೆ. ಇದೇ ಕೃತಿಯಲ್ಲಿ ಕನ್ನಡ ಬರಹದಲ್ಲಿ ಸಂಸ್ಕೃತ ಪದಗಳ ಬಳಕೆ ಕುರಿತು ಅವರು ಎರಡು ನಿರ್ಣಯಗಳಿಗೆ ಬರುತ್ತಾರೆ. ೧. ಸಂಸ್ಕೃತ ಪದಗಳ ಬಳಕೆಯಿಂದಾಗಿ ನಾವು ತಿಳಿದಂತೆ ಖಚಿತಾರ್ಥ ಒದಗುವುದಿಲ್ಲ. ಆದರೆ ಖಚಿತವಾಗಿದೆ ಎಂದು ನಾವು ನಂಬಿರುತ್ತೇವೆ. ೨. ಕನ್ನಡದ ಪದಗಳನ್ನು ಉಳಿಸಿ ಹೊಸ ಪದಗಳನ್ನು

ಕಟ್ಟುವುದು ಕಷ್ಟ ಆದರೂ ಅಸಾಧ್ಯವಲ್ಲ. ಕನ್ನಡದ ಪ್ರಕೃತಿಗಳನ್ನು, ಹೊಸ ಪದಗಳನ್ನು ನಿರ್ಮಿಸಲು ಸಾಧ್ಯ. ಶಂಕರಭಟ್ಟರ ಈ ಚಿಂತನೆ ಸಾಧುವಾಗಿದೆ ಎಂದು ಕೆ.ವಿ ನಾರಾಯಣ ಅವರು ಸಮರ್ಥಿಸುತ್ತಾರೆ.

೬.೨.೩ ಮಹಾಪ್ರಾಣಾಕ್ಷರಗಳನ್ನು ಕೈಬಿಡುವುದಕ್ಕೆ ಪರ ಮತ್ತು ವಿರೋಧ

ಲಿಪಿಕ್ರಾಂತಿಯಲ್ಲಿ ಭಟ್ಟರು ಸೂಚಿಸುವ ಮಹಾಪ್ರಾಣಾಕ್ಷರಗಳನ್ನು ಕೈಬಿಡುವುದಕ್ಕೆ ಪರ ಮತ್ತು ವಿರೋಧದ ಎರಡೂ ಬಗೆಯ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಮಹಾಪ್ರಾಣಾಕ್ಷರಗಳು ಇರುವುದು ಕನ್ನಡ ಲಿಪಿವ್ಯವಸ್ಥೆಯ ಉದಾರವಾದಿ ಗುಣವೆಂದು ಅದನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ಸುಬ್ಬಣ್ಣ ಒಲವು ತೋರಿದರೆ, ಚಿದಾನಂದಮೂರ್ತಿ ಅವರು ಅವುಗಳನ್ನು ಉದ್ದೇಶಪೂರ್ವಕವಾಗಿ ಕೈಬಿಡುವುದನ್ನು ಕಟುವಾಗಿ ವಿರೋಧಿಸುತ್ತಾರೆ. ಈ ರೀತಿಯ ವಿರೋಧಕ್ಕೆ ಕಾರಣವಾಗಿರುವುದು ಪಾರಂಪರಿಕ ನೆಲೆಯ ಅಧ್ಯಯನಗಳು ಹೊಸ ಪ್ರಶ್ನೆಗಳನ್ನು ಎದುರಿಸದಿರುವುದು ಮತ್ತು ಹೊಸ ಚಿಂತನೆಗಳನ್ನು ತಾತ್ವಿಕವಾಗಿ ಮೈಮೇಲೆ ಹಾಕಿಕೊಳ್ಳದಿರುವುದು ಎಂದು ವಿಶ್ಲೇಷಿಸುವ ಕೆ.ವಿ ನಾರಾಯಣ ಅವರು ಮಹಾಪ್ರಾಣಗಳ ಬದಲು ಅಲ್ಪಪ್ರಾಣ ಬರೆದರೆ ಅರ್ಥದ ನೆಲೆಯಲ್ಲಿ ಗೊಂದಲ ಉಂಟಾಗಬಹುದಾದ ಕನ್ನಡ ಬರಹದಲ್ಲಿ ಬಳಕೆಯಾಗುವಂತಹ ಪದಗಳ ಸಂಖ್ಯೆ ಸುಮಾರು ೨೧ನ್ನು ದಾಟುವುದಿಲ್ಲ. ಮಹಾಪ್ರಾಣಗಳನ್ನು ಕೈ ಬಿಡುವುದರಿಂದ ಕನ್ನಡಕ್ಕೆ ಕುತ್ತೇನೂ ಬಂದಿಲ್ಲ ಎಂದು ಶಂಕರ ಭಟ್ಟರ ನಿಲುವನ್ನು ಸಮರ್ಥಿಸುತ್ತಾರೆ. ಶಂಕರಭಟ್ಟರು ಆರಂಭಿಸಿರುವ ಲಿಪಿಕ್ರಾಂತಿ ಮತ್ತು ಪದಕ್ರಾಂತಿಯನ್ನು ಒಪ್ಪಿರುವ ಕನ್ನಡ ಸಾಹಿತ್ಯದ ಒಂದು ವಲಯ ಅದನ್ನು ಬರಹದಲ್ಲಿ ಅಳವಡಿಸಿಕೊಂಡಿದೆ.

೬.೨.೪ 'ಹೊಸ ಕನ್ನಡ'ವೂ ಒಂದು ಪ್ರಮಾಣಿತ ಕನ್ನಡವಾಗುವ ಅಪಾಯ

ಪ್ರಮಾಣಭಾಷೆಯನ್ನು ತ್ಯಜಿಸಿ ಪ್ರಾದೇಶಿಕ ಪ್ರಭೇದಗಳನ್ನು ಪಠ್ಯಪುಸ್ತಕದಲ್ಲಿ ಅಳವಡಿಸಿಕೊಳ್ಳುವಾಗ ಒಂದು ಸಮಸ್ಯೆ ಎದುರಾಗುತ್ತದೆ. ಒಂದು ತರಗತಿಯಲ್ಲಿ ಕುಳಿತಿರುವ ಸಮಾಜದ ವಿವಿಧ ಸ್ತರದಿಂದ ಬಂದ ಮಕ್ಕಳು ಬೇರೆ ಬೇರೆ ಭಾಷಾ ಪ್ರಭೇದಗಳನ್ನು ಬಳಸುತ್ತಿರುತ್ತಾರೆ. ಹಾಗೇ ಒಂದೇ ಪಠ್ಯವನ್ನು ಇಡೀ ನಾಡಿನಲ್ಲಿ ಬಳಸುತ್ತಿರುವ ಸಂದರ್ಭದಲ್ಲಿ ಅದನ್ನು ಅಭ್ಯಾಸ ಮಾಡುತ್ತಿರುವ ಬೇರೆ ಬೇರೆ ಪ್ರದೇಶದ ಮಕ್ಕಳು ಒಂದೇ ಭಾಷೆಯ ಬೇರೆ ಬೇರೆ ಪ್ರಭೇದಗಳನ್ನು ಆಡುತ್ತಿರುತ್ತಾರೆ. ಇದು ಕಲಿಕೆಯಲ್ಲಿ ಯಾವ ಪರಿಣಾಮವನ್ನು ಬೀರುತ್ತದೆ ಎಂಬ ಬಗೆಗೆ ಪಠ್ಯಪುಸ್ತಕ ರಚನಾಕಾರರಾಗಲೀ ಶಿಕ್ಷಣತಜ್ಞರಾಗಲಿ ಚಿಂತಿಸಲಿಲ್ಲ. ಕರ್ನಾಟಕದಲ್ಲಿ ಇಂತಹ ಪರಿಸ್ಥಿತಿ ಇರುವುದು ಸ್ಪಷ್ಟವಾಗಿದೆ. ನಮ್ಮ ಶಾಲಾಶಿಕ್ಷಣವು ಈ ಸಮಸ್ಯೆಯನ್ನು ದಟ್ಟವಾಗಿ ಎದುರಿಸಿಲ್ಲ.[೪] ಅಂದರೆ ಭಾಷಾಪಠ್ಯಗಳಲ್ಲಿ ಹೀಗೆ ಪ್ರಭೇದಗಳನ್ನು ಅಳವಡಿಸಿ ಬಳಸಿಕೊಂಡುದರ

ಉದ್ದೇಶವೇನಿದ್ದರೂ ಅದು ಯಶಸ್ಸು ಕಾಣುವುದು ಸುಲಭವಲ್ಲ[೫] ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ. ಈ ಸಮಸ್ಯೆ ಶಂಕರ ಭಟ್ಟರು ರಚಿಸುತ್ತಿರುವ 'ಹೊಸ ಬರಹ'ಕ್ಕೂ ಎದುರಾಗಬಹುದು. ಆಡುಮಾತನ್ನು ಆಧರಿಸಿ ರಚಿಸುವ 'ಹೊಸ ಬರಹ' ಸಮಾಜದ ಯಾವ ಸ್ತರದ ಮಕ್ಕಳಿಗೆ ಸೂಕ್ತವಾಗುತ್ತದೆ? ಬೇರೆ ಆಡುಮಾತಿನವರಿಗೆ ಈ 'ಹೊಸ ಬರಹ'ವೂ ಒಂದು ಪ್ರಮಾಣಿತ ಕನ್ನಡ ಆಗುವುದಿಲ್ಲವೇ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ.

೬.೨.೫ 'ಹೊಸ ಬರಹ'ಕ್ಕೆ ಸಾಹಿತ್ಯಕ ಉದ್ದೇಶವನ್ನು ಈಡೇರಿಸಲಾಗದ ಮಿತಿ

ದೈನಂದಿನ ಬಳಕೆಗಷ್ಟೇ ಅಲ್ಲದೆ ಸಾಹಿತ್ಯದಲ್ಲಿ ಸಂಸ್ಕೃತಭೂಯಿಷ್ಠ ಕನ್ನಡವನ್ನು ಬಳಸುವುದರ ಬಗ್ಗೆ ಶಂಕರಭಟ್ಟರಿಗೆ ಅಸಮ್ಮತಿಯಿದೆ. ಮಾತನ್ನು ಅನುಸರಿಸಿ ಬರಹ ಬದಲಾಗದ ಕಾರಣದಿಂದ ಕಾವ್ಯಗಳ ಕಾಲದ ಸಂಸ್ಕೃತದಲ್ಲಿ ಬಹಳಷ್ಟು ಕೃತಕತೆ ತುಂಬಿದೆ. ಜೀವಂತವಾದ ಕೃತಿಗಳನ್ನು ಸೃಷ್ಟಿಸಬಯಸುವವರು ತಮ್ಮ ಕತೆ–ಕಾದಂಬರಿಗಳಲ್ಲಿ ಬರುವ ಸಂಭಾಷಣೆಗಳನ್ನು ಆಡುನುಡಿಯಲ್ಲಿ ಬರೆದರೇನೆ ಜೀವಂತಿಕೆ ಸಾಧ್ಯ. ಇಲ್ಲದಿದ್ದರೆ ಅವು ಕೃತಕವಾಗಿ ತೋರುತ್ತವೆ[೬] ಎನ್ನುವುದು ಭಟ್ಟರ ಅಭಿಪ್ರಾಯ. ಜನರ ನೆಲೆಯಿಂದ ಸಾಹಿತ್ಯವನ್ನು ನೋಡುವ ಶಂಕರ ಭಟ್ಟರು ಸಾಹಿತ್ಯ ಆಡುನುಡಿಯಲ್ಲಿದ್ದರೆ ಜೀವಂತವಾಗಿರುತ್ತದೆ ಎಂದು ಪ್ರತಿಪಾದಿಸುತ್ತಾರೆ. ಬರೆಹದ ಭಾಷೆಗೂ ಆಡುನುಡಿಗೂ ಇರುವ ಕೃತಕ ಕಂದರಗಳು ಇಲ್ಲವಾಗಬೇಕೆಂಬ ಯತ್ನವು ಶಂಕರ ಭಟ್ಟರ ಪ್ರಯತ್ನಕ್ಕೆ ಇಬ್ಬಗೆಯ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ. ೧. ಶಂಕರಭಟ್ಟರು ಹಾಕಿಕೊಡುತ್ತಿರುವ ಹಾದಿಯು ಕನ್ನಡದ ಮೇಲಿರುವ ಸಂಸ್ಕೃತದ ಯಜಮಾನಿಕೆಯನ್ನು ಕೊನೆಗೊಳಿಸುತ್ತದೆ ಎಂಬ ಆತಂಕದಿಂದ ಸಂಸ್ಕೃತವಾದಿಗಳು ವ್ಯಗ್ರಗೊಂಡಿರುವುದು. ೨. ಮೂಲ ಕನ್ನಡವನ್ನು ಬಳಕೆಗೆ ತರಬೇಕೆಂಬ ಉಮೇದಿನಿಂದ ಶಂಕರಭಟ್ಟರ ಹಾದಿಯನ್ನು ತುಳಿದಿರುವ ಕೆಲವು ಲೇಖಕರ ಪ್ರಯತ್ನಗಳು, ಸಂವಹನದ ಕಷ್ಟವನ್ನು ಅನುಭವಿಸುತ್ತಿರುವುದು.[೭]

ಆಡುನುಡಿಯಂತೆ ಬರಹದ ಭಾಷೆಯೂ ಇದ್ದರಷ್ಟೇ ಸಾಹಿತ್ಯದಲ್ಲಿ ಜೀವಂತಿಕೆ ಸಾಧ್ಯ ಎನ್ನುವ ಭಟ್ಟರ ನಿಲುವನ್ನು ಸಾಹಿತ್ಯವಲಯ ಪೂರ್ಣವಾಗಿ ಒಪ್ಪಿಕೊಂಡಿಲ್ಲ. ಸಾಹಿತ್ಯವನ್ನು ಸಂವಹನಶೀಲತೆಯ ನೆಲೆಯಿಂದ ನೋಡುವ ದೃಷ್ಟಿಕೋನ ಭಟ್ಟರ ಆಡುನುಡಿ–ಸಾಹಿತ್ಯ ಕುರಿತ ಪ್ರಮೇಯದ ಬಗ್ಗೆ ಭಿನ್ನ ನಿಲುವು ತಾಳಿದೆ. 'ತಾನು ಯಾರಿಗಾಗಿ, ಯಾಕೆ, ಹೇಗೆ ಬರೆಯಬೇಕು ಎಂಬುದರ ಬಗ್ಗೆ ಕವಿಯು ತೆಗೆದುಕೊಳ್ಳುವ ತೀರ್ಮಾನಗಳು ಖಂಡಿತವಾಗಿಯೂ ಅವನ ಬರಹದ ಭಾಷಿಕ ರೂಪವನ್ನು ತೀರ್ಮಾನಿಸುತ್ತದೆ' ಎಂದು ಅಭಿಪ್ರಾಯಪಡುವ ಎಚ್.ಎಸ್ ರಾಘವೇಂದ್ರರಾವ್ ಅವರು 'ದಿನನಿತ್ಯದ ವ್ಯವಹಾರದಲ್ಲಿ ಕನ್ನಡ –ಸಂಸ್ಕೃತಗಳ ಸಂಯೋಜನೆಗೂ, ಕಾವ್ಯ ಭಾಷೆಯಲ್ಲಿ ಆಗುವ ಅಂಥದೇ ಸಂಯೋಜನೆಗೂ ಇರುವ ವ್ಯತ್ಯಾಸ. ನಿತ್ಯ ವ್ಯವಹಾರದಲ್ಲಿ ನಿರುದ್ದೇಶವೂ, ನಿಯೋಗರಹಿತವೂ ಆಗಿರಬಹುದಾದ ಸಂಸ್ಕೃತದ ಬಳಕೆಯು ಕವಿತೆಯ

ಚೌಕಟ್ಟಿನೊಳಗೆ, ಕೆಲವು ಖಚಿತವಾದ ಕಲಾತ್ಮಕವಾದ ಉದ್ದೇಶಗಳನ್ನು ಹೊಂದಿರುತ್ತದೆ.[೮] ಎಂದು ಸಂಸ್ಕೃತ ಬಳಕೆಯ ಹಿನ್ನೆಲೆಯಲ್ಲಿರಬಹುದಾದ ಇತರ ಉದ್ದೇಶಗಳತ್ತ ಗಮನ ಸೆಳೆಯುತ್ತಾರೆ.

೬.೨.೬ ಸಂಸ್ಕೃತದ ಜಾಗದಲ್ಲಿ ಇಂಗ್ಲಿಶನ್ನಿಟ್ಟು ನೋಡದ ಚಿಂತನೆಯ ಮಿತಿ

ವಚನಕಾರರು, ನಯಸೇನ ಮುಂತಾದವರು ಕನ್ನಡವನ್ನು ಸಂಸ್ಕೃತದಿಂದ ಮುಕ್ತಗೊಳಿಸಬೇಕು ಎಂದು ಚಿಂತಿಸಿದ ಸಂದರ್ಭಕ್ಕೂ, ೨೦ನೇ ಶತಮಾನದ ಆರಂಭದಲ್ಲಿ ಬಿ.ಎಂ.ಶ್ರೀ ಅವರು ಚಿಂತಿಸಿದ ಸಂದರ್ಭಕ್ಕೂ ಶಂಕರ ಭಟ್ಟರು ಚಿಂತಿಸುತ್ತಿರುವ ಜಾಗತೀಕರಣೋತ್ತರ ಸಂದರ್ಭಕ್ಕೂ ಮಹತ್ತರ ವ್ಯತ್ಯಾಸಗಳಿವೆ. ವಚನಕಾರರು, ನಯಸೇನರ ಕಾಲಕ್ಕೆ ಕನ್ನಡದ ಎದುರು ಪ್ರಭುತ್ವದ ಭಾಷೆಯಾಗಿದ್ದುದು ಸಂಸ್ಕೃತ. ಶ್ರೀಯವರ ಕಾಲಕ್ಕೆ ಪ್ರಭುತ್ವದ ಭಾಷೆಯಾಗಿ ಇಂಗ್ಲಿಶ್ ಬದಲಾಗಿದ್ದರೂ ಕನ್ನಡದ ಮೇಲಿನ ಸಂಸ್ಕೃತದ ಯಜಮಾನ್ಯ ಎಂದಿನಂತೆ ಮುಂದುವರಿದಿತ್ತು. ಇವರೆಲ್ಲರೂ ಕನ್ನಡವನ್ನು ಸಂಸ್ಕೃತದ ಹೊರೆಯಿಂದ ಬಿಡಿಸಲು ಮುಂದಾದದ್ದು ಅತ್ಯಂತ ಸಹಜವಾಗಿದೆ. ಆದರೆ ಶಂಕರ ಭಟ್ಟರ ವರ್ತಮಾನದಲ್ಲಿ ಕನ್ನಡಕ್ಕೆ ಹೊರೆ ಎನಿಸುತ್ತಿರುವುದು ಸರ್ವವ್ಯಾಪಿಯಾಗಿರುವ ಇಂಗ್ಲಿಶ್ ಭಾಷೆಯಾಗಿದೆ.

ಸಂಸ್ಕೃತದಿಂದ ಕನ್ನಡದ ಬೆಳವಣಿಗೆಗೆ ಆಗುವ ತೊಡಕುಗಳ ಬಗ್ಗೆ ಗಂಭೀರವಾಗಿ ಚಿಂತಿಸುವ ಶಂಕರಭಟ್ಟರು ಇಂಗ್ಲಿಶ್ ಭಾಷೆ ಕನ್ನಡದ ಮೇಲೆ ಉಂಟುಮಾಡಿರುವ ಪರಿಣಾಮಗಳ ಬಗ್ಗೆ ಅಷ್ಟು ತೀವ್ರವಾಗಿ ಚಿಂತಿಸುವುದಿಲ್ಲ. ಜಾಗತೀಕರಣಪೂರ್ವದಲ್ಲಿ ಸಂಸ್ಕೃತ ಕನ್ನಡದ ಮೇಲೆ ಮಾಡಿದ ಪರಿಣಾಮಗಳಿಗಿಂತ ಹೆಚ್ಚಿನ ಸ್ವರೂಪದಲ್ಲಿ ಜಾಗತಿಕರಣೋತ್ತರ ಸಂದರ್ಭದಲ್ಲಿ ಇಂಗ್ಲಿಶ್ ಭಾಷೆ ಕನ್ನಡದ ಮೇಲೆ ಮಾಡಿದೆ. 'ಕನ್ನಡ ಬರಹಗಳಲ್ಲಿ ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಅವುಗಳಲ್ಲಿ ಸ್ವಲ್ಪವೂ ಬದಲಾವಣೆ ಮಾಡದೆ ಹಾಗೆಯೇ ಬಳಸುವ ಪ್ರವೃತ್ತಿ ಮುಂದುವರಿದಲ್ಲಿ ಅದು ಕೊನೆಗೆ ತನ್ನದೇ ಆದ ಸೊಗಡನ್ನು ಪೂರ್ತಿ ಕಳೆದುಕೊಂಡೀತು'[೯] ಎಂದು ಆತಂಕಪಡುವ ಶಂಕರಭಟ್ಟರು ಪ್ರಸ್ತುತ ಸಂಸ್ಕೃತದ ಜಾಗದಲ್ಲಿ ಇಂಗ್ಲಿಶನ್ನಿಟ್ಟು ನೋಡುವುದಿಲ್ಲ. ತಮಿಳು, ಮರಾಠಿಯಂತಹ ನೆರೆಯ ಭಾಷೆಗಳನ್ನು ಕನ್ನಡ ಭಾಷೆಯ ಶತ್ರುಸ್ಥಾನದಲ್ಲಿಟ್ಟು ವಿರೋಧಿಸುವಷ್ಟೇ ವಿರೋಧವನ್ನು ಇಂಗ್ಲಿಶಿನ ಬಗ್ಗೆ ತೋರಿಸದ ಕನ್ನಡಪರ ಹೋರಾಟಗಾರರ ನಿಲುವಿಗೂ ಈ ನಿಲುವಿಗೂ ತಾರ್ಕಿಕವಾಗಿ ಹೆಚ್ಚಿನ ಭಿನ್ನತೆಯಿಲ್ಲ.

೬.೨.೭ 'ಹೊಸ ಬರಹ' ಎತ್ತುತ್ತಿರುವ ಪ್ರಶ್ನೆಗಳು

ಶಂಕರಭಟ್ಟರ 'ಹೊಸ ಬರಹ' ರೂಪಿಸುವ ಪ್ರಯತ್ನ ಕೆಲವು ಮಹತ್ವದ ಪ್ರಶ್ನೆಗಳನ್ನು ಎತ್ತುತ್ತಿದೆ. ಅವು ಹೀಗಿವೆ:

೧. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಕಾರಣದಿಂದ ಜನಭಾಷೆಗಳಿಗೆ ಯಜಮಾನಿಕೆಯ ಅಥವಾ ಶೋಷಿತ ಆಯಾಮಗಳು ದಕ್ಕುತ್ತವೆ. ಆದರೆ ಈ ಭಾಷೆಗಳು ಕೊಡುಕೊಳ್ಳುವಿಕೆಯಿಂದ ಪರಸ್ಪರ ಶಕ್ತಿಸಂಚಯ ಮಾಡಿಕೊಳ್ಳುತ್ತಿರುತ್ತವೆ ಮತ್ತು ನಿರಂತರ ಬದಲಾಗುತ್ತಿರುತ್ತವೆ. 'ಕನ್ನಡವು ಹೀಗೆ ನಿರಂತರವಾಗಿ ಬದಲಾಗುತ್ತಿದೆ. ಆ ಬದಲಾವಣೆಯ ಪರಿಣಾಮವಾಗಿ ಮುಂದೆಯೂ ಕನ್ನಡ ಇದ್ದೇ ಇರುತ್ತದೆ. ಮೊದಲೇ ಹೇಳಿದಂತೆ ಅದು ಗುರುತು ಹಿಡಿಯಲಾರದಷ್ಟು ಬೇರೆಯ ಆಕಾರವನ್ನು ಪಡೆಯಬಹುದು. ಹೀಗೆ ಮೂಲ ಆಕಾರ ಕಳೆದು ಹೋಗುವುದಕ್ಕೆ ಆತಂಕ ವ್ಯಕ್ತಪಡಿಸುವುದು ಅಷ್ಟೇನು ಸರಿಯಾದ ಪ್ರಕ್ರಿಯೆ ಅಲ್ಲ. ಏಕೆಂದರೆ ಒಂದು ಭಾಷೆ ಹೀಗೆ ಬೇರೆ ಬೇರೆ ಆಕಾರಗಳನ್ನು ಪಡೆಯುವುದು ಅದರ ಜೈವಿಕತೆಯ ಲಕ್ಷಣವಾಗಿದೆ'[೧೦] ಶಂಕರ ಭಟ್ಟರು ರೂಪಿಸುತ್ತಿರುವ 'ಹೊಸ ಕನ್ನಡ' ಭಾಷೆಯ ಈ ಮೂಲಭೂತ ಗುಣಕ್ಕೆ ವ್ಯತಿರಿಕ್ತವಾಗಿರುವಂತಿದೆಯೇ?

೨. ಕೆಳವರ್ಗಗಳು ಪ್ರಾಥಮಿಕ ಶಿಕ್ಷಣದಲ್ಲಿಯೇ ಇಂಗ್ಲಿಷ್ ಕಲಿಕೆಯನ್ನು ಸಾಮಾಜಿಕ ನ್ಯಾಯದ ಪ್ರಶ್ನೆಯಾಗಿ ಮುಂದಿಡುತ್ತಿರುವಾಗ ಸಂಸ್ಕೃತದ ಪ್ರಭಾವದಿಂದ ಸಂಪೂರ್ಣ ಬಿಡಿಸಿಕೊಳ್ಳುವ ಹಂಬಲದಿಂದ ಮೂಡಿದ 'ಹೊಸ ಕನ್ನಡ'ದ ಬಳಕೆದಾರರು ಯಾರು? ಮೇಲ್ವರ್ಗಗಳು ಇಂಗ್ಲಿಶನ್ನು ಹಿಂಬಾಲಿಸುತ್ತ 'ಮುನ್ನಡೆಯುತ್ತಿರುವಾಗ' ಕನ್ನಡ ಉಳಿಸುವ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸುವ ಜಾಣ ಪ್ರಯತ್ನವಾಗಿ 'ಹೊಸ ಬರಹ' ಕೆಳವರ್ಗಗಳಿಗೆ ಕಾಣುವುದಿಲ್ಲವೇ?

೩. 'ಹೊಸ ಕನ್ನಡ'ವನ್ನು ಸಮರ್ಥಿಸುತ್ತಿರುವ ಚಿಂತಕರು ಸಾಮಾಜಿಕ ನ್ಯಾಯದ ಪರವಿರುವ ವರ್ಗವೇ ಆಗಿದ್ದು ಅವರ ಈ ಸಮರ್ಥನೆಗೆ ಕಾರಣ ಕೆಳವರ್ಗಗಳಿಗೆ ಕಷ್ಟವಾದ ಸಂಸ್ಕೃತ ಶಬ್ದಗಳಿಂದ ಕನ್ನಡವನ್ನು ಮುಕ್ತಗೊಳಿಸುವ ಭಾಷಾಮೂಲದ್ದೋ ಅಥವಾ ಒಂದು ಕಾಲಘಟ್ಟದಲ್ಲಿ ಯಜಮಾನಿಕೆಗೆ ಕಾರಣವಾಗಿ ಮೇಲ್ಜಾತಿಗಳ ಕೈಯೊಳಗಿನ ಅಸ್ತ್ರವಾಗಿ ಕೆಳವರ್ಗಗಳಿಗೆ ಶಿಕ್ಷಣವನ್ನು ವಂಚಿಸಿದ ಸಂಸ್ಕೃತದ ಮೇಲಿನ ಸಿಟ್ಟೋ? ಹಾಗಿಲ್ಲವಾದರೆ ಸಂಸ್ಕೃತದಿಂದ ಪ್ರಭಾವಿತವಾದ ಕನ್ನಡ ಕೆಳವರ್ಗದವರಿಗೆ ಬಳಸುವ ಸಂದರ್ಭದಲ್ಲಿ ಸೃಷ್ಟಿ ಮಾಡುತ್ತಿರುವ ಕಷ್ಟಗಳನ್ನೇ ವರ್ತಮಾನದಲ್ಲಿ ಇಂಗ್ಲಿಶನ್ನು ಬೆರೆಸಿ ಆಡಲಾಗುತ್ತಿರುವ ಕನ್ನಡವೂ ಸೃಷ್ಟಿಸುತ್ತಿದ್ದು ಈ ವರ್ಗಕ್ಕೆ ಈ ನೆಲೆಯಲ್ಲಿ ಇಂಗ್ಲಿಶ್ ಕುರಿತು ಯಾಕೆ ಯಾವ ತಕರಾರುಗಳೂ ಇಲ್ಲ?

೬.೨.೮ 'ಹೊಸ ಬರಹ' ಕುರಿತ ಮತ್ತಷ್ಟು ಪ್ರಶ್ನೆಗಳು ಮತ್ತು ಉತ್ತರಗಳು

ಶಂಕರ ಭಟ್ಟರು ರೂಪಿಸುತ್ತಿರುವ 'ಹೊಸ ಬರಹ'ಕ್ಕೆ ಮೇಲಿನದರೊಂದಿಗೆ ಮತ್ತಷ್ಟು ಪ್ರಶ್ನೆಗಳು ಎದುರಾಗಿವೆ. ಈಗಾಗಲೇ ಬಳಕೆಯಲ್ಲಿರುವ ಕನ್ನಡದ ಬದಲಿಗೆ ಇನ್ನೊಂದು ಹೊಸ ಕನ್ನಡವನ್ನು ರೂಪಿಸಿದರೆ ಅದು ಅನಿಶ್ಚತತೆ ಮೂಡಿಸುವುದಿಲ್ಲವೇ? ಬರಹದಲ್ಲಿ ಅರ್ಥ ಸಂದಿಗ್ದತೆ ಉಂಟಾಗುವುದಿಲ್ಲವೇ? ಎನ್ನುವುದು ಮತ್ತೆ ಮತ್ತೆ ಕೇಳಿ ಬರುವ ಪ್ರಶ್ನೆಗಳಾಗಿವೆ. ಇದಕ್ಕೆ ಶಂಕರ ಭಟ್ಟರು ಉತ್ತರ ನೀಡಿದ್ದಾರೆ. ಬಹುತೇಕ ಅವರ ಉತ್ತರಗಳು ತರ್ಕಬದ್ಧವೆನಿಸುವ ರೀತಿಯಲ್ಲಿವೆ.

ಉಚ್ಚಾರಣೆಗನುಸಾರವಾಗಿ ಬರಹವನ್ನು ಬದಲಾಯಿಸಿಕೊಳ್ಳುವ ಸಂದರ್ಭಗಳಲ್ಲೆಲ್ಲ ಮೊದಲ ಬಾರಿಗೆ ಅನಿಶ್ಚಿತತೆ ಕಾಣಿಸಿಕೊಳ್ಳುವುದಾದರೂ ಸಮಯ ಕಳೆದಂತೆ ಅನಿಶ್ಚಿತತೆ ಕಡಿಮೆಯಾಗುತ್ತಾ ಹೋಗಿ ಕೊನೆಗೆ ಒಂದು ರೀತಿಯ ಸ್ಥಿರತೆಯುಂಟಾಗುತ್ತದೆ.[೧೧] ಬರಹದಲ್ಲಿ ಅರ್ಥ ಸಂದಿಗ್ದತೆ ಉಂಟಾಗುತ್ತದೆ ಎನ್ನುವುದು ಮಹಾಪ್ರಾಣ, ಷಕಾರ, ಋಕಾರ ಮೊದಲಾದ ಅಕ್ಷರಗಳನ್ನು ಕೈ ಬಿಡುವುದಕ್ಕಿರುವ ವಿರೋಧಕ್ಕೆ ಒಂದು ಪ್ರಮುಖ ಕಾರಣ. ಆದರೆ ಈ ವಿರೋಧ ಅರ್ಥಹೀನ ಎನ್ನುವುದನ್ನು ಶಂಕರ ಭಟ್ಟರು ಸಮರ್ಥ ನಿದರ್ಶನಗಳೊಂದಿಗೆ ಸಾಬೀತುಪಡಿಸಿದ್ದಾರೆ. ನಾವು ಬರಹದಲ್ಲಿ ಬಳಸುವ ಪದಗಳಲ್ಲಿ ಹೆಚ್ಚಿನವಕ್ಕೆ ಒಂದಕ್ಕಿಂತ ಹೆಚ್ಚು ಅರ್ಥಗಳಿವೆ. ಕನ್ನಡದ 'ಕಡಿ' ಪದಕ್ಕೆ ಕಿಟ್ಟೆಲ್ ಡಿಕ್ಷನರಿಯಲ್ಲಿ ೯ ಅರ್ಥಗಳನ್ನು ಕೊಡಲಾಗಿದೆ. ಆದರೂ ಇದು ಯಾವ ಸಮಸ್ಯೆಯನ್ನೂ ಸೃಷ್ಟಿಸುತ್ತಿಲ್ಲ. ಕಾರಣವೆಂದರೆ ಹೆಚ್ಚಿನಡೆಗಳಲ್ಲಿ ಈ ಪದಗಳನ್ನು ಬಳಸಿರುವ ಸಂದರ್ಭಗಳೇ ಅದನ್ನು ಯಾವ ಅರ್ಥದಲ್ಲಿ ಬಳಸಲಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತವೆ[೧೨] ಎನ್ನುವ ಶಂಕರ ಭಟ್ಟರ ಸಮರ್ಥನೆ ತರ್ಕಬದ್ಧವಾಗಿದೆ.

'ಮೂಲಭೂತವಾಗಿ ಬರಹದಲ್ಲಿ ಸರಿ-ತಪ್ಪು ಎನ್ನುವುದು ನಾವು ನಮ್ಮೊಳಗೆ ಮಾಡಿಕೊಂಡಿರುವ ಒಂದು ಸಂಪ್ರದಾಯ ಇಲ್ಲವೇ ಒಡಂಬಡಿಕೆಯನ್ನು ಅವಲಂಬಿಸಿಕೊಂಡಿದೆ. ಇವತ್ತಿಗೆ ತಪ್ಪೆಂದು ತೋರುವ ಬರಹ ಇನ್ನೊಂದು ದಿವಸಕ್ಕೆ ಸರಿಯಾಗಲು ಸಾಧ್ಯವಿದೆ.'[೧೩] ಎಂದು ಶಂಕರ ಭಟ್ಟರು ಅಭಿಪ್ರಾಯಪಡುತ್ತಾರೆ. 'ಬದಲಾಗದೆ ಉಳಿಯುವ ಬರಹದ ಪ್ರಭೇದ ತನ್ನ ಜೀವಂತಿಕೆಯನ್ನು ಕಳೆದುಕೊಂಡು ಕೃತಕತೆಯನ್ನು ತುಂಬಿಕೊಳ್ಳುತ್ತದೆ. ಕನ್ನಡ ಬರಹ ಈ ರೀತಿ ಬದಲಾಗದೆ ಉಳಿಯಲಿಲ್ಲ' ಎಂದು ಬರಹದ ಬದಲಾವಣೆಯನ್ನು ಸಹಜವೆನ್ನುವ ಭಟ್ಟರು ಅದಕ್ಕೆ ನಿದರ್ಶನವಾಗಿ ವಚನಕಾರರ ಪ್ರಯತ್ನದಿಂದಾಗಿ ಹಳೆಗನ್ನಡವಿದ್ದುದು ನಡುಗನ್ನಡವಾಗಿ ಆನಂತರದ ಸಾಹಿತಿಗಳ ಪ್ರಯತ್ನದಿಂದಾಗಿ ನಡುಗನ್ನಡ ಹೊಸಗನ್ನಡವಾಗಿ ಬದಲಾದ[೧೪] ಉದಾಹರಣೆಯನ್ನು ನೀಡುತ್ತಾರೆ. ಶಂಕರ ಭಟ್ಟರು ಹೇಳುವ ಮಾತುಗಳು ಭಾಷೆಯ ಬೆಳವಣಿಗೆಯ ಗತಿಯಲ್ಲಿ ನಿಜವೆನಿಸಿದರೂ ಕಾಲಬದ್ಧವಾಗಿ ಬರಹದಲ್ಲಿ 'ಸರಿ-ತಪ್ಪು'ಗಳು ನಿರ್ಧಾರವಾಗದಿದ್ದರೆ ಅದು

ಭಾಷೆಯ ಪ್ರಾಥಮಿಕ ಕೆಲಸವಾದ ಸಂವಹನವನ್ನೇ ಬಿಕ್ಕಟ್ಟಿಗೆ ಸಿಲುಕಿಸಿ 'ಅರಾಜಕತೆಗೆ' ದಾರಿ ಮಾಡಿಕೊಡುವ ಅಪಾಯವಿರುತ್ತದೆ.

೬.೩ ಕೆ.ವಿ. ನಾರಾಯಣ ಅವರ ಚಿಂತನೆಗಳು

೬.೩.೧ ಪೀಠಿಕೆ

ಕೆ.ವಿ. ನಾರಾಯಣ (೧೯೪೮) ಅವರು ಕನ್ನಡ ಪ್ರಾಧ್ಯಾಪಕರಾಗಿ, ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾಗಿ ಸೇವೆ ಸಲ್ಲಿಸಿದವರು. ನಂತರದಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಭಾಷೆಗೆ ಸಂಬಂಧಿಸಿದಂತೆ ಕೆ.ವಿ. ನಾರಾಯಣ ಅವರ ಕೃತಿಗಳು: ಭಾಷೆಯ ಸುತ್ತಮುತ್ತ (೧೯೯೮), ಸಂಪಾದಿತ ಕೃತಿ 'ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–೧:ಭಾಷೆ' (೨೦೦೦). ಮತ್ತೆ ಭಾಷೆಯ ಸುತ್ತಮುತ್ತ (೨೦೦೧), ನಮ್ಮೊಡನೆ ನಮ್ಮ ನುಡಿ (೨೦೦೫), ಮತ್ತು ಕನ್ನಡ ಜಗತ್ತು; ಅರ್ಧ ಶತಮಾನ (೨೦೦೬).

ಕನ್ನಡ ಅಸ್ಮಿತೆ ಕುರಿತ ಚಿಂತನೆಯಲ್ಲಿ 'ಸಮಗ್ರ' ಎನಿಸುವಂತಹ ಚಿಂತನೆಗಳಿಗೆ ಹತ್ತಿರವಾಗಿರುವವು ಕೆ.ವಿ.ನಾರಾಯಣ ಅವರ ಚಿಂತನೆಗಳು ಎನ್ನಬಹುದು. ಯಾವ ಸಿದ್ಧಾಂತಕ್ಕೂ ತಮ್ಮನ್ನು ತೆತ್ತುಕೊಳ್ಳದೆ, ಆದರೆ ಎಲ್ಲಾ ಸಿದ್ಧಾಂತಗಳ ಬೆಳಕಿನಲ್ಲಿ ಭಾಷೆಯನ್ನು ನೋಡುತ್ತ, ಮುಗ್ಧ ಕುತೂಹಲದ ದೃಷ್ಟಿಯಲ್ಲಿ ಅದು ಭೂತದಿಂದ ನಡೆದು ಬಂದ ಸಾವಿರಾರು ವರ್ಷಗಳ ಹೆಜ್ಜೆಯ ಜಾಡನ್ನು ಪರೀಕ್ಷಿಸುತ್ತ, ಈ ಹೆಜ್ಜೆಯ ಜಾಡನ್ನು ಪ್ರಭಾವಿಸಿರಬಹುದಾದ ರಾಜಸತ್ತೆ, ಹಾದಿಯ ಉಬ್ಬು ತಗ್ಗುಗಳನ್ನು ಉಂಟು ಮಾಡಿದ ಜನಬದುಕಿನ ಏರಿಳಿತದ ಭಾರದ ಲಯ, ಹಾದಿಯಲ್ಲಿ ಜೊತೆಯಾದ ಸಹಭಾಷೆಗಳ ಯಜಮಾನಿಕೆ ಮೂಡಿಸಿದ ತನ್ನತನದ ಎಚ್ಚರ, ಸಹಭಾಷೆಗಳ ದೈನ್ಯತೆ ಮೂಡಿಸಿದ ಗರ್ವ ಎಲ್ಲವನ್ನೂ ಅರಿಯಬಲ್ಲರು. ಈ ಅರಿಯುವ ಪಯಣ ಅಂತರಾಷ್ಟ್ರೀಯ ಮತ್ತು ಸ್ಥಳೀಯ ವಿದ್ಯಮಾನಗಳ ಜತೆ ಜತೆಗೆ ತುಲನೆ ಮಾಡುತ್ತ ಸಾಗುತ್ತದೆ. ಪಯಣವನ್ನು ಯಶಸ್ವಿಗೊಳಿಸಲು ಭಾಷಾಶಾಸ್ತ್ರ, ಮನಃಶಾಸ್ತ್ರ, ಹೊಸಕಾಲದಲ್ಲಿ ವಿಜ್ಞಾನ ಸಂಶೋಧಿಸಿ ದೃಢಪಡಿಸಿದ ಕಲಿಕೆಯ ಸಾಮರ್ಥ್ಯಗಳೆಲ್ಲ ಬೆಂಗಾವಲಿನಲ್ಲಿರುತ್ತವೆ.

ಜಾನಪದದಿಂದ ಸಿನಿಮಾದವರೆಗೆ, ಆಡುನುಡಿಯಿಂದ ವ್ಯಾಟ್ಸಪ್‌ವರೆಗೆ, ಕರ್ನಾಟಕದಲ್ಲಿದ್ದೂ ಕನ್ನಡ ಮರೆಯುವವರಿಂದ ಕೆನಡಾದಲ್ಲಿದ್ದೂ ಕನ್ನಡ ಮರೆಯದವವರೆಗೆ, ಕನ್ನಡದ ಉದ್ಧಾರಕ್ಕೆಂದು ಆರಿಸಲ್ಪಟ್ಟ ಸರ್ಕಾರಗಳು ನಡೆಸುತ್ತಿರುವ ಭಾಷಾನಾಶದಿಂದ, ಕನ್ನಡವನ್ನು ನಾಶ ಮಾಡಲೆಂದೇ ಬಂದಿರುವುವೆಂದು ತಿಳಿಯಲಾದ ಜಾಗತಿಕ ಕಂಪನಿಗಳು ಲಾಭಕ್ಕೋ, ಇನ್ನೇನಕ್ಕೋ ಕನ್ನಡ ಬೆಳೆಸುತ್ತಿರುವವರೆಗೆ, ಹೀಗೆ ದಶದಿಕ್ಕುಗಳ ಆಯಾಮದಲ್ಲಿ, ಎಲ್ಲಾ ನಾಶವಾಗುತ್ತದೆ ಎನ್ನುವ ನಿರಾಶಾವಾದ, ಏನೂ ಆಗುವುದಿಲ್ಲವೆಂಬ ಸಿನಿಕತನ, ದೀರ್ಘ ಇತಿಹಾಸದ ಕಾರಣಕ್ಕೆ ಮೂಡುವ

ಹುಸಿ ವಿಶ್ವಾಸಗಳೆಲ್ಲದರಿಂದ ಬಿಡುಗಡೆ ಪಡೆದ ಘನವಿವೇಕದ ಕನ್ನಡ ಅಸ್ಮಿತೆಯ ಚಿಂತನೆ ಕೆ.ವಿ.ನಾರಾಯಣ ಅವರದ್ದು.

೬.೩.೨ ಕನ್ನಡದ ಆತಂಕ ದೂರಮಾಡುವಷ್ಟು ಶಕ್ತವಾದ ವೈಜ್ಞಾನಿಕ ಹಿನ್ನೆಲೆಯ ಗ್ರಹಿಕೆಗಳು

ಇಪ್ಪತ್ತನೆಯ ಶತಮಾನದಲ್ಲಿ ಎಲ್ಲಾ ಭಾರತದ ದೇಶಿ ಭಾಷೆಗಳಂತೆ ಕನ್ನಡವನ್ನೂ ಕಂಗೆಡಿಸಿದ್ದು ಬ್ರಿಟಿಷರು ತಮ್ಮೊಂದಿಗೆ ಹೊತ್ತು ತಂದ ಇಂಗ್ಲಿಶ್. ಇದು ಭಾಷಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ನೆಲೆಗಳಲ್ಲಿ ಉಂಟು ಮಾಡಿದ ತಲ್ಲಣಗಳು ಈಗಲೂ ಬಾಧಿಸುತ್ತಲೇ ಇವೆ. ಇಂಗ್ಲಿಶ್ ಭಾಷೆ ಕರ್ನಾಟಕದ ಪ್ರತಿಯೊಂದು ಕ್ಷೇತ್ರವನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದ್ದು ಎರಡು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಬೆಳೆದು ಬಂದ ಕನ್ನಡವನ್ನು ಸಂಪೂರ್ಣ ನಾಶ ಮಾಡುತ್ತದೆ ಎನ್ನುವುದು ಭಾಷಿಕ ನೆಲೆಯ ತಲ್ಲಣ. 'ಇಂಗ್ಲಿಶ್ ಮೂಲಕ ದೊರಕುವ ವೈಚಾರಿಕತೆ, ವೈಜ್ಞಾನಿಕತೆ, ವಿಚಾರವಾದ ಇವೆಲ್ಲವೂ ಪರಂಪರೆಯ ಬೇರುಗಳಿಗೆ ಕೊಡಲಿ ಪೆಟ್ಟು ಹಾಕುತ್ತವೆ' ಎನ್ನುವುದು ಸಾಂಸ್ಕೃತಿಕ ನೆಲೆಯ ತಲ್ಲಣ. ಸಾಂಸ್ಕೃತಿಕ ತಲ್ಲಣಗಳು ಪರಿಣಾಮದಲ್ಲಿ ಸಮಾಜದಲ್ಲಿ ಪಲ್ಲಟಗಳನ್ನು ತರುತ್ತವೆ ಎನ್ನುವುದು ಸಾಮಾಜಿಕ ನೆಲೆಯ ತಲ್ಲಣ. ಕೊನೆಗೆ ಕನ್ನಡವನ್ನು ಬಿಡದೆ ಇಂಗ್ಲಿಶಿನಿಂದ ಸಿಗುವ ಪ್ರಯೋಜನಗಳನ್ನು ಪಡೆಯುವ 'ಕನ್ನಡ ಮಾಧ್ಯಮದಿಂದ ಬರುವ ಸಹಜ ಶೈಕ್ಷಣಿಕ ಲಾಭ ಮತ್ತು ಇಂಗ್ಲಿಶಿನಿಂದ ದತ್ತವಾಗುವ ಸಾಮಾಜಿಕ ಪ್ರಗತಿಯ ಅಧಿಕಾರ ಇವೆರಡನ್ನು ಒಟ್ಟಿಗೇ ಬೆರೆಸುವ ನೀತಿಯೊಂದನ್ನು ನಾವೀಗ ರೂಪಿಸಬೇಕಾಗಿದೆ' ಎಂಬ ರಾಜಿ ಹೊಂದಾಣಿಕೆಯ ಸೂತ್ರಕ್ಕೆ ಸಮಾಜ ಶರಣಾಗುತ್ತಿದೆ. ಆದರೆ ನಮ್ಮ ಎಲ್ಲಾ ತಲ್ಲಣಗಳಿಗೆ ನಿಜಕ್ಕೂ ಇಂಗ್ಲಿಶ್ ಎಷ್ಟರಮಟ್ಟಿಗೆ ಕಾರಣವಾಗಿದೆ ಎನ್ನುವುದನ್ನು ಅರಿಯಲು ಹಲವು ಆಯಾಮಗಳ ಅಧ್ಯಯನ ಮತ್ತು ವಿಶ್ಲೇಷಣೆಯ ಅಗತ್ಯವಿದೆ. ನಮ್ಮ ಸಮಸ್ಯೆ ಇರುವುದು ಭಾಷೆಯಲ್ಲಲ್ಲ. ಭಾಷೆಯ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ಸರಿಯಾಗಿ ಗ್ರಹಿಸದ ನಮ್ಮ ಸ್ಥಿತಿಯಿಂದಾಗಿ ತಕ್ಕ ಪರಿಹಾರೋಪಾಯಗಳನ್ನು ರೂಪಿಸಲಾಗುತ್ತಿಲ್ಲ ಎಂದು ವಿಶ್ಲೇಷಿಸುವ ಕೆ.ವಿ ನಾರಾಯಣ ಅವರು ಭಾಷೆಯ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ಸರಿಯಾಗಿ ಗ್ರಹಿಸದೆ ಯಾವುದೇ ಒಂದು ಭಾಷೆಯನ್ನು ಆತಂಕದಿಂದ ನೋಡುವುದು ತಪ್ಪು ನಿರ್ಧಾರಗಳಿಗೆ ಮತ್ತು ಅನಗತ್ಯ ಭಯಕ್ಕೆ ಕಾರಣವಾಗುತ್ತದೆ ಎನ್ನುತ್ತಾರೆ. ಇದು ವಾಸ್ತವದ ಸಂಗತಿಯಾಗಿದೆ.

ಕನ್ನಡದ ಸಂದರ್ಭದಲ್ಲಿ ಭಾಷೆಯ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ವೈಜ್ಞಾನಿಕವಾಗಿ ಅರಿಯಲು ಯತ್ನಿಸಿದವರು ಕೆ.ವಿ ನಾರಾಯಣ ಅವರು. ಭಾಷಾ ವಿಜ್ಞಾನಿ ಎನ್ನುವ ಪದನಾಮ ನಿಜ ಅರ್ಥದಲ್ಲಿ ಅನ್ವರ್ಥವಾಗುವುದು ಕೆ.ವಿ ನಾರಾಯಣ ಅವರ ಸಂದರ್ಭದಲ್ಲಿ. 'ಒಟ್ಟು ಅವರ ಬರಹಗಳನ್ನು ಗಮನಿಸಿದಾಗ ಭಾಷೆಯನ್ನು ಅದರ ರಾಚನಿಕ ನೆಲೆಯಲ್ಲಿ ವಿಶ್ಲೇಷಿಸುತ್ತಲೇ ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ (ಪ್ರಜಾತಾಂತ್ರಿಕ) ನೆಲೆಗಳಿಂದಲೂ ಎದುರಾಗುತ್ತಾರೆ.

ಅದರಲ್ಲಿಯೂ ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಇಂಗ್ಲಿಶ್ ಮತ್ತು ತಂತ್ರಜ್ಞಾನದ ವ್ಯಾಪಕ ಬೆಳವಣಿಗೆಯಿಂದ ಕನ್ನಡ ಎದುರಿಸುತ್ತಿರುವ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಚರ್ಚಿಸಿದ್ದಾರೆ. ಇಂತಹ ನೆಲೆಗಳ ಆಯ್ಕೆಗೆ ಕನ್ನಡಪರ ಕಾಳಜಿಗಳನ್ನು ಒಳಗೊಂಡಂತೆ ಎಡ್ವರ್ಡ್ ಸಫೀರ್, ಸ್ಕೂಟ್‌ನಬ್‌ಕಂಗಾಸ್, ಚಾಮ್ಸ್ಕಿ ಮುಂತಾದ ಭಾಷಾವಿದ್ವಾಂಸರ ಚಿಂತನೆಗಳು ಒತ್ತಾಯಿಸಿರುವುದನ್ನು ಕಾಣಬಹುದು. ಹಾಗಾಗಿಯೇ ಭಾಷಿಕ ಚಿಂತನೆಗಳಲ್ಲಿ ವಿವಿಧತೆಯನ್ನು ಕಾಪಾಡಿಕೊಳ್ಳುತ್ತ ಕನ್ನಡವನ್ನು ಬಹುಮುಖಿ ನೆಲೆಗಳಲ್ಲಿ ಯೋಚಿಸಲು ಅವರಿಗೆ ಸಾಧ್ಯವಾಗಿದೆ. ಕನ್ನಡದ ಪ್ರಶ್ನೆಯನ್ನು ಭಿನ್ನವಾಗಿ ಎದುರಾಗುತ್ತ ಕನ್ನಡದ ಆತಂಕಗಳನ್ನು ಸಮಚಿತ್ತದಿಂದ ಚರ್ಚಿಸಲು ಸಾಧ್ಯವಾಗಿದೆ. ಯಾವುದೇ ಉದ್ವೇಗಗಳಿಗೆ ಒಳಗಾಗದೆ ಕನ್ನಡದ ಎದುರಿಗಿರುವ ಸವಾಲುಗಳನ್ನು ಬಿಡಿಸುವ ಪ್ರಯತ್ನ ಮಾಡಿದ್ದಾರೆ.[೧೫]

೬.೩.೩ ಕನ್ನಡ-ಇಂಗ್ಲಿಶ್ ಸಂಬಂಧ ಕುರಿತ ಗ್ರಹಿಕೆಗಳು

ಕನ್ನಡದೊಂದಿಗಿನ ಇಂಗ್ಲಿಶ್ ಸಂಬಂಧ ಕುರಿತ ಕೆ.ವಿ.ಎನ್ ಅವರ ಗ್ರಹಿಕೆಗಳು ಇಂಗ್ಲಿಶ್ ಕುರಿತ ನಮ್ಮ ಹಲವು ಆತಂಕಗಳನ್ನು ದೂರ ಮಾಡುವಂತಿದ್ದು ಅವುಗಳನ್ನು ಮುಂದೆ ಚರ್ಚಿಸಲಾಗಿದೆ.

೧. **ಮಗುವೊಂದು ಏಕಕಾಲಕ್ಕೆ ಹಲವು ಭಾಷೆ ಕಲಿಯುವ ಸಾಮರ್ಥ್ಯ ಹೊಂದಿದೆ; ಇಂಗ್ಲಿಶ್ ಹೊರೆಯಲ್ಲ :** ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಶ್ ಮಾಧ್ಯಮದ ಕುರಿತು ಪರ-ವಿರೋಧದ ಚರ್ಚೆಗಳು ಇನ್ನೂ ಬಿರುಸಾಗಿ ನಡೆಯುತ್ತಲೇ ಇದೆ. ಇಂಗ್ಲಿಶ್ ಮಾಧ್ಯಮದ ಪರ ವಾದಿಸುವವರು ಜಾಗತೀಕರಣದಿಂದಾಗಿ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ಪಡೆಯಲು ಇಂಗ್ಲಿಶ್ ಅನಿವಾರ್ಯವಾಗಿದೆ. ತಾಂತ್ರಿಕ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಶಿಕ್ಷಣ ಇಂಗ್ಲಿಶ್ ಮಾಧ್ಯಮದಲ್ಲಿಯೇ ಇದ್ದು ಈ ಕ್ಷೇತ್ರಗಳನ್ನು ಪ್ರವೇಶಿಸಲು ಪ್ರಾಥಮಿಕ ಹಂತದಿಂದಲೇ ಇಂಗ್ಲಿಶ್ ಮಾಧ್ಯಮದಲ್ಲಿ ಕಲಿತರೆ ಸುಲಭ ಎನ್ನುತ್ತಾರೆ. ಮಗು ತನ್ನ ಮಾತೃಭಾಷೆಯಲ್ಲಿ ಮಾತ್ರ ವಿಷಯಗಳನ್ನು ಗ್ರಹಿಸಬಲ್ಲುದು, ಇನ್ನೊಂದು ಪರಕೀಯ ಭಾಷೆ ಅದಕ್ಕೆ ಹೊರೆಯಾಗುತ್ತದೆ ಎನ್ನುವುದು ಸಾಮಾನ್ಯವಾಗಿ ಇಂಗ್ಲಿಶ್ ಮಾಧ್ಯಮವನ್ನು ವಿರೋಧಿಸುವವರ ವಾದವಾಗಿದೆ. ಇದರೊಂದಿಗೆ ಇಂಗ್ಲಿಶ್ ಮಾಧ್ಯಮವನ್ನು ವಿರೋಧಿಸುವವರು ಪ್ರಾಥಮಿಕ ಹಂತದಲ್ಲಿ ಮಗುವಿನ ಭಾಷಾ ಕಲಿಕೆ ಮತ್ತು ವಿಷಯ ಕಲಿಕೆಗಳನ್ನು ಒಟ್ಟೊಟ್ಟಿಗೆ ಮಾಡಬೇಕಾಗುತ್ತದೆ; ಇದು ಶ್ರಮದಾಯಕ ಎನ್ನುತ್ತಾರೆ. 'ಈ ಮಾತನ್ನು ಸಮರ್ಥಿಸಲು ಆಧಾರಗಳಿಲ್ಲ' ಎನ್ನುವ ಕೆ.ವಿ.ನಾರಾಯಣ ಅವರು ಇದಕ್ಕೆ ನೀಡುವ ವಿಶ್ಲೇಷಣೆಗಳು ತರ್ಕಬದ್ಧವಾಗಿವೆ. ಮಗುವಿಗೆ ಒಂದೇ ಸಮಯಕ್ಕೆ ಒಂದಕ್ಕಿಂತ ಹೆಚ್ಚು ಭಾಷೆಗಳ ಪರಿಸರ ದೊರೆತರೆ ಮಗು ತನ್ನ ಅಂತಸ್ಥ ಸಾಮರ್ಥ್ಯದಿಂದ ಹಲವು ಭಾಷೆಗಳನ್ನು ಕಲಿಯಬಹುದು. ಇದು ವೈಜ್ಞಾನಿಕವಾಗಿ ಸಾಬೀತಾಗಿರುವ ಸಂಗತಿ. ಈ ಹಿನ್ನೆಲೆಯಲ್ಲಿ ಮಕ್ಕಳು ಇಂಗ್ಲಿಶ್ ಭಾಷೆಯನ್ನು

ಅಥವಾ ಇನ್ನಾವುದೋ ಭಾಷೆಯನ್ನು ಕಲಿಯಲು ಕಷ್ಟವಾಗುತ್ತದೆ ಎಂದು ವಾದಿಸುವುದು ತರ್ಕಹೀನ ಎನ್ನುವುದು ಕೆ.ವಿ.ನಾರಾಯಣ ಅವರ ಅಭಿಮತ.

'ಮಗುವಿನ ಭಾಷಾ ಕಲಿಕೆ ಮತ್ತು ವಿಷಯ ಕಲಿಕೆಗಳು ಬೇರೆ ಬೇರೆ ರೀತಿಯಲ್ಲಿ ನಡೆದಿರುವ ಕಲಿಕೆಗಳು. ವಿಷಯಗಳ ಕಲಿಕೆಗೆ ಅನುಗಮನ ತಾರ್ಕಿಕತೆ ಹೆಚ್ಚಾಗಿ ಬೇಕಾದರೆ, ಭಾಷೆಯ ಕಲಿಕೆಗೆ ನಿಗಮನ ತರ್ಕವನ್ನು ಬಳಸಲಾಗುತ್ತದೆ. ಆದ್ದರಿಂದ ಈ ಹಂತದಲ್ಲಿ ಕಲಿಕೆಯ ಯಶಸ್ಸು ಅದು ಪರಿಚಿತ ಭಾಷೆಯೋ ಅಪರಿಚಿತ ಭಾಷೆಯೋ ಎಂಬ ಅಂಶವನ್ನು ಅವಲಂಬಿಸುವುದಿಲ್ಲ. ಕಲಿಯುವವರು ಇಂಗ್ಲಿಶ್ ಭಾಷೆಯನ್ನು ಕಲಿಯುತ್ತಿರುತ್ತಾರೆ. ಈ ಜೋಡಿ ಪ್ರಕ್ರಿಯೆಯಲ್ಲಿ ಒಂದು ಇನ್ನೊಂದನ್ನು ನೇತ್ಯಾತ್ಮಕವಾಗಿ ಪ್ರಭಾವಿಸುತ್ತದೆ ಎಂದು ವಾದಿಸಲು ಪುರಾವೆ ಇಲ್ಲ. ಆದ್ದರಿಂದ ಇಂಗ್ಲಿಶ್ ಮಾಧ್ಯಮದ ಸಾಮಾಜಿಕ ನೆಲೆಯ ಮೌಲ್ಯಭಾರವನ್ನು ಯಥಾವತ್ತಾಗಿ ನಾವು ಒಂದು ಕಡೆಯಿಂದ ಇನ್ನೊಂದು ಕಡೆಗೆ ರವಾನಿಸಲಾರೆವು'[೧೬] ಈ ಹಿನ್ನೆಲೆಯಲ್ಲಿ ಖಾಸಗಿ ಇಂಗ್ಲಿಶ್ ಮಾಧ್ಯಮದ ಶಾಲೆಗಳು, ಅಲ್ಲಿಂದ ಕಲಿತು ಹೊರಬರುತ್ತಿರುವ ಮಕ್ಕಳನ್ನು ನೋಡಿ ಕನ್ನಡದ ಭವಿಷ್ಯದ ಬಗ್ಗೆ ಮೂಡುವ ಆತಂಕ ಅಷ್ಟು ವಾಸ್ತವದ್ದಲ್ಲವೆಂಬುದು ಕೆ.ವಿ ನಾರಾಯಣ ಅವರ ವಿಶ್ಲೇಷಣೆ.

೨. ಒತ್ತಾಯದಿಂದ ಇಂಗ್ಲಿಶ್ ಮಾಧ್ಯಮ ಸೇರುವ ಮಕ್ಕಳು ಅನೌಪಚಾರಿಕವಾಗಿ ಕನ್ನಡವನ್ನೇ ಆಶ್ರಯಿಸುತ್ತಾರೆ : ಸಹಜವಾಗಿ ಹಲವು ಭಾಷೆಗಳನ್ನು ಕಲಿಯುವ ವಾತಾವರಣದಲ್ಲಿರುವ ಮಕ್ಕಳ ಪರಿಸ್ಥಿತಿಗೂ ಒತ್ತಾಯಪೂರ್ವಕವಾಗಿ ಇಂಗ್ಲಿಶ್ ಮಾಧ್ಯಮಕ್ಕೆ ತಳ್ಳಲಾದ ಮಕ್ಕಳಿಗೂ ವ್ಯತ್ಯಾಸವಿದೆ. ಇದು ಪ್ರಜ್ಞಾವಂತ ಸಮಾಜದ ತಳಮಳಕ್ಕೆ ಕಾರಣವಾಗಿದೆ. ಆದರೆ ನಮ್ಮ ತಳಮಳಕ್ಕೂ ಹೆಚ್ಚಿನ ಆಧಾರವಿಲ್ಲವೆಂದು ಕೆ.ವಿ.ನಾರಾಯಣ ಅವರ ಅಭಿಮತ. ಅವರ ಪ್ರಕಾರ ಕನ್ನಡ ಮತ್ತು ಇಂಗ್ಲಿಶ್‌ಗಳ ನಡುವೆ ಇರುವ ಈ ಪೈಪೋಟಿಯಲ್ಲಿ ಇಂಗ್ಲಿಶ್ ಹೆಚ್ಚು ಯಶಸ್ಸನ್ನು ಪಡೆದಿದೆ ಎಂದು ನಮಗೆ ತೋರುತ್ತದೆ. ಆದರೆ ಪರಿಸ್ಥಿತಿ ಕೊಂಚ ಭಿನ್ನವಾಗಿಯೇ ಇದೆ. ಕನ್ನಡವನ್ನು ಬಿಟ್ಟುಕೊಟ್ಟು ಒತ್ತಾಯಪೂರ್ವಕವಾಗಿ ಇಂಗ್ಲಿಶ್ ಮಾಧ್ಯಮಕ್ಕೆ ತಳ್ಳಲಾದ ವಿದ್ಯಾರ್ಥಿಗಳು ಔಪಚಾರಿಕವಾಗಿ ಮಾತ್ರ ಇಂಗ್ಲಿಶನ್ನು ನಂಬಿದ್ದಾರೆ. ಅನೌಪಚಾರಿಕವಾಗಿ ಅವರು ತಮ್ಮ ಕಲಿಕೆಯ ಮಾಧ್ಯಮವಲ್ಲದ ಕನ್ನಡವನ್ನೇ ಆಶ್ರಯಿಸುತ್ತಾರೆ. ಇದೊಂದು ಅಪರೂಪದ ಗ್ರಹಿಕೆಯಾಗಿದ್ದು, ಮಗುವೊಂದು ಇಂಗ್ಲಿಶ್ ಮಾಧ್ಯಮದಲ್ಲಿ ಓದುತ್ತ ಕನ್ನಡ ಸೇರಿದಂತೆ ಇತರ ವಿಷಯಗಳನ್ನು ಕಲಿಯಬಹುದು ಎನ್ನುವುದು ಸ್ಥಿರಪಟ್ಟರೆ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆ ಸಾಧ್ಯವಾಗುತ್ತದೆ. ಕೆ.ವಿ.ನಾರಾಯಣ ಅವರ ಕನ್ನಡದ ಸಾಧ್ಯತೆಗಳನ್ನು ವೈಜ್ಞಾನಿಕವಾದ ರೀತಿಯಲ್ಲಿ ಎಲ್ಲ ನೆಲೆಗಳಲ್ಲಿ ನೋಡುತ್ತಿದ್ದು ಇದು ಕನ್ನಡದ ಚಿಂತನಾ ಪರಂಪರೆಯಲ್ಲಿಯೇ ವಿಶಿಷ್ಟವಾದದ್ದಾಗಿದೆ. ಇಂಗ್ಲಿಶ್ ಮಾಧ್ಯಮ ಸೇರಿದರೂ ಬಹುತೇಕ

ವಿದ್ಯಾರ್ಥಿಗಳು ಕನ್ನಡವನ್ನೇ ಆಶ್ರಯಿಸಿದ್ದಾರೆ ಎನ್ನುವುದು ಕನ್ನಡಕ್ಕೆ ಇಂಗ್ಲಿಶ್ ಮಾಧ್ಯಮದ ಭಯವನ್ನು ಹೋಗಲಾಡಿಸುವಂತಿದೆ.

೩. ಇಂಗ್ಲಿಶ್ ಯಜಮಾನಿಕೆ ನಡೆಸಬಹುದು, ಆದರೆ ಜನರ ಅರಿವಿನ ಭಾಗವಾಗುವುದಿಲ್ಲ : 'ಕನ್ನಡ ಭಾಷಾ ಸಮುದಾಯ ಇಂಗ್ಲಿಶ್ ಕಲಿಯುವುದು ಔಪಚಾರಿಕ ಶಿಕ್ಷಣದ ಭಾಗವಾಗಿ ಮಾತ್ರ, ಆದರೆ ಅಧಿಕಾರದ ಸಂಬಂಧದಲ್ಲಿ ಇಂಗ್ಲಿಶ್‌ಗೆ ಇರುವ ಒತ್ತಾಸೆಗಳಿಂದಾಗಿ ಕನ್ನಡದ ಜೊತೆಗೆ ಅದು ಯಜಮಾನ್ಯದ ನೆಲೆಯನ್ನು ಪಡೆದುಕೊಳ್ಳುತ್ತಿದೆ. ಎಷ್ಟೇ ಭಾಷಿಕ ವ್ಯವಹಾರಗಳು ಈ ಸಂಬಂಧವನ್ನು ಹೊಂದಿದ್ದರೂ ಅವು ಜನರ ಅರಿವಿನ ಭಾಗವಾಗುವುದಿಲ್ಲ' ಎನ್ನುವ ಕೆ.ವಿ ನಾರಾಯಣ ಅವರ ಗ್ರಹಿಕೆ ಕನ್ನಡದ ಮತ್ತೊಂದು ಭರವಸೆಯಾಗಿದೆ. ಇಂಗ್ಲಿಶ್ ಅಧಿಕಾರದ ಸಂಬಂಧದಲ್ಲಿ ಯಜಮಾನ್ಯತೆ ಪಡೆದುಕೊಂಡರೂ, ಕನ್ನಡಿಗರು ಪ್ರವಾಹೋಪಾದಿಯಲ್ಲಿ ಇಂಗ್ಲಿಶಿನ ಹಿಂದೆ ಬಿದ್ದಿದ್ದರೂ ಅವರು ಇಂಗ್ಲಿಶ್ ಕಲಿಯುವುದು ಔಪಚಾರಿಕ ಶಿಕ್ಷಣದ ಭಾಗವಾಗಿ ಮಾತ್ರ. ಇಂಗ್ಲಿಶ್ ಎಷ್ಟೇ ಪ್ರಾಮುಖ್ಯತೆ ಪಡೆದರೂ ಅದು ಕನ್ನಡದಂತೆ ಅರಿವಿನ ಭಾಗವಾಗುವುದಿಲ್ಲ ಎಂಬ ಗ್ರಹಿಕೆ ಮುಖ್ಯವಾದದ್ದು. ಏಕೆಂದರೆ ಇಂಗ್ಲಿಶಿನಿಂದ ಕನ್ನಡಕ್ಕೆ ಎದುರಾಗಿರುವ ದೊಡ್ಡ ಆತಂಕವೆಂದರೆ ಅದು ನಮ್ಮ ಸಂಸ್ಕೃತಿಯನ್ನು ಮರೆಸಿ ಬೇರೊಂದು ಸಂಸ್ಕೃತಿಯನ್ನು ನೆಲೆಯೂರಿಸುತ್ತದೆ ಎನ್ನುವುದು. ಇಂಗ್ಲಿಶ್ ಅರಿವಿನ ಭಾಷೆಯಾಗದಿರುವ ಕಾರಣಕ್ಕೆ ಕನ್ನಡಕ್ಕೆ ಈ ಭಯದಿಂದ ಹೊರಬರುವುದು ಸಾಧ್ಯವಾಗುತ್ತದೆ.

೪. ಶಿಕ್ಷಣ ಮಾಧ್ಯಮಕ್ಕೂ ಸಾಂಸ್ಕೃತಿಕ ಪರಂಪರೆ ಮುಂದುವರಿಕೆಗೂ ಸಂಬಂಧವಿಲ್ಲ : ಮಾತೃಭಾಷೆಯಲ್ಲಿ ಓದಿದವರು ಅದರೊಂದಿಗೆ ತಮ್ಮ ಸಂಸ್ಕೃತಿಯನ್ನೂ ಮೈಗೂಡಿಸಿಕೊಳ್ಳುತ್ತಾರೆ ಮತ್ತು ಕಾಲಾಂತರದಲ್ಲಿ ಅದರ ವಾರಸುದಾರರಾಗುತ್ತಾರೆ ಎನ್ನುವುದು ಸಮಾಜದಲ್ಲಿ ಗಟ್ಟಿಯಾಗಿ ಬೇರುಬಿಟ್ಟ ನಂಬಿಕೆಯಾಗಿದ್ದು, ಈ ಕಾರಣದಿಂದಲೇ ಇಂಗ್ಲಿಶ್ ಮಾಧ್ಯಮ ನಮ್ಮ ಸಂಸ್ಕೃತಿಯನ್ನು ನಾಶ ಮಾಡುತ್ತಿದೆ ಎನ್ನುವ ಆತಂಕವನ್ನು ಸೃಷ್ಟಿಸಿದೆ. ಆದರೆ ಕೆ.ವಿ ನಾರಾಯಣ ಅವರ ಚಿಂತನೆ ಇವನ್ನೆಲ್ಲ ಮರುಪರಿಶೀಲಿಸುವಂತೆ ಒತ್ತಾಯಿಸುತ್ತವೆ. ಅವರ ಪ್ರಕಾರ ಕನ್ನಡ ಮಾಧ್ಯಮದಲ್ಲಿ ಓದಿದವರು, ಹಾಗೆ ಓದಿದ್ದರಿಂದಲೇ ಸಂಸ್ಕೃತಿಗೆ ನಿಕಟವಾಗಿರುತ್ತಾರೆ ಮತ್ತು ಅದರ ವಾರಸುದಾರರಾಗಿರುತ್ತಾರೆ ಎಂದು ಸಾಧಿಸುವುದು ಕಷ್ಟ. ಅದಕ್ಕೂ ಪುರಾವೆಗಳಿಲ್ಲ. ಏಕೆಂದರೆ ಇಂಗ್ಲಿಶ್ ಮಾಧ್ಯಮದ ಅವಕಾಶ ಸಿಗದೆ ಕನ್ನಡದಲ್ಲೇ ಕಲಿತ ತಲೆಮಾರೊಂದು ನಮ್ಮೊಡನೆ ಇದೆ. ಅದರಲ್ಲಿಯೂ ಸಾಂಸ್ಕೃತಿಕ ನೆಲೆಯ ಬಂಧ ಬಲವಾಗಿದೆಯೆಂದು ಹೇಳಲು ಸಾಕಷ್ಟು ಕಾರಣಗಳಿಲ್ಲ. ಆದ್ದರಿಂದ ಶಿಕ್ಷಣ ಮಾಧ್ಯಮಕ್ಕೂ ಸಾಂಸ್ಕೃತಿಕ ಪರಂಪರೆ ಮುಂದುವರಿಕೆಗೂ ನೇರವಾದ ಸಂಬಂಧ ಇದ್ದಿರಲಾರದು. ಸಾಮಾಜಿಕವಾದ ಬೇರೆ ಯಾವುದೋ ಕಾರಣಗಳು ಈ ನೆಲೆಯಲ್ಲಿ ಹೆಚ್ಚು ತೀವ್ರವಾಗಿ, ಪ್ರಭಾವಶಾಲಿಯಾಗಿ ಇರುವಂತೆ ತೋರುತ್ತದೆ. ಮಕ್ಕಳ ಕಲಿಕೆಯ ಜೈವಿಕವಾಗಿಯೇ

ಇರುವ ಸಾಮರ್ಥ್ಯದ ಕುರಿತು ವೈಜ್ಞಾನಿಕ ಹಿನ್ನೆಲೆಯಲ್ಲಿನ ಕೆ.ವಿ. ನಾರಾಯಣ ಅವರ ಗ್ರಹಿಕೆಗಳು ಪ್ರಾಥಮಿಕ ಶಿಕ್ಷಣ ಯಾವ ಭಾಷಾ ಮಾಧ್ಯಮದಲ್ಲಿ ಇರಬೇಕೆಂಬ ಚರ್ಚೆಯ ತಳಹದಿಯನ್ನು ಅಲ್ಲಾಡಿಸುವಂತಿದ್ದು ಮರುಚಿಂತನೆಗೆ ಒತ್ತಾಯಿಸುತ್ತವೆ. ಇವು ಕನ್ನಡ ಅಸ್ಮಿತೆಯ ಸ್ವರೂಪವನ್ನು ಬದಲಿಸುವಷ್ಟು ಶಕ್ತವಾಗಿವೆ.

೫. ಮಾರುಕಟ್ಟೆ ಶಕ್ತಿಗಳಿಗೆ ಭಾಷೆಯಲ್ಲ, ಲಾಭವಷ್ಟೇ ಆದ್ಯತೆ : ಇಂಗ್ಲಿಶ್ ಮಾರುಕಟ್ಟೆಯ ಭಾಷೆಯಾಗಿರುವುದು ಕನ್ನಡಕ್ಕೆ ಹೆಚ್ಚಿನ ಆತಂಕವನ್ನು ತಂದಿರುವುದಾಗಿದೆ. ಪ್ರಧಾನವಾಗಿ ಬೆಂಗಳೂರು ಸೇರಿದಂತೆ ಕರ್ನಾಟಕದ ಪ್ರಮುಖ ನಗರಗಳಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳ ಸಕಲ ವಹಿವಾಟುಗಳೂ ಇಂಗ್ಲಿಶಿನಲ್ಲಿ ನಡೆಯುತ್ತ, ಇವೆಲ್ಲ ಇಂಗ್ಲಿಶಿನ ಪ್ರವರ್ತಕರಂತೆ ಕಾರ್ಯನಿರ್ವಹಿಸುತ್ತಿವೆ. ಇವು 'ತಮ್ಮ ವ್ಯವಹಾರದ ಬೆಳವಿಗೆ ದೇಶೀ ಭಾಷೆ ತೊಡಕೆನಿಸಿದರೆ ಅದನ್ನು ಬಿಟ್ಟುಬಿಡಬೇಕು ಎಂದು ನಿರಾಳವಾಗಿ ನುಡಿಯುತ್ತವೆ. ಅವು ಇಂಗ್ಲಿಷನ್ನು ಅಪ್ಪಿಕೊಳ್ಳುತ್ತಿರುವುದು, ಬಿ.ಎಂ.ಶ್ರೀ ಅಥವಾ ಕುವೆಂಪು ಅವರಂತೆ ಜ್ಞಾನಕ್ಕಲ್ಲ. ಸಾಹಿತ್ಯಕ ಪ್ರೇರಣೆಗೂ ಅಲ್ಲ. ಬದಲಿಗೆ ತಮ್ಮ ಸಾಮ್ರಾಜ್ಯದ ವಿಸ್ತರಣೆಗೆ. ಅದೂ ಇಂಗ್ಲಿಶಿನ ಅಪ್ಪುವಿಕೆ ಕನ್ನಡವನ್ನು ಇಟ್ಟುಕೊಂಡಲ್ಲ; ಕನ್ನಡವನ್ನು ಬಿಟ್ಟುಕೊಟ್ಟು. ಎಲ್ಲವನ್ನೂ ಲಾಭ-ನಷ್ಟಗಳ ಕಣ್ಣಲ್ಲೇ ನೋಡುವ ಅವಕ್ಕೆ ತಮ್ಮ ಈ ಭಾಷಾನೀತಿಯಿಂದ ನಾಡಿನ ವಿಶಾಲ ಸಮುದಾಯಗಳ ಮೇಲೆ ಸಂಭವಿಸುವ ಪರಿಣಾಮದತ್ತ ಖಬರಿಲ್ಲ'[೧೭] ಎಂಬ ಅಸಮಾಧಾನ, ಆಕ್ರೋಶಗಳಿಗೂ ಕಾರಣವಾಗಿವೆ. ಅಲ್ಲದೆ 'ಕರ್ನಾಟಕದ ಪ್ರಸಿದ್ಧ ಕಂಪ್ಯೂಟರ್ ಉದ್ಯಮಿಗಳು ಏನು ಮಾಡಿದ್ದಾರೆ? ಕನ್ನಡದ ಬದಲು ಇಂಗ್ಲಿಷ್ ಮಾಧ್ಯಮದ ಪ್ರಚಾರಕರಾಗಿದ್ದಾರೆ. ಇಂಗ್ಲಿಷ್ ಭಾಷೆಯನ್ನು ಕನ್ನಡ ಮಾಧ್ಯಮದೊಂದಿಗೆ ಚೆನ್ನಾಗಿ ಕಲಿಯಿರಿ ಎಂದು ಹೇಳುತ್ತಿಲ್ಲ; ಇಂಗ್ಲಿಷ್ ಮಾಧ್ಯಮದಲ್ಲೇ ಕಲಿಯಿರಿ ಎಂದು ಒತ್ತಾಯಿಸುತ್ತಿದ್ದಾರೆ'[೧೮] ಇದರಿಂದ ಕನ್ನಡ ಭಾಷೆಗೆ ಆಪತ್ತು ಬಂದೊದಗಿದೆ ಎನ್ನುವ ಸಿಟ್ಟು ಮಡುಗಟ್ಟಿದೆ.

ಬಂಡವಾಳಶಾಹಿಗಳಿಗೆ ಲಾಭಗಳಿಕೆಯ ಉದ್ದೇಶವಿರುವುದು ಮೇಲ್ನೋಟಕ್ಕೆ ತಿಳಿಯುವಂತಹದು. ಅವುಗಳಿಗೆ ಸಮುದಾಯ ಪ್ರಜ್ಞೆಯಾಗಲೀ, ದೇಶೀ ಭಾಷೆಗಳ ಕುರಿತ ಕಾಳಜಿಯಾಗಲಿ ಇಲ್ಲ. ಹಾಗೆಂದು ಅವುಗಳಿಗೆ ಇಂಗ್ಲೀಶಿನ ಕುರಿತು ಕುರುಡು ವ್ಯಾಮೋಹವೇನೂ ಇಲ್ಲ. ಬಂಡವಾಳಶಾಹಿಗಳಿಗೆ ಪೂರಕವಾಗಿ ಕನ್ನಡ ಭಾಷಿಕರು ಆಧುನೀಕರಣದ ನೆಲೆಯಲ್ಲಿ ಇಂಗ್ಲಿಶಿಗೆ ಮುಖಾಮುಖಿಯಾಗುತ್ತಾರೆ. ಅಂದರೆ ಕನ್ನಡದ ದೊಡ್ಡ ಸಮುದಾಯ ಇಂಗ್ಲಿಶ್ ಜೊತೆ ಗಟ್ಟಿಯಾದ ಸಂಬಂಧವನ್ನು ಬೆಳೆಸಿಕೊಳ್ಳುತ್ತಿದೆ. ಇದು ಮುಖ್ಯವಾಗಿ ಆರ್ಥಿಕ ಮತ್ತು ಆಧುನೀಕರಣದ ಕಾರಣಕ್ಕಾಗಿ.

ಇಂಗ್ಲಿಶ್ ಭಾಷೆ ತನ್ನ ಅಧಿಪತ್ಯವನ್ನು ಏಕಪಕ್ಷೀಯವಾಗಿ ಸಾಧಿಸುತ್ತದೆ ಎನ್ನುವ ಮಾತು ಅಷ್ಟು ಸರಳವಲ್ಲ. ಏಕೆಂದರೆ ಮಾರುಕಟ್ಟೆಯ ಶಕ್ತಿಗಳು ಇಂಗ್ಲಿಶನ್ನು ಅಸ್ತ್ರವಾಗಿ ಬಳಸುತ್ತಿವೆ ಎಂಬುದು

ನಿಜ. ಆದರೆ ಕೊಳ್ಳುವ ಜನರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಮಾರುಕಟ್ಟೆಯ ಶಕ್ತಿಗಳ ಮುಖ್ಯ ಗುರಿಯೇ ಹೊರತು ಇಂಗ್ಲಿಷನ್ನು ಬೆಳೆಸುವುದಲ್ಲ. ಒಂದು ವೇಳೆ ಕೊಳ್ಳುವವರನ್ನು ಓಲೈಸಲು ಅವರ ಭಾಷೆಯನ್ನು ಬಳಸಬೇಕು ಎಂಬ ಪ್ರಸಂಗ ಒದಗಿದರೆ ಆಗ ಇಂಗ್ಲಿಶಿನ ಜೊತೆಗೆ ಈ ಭಾಷೆಯನ್ನು ಬಳಸಲು ಹಿಂಜರಿಯುವುದಿಲ್ಲ ಎಂದು ಕೆ.ವಿ ನಾರಾಯಣ ಅವರು ವಿಶ್ಲೇಷಿಸುತ್ತಾರೆ. ಇದಕ್ಕೆ ನಿದರ್ಶನವಾಗಿ ಏಕಪಕ್ಷೀಯವಾಗಿ ಇಂಗ್ಲಿಶನ್ನು ಹೇರುತ್ತಿದ್ದ ಮಾಹಿತಿ ತಂತ್ರಜ್ಞಾನ ವಲಯದ ದೈತ್ಯ ಕಂಪನಿ ಮೈಕ್ರೋಸಾಫ್ಟ್ ಈಗ ಕನ್ನಡವೂ ಸೇರಿದಂತೆ ಜಗತ್ತಿನ ನೂರಾರು ಭಾಷೆಗಳನ್ನು ತನ್ನ ಕಾರ್ಯವಾಹಿಯಲ್ಲಿ ಭಾಗಿಯಾಗುವ ಅವಕಾಶ ಕಲ್ಪಿಸಿರುವುದನ್ನು ಉದಾಹರಿಸುತ್ತಾರೆ. ಕೆ.ವಿ ನಾರಾಯಣ ಅವರ ಈ ಗ್ರಹಿಕೆಯನ್ನು ಸಮರ್ಥಿಸುವಂತೆ ಇದುವರೆಗೆ ಇಂಗ್ಲಿಶಿನಲ್ಲಷ್ಟೇ ಅಂತರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳ ವೀಕ್ಷಕ ವಿವರಣೆ ನೀಡುತ್ತಿದ್ದ 'ಸ್ಟಾರ್ ಸ್ಪೋರ್ಟ್ಸ್' ರಾಷ್ಟ್ರೀಯ ಟಿವಿ ಚಾನಲ್ಲು ಈಗ ತಮಿಳು ಹಾಗು ಕನ್ನಡದಲ್ಲಿಯೂ ವೀಕ್ಷಕ ವಿವರಣೆ ನೀಡಲಾರಂಭಿಸಿದೆ.

ಬಹುರಾಷ್ಟ್ರೀಯ ಕಂಪನಿಗಳು ಅಗತ್ಯಬಿದ್ದರೆ ದೇಶಿ ಭಾಷೆಗಳನ್ನು ಬಳಸುತ್ತವೆ ಎನ್ನುವುದು ನಿಜ. ಆದರೆ ಅವು ಬಳಸುವ ದೇಶಿ ಭಾಷೆಯ ಸ್ವರೂಪ ಭಾಷೆಯನ್ನು ವಿರೂಪಗೊಳಿಸುವ ಅಪಾಯಗಳ ಬಗ್ಗೆಯೂ ಕೆ.ವಿ ನಾರಾಯಣ ಅವರ ಗಮನವಿದೆ. ಬಹುರಾಷ್ಟ್ರೀಯ ಕಂಪನಿಗಳು ಸೃಷ್ಟಿಸುತ್ತಿರುವ ಉಪಭೋಗಿ ಸಂಸ್ಕೃತಿಗೆ ಕರ್ನಾಟಕದ ಜನಸಮುದಾಯದ ಒಂದು ದೊಡ್ಡ ಭಾಗ ಗುರಿಯಾಗಿದೆ. ಅಂದರೆ ಹೊಸ ಸಾಮಗ್ರಿಗಳನ್ನು ಕೊಂಡು ಬಳಸುವ ಸಾಮರ್ಥ್ಯ ಈ ಜನವರ್ಗಕ್ಕೆ ಇದೆ. ಜಾಗತಿಕ ನೆಲೆಯಿಂದ ಗಮನಿಸಿದರೆ ಸುಮಾರು ಮೂರೂವರೆ ಕೋಟಿ ಜನರ ಈ ಗುಂಪು ತುಂಬಾ ಗಣನೀಯವಾದದ್ದು. ಅವರ ಆಸಕ್ತಿಯನ್ನು ಕಾಯ್ದುಕೊಳ್ಳಲು ಮೊದಮೊದಲು ಇಂಗ್ಲಿಶ್ ಬಳಸುತ್ತಿದ್ದ ಈ ಮಾರಾಟಗಾರರು ಗ್ರಾಹಕರು ಬಳಸುವ ದೇಶಿ ಭಾಷೆಗಳ ಕಡೆ ಒಲವು ತೋರಿಸಿದ್ದಾರೆ. ಅವರು ರೂಪಿಸುತ್ತಿರುವ ಕನ್ನಡವು ಕೂಡಾ ಹೀಗೆ ಅವರ ಅಪೇಕ್ಷೆಯ ಕನ್ನಡ. ನಮ್ಮ ಅಗತ್ಯಕ್ಕೆ ನಾವು ರೂಪಿಸಿಕೊಂಡಿಲ್ಲ. ತಂತ್ರಜ್ಞಾನದ ಜಾಲಕ್ಕೆ ಸಿಲುಕಿದ್ದಾಗ ಈ ಬಗೆಯ ಭಾಷಾ ಪ್ರಯೋಗಗಳನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿ ಬಿಡುತ್ತದೆ. ಮಾರುಕಟ್ಟೆ ಸಂಸ್ಕೃತಿಯಲ್ಲಿ ಇಂತಹ ತುರ್ತುಗಳು ಸೃಷ್ಟಿಸುವ ಪರಿಹಾರಗಳು ನಮ್ಮ ಕೊರಳಿಗೆ ಗಂಟು ಬೀಳುತ್ತವೆ[೧೯] ಎಂದು ವಿಶ್ಲೇಷಿಸುತ್ತಾರೆ.

೬.೩.೪ ಈವರೆಗಿನ ಗ್ರಹಿಕೆಯಾಚೆಗೆ ವಿಸ್ತರಿಸುವ ಚಿಂತನೆಗಳು

ಕೆ.ವಿ.ನಾರಾಯಣ ಅವರು ಮಂಡಿಸುತ್ತಿರುವ ಮಾರುಕಟ್ಟೆ ಶಕ್ತಿಗಳ ಭಾಷೆಯೊಂದಿಗಿನ ಅನುಕೂಲಸಿಂಧು ಚಲನಶೀಲ ಸಂಬಂಧಗಳ ಕುರಿತ ಗ್ರಹಿಕೆಗಳು, 'ಸಾಮ್ರಾಜ್ಯಶಾಹಿಗಳು ಮತ್ತು ದೇಶೀಯ ಆಳುವ ವರ್ಗಗಳು ಭಾಷೆಯನ್ನು ರಾಜಕಾರಣದ ಅಸ್ತ್ರವನ್ನಾಗಿ ಬಳಸುತ್ತಿವೆ' ಎನ್ನುವ

ಕನ್ನಡ ವಿಚಾರ ಸಾಹಿತ್ಯದಲ್ಲಿನ ಗ್ರಹಿಕೆಯಾಚೆಗಿನ ಆಯಾಮಗಳತ್ತ ಬೆಳಕು ಬೀರುತ್ತಿವೆ. 'ಕಳೆದ ೫೦ ವರ್ಷಗಳಲ್ಲಿ ಕನ್ನಡ ಇಂಗ್ಲಿಶ್ ಜೊತೆಗಿನ ತನ್ನ ಸಂಬಂಧವನ್ನು ಮತ್ತೆ ಮತ್ತೆ ಮರುವ್ಯಾಖ್ಯಾನಗೊಳ್ಳುತ್ತ ಬಂದಿದೆ. ಏಕೀಕರಣದ ಮೊದಲ ಕೆಲವು ವರ್ಷಗಳಲ್ಲಿ ಇಂಗ್ಲಿಶನ್ನು ನಾವು ಎಚ್ಚರಿಕೆಯಿಂದ ಬಳಸಿಕೊಳ್ಳಬೇಕಾದ ಸಾಧ್ಯತೆ ಎಂದು ಭಾವಿಸಿದ್ದೆವು. ಅದು ಸ್ವಯಂಚಾಲಿತ ಸಾಮರ್ಥ್ಯವುಳ್ಳ ಭಾಷೆ ಎಂದು ನಾವು ಒಪ್ಪಲಿಲ್ಲ. ಇಂಗ್ಲಿಶನ್ನು ಗೆಲ್ಲಬಹುದು ಎಂಬ ಹುಮ್ಮಸ್ಸಿನಲ್ಲಿ ನಾವು ಮುಂದಾದೆವು ಎಂದು ತೋರುತ್ತದೆ. ಆನಂತರದ ದಿನಮಾನಗಳು ಆ ಇಂಗ್ಲಿಶಿಗೆ ಇರುವ ಸ್ವಯಂಚಾಲಿತ ಸಾಮರ್ಥ್ಯದ ಅರಿವನ್ನು ನಮಗೆ ಮಾಡಿಕೊಟ್ಟಿದೆ.'[೨೦] ಇಲ್ಲಿ ಇಂಗ್ಲಿಶಿಗೆ ದಕ್ಕಿದ ಈ ಸ್ವಯಂಚಾಲಿತ ಸಾಮರ್ಥ್ಯಕ್ಕೆ ಕಾರಣವಾಗಿರುವ ಇಂಧನ ಮೂಲಗಳು ಈಗಾಗಲೇ ಗುರುತಿಸಲಾಗಿರುವಂತೆ ಈ ಭಾಷೆ ಮೂಲಕ ಸಮಾಜದ ಕೆಲವರ್ಗಗಳಿಗೆ ಸಿಗುತ್ತಿರುವ ಆರ್ಥಿಕ ಭದ್ರತೆ, ಪ್ರತಿಷ್ಠೆ, ಆಧುನಿಕರಣಗೊಳ್ಳುವ ಬಯಕೆಗಳೇ ಆಗಿವೆ. ಕೆ.ವಿ ನಾರಾಯಣ ಅವರ ಈ ಗ್ರಹಿಕೆಯೂ ಅಂತಹದ್ದೊಂದು ಆಯಾಮ. ಬಹುಷಃ ಇದುವೇ ಕೆ.ವಿ ನಾರಾಯಣ ಅವರು 'ಭಾಷೆಯ ರಾಜಕಾರಣದ ಹಿಂದಿರುವ ವಂಚನೆಗಳನ್ನು, ಅಂದರೆ ಪ್ರಭುತ್ವಗಳು ಜನರಿಗೆ ವಂಚಿಸುತ್ತಿರುವುದನ್ನು ತಮ್ಮ ಒಟ್ಟು ಅಧ್ಯಯನದ ಸಂದರ್ಭದಲ್ಲಿ ನವಿರುಗೊಳಿಸಿ ಹೇಳುವುದೇಕೆ?'[೨೧] ಎಂಬ ಪ್ರಶ್ನೆಗೆ ಉತ್ತರವನ್ನೂ ಅಡಗಿಸಿಕೊಂಡಿದೆ ಎನಿಸುತ್ತದೆ.

೬.೩.೫ ಸಂಸ್ಕೃತಕ್ಕೆ ಪಾವಿತ್ರ್ಯದ ನಂಟು, ಇಂಗ್ಲಿಶಿಗೆ ಆಧುನಿಕತೆಯ ಚಹರೆ

ಪ್ರಭುತ್ವದ ಭಾಷೆಗಳಾದ ಸಂಸ್ಕೃತ ಮತ್ತು ಇಂಗ್ಲಿಶ್ ಭಾಷೆಗಳು ವರ್ತಿಸುವ ಭಿನ್ನ ಬಗೆಗಳನ್ನು ಕೆ.ವಿ ನಾರಾಯಣ ಅವರು ವರ್ಗನೆಲೆಯ ಹಿನ್ನೆಲೆಯಲ್ಲಿ ನೋಡುತ್ತ ನೀಡುವ ಒಳನೋಟಗಳು ಭಾಷೆ ಮತ್ತು ಸಮಾಜದ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಬೆಳಕಿಂಡಿಯಾಗಿವೆ. 'ಬದಲಾದ ಚಾರಿತ್ರಿಕ ಸಂದರ್ಭದಲ್ಲಿ ಸಂಸ್ಕೃತಕ್ಕೆ ಸೇರಿದ ಪಾವಿತ್ರ್ಯದ ನಂಟು ಇಂಗ್ಲಿಶಿಗೆ ಇಲ್ಲ. ಬದಲಿಗೆ ಅದು ಆಧುನಿಕತೆಯ ಚಹರೆಯನ್ನು ಭಾಷಾ ಬಳಕೆದಾರರಿಗೆ ದೊರಕಿಸಿಕೊಡುತ್ತದೆ' ಎಂದವರು ವಿಶ್ಲೇಷಿಸುತ್ತಾರೆ. ಇಂಗ್ಲಿಶ್ ಭಾಷೆ ಕನ್ನಡದ ಸಂದರ್ಭದಲ್ಲಿ ಮೊದಮೊದಲು ಕೇವಲ ಆಧುನಿಕತೆಯ ಮತ್ತು ತಿಳಿವಳಿಕೆಯ ಆಕರ ಎಂಬ ನೆಲೆಯನ್ನು ಪಡೆದಿತ್ತು. ಆಧುನಿಕತೆಯ ಸೂಚಕವಾಗಿ ಈ ಭಾಷೆಯನ್ನು ಪರಿಶೀಲಿಸಿದಾಗ ಕನ್ನಡ ಸಂಸ್ಕೃತಿಗೆ ಅಘಾತಕಾರಿಯಾದ ಅಂಶಗಳು ಅಷ್ಟು ಕಂಡು ಬರಲಿಲ್ಲ. ಆದರೆ ತಿಳಿವಳಿಕೆಯ ಆಕರವಾಗುತ್ತಲೇ ಭಾಷೆ ಯಜಮಾನಿಕೆಯ ನೆಲೆಗೂ ತಲುಪುವುದು ಸಾಧ್ಯ ಎಂಬ ಅರಿವು ಏಳನೇ ದಶಕದಿಂದ ಈಚೆಗೆ ಕನ್ನಡ ಜನಮನದಲ್ಲಿ ನೆಲೆಯೂರಲು ಮೊದಲಾಯಿತು.[೨೨] ವಿದ್ಯಾಭ್ಯಾಸ ಮತ್ತು ಇಂಗ್ಲಿಶ್ ಭಾಷೆಯನ್ನು ಸಮಾನವಾಗಿ ನೋಡುತ್ತ ಇದರಿಂದ ನಮ್ಮ ಪಾರಂಪರಿಕ ಮೌಲ್ಯಗಳಿಗೆ ಧಕ್ಕೆಯಾಗುತ್ತವೆ ಎಂದು ಸಮಾಜ

ನೋಡಲಾರಂಭಿಸಿದ್ದನ್ನು ಈ ಕಾಲಘಟ್ಟದಲ್ಲಿ ಬಂದ ಜನಪ್ರಿಯ ಸಿನಿಮಾಗಳಲ್ಲಿ ಇಂಗ್ಲಿಶ್ ಕಲಿತ ಮಕ್ಕಳು ತಂದೆ ತಾಯಿಗಳನ್ನೂ, ಕೌಟುಂಬಿಕ ಮೌಲ್ಯಗಳನ್ನೂ ತಿರಸ್ಕರಿಸುವ ಉದಾಹರಣೆಯೊಂದಿಗೆ ಕೆ.ವಿ ನಾರಾಯಣ ಅವರು ಮಂಡಿಸುವುದು ಪರಿಣಾಮಕಾರಿಯಾಗಿದೆ.

೬.೩.೬ ಪ್ರಜಾಪ್ರಭುತ್ವೀಯ ನಿಲುವು

ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಡಿಯಿಟ್ಟು ಅರ್ಧ ಶತಮಾನ ದಾಟಿದ್ದರೂ ದೇಶಿ ಭಾಷೆಗಳು ರಾಜಪ್ರಭುತ್ವ ಮತ್ತು ಬ್ರಿಟಿಶ್ ಆಡಳಿತದಲ್ಲಿತ್ತೆಂದು ಚರಿತ್ರೆ ಕಟ್ಟಿಕೊಟ್ಟ ಹುಸಿ'ವೈಭವ'ವನ್ನು ನೆನೆಸಿಕೊಳ್ಳುತ್ತ ವರ್ತಮಾನವನ್ನು ಹೀಗೆಳೆಯುತ್ತಿರುವುದು ವಿಪರ್ಯಾಸವಾಗಿದೆ. ಖಚಿತ ಹಿತಾಸಕ್ತಿಗಳನ್ನು ಹೊಂದಿದ ಮೂಲಭೂತವಾದಿ ನೆಲೆಯು ಆಳಿಹೋದ ರಾಜಸತ್ತೆಯನ್ನು ವೈಭವೀಕರಿಸುವುದು ಅಚ್ಚರಿಯ ಸಂಗತಿಯಲ್ಲ. ಆದರೆ ಜನಸಮುದಾಯದ ಎಲ್ಲ ವರ್ಗಗಳಲ್ಲಿ ಇದೊಂದು ಬಗೆಯ ಸಾರ್ವತ್ರಿಕ 'ಕಾಮನ್ ಸೆನ್ಸ್' ಆಗಿರುವುದು ಆತಂಕಕಾರಿಯಾದ ಸಂಗತಿಯಾಗಿದೆ.

ಸಾಮಾನ್ಯವಾಗಿ ಬ್ರಿಟಿಷರ ಆಡಳಿತದಲ್ಲಿ ಕನ್ನಡಕ್ಕೆ ವಿಶೇಷ ಮಾನ್ಯತೆಯಿತ್ತು ಎಂಬ ಅಭಿಪ್ರಾಯ ಚಾಲ್ತಿಯಲ್ಲಿದೆ. ಕೆಲವು ಬ್ರಿಟಿಶ್ ಅಧಿಕಾರಿಗಳು ಕನ್ನಡದ ಬೆಳವಣಿಗೆಗೆ ಮಾಡಿದ ಪ್ರಯತ್ನಗಳನ್ನು ಉಲ್ಲೇಖಿಸುತ್ತ ಇಡೀ ಬ್ರಿಟಿಶ್ ಪ್ರಭುತ್ವವೇ ಕನ್ನಡದ ಪರವಾಗಿತ್ತು ಎನ್ನುವ ಭಾವನೆ ಮೂಡುವ ರೀತಿಯಲ್ಲಿ ಕೃತಿಗಳೂ ಕೂಡ ಹೊರಬಂದಿವೆ. ಆದರೆ ಇದು 'ಬ್ರಿಟೀಷರ ಆಡಳಿತದಲ್ಲಿ 'ಈ ಕಿರುವಲಯದಲ್ಲಿ' ಕಂಡುಬರುವ ಕನ್ನಡದ ಬಳಕೆಯನ್ನು ಗಮನಿಸಿ ಇಡೀ ಆಡಳಿತದಲ್ಲೇ ಕನ್ನಡಕ್ಕೆ ಮಾನ್ಯತೆ ಇತ್ತು ಎಂದು ಬಿಂಬಿಸುವುದು ಸರಿಯಾದ ವ್ಯಾಖ್ಯಾನವಾಗಲಾರದು' ಎಂದು ಕೆ.ವಿ ನಾರಾಯಣ ಅವರು ಅಭಿಪ್ರಾಯ ಪಡುತ್ತಾರೆ. 'ಬ್ರಿಟಿಷ್ ಅಥವಾ ರಾಜಪ್ರಭುತ್ವದ ಆಡಳಿತದ ತಾತ್ವಿಕತೆಯೇ ಇಂದಿನ ಪ್ರಜಾಪ್ರಭುತ್ವದ ತಾತ್ವಿಕತೆಗಿಂತ ಬೇರೆಯಾದುದು. ಇಲ್ಲಿ ಜನರು ತಮ್ಮ ದೈನಂದಿನ ಬದುಕಿನಲ್ಲಿ ಆಡಳಿತಕ್ಕೆ ಯಾವ ಸಂಪರ್ಕವನ್ನು ಇರಿಸಿಕೊಳ್ಳದೇ ಕೇವಲ ತೆರಿಗೆದಾರನಾಗಿ ಅಥವಾ ಸರಕಾರಕ್ಕೆ ಬೇಕಾದ ಸೇವಾವಲಯದಲ್ಲಿ ಸೇವೆಗಳನ್ನು ಸಲ್ಲಿಸುವವರಾಗಿ ಇರುತ್ತಿದ್ದರು. ಆಡಳಿತದ ಸಾರ್ವಭೌಮತ್ವವೆಲ್ಲ ಜನರ ಪ್ರಜ್ಞೆಯ ಆಚೆಗಿನ ಮಾತಾಗಿತ್ತು. ಹೀಗಿರುವಾಗ ಆಗಿನ ಆಡಳಿತದಲ್ಲಿ ಕನ್ನಡಕ್ಕೆ ಸಾರ್ವಭೌಮ ಸ್ಥಾನ ದೊರಕುವುದು ಖಂಡಿತ ಸಾಧ್ಯವಿರಲಿಲ್ಲ'[೨೩] ಎನ್ನುವ ಅವರ ನಿಲುವು ತರ್ಕಬದ್ಧವಾಗಿದೆ.

ಸಾಹಿತ್ಯ ಕ್ಷೇತ್ರದಲ್ಲಿಯೂ ಆಳರಸರನ್ನು ವೈಭವೀಕರಿಸುವುದನ್ನು ಕಾಣಬಹುದು. ಕಡು ಪ್ರಜಾಪ್ರಭುತ್ವವಾದಿಗಳಾದ ಸಾಹಿತಿಗಳಲ್ಲಿಯೂ ಇದನ್ನು ಕಾಣಬಹುದಾಗಿದೆ. ಕುವೆಂಪು ಅವರು ತಮ್ಮ ನಾಡಗೀತೆಯಲ್ಲಿ, ಸುಬ್ಬಣ್ಣ ಅವರು ತಮ್ಮ ಚಿಂತನಾ ಸಾಹಿತ್ಯದಲ್ಲಿ ಕರ್ನಾಟಕವನ್ನು ಆಳಿದ ಅರಸರನ್ನು ಅವಿಮರ್ಶಾತ್ಮಕವಾಗಿ ವರ್ಣಿಸುತ್ತಾರೆ. ಇದು ಕೆ.ವಿ ನಾರಾಯಣ ಅವರನ್ನು ಚಿಂತನೆಗೆ

ಹಚ್ಚಿದೆ. 'ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವ ಈ ದಿನಗಳಲ್ಲಿ ಸಾಮಂತಶಾಹಿಯ ನೆನಪುಗಳನ್ನು ನಮ್ಮ ಪರಂಪರೆಯ ಹೆಮ್ಮೆ ಎಂದು ಹಾಡುವ ಗೀತೆ ಸಹಜವಾಗಿಯೇ ವಿವಾದಗಳಿಗೆ ಅನುವು ಮಾಡಿಕೊಡುತ್ತದೆ. ಆದರೆ ನಮ್ಮ ಸದ್ಯದ ಸಾಮಾಜಿಕ ಚಿಂತನೆಗಳು ಚರಿತ್ರೆಯ ಬಗೆಗೆ ಇಬ್ಬಂದಿತನವನ್ನು ಪ್ರದರ್ಶಿಸುತ್ತವೆ. ಒಂದೆಡೆ ಆ ಚರಿತ್ರೆಯ ಜನವಿರೋಧಿ ನೆನಪುಗಳಿಂದ ಹೊರಬರಲು ಇಂದಿನ ತಲೆಮಾರು ಯತ್ನಿಸುತ್ತಿರುವಾಗಲೇ ಆ ನೆನಪುಗಳನ್ನು ನಮ್ಮ ಸಾಂಸ್ಕೃತಿಕ ಆಸ್ತಿ ಎಂಬಂತೆ ಬಿಂಬಿಸಲಾಗುತ್ತದೆ'. ಕನ್ನಡದ ಪ್ರಮುಖ ಚಿಂತಕರಲ್ಲಿನ ಈ ವೈರುಧ್ಯ ಮೂಲಭೂತವಾದಿ ನೆಲೆಯ ಹಿತಾಸಕ್ತಿಗಳಿಗೆ ಪೂರಕವಾಗುವುದು ಇಲ್ಲಿನ ಅಪಾಯವಾಗಿದೆ. ಇದುವೇ ಬಹುಷಃ ಕೆ.ವಿ ನಾರಾಯಣ ಅವರ ಮೇಲ್ಕಂಡ ಗ್ರಹಿಕೆಯ ಒಳದನಿಯಾಗಿರುವಂತಿದೆ.

ಇತರ ಭಾಷೆಗಳ ಕುರಿತ ಕೆ.ವಿ ನಾರಾಯಣ ಅವರ ಚಿಂತನೆಗಳಲ್ಲಿಯೂ ಪ್ರಜಾಪ್ರಭುತ್ವೀಯ ನಿಲುವನ್ನು ಕಾಣಬಹುದು. ಕರ್ನಾಟಕದಲ್ಲಿ ತುಳು, ಕೊಡವ, ಉರ್ದು, ಲಂಬಾಣಿಯಂತಹ ಇತರ ಭಾಷೆಗಳನ್ನಾಡುವ ಜನರು ಸಾಕಷ್ಟಿದ್ದಾರೆ. ಕನ್ನಡದಂತೆಯೇ ಈ ಭಾಷೆಗಳು ಸಹಜವಾಗಿಯೇ ತಮ್ಮ ಅಸ್ಮಿತೆಯ ರಕ್ಷಣೆಗಾಗಿ ಹೋರಾಟಗಳನ್ನು ಹಮ್ಮಿಕೊಳ್ಳುತ್ತಿವೆ. ಇತರ ಭಾಷೆಗಳಲ್ಲಿ ತಲೆ ಎತ್ತುತ್ತಿರುವ ಇಂತಹ ಅಸ್ಮಿತೆಯ ಹೋರಾಟವನ್ನು ಕನ್ನಡ ವಿರೋಧಿ ನೆಲೆಯಲ್ಲಿ ಪರಿಭಾವಿಸುವ ಚಿಂತನೆಗಳು ಕಾಣತೊಡಗಿರುವುದರ ಕುರಿತು ಹೀಗೆ ಭಾವಿಸಲು ಕಾರಣಗಳಿಲ್ಲ ಎನ್ನುವುದರ ಜೊತೆಗೆ ಕನ್ನಡಕ್ಕೆ ಅವುಗಳೊಡನೆ ಯಜಮಾನ್ಯದ ಸಂಬಂಧವನ್ನು ಕಲ್ಪಿಸುವುದು ಸೂಕ್ತವಾಗದು ಎಂದೂ ಎಚ್ಚರಿಸುತ್ತಾರೆ.

೬.೩.೭ ಚಳುವಳಿಗಳ ಆಳದ ಉದ್ದೇಶಗಳ ಬಗ್ಗೆ ಸಕಾರಣ ಗುಮಾನಿಗಳು

ಗೋಕಾಕ್ ಚಳುವಳಿ ಕನ್ನಡ ಭಾಷೆಯ ಉಳಿವಿಗೆ ನಡೆದ ಚಳುವಳಿಯಾದರೂ ಅದು ಕನ್ನಡ ಸಮಾಜದ ಒಳಗಿನ ತರತಮದ ನೆಲೆಗಳನ್ನು ಜಾಹೀರುಗೊಳಿಸಿತು. ಕನ್ನಡದ ಮುಸುಕಿನಲ್ಲಿ ಸಂಸ್ಕೃತದ ಪರವಾದ ನಿಲುವನ್ನೂ ಉರ್ದು ವಿರೋಧವಾಗಿ ಮತೀಯ ನಿಲುವನ್ನೂ ಅದು ಜಾಹೀರುಗೊಳಿಸಿತು. ಅನಂತಮೂರ್ತಿ ಅವರು ಈ ಹಿನ್ನೆಲೆಯಲ್ಲಿ ಗೋಕಾಕ್ ವರದಿಯನ್ನು ವಿಮರ್ಶಿಸಿ ಟೀಕಿಸಿದ್ದು ಗಮನಾರ್ಹ. ಗೋಕಾಕ್ ವರದಿಗೆ ವ್ಯಕ್ತವಾದ ಪ್ರತಿಕ್ರಿಯೆಗಳನ್ನು ವರ್ಗನೆಲೆಯಲ್ಲಿ ಕೆ.ವಿ ನಾರಾಯಣ ಅವರು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾರೆ. ಕನ್ನಡ ಭಾಷೆಯ ಹಿತಚಿಂತನೆಯ ನೇಪಥ್ಯದಲ್ಲಿ ಮೂಲಭೂತವಾದಿ ನೆಲೆ ಹೇಗೆ ತನ್ನ ಹಿತಸಾಧನೆಗಾಗಿ ಪ್ರಯತ್ನಿಸುತ್ತಿರುತ್ತದೆ ಎನ್ನುವುದು ಈ ವಿಶ್ಲೇಷಣೆಯಲ್ಲಿ ಅನಾವರಣವಾಗುತ್ತದೆ. ಎಂಟನೆಯ ತರಗತಿಯ ಆನಂತರ ವಿದ್ಯಾರ್ಥಿಗಳು ಕನ್ನಡದ ಬದಲು ಸಂಸ್ಕೃತವನ್ನು ಪ್ರಥಮ ಭಾಷೆಯನ್ನಾಗಿ ಆಯ್ಕೆ ಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದುದರಿಂದ ಕನ್ನಡಕ್ಕೆ ಸಿಗಬೇಕಾದ ಮನ್ನಣೆ ಸಿಗುತ್ತಿಲ್ಲ

ಎಂಬ ಆಕ್ಷೇಪಣೆಯ ಹಿನ್ನೆಲೆಯಲ್ಲಿ ಸಂಸ್ಕೃತವನ್ನು ಮೊದಲ ಭಾಷೆಯ ಸ್ಥಾನದಿಂದ ತೆಗೆದು ಆ ಜಾಗದಲ್ಲಿ ಈಗ ಜನ ಬಳಸುತ್ತಿರುವ ಭಾರತದ ಯಾವುದೇ ಒಂದು ಭಾಷೆ ಇರಬಹುದೆಂದು ಪರ್ಯಾಯ ಚಿಂತನೆಯೊಂದು ಮೂಡತೊಡಗಿತ್ತು. ಸಂಸ್ಕೃತದ ಸ್ಥಾನ ಪಲ್ಲಟವಾಗಿ ಆ ಜಾಗದಲ್ಲಿ ಕನ್ನಡದ ಜೊತೆಗೆ ಉರ್ದು, ತಮಿಳು, ತೆಲುಗು, ಮರಾಠಿಗಳು ಉಳಿಯುವುದು ಹಲವಾರು ಮಠಾಧಿಪತಿಗಳಿಗೆ ಸಹ್ಯವಾಗದ ವಿಷಯವಾಯಿತು. ಅಂತಿಮವಾಗಿ ಕನ್ನಡ ಪರವಾದ ಚಳುವಳಿ ಸಂಸ್ಕೃತ ಮತ್ತು ಉರ್ದುಗಳ ನಡುವಣ ಮುಖಾಮುಖಿಯಾಗಿ ರೂಪುಗೊಂಡಿತ್ತು. ಗೋಕಾಕ ಚಳವಳಿಯು ರಾಜ್ಯವ್ಯಾಪಿಯಾಗಿ ಕನ್ನಡ ಪರ ಹೋರಾಡಲು ಸಿದ್ದವಿದ್ದ ಜನರ ಸಮುದಾಯವೊಂದನ್ನು ಬೆಳಕಿಗೆ ತಂದಿತ್ತು. ಈ ಸಮುದಾಯ ತನ್ನ ಸಾಮಾಜಿಕ ರಚನೆಯಲ್ಲಿ ಅಂತಿಮವಾಗಿ ಪಾರಂಪರಿಕ ಮೌಲ್ಯಗಳ ಸಮರ್ಥನೆಗೆ ಸಿದ್ಧವಿತ್ತು. ಜೊತೆಗೆ ಸಾಮಾಜಿಕ ಅಸಹನೆಯನ್ನು ಯಾವ ಮುಜುಗರವೂ ಇಲ್ಲದೆ ವ್ಯಕ್ತಪಡಿಸಲು ಸಿದ್ಧವಿತ್ತು. ಸಂಸ್ಕೃತವನ್ನು ಸಮರ್ಥಿಸುವ ಉರ್ದುವನ್ನು ವಿರೋಧಿಸುವ ನೆಲೆಗೆ ಈ ಚಳುವಳಿಯ ಹಂತ ಬಂದು ನಿಂತಿತ್ತು. ಗೋಕಾಕ್ ಚಳುವಳಿಯ ಸಂದರ್ಭ ಮತ್ತು ನಂತರದ ಸಂದರ್ಭದಲ್ಲಾದ ಬೆಳವಣಿಗೆಗಳಿಗೆ ಕಾರಣವಾದ ಹಿನ್ನೆಲೆಯನ್ನು ಕೆ.ವಿ ನಾರಾಯಣ ಅವರು ಗಮನಕ್ಕೆ ತರುತ್ತಾರೆ. ಮೊದಲನೆಯದು ಗೋಕಾಕ್ ಚಳುವಳಿಯ ಪೂರ್ವದಲ್ಲಾದ ಬಂಡಾಯ ದಲಿತ ಚಳುವಳಿಯ ಪ್ರಭಾವ. ಎರಡನೆಯದು ಗೋಕಾಕ್ ಚಳುವಳಿ ನಂತರದಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದ ಉದ್ದೇಶ.

ಗೋಕಾಕ ಚಳುವಳಿಯನ್ನು ಸಮರ್ಥಿಸುವವರು ಕನ್ನಡ ಪರವೆಂದೂ, ಉಳಿದವರು ಕನ್ನಡ ವಿರೋಧಿಗಳೆಂದೂ ವಿಭಜನೆಗೊಂಡುದಕ್ಕೂ ಕೆಲವು ವರ್ಷಗಳ ಹಿಂದೆ ಬಂಡಾಯ ದಲಿತ ಚಳುವಳಿಗಳು ಕನ್ನಡ ಸಮಾಜವನ್ನು ಸಾಮಾಜಿಕ ನೆಲೆಯಲ್ಲಿ ಸಮಾನಂತರವಾಗಿ ವಿಭಜಿಸಿದ್ದಕ್ಕೂ ಸಂಬಂಧವಿದೆ. ಬಂಡಾಯ ದಲಿತ ಚಳುವಳಿಗಳು ಮಾಡಿದ ಸಮಾನಂತರ ವಿಭಜನೆಯಿಂದಾಗಿ ಪಟ್ಟಭದ್ರ ಹಿತಾಸಕ್ತಿಗಳಿಗೆ ತಮ್ಮ ಶೋಷಣೆಯ ಅಸ್ತ್ರಗಳು ಮೊಂಡಾಗಬಹುದು ಎಂಬ ಭಯ ಮೂಡಿ ಅದರ ಮಹತ್ವವನ್ನು ಕಡಿಮೆ ಮಾಡಲು ಗೋಕಾಕ್ ಚಳುವಳಿ ಅವಕಾಶ ಮಾಡಿಕೊಟ್ಟಿತ್ತು. ಕನ್ನಡದ ಮರೆಯಲ್ಲಿ ಸಮಾಜದ ಎಲ್ಲ ಸ್ತರಗಳ ಜನರನ್ನು ಒಂದು ನೆಲೆಗೆ ತಂದು ಪರವಿರೋಧದ ನೆಲೆಗಳನ್ನು ಸ್ಥಾಪಿಸುವುದು ಮುಖ್ಯ ಉದ್ದೇಶವಾಗಿತ್ತೆಂದು ಕೆ.ವಿ ನಾರಾಯಣ ಅವರು ವಿಶ್ಲೇಷಿಸುತ್ತಾರೆ. ಗೋಕಾಕ್ ಚಳುವಳಿ ನಡೆದ ನಂತರದಲ್ಲಿ ವಿಶ್ವಕನ್ನಡ ಸಮ್ಮೇಳನ ನಡೆದದ್ದು ಒಂದು ಯೋಜಿತ ಉದ್ದೇಶಕ್ಕಾಗಿ ಎನ್ನುವುದು ಕೆ.ವಿ. ಕೆ.ವಿ.ನಾರಾಯಣ ಅವರ ಚಿಂತನೆ. ಗೋಕಾಕ್ ಚಳುವಳಿಯ ನಂತರ ಕನ್ನಡದ ಭಾಷಿಕರ ಒಳಗಡೆಯೇ ಉಂಟಾದ ಭಿನ್ನಮತಗಳನ್ನು ಮತ್ತು ಏಳನೇ ದಶಕದ ರಾಜಕಾರಣ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳು ಕನ್ನಡಿಗ ಎಂಬ ಪರಿಕಲ್ಪನೆಯನ್ನೇ ಛಿದ್ರಗೊಳಿಸಿದ್ದು,

ಇದನ್ನು ಹತ್ತಿಕ್ಕಲು ಇಂಥಾ ಸಮ್ಮೇಳನಗಳ ಮೂಲಕ ಭಾವನಾತ್ಮಕ ಲೇಪನ ಅಗತ್ಯವಾಗಿತ್ತು ಎನ್ನುವುದು ಮುಖ್ಯ ಒಳನೋಟವಾಗಿದೆ.

ಚಳುವಳಿಗಳು ಆಳದಲ್ಲಿ ಬಚ್ಚಿಟ್ಟುಕೊಂಡಿರುವ ಉದ್ಧೇಶಗಳ ಬಗ್ಗೆ ಕೆ.ವಿ ನಾರಾಯಣ ಅವರಿಗೆ ಸಕಾರಣ ಗುಮಾನಿಗಳಿವೆ. ಸಾಮಾಜಿಕ ಅಸಹನೆಗಳು ವ್ಯಕ್ತವಾಗಲು ಪ್ರಚೋದನೆಯೊಂದು ಬೇಕು. ಅದು ದೊರಕಿದ ಕೂಡಲೇ ಈ ಅಸಹನೆ ಭುಗಿಲೇಳುತ್ತದೆ ಎಂದು ಕಾವೇರಿ ವಿವಾದ ಮತ್ತು ಬೆಂಗಳೂರು ದೂರದರ್ಶನದಲ್ಲಿ ಉರ್ದು ವಾರ್ತಾ ಪ್ರಸಾರವನ್ನು ವಿರೋಧಿಸಿ ನಡೆದ ಚಳುವಳಿಗಳನ್ನು ಉಲ್ಲೇಖಿಸುತ್ತ ಅವರು ಮಾಡುವ ವಿಶ್ಲೇಷಣೆಯಲ್ಲಿ ಇದನ್ನು ಗಮನಿಸಬಹುದು. ಕಾವೇರಿ ವಿವಾದದಲ್ಲಿ ಆರಂಭದಲ್ಲಿದ್ದ ಅದರ ಕಾರಣ, ಪರಿಹಾರ ಕಂಡುಕೊಳ್ಳುವ ಕಾಳಜಿಗಳು ನಂತರದಲ್ಲಿ ಹಿಂದೆ ಸರಿದು ತಮಿಳು ಮಾತನಾಡುವ ಜನರನ್ನು ತಮ್ಮ ಆಕ್ರಮಣಕ್ಕೆ ಗುರಿ ಮಾಡಿಕೊಂಡದ್ದರ ಕಡೆ ಅವರು ಗಮನ ಸೆಳೆಯುತ್ತಾರೆ.

ಕಾವೇರಿ ವಿವಾದದ ಕಾರಣ, ಪರಿಹಾರ ಇತ್ಯಾದಿಗಳು ಹಿಂದೆ ಸರಿದು ಚಳುವಳಿಕಾರರು ತಮಿಳು ಮಾತನಾಡುವ ಜನರನ್ನು ತಮ್ಮ ಆಕ್ರಮಣಕ್ಕೆ ಗುರಿ ಮಾಡಿಕೊಂಡರು. ಬೆಂಗಳೂರು ದೂರದರ್ಶನದಲ್ಲಿ ಉರ್ದು ಭಾಷೆಯ ವಾರ್ತಾ ಪ್ರಸಾರ ಕುರಿತ ಚಳುವಳಿ ಉರ್ದು ಭಾಷೆಗೆ ದೊರೆತ ಅವಕಾಶವನ್ನು ವಿರೋಧಿಸುವ ಭರದಲ್ಲಿ ಆ ಭಾಷೆಯನ್ನಾಡುವ ಮುಸ್ಲಿಮರನ್ನು ಗುರಿಮಾಡಿಕೊಂಡರು. ಜನಪ್ರಿಯ ಚಳುವಳಿಗಳ ಇಂತಹ ತರ್ಕಗಳು ಸ್ಪಷ್ಟವಾಗಿವೆ. ಸಾಮಾಜಿಕ ಮತ್ತು ಮತೀಯ ಅಸಹನೆಗಳು ಹೊರಬರಲು ಒಂದು ಪ್ರಚೋದಕ ಅಗತ್ಯ. ಅದು ದೊರಕಿದ ಕೂಡಲೇ ಈ ಅಸಹನೆ ಭುಗಿಲೇಳುತ್ತದೆ ಎನ್ನುವ ಕೆ.ವಿ ನಾರಾಯಣ ಅವರು ಭಾಷಿಕ ಚಳುವಳಿಗಳ ಕುರಿತು ತೆಗೆದುಕೊಳ್ಳಬೇಕಾದ ನಿಲುವುಗಳು ಎಚ್ಚರಿಕೆಯಿಂದ ಕೂಡಿರಬೇಕು ಎಂದು ಸೂಚಿಸುತ್ತಿದ್ದಾರೆ.

೬.೩.೮ ಬಿಡುಗಡೆ–ಮರುಸ್ಥಾಪನೆ–ಪರ್ಯಾಯಗಳ ಸಂಸ್ಕೃತದೊಂದಿಗಿನ ಸಂಬಂಧದ ವಿಶ್ಲೇಷಣೆ

ಕನ್ನಡ ಮತ್ತು ಸಂಸ್ಕೃತದ ಸಂಬಂಧ ಕುರಿತಂತೆ ಕೆ.ವಿ ನಾರಾಯಣ ಅವರ ಚಿಂತನೆ ಹಲವು ಒಳನೋಟಗಳನ್ನು ಹೊಂದಿದೆ. ಅಂಡಯ್ಯನ ಕಾವ್ಯಭಾಷೆಯನ್ನು ಕುರಿತು ಚರ್ಚಿಸುವಾಗ ವಿಮರ್ಶಕರು ಅಂಡಯ್ಯ ಸಂಸ್ಕೃತ ಪದಗಳ ಬದಲು ಅವುಗಳ ತದ್ಭವವನ್ನು ಬಳಸಿ ತನ್ನ ಕಾವ್ಯದ ಭಾಷೆಯ ಸೋಲಿಗೆ ಕಾರಣವಾಗಿದ್ದಾನೆ ಎನ್ನುತ್ತಾರೆ. ಆದರೆ ಅಂಡಯ್ಯನ ಈ ತಂತ್ರದ ಹಿಂದಿನ ಉಪಯುಕ್ತತೆ ಎಷ್ಟೆಂಬುದನ್ನು ನಾವು ಸರಿಯಾಗಿ ಗುರುತಿಸಿಲ್ಲ ಎನ್ನುವ ಕೆ.ವಿ ನಾರಾಯಣ ಅವರು ಸಂಸ್ಕೃತ ಪದಗಳನ್ನು ಬಳಸದಿರುವ ಮೂಲಕ ಅಂಡಯ್ಯ ಒಂದು ಮುಖ್ಯ ಆಯ್ಕೆಯನ್ನು ಮಾಡಿಕೊಂಡಿದ್ದಾನೆ. ಸಂಸ್ಕೃತದ ಮೇಲರಿಮೆಯ ಭಾವದಿಂದ ಹೊರಬರಲು ಈ ಭಾಷೆಯ ಸ್ವೀಕೃತ ರೂಪಗಳ ತದ್ಭವಗಳನ್ನು ಬಳಸುವುದು ಸರಿ ಎನ್ನುವುದು ಅವನ ನಿಲುವು. ಇದರಿಂದ ಕನ್ನಡ

ಭಾಷೆಗೆ ಅಂತರ್ಮುಖಿಯಾಗಲು ಶಕ್ತಿ ತಾನಾಗಿಯೇ ಒದಗಿ ಬರುತ್ತದೆ. ನಯಸೇನ, ಅಂಡಯ್ಯರ ಮೂಲಕ ಕನ್ನಡ ಸಂಸ್ಕೃತದ ಹಂಗಿನಿಂದ ಹೊರಬರಲು ಮಾಡಿದ ಪ್ರಯತ್ನವು, ಅದು ತನ್ನ ಕೀಳರಿಮೆಯಿಂದ ಹೊರಬರಲು ಮಾಡಿದ ಪ್ರಯತ್ನವೂ, ತನ್ನ ಶಕ್ತಿಯನ್ನು ತಾನೇ ಕಂಡುಕೊಳ್ಳಲು ಮಾಡಿದ ಪ್ರಯತ್ನವೂ ಆಗಿದೆ ಎಂದು ಕೆ.ವಿ ನಾರಾಯಣ ಅವರು ಈ ಮೂಲಕ ಸೂಚಿಸುತ್ತಿದ್ದಾರೆ ಎನಿಸುತ್ತದೆ.

ಲಾಗಾಯ್ತಿನಿಂದಲೂ ಸಂಸ್ಕೃತಕ್ಕೆ ಅಚ್ಚಗನ್ನಡ ಪರ್ಯಾಯವಾಗಿದ್ದರೆ ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಇಂಗ್ಲಿಶ್ ಪರ್ಯಾಯವಾಗಿ ಗೋಚರಿಸಿದ್ದು ಮತ್ತು ಅದಕ್ಕೆ ಪ್ರೇರಣೆಯಾಗಿರುವ ಸಂಗತಿಗಳು ಕುತೂಹಲ ಮೂಡಿಸುತ್ತವೆ. ನಯಸೇನನಿಂದ ಮುದ್ದಣನವರೆಗೂ ಕನ್ನಡವನ್ನು ಸಂಸ್ಕೃತದಿಂದ ಮುಕ್ತಗೊಳಿಸಬೇಕು ಎನ್ನುವ ಚಿಂತನೆ ದಟ್ಟವಾಗಿದ್ದು ಅದರಿಂದ ಬಿಡಿಸಿಕೊಳ್ಳುವ ಪ್ರಯತ್ನ ನಡೆದಿದ್ದರೆ ಇಪ್ಪತ್ತನೆ ಶತಮಾನದ ಉತ್ತರಾರ್ಧದಲ್ಲಿ ಸಂಸ್ಕೃತ ಭಾಷೆಯ ಮರುಸ್ಥಾಪನೆಯಾಯಿತು. ಏಕೀಕರಣದ ಆನಂತರದಲ್ಲಿ ಕನ್ನಡ ಭಾಷೆಯಲ್ಲಿ ಸೃಷ್ಟಿಯಾದ ಚಿಂತನಾ ಸಾಹಿತ್ಯ ಹೆಚ್ಚು ಸಂಸ್ಕೃತಮಯವಾದದ್ದನ್ನು ಇದಕ್ಕೆ ನಿದರ್ಶನವಾಗಿ ನೋಡಬಹುದು. ಕನ್ನಡವನ್ನು ಸಂಸ್ಕೃತದ ಚೌಕಟ್ಟಿಗೆ ಸಿಲುಕಿಸುವ ಪ್ರಯತ್ನ ಮೂಲಭೂತವಾಗಿ ಪುರೋಹಿತಶಾಹಿ ಪ್ರೇರಣೆಯನ್ನು ಪಡೆದಿತ್ತು. ಎಂಟನೇ ದಶಕದಿಂದ ಆದ ಸಾಮಾಜಿಕ ಚಿಂತನೆಗಳ ಪಲ್ಲಟದಿಂದ ಈ ಪುರೋಹಿತಶಾಹಿ ಪ್ರೇರಣೆಗಳನ್ನು ನಿರಾಕರಿಸುವ, ಪ್ರತಿಭಟಿಸುವ ಪ್ರಯತ್ನಗಳು ಮೊದಲಾದವು. ಇದರ ಹಿಂದೆ ದಲಿತ ಬಂಡಾಯ ಚಳುವಳಿಗಳ ಪ್ರಭಾವವಿದೆ. ದಲಿತ ಬಂಡಾಯ ಚಳುವಳಿಗಳ ಸಾಮಾಜಿಕ ಪ್ರಣಾಳಿಗಳು ಏನೇ ಇರಲಿ; ಭಾಷಿಕವಾಗಿ ಅವು ಸಂಸ್ಕೃತದ ಯಜಮಾನಿಕೆಯನ್ನು ಪಾವಿತ್ರ್ಯ ಪರಿವೇಶವನ್ನು ನಿರಾಕರಿಸಿದವು ಮತ್ತು ಪರ್ಯಾಯವಾಗಿ ಇಂಗ್ಲಿಶನ್ನು ಒಂದು ಹೊರದಾರಿಯನ್ನಾಗಿ ಪರಿಗಣಿಸಿದ್ದವು. ಈ ಇಂಗ್ಲಿಶ್ ಕುರಿತ ಪರಿಭಾವನೆ ಪರೋಕ್ಷವಾಗಿ ಕನ್ನಡ ಸಂಸ್ಕೃತಿಯ ಒಳಗಿದ್ದ ಯಜಮಾನಿಕತೆಯೂ ಅಘಾತ ನೀಡುವಂತಿದೆ ಎನ್ನುವುದು ಗಮನಿಸಬೇಕಾದ ಮಾತು. ಭಾಷೆಯ ಮೂಲಕ ಸಾಮಾಜಿಕ ತರತಮಗಳನ್ನು ಹೇರುವ ಯಜಮಾನ್ಯದ ನೆಲೆಗಳನ್ನು ಭಾಷೆಯ ಮೂಲಕವೇ ಎದುರಿಸುವ ಪ್ರತಿಸಂಸ್ಕೃತಿಯ ಮಾದರಿ ಇದಾಗಿದೆ ಎನ್ನುವ ಚಿಂತನೆ ಇಲ್ಲಿದೆ.

೬.೪ ದ್ರಾವಿಡನೆಲೆಯ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಕನ್ನಡ ಅಸ್ಮಿತೆ ಕುರಿತ ಬೇರೆಲ್ಲ ಚಿಂತನೆಯ ನೆಲೆಗಳಿಗಿಂತ ಕೆಲವು ಸಂಗತಿಗಳಲ್ಲಿ ದ್ರಾವಿಡ ಚಿಂತನೆಯ ನೆಲೆ ಭಿನ್ನವಾಗಿ ನಿಲ್ಲುತ್ತದೆ. ಬೇರೆಲ್ಲ ನೆಲೆಯ ಚಿಂತನೆಗಳಿಗಿಂತ ಇದು ಹೆಚ್ಚು ತನ್ನ ಚಿಂತನೆಗಳನ್ನು ಅನುಷ್ಠಾನಕ್ಕೆ ತರಲು ಕ್ರಿಯಾಶೀಲವಾಗುತ್ತದೆ. ಈ ಬಗೆಯಲ್ಲಿ ಅನುಷ್ಠಾನಗೊಳ್ಳುವ ಕ್ರಿಯೆಗಳು ಭಾಷಿಕ ವಲಯದಲ್ಲಿ ದೀರ್ಘಕಾಲೀನ ಪರಿಣಾಮಗಳಿಗೆ ಕಾರಣವಾಗುತ್ತವೆ. ಕನ್ನಡಕ್ಕೆ

'ಹೊಸ ಬರಹ' ಕಂಡುಕೊಳ್ಳುವ ಶಂಕರ ಭಟ್ಟರ ಪ್ರಯತ್ನ ಇದಕ್ಕೆ ಉತ್ತಮ ನಿದರ್ಶನ. ಸಾಮಾಜಿಕ ಕಾರಣಗಳಿಗಾಗಿ 'ಹೊಸ ಬರಹ' ಕಂಡುಕೊಳ್ಳುವ ಪ್ರಯತ್ನ ಸದುದ್ದೇಶದ್ದಾದರೂ ಹಲವಾರು ಪ್ರಭಾವಗಳ ಒತ್ತಡದಲ್ಲಿ ಮುಂದುವರಿಯುವ ಭಾಷೆಯ ಚಲನೆಯ ಗತಿಯಲ್ಲಿ 'ಹೊಸ ಬರಹ'ದ ಭವಿಷ್ಯ ಕುರಿತ ಅನುಮಾನವನ್ನು ದ್ರಾವಿಡ ನೆಲೆಯ ಇನ್ನೊಂದು ಧಾರೆಯ ಚಿಂತನೆಯೇ ವ್ಯಕ್ತಪಡಿಸುತ್ತದೆ. ಇಂತಹ ಚಿಂತನೆಗಳನ್ನು ಕೆ.ವಿ ನಾರಾಯಣ ಅವರಲ್ಲಿ ಕಾಣಬಹುದು.

ದ್ರಾವಿಡ ನೆಲೆಯ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಎಡಪಂಥೀಯ ಮತ್ತು ಸಮಾಜವಾದಿ ಸಿದ್ಧಾಂತಗಳಿಂದ ಪ್ರಭಾವಿತವಾಗಿವೆ. ಭಾಷೆಯನ್ನು ವರ್ಗ ಹಿನ್ನೆಲೆಯಲ್ಲಿ ವಿಶ್ಲೇಷಿಸಲು, ಆಡಳಿತದಲ್ಲಿ ಕನ್ನಡ ಅನುಷ್ಠಾನಗೊಳಿಸುವ ಪ್ರಕ್ರಿಯೆ ಬಿರುಸುಗೊಳ್ಳಲು ವಿಧಾನಮಂಡಲಕ್ಕೆ ಪ್ರವೇಶಿಸಿದ ಶಾಸಕರು ಹೊಂದಿದ ಲೋಹಿಯಾ ಚಿಂತನೆಗಳ ಪ್ರಭಾವವನ್ನು ಗುರುತಿಸಲು ಈ ಚಿಂತನೆಗೆ ಸಾಧ್ಯವಾಗಿರುವುದು ಈ ಕಾರಣದಿಂದಲೇ.

ಟಿಪ್ಪಣಿಗಳು

೧. ರಹಮತ್ ತರೀಕೆರೆ, ನೇತುಬಿದ್ದ ನವಿಲು, ಪು. ೧೪೮

೨. ಬರಗೂರು ರಾಮಚಂದ್ರಪ್ಪ, ಕನ್ನಡಪ್ರಜ್ಞೆ, ಪು. ೧೭೨

೩. ಶಂಕರಭಟ್ ಡಿ.ಎನ್., ಕನ್ನಡ ಬರಹವನ್ನು ಸರಿಪಡಿಸೋಣ, ಪು. ೩–೪

೪. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೧೫೫

೫. ಅದೇ, ಪು. ೧೫೨

೬. ಶಂಕರ ಭಟ್ ಡಿ.ಎನ್., ಕನ್ನಡ ನುಡಿಯ ಬಗೆಗೆ ಚಿಂತನೆ, ಪು. ೧೫೨–೩

೭. ರಹಮತ್ ತರೀಕೆರೆ, ನೇತು ಬಿದ್ದ ನವಿಲು, ಪು. ೫೩

೮. ರಾಘವೇಂದ್ರರಾವ್ ಹೆಚ್ ಎಸ್, ಕನ್ನಡ ಸಾಹಿತ್ಯ ಮತ್ತು ಭಾಷಾ ವಿಜ್ಞಾನ, (ಸಂ) ಸಂಗಮೇಶ
ಸವದತ್ತಿ ಮಠ. ಪು. ೪೫೫

೯. ಶಂಕರಭಟ್ ಡಿ.ಎನ್., ಕನ್ನಡ ನುಡಿಯ ಬಗೆಗೆ ಚಿಂತನೆ, ಪು. ೧೮೧

೧೦. ನಾರಾಯಣ. ಕೆ.ವಿ., ಕನ್ನಡ ಜಗತ್ತು ಅರ್ಧ ಶತಮಾನ, ಪು. ೩೨೮

೧೧. ಶಂಕರ ಭಟ್ ಡಿ.ಎನ್., ಕನ್ನಡ ನುಡಿಯ ಬಗೆಗೆ ಚಿಂತನೆ, ಪು. ೧೫೫

೧೨. ಅದೇ, ಪು. ೧೫೫–೬

೧೩. ಅದೇ, ಪು. ೧೫೩

೧೪. ಅದೇ, ಪು. ೧೫೪

೧೫. ರಂಗನಾಥ ಕಂಟನಕುಂಟೆ, ಜನಭಾಷೆ ಮತ್ತು ಪ್ರಭುತ್ವಭಾಷೆಗಳ ಸಂಘರ್ಷ, ಪು. ೫೬

೧೬. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೭೨

೧೭. ರಹಮತ್ ತರೀಕೆರೆ, ನೇತು ಬಿದ್ದ ನವಿಲು, ಪು. ೫

೧೮. ಬರಗೂರು ರಾಮಚಂದ್ರಪ್ಪ ,ಕನ್ನಡಾಭಿಮಾನ, ಪು. ೪೦

೧೯. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೧೧೭

೨೦. ಅದೇ, ಪು. ೧೩೦

೨೧. ರಂಗನಾಥ ಕಂಟನಕುಂಟೆ, ಜನಭಾಷೆ ಮತ್ತು ಪ್ರಭುತ್ವಭಾಷೆಗಳ ಸಂಘರ್ಷ, ಪು. ೫೭

೨೨. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೧೩೮

೨೩. ಅದೇ, ಪು. ೪೨

ಅಧ್ಯಾಯ ೭

ಕನ್ನಡ ಅಸ್ಮಿತೆ : ಸಾಮಾಜಿಕ ನೆಲೆ

೭.೧ ಪೀಠಿಕೆ

೭.೨ ಬರಗೂರು ರಾಮಚಂದ್ರಪ್ಪ ಅವರ ಚಿಂತನೆಗಳು

೭.೨.೧ ಪೀಠಿಕೆ

೭.೨.೨ ಕನ್ನಡದ ಕಾಳಜಿ ಮತ್ತು ಕೆಳವರ್ಗಗಳಿಗೆ 'ಇಂಗ್ಲಿಶ್‌ಲಾಭ' ದೊರಕಿಸುವ ನಡುವಿನ ಬಿಕ್ಕಟ್ಟು

೭.೨.೩ 'ಬುದ್ಧಿ'ಗಿಂತ 'ಬೆವರು' ಕಡೆ ಹೆಚ್ಚು ಒತ್ತು

೭.೨.೪ ಭಾಷಾ ಚಳುವಳಿ ಜನ ಚಳುವಳಿಯಾಗಬೇಕೆಂಬ ಹಂಬಲ

೭.೨.೫ ಕನ್ನಡಕ್ಕೆ ಮತೀಯ ಸೋಂಕು ತಗುಲಿಸುವ ಹುನ್ನಾರಕ್ಕೆ ಕಡುವಿರೋಧ

೭.೨.೬ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರನ್ನು ಒಂದೇ ನೆಲೆಯಲ್ಲಿ ನೋಡುವ ಸಮಸ್ಯೆ

೭.೩. ಕನ್ನಡ ಅಸ್ಮಿತೆ : ದಲಿತ ನೆಲೆ

೭.೩.೧ ಬಿಡುಗಡೆ ಮತ್ತು ಮರುಬಂಧನಕ್ಕೆ ಸಾಧನವಾದ ಇಂಗ್ಲಿಶ್

೭.೩.೨ ಇಂಗ್ಲಿಶ್ ಬಗ್ಗೆ ಕನ್ನಡದ ದಲಿತ ಚಿಂತನೆಗಳ ಎರಡು ಧಾರೆಗಳು

೭.೪. ಸಾಮಾಜಿಕ ನೆಲೆಯ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಅಧ್ಯಾಯ ೭

ಕನ್ನಡ ಅಸ್ಮಿತೆ : ಸಾಮಾಜಿಕ ನೆಲೆ

೭.೧ ಪೀಠಿಕೆ

ಪಾರಂಪರಿಕ ಭಾಷಾಧ್ಯಯನ ಮಾದರಿಗಳಲ್ಲಿ ಭಾಷೆಯನ್ನು ಸಮಾಜಮುಕ್ತ ವಿಷಯವಾಗಿಯೇ ಪರಿಗಣಿಸಲಾಗುತ್ತಿತ್ತು. ಆದರೆ ಸಾಮಾಜಿಕ ಸ್ಥಾನಮಾನಗಳನ್ನು ನಿರ್ಧರಿಸುವಲ್ಲಿ ಭಾಷೆಗಿರುವ ನಿರ್ಣಾಯಕ ಶಕ್ತಿಯನ್ನು ಕಂಡುಕೊಂಡ ನಂತರ ಸಮಾಜದೊಂದಿಗೆಯೇ ಭಾಷೆಯನ್ನು ಚರ್ಚಿಸಲು ಆರಂಭಿಸಲಾಯಿತು. ರಾಮ ಮನೋಹರ ಲೋಹಿಯಾ ಅವರು ಗುರುತಿಸುವಂತೆ ಜಾತಿ, ಭಾಷೆ, ಧರ್ಮ ಮತ್ತು ಸ್ಥಳೀಯತೆ – ಈ ನಾಲ್ಕು ಭಾರತೀಯ ಜೀವನದ ಮಹತ್ ಚಾಲಕ ಶಕ್ತಿಗಳು. ಹೊರನೋಟಕ್ಕೆ ಈ ಚಾಲಕ ಶಕ್ತಿಗಳಿಗೆ ಪ್ರತ್ಯೇಕ ಅಸ್ತಿತ್ವವಿರುವಂತೆ ಕಂಡರೂ ಇವುಗಳ ನಡುವೆ ಸರಳವಾಗಿ ವಿಶ್ಲೇಷಿಸಿ ನೋಡಲಾಗದ ಸೂಕ್ಷ್ಮ ಅಂತರ್ ಸಂಬಂಧಗಳಿವೆ. ಇವುಗಳನ್ನು ಸರಿಯಾಗಿ ಗ್ರಹಿಸದೆ ಭಾಷೆಯ ಬಗ್ಗೆ ಭಾವುಕವಾಗಿ ಮಾತನಾಡುವುದು ಯಾವ ಫಲಿತಾಂಶವನ್ನೂ ನೀಡುವುದಿಲ್ಲ. ಮೇಲ್ವರ್ಗಗಳು ಸಮಾಜದಲ್ಲಿ ತಮ್ಮ ಹಿಡಿತ ಸಾಧಿಸಲು ಕಾಲಕಾಲಕ್ಕೆ ವಿವಿಧ ಪರಿಕರಗಳನ್ನು ಬಳಸುತ್ತವೆ. ಈ ಪರಿಕರಗಳಲ್ಲಿ ಮುಖ್ಯವಾದವುಗಳು ಜಾತಿ, ಧರ್ಮ ಮತ್ತು ಭಾಷೆ. ಇವುಗಳಲ್ಲಿ ಎಲ್ಲಾ ಕಾಲದಲ್ಲಿಯೂ ಹೆಚ್ಚು ಉಪಯೋಗಕ್ಕೆ ಬಂದಿದ್ದು 'ಭಾಷೆ' ಎಂಬ ಪರಿಕರವಾಗಿದೆ.

ಸಮುದಾಯದೊಂದಿಗೆ ವ್ಯವಹರಿಸಬಲ್ಲ ಭಾಷೆಯೊಂದನ್ನು ಮನುಷ್ಯ ಸಹಜವಾಗಿ ಕಲಿಯುತ್ತಾನೆ. ಆದರೆ ಬಹುಸಂಖ್ಯಾತ ಸಮಾಜಗಳಲ್ಲಿ ಆತನ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವುದು ಆತ ಸಹಜವಾಗಿ ಕಲಿಯುವ ತನ್ನ ಸಮುದಾಯದ ಭಾಷೆಯಾಗಿರುವುದಿಲ್ಲ ಎನ್ನುವುದು ವಿಪರ್ಯಾಸಕರವಾದರೂ ವಾಸ್ತವ ಸಂಗತಿ. ತನ್ನದಲ್ಲದ, ಆದರೆ ತನ್ನ ಬದುಕಿನ ವಿವಿಧ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಅನಿವಾರ್ಯವಾಗಿ ಆತ ಬೇರೊಂದು ಭಾಷೆಯನ್ನು ಕಲಿಯಬೇಕಾಗುತ್ತದೆ. ಇದನ್ನು ಕಲಿಸುವುದು ಶಿಕ್ಷಣ. ಆದರೆ ಇಂತಹ ಶಿಕ್ಷಣವನ್ನು ನೀಡುವಾಗ ಸಮಾಜದ ವಿವಿಧ ವರ್ಗಗಳ ನಡುವೆ ತಾರತಮ್ಯ ನೀತಿ ಅನುಸರಿಸುತ್ತಾ ಬರಲಾಗಿದೆ. 'ಶೂದ್ರನಿಗೆ ಯಾರೂ ತಿಳುವಳಿಕೆ ಕೊಡಬಾರದು ಅಥವಾ ಕಾನೂನನ್ನು ವಿವರಿಸಿ ಹೇಳಬಾರದು ಎಂಬ ಆಜ್ಞೆ ಮನುಧರ್ಮಶಾಸ್ತ್ರದಲ್ಲಿದೆ, ತನ್ನ ಗ್ರಂಥದಲ್ಲಿ 'ವೇದಾಭ್ಯಾಸವು ದ್ವಿಜರಿಗೆ ಮಾತ್ರ ಸೀಮಿತವಾಗಿರಬೇಕೆಂಬ ಹಳೆಯ ಕಟ್ಟಳೆಯನ್ನು ಮನುವು ಪುನರ್ ಪ್ರತಿಪಾದಿಸುತ್ತಾನೆ' ಎಂದು ಪ್ರಾಚೀನ ಭಾರತದ ಸಾಮಾಜಿಕ ಮತ್ತು ಆರ್ಥಿಕ ಇತಿಹಾಸದ ಪ್ರಮುಖ ಲೇಖಕರಾದ ಆರ್.ಎಸ್ ಶರ್ಮಾ ಅವರು ತಮ್ಮ 'ಪ್ರಾಚೀನ ಭಾರತದಲ್ಲಿ ಶೂದ್ರರು' ಕೃತಿಯಲ್ಲಿ ಅಭಿಪ್ರಾಯಪಡುತ್ತ ಇದು ಶೂದ್ರರು ಶಿಕ್ಷಣದಿಂದ ವಂಚಿತರಾಗಲು ಪ್ರಮುಖ ಕಾರಣವಾಗಿರಬಹುದು ಎಂದು ಊಹಿಸುತ್ತಾರೆ.

ಯಾರು, ಎಂಥ ಜನವರ್ಗ ಶಿಕ್ಷಣ ಪಡೆಯಬಹುದು, ಎಂಥ ಶಿಕ್ಷಣ ಪಡೆಯಬಹುದು ಅನ್ನುವುದನ್ನೆಲ್ಲ ಸೂಕ್ಷ್ಮವಾಗಿ, ನಯವಾಗಿ ನಿರ್ಧರಿಸುತ್ತ ಶಿಕ್ಷಣ ಮತ್ತು ಧರ್ಮಗಳು ಕೂಡಾ ಗುಪ್ತವಾಗಿ ಸಮಾಜದ ಅಧಿಕಾರದ ಬಗೆಯನ್ನು ಪೋಷಿಸುತ್ತಲೇ ಇರುತ್ತವೆ.[೧] ಶಿಕ್ಷಣ ಪಡೆದವರಿಗೆ ಬೌದ್ಧಿಕಶ್ರಮದ ಕೆಲಸಗಳು, ಅಶಿಕ್ಷಿತರಿಗೆ ದೈಹಿಕಶ್ರಮದ ಕೆಲಸಗಳು ಎಂಬುದು ನಮ್ಮ ಸಮಾಜದಲ್ಲಿ ಅಲಿಖಿತ ನಿಯಮದಂತಿವೆ. '(ವೈದಿಕ)ಶಿಕ್ಷಣ ಶೂದ್ರನಿಗೆ ಸಲ್ಲದು ಎಂದಾಗ ಅವನು ದೈಹಿಕ ಶ್ರಮದಿಂದಲೇ ಬದುಕಬೇಕೆಂಬುದು ಅದರ ಸೂಚ್ಯಾರ್ಥವಾಗಿತ್ತು'[೨]

ಮಹಾಭಾರತ (ವಿಮರ್ಶಾತ್ಮಕ ಆವೃತ್ತಿ)ದಲ್ಲಿನ ಆದಿಪರ್ವ ೬೫.೪೨ ರಲ್ಲಿನ ಒಂದು ಶ್ಲೋಕ ಹೀಗೆ ಹೇಳುತ್ತದೆ..

ಧಿಗ್ಬಲಂ ಕ್ಷತ್ರಿಯ ಬಲಂ ಬ್ರಹ್ಮತೋಜೋ ಬಲಂ ।

ಬಲಾಬಲಂ ವಿನಿಶ್ಚಿತ್ಯ ತಪ ಏವ ಪರಂ ಬಲಮ್ II[೩]

'ಕ್ಷತ್ರಿಯನ ಪಶುಬಲಕ್ಕೆ ಧಿಕ್ಕಾರ, ಬ್ರಹ್ಮತೇಜಸ್ಸಿನ ಬಲವೇ ನಿಜವಾದ ಬಲ. ಈ ಬಲಾಬಲಗಳ ಬಗ್ಗೆ ಆಲೋಚನೆ ಮಾಡಿ ನೋಡಿದರೆ, ತಪಸ್ಸೇ ಶ್ರೇಷ್ಠವಾದ ಬಲ (ಎಂಬುದು ಸ್ಪಷ್ಟವಾಗುತ್ತದೆ)' ಎನ್ನುವುದು ಇದರ ಅರ್ಥ. ಅಂದರೆ ಬೌದ್ಧಿಕ ಮತ್ತು ದೈಹಿಕ ಶ್ರಮವಿಂಗಡಣೆ ನಡೆದು ಬೌದ್ಧಿಕ ಶ್ರಮವನ್ನು ಆಶ್ರಯಿಸಿರುವ ಬ್ರಾಹ್ಮಣರು ಶ್ರೇಷ್ಠರೆಂದೂ, ದೈಹಿಕಶ್ರಮವನ್ನು ಅವಲಂಬಿಸಿರುವ ಕ್ಷತ್ರಿಯರು, ಶೂದ್ರರು ಕೀಳೆಂದೂ ನಂಬಿಕೆ ಕ್ರಿಸ್ತಪೂರ್ವ ಕಾಲಘಟ್ಟದಲ್ಲಿಯೇ ಪ್ರತಿಷ್ಠಾಪಿಸಲ್ಪಟ್ಟಿತ್ತು ಎಂಬುದು ಇದರಿಂದ ತಿಳಿಯುತ್ತದೆ. ಆದರೆ ಕಾಲಗತಿಯಲ್ಲಿ ಮೇಲ್ವರ್ಗದವರಿಗೆ ಹೋಲಿಸಿದರೆ ಪ್ರಮಾಣದಲ್ಲಿ ಕಡಿಮೆಯಿದ್ದರೂ ಕೆಳವರ್ಗದವರಿಗೂ ಶಿಕ್ಷಣ ದೊರೆಯಲಾರಂಭಿಸಿತು. ಬ್ರಿಟಿಷರು ಬರುವುದಕ್ಕಿಂತ ಮೊದಲು ಶೂದ್ರರು ಅಕ್ಷರವಂಚಿತರಾಗಿದ್ದರು ಎನ್ನುವುದು ಸಮಾಜದಲ್ಲಿ ಚಾಲ್ತಿಯಲ್ಲಿರುವ ಒಂದು ತಿಳುವಳಿಕೆಯಾಗಿದ್ದು ಇದು ಪೂರ್ಣಮಟ್ಟದ ಸತ್ಯವಲ್ಲ ಎಂದು ಹೊಸ ಸಂಶೋಧನೆಗಳು ತಿಳಿಸಿವೆ.

ಗಾಂಧಿಯವರ ಚಿಂತನೆಗಳ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದ ಇತಿಹಾಸಕಾರ ಮತ್ತು ಸಂಶೋಧಕ ಧರ್ಮಪಾಲ್ (೧೯೨೨-೨೦೦೬) ಅವರು ೧೮ನೇ ಶತಮಾನದ ಭಾರತದಲ್ಲಿನ ದೇಶಿ ಶಿಕ್ಷಣದ ಕುರಿತು ಬರೆದ 'ದಿ ಬ್ಯೂಟಿಫುಲ್ ಟ್ರೀ' ಕೃತಿಯಲ್ಲಿ ಉಲ್ಲೇಖಿಸುವ ೧೮೨೬ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಸರ್ಕಾರಕ್ಕೆ ಬ್ರಿಟಿಶ್ ಕಲೆಕ್ಟರುಗಳು ಸಲ್ಲಿಸಿದ ಲಿಖಿತ ವರದಿಗಳಲ್ಲಿ ಇದನ್ನು ಗಮನಿಸಬಹುದಾಗಿದೆ. ಈ ವರದಿಯಾನುಸಾರ ಬಳ್ಳಾರಿ ಜಿಲ್ಲೆಯೊಂದನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡರೆ ಅಲ್ಲಿ ೫೧೦ ಶಾಲೆಗಳಿದ್ದು ಒಟ್ಟು ೬,೫೮೧ ವಿದ್ಯಾರ್ಥಿಗಳಿದ್ದರು. ಇವರಲ್ಲಿ ೧,೧೮೫ ವಿದ್ಯಾರ್ಥಿಗಳು ಮಾತ್ರ ಬ್ರಾಹ್ಮಣಜಾತಿಗೆ ಸೇರಿದವರಾಗಿದ್ದು ಇವರಿಗಿಂತ ಸುಮಾರು ಎರಡೂವರೆ ಪಟ್ಟು ಅಂದರೆ ೨,೯೪೮ ವಿದ್ಯಾರ್ಥಿಗಳು

ಶೂದ್ರವರ್ಗದವರಾಗಿದ್ದರು. ೯೮೧ ವಿದ್ಯಾರ್ಥಿಗಳು ವೈಶ್ಯರಾಗಿದ್ದು ೨೪೩ ವಿದ್ಯಾರ್ಥಿಗಳು ಮುಸ್ಲಿಮರಾಗಿದ್ದರು. ೧,೧೭೪ ವಿದ್ಯಾರ್ಥಿಗಳು ಇತರ ಸಮುದಾಯಗಳಿಂದ ಬಂದವರಾಗಿದ್ದರು.[೪]

'ದೆಹಲಿಯ ಕಬ್ಬಿಣದ ಸ್ತೂಪ ನೋಡಿದಾಗ ಆಶ್ಚರ್ಯವಾಗುತ್ತದೆ. ನೂರಾರು ವರ್ಷಗಳಿಂದ ತುಕ್ಕು ಹಿಡಿಯದೇ ಮೂಲ ಸ್ವರೂಪದಲ್ಲಿಯೇ ಉಳಿದುಕೊಂಡ ಅಂಥ ಕಬ್ಬಿಣವೊಂದು ಸೃಷ್ಟಿಯಾಗಲು ಲೋಹಶಾಸ್ತ್ರ, ಅದಕ್ಕನುಗುಣವಾದ ಗಣಿತಶಾಸ್ತ್ರ, ಪೂರಕವಾದ ಭೂಗರ್ಭ ವಿಜ್ಞಾನ ಎಲ್ಲವೂ ಅತ್ಯಾವಶ್ಯಕ. ಅವೆಲ್ಲವೂ ಇಲ್ಲಿದ್ದವು. ಆದರೆ, ನಾವು 'ಇವ್ಯಾವುದೂ ನಮ್ಮಲ್ಲಿರಲಿಲ್ಲ. ಅವನ್ನು ಪರಿಚಯಿಸಿ ಅವುಗಳ ಬಗ್ಗೆ ಹೇಳಿಕೊಡುವ ಶಿಕ್ಷಣ ಪದ್ಧತಿಯೂ ನಮ್ಮಲ್ಲಿ ಇರಲಿಲ್ಲ. ಎಲ್ಲವೂ ಕೂಡ ಪಶ್ಚಿಮದಿಂದಲೇ ಬಂದಂಥ ಸರಕು' ಎಂಬ ಕುರುಡು ನಂಬಿಕೆಗೆ ಪಕ್ಕಾಗಿದ್ದೇವೆ. ತಂತ್ರಜ್ಞಾನವು ಪಶ್ಚಿಮದ ಬಳುವಳಿ ಎಂದು ನಂಬುದ ಸ್ಥಿತಿ ಸೃಷ್ಟಿಸಿದ್ದು ವಸಾಹತುಶಾಹಿ ಮತ್ತು ಜಾಗತೀಕರಣದ ಪರಿಣಾಮ' ಎಂದು ನಮ್ಮಲ್ಲಿದ್ದಿರಬಹುದಾದ ದೇಶಿ ಶಿಕ್ಷಣ ಪದ್ಧತಿಯ ಬಗ್ಗೆ ತಮ್ಮ 'ಅಸಮಗ್ರ' ಕೃತಿಯಲ್ಲಿ ರಾಜೇಂದ್ರ ಚೆನ್ನಿ ಅವರು ಅಭಿಪ್ರಾಯ ಪಡುತ್ತಾರೆ. ಇತಿಹಾಸತಜ್ಞೆ ರೋಮಿಲಾ ಥಾಪರ್ ಕೂಡ ದೇಶಿ ಶಿಕ್ಷಣದ ಬಗ್ಗೆ ಬೆಳಕು ಚೆಲ್ಲಿರುವುದರ ಕಡೆ ನಮ್ಮ ಗಮನ ಸೆಳೆಯುತ್ತಾರೆ.

ದೇಶಿ ಶಿಕ್ಷಣ ಪದ್ಧತಿ ನಮ್ಮಲ್ಲಿತ್ತು ಎಂದು ಒಪ್ಪಿಕೊಂಡರೂ ಅದರ ಸ್ವರೂಪದ ಬಗ್ಗೆ ಅನುಮಾನಗಳು ಬಗೆಹರಿಯುವುದಿಲ್ಲ. ಧರ್ಮಪಾಲ್ ಅವರ ಕೃತಿಯನ್ನು ಆಧರಿಸಿಯೇ ನೋಡುವುದಾದರೆ ಅವರು ತಮ್ಮ ಕೃತಿಯಲ್ಲಿ ನೀಡುವ ಅಂಕಿ ಅಂಶಗಳು ಜಾತಿ ಕಾರಣಕ್ಕಾಗಿ ಶೂದ್ರರನ್ನು ಶಿಕ್ಷಣದಿಂದ ವಂಚಿಸಲಾಗುತ್ತಿರಲಿಲ್ಲ ಎನ್ನುವುದನ್ನೇನೊ ನಮಗೆ ಮನವರಿಕೆ ಮಾಡಿಕೊಡುತ್ತದೆ. ಆದರೆ ಇದು ನಮ್ಮಲ್ಲಿ ಜಾತಿಯ ಕ್ರೌರ್ಯ, ತರತಮಗಳು ಇರಲಿಲ್ಲ ಎಂದು ಸಾಬೀತು ಮಾಡುತ್ತಿಲ್ಲ. ಏಕೆಂದರೆ '೨೦ನೇ ಶತಮಾನದ ಮೊದಲ ಭಾಗದ ಹಳೆ ಮೈಸೂರಿನ ಅಂಕಿ-ಅಂಶ ನೋಡಿದರೆ, ಶೇಕಡಾ ೪.೧೦ ರಷ್ಟಿದ್ದ ಬ್ರಾಹ್ಮಣರು ೯೬.೧೦ ಅವಕಾಶಗಳನ್ನು ಆಕ್ರಮಿಸಿಕೊಂಡಿದ್ದರು'[೫] ಇಲ್ಲಿ ಅಸ್ಪಷ್ಟವಾಗಿ ಹೊಳೆಯುವ ಸಂಗತಿಯೆಂದರೆ ಶೂದ್ರರಿಗೆ ಶಿಕ್ಷಣವನ್ನು ಕಲಿಸಲಾಗುತ್ತಿದ್ದರೂ ಅವರಿಗೆ ಕಲಿಸುತ್ತಿದ್ದ ಶಿಕ್ಷಣದ ಸ್ವರೂಪದಲ್ಲಿಯೇ ಪಾರಂಪರಿಕ ಜಾತಿವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವ ಅಂಶಗಳಿದ್ದವು ಎನ್ನುವುದು.

ಬ್ರಿಟೀಷರು ಭಾರತಕ್ಕೆ ಬಂದ ನಂತರ ಶಿಕ್ಷಣದ ಪ್ರಸರಣವ್ಯವಸ್ಥೆ ಹೆಚ್ಚು ವೇಗ ಪಡೆಯಿತು. ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಕೆಳವರ್ಗಗಳು ಶಿಕ್ಷಣವನ್ನು ಪಡೆದು ಸಾಮಾಜಿಕವಾಗಿ ಮೇಲ್ಚಲನೆ ಹೊಂದಲು ಅವಕಾಶವಾಯಿತು. ಆದರೆ ಭಾರತದ ಕೆಳವರ್ಗಗಳನ್ನು ಉದ್ಧರಿಸುವುದೇನೂ ಬ್ರಿಟಿಷರ ಉದ್ದೇಶವಾಗಿರಲಿಲ್ಲ. ಅವರಿಗೆ ಆಡಳಿತ ನಡೆಸಲು ಅಗತ್ಯವಾಗಿದ್ದ ಸಿಬ್ಬಂದಿಯನ್ನು ತಯಾರು ಮಾಡುವುದಷ್ಟೇ ಶಾಲೆಗಳನ್ನು ತೆರೆಯುವ ಹಿಂದಿನ ಅವರ ಉದ್ದೇಶವಾಗಿತ್ತು. ಭಾರತೀಯ ವರ್ಗವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿಡುವ ನೀತಿಯನ್ನು ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ಜಾರಿಗೆ

ತಂದದ್ದೇ ಇದಕ್ಕೆ ಸಾಕ್ಷಿಯಾಗಿದೆ. ಲೋಹಿಯಾ ಅವರು ಗುರುತಿಸುವಂತೆ ಬ್ರಿಟೀಷರ ಆಡಳಿತದಲ್ಲಿ ಖಾಸಗಿ ಹಾಗೂ ಮಿಷನರಿ ಶಾಲೆಗಳಲ್ಲಿ ಬೋಧನೆಯ ಆರಂಭದಿಂದ ಇಂಗ್ಲಿಷನ್ನು ಕಲಿಸಲು ಇಲ್ಲಾ ಇಂಗ್ಲಿಷ್ ಮಾಧ್ಯಮದಲ್ಲೇ ಕಲಿಸಲು ಅನುಮತಿ ನೀಡಲಾಗುತ್ತಿತ್ತು. ಆದರೆ ಮುನಿಸಿಪಲ್ ಅಥವಾ ಸರ್ಕಾರಿ ಶಾಲೆಗಳಿಗೆ ನಿರ್ದಿಷ್ಟ ಕಟ್ಟಳೆಗಳಿದ್ದವು. ಅನುಕೂಲಸ್ಥರ ಹಾಗೂ ಅಧಿಕಾರಸ್ಥರ ಮಕ್ಕಳು ವೈಭವದ ಶಾಲೆಗಳಿಗೇ ಹೋಗುವಂತಾಗಿತ್ತು.

ಬ್ರಿಟಿಷರ ಸ್ವಹಿತಾಸಕ್ತಿಗೆ ಭಾರತದ ಮೇಲ್ವರ್ಗಗಳು ಬೆಂಬಲವಾಗಿದ್ದವು. ಏಕೆಂದರೆ ಇದರಿಂದಾಗಿ ಕೆಳವರ್ಗಗಳು ಹಿಂದಿನಂತೆ ಶಕ್ತಿಹೀನ ಸ್ಥಿತಿಯಲ್ಲಿದ್ದು ಆ ವರ್ಗದ ಮೇಲಿನ ತನ್ನ ನಿಯಂತ್ರಣವನ್ನು ಮೇಲ್ವರ್ಗಗಳು ಮುಂದುವರೆಸಬಹುದಾಗಿತ್ತು. ವಸಾಹತುಶಾಹಿ ಜತೆಗೆ , ಅದರ ಮಾಧ್ಯಮವಾದ ಇಂಗ್ಲಿಶ್ ಭಾಷೆ ಜತೆ ಹೊಂದಿಕೊಂಡ ಹಿಂದೂ ಪ್ರತಿಷ್ಠಿತ ವರ್ಗ ಬ್ರಿಟಿಶ್ ಅಧಿಕಾರ ವ್ಯವಸ್ಥೆಯಲ್ಲಿ ಸರಸರನೆ ಮೇಲಕ್ಕೆ ಹತ್ತಿತು. ಭಾರತದಲ್ಲಿ ಪ್ರತಿಷ್ಠಿತ ವರ್ಗಗಳು, ಮೇಲು ಜಾತಿಗಳು ಅಧಿಕಾರದ ಭಾಷೆಗಳನ್ನು ಯಾವಾಗಲೂ ಮೊದಲು ಕಲಿತು ಅದನ್ನು ತಮ್ಮ ಪ್ರಗತಿಗೆ ಬಳಸಿಕೊಳ್ಳುವುದು ಇತಿಹಾಸದಲ್ಲಿ ಹಳೆಯದು. ಸಂಸ್ಕೃತ ಪರ್ಷಿಯನ್ ಹೀಗೆ ಪಟ್ಟಿ ಬೆಳೆಸುತ್ತ ಹೋಗಬಹುದು'[೬]

ಸ್ವಾತಂತ್ರ್ಯಾನಂತರದಲ್ಲಿ ಎಲ್ಲ ವರ್ಗಗಳಿಗೂ ಸಮಾನ ಶಿಕ್ಷಣ ದೊರಕಬೇಕೆಂಬ ಸಂವಿಧಾನದ ಆಶಯ ನಿಧಾನಕ್ಕೆ ಸಾಕಾರಗೊಳ್ಳಲಾರಂಭಿಸಿತು. ಸಮಾಜದ ಎಲ್ಲ ಜಾತಿ-ವರ್ಗಗಳ ಮಕ್ಕಳು ಸರ್ಕಾರಿ ಶಾಲೆಯ ಒಂದೇ ಸೂರಿನಡಿ ಬೆರೆತು ಸಮಾನವಾಗಿ ಬೆಳೆಯಲಾರಂಭಿಸಿದ್ದರು. ಸಂವಿಧಾನ ಒದಗಿಸಿದ ಮೀಸಲಾತಿಯೂ ಗಮನಾರ್ಹ ಪ್ರಮಾಣದಲ್ಲಿ ಸಾಮಾಜಿಕ ಅಸಮಾನತೆಯ ನಿವಾರಣೆಯಲ್ಲಿ ಕ್ರಿಯಾಶೀಲವಾಯಿತು. ಆದರೆ ತೊಂಬತ್ತರ ದಶಕದ ನಂತರ ಜಾಗತೀಕರಣದ ನೀತಿಯಡಿಯಲ್ಲಿ ಭಾರತಕ್ಕೆ ಪ್ರವೇಶ ಪಡೆದ ನವವಸಾಹತುಶಾಹಿ ಶಕ್ತಿಗಳೊಂದಿಗೆ ಸೇರಿದ ಇಲ್ಲಿನ ಮೇಲ್ವರ್ಗವು ಕೆಳವರ್ಗದವರನ್ನು ಮತ್ತೆ ಹಿಂದಿಕ್ಕುವ ಪ್ರಯತ್ನದಲ್ಲಿ ತೊಡಗಿತು. ಈ ಪ್ರಯತ್ನದಲ್ಲಿ ಅವುಗಳಿಗೆ ಅಸ್ತ್ರವಾಗಿ ದೊರಕಿದ್ದು ಇಂಗ್ಲಿಷ್ ಭಾಷೆ. 'ಇಂಗ್ಲಿಷ್ ಭಾಷೆಯು ಭಾರತಕ್ಕೆ ಅಪಾಯ ಮಾಡುತ್ತಿರುವುದಕ್ಕೆ, ಅದು ವಿದೇಶಿ ಭಾಷೆ ಎನ್ನುವುದಕ್ಕಿಂತ ಹೆಚ್ಚಾಗಿ ಭಾರತದ ಸಂದರ್ಭದಲ್ಲಿ ಅದು ಯಜಮಾನಿಕೆಯ ಭಾಷೆಯಾಗಿರುವುದೇ ಪ್ರಮುಖ ಕಾರಣ. ಜನಸಂಖ್ಯೆಯ ಶೇಕಡಾ ಒಂದರಷ್ಟು ಮಾತ್ರ ಇರುವ ಅಲ್ಪಸಂಖ್ಯಾತ ವರ್ಗವು ಲಾಭ ಹಾಗೂ ಅಧಿಕಾರ ಗಿಟ್ಟಿಸಲು ಬೇಕಾಗುವಷ್ಟು ನೈಪುಣ್ಯವನ್ನು ಈ ಭಾಷೆಯಲ್ಲಿ ಪಡೆಯಬಲ್ಲದು. ಈ ಅಲ್ಪಸಂಖ್ಯಾತ ವರ್ಗಕ್ಕೆ ಇಂಗ್ಲಿಷ್ ಭಾಷೆಯು ಜನಸಮೂಹದ ಮೇಲೆ ಅಧಿಪತ್ಯ ನಡೆಸಲು ಹಾಗೂ ಅವರನ್ನು ಶೋಷಿಸಲು ಒಂದು ಸಾಧನವಾಗಿದೆ' ಎಂದು ಲೋಹಿಯಾ ಅವರು ಅಭಿಪ್ರಾಯಪಡುತ್ತಾರೆ. ಈ ಸಂಗತಿಗಳ ಒಟ್ಟಾರೆ

ಸಾರವೆಂದರೆ ಭಾಷೆಯೊಂದು ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವಲ್ಲಿನ ಪ್ರಮುಖ ಮಾನದಂಡವಾಗಿದ್ದು ಸಾಮಾಜಿಕ ಅಸಮಾನತೆಗೂ ಕಾರಣವಾಗಿದೆ ಎನ್ನುವುದು.

ಎಲ್ಲಾ ಭಾಷೆಗಳಿಗೂ ರಾಚನಿಕ ಸ್ವರೂಪಗಳ ವಿಶ್ಲೇಷಣೆ ಮಾಡುವ ಭಾಷಾಶಾಸ್ತ್ರೀಯ ಆಯಾಮ ಮತ್ತು ಭಾಷೆಯ ಉಳಿವು ಹಾಗೂ ಅಳಿವನ್ನು ನಿರ್ಧರಿಸುವ ಬಾಹ್ಯ ರೂಪದ ಸಾಮಾಜಿಕ, ರಾಜಕೀಯ ಆಯಾಮಗಳಿವೆ. ಇವುಗಳೊಂದಿಗೆ ಜನರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ, ಪ್ರಮುಖವಾಗಿ ಬದುಕನ್ನೇ ಪ್ರಧಾನ ಕಾಳಜಿಯನ್ನಾಗಿಸಿಕೊಂಡು ಆ ನೆಲೆಯಿಂದ ಕನ್ನಡ ಅಸ್ಮಿತೆಯನ್ನು ಗ್ರಹಿಸುವ ವಿಧಾನ ಸಾಮಾಜಿಕ ನೆಲೆಯದ್ದಾಗಿದೆ. ಭಾಷೆ ಮತ್ತು ಸಾಹಿತ್ಯಗಳು ಪ್ರತಿಷ್ಠಿತ ವರ್ಗದಿಂದ ವಿಶಾಲ ಸಮುದಾಯಗಳತ್ತ ಹರಿಯಬೇಕು ಎಂದು ಚಿಂತಿಸುವುದೇ ಸಮಾಜವಾದಿ ತುಡಿತ. ಸಮಾಜವಾದಿ ತುಡಿತದ ಈ ನೆಲೆ ಭಾಷಾ ಮೂಲಭೂತವಾದಿತನದಿಂದ ಅಂತರವನ್ನು ಕಾಪಾಡಿಕೊಳ್ಳುತ್ತದೆ. ಒಂದು ಭಾಷೆಯ ಅಸ್ಮಿತೆಯನ್ನು ಅದನ್ನು ಬಳಸುವ ಜನರ ನೆಲೆಯಿಂದ ನೋಡುವುದು ಮುಖ್ಯವೆಂಬುದು ಈ ಚಿಂತನಾಧಾರೆಯ ತಿಳುವಳಿಕೆಯಾಗಿದೆ. ಹಾಗಾಗಿ ಇದನ್ನು ಜನಕೇಂದ್ರಿತ ನೆಲೆಯಾಗಿಯೂ ಗ್ರಹಿಸಬಹುದು.

ಕನ್ನಡ ಭಾಷಾ ಅಸ್ಮಿತೆಯನ್ನು ಕುರಿತಂತೆ ಬಿ.ಎಂ.ಶ್ರೀ ಅವರ ಚಿಂತನೆಗಳಲ್ಲಿಯೇ ಸಾಮಾಜಿಕ ನೆಲೆಯ ಅಯಾಮವೂ ಇದೆ. ಕುವೆಂಪು ಅವರನ್ನೊಳಗೊಂಡಂತೆ ಬಿ.ಎಂ.ಶ್ರೀ ನಂತರದ ಅನೇಕ ಚಿಂತಕರು ಸಾಮಾಜಿಕ ನೆಲೆಯಲ್ಲಿಯೂ ಕನ್ನಡ ಭಾಷಾ ಅಸ್ಮಿತೆಯನ್ನು ಅವಲೋಕಿಸಿದ್ದಿದೆ. ಕನ್ನಡ ಭಾಷೆಯನ್ನು ಉಳಿಸಿಕೊಳ್ಳಬೇಕು, ಸದೃಢಗೊಳಿಸಬೇಕು ಎನ್ನುವ ಕಾಳಜಿ ಮೊಳಕೆಯೊಡೆದ ಇಪ್ಪತ್ತನೆಯ ಶತಮಾನದ ಆರಂಭದ ಕಾಲಘಟ್ಟದಿಂದ ಈ ಬಗೆಯಲ್ಲಿ ಚದುರಿದಂತಿದ್ದ ಸಾಮಾಜಿಕ ನೆಲೆಯಲ್ಲಿ ಭಾಷೆಯನ್ನು ನೋಡುವ ಚಿಂತನಾಕ್ರಮ ಒಂದು ಚಿಂತನಾ ಧಾರೆಯಾಗಿ ಹರಳುಗಟ್ಟಿ ವಿಸ್ತಾರವನ್ನು ಪಡೆದಿದ್ದು ಎಪ್ಪತ್ತರ ದಶಕದಲ್ಲಿ. ಈ ಸಂದರ್ಭದಲ್ಲಿ ಕರ್ನಾಟಕವನ್ನು ಪ್ರಭಾವಿಸಿದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘದ ಚಳುವಳಿಗಳು, ಬಂಡಾಯ ಸಾಹಿತ್ಯ ಸಂಘಟನೆ ಉಂಟು ಮಾಡಿದ ಜಾಗೃತಿ, ಸ್ವಾತಂತ್ರ್ಯೋತ್ತರದಲ್ಲಿ ಮೊದಲ ಬಾರಿ ಶಿಕ್ಷಣ ಪಡೆದು ಕೆಳವರ್ಗಗಳು ಪಡೆದ 'ತನ್ನತನದ ಪ್ರಜ್ಞೆ'ಗಳು ಕನ್ನಡ ಭಾಷಾ ಅಸ್ಮಿತೆಯನ್ನು ಸಾಮಾಜಿಕ ನೆಲೆಯಿಂದ ಅವಲೋಕಿಸಲು ಹೆಚ್ಚಿನ ಒತ್ತಡವನ್ನು ನಿರ್ಮಿಸಿದವು.

ಎಂಟನೇ ದಶಕದ ನಂತರ ಕನ್ನಡ ಅಸ್ಮಿತೆಯಲ್ಲಿ ಸಾಮಾಜಿಕ ನೆಲೆಯನ್ನು ಗುರುತಿಸಬಹುದು. ಈ ಹೊತ್ತಿನಲ್ಲಿ ಕನ್ನಡ ಅಸ್ಮಿತೆಯಲ್ಲಿ ಸಾಮಾಜಿಕ ನೆಲೆ ಪ್ರವೇಶಿಸಲು ಪ್ರೇರಣೆಯನ್ನೊದಗಿಸಿದ್ದು ಬಂಡಾಯ, ದಲಿತ, ಸ್ತ್ರೀವಾದಿ ಚಿಂತನೆಗಳು ಮುನ್ನೆಲೆಗೆ ಬಂದಿದ್ದು. ಇದರೊಂದಿಗೆ ದಲಿತ, ಬಂಡಾಯ, ರೈತ ಚಳವಳಿಗಳು, ಲಂಕೇಶ್ ಪತ್ರಿಕೆ ಮೂಡಿಸಿದ ವೈಚಾರಿಕ ಪ್ರಜ್ಞೆ, ಏಳನೆಯ ದಶಕದಲ್ಲಿ ಕರ್ನಾಟಕದಲ್ಲಿ ನಡೆದ ಕೆಲವು ಸಾಮಾಜಿಕ ಪರಿವರ್ತನೆಗಳ ಪರಿಣಾಮವಾಗಿ ಆವರೆಗೆ

ಸಮಾಜ ಒಪ್ಪಿದ ಸಾಂಸ್ಕೃತಿಕ ನಾಯಕತ್ವದ ಕಲ್ಪನೆ ಬದಲಾಯಿತು. ನಾಯಕರು ಒಂದು ಕಾಲದ ಸಮಾಜದ ಅಪೇಕ್ಷೆಗಳನ್ನು, ಬಯಕೆಗಳನ್ನು ಪ್ರತಿನಿಧಿಸುತ್ತಾರೆ. ಆದರೆ ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಕರ್ನಾಟಕವು ತನ್ನ ಸಾಮಾಜಿಕ ರಚನೆಯಲ್ಲಿ ಮುಚ್ಚಿಹೋಗಿದ್ದ ಬಿರುಕುಗಳನ್ನು ಹೊರತೆಗೆದು ತೋರತೊಡಗಿತ್ತು. ಹಿಂದುಳಿದ ವರ್ಗಗಳ ಮತ್ತು ದಲಿತ ಸಮುದಾಯದ ಅಸ್ಮಿತೆಯ ಪ್ರಶ್ನೆಗಳು ಮುಂದೆ ಬಂದವು ಎಂದು ಕೆ.ವಿ ನಾರಾಯಣ ಅವರು ಗುರುತಿಸುತ್ತಾರೆ.

ಇದು ಇನ್ನೂ ಹೆಚ್ಚು ಒತ್ತನ್ನು ಪಡೆದಿದ್ದು ತೊಂಬತ್ತರ ದಶಕದ ನಂತರ. ಆಗ ತಾನೇ ವಿಶ್ವ ವಾಣಿಜ್ಯ ಒಪ್ಪಂದದ ಕಾರಣಕ್ಕಾಗಿ ಆರ್ಥಿಕ ನೀತಿ ನಿಯಮಗಳು ಸಡಿಲಗೊಂಡ ಕಾರಣ ಜಾಗತೀಕರಣ ಆಕ್ರಮಣಕಾರಿಯಾಗಿ ಪ್ರವೇಶ ಪಡೆಯಿತು. ಇಂಗ್ಲಿಷನ್ನು ಹೇರುತ್ತ, ಅನಿವಾರ್ಯಗೊಳಿಸುತ್ತ, ತಮ್ಮ ಅಸ್ತಿತ್ವಕ್ಕೇ ಧಕ್ಕೆ ತರುವಂತಹ ತೀವ್ರತರವಾದ ತಲ್ಲಣಗಳನ್ನು ದೇಶಭಾಷೆಗಳಿಗೆ ಉಂಟು ಮಾಡಿತು. ಇದರೊಂದಿಗೆ ಜಾಗತೀಕರಣ ದೇಶಿಯ ಸಮಾಜದಲ್ಲಿ ಪರಂಪರಾಗತವಾಗಿದ್ದ ಸಾಮಾಜಿಕ ಅಸಮಾನತೆಗಳ ಕಂದಕವನ್ನು ವಿಸ್ತಾರಗೊಳಿಸಿತು. ಜಾಗತೀಕರಣದ ಅವಳಿ ಮುಖಗಳಾದ ಕೋಮುವಾದವೂ, ಮೂಲಭೂತವಾದವೂ ಸಮಾಜದ ವಿಘಟನೆಯಲ್ಲಿ ಆಕ್ರಮಣಕಾರಿಯಾಗಿ ಕ್ರಿಯಾಶೀಲವಾಯಿತು. ಇದು ಭಾಷೆಯನ್ನೂ ಧರ್ಮದ ಆಧಾರದ ಮೇಲೆ ಒಡೆಯಲು ವಿವಿಧ ಭಾಷಾ ಕಾಳಜಿಯ ವೇಷ ತೊಟ್ಟು ಸಮಾಜದೊಳಗೆ ಪ್ರವೇಶಿಸಿತು. ಈ ರೀತಿ ಜಾಗತೀಕರಣ ಮತ್ತು ಕೋಮುವಾದವು ಭಾಷೆಯ ಜಗತ್ತಿನಲ್ಲಿ ಉಂಟು ಮಾಡಿದ ತಲ್ಲಣಗಳು ಭಾಷೆಯೊಂದನ್ನು ಸಾಮಾಜಿಕ ನೆಲೆಯಿಂದ ನೋಡುವ ಕ್ರಮವನ್ನು ಮುನ್ನೆಲೆಗೆ ತಂದಿತು.

ಭಾರತದ ಸಂದರ್ಭದಲ್ಲಿ ಕೆಳವರ್ಗ ಮತ್ತು ಮೇಲ್ವರ್ಗ ಎನ್ನುವ ವಿಂಗಡಣೆಯನ್ನು ಗೆರೆ ಕೊರೆದಂತೆ ಮಾಡಲಾಗದು. ' 'ವರ್ಗ' ಎಂದರೆ ಸಾಮಾಜಿಕ, ಆರ್ಥಿಕ ಲಕ್ಷಣಗಳನ್ನು ಹೊಂದಿರುವ ಜನಸಮೂಹ ಎಂದು ಸ್ಥೂಲವಾಗಿ ಹೇಳಬಹುದಾದರೂ, ಸಮಾಜಶಾಸ್ತ್ರದಲ್ಲಿಯೇ 'ವರ್ಗ' ಎನ್ನುವ ಪರಿಕಲ್ಪನೆ ಚರ್ಚಾಸ್ಪದವಾಗಿದೆ. ಸಾಮಾಜಿಕ ಸಂದರ್ಭದಲ್ಲಿ ಉನ್ನತಶ್ರೇಣೀಯಲ್ಲಿರುವ ವ್ಯಕ್ತಿಯೊಬ್ಬ ಆರ್ಥಿಕಶ್ರೇಣಿಯಲ್ಲಿ ಕಡುಬಡವನಿರಬಹುದು. ಭಾರತದಂತಹ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯುಳ್ಳ ರಾಷ್ಟ್ರಗಳಲ್ಲಿ 'ವರ್ಗ' ಪರಿಕಲ್ಪನೆಯನ್ನು ವಿಭಿನ್ನ ರೀತಿಯ ಮಾನದಂಡಗಳಿಂದ ವಿವರಿಸಬೇಕಾಗುತ್ತದೆ. ಆದರೆ ಭಾಷೆಯ ಸಾಮಾಜಿಕ ಅಧ್ಯಯನದ ಉದ್ದೇಶಕ್ಕೆ 'ವರ್ಗ' ಎನ್ನುವ ಅಂಶವನ್ನು ಸಮಾಜಶಾಸ್ತ್ರೀಯ ನೆಲೆಯ ಸಂಕೀರ್ಣತೆಯೊಂದಿಗೆ ವಿವರಿಸಿಕೊಳ್ಳದೆ ಸ್ಥೂಲವಾಗಿ ಉನ್ನತವರ್ಗ ಮತ್ತು ಕೆಳವರ್ಗ ಅಥವಾ ಮಧ್ಯಮವರ್ಗ ಮತ್ತು ಕೆಳವರ್ಗ ಎಂದು ವರ್ಗೀಕರಿಸಿಕೊಂಡರೆ ಸಾಕು ಎಂದು ಸಾಮಾಜಿಕ ಭಾಷಾಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಈ ಅರ್ಥವ್ಯಾಪ್ತಿಯ ಚೌಕಟ್ಟಿನಲ್ಲಿ 'ಸಾಮಾಜಿಕ ನೆಲೆ' ಎನ್ನುವುದನ್ನು ಈ ಅಧ್ಯಯನದಲ್ಲಿ ವ್ಯಾಖ್ಯಾನಿಸಿಕೊಳ್ಳಲಾಗಿದೆ. ಈ ಎಲ್ಲಾ

ಹಿನ್ನೆಲೆಯಲ್ಲಿ ಕನ್ನಡ ವಿಚಾರ ಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯನ್ನು ಸಾಮಾಜಿಕ ನೆಲೆಯಲ್ಲಿ ಕನ್ನಡದ ಪ್ರಾತಿನಿಧಿಕ ಚಿಂತಕರು ಹೇಗೆ ಪರಿಭಾವಿಸಿದ್ದಾರೆ ಎಂಬುದನ್ನು ಅರಿಯಲು ಈ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ.

೭.೨ ಬರಗೂರು ರಾಮಚಂದ್ರಪ್ಪ ಅವರ ಚಿಂತನೆಗಳು

೭.೨.೧ ಪೀಠಿಕೆ

ಬರಗೂರು ರಾಮಚಂದ್ರಪ್ಪ (೧೯೪೭) ಅವರು ಕನ್ನಡ ಪ್ರಜ್ಞೆಯನ್ನು ಅದರ ಚಿಂತನೆ, ಅನುಷ್ಠಾನ ಮತ್ತು ಆಂದೋಲನದ ನೆಲೆಗಳಲ್ಲಿ ನಿರಂತರ ಸಾಕಾರಗೊಳಿಸುತ್ತ ಬಂದವರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಬಂಡಾಯ ಸಾಹಿತ್ಯ ಸಂಘಟನೆಯ ನೇತಾರರಾಗಿ ಅಧ್ಯಾಪನ, ಬರೆವಣಿಗೆ, ಆಡಳಿತ ನಿರ್ವಹಣೆ ಮತ್ತು ಹೋರಾಟಗಳ ಮೂಲಕ 'ಕನ್ನಡತನ'ವನ್ನು ಜೀವಂತವಾಗಿ ಉಳಿಸಿಕೊಂಡು ಬಂದವರು. ಸಿನಿಮಾದಂತಹ ಮಾಧ್ಯಮದಲ್ಲೂ ಕನ್ನಡಪರ ಮತ್ತು ಜನಪರ ಆಕೃತಿಗಳನ್ನು ರೂಪಿಸಿದವರು. ಅವರ 'ಕನ್ನಡಪ್ರಜ್ಞೆ'ಯ ಬರಹಗಳಲ್ಲಿ ಕನ್ನಡ ಭಾಷೆಯು ಶಿಕ್ಷಣ, ಆಡಳಿತ, ಉದ್ಯೋಗ, ರಂಗಭೂಮಿ, ಚಲನಚಿತ್ರದಂಥ ರಂಗಗಳಲ್ಲಿ ಬಲಿಷ್ಠ ಶಕ್ತಿಯಾಗಿ ರೂಪುಗೊಳ್ಳಬೇಕಾದ ಬಗೆಗಳನ್ನು ಚಿಂತನೆ ಮತ್ತು ಪ್ರಯೋಗಗಳ ದೃಷ್ಟಿಯಿಂದ ವಿವೇಚಿಸಿದ್ದಾರೆ. ಕನ್ನಡ ಸಂಸ್ಕೃತಿಗೆ ಸಂಬಂಧಿಸಿದಂತೆ ಅನೇಕ ಸೂಕ್ಷ್ಮ ಸಂಗತಿಗಳನ್ನು ಚರ್ಚಿಸಿದ್ದಾರೆ. ಬಿ.ಎ ವಿವೇಕ ರೈ ಅವರು ಅಭಿಪ್ರಾಯಪಡುವಂತೆ ಕನ್ನಡಪರ ಆಲೋಚನೆಗಳು ಜನಪರವಾಗಿ ಇರಬೇಕೆನ್ನುವ ಕಾಳಜಿ ಬರಗೂರು ಅವರ ಬರೆವಣಿಗೆಯಲ್ಲಿ ತುಂಬಾ ಖಚಿತವಾಗಿದೆ. 'ಸಂಸ್ಕೃತಿ'ಯನ್ನು ಜ್ಞಾನ, ಸಂಸ್ಕಾರದಂತಹ ಅಮೂರ್ತ ಬೌದ್ಧಿಕ ನೆಲೆಗಳಿಂದ ಹಾಗೂ ಮೂರ್ತರೂಪದ ಶ್ರಮದ ನೆಲೆಯಿಂದ ನಿರ್ವಚಿಸುವ ಎರಡು ಚಿಂತನಾ ಕ್ರಮಗಳಿವೆ. ಬರಗೂರು ರಾಮಚಂದ್ರಪ್ಪನವರದು ಎರಡನೆಯ ಚಿಂತನಾಕ್ರಮ. ಭಾಷೆಯನ್ನು ಕುರಿತು ಚಿಂತಿಸುವಾಗಲೂ ಅವರು ಅದನ್ನು ಜನರ ಬದುಕಿನ ನೆಲೆಯಲ್ಲಿ ಗ್ರಹಿಸುತ್ತಾರೆ. ಬರಗೂರರು ಹುಟ್ಟುಹಾಕಿದ ಉಪಸಂಸ್ಕೃತಿ ಪರಿಕಲ್ಪನೆಯ ಬೇರುಗಳು ಕೂಡ ಈ ಚಿಂತನಾಕ್ರಮದಲ್ಲಿದೆ. 'ಸಾಹಿತ್ಯ ಮತ್ತು ರಾಜಕಾರಣ', 'ಸಂಸ್ಕೃತಿ ಮತ್ತು ಸೃಜನಶೀಲತೆ', 'ಬಂಡಾಯ ಸಾಹಿತ್ಯ ಮೀಮಾಂಸೆ', 'ಸಂಸ್ಕೃತಿ–ಉಪಸಂಸ್ಕೃತಿ', 'ವರ್ತಮಾನ', 'ರಾಜಕೀಯ ಚಿಂತನೆ', 'ಪರಂಪರೆಯೊಂದಿಗೆ ಪಿಸುಮಾತು', ಬರಗೂರರ ವಿಚಾರ ಸಾಹಿತ್ಯ ಪ್ರಕಾರದ ಪ್ರಮುಖ ಕೃತಿಗಳಾಗಿವೆ. 'ಕನ್ನಡ ಪ್ರಜ್ಞೆ' ಕೃತಿಯು ಬರಗೂರರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳನ್ನು ಒಳಗೊಂಡಿದೆ.

೭.೨.೨ ಕನ್ನಡದ ಕಾಳಜಿ ಮತ್ತು ಕೆಳವರ್ಗಗಳಿಗೆ 'ಇಂಗ್ಲಿಶ್‌ಲಾಭ' ದೊರಕಿಸುವ ನಡುವಿನ ಬಿಕ್ಕಟ್ಟು

ಭಾರತದ ಸಂದರ್ಭದಲ್ಲಿ ಶಿಕ್ಷಣದ ಭಾಷೆಯ ಮಾಧ್ಯಮ ಮೊದಲಿಂದಲೂ ಇಲ್ಲಿನ ಜಾತಿ ವ್ಯವಸ್ಥೆಯಂತೆಯೇ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವ ಒಂದು ಮಾನದಂಡವಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಆದರೆ ಇದು ಢಾಳಾಗಿ ವ್ಯಕ್ತಗೊಳ್ಳತೊಡಗಿದ್ದು ಕಳೆದ ಶತಮಾನದ ತೊಂಬತ್ತರ ದಶಕದ ನಂತರ. ಜಾಗತೀಕರಣದ ನಂತರ ಬಹುರಾಷ್ಟ್ರೀಯ ಕಂಪನಿಗಳ ರೂಪದಲ್ಲಿ ಬಂದ ನವವಸಾಹತುಶಾಹಿ ಶಕ್ತಿಗಳು ತಮ್ಮ ಉದ್ದಿಮೆಗಳಲ್ಲಿ ಉದ್ಯೋಗ ಪಡೆಯಲು ಇಂಗ್ಲಿಷ್ ಕಲಿಕೆಯನ್ನು ಅನಿವಾರ್ಯಗೊಳಿಸಿದವು. ಈ ಕಾರಣಕ್ಕಾಗಿಯೇ ಇಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆದ ಖಾಸಗಿ ಶಿಕ್ಷಣ ಕ್ಷೇತ್ರ ಬೃಹತ್ ಉದ್ಯಮವಾಗಿ ಬೆಳೆಯಿತು. ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಲ್ಲಿ ಓದುವುದು ಪ್ರತಿಷ್ಠೆಯ ಸಂಕೇತ ಎನಿಸಿಕೊಳ್ಳತೊಡಗಿತು. ಇವುಗಳ ಎದುರು ಸರ್ಕಾರಿ ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಓದುವುದು ಕೀಳರಿಮೆಯ ಸಂಕೇತವಾಯಿತು.

'ತಮಗಿಂತ ಮೇಲಿರುವ ವರ್ಗದವರ ಮಾದರಿಗಳನ್ನೇ ಆದರ್ಶವೆಂದು ಭ್ರಮಿಸುವ ಸಮಾಜದಲ್ಲಿ ಆಂಗ್ಲಮಾಧ್ಯಮವು ವಿಚಿತ್ರ ವ್ಯಾಮೋಹವನ್ನು ನಿರ್ಮಾಣ ಮಾಡಿದೆ' ಎಂದು ಈ ಪರಿಸ್ಥಿತಿಯನ್ನು ವಿಷಾದದಿಂದ ಬರಗೂರು ಅವರು ಗಮನಿಸುತ್ತಾರೆ.[೭] ಹಾಗೆಂದು ಈ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವಂತೆಯೂ ಇಲ್ಲ. ಏಕೆಂದರೆ ಈ ವ್ಯವಸ್ಥೆಯಿಂದ ಬಾಧಿತರಾಗುವುದು ಕೆಳವರ್ಗದವರೇ. 'ಹಳ್ಳಿಹಳ್ಳಿಗೆ ಕಾಲಿಡುತ್ತಿರುವ ಕಾನ್ವೆಂಟುಗಳು, ಪಟ್ಟಣ–ನಗರಗಳಲ್ಲಿ ವ್ಯಾಪಿಸಿಕೊಂಡು ವಿಸ್ತಾರಗೊಳ್ಳುತ್ತಿರುವ ಇಂಗ್ಲಿಷ್ ಮಾಧ್ಯಮ ಶಾಲೆಗಳ ನಡುವೆ ಕನ್ನಡ–ಮಾತೃಭಾಷಾ ಮಾಧ್ಯಮದ ವಿದ್ಯಾರ್ಥಿಗಳು 'ಆದರ್ಶ ಶಿಕ್ಷಣ ಮಾಧ್ಯಮದ ಮಾರಿ ಬಲಿಗೆ ಕೂಡಿಸಿರುವ ಹರಕೆಯ ಕೂಸು'ಗಳಾಗುತ್ತಾರೆ.'[೮] ಎನ್ನುವ ಆತಂಕ ಅವರನ್ನು ಕಾಡುತ್ತದೆ. ಆದ್ದರಿಂದಲೇ 'ಜನರ ಮನಸ್ಸಿನಲ್ಲಿ ಮೂಡಿರುವ ಭಾವನೆಗಳನ್ನು ಸಲೀಸಾಗಿ ಸಿನಿಕತನದಿಂದ ತಳ್ಳಿಹಾಕದೆ, ಅವುಗಳನ್ನು ಗಂಭೀರವಾಗಿ ಗಮನಿಸುತ್ತಲೇ ಕನ್ನಡವನ್ನು ಗಟ್ಟಿಗೊಳಿಸುವ ಕ್ರಮ ಮತ್ತು ಉಪಕ್ರಮಗಳನ್ನು ಚಿಂತಿಸುವತ್ತ'[೯] ಬರಗೂರು ಅವರು ಮುಂದಾಗುತ್ತಾರೆ.

ಇಲ್ಲಿ ಬರಗೂರರು ಸೂಚಿಸುತ್ತಿರುವ ಕನ್ನಡವನ್ನು ಗಟ್ಟಿಗೊಳಿಸುವ ಕ್ರಮ ಮತ್ತು ಉಪಕ್ರಮಗಳಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮೂರನೇ ತರಗತಿಯಿಂದಲೇ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುವುದೂ ಸೇರಿದೆ. ಬರಗೂರರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಈ ಶಿಫಾರಸ್ಸು ಸೇರಿದೆ. (ಆದರೆ ಸರ್ಕಾರ ಬರಗೂರರ 'ಮೂರನೇ ತರಗತಿಯಿಂದಲೇ' ಎಂದಿದ್ದ ಈ ಶಿಫಾರಸ್ಸನ್ನು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುವುದು ಎಂದು

ಮಾರ್ಪಡಿಸಿತು)[೧೦] ತಮ್ಮ ಈ ಶಿಫಾರಸ್ಸಿಗೆ ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಹಲವು ಹಿರಿಯ ಲೇಖಕರು ಮತ್ತು ಹೋರಾಟಗಾರರಿಂದ ವಿರೋಧ ಬಂದಾಗ ಬರಗೂರರು ಕೆರಳುತ್ತಾರೆ. 'ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯೆಂದು ಕರೆದುಕೊಳ್ಳುವ ಕನ್ನಡ ಸಾಹಿತ್ಯ ಪರಿಷತ್ತು ಈ ನಾಡನ್ನು ಕಟ್ಟುವಲ್ಲಿ ಬೆವರಿನ ಮೌಲ್ಯವನ್ನು ಧಾರೆಯೆರೆದ ಹಿಂದುಳಿದ ವರ್ಗ, ದಲಿತವರ್ಗ ಮತ್ತು ಬಡವರ್ಗಗಳ ಆಶಯದ ಬಗ್ಗೆ ಆತ್ಮೀಯವಾಗಿ ಸಂವಾದಿಸುವ ಸ್ನೇಹ ಸೌಜನ್ಯವನ್ನು ತೋರದೇ ಇದ್ದ ಮೇಲೆ ಅದೆಂತಹ ಪ್ರಾತಿನಿಧಿಕ ಸಂಸ್ಥೆಯಾದೀತು? ದಲಿತರು, ಹಿಂದುಳಿದವರು, ಬಡವರು ಎಂದಾದರೂ ಕನ್ನಡವನ್ನು ಕೈಬಿಟ್ಟ ಉದಾಹರಣೆಯಿದೆಯೇ?' ಎಂದವರು ಪ್ರಶ್ನಿಸುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಪರ್ಯಾಯವಾಗಿ ಕಟ್ಟಲಾದ ಬಂಡಾಯ ಸಾಹಿತ್ಯ ಸಂಘಟನೆಯ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಬರಗೂರರು ಕೇಳುತ್ತಿರುವ ಪ್ರಶ್ನೆ ಸರಿಯಾಗಿದೆ. ಏಕೆಂದರೆ ಬಂಡಾಯ ಸಾಹಿತ್ಯ ಸಂಘಟನೆಯ ಹುಟ್ಟಿಗೆ ಕಾರಣವಾದ ಪ್ರಮುಖ ಅಂಶಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹಿಂದುಳಿದ ಮತ್ತು ದಲಿತ ವರ್ಗಗಳನ್ನು ನಿರ್ಲಕ್ಷಿಸುತ್ತಿದೆ ಎಂಬ ಅಸಮಾಧಾನವೂ ಮುಖ್ಯವಾಗಿತ್ತು. ಆದರೆ 'ದಲಿತರು, ಹಿಂದುಳಿದವರು, ಬಡವರು ಎಂದಾದರೂ ಕನ್ನಡವನ್ನು ಕೈಬಿಟ್ಟ ಉದಾಹರಣೆಯಿದೆಯೇ?' 'ಬೆವರಿನ ಜನರು ದೇಶಭಾಷೆಗಳಲ್ಲಿ ಬದುಕಿದವರು, ದೇಶಭಾಷೆಗಳನ್ನು ಬೆಳೆಸಿದವರು'[೧೧] ಎಂಬ ಮಾತುಗಳು ದಲಿತರನ್ನು, ಹಿಂದುಳಿದವರನ್ನು, ಬಡವರನ್ನು ಕನ್ನಡ ಭಾಷೆಗೆ ಈ ವರ್ಗದವರು ಕೊಟ್ಟ ಕೊಡುಗೆಯನ್ನು ಸ್ಮರಿಸುವ ಉದ್ದೇಶ ಹೊಂದಿವೆ. ಬಿಸಿಲಿಗೆ ಹೊಳೆಯುವ ಕಳಸವನ್ನೇ ಇತಿಹಾಸವೆಂದು ವ್ಯಾಖ್ಯಾನಿಸಿಕೊಂಡು, ಗೋಪುರ ಕಳಸಗಳನ್ನು ಹೊತ್ತು ನಿಂತಿದ್ದ ಬೋದಿಗೆ, ಕಂಬ, ಗೋಡೆ, ತಳಪಾಯಗಳನ್ನು ಲೆಖ್ಖಕ್ಕೆ ಹಿಡಿಯದ ಸಂಸ್ಕೃತಿ ಚಿಂತನೆಯ ತೊಡಕು ಕರ್ನಾಟಕ ಸಂಸ್ಕೃತಿ ಚಿಂತನೆಯ ಚಹರೆಯಾಗಿರುವುದು ಹೌದು. ಆದರೂ ಬರಗೂರರ ಕನ್ನಡ ಕಟ್ಟುವಲ್ಲಿನ ದಲಿತ, ಹಿಂದುಳಿದ, ಬಡವರ ಕೊಡುಗೆಯ ಸ್ಮರಣೆ ಚಾರಿತ್ರಿಕ ಅಗತ್ಯ ಹೊಂದಿದ್ದರೂ ಇದಕ್ಕಿರುವ ಇನ್ನಿತರ ಆಯಾಮಗಳನ್ನು ಬದಿಗೆ ಸರಿಸುವ ಅಪಾಯವಿದೆ. ಈ ಅಭಿಪ್ರಾಯ 'ಇದು ನಮ್ಮದು ಎನ್ನಿಸುವ ಸಂಸ್ಕೃತಿಯನ್ನು ಈ ತನಕ ಉಳಿಸಿಕೊಂಡು ಬಂದವರು ಹೆಬ್ಬೆಟ್ಟಿನ ಸಹಿ ಹಾಕುವ ನಮ್ಮ ಹಳ್ಳಿಯ ಜನ' ಎಂಬ ಯು.ಆರ್ ಅನಂತಮೂರ್ತಿ ಅವರ ಅಭಿಪ್ರಾಯದಂತಿದೆ.

ಮೇಲ್ವರ್ಗದವರು ಬಡವರನ್ನು, ಹಿಂದುಳಿದವರನ್ನು ಮತ್ತು ದಲಿತರನ್ನು ಶಿಕ್ಷಣದಿಂದ ವಂಚಿಸಿದ್ದು ಇತಿಹಾಸ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯನ್ನು ದಲಿತರು, ಹಿಂದುಳಿದವರು ಮತ್ತು ಬಡವರು ಅವಲಂಬಿಸಿದ್ದು ಅನಿವಾರ್ಯವಾಗಿ. ಇದು ಅವರ ಆಯ್ಕೆಯಲ್ಲ, ನಮ್ಮ ಪ್ರಭುತ್ವ ಮತ್ತು ನಮ್ಮ ಸಾಮಾಜಿಕ–ಆರ್ಥಿಕ ವ್ಯವಸ್ಥೆ ಅವರ ಮೇಲೆ ಹೇರಿದ್ದು. ಈಗ ಒಂದನೇ ತರಗತಿಯಿಂದಲೇ ಇಂಗ್ಲಿಷನ್ನು ಸರ್ಕಾರಿ ಶಾಲೆಗಳಲ್ಲಿ ಕಲಿಸಬೇಕೆನ್ನುವ ಈ ವರ್ಗಗಳ ಒತ್ತಾಯಕ್ಕೂ ಇಂಗ್ಲಿಷ್ ತಮ್ಮ

ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಎತ್ತರಿಸುತ್ತದೆ ಎಂಬ ಗ್ರಹಿಕೆಯೇ ಕಾರಣವಾಗಿದೆ. ಬರಗೂರರು ಇದನ್ನು ಅನುಮೋದಿಸುತ್ತಿರುವುದಕ್ಕೂ ಮೇಲ್ಕಂಡ ಗ್ರಹಿಕೆಯೇ ಕಾರಣವಾಗಿದೆ. ಭಾಷೆ ಕೇವಲ ಭಾವುಕ ಸಂಗತಿಯಲ್ಲ. ಭಾಷೆಯ ಆಯ್ಕೆಯೂ ಸೇರಿದಂತೆ ನಮ್ಮ ಬದುಕಿಗೆ ಅಗತ್ಯವಾದದ್ದನ್ನು ಮಾತ್ರ ಪ್ರತಿಯೊಬ್ಬರೂ ಆಯ್ದುಕೊಳ್ಳುತ್ತಾರೆ. ಈ ಸಂಗತಿಯನ್ನು, ಭಾಷೆಯನ್ನು ಸಾಮಾಜಿಕ ನೆಲೆಯಲ್ಲಿ ವಿಶ್ಲೇಷಿಸುವ ಬರಗೂರರು ಉದ್ದಕ್ಕೂ ಪ್ರತಿಪಾದಿಸುತ್ತಾ ಬಂದಿದ್ದಾರೆ. ಆದರೆ ಇಲ್ಲಿ ಬರಗೂರರು ದಲಿತರು, ಹಿಂದುಳಿದವರು ಮತ್ತು ಬಡವರ ಪರವಾಗಿ ವ್ಯಕ್ತಪಡಿಸುವ ಅಭಿಪ್ರಾಯ ಅತಿಭಾವುಕತನದ್ದು ಎನಿಸುತ್ತದೆ. ವೈರುಧ್ಯವೆಂದರೆ ಇದು ಸ್ವತಃ ಬರಗೂರರ ನಿಲುವಿಗೆ ವಿರುದ್ಧವಾದದ್ದು! 'ಕನ್ನಡ–ಮಾತೃಭಾಷಾ ಮಾಧ್ಯಮದ ವಿದ್ಯಾರ್ಥಿಗಳು 'ಆದರ್ಶ ಶಿಕ್ಷಣ ಮಾಧ್ಯಮದ ಮಾರಿ ಬಲಿಗೆ ಕೂಡಿಸಿರುವ ಹರಕೆಯ ಕೂಸು'ಗಳು[೧೨] ಎಂಬ ಬರಗೂರರ ನಿಜದ ಸಂಕಟದ ಎದುರು ಈ ಮಾತುಗಳನ್ನು ಇಟ್ಟು ನೋಡಿದಾಗ ಈ ಮಾತುಗಳ ಭಾವುಕ ನೆಲೆ ಅರ್ಥವಾಗುತ್ತದೆ.

ಇಂಗ್ಲಿಷ್ ಮಾಧ್ಯಮದ ಹಿಂದೆ ಬಿದ್ದಿರುವ ಮೇಲ್ವರ್ಗವನ್ನು ಟೀಕಿಸಿದರೂ ಅದನ್ನು ಕೆಳವರ್ಗಗಳು ಅನುಸರಿಸುವ ಅಗತ್ಯವನ್ನು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯ ಕಲಿಕೆಗೆ ಬರಗೂರರು ಒತ್ತಾಯಿಸುತ್ತಾರೆ. 'ಎಲ್ಲಿಯವರೆಗೆ ಇಂಗ್ಲಿಷನ್ನು ಪ್ರತಿಷ್ಠೆ, ಅಧಿಕಾರ ಹಾಗೂ ಹಣ ಹಿಂಬಾಲಿಸುತ್ತವೆಯೋ ಅಲ್ಲಿಯವರೆಗೆ ನಮ್ಮ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸುವುದು ಬೇಡವೆನ್ನುವುದು ಮೂರ್ಖತವಾದೀತು'[೧೩] ಎಂಬ ರಾಮಮನೋಹರ ಲೋಹಿಯಾ ಅವರ ನಿಲುವು ಬರಗೂರರದ್ದಾಗಿರಬಹುದು. ಆದರೆ 'ಮೇಲ್ವರ್ಗದ ಮಾದರಿಗಳನ್ನು ಧಿಕ್ಕರಿಸುವುದರಲ್ಲಿ ಕನ್ನಡಾಭಿಮಾನದ ಗಟ್ಟಿತನವಿದೆಯೆಂಬುದನ್ನು ಅರಿಯಬೇಕು. ಯಾಕೆಂದರೆ ಮೇಲ್ವರ್ಗದ ಮಾದರಿಗಳು ಯಾವತ್ತೂ ಸ್ಥಳೀಯ ಭಾಷೆ, ಸ್ಥಳೀಯ ಸಂಸ್ಕೃತಿಗಳ ಪರವಾಗಿ ಇರುವುದಿಲ್ಲ, ಅವರು ಆಡಳಿತ ಮತ್ತು ಶಿಕ್ಷಣದಲ್ಲಿ ಕನ್ನಡ ಮಾಧ್ಯಮಕ್ಕೆ ವಿರುದ್ಧವಾದ ವಾದ ಬಿತ್ತುತ್ತಾರೆ'[೧೪] ಎಂದು ಬರಗೂರರು ಅಭಿಪ್ರಾಯಪಡುವುದು ದ್ವಂದ್ವದಂತೆ ಕಾಣುತ್ತದೆ. ಶಿಕ್ಷಣ ಕ್ರಮದಲ್ಲಿ ಇಂಗ್ಲಿಷ್ ಭಾಷೆ ಮತ್ತು ಇಂಗ್ಲಿಷ್ ಮಾಧ್ಯಮವನ್ನು ಅಪೇಕ್ಷಿಸುವುದೇ ಮೇಲ್ವರ್ಗದ ಮಾದರಿಯಲ್ಲವೇ? 'ಮೇಲ್ವರ್ಗದ ಮಾದರಿಗಳು ಯಾವತ್ತೂ ಸ್ಥಳೀಯ ಭಾಷೆ, ಸ್ಥಳೀಯ ಸಂಸ್ಕೃತಿಗಳ ಪರವಾಗಿ ಇರುವುದಿಲ್ಲ' ಎನ್ನುವುದರಲ್ಲಿ ಸತ್ಯದ ಅಂಶಗಳಿವೆ. ಆದರೆ 'ಸ್ಥಳೀಯ ಭಾಷೆ, ಸ್ಥಳೀಯ ಸಂಸ್ಕೃತಿಗಳ'ನ್ನು ಉಳಿಸಿಕೊಂಡು ಬರುತ್ತಿರುವ 'ಬೆವರಿನ ಜನರ' ಬದುಕಿನ ಉನ್ನತಿಗೆ ಅವರ ಈ ಕೊಡುಗೆ ಹೇಗೆ ನೆರವಾಯಿತು ಎಂಬ ಪ್ರಶ್ನೆಗೆ ಉತ್ತರ ನಿರಾಶಾದಾಯಕವಾಗಿರುವುದು ವಾಸ್ತವ ಸಂಗತಿ.

ಮೇಲ್ವರ್ಗವನ್ನು ಹೀಗೆ ಏಕಮಾದರಿಯಲ್ಲಿ ಗ್ರಹಿಸಬಹುದೇ? ಕನ್ನಡವೂ ತನಗೆ ಲಾಭಕರ ಎಂದು ಅನ್ನಿಸಿದಾಗ ಮೇಲ್ವರ್ಗವೂ ಕನ್ನಡಪರ ನಿಲುವು ತೆಗೆದುಕೊಳ್ಳುವುದಿಲ್ಲವೇ? ಬ್ರಿಟಿಷರು ಆರಂಭದಲ್ಲಿ ಸ್ಥಳೀಯ ಭಾಷೆಗಳಿಗೆ ಆದ್ಯತೆ ಕೊಟ್ಟದ್ದು ಈ ಲಾಭದ ಕಾರಣಕ್ಕೆ ಅಲ್ಲವೇ? ಅಂದರೆ

ಕನ್ನಡ ಭಾಷೆ ತಮಗೆ ಅನುಕೂಲಕರ ಎಂದು ಕಂಡರೆ ಎಲ್ಲ ವರ್ಗಗಳೂ ಕನ್ನಡಭಾಷೆಯತ್ತ ಮುಖ ಮಾಡುತ್ತವೆ. ಕನ್ನಡಭಾಷೆಯನ್ನು ಹೀಗೆ ಎಲ್ಲ ವರ್ಗಗಳಿಗೂ ಲಾಭಕರ ಮಾಡುವುದರಲ್ಲಿ ಕನ್ನಡದ ಅಭಿವೃದ್ಧಿ ಅಡಗಿದೆ.

'ಈ ಭೂಮಿ ಬದುಕನ್ನು ರೂಪಿಸಿದ ಅಸಂಖ್ಯಾತ ಬೆವರ ಬಂಧುಗಳ ಆಶೋತ್ತರಗಳನ್ನು ಕಡೆಗಣಿಸಿದರೆ ಭಾಷೆ, ಬದುಕು– ಎರಡೂ ಹಸನಾಗಿರುವುದಿಲ್ಲ. ಆದ್ದರಿಂದ ನಮ್ಮ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಭಾಷಾನೀತಿಗಳು ಈ ಭೂಮಿ ಬದುಕಿನ ಬೆವರನ್ನು ಒಳಗೊಂಡ ಬೆಳಕಾಗಬೇಕು. ಇದು ಭಾಷೆಯ ಭೂಮಿತತ್ವ.'[೧೫] ಇಲ್ಲಿ ಬರಗೂರರು ಪ್ರಸ್ತಾಪಿಸುತ್ತಿರುವ 'ನಮ್ಮ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಭಾಷಾನೀತಿಗಳಲ್ಲಿ 'ಬೆವರ ಬಂಧುಗಳ' ಆಶೋತ್ತರಗಳು' ಎನ್ನುವಲ್ಲಿ ಪ್ರಮುಖವಾದದ್ದು ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲಿಶನ್ನು ಕಲಿಸುವುದಾಗಿದೆ. ಆದರೆ ಈ ಇಂಗ್ಲಿಶ್ ಈ ದುಡಿಯುವ ವರ್ಗಗಳಿಗೆ ನಿರೀಕ್ಷಿಸಿದಂತೆ ಬಯಸಿದ್ದನ್ನು ಕೊಡಬಲ್ಲದೇ ಎಂಬುದು ಪ್ರಶ್ನೆಯಾಗಿದೆ. "ಇಂಗ್ಲಿಶ್ ಕಲಿಕೆ ಮಾತ್ರದಿಂದಲೇ ಇಡೀ ಸಮಾಜದಲ್ಲಿ ಸಮಾನತೆ ನೆಲೆಯೂರುತ್ತದೆಯೆಂದು ಯಾರೂ ಭಾವಿಸಬೇಕಾಗಿಲ್ಲ. ಆದರೆ ಆಂಗ್ಲರ ಕಾಲದಲ್ಲೇ ಆರಂಭಗೊಂಡ ಶೈಕ್ಷಣಿಕ ಅಸಮಾನತೆಯು ಇಂದು ರಾಕ್ಷಸ ರೂಪ ತಾಳಿರುವುದರಿಂದ ಅದನ್ನು ಕಡಿಮೆ ಮಾಡುವ ಒಂದೊಂದು ಅಂಶವೂ ಮುಖ್ಯವಾಗುತ್ತದೆ"[೧೬] ಎಂಬುದು ಬರಗೂರರ ಪ್ರತಿಪಾದನೆ. ಅಂದರೆ ಆಳದಲ್ಲಿ ಇಂಗ್ಲಿಶ್ ಪರ ಬರಗೂರರ ಒಲವಿರುವಂತೆ ಇದನ್ನು ಗ್ರಹಿಸುವ ಸಾಧ್ಯತೆ ಇದೆ. ಕನ್ನಡದ್ರೋಹದಂತೆಯೂ ಹಲವರಿಗೆ ತೋರಬಹುದು. ಆದರೆ ಬರಗೂರರ ನಿಲುವಿನಲ್ಲಿ ಯಾವುದೇ ದ್ವಂದ್ವವಾಗಲಿ, ಕನ್ನಡದ್ರೋಹವಾಗಲಿ ಇಲ್ಲ. ಈ ಒಲವು ಇಂಗ್ಲಿಶ್ ಸಾಮಾಜಿಕ ಅಸಮಾನತೆ ನಿವಾರಿಸಬಹುದು ಎನ್ನುವ ನಂಬಿಕೆ ಹುಟ್ಟಿಸಿರುವ ಕಾರಣಕ್ಕಾಗಿ ಬಂದಿದೆ ಎನ್ನುವುದನ್ನು ಗಮನಿಸಬೇಕಾದದ್ದು. ಇಂಗ್ಲಿಶಿನ ಮೇಲಿನ ಒಲವು ಆ ಭಾಷೆ ಶ್ರೇಷ್ಠ ಎನ್ನುವ ನಂಬಿಕೆಯಿಂದ ಮೂಡಿದ್ದಲ್ಲ. ಇಂಗ್ಲಿಶನ್ನು ಹರಡುತ್ತಿರುವ ಜಾಗತೀಕರಣವನ್ನು ತಡೆಯಲಾಗದು ಎಂಬ ಅಸಹಾಯಕತೆ ಇದರ ಹಿಂದೆ ಕೆಲಸ ಮಾಡಿದೆ. 'ಕನ್ನಡಾಭಿಮಾನವೆಂದರೆ ಕೇವಲ 'ಗತವವೈಭವ'ದ ಕನವರಿಕೆಯಲ್ಲ; ಕನ್ನಡಾಭಿಮಾನವು ಸದಾ ಸಮಕಾಲೀನವಾಗುತ್ತ ಹೋಗುವ ಸಾರ್ಥಕ ಸಂವೇದನೆ'[೧೭] ಎನ್ನುವ ಅವರ ನುಡಿಗಳಲ್ಲಿ ಇದನ್ನು ಗ್ರಹಿಸಬಹುದು. ಬರಗೂರರು ಸಾಮಾಜಿಕ ಅಸಮಾನತೆಯ ನಿವಾರಣೆಯ ಹಿನ್ನೆಲೆಯಲ್ಲಿ ಇಂಗ್ಲಿಶನ್ನು ಅನುಮೋದಿಸುತ್ತಿದ್ದಾರೆ ಎನ್ನುವುದು ಸ್ಪಷ್ಟ. ಆದರೆ ಇದರಿಂದ ಸಾಮಾಜಿಕ ಅಸಮಾನತೆಯ ನಿವಾರಣೆ ಸಾಧ್ಯವೇ ಎಂಬುದು ಚರ್ಚಾರ್ಹ ಸಂಗತಿಯಾಗಿದೆ.

ಸಾಮಾಜಿಕ ನೆಲೆಯ ತಳಹದಿಯಲ್ಲಿ ರೂಪು ಪಡೆದ ಬರಗೂರರ ಕನ್ನಡ ಕುರಿತ ಚಿಂತನೆ ಇಂಗ್ಲಿಶ್ ಭಾಷೆ ಕನ್ನಡ ಪರಿಸರದಲ್ಲಿ ಉಂಟು ಮಾಡಿದ ತಲ್ಲಣಗಳಿಗೆ ಸಂವಾದಿಯಾಗಿ ಹುಟ್ಟಿದೆ.

ಒಂದು ಭಾಷೆಯಾಗಿ ಸಾವಿರಾರು ವರ್ಷಗಳಿಂದ ನಮ್ಮ ಪ್ರಜ್ಞೆಯನ್ನು ರೂಪಿಸಿದ ಕನ್ನಡವನ್ನು ಉಳಿಸಿಕೊಳ್ಳುವ ಕಾಳಜಿ ಮತ್ತು ಮೇಲ್ವರ್ಗಗಳು ಇಂಗ್ಲಿಶ್ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಮೇಲ್ಚಲನೆಗೊಳ್ಳುತ್ತಿರುವುದರ ಹಿನ್ನೆಲೆಯಲ್ಲಿ ಕೆಳವರ್ಗಗಳಿಗೂ ಅದನ್ನು ದೊರಕಿಸಬೇಕಾದ ಅನಿವಾರ್ಯತೆಯ ನಡುವೆ ಬರಗೂರರ 'ಕನ್ನಡಪ್ರಜ್ಞೆ' ಬಿಕ್ಕಟ್ಟನ್ನು ಎದುರಿಸುತ್ತಿದೆ.

೭.೨.೩ 'ಬುದ್ಧಿ'ಗಿಂತ 'ಬೆವರು' ಕಡೆ ಹೆಚ್ಚು ಒತ್ತು

ಭಾಷೆಯನ್ನು ಅನ್ನದ ವಿಷಯವಾಗಿ ಪರಿಗಣಿಸುವುದರಲ್ಲಿಯೇ ಬರಗೂರರ ಸಾಮಾಜಿಕ ಕಾಳಜಿಯನ್ನು ಗಮನಿಸಬಹುದು. 'ಕನ್ನಡ ಉಳಿಯಬೇಕಾದರೆ ಕನ್ನಡಿಗ ಉಳಿಯಬೇಕು.'[೧೮] ಎನ್ನುವಲ್ಲಿ ಬರಗೂರರ ಸಾಮಾಜಿಕ ನೆಲೆ ಸ್ಪಷ್ಟವಾಗುತ್ತದೆ.

'ಕನ್ನಡನಾಡಲ್ಲಿ ಶ್ರೀಗಂಧವೂ ಇದೆ; ಜಾಲಿಯ ಮರವೂ ಇದೆ; ಕೋಗಿಲೆಯೂ ಇದೆ, ಕಾಗೆಯೂ ಇದೆ; ಹರಿಯುವ ನದಿಗಳಿವೆ. ಬತ್ತಿದ ಕೆರೆಗಳಿವೆ. ವೈಭವೋಪೇತ ಸೌಧಗಳಿವೆ; ಸೊರಗಿದ ಗುಡಿಸಲುಗಳಿವೆ. ತುಂಬಿದ ಕಡಲು ಇದೆ; ಹಸಿದ ಒಡಲು ಇದೆ. ಹಸಿರಿನ ಕಾಡು ಇದೆ; ಒಣಗಿದ ಊರು ಇದೆ. ಕಾವೇರಿ ಕೃಷ್ಣೆಯರೂ ಇದ್ದಾರೆ; ನೀರಿಲ್ಲದ ಹಳ್ಳಗಳೂ ಇವೆ. ಬಿರುಕುಬಿಟ್ಟ ಕೆರೆಗಳೂ ಇವೆ. ಕನ್ನಡ-ಕರ್ನಾಟಕವೆಂದರೆ ಇವೆಲ್ಲವೂ ಮುಖ್ಯ.'[೧೯] ಎಂದು ಬರಗೂರರು ಪ್ರತಿಪಾದಿಸುತ್ತಾರೆ.

ಇಲ್ಲಿ ಜಾಲಿಯ ಮರ, ಕಾಗೆ, ಬತ್ತಿದ ಕೆರೆಗಳು, ಸೊರಗಿದ ಗುಡಿಸಲುಗಳು, ಹಸಿದ ಒಡಲು, ಒಣಗಿದ ಊರು, ನೀರಿಲ್ಲದ ಹಳ್ಳ, ಬಿರುಕುಬಿಟ್ಟ ಕೆರೆಗಳೂ ಮುಖ್ಯ' ಎಂದು ಒತ್ತಿ ಹೇಳುವಲ್ಲಿ ಈವರೆಗೆ ಕೆಳವರ್ಗದವರನ್ನು ಅಮುಖ್ಯವೆಂದು ಭಾವಿಸಲಾಗಿತ್ತು ಎನ್ನುವ ವಿಷಾದದ ದನಿಯೂ ಇದೆ. ಬರಗೂರರು ಕಾಣುವ ಕರ್ನಾಟಕ ಮತ್ತು ಕನ್ನಡದ ಸ್ವರೂಪ ಸಾಮಾಜಿಕ ನೆಲೆಯದ್ದೆಂದು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಭಾಷೆಯ ವಿಚಾರ ಬಂದಾಗ 'ಬುದ್ಧಿ'ಗಿಂತ 'ಬೆವರು' ಕಡೆ ಬರಗೂರರು ಹೆಚ್ಚು ಒತ್ತು ಕೊಡುತ್ತಾರೆ. 'ಸಮಾಜ ಮತ್ತು ಸಂಸ್ಕೃತಿಯನ್ನು ಆರಂಭದಿಂದ ಕಟ್ಟಿದವರು ಬೆವರಿನ ಜನರು. ಆನಂತರ ಬುದ್ಧಿ ಮತ್ತು ಬಲದ ಜನರು ಮೇಲುಗೈ ಪಡೆದು ಬೆವರನ್ನು ನಿರ್ಲಕ್ಷಿಸುತ್ತ ಬಂದರು. ಭಾಷೆಗೂ ಬೆವರಿಗೂ ಸಂಬಂಧವಿದೆ'[೨೦] ಎನ್ನುವ ಗ್ರಹಿಕೆಯ ನೆಲೆಯಲ್ಲಿ ದಲಿತರ, ಹಿಂದುಳಿದವರ ಮತ್ತು ಧಾರ್ಮಿಕ ಹಾಗು ಭಾಷಿಕ ಅಲ್ಪಸಂಖ್ಯಾತರ ಬದುಕಿನಲ್ಲಿ ಕನ್ನಡ ವರ್ತಿಸುತ್ತಿರುವ ರೀತಿಯನ್ನು ಪರೀಕ್ಷೆಗೆ ಒಡ್ಡುತ್ತಾರೆ. ಯಾರೂ ಕೂಡ ಕೇವಲ ಭಾಷೆ ಮೇಲಿನ ಅಭಿಮಾನದಿಂದಷ್ಟೇ ಅದನ್ನು ಬಳಕೆ ಮಾಡುತ್ತಿರುವುದಿಲ್ಲ. ಜನ ನಿರ್ದಿಷ್ಟ ಭಾಷೆಯಲ್ಲಿ ಮಾತನಾಡಲು ಆ ಭಾಷೆ ಬಳಕೆಯಾಗುತ್ತಿರುವ ಸಮಾಜದ ಸನ್ನಿವೇಶಗಳು, ಬೆಳವಣಿಗೆಗಳೂ ಕಾರಣವಾಗಿರುತ್ತವೆ ಎನ್ನುವ ವಾಸ್ತವಿಕ ದೃಷ್ಟಿಕೋನ ಬರಗೂರರದ್ದಾಗಿದೆ.

ಆದ್ದರಿಂದಲೇ 'ಜನರ ಮೂಲಭೂತ ಅಗತ್ಯಗಳನ್ನು ಕಡೆಗಣಿಸಿದ ಭಾಷಾಭಿಮಾನ ಯಾವತ್ತೂ ಅಂತರಂಗದ ಕಾಳಜಿಯಾಗಿ ಕಾಡುವುದಿಲ್ಲ.'[೨೧] ಎನ್ನುವ ನಿಲುವಿಗೆ ಅವರು ಬರುತ್ತಾರೆ.

೭.೨.೪ ಭಾಷಾ ಚಳುವಳಿ ಜನ ಚಳುವಳಿಯಾಗಬೇಕೆಂಬ ಹಂಬಲ

ನಾಡಿನಲ್ಲಿ ನೆಲದ ಭಾಷಾಪ್ರಜ್ಞೆಯನ್ನು ಜಾಗೃತ ಸ್ಥಿತಿಯಲ್ಲಿಡುವ, ನೆಲದ ಭಾಷೆಗೆ ಕುತ್ತು ಬಂದಾಗ ಹೋರಾಟ ರೂಪಿಸುವ ಭಾಷಾ ಚಳವಳಿಗಳನ್ನು ಬರಗೂರರು ಸಾಮಾಜಿಕ ನೆಲೆಯಿಂದಲೇ ವಿಶ್ಲೇಷಿಸುತ್ತಾರೆ. ಕರ್ನಾಟಕದಲ್ಲಿ ಭಾಷಾ ಚಳವಳಿಗಳು ಯಾಕೆ ಯಶಸ್ವಿಯಾಗಲಿಲ್ಲ ಎನ್ನುವ ಪ್ರಶ್ನೆ ಬರಗೂರರನ್ನು ಕಾಡಿದೆ. ಅದಕ್ಕೆ ಅವರು ಕರ್ನಾಟಕದ ನೆರೆಹೊರೆಯ ರಾಜ್ಯಗಳಲ್ಲಿ ನಡೆದ ಭಾಷಾ ಚಳವಳಿಗಳನ್ನು ಅವಲೋಕಿಸುತ್ತಾರೆ. 'ಕೇರಳದಲ್ಲಿ ನಡೆದ ಜನಚಳವಳಿಗಳು ತಮ್ಮ ಎಡಪಂಥೀಯ ವಿಚಾರಧಾರೆಯಲ್ಲೇ , ಭಾಷಿಕ ಸಾಂಸ್ಕೃತಿಕ ವಿಷಯಗಳನ್ನು ಸಹಜವಾಗಿ ಒಳಗೊಂಡಿದ್ದವು. ತಮಿಳುನಾಡಿನ , ದ್ರಾವಿಡ ಚಳವಳಿ ಒಂದು ಪ್ರಖರ ಸಾಮಾಜಿಕ-ಸಾಂಸ್ಕೃತಿಕ ಚಳವಳಿಯಾಗಿತ್ತು. ಈ ಎರಡೂ ರಾಜ್ಯಗಳಲ್ಲಿ ಇಂತಹ ಜನಚಳವಳಿಗಳೇ ಮುಂದೆ ಅಧಿಕಾರವನ್ನು ಹಿಡಿದವು. ಆದರೆ ಕರ್ನಾಟಕದ ಇತಿಹಾಸ ಬೇರೆ. ಇಲ್ಲಿ ಜನಚಳವಳಿಗಳು ಇದ್ದರೂ ಕೇರಳ, ತಮಿಳುನಾಡುಗಳಂತೆ ಪ್ರಖರವಾಗಿರಲಿಲ್ಲವಷ್ಟೇ ಅಲ್ಲ, ಭಾಷಿಕ-ಸಾಂಸ್ಕೃತಿಕ ಸಂಗತಿಗಳು ಈ ಚಳವಳಿಗಳ ಆಶಯಗಳಲ್ಲಿ ಅಂತರ್ಗತವಾಗಿರಲಿಲ್ಲ., ಭಾಷಾ ಚಳವಳಿಗಳು ಪ್ರಖರವಾಗಿದ್ದರೂ ಜನಚಳವಳಿಗಳ ಸಾಮಾಜಿಕ-ಆರ್ಥಿಕ ಆಶಯಗಳನ್ನು ಒಳಗೊಳ್ಳಲಿಲ್ಲ. ಎಲ್ಲಿಲ್ಲಿ ಜನಚಳವಳಿ ಮತ್ತು ಭಾಷಾ ಚಳವಳಿಗಳಲ್ಲಿ ವ್ಯತ್ಯಾಸವಿಲ್ಲವೋ ಅಲ್ಲೆಲ್ಲ ಭಾಷಾಭಿಮಾನವೆನ್ನುವುದು ಒಂದು ಸಹಜ ಕ್ರಿಯೆಯಾಗಿ ಮೂಡಿಬಂದಿದೆ' ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಇದು 'ತಮಿಳುನಾಡಿನಲ್ಲಿ ಭಾಷಾ ಚಳುವಳಿಯು ವೈದಿಕ ವಿರೋಧಿ, ಜಾತಿ ಪದ್ಧತಿ ವಿರೋಧಿ, ಆರ್ಯ ವಿರೋಧಿ ಮತ್ತು ತಮಿಳು ಸ್ವಾಭಿಮಾನದ ಚಳುವಳಿಯಾಗಿ ವಿಸ್ತರಣೆಗೊಂಡಿತು. ಆದರೆ ಕರ್ನಾಟಕದಲ್ಲಿ ಭಾಷಾ ಚಳುವಳಿಗಳು ಸಾಂಸ್ಕೃತಿಕ ರಾಜಕೀಯ ಆಂದೋಲನದ ರೂಪ ತಳೆಯಲಿಲ್ಲ. ಇದಕ್ಕೆ ಕಾರಣ, ಇವುಗಳ ನೇತೃತ್ವವನ್ನು ಬ್ರಾಹ್ಮಣರು ವಹಿಸಿದ್ದು. ಹೀಗಾಗಿ ಅವು ಕೇವಲ ಸಾಹಿತ್ಯಕ ಕ್ರಾಂತಿಯಾಗಿ ಸೀಮಿತಗೊಳ್ಳುತ್ತದೆ'[೨೨] ಎಂಬ ತೇಜಸ್ವಿ ಅವರ ವಿಶ್ಲೇಷಣೆಗಿಂತ ಹೆಚ್ಚು ತರ್ಕಬದ್ಧವಾಗಿದೆ.

'ಜನರ ಮೂಲಭೂತ ಅಗತ್ಯಗಳನ್ನು ಕಡೆಗಣಿಸಿದ ಭಾಷಾಭಿಮಾನ ಯಾವತ್ತೂ ಅಂತರಂಗದ ಕಾಳಜಿಯಾಗಿ ಕಾಡುವುದಿಲ್ಲ' ಎನ್ನುವುದು ಬರಗೂರು ಅವರ ಅಭಿಮತ. ಅಂದರೆ ಭಾಷಾ ಚಳವಳಿ ಜನರ ಮೂಲಭೂತ ಅಗತ್ಯಗಳ ಕುರಿತ ಜನಚಳವಳಿಯಾಗದೆ ಕೇವಲ ಭಾವನಾತ್ಮಕ ನೆಲೆಯಲ್ಲಿ ಭಾಷೆಯನ್ನು ಮಾತ್ರ ಕುರಿತಾಗಿದ್ದರೆ ಅದು ಎಲ್ಲ ವರ್ಗದ ಜನರ ಪ್ರಜ್ಞೆಯೊಳಗೆ ಸೇರಲು ಸಾಧ್ಯವಿಲ್ಲ ಮತ್ತು ಅದು ದೀರ್ಘಕಾಲಿಕವಾಗಿ ಜನಬೆಂಬಲವನ್ನು

ಕಾಯ್ದುಕೊಂಡಿರುವುದು ಅಸಾಧ್ಯ. ಈ ಕಾರಣದಿಂದಾಗಿಯೇ ಕನ್ನಡದಲ್ಲಿನ ಭಾಷಾಚಳವಳಿಗಳು ದೀರ್ಘಕಾಲಿಕವಾಗಿ ಜನಬೆಂಬಲವನ್ನು ಹಿಡಿದಿಟ್ಟುಕೊಳ್ಳುವಲ್ಲಿ ಸೋತಿವೆ. ಸಾಮಾಜಿಕ ನೆಲೆಯಿಂದ ಭಾಷೆಯನ್ನು ನೋಡುವುದರಿಂದ ಬರಗೂರರಿಗೆ ಈ ವಾಸ್ತವಗಳು ಅರಿವಿಗೆ ಬರಲು ಸಾಧ್ಯವಾಗಿದೆ ಎಂದು ಗ್ರಹಿಸಬಹುದು.

೭.೨.೫ ಕನ್ನಡಕ್ಕೆ ಮತೀಯ ಸೋಂಕು ತಗುಲಿಸುವ ಹುನ್ನಾರಕ್ಕೆ ಕಡುವಿರೋಧ

'ಇಲ್ಲಿ ಎಲ್ಲರೂ ಸುಖವಾಗಿದ್ದರೆ 'ಸರ್ವರೂ ಸುಖವಾಗಿರಲಿ' ಎಂಬ ಹಾರೈಕೆಯೇ ಹುಟ್ಟುತ್ತಿರಲಿಲ್ಲ; ಅಹಿಂಸೆಯ ಸಮಾಜ ನಮ್ಮದಾಗಿದ್ದರೆ ಹಿಂಸೆ ವಿರೋಧಿ ಆಶಯಗಳು ಅಭಿವ್ಯಕ್ತಗೊಳ್ಳುತ್ತಿರಲಿಲ್ಲ. ಮನುಷ್ಯರೆಲ್ಲರೂ ಒಂದೇ ಜಾತಿಯೆಂಬ ಭಾವನೆ ಎಲ್ಲರಲ್ಲೂ ಇದ್ದಿದ್ದರೆ 'ಮನುಷ್ಯ ಜಾತಿ ತಾನೊಂದೆ ವಲಂ?' (ಪಂಪ) ಎಂಬ ಮಾತು ಕೇಳಿ ಬರುತ್ತಿರಲಿಲ್ಲ.' ಎನ್ನುವಲ್ಲಿ ಕನ್ನಡ ನಾಡನ್ನು ಭಾವುಕವಾಗಿ ಯಾವ ರೀತಿ ಕೀರ್ತಿಸಿದರೂ ಕರ್ನಾಟಕದಲ್ಲಿ ಜಾತಿ ಧರ್ಮಗಳ ನಡುವಿನ ಸಂಘರ್ಷಕ್ಕೆ, ಆ ನೆಲೆಯಿಂದ ಹೊರಟ ಅಸಮಾನತೆಗೆ ಪಂಪಪೂರ್ವಕಾಲದ ಇತಿಹಾಸವಿದೆ ಎನ್ನುವ ಅರಿವಿದೆ. 'ಬೇರೆ ರಾಜ್ಯಗಳಲ್ಲಿ ಭಾಷೆಯನ್ನು ದೇವರೆಂದು ಆರಾಧಿಸುತ್ತಿಲ್ಲ. ಅಲ್ಲಿ ಯಾವ ಮತಧರ್ಮದವರಿಗೂ ಮುಜುಗರವಿಲ್ಲ. ಕರ್ನಾಟಕದಲ್ಲಿ ಕನ್ನಡವು ಹಿಂದೂ ದೇವರಾಗಿಬಿಟ್ಟಿದೆ!' ಎನ್ನುವ ಮೂಲಕ ಕನ್ನಡಪ್ರೇಮಕ್ಕೆ ಅಂಟಿದ ಮತೀಯತೆಯ ಸೋಂಕನ್ನು ಬರಗೂರರು ಗುರುತಿಸುತ್ತಾರೆ.

ಕನ್ನಡಭಾಷೆಯನ್ನು ಹಿಂದೂಧರ್ಮದೊಂದಿಗೆ ತಳುಕು ಹಾಕುವ ಪ್ರಯತ್ನ ಹಲವು ಬಗೆಯ ಅನಾಹುತಗಳನ್ನು ಮಾಡುತ್ತದೆ. ಕನ್ನಡ ಹಿಂದೂಧರ್ಮದೊಂದಿಗೆ ತಳುಕು ಹಾಕಿಕೊಳ್ಳುವುದರಿಂದ ಈ ಧರ್ಮದ ಜಾತಿವ್ಯವಸ್ಥೆಯೊಳಗೆ ಬಸವಳಿದವರಿಗೆ ಕನ್ನಡದ 'ಅಸ್ಮಿತೆ' ಬೇರೆಯಾಗಿಯೇ ಕಾಣಬಹುದು. ಮುಸ್ಲಿಮ್ ಮತ್ತು ಕ್ರಿಶ್ಚಿಯನ್ನರಿಗೆ ಕನ್ನಡ ತಮ್ಮದಲ್ಲದ ಭಾಷೆ ಎಂಬ ಪರಕೀಯ ಭಾವನೆ ಮೂಡಬಹುದು ಎಂಬ ಆತಂಕ ಬರಗೂರರದು. ಹೀಗೆ ಅಲ್ಪಸಂಖ್ಯಾತರಿಗೆ ಪರಕೀಯ ಭಾವನೆ ಮೂಡಬೇಕೆಂಬುದೇ ಮತೀಯವಾದಗಳ ನಿರಂತರ ಪ್ರಯತ್ನವಾಗಿದೆ. ಜಾತ್ಯಾತೀತ ಭಾಷೆಯಾದ ಕನ್ನಡವನ್ನು 'ಹಿಂದೂ ಧರ್ಮದ ಭಾಷೆ'ಯನ್ನಾಗಿಸುವ ವ್ಯವಸ್ಥಿತ ಹುನ್ನಾರಗಳೂ ಬರಗೂರರಿಗೆ ಗೊತ್ತಿದೆ. 'ಜಾತ್ಯತೀತ ಭಾಷೆ – ಕನ್ನಡ ಮತ್ತು ಕನ್ನಡಿಗರು ಎಂಬುದನ್ನು ಹಿಂದೂ ಧರ್ಮದ ವ್ಯಾಪ್ತಿಗೆ ಒಳಪಡಿಸುವ ಪ್ರಯತ್ನಗಳು ನಮ್ಮಲ್ಲಿ ನಡೆದಿವೆ. ಅಥವಾ ಕನ್ನಡವನ್ನು ಹಿಂದೂಗಳ ಭಾಷೆಯೆಂದು ಭಾವಿಸುವ ತಪ್ಪು ತಿಳುವಳಿಕೆಯೊಂದು ಪ್ರಚಲಿತವಾಗಿದೆ.'[೨೩] ಕನ್ನಡವನ್ನು ಹಿಂದೂ ಧರ್ಮದ ವ್ಯಾಪ್ತಿಗೊಳಪಡಿಸುವ ಪ್ರಯತ್ನ ಮತ್ತು ಹಿಂದೂಗಳು ಕನ್ನಡ ತಮ್ಮ ಭಾಷೆ

ಎಂದು ಭಾವಿಸುವುದು ಎರಡೂ ಕೂಡ ಕನ್ನಡಕ್ಕೆ ಧಕ್ಕೆಯನ್ನು ತರುತ್ತವೆ ಎಂದು ಅವರು ಎಚ್ಚರಿಸುತ್ತಾರೆ.

'ಕರ್ನಾಟಕದಲ್ಲಿ ಕನ್ನಡವು ಹಿಂದೂ ದೇವರಾಗಿಬಿಟ್ಟದೆ!' ಎಂದು ವಿಷಾದಿಸುವ ಬರಗೂರರು ಕನ್ನಡವನ್ನು ಹಿಂದೂ ದೇವರನ್ನಾಗಿಸುವ ಪ್ರಯತ್ನದಲ್ಲಿ ಜನರಿಂದ ಆಯ್ಕೆಯಾದ ಸರ್ಕಾರಗಳೇ ತೊಡಗಿರುವುದನ್ನು ಅಷ್ಟಾಗಿ ಗಮನಿಸಿದಂತೆ ಕಾಣುವುದಿಲ್ಲ. ಇಂತಹ ಪ್ರಯತ್ನಗಳಲ್ಲಿ ಸರ್ಕಾರಗಳೇ ನಡೆಸುವ ದಸರಾ ಆಚರಣೆಗಳು ಮುಖ್ಯ. ಇಲ್ಲಿಯೂ ಗಮನಿಸಬೇಕಾದ ಸಂಗತಿಯೆಂದರೆ ಕೋಮುವಾದ ಹೊರನೋಟಕ್ಕೆ ಮುಸ್ಲಿಮರು ಕ್ರಿಶ್ಚಿಯನ್ನರ ವಿರುದ್ಧ ಕೆಲಸ ಮಾಡುತ್ತದೆ ಎಂದು ತೋರಿದರೂ ಅದು ಹೇಗೆ ನಿಜವಾಗಿ ದಲಿತವಿರೋಧವಾಗಿದೆಯೋ ಹಾಗೆಯೇ ಕನ್ನಡವನ್ನು ಹಿಂದೂ ದೇವರನ್ನಾಗಿಸುವ ಪ್ರಯತ್ನದಲ್ಲಿ ಕೂಡ ದಲಿತವಿರೋಧಿ ಅಂಶಗಳಿವೆ. 'ದಸರಾ ಆಚರಣೆಯ ಉತ್ಸವಮೂರ್ತಿ ಚಾಮುಂಡೇಶ್ವರಿಯ ಕಲ್ಪನೆಯೇ ದಲಿತವಿರೋಧಿಯಾಗಿದೆ. ತಾನು ಕೂಡಿದವ ದಲಿತ ಎಂದು ಗೊತ್ತಾದಾಗ ಅವನನ್ನು ಸಂಹಾರ ಮಾಡಲು ಚಾಮುಂಡಿ ರೌದ್ರಾವತಾರ ತಾಳಿದಳು ಎಂಬ ಕಥನವಿದೆ.'[೨೪] ಆದರೆ ಈ ಬಗ್ಗೆ ಬರಗೂರರು ಚಿಂತಿಸಿದಂತಿಲ್ಲ. 'ದಸರಾ ಆಚರಣೆಯಲ್ಲಿ ಪುರಾಣ, ಚರಿತ್ರೆ ಜಾನಪದಗಳೆಲ್ಲ ಒಗ್ಗೂಡಿವೆ. ವಸಾಹತು ಪೂರ್ವ ಮತ್ತು ವಸಾಹತೋತ್ತರ ಸಾಮಾಜಿಕ, ಸಾಂಸ್ಕೃತಿಕ ರಾಜಕೀಯ, ಇತಿಹಾಸದ ಅಂಶಗಳು ಅನುಸಂಧಾನಗೊಳ್ಳುತ್ತ ರೂಪುಗೊಂಡ ಆಕೃತಿ – ಈ ದಸರಾ ಉತ್ಸವ. ಆದ್ದರಿಂದ ಯಾವುದೋ ಒಂದು ಅಂಶವನ್ನು ಅನುಲಕ್ಷಿಸಿ ದಸರಾವನ್ನು ಏಕಪಕ್ಷೀಯವಾಗಿ ನಿರಾಕರಿಸುವುದು ಅಥವಾ ವಿಕಾರವಾಗಿ ವಿಜೃಂಭಿಸುವುದು ಸರಿಯಾದ ನಿಲುವಾಗುವುದಿಲ್ಲ' ಎಂದು ಬರಗೂರರು ದಸರಾ ಆಚರಣೆಯನ್ನು ಸಮರ್ಥಿಸಿಕೊಳ್ಳುತ್ತಾರೆ.

ಬರಗೂರರು ಹೇಳುವ ದಸರಾ ಆಚರಣೆಯಲ್ಲಿ ಒಗ್ಗೂಡಿರುವ ಪುರಾಣ, ಚರಿತ್ರೆ ಜಾನಪದಗಳೆಲ್ಲ ಯಾವುವು? ಬರಗೂರರು ಇದನ್ನು ಇತ್ಯಾತ್ಮಕವಾಗಿ ಹೇಳುವಾಗ ಸಹಜವಾಗಿ ಅವು ಮೇಲ್ವರ್ಗಗಳು ಸೃಷ್ಟಿಸಿದ ಪುರಾಣ, ಚರಿತ್ರೆ ಮತ್ತು ಜಾನಪದಗಳೇ ಆಗಿವೆ ಎಂದು ಗ್ರಹಿಸಬಹುದು. 'ಭಾರತದಂಥ ಜಾತ್ಯತೀತ ಗಣರಾಜ್ಯದ ಒಂದು ಅಂಗವಾದ ಕರ್ನಾಟಕ ಹಲವು ಮತ ಧರ್ಮಗಳ ಪಂಥಗಳ ಅನುಯಾಯಿಗಳು ಬಾಳಿಬದುಕುತ್ತಿರುವ ನಾಡು. ಈ ನಾಡನ್ನು ಒಂದು ಧರ್ಮದ ಚಹರೆಗಳ ಮೂಲಕ ಗುರುತಿಸುವುದು ಪ್ರಜಾತಾಂತ್ರಿಕವಾಗಿ ಆರಿಸಿಬಂದ ಸರಕಾರಗಳು ಆ ಚಹರೆಗಳ ಸಾಮೂಹಿಕ ಆರಾಧನೆಯ ನೇತೃತ್ವ ವಹಿಸುವುದು ಇತರ ಧರ್ಮಗಳ ಸಮುದಾಯಗಳಿಗೆ ನೋವನ್ನೂ ಅನಾಥತೆಯನ್ನೂ ಉಂಟು ಮಾಡುವಂಥದ್ದು. ಸಂವಿಧಾನ ವಿರೋಧಿಯಾದದ್ದು. ಈ ಅವೈಚಾರಿಕತೆಯನ್ನು ಪ್ರತಿಭಟಿಸಿ ಜಿ.ಎಚ್.ನಾಯಕ್ ಅವರು ದಸರಾ ಹಬ್ಬದಲ್ಲಿ ಪಂಪ ಪ್ರಶಸ್ತಿಯನ್ನು ಸ್ವೀಕರಿಸುವುದನ್ನು ನಿರಾಕರಿಸಿ ಚರ್ಚೆಗೆ ಅವಕಾಶ ಕಲ್ಪಿಸಿದರು. ಪ್ರಜಾಪ್ರಭುತ್ವ ಕಾಲದಲ್ಲಿ

ಅರಸೊತ್ತಿಗೆಯನ್ನು ಪ್ರತಿಪಾದಿಸುವ ಹಾಗೂ ಜಾತ್ಯತೀತ ಗಣರಾಜ್ಯದಲ್ಲಿ ಒಂದು ಧರ್ಮದ ಚಹರೆ ಅಧಿಕಾರದ ಶಕ್ತಿ ಕೇಂದ್ರದಲ್ಲಿ ರಾರಾಜಿಸುವುದನ್ನು ಕಡೆಗಣಿಸಬಹುದೇ?'[೨೫] ಎಂಬ ಪ್ರಶ್ನೆ ಸಹಜವಾಗಿ ಉದ್ಭವವಾಗುತ್ತದೆ. ಕನ್ನಡ ಭಾಷೆಯನ್ನು ಹಿಂದುತ್ವವಾದಿಗಳು ಮತೀಯ ದೃಷ್ಟಿಕೋನದಲ್ಲಿ ಸಂಕುಚಿತಗೊಳಿಸುವ ಪ್ರಯತ್ನಗಳನ್ನು ಬರಗೂರರು ಅರಿತಿದ್ದಾರೆ. ಅದನ್ನು ಅವರು ಸ್ಪಷ್ಟವಾಗಿ ವಿರೋಧಿಸುತ್ತಾರೆ. ಆದರೆ ಬಲಪಂಥೀಯರು ಕನ್ನಡ ಭಾಷೆಗೆ ಮತೀಯತೆಯ ಸೋಂಕನ್ನು ಹಚ್ಚುವ ನಾಜೂಕು ಕ್ರಮಗಳ ಬಗ್ಗೆ ಅವರು ಯೋಚಿಸಿದಂತಿಲ್ಲ. ಇಲ್ಲವಾದರೆ ಸರ್ಕಾರಿ ಕಾರ್ಯಕ್ರಮವಾಗಿ ದಸರಾ ಆಚರಣೆಯನ್ನು 'ಯಾವುದೋ ಒಂದು ಅಂಶವನ್ನು ಅನುಲಕ್ಷಿಸಿ ದಸರಾವನ್ನು ಏಕಪಕ್ಷೀಯವಾಗಿ ನಿರಾಕರಿಸುವುದು' ತಪ್ಪಾಗುತ್ತದೆ ಎಂದು ಸಮರ್ಥಿಸುತ್ತಿರಲಿಲ್ಲ.

೭.೨.೬ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರನ್ನು ಒಂದೇ ನೆಲೆಯಲ್ಲಿ ನೋಡುವ ಸಮಸ್ಯೆ

'ಅಲ್ಪಸಂಖ್ಯಾತರೆಲ್ಲ ಕನ್ನಡ ವಿರೋಧಿಗಳಲ್ಲ. ಆದ್ದರಿಂದ ಅವರವರ ಸಂಸ್ಕೃತಿಯ ಮನೆಮಾದರಿಗಳನ್ನು ಉಳಿಸಿಕೊಂಡು ದೈನಂದಿನ ವ್ಯವಹಾರದಲ್ಲಿ ಕನ್ನಡೀಕರಣಗೊಳ್ಳುವಂಥ ಪರಿಸರದ ನಿರ್ಮಾಣ ಇಂದಿನ ಅಗತ್ಯ. ಆದರೆ ಆದದ್ದೇನು? ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರಿಗೆ ಕನ್ನಡ ಕಲಿಸುವ ಪ್ರಯತ್ನಗಳು ವ್ಯಾಪಕವಾಗಿ ನಡೆಯಲಿಲ್ಲ. ಹೀಗಾಗಿ ಅವರಲ್ಲೂ ಅಗತ್ಯ ಪ್ರಮಾಣದ ಆಸಕ್ತಿ ಮೂಡಲಿಲ್ಲ' ಎನ್ನುವ ಬರಗೂರರ ಗ್ರಹಿಕೆ ವಾಸ್ತವಕ್ಕೆ ದೂರವಾಗಿದೆ. ಕಲ್ಬುರ್ಗಿ ಸೇರಿದಂತೆ ಉತ್ತರ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಉರ್ದು ಭಾಷೆಯನ್ನು ಹಿಂದೂಗಳು ಮಾತನಾಡುತ್ತಾರೆ. ಕರ್ನಾಟಕದಲ್ಲಿ ಬೇರೆಯವರಂತೆಯೇ ಮುಸ್ಲಿಮರು ಕನ್ನಡ ಮಾತಾಡುತ್ತಾರೆ. ಕೆಲವರಷ್ಟೇ 'ಭಾಷಿಕ ವಾತಾವರಣ'ದ ಕಾರಣ ಕನ್ನಡ ಸಂಪರ್ಕಕ್ಕೆ ಬರದೆ ಉರ್ದು ಮಾತಾಡುತ್ತಾರೆ. ಇದು ಮುಸ್ಲಿಮರಿಗೆ ಸೀಮಿತವಾದ ವಿದ್ಯಮಾನವಲ್ಲ. ಕರಾವಳಿ ಕರ್ನಾಟಕದಲ್ಲಿ ತುಳು ಭಾಷೆಯನ್ನು ಮಾತನಾಡುವ, ಕಾರವಾರ ಜಿಲ್ಲೆಯಲ್ಲಿ ಕೊಂಕಣಿ ಮಾತನಾಡುವ, ಕೊಡಗಿನಲ್ಲಿ ಕೊಡವ ಮಾತನಾಡುವ ಹಿಂದೂಗಳು ಅಪಾರ ಪ್ರಮಾಣದಲ್ಲಿದ್ದಾರೆ. ಮತ್ತೂರಿನಲ್ಲಿ ಸಂಸ್ಕೃತ ಮಾತನಾಡುವುದು ಕನ್ನಡ ವಿರೋಧದಂತೆ ತೋರುವುದಿಲ್ಲ. ಆದರೆ ಉರ್ದುವಿನ ಬಗ್ಗೆ ಇರುವ ಪೂರ್ವಗ್ರಹ ನಮ್ಮನ್ನು ಮುಸ್ಲಿಮರು ಕನ್ನಡ ಮಾತನಾಡುವುದಿಲ್ಲ ಎಂಬ ಗ್ರಹಿಕೆಗೆ ದೂಡಿದೆ. 'ಅಲ್ಪಸಂಖ್ಯಾತರೆಲ್ಲ ಕನ್ನಡ ವಿರೋಧಿಗಳಲ್ಲ' ಎಂಬ ಬರಗೂರರ ಮಾತೇ ಅಲ್ಪಸಂಖ್ಯಾತರಲ್ಲಿಯೂ ಕನ್ನಡ ವಿರೋಧಿಗಳಿದ್ದಾರೆ ಎಂಬ ಧ್ವನಿಯನ್ನು ಹೊರಡಿಸುತ್ತದೆ. 'ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರಿಗೆ ಕನ್ನಡ ಕಲಿಸುವ ಪ್ರಯತ್ನಗಳು ವ್ಯಾಪಕವಾಗಿ ನಡೆಯಲಿಲ್ಲ. ಹೀಗಾಗಿ ಅವರಲ್ಲೂ ಅಗತ್ಯ ಪ್ರಮಾಣದ ಆಸಕ್ತಿ ಮೂಡಲಿಲ್ಲ'[೨೬] ಎನ್ನುವಲ್ಲಿ ಧಾರ್ಮಿಕ ಅಲ್ಪಸಂಖ್ಯಾತರನ್ನು ಮತ್ತು ಭಾಷಾ ಅಲ್ಪಸಂಖ್ಯಾತರನ್ನು ಒಂದೇ ರೀತಿಯಲ್ಲಿ ಗ್ರಹಿಸುವುದು ತರ್ಕಬದ್ಧವಾಗಿಲ್ಲ. ಭಾಷಾ ಅಲ್ಪಸಂಖ್ಯಾತರು

ಹೊರ ರಾಜ್ಯದಿಂದ ಬಂದವರಾಗಿದ್ದರೆ ಆಗ ಅವರಿಗೆ ಕನ್ನಡ ಕಲಿಸುವ ಅಗತ್ಯ ಸಹಜವಾಗಿ ಬರುತ್ತದೆ. ಆದರೆ ಧಾರ್ಮಿಕ ಅಲ್ಪಸಂಖ್ಯಾತರು ಈ ರಾಜ್ಯದ ಬದುಕಿನಲ್ಲಿ ಬೆರೆತು ಹೋದವರು. ಇವರಲ್ಲಿ ಒಂದಷ್ಟು ಜನ ಕನ್ನಡ ಭಾಷೆ ಕಲಿತಿಲ್ಲ ಎಂದರೆ ಅದಕ್ಕೆ ಕಾರಣ ಧರ್ಮವಲ್ಲ. ಅವರು ನೆಲೆಸಿರುವ ಪರಿಸರ ಕಾರಣವಾಗಿರುತ್ತದೆ. ಇದು ಧಾರ್ಮಿಕ ಅಲ್ಪಸಂಖ್ಯಾತರಿಗೆ ಮಾತ್ರ ಸಂಬಂಧಿಸಿದ ವಿದ್ಯಮಾನವಲ್ಲ. ಪರಿಸರದ ಕಾರಣದಿಂದ ಕನ್ನಡವನ್ನು ಕಲಿಯದಿರುವ ಅಥವಾ ಅರೆಬರೆ ಕಲಿತಿರುವ ಹಿಂದೂಗಳೂ ಸೇರಿದಂತೆ ವಿವಿಧ ಜಾತಿ ಜನಾಂಗಗಳ ಜನರು ಸಾಕಷ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಬಲಪಂಥೀಯರು ಅಲ್ಪಸಂಖ್ಯಾತರನ್ನು ಕುರಿತು ಹರಡುವ ಪೂರ್ವಗ್ರಹಗಳಿಗೆ ಬರಗೂರು ಅವರಂಥಹ ಚಿಂತಕರೂ ಹೇಗೆ ಒಳಗಾಗುತ್ತಾರೆ ಎನ್ನುವುದಕ್ಕೆ ಇದನ್ನೊಂದು ನಿದರ್ಶನವಾಗಿ ಗಮನಿಸಬಹುದು.

೭.೩. ದಲಿತ ನೆಲೆ

೭.೩.೧ ಬಿಡುಗಡೆ ಮತ್ತು ಮರುಬಂಧನಕ್ಕೆ ಸಾಧನವಾದ ಇಂಗ್ಲಿಶ್

ಭಾರತದಲ್ಲಿ ಇಂಗ್ಲಿಶ್ ಭಾಷೆ ವರ್ಗನೆಲೆಯಲ್ಲಿ ಎರಡು ಭಿನ್ನ ಬಗೆಯ ಪಲ್ಲಟಗಳನ್ನು ತಂದಿತು. ಇಂಗ್ಲಿಶ್ ಶತಮಾನದ ಆರಂಭದಲ್ಲಿ ಸಾಮಾಜಿಕವಾಗಿ ಮೇಲ್ವರ್ಗಗಳಿಗೆ ಆತಂಕವನ್ನೂ, ಕೆಳವರ್ಗಗಳಿಗೆ ಆತ್ಮವಿಶ್ವಾಸವನ್ನೂ ತಂದದ್ದು ಮೊದಲನೆಯ ಪಲ್ಲಟವಾದರೆ, ಶತಮಾನದ ಕೊನೆಯಲ್ಲಿ ಶಿಕ್ಷಣವ್ಯವಸ್ಥೆಯ ಮೂಲಕ ಮೇಲ್ವರ್ಗಗಳಿಗೆ ಜಾತಿವ್ಯವಸ್ಥೆಯ ಪುನರುತ್ಥಾನಕ್ಕೆ, ಕೆಳವರ್ಗಗಳನ್ನು ಮತ್ತೆ 'ಶಿಕ್ಷಣ'ದಿಂದ ವಂಚಿಸಲು ಕಾರಣವಾದದ್ದು ಎರಡನೆ ಪಲ್ಲಟ. ಇದಕ್ಕೆ ಲಗತ್ತಾಗಿ ನೋಡಬೇಕಾದ ಇನ್ನೊಂದು ಸಂಗತಿಯಿದೆ. ಶತಮಾನದ ಆರಂಭದಲ್ಲಿ ಸಂಸ್ಕೃತ ಕನ್ನಡಕ್ಕೆ ಹೊರೆಯಾಗುತ್ತಿದೆ ಎಂದು ಅದರಿಂದ ಮುಕ್ತವಾಗಲು ವ್ಯಕ್ತವಾದ ತುಡಿತಕ್ಕೂ, ಇಂಗ್ಲಿಶಿನಿಂದ ನಮ್ಮ ಸಂಸ್ಕೃತಿಗೆ ಧಕ್ಕೆ ಒದಗುತ್ತಿದೆ ಎಂದು ಅದರ ವಿರುದ್ಧ ವ್ಯಕ್ತವಾದ ವಿರೋಧಕ್ಕೂ ವ್ಯತ್ಯಾಸಗಳಿವೆ. ಕನ್ನಡ-ಸಂಸ್ಕೃತದ ಸಂಬಂಧದ ಸಂದರ್ಭದಲ್ಲಿ ಮೇಲ್ವರ್ಗಗಳ ಹಿಡಿತದಿಂದ ಕನ್ನಡವನ್ನು ಬಿಡುಗಡೆಗೊಳಿಸಿ ಅದನ್ನು ಕೆಳವರ್ಗಗಳಿಗೂ ವಿಸ್ತರಿಸುವ ಆಶಯವಿದ್ದರೆ, ಕನ್ನಡ-ಇಂಗ್ಲಿಶಿನ ಸಂಬಂಧದ ಸಂದರ್ಭದಲ್ಲಿ ಇಂಗ್ಲಿಶಿನಿಂದ ಬಂದ ವೈಚಾರಿಕತೆ ಕೆಳವರ್ಗಗಳಲ್ಲಿ ಮೂಡಿಸುವ ಅರಿವು ತಮ್ಮ ಪಾರಂಪರಿಕ ಯಜಮಾನ್ಯಕ್ಕೆ ಧಕ್ಕೆ ತರುವ ಬಗೆಗಿನ ಮೇಲ್ವರ್ಗಗಳ ದಿಗಿಲುಗಳಿತ್ತು. 'ಇಂಗ್ಲಿಶ್ ಪರಂಪರೆಗೆ ಧಕ್ಕೆ ತರುತ್ತದೆ ಎಂಬ ಭಯ ಮೂಡಿದ್ದು ಇಡೀ ಕನ್ನಡ ಸಂಸ್ಕೃತಿಗಲ್ಲ. ಅದರೊಳಗೆ ಇರುವ ಯಜಮಾನಿಕೆಯ ಕೇಂದ್ರಗಳಿಗೆ ಮಾತ್ರ ಈ ಅಪಾಯ ತೋರತೊಡಗಿತ್ತು' ಎಂದು ಕೆ.ವಿ ನಾರಾಯಣ ಅವರು ವಿಶ್ಲೇಷಿಸುತ್ತಾರೆ. ಏಕೀಕರಣ ಚಳುವಳಿಯಿಂದ ಮೊದಲುಗೊಂಡು ಗೋಕಾಕ್

ಚಳುವಳಿಯವರೆಗೆ ಕೆಳವರ್ಗದ ಪಾಲ್ಗೊಳ್ಳುವಿಕೆ ಕನಿಷ್ಠ ಪ್ರಮಾಣದಲ್ಲಿರುವುದಕ್ಕೆ ಈ ಹಿನ್ನೆಲೆಯೂ ಇದೆ.

ಸ್ವಾತಂತ್ರ್ಯೋತ್ತರದ ಐದು ದಶಕಗಳಲ್ಲಿ ಶಿಕ್ಷಣ ಎಲ್ಲ ಸಮುದಾಯಗಳಿಗೆ ಸಿಗಲಾರಂಭಿಸಿದ ಕಾರಣದಿಂದಾಗಿ ಭಾರತೀಯ ಸಮಾಜದಲ್ಲಿ ಹಲವು ಬಗೆಯ ಚಲನೆಗಳು ಗೋಚರಿಸಲಾರಂಭಿಸಿದ್ದವು. ಎಲ್ಲ ಜಾತಿ, ಧರ್ಮ, ಲಿಂಗಗಳ ಮಕ್ಕಳು ಸರ್ಕಾರಿ ಶಾಲೆಗಳ ಒಂದೇ ಸೂರಿನಡಿಯಲ್ಲಿ ಬೆರೆಯುತ್ತಿದ್ದ ಕಾರಣದಿಂದಾಗಿ ಇವರಲ್ಲಿ ಭಾವನಾತ್ಮಕ ಸಂಬಂಧವೂ, ಪರಸ್ಪರರ ಬಗೆಗೆ ಅರಿವೂ ಮೂಡಲಾರಂಭಿಸಿತ್ತು. ಇವುಗಳಿಂದಾಗಿ ಮೇಲ್ಜಾತಿಗಳಲ್ಲಿ ಆತ್ಮವಿಮರ್ಶೆಯೂ, ಕೆಳಜಾತಿಗಳಗಳಲ್ಲಿ ಸ್ವಾಭಿಮಾನವೂ ನಿಧಾನವಾಗಿ ಮೂಡಲಾರಂಭಿಸಿತ್ತು. ಆದರೆ ತೊಂಬತ್ತರ ದಶಕದ ನಂತರ ಭಾರತ ಜಾಗತೀಕರಣಕ್ಕೆ ತೆರೆದುಕೊಂಡ ನಂತರದಲ್ಲಿ ತದ್ವಿರುದ್ಧ ಬೆಳವಣಿಗೆಗಳು ಘಟಿಸಿಲಾರಂಭಿಸಿದವು. ಜಾಗತೀಕರಣದ ಪರಿಣಾಮವಾಗಿ ಶಿಕ್ಷಣ ಕ್ಷೇತ್ರವೂ ಖಾಸಗೀಕರಣಕ್ಕೆ ಒಳಗಾಯಿತು. ಖಾಸಗಿ ಶಾಲೆಗಳಲ್ಲಿ ಅವು ವಿಧಿಸುವ ಅಪಾರ ಪ್ರಮಾಣದ ಡೊನೇಷನ್, ಶುಲ್ಕಗಳ ಕಾರಣದಿಂದಾಗಿ ಮೇಲ್ಮಧ್ಯಮ ಮತ್ತು ಶ್ರೀಮಂತ ವರ್ಗದ ಮಕ್ಕಳು ಮಾತ್ರವೇ ಈ ಶಾಲೆಗಳಿಗೆ ಸೇರುವಂತಾಯಿತು. ಪ್ರತಿಯೊಂದು ಬಲಿಷ್ಠ ಜಾತಿಗಳೂ, ಧರ್ಮಗಳೂ ತಮ್ಮದೇ ಶಿಕ್ಷಣ ಸಂಸ್ಥೆಗಳನ್ನು ತೆರೆದವು. ಹೊರನೋಟಕ್ಕೆ ಈ ವಿದ್ಯಾಸಂಸ್ಥೆಗಳು ಎಲ್ಲ ಜಾತಿ ಜನಾಂಗಗಳಿಗೆ ಮುಕ್ತವಾಗಿರುವಂತೆ ತೋರ್ಪಡಿಸಿಕೊಂಡರೂ ಆಳದಲ್ಲಿ ಇವು ತಮ್ಮ ಜಾತಿ, ಧರ್ಮಗಳಿಗೆ ವಿಶೇಷ ಪ್ರಾಧಾನ್ಯತೆಯನ್ನು ನೀಡುತ್ತ ಕೆಳ ಸಮುದಾಯಗಳ ಮಕ್ಕಳ ಮನಸ್ಸಿನಲ್ಲಿ ಕೀಳರಿಮೆಯನ್ನು ಮೂಡಿಸಲಾರಂಭಿಸಿದವು. ವಿವಿಧ ಧರ್ಮಗಳ ಮೂಲಭೂತವಾದಿ ಹಾಗೂ ಕೋಮುವಾದಿ ಸಂಘ, ಸಂಸ್ಥೆಗಳೂ ತಮ್ಮದೇ ಶಿಕ್ಷಣ ಸಂಸ್ಥೆಗಳನ್ನು ತೆರೆದು ತಮ್ಮ ಜಾತಿ, ಧರ್ಮಗಳ ಧ್ರುವೀಕರಣಕ್ಕೆ ಚಾಲನೆ ನೀಡಿದವು. ಈ ಎಲ್ಲ ಬೆಳವಣಿಗೆಗಳು ಸರ್ಕಾರಿ ಶಾಲೆಗಳಿಂದ ನಿಧಾನವಾಗಿ ಎಲ್ಲ ಸಮುದಾಯಗಳ ಜನರಲ್ಲಿ ಮೂಡುತ್ತಿದ್ದ ಜಾತ್ಯತೀತ ಭಾವನೆಯನ್ನು ನಾಶ ಮಾಡಿ ಮತ್ತೆ ಜಾತಿವ್ಯವಸ್ಥೆಯನ್ನು ಪುನಃ ಸ್ಥಾಪಿಸಲು ಪ್ರೇರಕವಾಯಿತು. ಇದರಿಂದಾಗಿ ಜಾತಿವ್ಯವಸ್ಥೆಯ ಎಲ್ಲ ವಿಕಾರಗಳು ಸಮುದಾಯಗಳ ಬಾಳಿನಲ್ಲಿ ಮರುಕಳಿಸಿದವು. ಇಂತಹ ಪರಿಸ್ಥಿತಿಯ ನಿರ್ಮಾಣಕ್ಕೆ ಕಾರಣವಾಗಿದ್ದು ಜಾಗತೀಕರಣದ ಫಲವಾಗಿ ಅಡಿಯಿಟ್ಟ ಇಂಗ್ಲಿಶ್ ಭಾಷೆ. ಇಂಗ್ಲಿಶ್ ಮೇಲ್ವರ್ಗಗಳ ಗರ್ವಕ್ಕೆ ಕೆಳವರ್ಗಗಳ ಕೀಳರಿಮೆಗೆ ಕಾರಣವಾಯಿತು. ಇದು ಇಂಗ್ಲಿಶ್ ತಂದ ಎರಡನೆಯ ಪಲ್ಲಟ.

ಇಂಗ್ಲಿಶಿನಿಂದ ಬಂದ ವೈಚಾರಿಕತೆ ಸಾಮಾಜಿಕ ನೆಲೆಗೆ ಲಗತ್ತಾದ ಕನ್ನಡ ಪರಂಪರೆಯಲ್ಲಿರುವ ಅಸಮಾನತೆಯ ನೆಲೆಗಳ ಕಡೆಗೆ ಬೆಳಕು ತೋರಿದ್ದನ್ನು ಮುಂದೆ ಬಂಡಾಯ, ದಲಿತ ಸ್ತ್ರೀವಾದಿ ಚಳುವಳಿಗಳು ಮುಂಚೂಣಿಗೆ ತಂದವು. ಇದರ ಫಲಶ್ರುತಿಯನ್ನು ಉಪಭಾಷೆಯ ಬಳಕೆಯಲ್ಲಿ ಆಗಿರುವ ಪಲ್ಲಟದಲ್ಲಿ ಕಾಣಬಹುದು. ಶತಮಾನದ ಆರಂಭದಲ್ಲಿ ಉಪಭಾಷೆಯ ಬಳಕೆ

ಕೀಳರಿಮೆಗೆ ಕಾರಣವಾಗಿದ್ದರೆ ಉತ್ತರಾರ್ಧದ ಕೊನೆಯ ದಶಕಗಳಲ್ಲಿ ಉಪಭಾಷೆಯ ಬಳಕೆ ಆರಂಭಗೊಂಡು ಉಪಭಾಷೆಯ ಬಳಕೆ ಸ್ವಾಭಿಮಾನದ ಅಭಿವ್ಯಕ್ತಿಯಾಗಿ ರೂಪಾಂತರಗೊಂಡಿತ್ತು. ಉಪಭಾಷೆಗಳ ನಿರಾಕರಣೆ ಒಂದು ಮುಖ್ಯ ಭಾಷಾ ನೀತಿಯ ನೆಲೆಯಾಗಿದ್ದನ್ನು ಎಂಟನೆಯ ದಶಕದಿಂದೀಚೆಗೆ ಪ್ರಶ್ನಿಸುವ ಪ್ರವೃತ್ತಿ ಬೆಳೆಯಿತು. ಅದರಿಂದಾಗಿ ಈ ಉಪಭಾಷೆಗಳನ್ನು ಗುರುತುಗಳನ್ನಾಗಿ ಉಳಿಸಿಕೊಳ್ಳುವ ಅಪೇಕ್ಷೆಯು ಕಾಣತೊಡಗಿತ್ತು. ಇವುಗಳನ್ನು ಏಳು-ಎಂಟನೆಯ ದಶಕಗಳಲ್ಲಿ ಕೆಳವರ್ಗದಿಂದ ಬಂದ ಲೇಖಕರ ಭಾಷಾಬಳಕೆಯ ಸ್ವರೂಪದಲ್ಲಿ ಕಾಣಬಹುದು. 'ಏಕೀಕರಣದ ಮೊದಲ ಎರಡು ದಶಕಗಳಲ್ಲಿ ಭಾಷಾ ಪ್ರಭೇದಗಳನ್ನು ಹಿಂದಕ್ಕೆ ಸರಿಸಿ ಅವುಗಳ ಸ್ವತಂತ್ರ ಬಳಕೆಗೆ ಕಟ್ಟುಪಾಡುಗಳನ್ನು ವಿಧಿಸಿ ಶಿಷ್ಟರೂಪವನ್ನು ಎತ್ತಿ ಹಿಡಿಯುವ ಪ್ರಕ್ರಿಯೆ ನಡೆಯಿತಷ್ಟೆ ಏಳನೆಯ ದಶಕದ ಅವಧಿಯಲ್ಲಿ ಕಳೆದು ಹೋಗಿದ್ದ ಭಾಷಾ ಪ್ರಭೇದಗಳನ್ನು ಸಾಹಿತ್ಯ ಕೃತಿಗಳಲ್ಲಿ ಮರುಗಳಿಸುವ, ಮರುಸ್ಥಾಪಿಸುವ ಯತ್ನಗಳು ಮೊದಲಾದವು. ಹೊಸ ತಲೆಮಾರಿನ ಕೆಳವರ್ಗದ ಬರಹಗಾರರಲ್ಲಿ ಸಾಂಸ್ಕೃತಿಕ ನೆನಪುಗಳನ್ನು ಮರುಗಳಿಸುವ ಪ್ರಯತ್ನಗಳು ನಡೆದುದಕ್ಕೂ ಭಾಷಿಕವಾಗಿ ನಡೆದ ಈ ಮರುಗಳಿಕೆಯ ಪ್ರಯತ್ನಕ್ಕೂ ನೇರವಾದ ಸಂಬಂಧವಿದೆ.'[೧೭]

೭.೩.೧ ಇಂಗ್ಲಿಶ್ ಬಗ್ಗೆ ಕನ್ನಡದ ದಲಿತ ಚಿಂತನೆಗಳ ಎರಡು ಧಾರೆಗಳು

ವೈಚಾರಿಕತೆಯನ್ನು ಹೊತ್ತು ತಂದ ಇಂಗ್ಲಿಶಿನ ಬಗ್ಗೆ ದಲಿತ ವರ್ಗ ಆಕರ್ಷಿತವಾಗಿದ್ದು ಮತ್ತು ಅದು ತಮ್ಮನ್ನು ಸಾಮಾಜಿಕ ತರತಮಗಳಿಂದ ಬಿಡುಗಡೆಗೊಳಿಸುತ್ತದೆ ಎಂದು ಭಾವಿಸಿದ್ದು ಸಹಜವಾಗಿತ್ತು. ಆದರೆ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲಿಶ್ ಮಾರುಕಟ್ಟೆಯ ಭಾಷೆಯಾಗಿ ಹೊಸಬಗೆಯಲ್ಲಿ ಜಾತಿವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರತೊಡಗಿತ್ತು. ಡಿ.ಆರ್ ನಾಗರಾಜ ಅವರು ಗುರುತಿಸುವಂತೆ ಗ್ರಾಮೀಣ ಪ್ರದೇಶಗಳೂ ಸೇರಿದಂತೆ ಒಟ್ಟಾರೆಯಾಗಿ ಇಡೀ ದೇಶದ ದಲಿತ ಬಹುಜನ ಸಮಾಜದ ಆಶೋತ್ತರಗಳ ಅಭಿವ್ಯಕ್ತಿ ಎಂಬಂತೆ ಇಂಗ್ಲಿಶ್ ಶಾಲೆಗಳು ಮೆರೆಯತೊಡಗಿದವು. ಯಾವ ವಸ್ತುನಿಷ್ಠ ಚರ್ಚೆಗೂ ಅವಕಾಶವೇ ಆಗದ ಹಾಗೆ ಇಂಗ್ಲಿಶ್ ಮೋಹ ಕಾಣತೊಡಗಿತು. ದಲಿತ ಚಿಂತಕರ ಒಂದು ವರ್ಗ ಜಾಗತೀಕರಣವನ್ನೂ, ಜಾಗತೀಕರಣದ ಫಲವಾಗಿ ಬಂದ ಇಂಗ್ಲಿಶನ್ನೂ ದಲಿತರ ಬಿಡುಗಡೆಯ ಅವಕಾಶವೆಂದು ಸ್ವೀಕರಿಸಿತು. ಆದ್ದರಿಂದ ಈ ವರ್ಗ ಜಾಗತೀಕರಣಕ್ಕೆ ತೋರಿದ ಪ್ರತಿಕ್ರಿಯೆಗೂ ಜಾಗತೀಕರಣದ ಭಾಷೆ ಇಂಗ್ಲಿಶಿಗೆ ತೋರಿದ ಪ್ರತಿಕ್ರಿಯೆಗೂ ಅಂತಹ ವ್ಯತ್ಯಾಸಗಳಿರಲಿಲ್ಲ. ವೈಚಾರಿಕತೆ ತಂದ ಇಂಗ್ಲಿಶ್‌ನಂತೆಯೇ ಜಾಗತೀಕರಣದ ಇಂಗ್ಲಿಶ್ ಕೂಡ ದಲಿತರನ್ನು ಬಿಡುಗಡೆಗೊಳಿಸುತ್ತದೆ ಎನ್ನುವುದು ಇವರ ಚಿಂತನೆಯಾಗಿದೆ. ಆದರೆ ದಲಿತಪರ ಚಿಂತಕರ ಇನ್ನೊಂದು ವರ್ಗ ವೈಚಾರಿಕತೆ ತಂದ ಇಂಗ್ಲಿಶಿಗೂ, ಜಾಗತೀಕರಣದ ಇಂಗ್ಲಿಶಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸುತ್ತ ಜಾಗತೀಕರಣದ ಇಂಗ್ಲಿಶಿನಿಂದ ದಲಿತರ ಬಿಡುಗಡೆ ಸಾಧ್ಯವಿಲ್ಲ ಎಂಬ ಚಿಂತನೆ ಹೊಂದಿದೆ.

೧ **ಇಂಗ್ಲಿಶ್ ದಲಿತರನ್ನು ಬಿಡುಗಡೆಗೊಳಿಸುತ್ತದೆ ಎನ್ನುವ ಚಿಂತನಾಧಾರೆ** : ಕನ್ನಡದ ಹಂಗನ್ನು ಬಿಟ್ಟುಕೊಟ್ಟ ಹೊರತು ತಮಗೆ ಬಿಡುಗಡೆ ಇಲ್ಲ ಎನ್ನುವ ಚಿಂತನೆ ದಲಿತ ಚಿಂತನೆಯ ಒಂದು ಧಾರೆಯಲ್ಲಿದೆ. 'ಇಂಗ್ಲಿಶನ್ನು ಬಿಡುಗಡೆಯ ಹಾದಿಯಾಗಿಯೇ' ನೋಡುವ ಕನ್ನಡದ ಪ್ರಮುಖ ದಲಿತಪರ ಚಿಂತಕರಾದ ಮೊಗಳ್ಳಿ ಗಣೇಶ್ ಅವರ ಚಿಂತನೆಗಳು ಈ ಧಾರೆಯ ಚಿಂತನೆಯನ್ನು ಹೋಲುತ್ತವೆ. ಪ್ರಾದೇಶಿಕ ಭಾಷೆಯ ಹಕ್ಕುದಾರಿಕೆಯ ಹಂಗಿನಿಂದ ಹೊರಬರಬೇಕು ಎನ್ನುವ ಇಚ್ಛೆ ಮತ್ತು ಅಖಿಲಭಾರತ ನೆಲೆಯಲ್ಲಿ ಸಂಪರ್ಕಜಾಲ ರೂಪಿಸಲು ಇಂಗ್ಲಿಶ್ ಒಂದು ಅಗತ್ಯ ಹೊರದಾರಿ ಎಂಬ ತಿಳಿವಳಿಕೆಗಳು ಒಟ್ಟಾಗಿ ಸೇರಿ ಇಂಗ್ಲಿಶ್‌ಪರವಾದ ವಾದವೊಂದು ಈಗ ಮುಂಚೂಣಿಗೆ ಬಂದು ನಿಂತಿದೆ. ಕೆಳಸ್ತರದ ಸಮುದಾಯಕ್ಕೆ ಅಂತರಾಷ್ಟ್ರೀಯ ಸಂವಾದ ಆರಂಭಗೊಂಡಿರುವ ಸಂದರ್ಭದಲ್ಲಿ ಇಂಗ್ಲಿಶಿಗೆ ಈವರೆಗೆ ಇರದಿದ್ದ ಮಹತ್ವ ಒದಗಿ ಬಂದಿದೆ.

ಕನ್ನಡೇತರ ದಲಿತಪರ ಚಿಂತಕರಾದ ಕಾಂಚ ಐಲಯ್ಯ, ಚಂದ್ರಬಾನ್ ಪ್ರಸಾದ್ ಅವರ ಚಿಂತನೆಗಳು ಇಂಗ್ಲಿಶ್‌ಪರವಿದ್ದು ಇವೂ ಕೂಡ ದಲಿತ–ಇಂಗ್ಲಿಶ್ ಕುರಿತ ಕನ್ನಡ ಚಿಂತನೆಗಳನ್ನು ಪ್ರಭಾವಿಸಿದಂತೆ ತೋರುತ್ತವೆ. ಭಾರತದ ಬೇರೆ ಬೇರೆ ಪ್ರದೇಶಗಳ ಜಾತಿಗಳು ಆಳುವ ವರ್ಗವಾಗಿ ಮಾರ್ಪಟ್ಟಾಗ ತಮ್ಮ ಪ್ರಾದೇಶಿಕ ಲಕ್ಷಣಗಳನ್ನು ಮೀರಲು ಇಂಗ್ಲಿಶ್ ಅಥವಾ ಹಿಂದಿಯನ್ನು ಬಳಸಿಕೊಂಡಿವೆ. ಮೇಲ್ಜಾತಿಯ ರಾಜಕಾರಣವೆಲ್ಲ ಈ ನಿಟ್ಟಿನಲ್ಲೇ ನಡೆದಿರುವುದು. ಆದರೆ ದಲಿತರು ಕೆಳಜಾತಿಯವರು ಅಖಿಲ ಭಾರತ ವ್ಯಾಪ್ತಿಯ ಜಾತಿಗಳಾದರೂ ಅವರು ತಮ್ಮ ಸಂಪರ್ಕ ಜಾಲವನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗಿಲ್ಲ. ಭಾಷೆಯೇ ಅದಕ್ಕೆ ದೊಡ್ಡ ತಡೆ. ಅಲ್ಲದೇ ಇವರು ಪ್ರಾದೇಶಿಕ ಸಂಸ್ಕೃತಿಯ ವಕ್ತಾರರು ಎಂಬ ಭ್ರಾಮಕ ಹಕ್ಕುದಾರಿಕೆಯನ್ನು ತೊರೆಯುವುದು ಆಗಿಲ್ಲ. ಈ ಇಕ್ಕಟ್ಟಿನಿಂದ ಹೊರಬರಲು ಇಂಗ್ಲಿಶ್ ಒಂದು ಅವಕಾಶವನ್ನು ನೀಡುತ್ತದೆ ಎನ್ನುವುದು ಐಲಯ್ಯ ಅವರ ವಾದ.

ಜಾಗತೀಕರಣ ವಿವಿಧ ಜನಸಮುದಾಯಗಳ ನಡುವೆ ಉಂಟುಮಾಡಿರುವ ಅಗಾಧ ಆರ್ಥಿಕ ಅಂತರ ಮತ್ತು ಅದು ಉಂಟು ಮಾಡಿರುವ ಪರಿಣಾಮಗಳು ಶ್ರೇಣೀಕೃತ ಭಾರತೀಯ ಸಮಾಜದಲ್ಲಿ ತುಂಬ ಸಂಕೀರ್ಣ ಸ್ವರೂಪವುಳ್ಳವಾಗಿವೆ. ಈ ಪರಿಣಾಮಗಳು ತುಂಬ ವೇಗವಾಗಿ ಘಟಿಸುತ್ತ ಜನಸಾಮಾನ್ಯರನ್ನು ಮಾತ್ರವಲ್ಲದೆ ಬುದ್ಧಿಜೀವಿ ವರ್ಗವನ್ನೂ ಗೊಂದಲದಲ್ಲಿ ಮುಳುಗಿಸಿದೆ. ತಕ್ಷಣದ ಅದರ ಪರಿಣಾಮಗಳೇ ಇವರೆಲ್ಲರ ನಿಲುವುಗಳನ್ನು ರೂಪಿಸಿದಂತೆ ಕಾಣುತ್ತಿವೆ. ಆದ್ದರಿಂದ ದಲಿತ ಚಿಂತಕರೂ ಖಾಸಗಿ ವಲಯದ ಉದ್ಯಮಗಳಲ್ಲಿ ದಲಿತ ಬಂಡವಾಳವನ್ನು ಆಗ್ರಹಿಸುತ್ತ ಜಾಗತೀಕರಣವನ್ನು ಅನುಮೋದಿಸುತ್ತಿದ್ದಾರೆ. ಆ ಮೂಲಕ ಜಾಗತೀಕರಣ ಪ್ರಾಯೋಜಿಸುತ್ತಿರುವ ಇಂಗ್ಲಿಷ್ ಮಾಧ್ಯಮದ ಶಿಕ್ಷಣವನ್ನೂ ಒಪ್ಪಿಕೊಳ್ಳುತ್ತಿದ್ದಾರೆ. ಸಾಮಾಜಿಕ ಬಿಡುಗಡೆಗೆ ವೈಚಾರಿಕತೆಯಾಗಿ ಇಂಗ್ಲಿಷನ್ನು ಅನುಮೋದಿಸುವ, ದೇಶಿಭಾಷೆಯಲ್ಲಿ ಜ್ಞಾನ ಪಡೆಯುವ ಶಿಕ್ಷಣದಲ್ಲಿ ಇಂಗ್ಲಿಷ್

ತೊಡಕೆಂದು ದೂರವಿರಿಸುವ ಇಂಗ್ಲಿಷಿನ ತಾರತಮ್ಯದ ಅಗತ್ಯ ಕುವೆಂಪು ಅವರಿಗಿದ್ದಂತೆ ಈ ಚಿಂತಕರಿಗೆ ಮುಖ್ಯವೆಂದು ಕಂಡುಬರುತ್ತಿಲ್ಲ.

೨ ಇಂಗ್ಲಿಷ್ ದಲಿತರ ಶೋಷಣೆಯ ಶೂಲವೂ ಆಗಬಹುದು ಎನ್ನುವ ಚಿಂತನಾಧಾರೆ : ಕನ್ನಡದ ದಲಿತ ಚಿಂತನೆಯ ಇನ್ನೊಂದು ಧಾರೆ ಇಂಗ್ಲಿಶನ್ನು ಕಡು ಗುಮಾನಿಯಿಂದಲೇ ಗಮನಿಸುತ್ತದೆ. ಮೇಲ್ವರ್ಗಗಳ ಮಕ್ಕಳೆಲ್ಲ ಖಾಸಗಿ ಶಾಲೆಗಳಲ್ಲಿ ಇಂಗ್ಲಿಶ್ ಮಾಧ್ಯಮದಲ್ಲಿ ಓದುತ್ತಿರುವುದನ್ನು ಅರಿತೂ ಕೆಳವರ್ಗದವರೇ ಹೆಚ್ಚಿರುವ ಸರ್ಕಾರಿ ಶಾಲೆಗಳಲ್ಲಿ ಒಂದು ಭಾಷೆಯಾಗಿ ಇಂಗ್ಲಿಶನ್ನು ಒಂದನೇ ತರಗತಿಯಿಂದ ಕಲಿಸಬೇಕು ಎಂದು ಈ ಚಿಂತನೆ ಒತ್ತಾಯಿಸುತ್ತದೆಯೇ ಹೊರತು ಇಂಗ್ಲಿಶ್ ಮಾಧ್ಯಮಕ್ಕೆ ಒತ್ತಾಯಿಸುವುದಿಲ್ಲ. ಸಮಾಜವೊಂದರಲ್ಲಿ ಪ್ರತಿಷ್ಠಿತ ವರ್ಗಗಳು ತಮ್ಮ ಪ್ರಾಬಲ್ಯ ಸಾಧಿಸುವ ಒಂದು ಮುಖ್ಯ ಮಾರ್ಗ ಎಂದರೆ, ಸಮಾಜದ ಪ್ರಗತಿ ಮಾರ್ಗದ ಬಗೆಗೆ ಒಂದು ಸರ್ವಸಮ್ಮತ ದಾರಿ ಮತ್ತು ಆದರ್ಶವನ್ನು ಇಡುವುದು. ಕೆಳಗಿನವರು ಒಂದೇ ದಾರಿ ಹಿಡಿಯಲು ಒಪ್ಪಿ ಓಡುತ್ತಾರೆ. ಆಟದ ನಿಯಮಗಳನ್ನು ಭಿನ್ನಭಿನ್ನ ವರ್ಗಗಳು ಪೂರ್ಣವಾಗಿ ಒಪ್ಪುತ್ತಾರೆ. ಆಟದಲ್ಲಿ ಸೋತವನು ಅಥವಾ ಹಿಂದುಳಿದವನು ಕೂಡಾ ತಾನೂ ಒಮ್ಮೆ ಅದನ್ನು ಗೆಲ್ಲಬಹುದು ಎಂದು ನಂಬಿ ಅದರಲ್ಲಿ ಶ್ರದ್ಧೆಯಿಂದ ಭಾಗವಹಿಸುತ್ತಾನೆ. ಸಾಮಾಜಿಕ ಸಮ್ಮತಿ ಮತ್ತು ಪ್ರಾಬಲ್ಯಗಳ ಆಟದ ನಿಯಮ ಇದು. ತಾನು ಗೆಲ್ಲದೇ ಇರುವ ರೀತಿಯಲ್ಲಿ ಈ ಆಟದ ನಿಯಮವಿದೆ ಎಂದು ಸೋತವನು ತಿಳಿಯುವುದಿಲ್ಲ ಕೆಳವರ್ಗಗಳು ಎಂದಿಗೂ ಗೆಲ್ಲಲು ಸಾಧ್ಯವೇ ಇಲ್ಲದ ನಿಯಮಗಳಿರುವ ಇಂಗ್ಲಿಶಿನ ಈ ಆಟದ ಕುರಿತು ಡಿ.ಆರ್ ನಾಗರಾಜ್ ಅವರ ಈ ಒಳನೋಟಗಳು ಈ ಧಾರೆಯ ದಲಿತಚಿಂತನೆಯಲ್ಲೂ ಇರುವಂತಿವೆ. ದೇವನೂರ ಮಹಾದೇವ ಮತ್ತು ಕೆ.ಬಿ ಸಿದ್ದಯ್ಯ ಅವರ ಚಿಂತನೆಗಳನ್ನು ಇಂಗ್ಲಿಶನ್ನು ದಲಿತರ ಬಿಡುಗಡೆಯಾಗಿ ನೋಡದಿರುವುದನ್ನು ಈ ಧಾರೆಯ ಚಿಂತನೆಯಲ್ಲಿ ಪ್ರಮುಖವಾಗಿ ಗಮನಿಸಬಹುದಾಗಿದೆ.

ತಮ್ಮ ಸಾಹಿತ್ಯ ಮುಖೇನ ಕನ್ನಡ ಭಾಷೆ ಸಾಗುತ್ತಿದ್ದ ಹಾದಿಯನ್ನೇ ಚರ್ಚೆಗೆ ಒಡ್ಡಿದ ದೇವನೂರು ಮಹಾದೇವ ಅವರು ಗಾಂಧಿಯ ಕರುಣೆ ಮತ್ತು ಅಂಬೇಡ್ಕರ್ ಅವರ ಮನುಷ್ಯಘನತೆಯ ಪ್ರತಿಪಾದನೆಯ ಮೂಲಕ ಕನ್ನಡ ಅಸ್ಮಿತೆಗೆ ಮಾನವೀಯತೆಯ ಉದಾತ್ತತೆ ತರಲು ಪ್ರಯತ್ನಿಸಿದವರು. ತಮ್ಮ ಕೃತಿ 'ಕುಸುಮಬಾಲೆ' ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳ' ಮೊಮ್ಮಗಳೆಂದು ಕರೆದುಕೊಂಡ ದೇವನೂರರ ಕನ್ನಡ ಅಸ್ಮಿತೆಯ ಚಿಂತನೆಗಳು ಕುವೆಂಪು ಅವರ ಚಿಂತನೆಗಳಲ್ಲಿಯೇ ಬೀಜರೂಪದಲ್ಲಿರುವುದು ಆಕಸ್ಮಿಕವಲ್ಲ.

ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವೇ ಕಡ್ಡಾಯ ಶಿಕ್ಷಣ ಮಾಧ್ಯಮವಾಗಬೇಕು ಎಂದು ಆಗ್ರಹಿಸುತ್ತ ತಮ್ಮನ್ನು ಅರಸಿ ಬಂದ ನೃಪತುಂಗ ಪ್ರಶಸ್ತಿ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ

ಎಲ್ಲವನ್ನೂ ದೇವನೂರ ಮಹಾದೇವ ಅವರು ತಿರಸ್ಕರಿಸಿದ್ದಾರೆ. ಈ ಸಂದರ್ಭದಲ್ಲಿ ಕನ್ನಡದ ಬಗ್ಗೆ, ಕನ್ನಡ ಮಾಧ್ಯಮವನ್ನು ಜಾರಿಗೊಳಿಸದ ಸರ್ಕಾರದ ಕಾರ್ಯವೈಖರಿ ಬಗ್ಗೆ ತಮ್ಮ 'ಎದೆಗೆ ಬಿದ್ದ ಅಕ್ಷರ' ಕೃತಿಯಲ್ಲಿ ಅವರು ಕೊಡುವ ರೂಪಕ ಒಳನೋಟಗಳುಳ್ಳದ್ದಾಗಿವೆ: 'ಕನ್ನಡವು ಶಿಕ್ಷಣ ಮಾಧ್ಯಮವಾಗದೆ ಕನ್ನಡದ ಪಾದಗಳು ಶಕ್ತಿಹೀನವಾಗಿ, ನಡೆಯಲು ಕಷ್ಟಪಡುತ್ತ ಕಂಕುಳಕೋಲು ಹಿಡಿದುಕೊಂಡು ಯಾತನಾಮಯವಾಗಿ ನಡೆಯುತ್ತಿರುವಂತೆ ಕಾಣುತ್ತದೆ' ಎನ್ನುವಲ್ಲಿ ಮಾತೃಭಾಷೆಯೇ ಯಾವುದೇ ಸಮಾಜದ ಚಾಲಕಶಕ್ತಿ ಎನ್ನುವ ತಿಳಿವಳಿಕೆಯ ಬಗೆಗೆ ಸಮ್ಮತಿಯಿದೆ.

ಕರ್ನಾಟಕದಲ್ಲೀಗ ಒಂದು ವೈರುಧ್ಯ ಎದ್ದು ತೋರುತ್ತಿದೆ. ಅದೆಂದರೆ: ಕನ್ನಡ ಮತ್ತು ಕನ್ನಡಿಗರ ಹೆಸರಲ್ಲಿ ವಿಶ್ವವಿದ್ಯಾಲಯ, ಪ್ರಾಧಿಕಾರ, ಅಕಾಡೆಮಿ, ಭುವನೇಶ್ವರಿ ಪ್ರತಿಮೆ, ಥೀಮ್ ಪಾರ್ಕ್ ಮುಂತಾದವು ಸ್ಥಾಪನೆ ಆಗುತ್ತಿವೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನವೂ ಬಂದಿದೆ; ಆದರೆ ಕನ್ನಡ ಶಾಲೆಗಳು ವರ್ಷೇವರ್ಷ ಕಣ್ಮುಚ್ಚುತ್ತಿವೆ. ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕೆಂಬ ನೀತಿಯನ್ನು ಜಾರಿಗೆ ತರಲು ಆಗುತ್ತಿಲ್ಲ. ಕನ್ನಡ ಮಾತು ನಿಜವಾಗಿಯೂ ತಲೆಯೆತ್ತುವಂತೆ ಮಾಡಬಲ್ಲ ಚರ್ಚೆ ಮತ್ತು ಖಚಿತ ಕಾರ್ಯಕ್ರಮಗಳೇ ಇಲ್ಲ. ಬದಲಿಗೆ ಸಾಂಸ್ಕೃತಿಕ ಉತ್ಸವಗಳು ಜರುಗುತ್ತಿವೆ. 'ಇಲ್ಲಿಯವರೆಗಿನ ಎಲ್ಲಾ ಸರ್ಕಾರಗಳೂ ಕನ್ನಡದ ಬಗ್ಗೆ ಜುಟ್ಟಿಗೆ ಮಲ್ಲಿಗೆ ಹೂ ಮಾತಾಡಿಕೊಂಡೇ ಬಂದಿವೆ' ಎನ್ನುವಲ್ಲಿ ಸರ್ಕಾರಗಳು ಕನ್ನಡದ ಬಗೆಗೆ ಕೇವಲ ತೋರುಗಾಣಿಕೆಯ ಕಾಳಜಿ ತೋರಿಸುತ್ತಿವೆ, ಅದರ ಕಾರ್ಯಕ್ರಮಗಳು ಕನ್ನಡವನ್ನು ವೈಭವೀಕರಿಸುತ್ತಿವಿಯೇ ವಿನಃ ಚೈತನ್ಯ ತುಂಬುತ್ತಿಲ್ಲ ಎಂಬ ದೇವನೂರ ಅವರ ಆಕ್ಷೇಪಣೆಗಳು ಮೇಲ್ಕಂಡ ವಾಸ್ತವದ ಹಿನ್ನೆಲೆಯಲ್ಲಿ ಮೂಡಿಬಂದವುಗಳಾಗಿವೆ.

ಕೆ.ಬಿ ಸಿದ್ದಯ್ಯ ಅವರಿಗೆ ಜಾಗತೀಕರಣದ ಅಭಿವೃದ್ಧಿ ಮಾದರಿಯ ಬಗ್ಗೆ ಪ್ರಶ್ನೆಗಳಿವೆ. ಈ ಅಭಿವೃದ್ಧಿ ಮಾದರಿಗೂ ಇಂಗ್ಲಿಶಿಗೂ ಇರುವ ಸಂಬಂಧದ ಕುರಿತು ಸಿದ್ದಯ್ಯ ಚಿಂತಿಸುತ್ತಾರೆ. 'ಈ ಹೊತ್ತು ಕರ್ನಾಟಕದಲ್ಲಿ ಮಾತ್ರವಲ್ಲ ಇಡೀ ರಾಷ್ಟ್ರದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಿರ್ಮಾಣವಾಗುತ್ತಿರುವ ನಾಗರಿಕತೆ ಎಲ್ಲಿಗೆ ಕರೆದೊಯ್ಯುತ್ತಿದೆ? ಈ ನಾಗರಿಕತೆಯ ನಿರ್ಮಾತೃ ಎಲ್ಲಿದ್ದಾನೆ ಹುಡುಕಬೇಕು. ಇಂತಹ ನಾಗರಿಕತೆಯ ವಾಹಕವಾಗಿ ಇಂಗ್ಲಿಶ್ ಭಾಷೆ ಇಂದು ಬಳಕೆಯಾಗುತ್ತಿದೆ. ಇದರ ಜಾಗತಿಕ ಪ್ರಭಾವ 'ಕನ್ನಡದ ಸ್ಥಾನದಲ್ಲಿ ಇಂಗ್ಲಿಶನ್ನು ತಂದು ಕೂಡಿಸಿದೆ, ಇದು ಭಾಷೆಯ ಪೀಠ ಮಾತ್ರವಲ್ಲ ಆಳುವ ಪೀಠವು ಆದೀತು'[೨೮] ಎಂಬ ಅವರ ಎಚ್ಚರಿಕೆಯ ಮಾತುಗಳು ಭಾಷೆಯನ್ನು ಸಮಗ್ರವಾಗಿ ನೋಡುವಂತೆ ಒತ್ತಾಯಿಸುತ್ತವೆ.

ಇಂಗ್ಲಿಶನ್ನು ಕನ್ನಡದ ಶತ್ರುಸ್ಥಾನದಲ್ಲಿಟ್ಟು ನೋಡುವ ಈ ದಲಿತಪರ ಚಿಂತಕರಿಗೆ ಕನ್ನಡ ಸಂಸ್ಕೃತಿಯ ತರತಮಗಳ ಅರಿವಿಲ್ಲವೇ ಎಂಬ ಪ್ರಶ್ನೆ ದಲಿತರಿಗೆ ಇಂಗ್ಲಿಶಿನಿಂದಲೇ ಬಿಡುಗಡೆ ಎಂದು ಚಿಂತಿಸುವ ಇನ್ನೊಂದು ಧಾರೆಯ ದಲಿತ ಚಿಂತಕರಿಂದಲೇ ಬಂದಿದ್ದರೆ ಅದು ಸಹಜ. ಇಂಗ್ಲಿಶನ್ನು

ದಲಿತರ ಬಿಡುಗಡೆಯ ಬಾಗಿಲಾಗಿ ನೋಡದೆ ಶತ್ರುಸ್ಥಾನದಲ್ಲಿಟ್ಟು ನೋಡುವ ಈ ದಲಿತಚಿಂತನೆಗೆ ಪ್ರೇರಣೆ ನೀಡಿದ ಸಂಗತಿಗಳಾವುವು ಎಂಬುದನ್ನು ಅರಿಯಬೇಕಾಗಿದೆ. ಕನ್ನಡ ವಿಚಾರ ಸಾಹಿತ್ಯ ದಲಿತಪರ ಚಿಂತಕರ ಈ ನಿಲುವಿಗೆ ಕಾರಣಗಳನ್ನು ಎರಡು ಬಗೆಯಲ್ಲಿ ಅರ್ಥೈಸಿದೆ. ಮೊದಲನೆಯದು ಮುಗ್ಧತೆ. ಎರಡನೆಯದು ಇಂಗ್ಲಿಶ್ ದಲಿತರ ಶೋಷಣೆಯ ಶೂಲವೂ ಆಗಬಹುದು ಎನ್ನುವ ಚಿಂತನೆ.

'ಕಳೆದ ಶತಮಾನದ ಕೊನೆಯ ದಶಕದಲ್ಲಿ ಇಂಗ್ಲಿಶ್ ಪ್ರಭಾವದಿಂದ ಮತ್ತು ಜಾಗತೀಕರಣದ ಅಪಾಯದಿಂದ ಕನ್ನಡಕ್ಕೆ ಕುತ್ತುಗಳು ಒದಗಿವೆ ಅನ್ನಿಸಿದಾಗ ಕನ್ನಡದ ಪ್ರಜ್ಞಾವಂತರು ಕನ್ನಡ ಮುಂದೆ ಉಳಿಯುವುದು ದಲಿತರು ಮತ್ತು ಕೆಳಜಾತಿಯವರಲ್ಲಿ ಮಾತ್ರ ; ಅವರು ಮಾತ್ರ ಕನ್ನಡವನ್ನು ಉಳಿಸಬಲ್ಲರು ಎಂದು ಹೇಳುತ್ತಿದ್ದಾರೆ. ಇದು ಮೇಲುನೋಟಕ್ಕೆ ದಲಿತರಿಗೆ, ಕೆಳಜಾತಿಯವರಿಗೆ ವಹಿಸಿದ ಚಾರಿತ್ರಿಕ ಹೊಣೆಗಾರಿಕೆ ಎಂದು ತೋರುತ್ತದೆ. ಈ ಹೊಸ ಜವಾಬ್ದಾರಿಯಿಂದ ಅವರು ಉಬ್ಬುಬ್ಬಿ ತಾವು ಕನ್ನಡದ ಕಟ್ಟಾಳುಗಳು ಆಗಬೇಕು ಎಂದು ತಿಳಿಯಲು ಸಿದ್ದರಾದರು.'[೨೯] ಇದು ಮುಗ್ಧತೆಯ ಆಯಾಮ.

'ಇಂಗ್ಲಿಶ್ ಎನ್ನುವುದು ಬರೀ ಭಾಷೆಯಾಗಿ ಮಾತ್ರ ಬಳಕೆಯಾಗುತ್ತಿಲ್ಲ. ಅದು ಬಂಡವಾಳಶಾಹಿಗಳ, ಸಾಮ್ರಾಜ್ಯಶಾಹಿ ರಾಜಕಾರಣದ ಸಾಧನವಾಗಿ ದಲಿತರ, ಶೂದ್ರ ಶೋಷಣೆಗೆ ಇರುವ ಶೂಲವಾಗಿಯೂ ಇದೆ'[೩೦] ಎಂದು ಅರ್ಥಮಾಡಿಕೊಂಡಿರಬಹುದಾದ ಈ ಚಿಂತಕರು 'ಕೇವಲ ಇಂಗ್ಲಿಶನ್ನು, ಆಧುನಿಕತೆಯ ಜತೆಗೆ ಸಮೀಕರಿಸುತ್ತ ಅದನ್ನು ಅಪ್ಪಿಕೊಳ್ಳುವುದು ಶೋಷಿತರ ಬಿಡುಗಡೆಗೆ ಅಷ್ಟೇನೂ ಸಹಾಯವಾಗಲಾರದು'[೩೧] ಎಂದು ಭಾವಿಸಿರಬೇಕು. ಇದು ಇಂಗ್ಲಿಶ್ ಭಾಷೆಯು ದಲಿತರ ಶೋಷಣೆಯ ಶೂಲವೂ ಆಗಬಹುದು ಎನ್ನುವ ಚಿಂತನೆಯ ಆಯಾಮ.

ಸಾಮಾಜಿಕ ಪ್ರಜಾಪ್ರಭುತ್ವ ಇಲ್ಲದ ಭಾರತದಲ್ಲಿ ಜಾಗತೀಕರಣ ದಲಿತರನ್ನು ವಿಮೋಚನೆಗೊಳಿಸುತ್ತದೆ ಎನ್ನುವುದು ಕಲ್ಪಿಸಿಕೊಳ್ಳುವುದಕ್ಕೇ ಅಸಾಧ್ಯವಾಗಿರುವಂತಹದು. ಬಹುಷಃ ಕುವೆಂಪು ಅವರು ಈ ಕಾರಣಕ್ಕಾಗಿಯೇ ಇಂಗ್ಲಿಶ್ ಶೂದ್ರರ ಬಿಡುಗಡೆ ಮಾಡುವುದರ ಬಗ್ಗೆ ಕಿಂಚಿತ್ತೂ ನಂಬಿಕೆ ಹೊಂದಿರಲಿಲ್ಲ. ಇಂಗ್ಲಿಶನ್ನು ದಲಿತರ ದೃಷ್ಟಿಯಿಂದಲೂ ಅಪಾಯಕಾರಿಯಾಗಿ ನೋಡುವ ಚಿಂತನೆ ಮೂಲಭೂತವಾಗಿ ಗಾಂಧಿ, ಲೋಹಿಯಾ ಅವರ ಚಿಂತನೆಗಳಿಂದ ಪ್ರಭಾವಕ್ಕೆ ಒಳಗಾದ ಚಿಂತನೆಗಳು. ಆದ್ದರಿಂದಲೇ ಈ ಚಿಂತನೆಗೆ ಇಂಗ್ಲಿಶ್ ತರುವ ಬಾಹ್ಯರೂಪದ ಆಧುನಿಕತೆ ದಲಿತರ ಬದುಕಿಗೆ ನೆರವಾಗುವುದರ ಬಗೆಗೆ ಅನುಮಾನಗಳಿವೆ. ಮುಖ್ಯವಾಗಿ ಇಂಗ್ಲಿಶ್ ಮೂಲಕ ಮೇಲ್ವರ್ಗಗಳು ಪುನಶ್ಚೇತನಗೊಳಿಸುತ್ತಿರುವ ಜಾತಿವ್ಯವಸ್ಥೆಯ ಬಗ್ಗೆ ಎಚ್ಚರವಿದೆ.

ಸಾಮಾಜಿಕ ನೆಲೆಯ ಎಲ್ಲ ದಲಿತ ಚಿಂತಕರ ಕನ್ನಡ ಅಸ್ಮಿತೆ ಒಂದೇ ತೆರನಾಗಿಲ್ಲ. ದಲಿತರ ನೆಲೆಯಿಂದ ನೋಡುವ ಇಂಗ್ಲಿಶ್‌ಪರ ಮತ್ತು ಇಂಗ್ಲಿಶ್ ವಿರುದ್ಧದ ಈ ಚಿಂತನೆಗಳನ್ನು ಹೊಂದಿದ

ಚಿಂತಕರನ್ನು ಗಮನಿಸಿದಾಗ ದಲಿತ ಹೋರಾಟಗಾರರು ಮತ್ತು ದಲಿತ ಲೇಖಕರ ಚಿಂತನೆಗಳಲ್ಲಿ ಭಿನ್ನತೆಗಳು ಕಾಣುತ್ತವೆ. ಅಂದರೆ ದಲಿತ ಸಾಹಿತಿಗಳ ಹಾಗೂ ದಲಿತ ಹೋರಾಟಗಾರರ ಕನ್ನಡ ಅಸ್ಮಿತೆ ಭಿನ್ನವಾಗಿವೆ. ದಲಿತ ಹೋರಾಟಗಾರರು ಇಂಗ್ಲಿಶಿನಿಂದಲೇ ದಲಿತರ ವಿಮೋಚನೆ ಸಾಧ್ಯವೆಂದು ಪ್ರತಿಪಾದಿಸುತ್ತಿದ್ದರೆ ದಲಿತ ಲೇಖಕರು ಕನ್ನಡ ಭಾಷೆ ಉಳಿಯಬೇಕಾದ ಅಗತ್ಯವನ್ನು ಪ್ರತಿಪಾದಿಸುತ್ತಿದ್ದಾರೆ. ದಲಿತ ಬಂಡವಾಳದ ಪರವಾಗಿರುವ ಚಿಂತಕರು ಪೂರ್ಣವಾಗಿ ಇಂಗ್ಲಿಷ್ ಪರವಾಗಿದ್ದರೆ ದಲಿತ ಸಾಹಿತಿಗಳು ಈ ನಿಲುವಿಗೆ ವಿರುದ್ಧವಾಗಿದ್ದು ಕನ್ನಡಪರ ವಾದಿಸುತ್ತಿದ್ದಾರೆ. ತಮ್ಮ ಸಮುದಾಯದ ವಿರೋಧ ಕಟ್ಟಿಕೊಂಡು ಕನ್ನಡ ಪರ ನಿಲ್ಲುವ ದಲಿತ ಸಾಹಿತಿಗಳ ಈ ನಿಲುವಿಗೆ ಅವರು ಕನ್ನಡ ಲೇಖಕರಾಗಿ ದೇಶಿ ಭಾಷೆಯ ಮಹತ್ವವನ್ನು ಅರ್ಥ ಮಾಡಿಕೊಂಡಿರುವುದೇ ಕಾರಣವಾಗಿದೆ.

೭.೪ ಸಾಮಾಜಿಕ ನೆಲೆಯ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳ ತೌಲನಿಕ ವಿಶ್ಲೇಷಣೆ

ಸಾಮಾಜಿಕ ನೆಲೆಯ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಮೂಲಭೂತವಾದಿ ನೆಲೆಯೊಂದನ್ನು ಹೊರತುಪಡಿಸಿ ಉಳಿದೆಲ್ಲ ಧಾರೆಯ ಚಿಂತನೆಗಳಲ್ಲಿ ಅಂತರ್ಗತವಾಗಿದೆ. ಸಾಹಿತ್ಯವಾದಿ ನೆಲೆಯ ಚಿಂತನೆಗಳಲ್ಲಿ ಇದು ದಟ್ಟವಾಗಿದ್ದರೆ ಸಾಂಸ್ಕೃತಿಕ ಹುಡುಕಾಟದ ನೆಲೆಯ ಚಿಂತಕರ ಕೊನೆಯ ದಶಕದ ಚಿಂತನೆಗಳಲ್ಲಿ ಇದು ಕಾಣಿಸಿಕೊಳ್ಳುತ್ತದೆ. ಜನಪ್ರಿಯ ನೆಲೆಯ ಚಿಂತನೆಗಳಲ್ಲಿ ಸಾಮಾಜಿಕ ನೆಲೆ ಕಾಣದಿದ್ದರೂ ಮೂಲಭೂತವಾದಿ ನೆಲೆಯ ಚಿಂತನೆಗಳಂತೆ ಅದು ಸಾಮಾಜಿಕ ನೆಲೆಗೆ ವ್ಯತಿರಿಕ್ತವಾಗಿಲ್ಲ. ದ್ರಾವಿಡ ನೆಲೆಯ ಚಿಂತನೆಗಳು ರೂಪುಗೊಂಡಿರುವುದೇ ಸಾಮಾಜಿಕ ನೆಲೆಯ ತಳಹದಿಯ ಮೇಲೆ.

ಭಾಷೆಗೆ ಸಂಬಂಧಿಸಿದ ಬಹುತೇಕ ಎಲ್ಲ ಬಿಕ್ಕಟ್ಟುಗಳು ಹುಟ್ಟು ಪಡೆಯುವುದೇ ಅಸಮಾನ ಸಾಮಾಜಿಕ ಗರ್ಭದಲ್ಲಿ. ಸಾಮಾಜಿಕ ವ್ಯವಸ್ಥೆ ಸ್ವಸ್ಥವಾಗಿದ್ದಾಗ ಭಾಷೆ ಕೂಡ ಆರೋಗ್ಯಕರವಾಗಿ ಬೆಳೆಯುತ್ತದೆ. ಅಸಮಾನ ಸಮಾಜದ ಸಂತ್ರಸ್ಥವರ್ಗವಾದ ದಲಿತರ ಒಂದು ಚಿಂತನಾಧಾರೆ ತನಗಾದ ಗಾಯಗಳನ್ನು ಮರೆತು ಭಾಷೆಯ ಉಳಿವಿಗೆ ತುಡಿಯುತ್ತಿರುವುದು ಕನ್ನಡದ ಭರವಸೆಯಾಗಿದೆ.

ಟಿಪ್ಪಣಿಗಳು

೧. ನಾಗಭೂಷಣಸ್ವಾಮಿ ಓ.ಎಲ್., ನುಡಿಯೊಳಗಾಗಿ, ಪು. ೮೦

೨. ಶರ್ಮ ಆರ್.ಎಸ್., ಪ್ರಾಚೀನ ಭಾರತದಲ್ಲಿ ಶೂದ್ರರು, ಪು. ೧೭೩

೩. ಭಗವತ್ ಶರಣ ಉಪಾಧ್ಯಾಯ, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ಅನು.ಪ್ರಧಾನ್ ಗುರುದತ್ತ, ಪು. ೧೧

೪. ಧರ್ಮಪಾಲ್, (ಅ: ಮಾಧವ ಪೆರಾಜೆ), ಚೆಲುವ ತರು (ಇಂಗ್ಲಿಶ್ ಮೂಲ : ದಿ ಬ್ಯೂಟಿಫುಲ್ ಟ್ರೀ), ಪು. ೨೧,೨೩

೫. ನಾಗರಾಜ ಡಿ.ಆರ್., ಸಂಸ್ಕೃತಿ ಕಥನ, ಪು. ೮೦

೬. ಅದೇ, ಪು. ೯೩

೭. ಬರಗೂರು ರಾಮಚಂದ್ರಪ್ಪ, ಕನ್ನಡಾಭಿಮಾನ, ಪು. ೨೭

೮. ಬರಗೂರು ರಾಮಚಂದ್ರಪ್ಪ, ಕನ್ನಡಪ್ರಜ್ಞೆ, ಪು. ೧೦೦-೨

೯. ಬರಗೂರು ರಾಮಚಂದ್ರಪ್ಪ, ಕನ್ನಡಾಭಿಮಾನ, ಪು. ೨೮

೧೦. ಅದೇ, ಪು. ೧೦೬

೧೧. ಬರಗೂರು ರಾಮಚಂದ್ರಪ್ಪ, ಕನ್ನಡಪ್ರಜ್ಞೆ, ಪು. ೧೧೦

೧೨. ಅದೇ, ಪು. ೧೦೦-೨

೧೩. ರಾಮಮನೋಹರ ಲೋಹಿಯಾ, ರಾಮಮನೋಹರ ಲೋಹಿಯಾ ಚಿಂತನೆ, ಪು. ೨೮೪

೧೪. ಬರಗೂರು ರಾಮಚಂದ್ರಪ್ಪ, ಕನ್ನಡಪ್ರಜ್ಞೆ, ಪು. ೧೯೪

೧೫. ಅದೇ, ಪು. ೧೧೦

೧೬. ಅದೇ, ಪು. ೧೪೮

೧೭. ಅದೇ, ಪು. ೫೭

೧೮. ಅದೇ, ಪು. ೨೧೫

೧೯. ಬರಗೂರು ರಾಮಚಂದ್ರಪ್ಪ , ಕನ್ನಡಾಭಿಮಾನ, ಪು. ೫೮

೨೦. ಅದೇ, ಪು. ೧೧೦

೨೧. ಅದೇ, ಪು. ೨೪

೨೨. ಪೂರ್ಣಚಂದ್ರ ತೇಜಸ್ವಿ, ಸಮಕಾಲೀನ ಸಾಂಸ್ಕೃತಿಕ ಚರ್ಚೆಗಳು, ಪು. ೩೯-೫೧

೨೩. ಬರಗೂರು ರಾಮಚಂದ್ರಪ್ಪ, ಕನ್ನಡಾಭಿಮಾನ, ಪು. ೧೩

೨೪. ಒಕ್ಕುಂದ ಎಂ.ಡಿ., ಗೌರಿ ಲಂಕೇಶ್ ವಾರಪತ್ರಿಕೆ, ನವೆಂಬರ್ ೨೯, ೨೦೧೩, ಪು. ೪

೨೫. ಅದೇ, ಪು. ೪

೨೬. ಬರಗೂರು ರಾಮಚಂದ್ರಪ್ಪ, ಕನ್ನಡಪ್ರಜ್ಞೆ, ಪು. ೧೮೬

೨೭. ನಾರಾಯಣ ಕೆ.ವಿ., ಕನ್ನಡ ಜಗತ್ತು ಅರ್ಧ ಶತಮಾನ, ಪು. ೩೧೩

೨೮. ಸಿದ್ದಯ್ಯ., ಕೆ.ಬಿ., ಸಮ್ಮೇಳನಾಧ್ಯಕ್ಷರ ಭಾಷಣ, ತುಮಕೂರು ಜಿಲ್ಲಾ ೧೨ನೇ ಕನ್ನಡ ಸಾಹಿತ್ಯ
ಸಮ್ಮೇಳನ, ೨/೩ ಮಾರ್ಚ್, ೨೦೧೭

೨೯. ನಾರಾಯಣ ಕೆ.ವಿ., ಕನ್ನಡ ಜಗತ್ತು - ಅರ್ಧ ಶತಮಾನ, ಪು. ೧೩೯

೩೦. ರಂಗನಾಥ ಕಂಟನಕುಂಟೆ, ಜನಭಾಷೆ ಮತ್ತು ಪ್ರಭುತ್ವಭಾಷೆಗಳ ಸಂಘರ್ಷ, ಪು. ೨೩೪

೩೧. ಅದೇ, ಪು. ೨೩೪

ಅಧ್ಯಾಯ ೮

ಪ್ರಮಾಣ ಭಾಷೆ

೮ ಪ್ರಮಾಣ ಭಾಷೆ

೮.೧ ಪೀಠಿಕೆ

೮.೨ ಭಾಷೆಯನ್ನು 'ಶ್ರೇಷ್ಠ' ಅಥವಾ 'ಕನಿಷ್ಠ' ಮಾಡುವ ಸಂಗತಿಗಳು

೮.೩ ಜಾತಿವ್ಯವಸ್ಥೆಯಂತೆಯೇ ಭಾಷೆಗಳ ಶ್ರೇಣೀಕೃತ ವ್ಯವಸ್ಥೆ

೮.೪ ಬರವಣಿಗೆ ಉತ್ತಮ; ಮಾತು ಅಧಮ ಎಂಬ ಮಿಥ್ಯೆ

೮.೫ ಪ್ರಮಾಣ ಭಾಷೆ ಸುಗಮ ನಿರ್ವಹಣೆಗಾಗಿ ಎನ್ನುವ ಆಂಶಿಕ ಸತ್ಯ

೮.೬ ಪ್ರಮಾಣ ಭಾಷೆಯ ಮೇಲೆ ಚಳುವಳಿಗಳ ಪ್ರಭಾವ

೮.೭ ಸಾಮಾಜಿಕ ತಾರತಮ್ಯವನ್ನು ಹೋಗಲಾಡಿಸುವ ಪ್ರಯತ್ನ

೮.೮ ಸಾಹಿತ್ಯ ರಚನೆಯಲ್ಲಿ ಭಾಷಾಪ್ರಭೇದಗಳ ಬಳಕೆಯ ತೊಡಕುಗಳು

೮.೯ ಶಾಲಾಪಠ್ಯದಲ್ಲಿ ಮತ್ತು ಸಾಹಿತ್ಯದಲ್ಲಿ ಭಾಷಾ ಪ್ರಭೇದದ ಬಳಕೆಯಿಂದ ಸೀಮಿತ ಪರಿಣಾಮ

೮.೧೦ ಪ್ರಮಾಣ ಭಾಷೆ : ಪ್ರಾತಿನಿಧಿಕ ಚಿಂತನೆಗಳು

೮.೧೦.೧ ಬಿ.ಎಂ.ಶ್ರೀ ಅವರ ಚಿಂತನೆ

೮.೧೦.೨ ಚಿದಾನಂದಮೂರ್ತಿ ಅವರ ಚಿಂತನೆ

೮.೧೦.೩ ಸುಬ್ಬಣ್ಣ ಅವರ ಚಿಂತನೆ

ಅಧ್ಯಾಯ ೮

ಪ್ರಮಾಣ ಭಾಷೆ

೮.೧ ಪೀಠಿಕೆ

ಭಾಷಿಕ ಸಮುದಾಯವೊಂದು ತನ್ನ ಭಾಷೆಯ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳಲ್ಲಿ ಒಂದನ್ನು ಅತ್ಯುನ್ನತ ಭಾಷಾ ಪ್ರಭೇದವಾಗಿ ವ್ಯಾಪಕವಾಗಿ ಒಪ್ಪಿಕೊಳ್ಳುವ ಮತ್ತು ಕೆಲವು ವಲಯಗಳ ಬಳಕೆಗೆ ಆ ಪ್ರಭೇದ ಸೂಕ್ತವಾದುದು ಎಂದು ಭಾವಿಸುವ ಪ್ರಕ್ರಿಯೆ ಭಾಷೆಯ ಪ್ರಮಾಣೀಕರಣದ ಪ್ರಕ್ರಿಯೆ ಆಗಿರುತ್ತದೆ' ಎಂದು ತಮ್ಮ ಕೃತಿ 'ಲ್ಯಾಂಗ್ವೇಜ್ ಪ್ರಾಬ್ಲಮ್ಸ್ ಆಫ್ ಡೆವಲಪಿಂಗ್ ನೇಷನ್ಸ್' ಕೃತಿಯಲ್ಲಿ ಚಾರ್ಲ್ಸ್ ಫರ್ಗ್ಯುಸನ್ ವ್ಯಾಖ್ಯಾನಿಸುತ್ತಾರೆ. ಈ ವ್ಯಾಖ್ಯಾನ ಭಾಷೆಯ ಪ್ರಮಾಣೀಕರಣವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಹಾಯಕವಾಗಿದೆ. ಆದರೆ ಈ ವ್ಯಾಖ್ಯಾನದ ಚೌಕಟ್ಟಿನಲ್ಲಿ ನೋಡುವುದಾದರೆ ಇಲ್ಲಿ 'ಭಾಷಿಕ ಸಮುದಾಯ' ಎನ್ನುವುದು ಏಕಘನಾಕೃತಿಯಂತೆ ಕಾಣುತ್ತದೆ. ಸಮುದಾಯವೊಂದನ್ನು ಅದು ಬಳಸುವ ಭಾಷೆಯ ಆಧಾರದಲ್ಲಿ 'ನಿರ್ದಿಷ್ಟ ಭಾಷಿಕ ಸಮುದಾಯ' ಎಂದು ಗುರುತಿಸುವುದು ಸರಿಯಾದುದು. ಆದರೆ ಆ ಭಾಷಿಕ ಸಮುದಾಯದೊಳಗಿರುವ ಧರ್ಮಗಳು, ಜಾತಿಗಳು, ಆರ್ಥಿಕವಾಗಿ ಸಬಲರಾಗಿರುವವರು, ದುರ್ಬಲರಾಗಿರುವವರು ಇವುಗಳು ಸೃಷ್ಟಿಸಿದ ಮೇಲರಿಮೆ, ಕೀಳರಿಮೆಗಳನ್ನು ಈ ವ್ಯಾಖ್ಯಾನ ಒಳಗೊಳ್ಳುವುದಿಲ್ಲ. ಇದು ಒಳಗೊಳ್ಳುವುದು ಮುಖ್ಯವಾದುದು ಏಕೆಂದರೆ ಒಂದು ಭಾಷಿಕ ಸಮುದಾಯದೊಳಗಿನ ಈ ರೀತಿಯ ಭಿನ್ನತೆಗಳು ಮತ್ತು ಅವು ಸೃಷ್ಟಿಸಿದ ತರತಮಗಳೇ 'ಭಾಷೆಯ ಪ್ರಮಾಣೀಕರಣ'ವನ್ನು ಪ್ರಧಾನವಾಗಿ ಪ್ರಭಾವಿಸುವ ಸಂಗತಿಗಳಾಗಿರುವುದು.

ಒಂದು ಭಾಷೆ ಎಂದರೆ, ಅದು ಆ ಭಾಷೆಯನ್ನಾಡುವ ಜನಸಮುದಾಯದ ಆಲೋಚನಾ ವಿಧಾನವನ್ನು ಪ್ರಕಟಪಡಿಸುವ ಮಾಧ್ಯಮವೂ ಹೌದು, ಅದರಂತೆ, ಒಂದು ಭಾಷೆಯ ಹೇರಿಕೆಯ ವಿರೋಧ, ಆ ಸಂಸ್ಕೃತಿಯ ವಿರೋಧವೂ ಆಗಿಬಿಡುತ್ತದೆ. ಈ ಕಾರಣಗಳಿಗಾಗಿ ಹಲವು ಭಾಷೆಗಳ ನಡುವೆ ಒಂದನ್ನು ಅಥವಾ ಭಾಷೆಯೊಂದರ ನಿರ್ದಿಷ್ಟ ಪ್ರಾದೇಶಿಕ ಪ್ರಭೇದವನ್ನು ಪ್ರಮಾಣೀಕರಣದ ಭಾಷೆಯನ್ನಾಗಿ ಸ್ವೀಕರಿಸುವ ಬಗ್ಗೆ ಲಾಗಾಯ್ತಿನಿಂದಲೂ ವಾಗ್ವಾದಗಳು ನಡೆಯುತ್ತಲೇ ಬಂದಿವೆ. ಹೀಗಿದ್ದರೂ ರಾಷ್ಟ್ರೀಯತೆಯೊಂದನ್ನು ಪ್ರತಿಪಾದಿಸುವಾಗ ಪ್ರಮಾಣಿಕೃತ ಭಾಷೆಯ ಅಗತ್ಯವನ್ನು ಬಹುಪಾಲು ಎಲ್ಲಾ ಧಾರೆಗಳು ಪ್ರತಿಪಾದಿಸುತ್ತವೆ. ಅದು ಬಹುಪಾಲು ಆಡಳಿತ ಕೇಂದ್ರದ ಪರಿಸರದ ಭಾಷೆಯೇ ಆಗಿರುವುದನ್ನು ಗಮನಿಸಬಹುದು. ಒಂದೋ ಆ ಭಾಷೆಯನ್ನು ನೇರವಾಗಿ ಮಾನ್ಯ ಮಾಡುವಂತೆ ಪ್ರತಿಪಾದಿಸುತ್ತವೆ. ಇಲ್ಲವೇ ಬಳಸುವುದರ ಮೂಲಕ ವ್ಯಕ್ತಪಡಿಸುತ್ತವೆ. ಈ ವಿಚಾರದಲ್ಲಿ ಬಹುಮುಖಿ ವಾದಗಳೆಲ್ಲ ಬಹುಮಟ್ಟಿಗೆ ಅಪ್ರಸ್ತುತವಾಗುತ್ತವೆ.

೮.೨ ಭಾಷೆಯನ್ನು 'ಶ್ರೇಷ್ಠ' ಅಥವಾ 'ಕನಿಷ್ಠ' ಮಾಡುವ ಸಂಗತಿಗಳು

ಭಾಷೆಯನ್ನು 'ಶ್ರೇಷ್ಠ' ಅಥವಾ 'ಕನಿಷ್ಠ'ವೆಂದು ನಿರ್ಣಯಿಸುವ ಎರಡು ನೆಲೆಗಳನ್ನು ಗುರುತಿಸಬಹುದು. ಅವುಗಳೆಂದರೆ ೧. ಭಾಷಿಕ ಸ್ವರೂಪದ ನೆಲೆ ೨. ವರ್ಗ ನೆಲೆ.

೧. ಭಾಷಿಕ ಸ್ವರೂಪದ ನೆಲೆ : ಬರಹದ ಭಾಷೆಗೆ ಮೂಲ ಆಡುಭಾಷೆ, ಆದ್ದರಿಂದ ಅದಕ್ಕೆ ಮೊದಲ ಮಾನ್ಯತೆ ಸಿಗಬೇಕು ಎಂಬ ಅರಿವು ಆಧುನಿಕ ಸಂದರ್ಭದಲ್ಲಿ ಮೂಡಿದ್ದರೂ ಆಡುಭಾಷೆ ಮತ್ತು ಬರಹದ ಭಾಷೆಯ ನಡುವೆ ಬರಹದ ಭಾಷೆ ಶ್ರೇಷ್ಠವೆಂಬ ಭಾವನೆ ಇನ್ನೂ ಚಾಲ್ತಿಯಲ್ಲಿದೆ. ಆಡುಭಾಷೆ ಮತ್ತು ಬರಹದ ಭಾಷೆಯ ನಡುವೆ ಕಂದರಗಳಿಲ್ಲದಿದ್ದಾಗ ಶ್ರೇಷ್ಠ ಅಥವಾ ಕನಿಷ್ಠ ಎಂಬ ಭಾವನೆಗಳಿಗೆ ಆಸ್ಪದವಿರುವುದಿಲ್ಲ. ಆದರೆ ಕನ್ನಡವನ್ನೂ ಒಳಗೊಂಡಂತೆ ಹಲವು ಭಾಷೆಗಳಲ್ಲಿ ಈ ಕಂದರ ಆಳವಾಗಿರುವುದರಿಂದ ಶ್ರೇಷ್ಠ–ಕನಿಷ್ಠ ಭಾವನೆಗಳು ಮುಂದುವರೆದುಕೊಂಡು ಬರುತ್ತಿವೆ.

ಇಂಗ್ಲಿಶ್ ಭಾಷೆಯನ್ನು ತೆಗೆದುಕೊಂಡರೆ ಮೊದಲಿಗೆ ಇಂಗ್ಲಿಶ್‌ನಲ್ಲಿ ಪದಗಳನ್ನು ಅವುಗಳ ಉಚ್ಚಾರಣೆ ಹೇಗಿದೆಯೋ ಹಾಗೆಯೇ ಬರೆಯಲಾಗುತ್ತಿತ್ತು. ಆದರೆ ಹದಿನೆಂಟನೆಯ ಶತಮಾನದಲ್ಲಿ ಜಾನ್ಸನ್ ಎಂಬ ಒಬ್ಬ ವಿದ್ವಾಂಸ ಪದಗಳ ಬರಹದಲ್ಲಿ ಅವುಗಳ ಉಚ್ಚಾರಣೆಗಿಂತಲೂ ಇತಿಹಾಸಕ್ಕೆ ಹೆಚ್ಚಿನ ಮಹತ್ವ ಕೊಡಬೇಕೆಂದು ಭಾವಿಸಿ, ಆ ರೀತಿ ಅವಕ್ಕೆ ಹೊಸ ರೂಪವನ್ನು ಕೊಡುವ ಪ್ರಯತ್ನವನ್ನು ತನ್ನ ಇಂಗ್ಲಿಶ್ ಪದಕೋಶದಲ್ಲಿ ನಡೆಸಿದ. ಅವುಗಳ ಬಳಕೆ ತೀರ ಅನವಶ್ಯಕವಾದ ಒಂದು ಗೊಂದಲದ ಗೂಡಾಗಿದೆ. ಇಂಗ್ಲಿಶ್ ಭಾಷೆಯ ಈ ಸ್ಪೆಲ್ಲಿಂಗ್ ಸಮಸ್ಯೆಯಿಂದಾಗಿ ಶಾಲೆಗಳಲ್ಲಿ ಸುಮಾರು ಐದರಲ್ಲೊಂದು ಪಾಲಿನಷ್ಟು ಸಮಯ ಈ ಅನವಶ್ಯಕವಾದ ಸ್ಪೆಲ್ಲಿಂಗ್ ಕಲಿಕೆಗಾಗಿ ವೆಚ್ಚವಾಗುತ್ತದೆಂದು ಲೆಕ್ಕ ಹಾಕಲಾಗಿದೆ![೧] ಪೂರ್ಣಚಂದ್ರ ತೇಜಸ್ವಿಯವರು ಮತ್ತು ಅವರ ಸಹಪಾಠಿಗಳು ಪರೀಕ್ಷೆಯಲ್ಲಿ ಆಡುಮಾತಿನಂತೆಯೇ ಇಂಗ್ಲಿಶ್ ಪದಗಳನ್ನು ಬರೆದು, ಅದು ಕುಲಪತಿಗಳಾಗಿದ್ದ ಕುವೆಂಪು ಅವರ ತನಕ ಹೋದ ಸ್ವಾರಸ್ಯಕರ ಪ್ರಸಂಗ ಅವರ 'ಅಣ್ಣನ ನೆನಪು' ಪುಸ್ತಕದಲ್ಲಿದೆ. ಇಲ್ಲಿ ತೇಜಸ್ವಿ ಮತ್ತು ಸಹಪಾಠಿಗಳಿಗೆ ಪ್ರೇರಣೆ ನೀಡಿದ್ದು ರಾಮಮನೋಹರ ಲೋಹಿಯಾ ಅವರ ಚಿಂತನೆಗಳು. 'ಲೋಹಿಯಾ ಆರಂಭಿಸಿದ 'ಇಂಗ್ಲಿಶ್ ತೊಲಗಿಸಿ' ಚಳುವಳಿಯ ಹಿಂದೆ ಗಾಂಧೀಜಿಯ ಮಾತೃಭಾಷೆ ಪರವಾದ ಚಿಂತನೆಯಿತ್ತು. ಕರ್ನಾಟಕದಲ್ಲಿ ಅನೇಕರಿಗೆ, ಅದರಲ್ಲೂ ವೈಯಕ್ತಿಕವಾಗಿ ಕಾಲೇಜು ಓದಿನಲ್ಲಿ ಇಂಗ್ಲಿಶಿನಿಂದ ಹಿಂಸೆ ಅನುಭವಿಸಿದ್ದ ತೇಜಸ್ವಿ, ಕೋಣಂದೂರು ಲಿಂಗಪ್ಪ, ಕಡಿದಾಳು ಶಾಮಣ್ಣ ಮುಂತಾದವರಿಗೆ ಬಹಳ ಹಿಡಿಸಿತು. ಮಾತೃಭಾಷೆಗಳಲ್ಲಿ ಮಾತಾಡುವುದು ಮತ್ತು ಬರೆಯುವುದು ಇವರಲ್ಲಿ ತಾತ್ವಿಕ ಬದ್ಧತೆಯ ವಿಷಯವಾಯಿತು. ಇದು ಪರೋಕ್ಷವಾಗಿ ಕನ್ನಡಪರ ಚಳುವಳಿಗೆ ಪ್ರೇರಣೆ ಕೊಟ್ಟಿತು.

ಇಂಗ್ಲಿಶ್ ಭಾಷೆಯೊಂದನ್ನು ಬಿಟ್ಟು ಫ್ರೆಂಚ್, ಜರ್ಮನ್, ಇಟಾಲಿಯನ್, ರಷ್ಯನ್ ಮೊದಲಾದ ಇತರ ಯುರೋಪಿಯನ್ ಭಾಷೆಗಳಲ್ಲೆಲ್ಲ ಪದಗಳ ಉಚ್ಚಾರಣೆಗೂ ಬರಹಕ್ಕೂ ನಡುವೆ

ನೇರವಾದ ಹೊಂದಾಣಿಕೆಯಿದೆ ಮತ್ತು ಇದರಿಂದಾಗಿ ಆ ಭಾಷೆಗಳಲ್ಲಿ ಇಂಗ್ಲಿಶ್‌ನಂತಹ ಸ್ಪೆಲ್ಲಿಂಗ್ ಸಮಸ್ಯೆಯಿಲ್ಲ. ಜಾನ್ಸನ್ ಇಂಗ್ಲಿಶ್ ಭಾಷೆಯ ಸಂದರ್ಭದಲ್ಲಿ ಮಾಡಿದ ತಪ್ಪನ್ನೇ ಅಮೀಸ್ (ಒಸಮಿಯ) ಭಾಷೆಯ ಪಂಡಿತರೂ ಮಾಡಿದುದರಿಂದಾಗಿ ಅದರ ಬರಹದಲ್ಲೂ ಇಂಗ್ಲಿಶ್‌ನ ಹಾಗೆ ಹಲವು ರೀತಿಯ ಸ್ಪೆಲ್ಲಿಂಗ್ ಸಮಸ್ಯೆಗಳು ಕಾಣಿಸುತ್ತಿವೆ. ಅಸಮೀಸ್ ಲಿಪಿಯನ್ನು ಕ್ರಿಶ್ಚಿಯನ್ ಮಿಷಿನರಿಗಳು ಸರಿಯಾಗಿಯೇ ಆ ಭಾಷೆಯ ಉಚ್ಚಾರಣೆಗೆ ಹೊಂದಿಕೆಯಾಗುವ ಹಾಗೆ ಬಳಸಿ ಪುಸ್ತಕಗಳನ್ನು ಅಚ್ಚು ಹಾಕಿದ್ದರು. ಆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅಸಮೀಸ್ ವಿದ್ವಾಂಸರು ಒಟ್ಟು ಸೇರಿ ಮಿಶನರಿಗಳು ಬಳಸುವ ಬರಹದಲ್ಲಿ ಆ ಪದಗಳಿಗೆ ಸಂಸ್ಕೃತದಲ್ಲಿರುವ ಮೂಲ ರೂಪ ಸರಿಯಾಗಿ ಸೂಚಿತವಾಗುವುದಿಲ್ಲವೆಂದು ಪದಗಳ ಚರಿತ್ರೆಯನ್ನು ಸೂಚಿಸುವಂತಹ ಸ್ವರೂಪವನ್ನು ಅವಕ್ಕೆ ಕೊಟ್ಟು ಅವನ್ನು ಕಲಿಯುವ ಕೆಲಸ ಅತ್ಯಂತ ಕ್ಲಿಷ್ಟವಾಗುವ ಹಾಗೆ ಮಾಡಿದರು. ಇಂಗ್ಲಿಶ್ ಮತ್ತು ಅಸಮೀಸ್‌ನ ವಿದ್ವಾಂಸರಂತೆ ಹಳೆಗನ್ನಡದ ರೂಪದಂತೆ ಇಂದೂ ಉಳಿಸಿಕೊಂಡಿದ್ದರೆ ಆ ಭಾಷೆಗಳಂತೆ ಕನ್ನಡದ ಪದಗಳೂ ಅವುಗಳ ಇತಿಹಾಸ ಮತ್ತು ಸಂಸ್ಕೃತಿಗಳನ್ನು ತೋರಿಸಿಕೊಡುತ್ತಿತ್ತು. ಆದರೆ ನಮ್ಮ ಪೂರ್ವಿಕರು ಹಾಗೆ ಮಾಡಲಿಲ್ಲ. ಇಂತಹ ಸಂದರ್ಭಗಳಲ್ಲೆಲ್ಲ ಅವರು ತಮ್ಮ ಬರಹವನ್ನು ಉಚ್ಚಾರಣೆಗನುಸಾರವಾಗಿ ಬದಲಾಯಿಸಿಕೊಂಡಿದ್ದಾರೆ. ಅದರಿಂದಾಗಿ ಇವತ್ತು ಕನ್ನಡದಲ್ಲಿ ಕನ್ನಡದವೇ ಆದ ಪದಗಳನ್ನು ಬರೆಯುವ ಮತ್ತು ಓದುವ ಕೆಲಸ ಬಹಳ ಸುಲಭವಾಗಿದೆ ಎಂದು ಡಿ.ಎನ್ ಶಂಕರ ಭಟ್ಟರು ಅಭಿಪ್ರಾಯ ಪಡುತ್ತಾರೆ. ಆದರೂ ಬರಹದಲ್ಲಿರುವ ಕನ್ನಡದ ಪ್ರಮಾಣ ಭಾಷೆ ಉನ್ನತಸ್ಥಾನವನ್ನು ಪಡೆದಂತೆ ತೋರುತ್ತದೆ. ವ್ಯಂಗ್ಯವೆಂದರೆ ಈ ಪ್ರಮಾಣಭಾಷೆ ಯಾರ ಆಡುಭಾಷೆಯೂ ಅಲ್ಲ.

ಇಂಗ್ಲಿಶ್ ಮತ್ತು ಅಸಮೀಸ್ ಭಾಷೆಗಳಿಗೆ ಹೋಲಿಸಿದರೆ ಕನ್ನಡದಲ್ಲಿ ಆಡುಭಾಷೆ ಮತ್ತು ಬರಹದ ನಡುವೆ ಅಷ್ಟು ಅಂತರವಿಲ್ಲ ನಿಜ, ಆದರೆ ಕನ್ನಡಕ್ಕೆ ಸಂಸ್ಕೃತದ ಪದಗಳು ಹೊರೆಯಾಗುವಷ್ಟಿದೆ ಎನ್ನುವ ಅಭಿಪ್ರಾಯ ಸರಿಸುಮಾರು ಸಾವಿರ ವರ್ಷಗಳಷ್ಟು ದೀರ್ಘಕಾಲದಿಂದ ಚಾಲ್ತಿಯಲ್ಲಿದೆ. ಇಂತಹ ಸಂಸ್ಕೃತದ ಹೊರೆಯನ್ನು ಕನ್ನಡದ ಹೆಗಲಿನಿಂದ ಇಳಿಸುವ ಪ್ರಯತ್ನಗಳೂ ಈ ಕಾಲಾವಧಿಯಲ್ಲಿ ಆಗಾಗ ನಡೆಯುತ್ತ ಬಂದಿವೆ. ವರ್ತಮಾನದಲ್ಲಿ ಡಿ.ಎನ್ ಶಂಕರ ಭಟ್ಟರು ಈ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ.

೨. **ವರ್ಗ ನೆಲೆ** : ಅಮೂರ್ತವಾಗಿರುವ ಯಾವುದೇ ಭಾಷೆ ಮೂರ್ತವಾಗುವುದು ಅದನ್ನಾಡುವ ಜನರಿಂದ. ಸಮಾಜದ ಪ್ರತಿಷ್ಠಿತ ವರ್ಗದ ಜನರಾಡುವ ಭಾಷೆ ಪ್ರತಿಷ್ಠಿತವಾಗಿಯೂ, ಕೆಳವರ್ಗದ ಜನರಾಡುವ ಭಾಷೆ ಕೀಳುಭಾಷೆಯಾಗಿಯೂ ಪರಿಗಣಿತವಾಗುವುದು ಎರಡು ಸಂಗತಿಗಳನ್ನು ಸ್ಪಷ್ಟಪಡಿಸುತ್ತವೆ. ಒಂದು ಭಾಷೆ ಶ್ರೇಷ್ಠ ಅಥವಾ ಕನಿಷ್ಠ ಅನ್ನಿಸಿಕೊಳ್ಳಲು

ಮಾನದಂಡವಾಗಿರುವುದು ಅದೊರಳಗಿರುವ ಅಂತಃಸತ್ವಕ್ಕಿಂತ ಅದನ್ನಾಡುವವರ ವರ್ಗ, ಪ್ರಭುತ್ವದಲ್ಲಿ ಅದಕ್ಕಿರುವ ಸ್ಥಾನಗಳು. ಎರಡು, ಆ ಭಾಷೆಯಾಡುವವರ ಸಾಮಾಜಿಕ ಸ್ಥಾನಮಾನ, ಅಧಿಕಾರಗಳು ಪಲ್ಲಟಗೊಳ್ಳುತ್ತಿದ್ದಂತೆ ಭಾಷೆಯ ಸ್ಥಾನಮಾನಗಳು ಪಲ್ಲಟಗೊಳ್ಳುತ್ತವೆ ಎನ್ನುವುದು. ಇದರೊಂದಿಗೆ ಭಾಷೆಯೊಂದು ಮೇಲ್ದರ್ಜೆಯ ಸ್ಥಾನಮಾನ ಪಡೆಯಲು ಅವುಗಳಿಗೆ ಲಗತ್ತಾದ 'ಪಾವಿತ್ರ್ಯ'ದ ಅಂಶವೂ ಕಾರಣವಾಗಬಹುದು. 'ಐರೋಪ್ಯ ನವೋದಯ ಕಾಲದಲ್ಲಿ ಜಗತ್ತಿನ ಹಲವು ಖಂಡಾಂತರಗಳು ಮತ್ತೆ ಜಗತ್ತಿನ ಭೂಪಟದಲ್ಲಿ ಕಾಣಿಸಿಕೊಂಡವು. ಅಲ್ಲಿ ನೆಲೆಸಿದ ಐರೋಪ್ಯರಿಗೆ ಮೂಲ ನಿವಾಸಿಗಳು ಭಿನ್ನರಾಗಿ ಕಂಡರು. ಅಲ್ಲದೆ 'ಆದಿಮ'ರಾಗಿ 'ಪ್ರಾಕೃತ'ರಾಗಿ ಕಂಡರು. ಅನಾಗರಿಕರಾಗಿ ತೋರಿದರು. ಅವರ ಭಾಷೆಗಳೂ 'ಆದಿಮ'ವೆನಿಸಿದವು.. .. .. ಪ್ರಾಕೃತ ಭಾಷೆಗಳ ಪರಿಕಲ್ಪನೆ ಒಂದು ತುದಿ. ದೇವಭಾಷೆಗಳದ್ದು ಇನ್ನೊಂದು ತುದಿ. ಸಂಸ್ಕೃತವನ್ನು ಗೀರ್ವಾಣ ಭಾಷೆಯೆಂದು, ದೇವಭಾಷೆಯೆಂದೂ ವಾದಿಸುವವರಿದ್ದಾರೆ. ಅದರಿಂದಾಗಿ ಭಾಷೆಗೆ ಪಾವಿತ್ರ್ಯ ಸಂದಿದೆಯೆಂದು ತಿಳಿಯುವರು. ಕ್ರೈಸ್ತರು ಲ್ಯಾಟೀನನ್ನು, ಮುಸ್ಲಿಮರು ಅರೇಬಿಕ್ ಅನ್ನು ಯಹೂದಿಗಳು ಹಿಬ್ರೂವನ್ನು ಧಾರ್ಮಿಕ ವಲಯದ ಉನ್ನತೀಕರಣ ಮತ್ತು ಪಾವಿತ್ರ್ಯವನ್ನು ಕಾಯ್ದುಕೊಳ್ಳಲು ಬಳಸುತ್ತಾರೆ' ಎಂದು ತಮ್ಮ ಸಂಪಾದಿತ ಕೃತಿಯಲ್ಲಿ ಕೆ.ವಿ ನಾರಾಯಣ ಅವರು ವಿವರಿಸುತ್ತಾರೆ.

ಭಾಷೆಯೊಂದು ಸ್ಥಾನಮಾನ ಗಳಿಸಲು ಭಾಷೆಯೇ ಕಾರಣವಾಗಿಲ್ಲ ಎಂದು ಅರಿವಿದ್ದಾಗಲೂ ಆಚರಣೆಯಲ್ಲಿ ಭಾಷೆಯ ಸ್ಥಾನಮಾನ ಸಮಾನವಾಗಿಲ್ಲ. ದೇವಭಾಷೆ, ರಾಜಭಾಷೆ, ಜನಭಾಷೆ ಎಂಬ ಮಾತುಗಳನ್ನು ಕೇಳುತ್ತೇವೆ. ಒಂದೊಂದು ಭಾಷೆಗೆ ಒಂದೊಂದು ಕೆಲಸ. ಒಂದು ಭಾಷೆ ಮಾಡುವ ಕೆಲಸವನ್ನು ಇನ್ನೊಂದು ಭಾಷೆ ಮಾಡಲಾರದು ಎಂಬ ನಂಬಿಕೆ ಬಹುಕಾಲ ಗಾಢವಾಗಿತ್ತು. ಇನ್ನೂ ಈ ಪರಿಸ್ಥಿತಿ ಬದಲಾಗಿಲ್ಲ. ಸಂಸ್ಕೃತ ಇಂಗ್ಲಿಶ್ / ಹಿಂದಿ ಕನ್ನಡಗಳ ಸ್ಥಾನಮಾನಗಳನ್ನು ನೋಡಿದರೆ ಭಾಷೆಗಳು ಸಮಾನವೆಂಬ ಮಾತು ಆಚರಣೆಯಲ್ಲಿ ಇಲ್ಲವೆಂಬುದು ಗೊತ್ತಾಗುತ್ತದೆ.

೮.೩ ಜಾತಿವ್ಯವಸ್ಥೆಯಂತೆಯೇ ಭಾಷೆಗಳ ಶ್ರೇಣೀಕೃತ ವ್ಯವಸ್ಥೆ

ಸಂಸ್ಕೃತ, ಇಂಗ್ಲಿಶ್ ಮತ್ತು ಹಿಂದಿ ಭಾಷೆಗಳು ಕನ್ನಡವನ್ನು ತಾರತಮ್ಯದ ನೆಲೆಯಲ್ಲಿ ನೋಡುತ್ತವೆ ಎನ್ನುವುದು ಸತ್ಯವಾಗಿರುವಂತೆಯೇ ಸ್ವತಃ ಕನ್ನಡ ಕೂಡ ಕರ್ನಾಟಕದ ಸ್ಥಳೀಯ ಭಾಷೆಗಳನ್ನು ತಾರತಮ್ಯದ ನೆಲೆಯಲ್ಲಿಯೇ ನೋಡುತ್ತದೆ. ಸೋಲಿಗ, ಕೊರಗ, ಬಡಗದಂತಹ ಹಲವಾರು ಗುಡ್ಡಗಾಡು ಜನರ ಭಾಷೆಗಳನ್ನು ಕನ್ನಡದೊಡನೆ ಇರಿಸಿದಾಗ ಭಾಷೆಗಳ ನಡುವಣ ಅಸಮಾನತೆ ಇನ್ನಷ್ಟು ಗಾಢವಾಗಿ ತಿಳಿಯುತ್ತದೆ ಕರಾವಳಿ ಭಾಗದ ಕನ್ನಡದ ಕಾದಂಬರಿಕಾರರಾದ

ಎಚ್.ನಾಗವೇಣಿ, ಪ್ರಾಧ್ಯಾಪಕ ಪುರುಶೋತ್ತಮ ಬಿಳಿಮಲೆ ಅವರು ಕನ್ನಡವು ತುಳುವನ್ನು ಕೆಳದರ್ಜೆಯಲ್ಲಿ ನೋಡುವ ಸಂಗತಿಯನ್ನು ತಮ್ಮ ಬರಹಗಳಲ್ಲಿ ದಾಖಲಿಸಿದ್ದಾರೆ.

ಮಾನವಜಗತ್ತಿನ ತರತಮಗಳ ಧರ್ಮ ಮತ್ತು ಜಾತಿವ್ಯವಸ್ಥೆಯಂತೆಯೇ ಭಾಷೆಗಳ ವ್ಯವಸ್ಥೆಯೂ ಇದೆ. ವಿವಿಧ ಜನವರ್ಗಗಳು ಪಡೆದಿರುವ ರಾಜಕೀಯ ಅಧಿಕಾರ ಮತ್ತು ಸಾಮಾಜಿಕ ಸ್ಥಾನಮಾನಗಳಿಗೆ ಅನುಸಾರವಾಗಿ ಭಾಷೆಗಳ ಸ್ಥಾನಗಳು ನಿರ್ಧಾರವಾಗುತ್ತವೆ. ಇಂದು ವಿಶ್ವದಾದ್ಯಂತ ಜೀವಂತವಿರುವ ಸುಮಾರು ೭೦೦೦ ಭಾಷೆಗಳನ್ನು ಸಣ್ಣಭಾಷೆಗಳೆಂದು ಗುರುತಿಸಲಾಗಿದೆ. ಇದರಲ್ಲಿ ಸುಮಾರು ೩,೭೦೦ ರಷ್ಟು ಭಾಷೆಗಳು ಭಾರತದಲ್ಲಿಯೇ ಇವೆ. ಇದು ಸ್ಥೂಲ ರೂಪದ ತಿಳುವಳಿಕೆ. ಆದರೆ ಸೂಕ್ಷ್ಮವಾಗಿ ಮತ್ತು ಭಿನ್ನವಾಗಿ ನೋಡಿದರೆ ಇವುಗಳ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ಉದಾಹರಣೆಗೆ ಇಂಗ್ಲಿಷಿಗೆ ಹೋಲಿಸಿದರೆ, ಹಿಂದಿ ಸಣ್ಣ ಭಾಷೆ ಮತ್ತು ಅದಕ್ಕೆ ಇಂಗ್ಲಿಷಿನಿಂದ ಅಪಚಾರವಾಗುತ್ತಿದೆ. ಆದರೆ ರಾಜಸ್ಥಾನಿ, ಭೋಜ್‌ಪುರಿ, ಮೈಥಿಲಿ ಮತ್ತಿತರ ಭಾಷೆಗಳನ್ನು ಗಮನಿಸಿದಾಗ ಅವುಗಳ ಮೇಲೆ ಹಿಂದಿ ಭಾಷೆಯಿಂದಲೇ ಅಪಚಾರವಾಗುವುದನ್ನು ಕಾಣುತ್ತೇವೆ. ಹಿಂದಿಗೆ ಹೋಲಿಸಿದರೆ ಕನ್ನಡ ಭಾಷೆ ಸಣ್ಣದು. ಕಾರಣ ಹಿಂದಿ ಕನ್ನಡದ ಮೇಲೆ ಆಕ್ರಮಣ ಮಾಡುತ್ತದೆ. ಕನ್ನಡ ತುಳುವನ್ನು ಆಕ್ರಮಿಸಿಕೊಳ್ಳುತ್ತದೆ. ತುಳುವನ್ನು ಮಾತ್ರ ಗಮನಿಸಿದರೂ ಸಾಕು, ಅಲ್ಲಿ ದಲಿತರ ತುಳು ಸಾಮಾನ್ಯವಾಗಿ ಸವರ್ಣೀಯರ ತುಳುವಿಗೆ ತಲೆಬಾಗುತ್ತದೆ.. ನಾವು ನೋಡುತ್ತಿದ್ದಂತೆಯೇ ಕೊರಗ ಭಾಷೆಯ ಜಾಗವನ್ನು ತುಳು ಪೂರ್ತಿಯಾಗಿ ಆಕ್ರಮಿಸಿಕೊಂಡಿತು ಎಂದು ಪುರುಷೋತ್ತಮ ಬಿಳಿಮಲೆ ಅವರು ಭಾಷೆಗಳ ನಡುವಿನ ಶ್ರೇಣೀಕರಣವನ್ನು ವಿವರಿಸುತ್ತಾರೆ.

ಈ ಪರಿಸ್ಥಿತಿಯೇ ಯಾವಾಗಲೂ ಇರುತ್ತದೆಂದಲ್ಲ. ಬಹಳ ಕಾಲ ಯಜಮಾನಭಾಷೆಯಾಗಿದ್ದ ಸಂಸ್ಕೃತ ಈಗ ಜನಬಳಕೆಯಲ್ಲಿಲ್ಲ. ಈಗ ಜಗತ್ತಿನ ಪ್ರಭಾವಶಾಲಿ ಭಾಷೆಯಾಗಿರುವ ಇಂಗ್ಲಿಶ್ ಒಂದು ಕಾಲಘಟ್ಟದಲ್ಲಿ ಬೇರೆ ಭಾಷೆಗಳ ಎದುರು ಕೀಳರಿಮೆ ಅನುಭವಿಸಿತ್ತು. ಸ್ವತಃ ಬ್ರಿಟೀಷರು ಕೂಡ ತಮ್ಮ ತಾಯ್ನಾಡಿನಲ್ಲಿದ್ದಾಗ, ಫ್ರೆಂಚ್ ಗ್ರೀಕ್ ಲ್ಯಾಟಿನ್‌ಗಳ ಮುಂದೆ ತಮ್ಮ ಭಾಷೆಯು ಕೆಳಹಂತದ್ದೆಂದು ಒಪ್ಪಿಕೊಂಡೂ ಇದ್ದರು. ಆದರೆ ಸಮುದ್ರಗಳನ್ನು ದಾಟಿ ಬಂದು ಬೇರೆ ಬೇರೆ ದೇಶಗಳನ್ನು ಗೆದ್ದಾಗ, ಅವರಿಗೆ ಅಲ್ಲಿನ ದೇಶಿಭಾಷೆಗಳು ಅಡಿಗೆಮನೆಯ ಮಾತುಗಳಾಗಿ ಕಾಣತೊಡಗಿದವು. ಇದು ಸಾಂಸ್ಕೃತಿಕ ರಾಜಕಾರಣದ ವೈಪರೀತ್ಯ. ಯಾರು ಆಳುತ್ತಾರೋ ಅವರ ಭಾಷೆ ರಾಜಭಾಷೆಯಾಗಿ, ಅವರ ಸಂಸ್ಕೃತಿ ಅನುಸರಿಸಬೇಕಾದ ಸಂಸ್ಕೃತಿಯಾಗಿ ಬಿಡುತ್ತದೆ

ಭಾಷೆಯ ಪ್ರಮಾಣೀಕರಣ ಸಹಮಾನವರನ್ನು ಅವಮಾನಿಸಲು, ಪ್ರತ್ಯೇಕಿಸಲು ಸಾಧನವಾಗುವ ಚರಿತ್ರೆಗೆ ಭಾಷೆಯಷ್ಟೇ ಇತಿಹಾಸವಿದೆ. ಹಳೆಯ ಒಡಂಬಡಿಕೆಯಲ್ಲಿ 'ಶಿಬ್ಬೊಲೆತ್' ಎಂಬ ಪದವನ್ನು ಹೇಗೆ ಉಚ್ಚರಿಸಬೇಕೋ ಹಾಗೆ ಉಚ್ಚರಿಸಿದೇ ಇದ್ದವರನ್ನು ಬೇರೆ ಗುಂಪಿನವರೆಂದು ಪರಿಗಣಿಸಿ ಅಂಥ ೪೦೦೦೦ ಜನರನ್ನು ಕೊಂದ ಪ್ರಸಂಗವಿದೆ. ಗ್ರೀಕರು ತಮ್ಮ

ಭಾಷೆಯನ್ನಾಡದ ಇತರ ಭಾಷಿಕರನ್ನು 'ಬಾರ್ಬರಿಯನ್' ಎಂದು ಕರೆಯುತ್ತಿದ್ದರು. ಹಾಗೆಂದರೆ 'ಅರ್ಥವಿಲ್ಲದ ಭಾಷೆಯನ್ನು ಆಡುವವರು' ಎಂದೇ ಅರ್ಥ. 'ವೆಲ್ಸ್' ಪದಕ್ಕೂ ಇದೇ ಬಗೆಯ ಅರ್ಥವಿರುವುದನ್ನು ಆಕ್ಸ್‌ಫರ್ಡ್ ನಿಘಂಟು ದಾಖಲು ಮಾಡಿದೆ.

೮.೪ ಬರವಣಿಗೆ ಉತ್ತಮ; ಮಾತು ಅಧಮ ಎಂಬ ಮಿಥ್ಯೆ

ಭಾಷೆಯ ಉಗಮವಿರುವುದು ಮಾತಿನಲ್ಲಿ. ಭಾಷೆಗೆ ಲಿಪಿ ಬಂದದ್ದು ಎಷ್ಟೋ ಸಹಸ್ರ ವರ್ಷಗಳ ನಂತರ. ಸಾವಿರಾರು ಭಾಷೆಗಳು ಇಂದು ಕೂಡ ಲಿಪಿ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಆದರೂ 'ಬರವಣಿಗೆ ಉತ್ತಮ; ಮಾತು ಅಧಮ ಎಂದು ಗ್ರಹಿಸಲಾಗಿದೆ. ಕನ್ನಡ ಭಾಷೆಯ ಒಳಗೆ ನೆಲೆಗೊಂಡ ಈ ಉತ್ತಮಿಕೆಯ ವ್ಯಸನ ಒಟ್ಟು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಅಪಾಯಕಾರಿಯಾಗಿದೆ. ಜನ ಅಕ್ಷರಸ್ಥರಾಗುತ್ತಾ, ಮುಂದೆ ಬರೆಯುವ ಮತ್ತು ಓದುವ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಇದು ನಮ್ಮ ಅಪೇಕ್ಷೆ. ಆದರೆ ಇವೆರೆಡು ನೆರವೇರುವ ಸಾಧ್ಯತೆ ಕಡಿಮೆ. ಏಕೆಂದರೆ ನಮ್ಮ ಬರವಣಿಗೆ ಮತ್ತು ಅದರ ಶುದ್ಧತೆಯ ಹಪಾಹಪಿ ಸೇರಿಕೊಂಡು ಜನರನ್ನು ಓದುವ ಮತ್ತು ಬರೆಯುವ ಕ್ರಿಯೆಗಳಿಂದ ದೂರ ಇರಿಸುತ್ತದೆ'. ಮುದ್ರಣ ಯಂತ್ರಗಳು ಬಂದ ನಂತರ 'ಉತ್ತಮಿಕೆಯ ವ್ಯಸನ' ಬೇರೊಂದು ಬಗೆಯಲ್ಲಿ ಬೇರೂರಲಾರಂಭಿಸಿತು. ಭಾಷೆಗಳು ಪ್ರಮಾಣೀಕರಣಗೊಳ್ಳುವ ಪ್ರಕ್ರಿಯೆಯಲ್ಲಿ ಮುದ್ರಣ ಯಂತ್ರಗಳು ದೊಡ್ಡ ಪ್ರಭಾವ ಬೀರಿದವು. ಇದರ ಹಿಂದೆ ಬಂಡವಾಳಶಾಹಿಗಳ ಹಿತಾಸಕ್ತಿಯೂ ಅಡಕವಾಗಿತ್ತು. 'ಮುದ್ರಣದ ತಂತ್ರಜ್ಞಾನ ಮತ್ತು ಆರ್ಥಿಕತೆ, ಪ್ರಸರಣ ಇವೆಲ್ಲ ಸಹಜವಾಗಿ, ಅನಿವಾರ್ಯವಾಗಿ ಕೆಲವೇ ದೊಡ್ಡ ಮಾರುಕಟ್ಟೆಗಳನ್ನು ರೂಪಿಸುವ ಅನಿವಾರ್ಯತೆಯನ್ನು ಹುಟ್ಟಿಸಿತು. ಯುರೋಪಿನ ಹಲವಾರು ಉಪಭಾಷೆಗಳು ಏಕೀಕರಣಗೊಂಡು ಕೆಲವೇ ಮುಖ್ಯಭಾಷೆಗಳು ರೂಪ ತಳೆಯುವಲ್ಲಿ ಮುದ್ರಕರಿಂದ ದೊರೆತ ಪ್ರಚೋದನೆಯ ಪಾಲು ದೊಡ್ಡದು. ಮುದ್ರಣದಿಂದಾಗಿಯೇ ಭಾಷೆಯ ಪ್ರಮಾಣೀಕರಣ ಸಾಧ್ಯವಾಯಿತು'[೨]

ಭಾರತದ ಸಂದರ್ಭದಲ್ಲಿ ಮುದ್ರಣ ಯಂತ್ರಗಳ ಪ್ರಭಾವ ಬಹುಮುಖಿಯದ್ದಾಗಿತ್ತು. ಭಾರತದಂತಹ ದೇಶದಲ್ಲಿ ಒಂದೇ ಭಾಷೆಯ ಅನೇಕ ವೈವಿಧ್ಯಗಳು, ಭಾಷೆಗಳು ಒಂದರ ಮೇಲೊಂದು ಎಂಬ ಹಾಗೆ ಹರಡಿಕೊಳ್ಳುವ ಬಹುಭಾಷಿಕ ಸನ್ನಿವೇಶ ಇಲ್ಲಿ ಸಾಮಾನ್ಯ. ಮುದ್ರಣ ಈ ಪರಿಸ್ಥಿತಿಯನ್ನು ಬದಲಾಯಿಸಿತು. ವಿದ್ಯಾವಂತವರ್ಗ ತಾನು ಬಳಸುವ, ಮುದ್ರಿಸುವ, ಪ್ರಸರಿಸುವ ಭಾಷೆಯನ್ನು ಅಧಿಕೃತ ಭಾಷೆಯನ್ನಾಗಿ ರೂಪಿಸಿ, ಉಳಿದವುಗಳನ್ನು ಉಪಭಾಷೆಗಳನ್ನಾಗಿ, ಪರಭಾಷೆಗಳನ್ನಾಗಿ ಬದಿಗೊತ್ತಿರಿಸುತ್ತದೆ. ಈ ಹೊಸ, ಪ್ರಾಮಾಣಿತ, ಅಧಿಕೃತ ಭಾಷೆಯಲ್ಲಿ, ಉಪಭಾಷೆ, ಪರಭಾಷೆಗಳ ಸಂರಚನೆಗಳು, ಶಬ್ದಗಳು ಇರುವುದಿಲ್ಲವೆಂದಲ್ಲ. ಆದರೆ ಅವೆಲ್ಲ ಸೇರಿ ಪರಿಪಾಕಗೊಂಡ ಭಾಷೆ ಅಧಿಕೃತವೆನ್ನಿಸಿಕೊಳ್ಳುತ್ತದೆ.[೩]

ಮುದ್ರಣ ಮಾಡಿದ ಬಹಳ ದೊಡ್ಡ ಪರಿಣಾಮ ಎಂದರೆ ಅದು ವಿದ್ಯಾವಂತ ಜನರನ್ನು ಸಮುದಾಯಕೇಂದ್ರಿತ ನೆಲೆಯಿಂದ ವ್ಯಕ್ತಿಕೇಂದ್ರಿತ ನೆಲೆಗೆ ದೂಡಿದ್ದು. ನುಡಿ, ಬರಹ, ಮುದ್ರಣ, ವಿದ್ಯುನ್ಮಾನ ಇವುಗಳ ಮೂಲಕ ವ್ಯಕ್ತವಾಗುವ ಭಾಷೆ, ಅದರಿಂದ ಸೃಷ್ಟಿಗೊಳ್ಳುವ ಮನಸ್ಸು, ಅಂಥ ಮನಸ್ಸುಗಳಿಂದ ರೂಪುಗೊಳ್ಳುವ ಸಮಾಜ ಹೇಗೆ ಬೇರೆ ಬೇರೆ ರೂಪಗಳನ್ನು ತಾಳುತ್ತದೆ ಅನ್ನುವುದು ನಿಜಕ್ಕೂ ದೊಡ್ಡ ಕುತೂಹಲ. ನುಡಿ ಮಾತ್ರ ಇರುವಾಗ ಪರಸ್ಪರ ಸಂಬಂಧ, ಅವಲಂಬನೆ, ಸಹಕಾರ (ಅಥವ ದ್ವೇಷ, ವಿರೋಧ) ಮುಖ್ಯವಾಗುತ್ತದೆ. ಬಿಡಿ ವ್ಯಕ್ತಿಗಿಂತ ಸಮುದಾಯ ಮುಖ್ಯವಾಗುತ್ತದೆ. ಬರಹ ತೊಡಗಿದೊಡನೆ ಸಮುದಾಯಕ್ಕಿಂತ ವ್ಯಕ್ತಿ, ಅಧಿಕಾರದ ವಿನ್ಯಾಸ, ಅಕ್ಷರಸ್ಥ, ಅನಕ್ಷರಸ್ಥ ಅನ್ನುವ ಭೇದ ಇವೆಲ್ಲ ಶುರುವಾಗುತ್ತವೆ.[೨]

೮.೫ ಪ್ರಮಾಣ ಭಾಷೆ ಸುಗಮ ನಿರ್ವಹಣೆಗಾಗಿ ಎನ್ನುವ ಆಂಶಿಕ ಸತ್ಯ

ಪ್ರಮಾಣ ಭಾಷೆಯೊಂದನ್ನು ಆಯ್ಕೆ ಮಾಡಿಕೊಳ್ಳುವುದರ ಹಿಂದೆ ಆಡಳಿತದ ನಿರ್ವಹಣೆಯಲ್ಲಿ ಸಂವಹನವನ್ನು ಸುಲಭಗೊಳಿಸುವ ಉದ್ದೇಶವಿದೆ ಎಂದು ಹೇಳಲಾಗುತ್ತದೆ. ನಿದರ್ಶನವಾಗಿ ಬಿ.ಎಂ.ಶ್ರೀ ಅವರು 'ಕನ್ನಡಕ್ಕೊಂಡು ಕಟ್ಟು' ಲೇಖನದಲ್ಲಿ ಕನ್ನಡದ ಪ್ರಮಾಣಭಾಷೆಯ ಸ್ಥೂಲ ಚೌಕಟ್ಟನ್ನು ನಿರೂಪಿಸಿದ್ದನ್ನು ಮೈಸೂರು ಸಂಸ್ಥಾನದಲ್ಲಿ ಪಠ್ಯಪುಸ್ತಕಗಳನ್ನು ರಚಿಸಲು ನಿಯುಕ್ತವಾಗಿದ್ದ ವಿವಿಧ ಸಮಿತಿಗಳ ಸದಸ್ಯರು ಜಾರಿಗೆ ತರಲು ಯತ್ನಿಸಿದ್ದನ್ನು ನೋಡಬಹುದು. ಈ ರೀತಿ ಪ್ರಮಾಣ ಭಾಷೆ ಆಡಳಿತದ ಸುಗಮ ನಿರ್ವಹಣೆಗಾಗಿ ಎನ್ನುವ ಸಮರ್ಥನೆಯು ಆಂಶಿಕ ಸತ್ಯವಾಗಿದೆ. ಕೆ.ವಿ ನಾರಾಯಣ ಅವರು ಹೇಳುವಂತೆ 'ಮಾತಿನ ರೂಪವನ್ನೇ ಬರೆಯಲು ಹೊರಟರೆ ನೂರಾರು ಬಗೆಯ ಬರವಣಿಗೆಗಳು ಸೃಷ್ಟಿಯಾಗಿ ಬಿಡುತ್ತವೆ. ಇದರಿಂದ ಸಂವಹನಕ್ಕೆ ಕೊರತೆ ಉಂಟಾಗುತ್ತದೆ ಎಂಬ ಮಾತು ಪೂರ್ಣ ಸತ್ಯವಲ್ಲ. ಏಕೆಂದರೆ ಜನರ ಆಡುಮಾತಿನಲ್ಲಿ ಒಂದು ಬಗೆಯ ಸಾಮಾನ್ಯರೂಪಗಳು ಇದ್ದೇ ಇರುತ್ತವೆ. ತದ್ಭವಗಳು ನಿಯಮಬದ್ಧವಾಗಿಯೇ ರೂಪುಗೊಳ್ಳಬೇಕು. ಒಬ್ಬೊಬ್ಬರಿಗೆ ಒಂದೊಂದು ಬಗೆಯ ತದ್ಭವಗಳು ಸೃಷ್ಟಿಯಾಗುವುದಿಲ್ಲ. ಆದ್ದರಿಂದ ಲಿಖಿತಭಾಷೆ ಮಾತಿನ ಭಾಷೆಯನ್ನು ಅನುಸರಿಸುವುದರಿಂದ ಗೊಂದಲದ ವಾತಾವರಣ ಉಂಟಾಗಬಹುದೆಂಬ ಭಯಕ್ಕೆ ಕಾರಣಗಳಿಲ್ಲ. ಹಾಗೆ ನೋಡಿದರೆ ಅತ್ಯಂತ ಖಚಿತವಾದ ಪ್ರಮಾಣ ರೂಪಗಳನ್ನು ಕಲಿತು ಬರೆಯಲು ಹೊರಡುವವರ ಬರವಣಿಗೆಯಲ್ಲೂ 'ದೋಷಗಳು' ಇದ್ದೇ ಇರುತ್ತವೆ.' ಪಠ್ಯಪುಸ್ತಕದ ಭಾಷೆಗೆ ಇರುವ ಬಹುದೊಡ್ಡ ಆರೋಪವೆಂದರೆ 'ಪಠ್ಯಪುಸ್ತಕಗಳಲ್ಲಿ ಬಳಸುವ ಭಾಷೆ ಪ್ರಬಲವಾಗಿರುವ ಜನರ ಗುಂಪಿನ ಸತ್ಯವನ್ನು ಹೇಳುತ್ತದೆ. ದುರ್ಬಲ ಗುಂಪಿನ ಸತ್ಯಗಳನ್ನು ಬಚ್ಚಿಡುತ್ತದೆ' ಎನ್ನುವುದು. ಆದರೂ ಕನ್ನಡ ಏಕಘನಾಕೃತಿಯ ರಚನೆಯಲ್ಲ ; ಅದರಲ್ಲಿ ಎದ್ದು ಕಾಣುವ ಪ್ರಭೇದಗಳಿವೆ, ಆಯಾ ಪ್ರಭೇದಗಳು

ಆಯಾ ಪ್ರದೇಶದ ಜನರ ಚಹರೆಗಳು ಎಂಬ ತಿಳುವಳಿಕೆಗಳು ಪ್ರಾದೇಶಿಕ ಕನ್ನಡ ಬಳಸುವ ಒತ್ತಾಯ ಮೂಡಲು ಕಾರಣವಾದವು.

ಪ್ರಮಾಣ ಭಾಷೆಯ ಹಿಂದಿನ ಸಂವಹನದ ಉದ್ದೇಶವನ್ನು ಒಂದೊಮ್ಮೆ ಒಪ್ಪಿಕೊಂಡ ನಂತರವೂ 'ಯಾವ ಭಾಷಾ ಪ್ರಭೇದ'ವನ್ನು ಪ್ರಮಾಣಭಾಷೆಯಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ ಎನ್ನುವುದು ಗಮನಿಸಬೇಕಾದ ಸಂಗತಿ. ಯಾಕೆಂದರೆ ಆಯ್ಕೆಯ ಕಾರಣಗಳು 'ಭಾಷೆ'ಯಲ್ಲಿರದೆ ಭಾಷಿಕೇತರ ಮೂಲದಲ್ಲಿರುತ್ತವೆ. ೧೯೧೫ರಲ್ಲಿ ನಡೆದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿಯೇ ಸಮ್ಮೇಳನಾಧ್ಯಕ್ಷರಾದ ಎಚ್.ವಿ ನಂಜುಂಡಯ್ಯ ಅವರು 'ಗ್ರಾಂಥಿಕಭಾಷೆಯನ್ನು ಏಕರೂಪಕ್ಕೆ ತರುವುದು ಬಹುವಿಷಯಗಳಿಗೆ ಒಳ್ಳೆಯದು' ಎಂದು ಅಭಿಪ್ರಾಯ ಪಟ್ಟಿದ್ದರು. ಯಾವ ಭಾಷಾಪ್ರಭೇದವನ್ನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ಗೊಂದಲ ಏರ್ಪಡುವ ಸಂದರ್ಭಗಳಲ್ಲಿ 'ಮೈಸೂರು ಕನ್ನಡಕ್ಕೆ ಪ್ರಾಶಸ್ತ್ಯವನ್ನು ತೋರಿಸುವುದು ಉಚಿತವಾಗುತ್ತದೆ' ಎಂದು ಪ್ರಮಾಣ ಭಾಷೆಯಾಗಿ ಮೈಸೂರು ಕನ್ನಡಕ್ಕೆ ತಮ್ಮ ಒಲವನ್ನು ತೋರಿದ್ದರು. ಏಕೀಕರಣದ ನಂತರ ಈಗಿನ ಕರ್ನಾಟಕಕ್ಕೆ 'ಸಂಯುಕ್ತ ಕರ್ನಾಟಕ', 'ಕನ್ನಡ ರಾಜ್ಯ' ಎಂಬ ಹೆಸರು ಸೂಚಿಸಲ್ಪಟ್ಟರೂ ಅಂತಿಮವಾಗಿ ಅಂಗೀಕಾರವಾದದ್ದು ವಿಶಾಲ ಮೈಸೂರು ಎಂಬ ಹೆಸರು. ಈ ಪ್ರಾಂತ್ಯದ ಕನ್ನಡದ ಬಹುಮುಖ್ಯ ಲಕ್ಷಣವೆಂದರೆ ಅದು ಸಂಸ್ಕೃತಜನ್ಯ ಪದಗಳನ್ನು ಅವುಗಳ ಮೂಲರೂಪದಲ್ಲೇ ಉಳಿಸಿಕೊಂಡಿರುವುದು. ಏಕೀಕರಣ ಪೂರ್ವದಲ್ಲೇ ಮೈಸೂರು ರಾಜ್ಯದ, ಮೈಸೂರು ವಿಶ್ವವಿದ್ಯಾಲಯದ ವಿದ್ವಾಂಸರು ಬಳಸುತ್ತಿದ್ದ ಕನ್ನಡ ಪ್ರಭೇದವೇ ಹೆಚ್ಚು ಕಡಿಮೆ ಪ್ರಮಾಣ ಕನ್ನಡವೆಂದು ಬಳಕೆಯಾಗುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಮೈಸೂರಿನ ವಿದ್ವಾಂಸರು 'ವಿದ್ವಾಂಸರು' ಆಗಿದ್ದುದಕ್ಕಿಂತ ಅವರು ಮೇಲ್ವರ್ಗಗಳಿಂದ ಬಂದವರಾಗಿದ್ದರು ಎನ್ನುವುದು ಮುಖ್ಯ ಗಮನಿಸಬೇಕಾದ ಸಂಗತಿ.

೮.೬ ಪ್ರಮಾಣ ಭಾಷೆಯ ಮೇಲೆ ಚಳುವಳಿಗಳ ಪ್ರಭಾವ

ರಾಜಕೀಯ, ಆರ್ಥಿಕ, ಸಾಮಾಜಿಕ ಬದಲಾವಣೆಗಳು ಬದಲಾದಂತೆ ಪ್ರಮಾಣೀಕರಣಗೊಳ್ಳುವ ಭಾಷೆ ಕೂಡ ಬದಲಾಗುತ್ತಿರುತ್ತದೆ. ಇದರೊಂದಿಗೆ ಜನಚಳುವಳಿಗಳು ಕೂಡ ಈ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರಬಹುದು. ಡಿ.ಎನ್ ಶಂಕರಭಟ್ಟರು ಗುರುತಿಸುವಂತೆ ವಚನಕಾರರು ಮತ್ತು ಕೀರ್ತನಕಾರರು ಪ್ರಜ್ಞಾಪೂರ್ವಕವಾಗಿ ಮಾಡಿದ ಪ್ರಯತ್ನದಿಂದ ಭಾಷೆಯ ಸ್ವರೂಪ ಬದಲಾಯಿತು. ಆಧುನಿಕ ಸಂದರ್ಭದಲ್ಲಿ ದಲಿತ ಬಂಡಾಯ ಚಳುವಳಿಗಳು ಇಂತಹ ಪ್ರಭಾವ ಬೀರಿದವು. ಮುಖ್ಯವಾಗಿ ಭಾಷಾಪ್ರಭೇದಗಳನ್ನು ಬೇರೆ ಬೇರೆ ನೆಲೆಗಳಲ್ಲಿ ಮಾನ್ಯ ಮಾಡಬೇಕು ಎಂಬ ಒತ್ತಾಯ ಮೂಡಲು ಕರ್ನಾಟಕ ಚರಿತ್ರೆಯಲ್ಲಿ ಕಳೆದ ಮೂರು ದಶಕಗಳಿಂದ ನಡೆಯುತ್ತಿರುವ ಹಲವು ಜನಪರ ಚಳುವಳಿಗಳೇ ಕಾರಣ. ಬಂಡಾಯ ಮತ್ತು ದಲಿತ ಚಳುವಳಿಗಳು

ಕನ್ನಡ ಭಾಷೆಯ ಬಗೆಗೆ ತಳೆದ ನಿಲುವುಗಳು ಪರಿಶೀಲನೆಗೆ ತಕ್ಕುವಾಗಿವೆ. ಮುಖ್ಯವಾಗಿ ಇಲ್ಲಿ ಕನ್ನಡದ ಸಮಕಾಲೀನ ಪ್ರಭೇದಗಳಿಗೆ ಮನ್ನಣೆ ದೊರಕಲು ಸಾಧ್ಯವಾಯಿತು.[೫]

ಕನ್ನಡ ಅಸ್ಮಿತೆಯ ಮೇಲೆ ಹೋರಾಟಗಳು ಬೀರಿದ ಪ್ರಭಾವವನ್ನು ಎರಡು ಬಗೆಯಲ್ಲಿ ವಿಂಗಡಿಸಬಹುದು. ಏಕೀಕರಣ ಚಳವಳಿ, ಗೋಕಾಕ್ ಚಳವಳಿಗಳು ಕನ್ನಡ ಅಸ್ಮಿತೆಯಲ್ಲಿ ಭೌಗೋಳಿಕವಾಗಿ ಕನ್ನಡ ಪ್ರದೇಶಗಳ ಒಟ್ಟುಗೂಡಿಸುವಿಕೆ, ನಿರ್ದಿಷ್ಟ ಭಾಷಾ ನೀತಿಯ ಅಂಗೀಕಾರ ಇತ್ಯಾದಿ ಬಾಹ್ಯದಲ್ಲಿ ಗೋಚರವಾಗುವ ಪ್ರಭಾವಗಳನ್ನು ಬೀರಿದವು. ಬರಹಗಾರರ ಕಲಾವಿದರ ಒಕ್ಕೂಟ, ಬಂಡಾಯ ಮತ್ತು ದಲಿತ ಚಳುವಳಿಗಳು ಕನ್ನಡಕ್ಕೆ ಸಮಾಜವಾದಿ ಮೌಲ್ಯಗಳನ್ನು ತರುವ ಅಂತಸ್ಥ ಪ್ರಭಾವಗಳನ್ನು ಬೀರಿದವು.

ದಲಿತ ಚಳುವಳಿಗಳಿಂದ ಕನ್ನಡದ ಸಮಕಾಲೀನ ಪ್ರಭೇದಗಳಿಗೆ ಮನ್ನಣೆ ದೊರಕಿದರೂ ಒಟ್ಟು ಶಿಕ್ಷಣ ಕ್ರಮದಲ್ಲಿ ಪ್ರಮಾಣ ಕನ್ನಡದ ಅಧಿಪತ್ಯವೇ ಮುಂದುವರೆದಿದೆ. ಕಳೆದ ಐವತ್ತು ವರ್ಷಗಳಲ್ಲಿ ಕನ್ನಡ ಸಂಸ್ಕೃತಿ ರೂಪಿಸಿಕೊಟ್ಟ ಪ್ರಗತಿಯ ಮಾದರಿಯಲ್ಲಿ ಕೆಳಸ್ತರದ ಜನರು ತಮ್ಮ ಭಾಷಿಕ ರೂಪಗಳನ್ನು ಬಿಟ್ಟುಕೊಡಬೇಕೆಂಬ ಒತ್ತಾಯವನ್ನು ಹೇರುತ್ತಿವೆ. ಅಂದರೆ ಅವರು ತಮ್ಮ ಭಾಷಾಪ್ರಭೇದವನ್ನು ಒಂದು ಚಹರೆಯನ್ನಾಗಿ ಉಳಿಸಿಕೊಳ್ಳಲು ಅವಕಾಶವಿಲ್ಲ. ಅದನ್ನು ಬಿಟ್ಟುಕೊಟ್ಟು, ಪ್ರಮಾಣ ಕನ್ನಡಕ್ಕೆ ದಾಟಬೇಕೆಂಬ ಒತ್ತಾಯವನ್ನು ಶಿಕ್ಷಣಕ್ರಮ ಹೇರುತ್ತಿದೆ. ಒಟ್ಟು ಕನ್ನಡ ಸಂಸ್ಕೃತಿ ದಲಿತರ ನೆನಪುಗಳನ್ನು ತನ್ನ ಸಾಂಸ್ಕೃತಿಕ ಪರಂಪರೆಯ ಭಾಗವನ್ನಾಗಿ ಮಾಡಿಕೊಳ್ಳಲು ಸಿದ್ಧವಿದೆ. ಆದರೆ ಅವರ ಭಾಷೆಯನ್ನು ಮಾತ್ರ ತನ್ನದೆಂದು ಒಪ್ಪಿಕೊಳ್ಳಲು ಸಿದ್ಧವಿಲ್ಲ.[೬]

೮.೭ ಸಾಮಾಜಿಕ ತಾರತಮ್ಯವನ್ನು ಹೋಗಲಾಡಿಸುವ ಪ್ರಯತ್ನ

ಭಾಷಾ ಪ್ರಮಾಣೀಕರಣದ ಹಿಂದೆ ಸಾಮಾಜಿಕ ತಾರತಮ್ಯವನ್ನು ಗುರುತಿಸಲ್ಪಟ್ಟ ನಂತರ ಈ ತಾರತಮ್ಯವನ್ನು ಹೋಗಲಾಡಿಸುವ ಪ್ರಯತ್ನವೂ ಆರಂಭವಾಯಿತು. ಇದು ಎರಡು ಬಗೆಯಲ್ಲಾಯಿತು. ಮೊದಲನೆಯದು ಆಡಳಿತವ್ಯವಸ್ಥೆಯಲ್ಲಿ. ಇದು ಶೈಕ್ಷಣಿಕ ಕ್ಷೇತ್ರದಲ್ಲಿ ಪಠ್ಯಪುಸ್ತಕಗಳಲ್ಲಿ ಕನ್ನಡದ ವಿವಿಧ ಪ್ರಭೇದಗಳನ್ನು ಸೇರಿಸುವ ಮೂಲಕ. 'ಹಳೇ ಮೈಸೂರಿನ ನಗರಗಳಲ್ಲಿ ವಿದ್ಯಾವಂತ ಮೇಲ್ವರ್ಗದವರು ಆಡುವ ಕನ್ನಡವನ್ನೇ 'ಶುದ್ದ'ವೆಂದೂ ಪ್ರಮಾಣವೆಂದೂ ತಿಳಿದಿರುವ ಪಠ್ಯಪುಸ್ತಕ ಮತ್ತು ಪತ್ರಿಕೆಗಳಿಗೆ ಕರ್ನಾಟಕದಲ್ಲಿ ಎಷ್ಟೊಂದು ಕನ್ನಡದ ಪ್ರಭೇದಗಳಿವೆಯೆಂಬ ಅರಿವಿದೆಯೇ?' ಎಂಬ ಪ್ರಶ್ನೆಗಳು ಕಟುಸತ್ಯವನ್ನೇ ಬಿಂಬಿಸುತ್ತಿದ್ದವು. ಇದು ಮುಂದೆ ಒಂದೇ ಭಾಷಾ ಪ್ರಭೇದಕ್ಕೆ ಬದಲು ಕನ್ನಡದ ವಿವಿಧ ಭಾಷಾ ಪ್ರಭೇದಗಳನ್ನು ಪಠ್ಯಪುಸ್ತಕದಲ್ಲಿ ಸೇರಿಸುವುದರ ಮೂಲಕ ಅವುಗಳಿಗೆ ಮಾನ್ಯತೆ ನೀಡಲು ಕಾರಣವಾಯಿತು. ಎರಡನೆಯದು ಸಾಹಿತ್ಯ ಕ್ಷೇತ್ರದಲ್ಲಿ. ಎಂಟನೆಯ ದಶಕದಿಂದ ಈಚೆಗೆ ಸಾಹಿತ್ಯ ಕೃತಿಗಳು ಬಳಸುವ

ಭಾಷೆಯ ಸ್ವರೂಪದಲ್ಲಿ ಒಂದು ಮುಖ್ಯ ಬದಲಾವಣೆಯನ್ನು ಗಮನಿಸುತ್ತೇವೆ. ಅದರಲ್ಲೂ ಕಾದಂಬರಿ ಮತ್ತು ಕತೆಗಳಲ್ಲಿ ಈ ಬದಲಾವಣೆ ಹೆಚ್ಚಾಗಿ ಕಂಡುಬರುತ್ತದೆ. ಕಾದಂಬರಿಯ ನಿರೂಪಣೆ ಮತ್ತು ಪಾತ್ರಗಳ ಸಂಭಾಷಣೆ ಈ ಎರಡು ಕಡೆಗಳಲ್ಲಿ ಮೊದಲು ಕ್ರಮವಾಗಿ ಪ್ರಮಾಣ ಭಾಷೆ ಮತ್ತು ಉಪಭಾಷೆಗಳನ್ನು ಅಥವಾ ಆಡುಮಾತಿನ ಒಂದು ಬಗೆಯನ್ನು ಬಳಸುತ್ತಿದ್ದರು. ಆದರೆ ಈಗ ಎರಡು ಕಡೆಗಳಲ್ಲಿಯೂ ಕೆಲವು ಕೃತಿಕಾರರು ಉಪಭಾಷೆಯನ್ನೇ ಬಳಸಲು ತೊಡಗಿದ್ದಾರೆ. ಇದಕ್ಕೆ ಸಾಹಿತ್ಯಿಕ ಕಾರಣಗಳು ಏನೇ ಇರಲಿ, ಕನ್ನಡ ಭಾಷಾ ಜಗತ್ತಿನಲ್ಲಿ ನಡೆಯುತ್ತಿದ್ದ ಪರಿವರ್ತನೆಗಳು ಸಾಹಿತ್ಯ ಕೃತಿಯಲ್ಲೂ ಕಾಣತೊಡಗಿವೆ ಎಂದಷ್ಟೇ ನಾವಿಲ್ಲಿ ಗ್ರಹಿಸಬೇಕಾಗಿದೆ. ಉಪಭಾಷೆಗಳ ನಿರಾಕರಣೆ ಒಂದು ಮುಖ್ಯ ಭಾಷಾ ನೀತಿಯ ನೆಲೆಯಾಗಿದ್ದನ್ನು ಎಂಟನೆಯ ದಶಕದಿಂದೀಚೆಗೆ ಪ್ರಶ್ನಿಸುವ ಪ್ರವೃತ್ತಿ ಬೆಳೆಯಿತು. ಅದರಿಂದಾಗಿ ಈ ಉಪಭಾಷೆಗಳನ್ನು ಗುರುತುಗಳನ್ನಾಗಿ ಉಳಿಸಿಕೊಳ್ಳುವ ಅಪೇಕ್ಷೆಯು ಕಾಣತೊಡಗಿತ್ತು'[೭]

ಬಂಡಾಯ ಮತ್ತು ದಲಿತ ಚಳುವಳಿಗಳು ಮೂಡಿಸಿದ ಎಚ್ಚರ ಸಾಹಿತ್ಯದಲ್ಲಿ ಲೇಖಕರು ತಮ್ಮ ಸಮುದಾಯದ ಹಾಗೂ ತಮ್ಮ ಪ್ರದೇಶದ ಭಾಷಾಪ್ರಭೇದವನ್ನು ಬಳಸಲು ಬಹುಮಟ್ಟಿಗೆ ಕಾರಣವಾಯಿತು. ದೇವನೂರು ಅವರ ಸಾಹಿತ್ಯ ಇದಕ್ಕೆ ಉತ್ತಮ ನಿದರ್ಶನವಾಗಿದೆ. 'ಏಕೀಕರಣದ ಮೊದಲ ಎರಡು ದಶಕಗಳಲ್ಲಿ ಭಾಷಾ ಪ್ರಭೇದಗಳನ್ನು ಹಿಂದಕ್ಕೆ ಸರಿಸಿ ಅವುಗಳ ಸ್ವತಂತ್ರ ಬಳಕೆಗೆ ಕಟ್ಟುಪಾಡುಗಳನ್ನು ವಿಧಿಸಿ ಶಿಷ್ಟ ರೂಪವನ್ನು ಎತ್ತಿ ಹಿಡಿಯುವ ಪ್ರಕ್ರಿಯೆ ನಡೆಯಿತಷ್ಟೇ. ಈ ಅವಧಿಯಲ್ಲಿ ಕಳೆದುಹೋಗಿದ್ದ ಭಾಷಾ ಪ್ರಭೇದಗಳನ್ನು ಸಾಹಿತ್ಯ ಕೃತಿಗಳಲ್ಲಿ ಮರುಗಳಿಸುವ, ಮರುಸ್ಥಾಪಿಸುವ ಯತ್ನಗಳು ಮೊದಲಾದವು. ಹೊಸ ತಲೆಮಾರಿನ ಕೆಳವರ್ಗದ ಬರಹಗಾರರಲ್ಲಿ ಸಾಂಸ್ಕೃತಿಕ ನೆನಪುಗಳನ್ನು ಮರುಗಳಿಸುವ ಪ್ರಯತ್ನಗಳು ನಡೆದುದಕ್ಕೂ ಭಾಷಿಕವಾಗಿ ನಡೆದ ಈ ಮರುಗಳಿಕೆಯ ಪ್ರಯತ್ನಕ್ಕೂ ನೇರವಾದ ಸಂಬಂಧವಿದೆ'[೮]

೮.೮ ಸಾಹಿತ್ಯ ರಚನೆಯಲ್ಲಿ ಭಾಷಾಪ್ರಭೇದಗಳ ಬಳಕೆಯ ತೊಡಕುಗಳು

ತಮ್ಮ ಸಮುದಾಯದ ಅಥವಾ ಪ್ರದೇಶದ ಭಾಷಾ ಪ್ರಭೇದವನ್ನು ತಮ್ಮ ಸಾಹಿತ್ಯರಚನೆಯಲ್ಲಿ ಬಳಸಬೇಕೆಂಬ ಬಯಕೆ ಯಾವಾಗಲೂ ಯಶಸ್ಸು ಪಡೆಯುತ್ತದೆ ಎಂದು ಹೇಳುವಂತಿಲ್ಲ. ಈ ಪ್ರಯತ್ನದಲ್ಲಿ ಎರಡು ರೀತಿಯ ಬಿಕ್ಕಟ್ಟುಗಳು ತಲೆದೋರಬಹುದು. ಒಂದು ಸೃಜನಶೀಲವಾಗಿ ಸೋಲುವುದು. ಇದಕ್ಕೆ ಉತ್ತಮ ಉದಾಹರಣೆ 'ಕುಸುಮ ಬಾಲೆ' ಕೃತಿಯ ಮಾದರಿಯ ಅನುಸರಣೆ. 'ಕುಸುಮ ಬಾಲೆ' ಮಾದರಿಯನ್ನಿಟ್ಟುಕೊಂಡು, ಆಡುಮಾತನ್ನು ಬರೆಹಕ್ಕೆ ಬಳಸುವುದೇ ಸಾಧನೆ ಎಂಬ ತಪ್ಪು ಮತ್ತು ಸರಳೀಕೃತ ಗ್ರಹಿಕೆಯಿಂದ ಕೆಲವು ಲೇಖಕರು ಭಾಷೆಯನ್ನು ಅಭಿವ್ಯಕ್ತಿಗೆ ಸೃಜನಶೀಲವಾಗಿ ದುಡಿಸಿಕೊಳ್ಳುವ ಹೋರಾಟದಲ್ಲಿ ಸೋತಿರುವುದು'[೯]. ಎರಡನೆಯದು

'ವಾಸ್ತವತಾವಾದದ ನೆಲೆಯಲ್ಲಿ ಭಾಷೆಯ ಬಳಕೆಯನ್ನು ನಿಗದಿಪಡಿಸಲು ಹೊರಟ ಎಷ್ಟೋ ಕೃತಿಕಾರರು ಕನ್ನಡದ ಸಾಮಾಜಿಕ ಉಪಭಾಷೆಗಳ ನಡುವೆ ಇರುವ ಅಧಿಕಾರ ಸಂಬಂಧವನ್ನು ಸರಿಯಾಗಿ ಗ್ರಹಿಸಿದಂತೆ ತೋರದಿರುವುದು. 'ಚದುರಂಗರ 'ವೈಶಾಖ' ಕಾದಂಬರಿಯ ಭಾಷೆ ಇದಕ್ಕೊಂದು ನಿದರ್ಶನ'[೧೦]

ಸಾಹಿತ್ಯದಲ್ಲಿ ಭಾಷಾ ಪ್ರಭೇದಗಳನ್ನು ಬಳಸಬೇಕೆಂದು ಪ್ರತಿಪಾದಿಸುತ್ತ ಅನಂತಮೂರ್ತಿ ಅವರು ಇಂಗ್ಲೆಂಡಿನ ಒಂದು ಉದಾಹರಣೆ ನೀಡುತ್ತಾರೆ. ಇಂಗ್ಲೆಂಡಿನ ಶಿಷ್ಟ ಇಂಗ್ಲಿಶಿಗೆ ಜಾನಪದ ಇಂಗ್ಲಿಶಿನ ರಕ್ತದಾನವಾಗಬೇಕು ಎಂದು ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದ ಬಿ.ಬಿ.ಸಿ ಸಂಸ್ಥೆಯಲ್ಲಿರುವ ಚಾರ್ಲ್ಸ್ ಪಾರ್ಕರ್ ಉದಾಹರಣೆ ನೀಡುತ್ತ ಅನಂತಮೂರ್ತಿ ಭಾರತದ ಸಂದರ್ಭದಲ್ಲಿ ಇಂಗ್ಲಿಶಿನಲ್ಲಿ ಸೃಷ್ಟಿಯಾಗುತ್ತಿರುವ ಸಾಹಿತ್ಯದ ಕುರಿತು ಮುಖ್ಯವಾದ ಪ್ರಶ್ನೆಯೊಂದನ್ನು ಎತ್ತುತ್ತಾರೆ : 'ಇಷ್ಟೊಂದು ಬೆಳೆದ ನಾಗರಿಕ ಇಂಗ್ಲಿಶ್ ಭಾಷೆಗೇನೆ ತನ್ನ ಜಾನಪದ ಸತ್ವದ ರಕ್ತದಾನ ಪದೇಪದೇ ಅವಶ್ಯವಾದರೆ, ಇಂಡಿಯಾದ ನೆಲದಲ್ಲಿ ಇಂಗ್ಲಿಶ್ ಸಾಹಿತ್ಯ ಸೃಷ್ಟಿ ಮಾಡುವುದು ಸಾಧ್ಯವೇ? ನಿಘಂಟಿನಿಂದ ಕಲಿತ ಇಂಗ್ಲಿಶಿನಲ್ಲಿ ನಾವು ಸಾಹಿತ್ಯ ಸೃಷ್ಟಿ ಮಾಡುವುದು ಸಾಧ್ಯವೇ?' ಇಂಗ್ಲಿಶ್ ಸಾಹಿತ್ಯದಲ್ಲಿ ಭಾಷಾ ಪ್ರಭೇದಗಳ ಕುರಿತ ಅನಂತಮೂರ್ತಿ ಅವರ ಅಭಿಪ್ರಾಯವನ್ನು ಕನ್ನಡಕ್ಕೂ ಅನ್ವಯಿಸಬಹುದು. ಆದರೆ ಸಾಹಿತ್ಯದಲ್ಲಿ ಕನ್ನಡದ ಭಾಷಾಪ್ರಭೇದದ ಬಳಕೆಯ ಚರ್ಚೆಯೇ ಅಪ್ರಸ್ತುತವಾಗುವ ಬೆಳವಣಿಗೆಯೊಂದು ನಡೆದಿದೆ. ಈ ಬೆಳವಣಿಗೆ ಕನ್ನಡದ ಬದುಕಿನೊಳಗೆ ಇಂಗ್ಲಿಶಿನ ಪ್ರವೇಶದಿಂದ ಆಗುತ್ತಿರುವುದು. ಕನ್ನಡ ಸೃಜನ ಸಾಹಿತ್ಯ ಕೂಡ ಅಧಿಕೃತಗೊಳ್ಳಲು ಇಂಗ್ಲಿಶಿಗೆ ಅನುವಾದವಾಗುವುದು ಅನಿವಾರ್ಯವಾಗುತ್ತಿದೆ. ಕನ್ನಡ ಭಾಷೆಯ ಸಾಹಿತ್ಯ ಕೃತಿ ಕನ್ನಡ ಓದುಗರಿಗೆ ಮಾತ್ರ ಸೀಮಿತಗೊಂಡರೆ ಅದರ ಮಹತ್ವ ದೃಢಪಡುವುದಿಲ್ಲವೆಂಬ, ಹಾಗೆಯೇ ಅದರ ಮಹತ್ವ ಯಶಸ್ವಿಯಾಗಿ ದೃಢಪಡಬೇಕಾದರೆ ಆ ಕೃತಿ ಇಂಗ್ಲಿಶಿಗೆ ಅನುವಾದಗೊಳ್ಳಬೇಕೆಂಬ ಸನ್ನಿವೇಶವನ್ನು ಕಾಣುತ್ತಿದ್ದೇವೆ. ಈ ಪ್ರಮಾಣೀಕರಣದ ಪ್ರಕ್ರಿಯೆ ಪರೋಕ್ಷವಾಗಿ ಸಾಹಿತ್ಯಕೃತಿಗಳ ಸೃಷ್ಟಿಯನ್ನೂ ಪ್ರಭಾವಿಸಬಹುದು[೧೧]

೮.೯ ಶಾಲಾಪಠ್ಯದಲ್ಲಿ, ಸಾಹಿತ್ಯದಲ್ಲಿ ಭಾಷಾ ಪ್ರಭೇದದ ಬಳಕೆಯಿಂದ ಸೀಮಿತ ಪರಿಣಾಮ

ನಿರ್ದಿಷ್ಟ ಭಾಷಾ ಪ್ರಭೇದವನ್ನು ಪಠ್ಯಪುಸ್ತಕದಲ್ಲಿ ಸೇರಿಸಿದ ತಕ್ಷಣ ಭಾಷೆಯ ಪ್ರಮಾಣೀಕರಣದಲ್ಲಿನ ತಾರತಮ್ಯಗಳು ನಿವಾರಣೆಯಾಗುತ್ತದೆ ಎಂದರ್ಥವಲ್ಲ. ಅಥವಾ ಭಾಷಾಪ್ರಭೇದಗಳನ್ನು ಮಾನ್ಯ ಮಾಡುವುದು ಎಂದರೆ ಆ ಪ್ರಭೇದಗಳಲ್ಲಿ ಬರೆದ ಕೆಲವು ಪಾಠಗಳನ್ನು ಪಠ್ಯಪುಸ್ತಕದಲ್ಲಿ ಸೇರಿಸಿಬಿಡುವುದೂ ಎಂದಲ್ಲ. ಸಮಸ್ತ ಲೋಕವ್ಯವಹಾರಕ್ಕೆ

ಹೋಲಿಸಿದರೆ ಪಠ್ಯಪುಸ್ತಕಗಳು ಅತ್ಯಂತ ಸಣ್ಣ ಸಮೂಹವನ್ನು ಉದ್ದೇಶಿಸಿರುವಂತಹದು. ಸಾಹಿತ್ಯ ಪ್ರಭಾವಶಾಲಿಯಾದುದಾದರೂ ಅದು ಕೂಡ ಸಮಾಜದ ಸಣ್ಣ ಸಮೂಹವನ್ನು ಪ್ರಭಾವಿಸುವಂತಹದು. ಪಠ್ಯಪುಸ್ತಕ ಮತ್ತು ಸಾಹಿತ್ಯದ ಈ ಸೀಮಿತ ಪ್ರಭಾವದ ಹಿನ್ನೆಲೆಯಲ್ಲಿ ವಿವಿಧ ಭಾಷಾ ಪ್ರಭೇದಗಳನ್ನು ಪಠ್ಯಪುಸ್ತಕಗಳಲ್ಲಿ ಸೇರಿಸುವುದು ಅಥವಾ ಸಾಹಿತ್ಯದಲ್ಲಿ ಬಳಸುವುದು ಭಾಷಾ ಪ್ರಮಾಣೀಕರಣದಲ್ಲಿರುವ ತರತಮಗಳನ್ನು ನಿವಾರಿಸುವ ನಿಟ್ಟಿನಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಪ್ರಯೋಜನಕ್ಕೆ ಬರುವುದಿಲ್ಲ. ಸಮಾಜದಲ್ಲಿರುವ ತರತಮಗಳು ನಿವಾರಣೆಯಾಗದೆ ಭಾಷಾ ಪ್ರಮಾಣೀಕರಣದ ತರತಮಗಳು ಕೂಡ ನಿವಾರಣೆಯಾಗುವುದಿಲ್ಲ.

೮.೧೦ ಪ್ರಮಾಣ ಭಾಷೆ : ಪ್ರಾತಿನಿಧಿಕ ಚಿಂತನೆಗಳು

ಕನ್ನಡ ಭಾಷೆಯ ಪ್ರಮಾಣೀಕರಣ ಕುರಿತಂತೆ ಬಿ.ಎಂ.ಶ್ರೀ, ಎಂ. ಚಿದಾನಂದಮೂರ್ತಿ ಮತ್ತು ಕೆ.ವಿ ಸುಬ್ಬಣ್ಣ ಅವರ ಚಿಂತನೆಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ಉಳಿದ ಚಿಂತಕರ ಪ್ರಮಾಣ ಭಾಷೆ ಕುರಿತ ಚಿಂತನೆಗಳು ಅವರ ಸಂಬಂಧಿಸಿದ ಅಧ್ಯಾಯಗಳಲ್ಲಿಯೇ ಅಡಕವಾಗಿವೆ.

'ಭಾಷೆಯನ್ನು ಸುಲಭ ಮಾಡುತ್ತೇನೆಂದು, ಅಪದ್ದ ಮಾಡಬಾರದು, ಗ್ರಾಮ್ಯವನ್ನು ದೂರವೇ ನಿಲ್ಲಿಸಿ, ಭಾಷೆ ಶುದ್ಧವಾಗಿ, ಬಿಗಿಯೂ ಕಟ್ಟು ಇರುವಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.'[೧೨] ಎನ್ನುವ ಬಿ.ಎಂ.ಶ್ರೀ ಅವರ ಮಾತುಗಳು ಅವರನ್ನು ಗ್ರಾಮೀಣ ಭಾಷಾಪ್ರಭೇದ ವಿರೋಧಿನೆಲೆಯಲ್ಲಿ ನಿಲ್ಲಿಸಿದೆ. ಅದರ ಸತ್ಯಾಸತ್ಯತೆ ಅರಿಯುವ ಉದ್ದೇಶ ಅವರನ್ನು ಇಲ್ಲಿ ಆಯ್ಕೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿದೆ. ಸಂಸ್ಕೃತದ ಹೊರೆಯಿಂದ ಬಿಡಿಸಿಕೊಂಡು 'ಹೊಸ ಬರಹ'ದ ರಚನೆಯ ಪ್ರಯತ್ನ ನಡೆಯುತ್ತಿರುವಾಗ 'ಸಂಸ್ಕೃತವು ಇಂದು ಕನ್ನಡದ ಮೇಲೆ 'ಸವಾರಿ' ಮಾಡುತ್ತಿಲ್ಲ' ಮತ್ತು 'ಕನ್ನಡದಲ್ಲಿ ಸಂಸ್ಕೃತ ಪದಗಳ ಸಹಾಯವಿಲ್ಲದೆ ನಾವು ಯಾವುದೇ ಉತ್ತಮ ಭಾವನೆಯನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ'[೧೩] ಎಂಬ ಎಂ. ಚಿದಾನಂದಮೂರ್ತಿ ಅವರ ಅಭಿಪ್ರಾಯ ಚರ್ಚೆಯನ್ನು ಆಹ್ವಾನಿಸುತ್ತಿದೆ. ಕೆ.ವಿ ಸುಬ್ಬಣ್ಣ ಅವರು ಎಂ. ಚಿದಾನಂದಮೂರ್ತಿ ಅವರ ಹಾಗೆ ನೇರವಾಗಿ ಸಂಸ್ಕೃತದ ಪರ ವಾದಿಸುತ್ತಿಲ್ಲವಾದರೂ ಅವರು 'ಮಹಾಪ್ರಾಣಾಕ್ಷರ'ಗಳನ್ನೂ, 'ಋ'ಕಾರವನ್ನು ಕನ್ನಡ ಅಕ್ಷರಮಾಲೆಯಿಂದ ಬಿಡುವುದರ ಬಗ್ಗೆ ವಿರೋಧ ವ್ಯಕ್ತಪಡಿಸುತ್ತ ಪರೋಕ್ಷವಾಗಿ 'ಸಂಸ್ಕೃತ ಕನ್ನಡಕ್ಕೆ ಹೊರೆಯಾಗಿಲ್ಲ' ಎಂಬ ನಿಲುವನ್ನೇ ಪ್ರತಿಪಾದಿಸುತ್ತಿದ್ದಾರೆ. ಕೆ.ವಿ ಸುಬ್ಬಣ್ಣ ಅವರ ಈ ನಿಲುವಿನ ಹಿಂದೆ ಕೆಲಸ ಮಾಡುತ್ತಿರುವ ಅಂಶಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

೮.೧೦.೧ ಪ್ರಮಾಣ ಭಾಷೆ : ಬಿ.ಎಂ.ಶ್ರೀ ಅವರ ಚಿಂತನೆ

ಬಿ.ಎಂ.ಶ್ರೀ ಒಲವು ಗ್ರಾಮ್ಯ ಕನ್ನಡಕ್ಕಿಂತ ಶಿಷ್ಟಕನ್ನಡಕ್ಕೆ ಎನ್ನುವ ಅಭಿಪ್ರಾಯವಿದ್ದು, '(ಆದರೆ) ಭಾಷೆಯನ್ನು ಸುಲಭ ಮಾಡುತ್ತೇನೆಂದು, ಅಪದ್ದ ಮಾಡಬಾರದು, ಗ್ರಾಮ್ಯವನ್ನು ದೂರವೇ ನಿಲ್ಲಿಸಿ,

ಭಾಷೆ ಶುದ್ಧವಾಗಿ, ಬಿಗಿಯೂ ಕಟ್ಟು ಇರುವಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.' ಎನ್ನುವ ಅವರ ಮಾತುಗಳು ಚರ್ಚೆಯನ್ನು ಆಹ್ವಾನಿಸುತ್ತವೆ. ಪ್ರಸ್ತುತ, ಗ್ರಂಥಸ್ಥವಾದ ಕನ್ನಡಭಾಷೆಯಲ್ಲಿ ತುಂಬಿ ತುಳುಕುತ್ತಿರುವ ಸಂಸ್ಕೃತಭಾಷಾಮೂಲದ ಪದಗಳಿಂದಾಗಿ ಸಾಮಾನ್ಯಜನರಿಗೆ ಕ್ಲಿಷ್ಟಕರವಾಗಿದೆ ಎನ್ನುವ ತಿಳಿವಳಿಕೆಯಲ್ಲಿ ಈ ಕುರಿತು ಗಂಭೀರವಾಗಿ ಸಂಶೋಧನೆಯಲ್ಲಿ ತೊಡಗಿರುವ ಡಿ.ಎನ್ ಶಂಕರಭಟ್ಟರು ಕನ್ನಡಭಾಷೆಯನ್ನು ಆಡುಭಾಷೆಯ ಮೂಲದಿಂದಲೇ ಉಳಿಸಲು ಹೊಸಚಿಂತನೆಗಳನ್ನು ಮಂಡಿಸುತ್ತಿದ್ದಾರೆ. ಶಂಕರಭಟ್ಟರು ಮಂಡಿಸುತ್ತಿರುವ ಚಿಂತನೆಗಳಿಗೆ ಬಿ.ಎಂ.ಶ್ರೀ ಅವರ ಚಿಂತನೆಗಳು ವ್ಯತಿರಿಕ್ತವಾಗಿವೆಯೇ ಎಂದು ಅವಲೋಕಿಸಬೇಕಾಗಿದೆ.

ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ ಎನ್ನುವ ತಮ್ಮ ಭಾಷಣದಲ್ಲಿ 'ಸಂಸ್ಕೃತ ಆಡುವುದು ನಿಂತುಹೋದ ಎರಡು ಸಾವಿರ ವರ್ಷದ ಮೇಲೂ ಅದೇ ಭಾಷೆಯಲ್ಲಿ ಬರೆಯುತ್ತಿದ್ದರೇ ಹೊರತು, ಜನರು ಆಡುವ ದೇಶಭಾಷೆಗಳಲ್ಲಿ ಬರೆಯುವ ಯೋಚನೆ ಯಾರಿಗೂ ಬರಲಿಲ್ಲ'[೧೪] ಎಂದು ಕನ್ನಡದ ಪ್ರಾಚೀನ ಸಾಹಿತಿಗಳನ್ನು ಬಿ.ಎಂ.ಶ್ರೀ ಕಟುವಾಗಿ ಟೀಕಿಸುತ್ತಾರೆ. ಸಾಹಿತ್ಯ ರಚನೆಗೆ ಸಂಸ್ಕೃತಭಾಷೆಯನ್ನು ಹಾಗೂ ಸಂಸ್ಕೃತಭೂಯಿಷ್ಠ ಕನ್ನಡವನ್ನು ಬಳಸುವುದನ್ನು ತಿರಸ್ಕರಿಸುವ ಶ್ರೀ ಅವರು ಸಂಸ್ಕೃತಪದಗಳಿಂದ ಮುಕ್ತವಾದ ಅಚ್ಚಕನ್ನಡದ ಗ್ರಾಮ್ಯ ಭಾಷೆಯನ್ನು ಸಾಹಿತ್ಯದ ಭಾಷೆಯಾಗಿ ಬಳಸುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಾರೆಯೇ ಎಂಬ ಅಚ್ಚರಿ ಕಾಡುತ್ತದೆ.

'ಗ್ರಾಮ್ಯವನ್ನು ಬಿಟ್ಟು ವಿದ್ಯಾವಂತರೂ ಉತ್ತಮ ಜಾತಿಯವರೂ ಆಡತಕ್ಕ ಸ್ಫುಟವಾದ ಕನ್ನಡವನ್ನು ಗ್ರಂಥ ಭಾಷೆಯಾಗಿ ತಿರುಗಿಸಿಬಿಟ್ಟರೆ, ಅಚ್ಚು ಹಾಕುವುದರಿಂದಲೂ ಮಕ್ಕಳಿಂದ ಕಲಿಸುವುದರಿಂದಲೂ ಇದೇ ನೆಲೆಯಾಗಿ ನಿಂತು ಎತ್ತಲೂ ಹರಡುತ್ತದೆ' ಎನ್ನುವ ಬಿ.ಎಂ.ಶ್ರೀ ಅವರ ಮಾತುಗಳಲ್ಲಿ 'ಮೇಲ್ಜಾತಿಪರವಾದ ನಿಲುವುಗಳನ್ನು'[೧೫] ಗುರುತಿಸಲಾಗಿದ್ದು 'ಶ್ರೀಯವರ ಈ ನಿಲುವನ್ನು ಒಪ್ಪಲಾಗದು'[೧೬] ಎಂಬ ಅಭಿಪ್ರಾಯಗಳು ಕನ್ನಡ ಭಾಷೆ ಕುರಿತ ಚರ್ಚೆಗಳಲ್ಲಿ ವ್ಯಕ್ತವಾಗಿವೆ. ಮೇಲಿನ ಮಾತುಗಳನ್ನು ಉದ್ಧರಿಸುತ್ತ 'ಗ್ರಾಮ್ಯವಾದ ಭಾಷೆಯನ್ನು ಕಾವ್ಯವಾಗಿಸಿದ ಬೇಂದ್ರೇಯವರಿಗೆ ಹೋಲಿಸಿದಾಗ ಶ್ರೀಯವರ ವಾದ ಮತ್ತು ವಾಚಕವರ್ಗದ ಸ್ವರೂಪಗಳು ಅರ್ಥವಾಗುತ್ತವೆ'[೧೭] ಎಂಬ ಎಚ್. ಎಸ್ ರಾಘವೇಂದ್ರರಾವ್ ಅವರ ಅಭಿಪ್ರಾಯದಲ್ಲೂ ಬಿ.ಎಂ.ಶ್ರೀ ಅವರ ಗ್ರಾಮ್ಯದ ಕುರಿತಾದ ಚಿಂತನೆ ಜಾತಿಗ್ರಹೀತವಾದುದು ಎಂಬ ಗ್ರಹಿಕೆಯಿದೆ. ಬಿ.ಎಂ.ಶ್ರೀ ಅವರ ಚಿಂತನೆಗಳನ್ನು ೨೦ನೇ ಶತಮಾನದ ಚಾರಿತ್ರಿಕ ಸಂದರ್ಭದಲ್ಲಿಟ್ಟು ನೋಡಬೇಕು ಎನ್ನುವ ಎಚ್ಚರದ ನಡುವೆಯೂ 'ಬ್ರಾಹ್ಮಣರು ಬಳಸುವ ಕನ್ನಡವನ್ನು ಮಾದರಿ ಭಾಷೆ ಮಾಡಬೇಕು ಎನ್ನುವುದರ ಮೇಲೆ ಪ್ರಶ್ನೆ ಎತ್ತಬಹುದು'[೧೮] ಎನ್ನುವುದರಲ್ಲಿ ಎಚ್.ಎಸ್ ರಾಘವೇಂದ್ರರಾವ್ ಅವರ ಗ್ರಹಿಕೆಗೆ ರಹಮತ್ ತರೀಕೆರೆ ಅವರ ಸಹಮತವಿದೆ. ಈ ಇಬ್ಬರು ಚಿಂತಕರ ಅಸ್ಪಷ್ಟ ಅನುಮಾನಗಳು

ರಾಜೇಂದ್ರ ಚೆನ್ನಿಯವರ 'ಬಿ.ಎಂ.ಶ್ರೀ ಕನ್ನಡದ ಬಗ್ಗೆ ಬರೆಯುವಾಗಲೂ ಕೋಮುವಾದಿ ಎಳೆಯೂ ತಳುಕು ಹಾಕಿಕೊಂಡಿದೆ'[೨೯] ಎನ್ನುವ ಅಭಿಪ್ರಾಯದಲ್ಲಿ ಹರಳುಗಟ್ಟಿದಂತಿದೆ.

ಬಿ.ಎಂ.ಶ್ರೀ ಅವರ ಗ್ರಾಮ್ಯವನ್ನು ಕುರಿತಾದ ಈ ಹೇಳಿಕೆ 'ಮುಂದಿನ ಗ್ರಂಥಗಳಿಗೆಲ್ಲಾ ಒಂದೇ ಸಮವಾದ ಭಾಷೆ'ಯನ್ನು ಅಂದರೆ ಕನ್ನಡದಲ್ಲಿಯೇ ಒಂದು ಪ್ರಮಾಣೀಕೃತ ಭಾಷೆಯ ಹುಡುಕಾಟದ ಸಂದರ್ಭದಲ್ಲಿ ಬಂದಿದ್ದು ಎನ್ನುವುದು ಗಮನಿಸಬೇಕಾದದ್ದು. ಬಿ.ಎಂ.ಶ್ರೀ ಅವರು ಯಾವುದನ್ನು ಕುರಿತು 'ಗ್ರಾಮ್ಯ' ಎನ್ನುತ್ತಿದ್ದಾರೆ ಎನ್ನುವುದೂ ಗೊಂದಲಕ್ಕೆ ಎಡೆ ಮಾಡುವಂತಿದೆ. 'ಕನ್ನಡಕ್ಕೆ ಒಂದು ಕಟ್ಟು' ಎನ್ನುವ ಅವರ ಲೇಖನದಲ್ಲಿ ಈ ಗೊಂದಲ ಸ್ಪಷ್ಟವಾಗಿದೆ. ಈ ಲೇಖನದಲ್ಲಿ ಅವರು ಕನ್ನಡಭಾಷೆ ಉಳಿದು ಬೆಳೆಯಲು ಯಾವ ಸ್ವರೂಪದಲ್ಲಿ ಇದ್ದರೆ ಸೂಕ್ತ ಎಂಬ ಚಿಂತನೆಯ ಹಿನ್ನೆಲೆಯಲ್ಲಿ ಅವರ ಕೆಲವು ನುಡಿಗಳನ್ನು ಗಮನಿಸೋಣ:–

'(ವಿದ್ಯಾರ್ಥಿಗಳಿಗೆ ದೇಶಭಾಷೆಯನ್ನು ಬರೆಯುವುದನ್ನು ಕಲಿಸಿಕೊಡುವ) ವಿಹಿತವಾದ ಮಾರ್ಗ ಯಾವುದು? ರೂಢಿಯಲ್ಲಿರುವ ಭಾಷೆಯನ್ನು ಕ್ರಮಪಡಿಸಿಕೊಳ್ಳುವುದೇ ಅಲ್ಲವೇ? ಕೆಲವರ ಮನಸ್ಸಿನಲ್ಲಿ ಭಾಷೆ ಎನ್ನುವುದು ಓಲೆಗರಿಯಿಂದ ಹೊರಟು ಅಚ್ಚಿನಮೊಳೆಯ ಮೂಲಕ ಇಳಿದುಬರುವಂತೆ ಕಾಣುತ್ತದೆ. ಇವರಿಗೆ ಪುಸ್ತಕದಲ್ಲಿ ಕಣ್ಣಿಗೆ ತೋರುವ ಭಾಷೆ ಅಂದರೆ ಗೌರವ; ಜನರ ಬಾಯಿಂದ ಕಿವಿಗೆ ಬೀಳುವ ಭಾಷೆ ಅಂದರೆ ಧಿಕ್ಕಾರ. ಆದರೂ ಬರೆಯುವ ಭಾಷೆಗೆ ಆಡುವ ಭಾಷೆಯೇ ಜನ್ಮಸ್ಥಾನ. ಕಾವ್ಯವನ್ನು ಮೊದಲು ಬರೆದವನು ಆಡುವ ಭಾಷೆಯಲ್ಲಿ ತಾನೇ ಬರೆದಿರಬೇಕು. ಇವತ್ತಿನವರೆಗೆ ಕನ್ನಡ ಪುಸ್ತಕವೇ ಇಲ್ಲದಿದ್ದರೆ, ಈಗ ಮೊದಲು ಬರೆಯತಕ್ಕವನೂ ಹಾಗೆ ತಾನೇ ಮಾಡಬೇಕು? ಹಿಂದಿನ ಭಾಷೆ ಆಗಿನ ಜನಕ್ಕೆ ತಿಳಿಯುತ್ತಿತ್ತು; ಈಗಿನ ಜನಕ್ಕೆ ತಿಳಿಯುವುದಿಲ್ಲ. ಅದರ ವ್ಯಾಕರಣ ಕಷ್ಟ; ಇದಲ್ಲದೆಯೂ ಅದರ ಶಬ್ದಕೋಶ ಈಗಿನ ಅಭಿಪ್ರಾಯಗಳನ್ನೆಲ್ಲಾ ಹೇಳಲಾರದು. ಆದರೂ ಬಹುಕಾಲದಿಂದಲೂ ಬರೆದು ಬರೆದು ಒಂದು ಕ್ರಮಕ್ಕೆ ಬಂದಿರುವ ಗ್ರಂಥಭಾಷೆ ಇರುವಾಗ, ಈಗಿನ ಗ್ರಂಥಕರ್ತರು ಅದನ್ನು ಧಿಕ್ಕಾರ ಮಾಡುವುದಕ್ಕೂ ಆಗುವುದಿಲ್ಲ. ಅದರ ಮೇಲೂ ದೃಷ್ಟಿ ಇರಲಿ; ಹೊಸ ಭಾಷೆಯ ಅಕ್ರಮ, ಅಪರೂಪವನ್ನೆಲ್ಲಾ ಅದರ ಮೇಲಿನ ಗಮನದಿಂದ ಒಂದು ಕ್ರಮಕ್ಕೆ ತರೋಣ. ಈಗ ಆಡುವ ಭಾಷೆಯಲ್ಲಿ ಕ್ರಮವಿಲ್ಲ, ಏಕರೂಪವಿಲ್ಲ; ಪ್ರಾಂತ್ಯಭೇದವಿದೆ, ಮಿಶ್ರವಿದೆ, ಗ್ರಾಮ್ಯವಿದೆ ಅರ್ಥ ಕ್ರಮ ಎರಡೂ ಬೇಕಾದರೂ ಅರ್ಥ ಮುಂದು, ಕ್ರಮ ಹಿಂದು; ಆದದ್ದರಿಂದ ಅರ್ಥವಾಗುವ ಹೊಸ ಭಾಷೆಯನ್ನೇ ಹಿಡಿದು ಕ್ರಮಕ್ಕೆ ಬರುವಂತೆ ತಪ್ಪು ಭಾಗವನ್ನೆಲ್ಲಾ ಶೋಧಿಸೋಣ. ಎರಡು ಭಾಷೆಗೂ ಮಧ್ಯಮಾರ್ಗವನ್ನು ಹಿಡಿದರೆ ಅದು ಸಾಧ್ಯವಾಗುತ್ತದೆ. ಹೊಸಗನ್ನಡದಲ್ಲಿ ವಚನಗ್ರಂಥವನ್ನು ಬರೆಯುವುದಕ್ಕೆ, ಸತ್ತ ಕವಿಗಳೂ ಶಾಸನಕಾರರೂ ಬಲವಾಗಿ ಹಿಡಿದಿರುವ ಮುಷ್ಟಿಯಿಂದ ಭಾಷೆಯನ್ನು ಸಡಿಲಿಸಿ, ಬದುಕಿರತಕ್ಕವರ ಬಾಯಿಯಲ್ಲಿ ಸ್ವತಂತ್ರವಾಗಿ ಉಸಿರಾಡಿ ಜೀವಕಳೆ

ತುಂಬಿಕೊಳ್ಳುವಂತೆ ಮಾಡಬೇಕು. ಆದರೆ ಭಾಷೆಯನ್ನು ಸುಲಭ ಮಾಡುತ್ತೇನೆಂದು, ಅಪದ್ಧ ಮಾಡಬಾರದು; ಗ್ರಾಮ್ಯವನ್ನು ದೂರವೇ ನಿಲ್ಲಿಸಿ, ಭಾಷೆ ಶುದ್ಧವಾಗಿ, ಬಿಗಿಯೂ ಕಟ್ಟೂ ಇರುವಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.'

ಇಲ್ಲಿ ಕನ್ನಡದ ಉಳಿವಿಗೆ ಬಿ.ಎಂ.ಶ್ರೀ ಅವರು 'ಸತ್ತ ಕವಿಗಳೂ ಶಾಸನಕಾರರಿಂದ ಜೀವಕಳಕೊಂಡ ಗ್ರಾಂಥಿಕ ಭಾಷೆ'ಗೆ ಬದಲಿಯಾಗಿ 'ಜೀವಕಳೆಯಿಂದ ಕೂಡಿದ ಆಡುಭಾಷೆಯನ್ನೂ', 'ಪಂಡಿತರ ಹಳೆಗನ್ನಡಕ್ಕೆ' ಬದಲಾಗಿ 'ಜನಸಾಮಾನ್ಯರಾಡುವ ಹೊಸಗನ್ನಡ'ದ ಬಳಕೆಯನ್ನೂ ಸ್ಪಷ್ಟವಾಗಿಯೇ ಸೂಚಿಸುತ್ತಿದ್ದಾರೆ. ಇದರೊಂದಿಗೆ 'ಗ್ರಾಮ್ಯ'ವನ್ನು ದೂರವೇ ನಿಲ್ಲಿಸಬೇಕೆಂದು ಹೇಳುತ್ತ ಗೊಂದಲ ಮೂಡಿಸುತ್ತಿದ್ದಾರೆ. ಹಾಗಿದ್ದರೆ ಬಿ.ಎಂ.ಶ್ರೀ ಅವರು ಭಾವಿಸಿದ 'ಗ್ರಾಮ್ಯ' ದ ಸ್ವರೂಪವೇನು ಎಂಬುದನ್ನು ಸ್ಪಷ್ಟಗೊಳಿಸಿಕೊಳ್ಳಬೇಕಾಗಿದೆ.

'ಗ್ರಾಮ್ಯವನ್ನು ಬಿಟ್ಟು ವಿದ್ಯಾವಂತರೂ ಉತ್ತಮ ಜಾತಿಯವರೂ ಆಡತಕ್ಕ ಸ್ಫುಟವಾದ ಕನ್ನಡವನ್ನು ಗ್ರಂಥ ಭಾಷೆಯಾಗಿ ತಿರುಗಿಸಿಬಿಟ್ಟರೆ, ಅಚ್ಚು ಹಾಕುವುದರಿಂದಲೂ ಮಕ್ಕಳಿಂದ ಕಲಿಸುವುದರಿಂದಲೂ ಇದೇ ನೆಲೆಯಾಗಿ ನಿಂತು ಎತ್ತಲೂ ಹರಡುತ್ತದೆ' ಎನ್ನುವ ಅವರ ನುಡಿಗಳು ಗ್ರಾಮ್ಯವೆಂದರೆ ಅಶಿಕ್ಷಿತರು ಮತ್ತು ಕೆಳಜಾತಿಯವರು ಆಡುವ ಭಾಷೆ ಎನ್ನುವ ಅರ್ಥ ಕೊಡುವಂತಿವೆ. ಇದುವೇ ಭಾಷೆ ಕುರಿತ ಬಿ.ಎಂ.ಶ್ರೀ ಅವರ ಚಿಂತನೆ ಮೇಲ್ಜಾತಿಪರವಾದದ್ದು ಎನ್ನುವ ಅಭಿಪ್ರಾಯ ಮೂಡಲು ಕಾರಣವಾಗಿದೆ. ಬಿ.ಎಂ.ಶ್ರೀ ಅವರು ಜಾತಿಯಿಂದ ಬ್ರಾಹ್ಮಣರಾದದ್ದೂ ಈ ಅಭಿಪ್ರಾಯಕ್ಕೆ ಅನುಮೋದನೆಯ ಮುದ್ರೆಗಳು ಸುಲಭವಾಗಿ ಬೀಳಲು ಕಾರಣವಾಗಿದ್ದಂತೆ ತೋರುತ್ತವೆ.

ಈ ಗ್ರಹಿಕೆಯನ್ನು ಪುನರಾವಲೋಕಿಸುವ ಅಗತ್ಯವಿದೆ. ಬಿ.ಎಂ.ಶ್ರೀ ಅವರ ಕೆಳಗಿನ ಮಾತುಗಳನ್ನು ಗಮನಿಸಬೇಕಾಗಿದೆ.

೧ 'ಈಗಿನ ಕಾಲದಲ್ಲಿ ವಿದ್ಯಾವಂತವಾದವನು ಇಂಗ್ಲಿಷ್ ವಿದ್ಯೆಯಿಂದ ತಾವು ಪಡೆದ ಉತ್ತಮ ಜ್ಞಾನವನ್ನು ಕೂಡಿದಮಟ್ಟಿಗೆ ಸಾಮಾನ್ಯಜನರೂ ತಿಳಿದುಕೊಳ್ಳುವ ಹಾಗೆ ಅವರು ಆಡುವ ಭಾಷೆಯಲ್ಲೇ ಹರಡುವುದಕ್ಕೆ ಶಕ್ತರಾಗಿರಬೇಕಾದದ್ದು ನಮ್ಮ ದೇಶದ ಏಳಿಗೆಗೆ ಅವಶ್ಯಕವಾದ ಸೌಕರ್ಯಗಳಲ್ಲಿ ಒಂದಾಗಿದೆ'

೨ 'ಸಂಸ್ಕೃತ ಆಡುವುದು ನಿಂತುಹೋದ ಎರಡು ಸಾವಿರ ವರ್ಷದ ಮೇಲೂ ಅದೇ ಭಾಷೆಯಲ್ಲಿ ಬರೆಯುತ್ತಿದ್ದರೇ ಹೊರತು, ಜನರು ಆಡುವ ದೇಶಭಾಷೆಗಳಲ್ಲಿ ಬರೆಯುವ ಯೋಚನೆಯೇ ಯಾರಿಗೂ ಬರಲಿಲ್ಲ.'

೩ '(ಆದರೆ ಸದ್ಯಕ್ಕೆ) ಜನರಿಗೆ ತಿಳಿಯದ ಭಾಷೆಯಲ್ಲಿ ಬರೆಯುವುದರಲ್ಲಿ ಯಾವ ಬುದ್ಧಿವಂತಿಕೆಯೂ ಇಲ್ಲ. ಹೊಸಗನ್ನಡವನ್ನೇ ಎಲ್ಲರೂ ಹಿಡಿಯಬೇಕು.'

೪ 'ಜನಗಳು ರೂಢಿಗೆ ತಂದ ಮಾತುಗಳನ್ನು ಸಮಯೋಚಿತವಾಗಿ ಒಪ್ಪಿಕೊಳ್ಳಬೇಕು.'

೫ 'ಭಾಷೆಯಿಂದ ಜನರ ಜೀವನ ಮೇಲ್ಪಟ್ಟು, ಅವರ ವಿಚಾರಶಕ್ತಿ ಹೆಚ್ಚಿ, ಅವರ ಜೀವನದಲ್ಲಿ, ಒಟ್ಟು ಜನಾಂಗದ ಜೀವನದಲ್ಲಿ, ಒದಗಬಹುದಾದ ಸಮಸ್ಯೆಗಳು ಪಾರಾಗಿ ಜನತೆಯೂ ದೇಶವೂ ಸ್ವರ್ಗಪಥಕ್ಕೆ ಹಾರುವ ಪಕ್ಷಿಯಂತೆ ಮೇಲಕ್ಕೆ ಮೇಲಕ್ಕೆ ಹೋಗಲು ಸಾಧಕವಾಗಬೇಕು.'

ಮೇಲ್ಕಂಡ ಬಿ.ಎಂ.ಶ್ರೀ ಅವರ ಹೇಳಿಕೆಗಳಲ್ಲಿ 'ಸಾಮಾನ್ಯಜನ', 'ಜನರು ಆಡುವ ದೇಶಭಾಷೆ', 'ಜನರಿಗೆ ತಿಳಿಯದ ಭಾಷೆ' ಮತ್ತು 'ಜನರು ರೂಢಿಗೆ ತಂದ ಮಾತುಗಳು' ಎನ್ನುವುದನ್ನು ಗಮನಿಸಬೇಕು. ಬಿ.ಎಂ.ಶ್ರೀ ಅವರು ಇಲ್ಲಿ ಯಾರನ್ನು 'ಜನ' ಎನ್ನುತ್ತಿದ್ದಾರೋ ಆ ಜನ ಮುಂದೆ ಅವರ ಶಿಷ್ಯರಾದ ಕುವೆಂಪು ಅವರ ಪರಿಕಲ್ಪನೆಯ ಈ ನಾಡಿನ 'ಶ್ರೀಸಾಮಾನ್ಯ'ರೇ ಹೊರತು ನಿರ್ದಿಷ್ಟ ಜಾತಿ ಜನಾಂಗದ ಜನರಲ್ಲ. ಆದರೂ ಬಿ.ಎಂ.ಶ್ರೀ ಅವರು 'ಗ್ರಾಮ್ಯವನ್ನು ಬಿಟ್ಟು ವಿದ್ಯಾವಂತರೂ ಉತ್ತಮ ಜಾತಿಯವರೂ ಆಡತಕ್ಕ ಸ್ಫುಟವಾದ ಕನ್ನಡವನ್ನು ಗ್ರಂಥ ಭಾಷೆಯಾಗಿ' ಯಾಕೆ ಶಿಫಾರಸ್ಸು ಮಾಡುತ್ತಿದ್ದಾರೆ ಎನ್ನುವ ಪ್ರಶ್ನೆ ಮೂಡುತ್ತದೆ. ಆದರೆ ಈ ಮಾತುಗಳನ್ನು ಶ್ರೀ ಅವರು ಯಾವ ಸಂದರ್ಭದಲ್ಲಿ ಹೇಳುತ್ತಿದ್ದಾರೆ ಎನ್ನುವುದನ್ನು ಗಮನಿಸಬೇಕು.

ಕನ್ನಡಕ್ಕೊಂದು ಸಮರ್ಥವಾದ ಗ್ರಂಥಭಾಷೆಯನ್ನು ರೂಪಿಸುವ ಹಿನ್ನೆಲೆಯಲ್ಲಿ ಬಿ.ಎಂ.ಶ್ರೀ ಅವರು ಈ ಮಾತುಗಳನ್ನು ಹೇಳುತ್ತಿದ್ದಾರೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಮಾಡಿದ ಈ ಭಾಷಣದ ಮುಂದಿನ ಮಾತುಗಳನ್ನೇ ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. 'ಭಾಷೆಯನ್ನು ಈ ತರದಲ್ಲಿ ಸೋಸುವುದಕ್ಕೆ ಉದ್ದೇಶವೇನೆಂದರೆ, ಎಲ್ಲಾ ಜನರೂ ಓದಬೇಕೆನ್ನುವುದೇ. ರಾಜರಿಗೇ ಆಗಲಿ, ಪಂಡಿತರಿಗೇ ಆಗಲಿ, ಬರೆಯತಕ್ಕ ಕಾಲ ಹೋಯಿತು. ಈಗ ಹೆಂಗಸರು, ಗಂಡಸರು, ಚಿಕ್ಕವರು, ದೊಡ್ಡವರು, ಬ್ರಾಹ್ಮಣರು, ಒಕ್ಕಲಿಗರು, ಅಷ್ಟರೂ ಓದುವಂತೆ ಬರೆಯಬೇಕು' ಅಂದರೆ ಕನ್ನಡಭಾಷೆಯನ್ನು ಜನಸಾಮಾನ್ಯರಿಗೆ ಹೊರೆಯಾದ ಗ್ರಾಂಥಿಕವಾದ ಸಂಸ್ಕೃತಭಾಷೆಯ ಹಿಡಿತದಿಂದಲೂ, ವ್ಯಾಕರಣಭಾರದಿಂದ ನಲುಗುವ ಹಳಗನ್ನಡದಿಂದಲೂ ಮುಕ್ತಗೊಳಿಸಿ ಎಲ್ಲರೂ ಸುಲಭವಾಗಿ ಬಳಸಬಹುದಾದಂತಹ 'ಪ್ರಮಾಣ ಭಾಷೆ'ಯೊಂದನ್ನು ರೂಪಿಸುವ ತುರ್ತು ಶ್ರೀ ಅವರದ್ದಾಗಿತ್ತು.

ಬಿ.ಎಂ.ಶ್ರೀ ಅವರು ಮಾತನಾಡುತ್ತಿರುವ ಒಂದು ಶತಮಾನದಷ್ಟು ಹಿಂದಿನ ಕನ್ನಡಭಾಷೆಯ ಸ್ಥಿತಿಯನ್ನು ಹಿಂತಿರುಗಿ ನೋಡಿದರೆ ಆ ಸಂದರ್ಭದಲ್ಲಿ ಇಂಗ್ಲಿಷಿನ ಎದುರು ಕನ್ನಡದ ಶಿಷ್ಟಭಾಷೆಯೂ ತಬ್ಬಲಿಯಂತೆ ತೋರುತ್ತಿತ್ತು. ಕನ್ನಡಜನ ಇಂಗ್ಲೀಷಿನ ಎದುರು ಕೀಳರಿಮೆಯಿಂದ ನರಳುತ್ತಿದ್ದಾಗ ಪ್ರಾದೇಶಿಕವಾಗಿ ಹಲವಾರು ಉಪಭಾಷೆಗಳನ್ನು ಹೊಂದಿದ್ದ ಕನ್ನಡಕ್ಕೆ ಒಂದು ನಿರ್ದಿಷ್ಟ ಪ್ರಮಾಣೀಕೃತ ಭಾಷೆ ಅಗತ್ಯವೆಂದು ಶ್ರೀ ಅವರಿಗೆ ಅನ್ನಿಸಿದಂತೆ ಕಾಣುತ್ತದೆ. ಆಗ ಅವರಿಗೆ 'ವಿದ್ಯಾವಂತರೂ ಉತ್ತಮ ಜಾತಿಯವರೂ ಆಡತಕ್ಕ ಸ್ಫುಟವಾದ ಕನ್ನಡ' ಆ ಸಂದರ್ಭದಲ್ಲಿನ ಏಕೈಕ

ಪರ್ಯಾಯದಂತೆಯೋ ಲಭ್ಯ ಮಾದರಿಯಂತೆಯೋ ಕಂಡುಬಂದಿದ್ದರೆ ಅದು ಸಹಜ. ಈ ಚಿಂತನೆಯಲ್ಲಿ 'ವಿದ್ಯಾವಂತರ ಭಾಷೆ' ಎನ್ನುವುದನ್ನು ಗ್ರಾಮೀಣರ ಭಾಷೆಯ ಅವಗಣನೆಯಂತೆ ಮತ್ತು 'ಉತ್ತಮಜಾತಿಯವರು ಆಡತಕ್ಕ ಸ್ಫುಟವಾದ ಕನ್ನಡ' ಎನ್ನುವುದನ್ನು ಕೆಳಜಾತಿಯವರ ಭಾಷೆಯ ಅವಗಣನೆಯೆಂದು ಪರಿಗಣಿಸಿದ್ದೇ ಭಾಷೆಯ ಕುರಿತಾದ ಬಿ.ಎಂ.ಶ್ರೀ ಅವರ ಚಿಂತನೆ ಮೇಲ್ಜಾತಿಪರವಾದದ್ದು ಎನ್ನುವ ಅಭಿಪ್ರಾಯ ಮೂಡಲು ಕಾರಣವಾಗಿವೆ. ಬಿ.ಎಂ.ಶ್ರೀ ಅವರ ಒಟ್ಟುಚಿಂತನೆಯಲ್ಲಿ ಗ್ರಾಮ್ಯಕನ್ನಡವನ್ನು ತಿರಸ್ಕಾರದಿಂದ ಕಂಡ ನಿದರ್ಶನಗಳಿಲ್ಲ. ಅವರು ಇಂಗ್ಲೀಶ್ ಗೀತಗಳನ್ನು ಕನ್ನಡಕ್ಕೆ ತಂದಿದ್ದೂ, ಕನ್ನಡಭಾಷೆ ಜನಮುಖಿಯಾಗಿರಬೇಕೆಂದು ಮತ್ತೆ ಮತ್ತೆ ಪ್ರತಿಪಾದಿಸಿದ್ದೂ ಗ್ರಾಮ್ಯಕನ್ನಡದ ಪರವಾಗಿನ ಚಿಂತನೆಯೇ ಆಗಿದೆ.

ಕನ್ನಡಸಾಹಿತ್ಯ ಚರಿತ್ರೆಯಲ್ಲಿ ದಲಿತ ಸಂಘರ್ಷ ಸಮಿತಿಯ ರೂವಾರಿಗಳಲ್ಲಿ ಪ್ರಮುಖರಾದ ಬಿ.ಕೃಷ್ಣಪ್ಪನವರ ಲೇಖನ 'ಕುವೆಂಪು ಲೇಖನಗಳಲ್ಲಿ ದಲಿತ ಜೀವನ ಚಕ್ರ' ಹುಟ್ಟುಹಾಕಿದ ವಾಗ್ವಾದ ಇಲ್ಲಿ ಉಲ್ಲೇಖನೀಯ. ಕುವೆಂಪು ಅವರ ಎರಡು ಕಾದಂಬರಿಗಳಲ್ಲಿ ಬರುವ ದಲಿತ ಮತ್ತು ಒಕ್ಕಲಿಗ (ಕುವೆಂಪು ಈ ಸಮುದಾಯಕ್ಕೆ ಸೇರಿದವರು) ಪಾತ್ರಚಿತ್ರಣಗಳಲ್ಲಿ ಲೇಖಕ ತೋರುವ ತಾರತಮ್ಯವನ್ನು ಮತ್ತು ಇದಕ್ಕೆ ಕಾರಣವಾಗಿರುವ ಲೇಖಕನ ಜಾತಿಪ್ರಜ್ಞೆಯನ್ನು ಕೃಷ್ಣಪ್ಪ ಅವರು ತಮ್ಮ ಲೇಖನದಲ್ಲಿ ವಿವರಿಸಿದ್ದರು. ಬಿಡಿಬಿಡಿಯಾಗಿ ಓದಿದಾಗ ಕೃಷ್ಣಪ್ಪನವರ ವಾದ ಸರಿ ಎನಿಸಿದರೂ ಕುವೆಂಪು ಅವರ ಸಾಹಿತ್ಯದ ಒಟ್ಟು ಧ್ವನಿ ದಲಿತಪರವಾಗಿರುವುದರಿಂದ ದಲಿತ ಸಂಘರ್ಷ ಸಮಿತಿಯವರೂ ಸೇರಿದಂತೆ ಕನ್ನಡ ಸಾಹಿತ್ಯಲೋಕ ಕೃಷ್ಣಪ್ಪನವರ ವಾದವನ್ನು ಸಮರ್ಥಿಸಲಿಲ್ಲ.

ಕುವೆಂಪು ಅವರ ಕುರಿತಾಗಿಯೇ ಇನ್ನೊಂದು ನಿದರ್ಶನವನ್ನು ಕೊಡುವುದಾದರೆ ಗುತ್ತಿ, ತಿಮ್ಮಿ, ಐತ, ಪೀಂಚಲುರಂತಹ ಸಾಮಾನ್ಯರ ಬಗ್ಗೆ ಚಿಂತಿಸಿದ ಕುವೆಂಪು ಅವರು ಜಾನಪದ ಸಾಹಿತ್ಯದ ಕುರಿತು ಗಂಭೀರರಾಗಿರಲಿಲ್ಲ. ಈವೊಂದು ನಿದರ್ಶನದ ಮೂಲಕವೇ ಕುವೆಂಪು ಅವರನ್ನು ಸಾಮಾನ್ಯಜನರ ವಿರುದ್ಧದ ಚಿಂತನೆವುಳ್ಳವರೆಂದು ನಿರ್ಧರಿಸಲಾಗುವುದಿಲ್ಲ. ಹಾಗೆಯೇ ಮೇಲ್ಕಂಡ ಒಂದು ಮಾತಿನ ಮೇಲ್‌ಸ್ತರದ ಗ್ರಹಿಕೆಯಿಂದ ಬಿ.ಎಂ.ಶ್ರೀ ಅವರ ಚಿಂತನೆಯನ್ನು ಗ್ರಾಮ್ಯದ ವಿರುದ್ಧದ ಚಿಂತನೆಯೆಂದೋ ಅಥವಾ ಮೇಲ್ಜಾತಿಪರವಾದ ಚಿಂತನೆಯೆಂದು ನಿರ್ಧರಿಸಲಾಗುವುದಿಲ್ಲ. ಲೇಖಕನೊಬ್ಬ ಹುಟ್ಟಿದ ಜಾತಿಯನ್ನು ಬದಿಗಿಟ್ಟು ಕುವೆಂಪು ಅವರ ಸಂದರ್ಭದಲ್ಲಿ ನಡೆದಂತಹ ಚರ್ಚೆಗಳು ಬಿ.ಎಂ.ಶ್ರೀ ಅವರ ಚಿಂತನೆಗಳ ವಿಚಾರಗಳಲ್ಲಿ ನಡೆಯದೇ ಇರುವುದು ಭಾಷೆ ಕುರಿತ ಬಿ.ಎಂ.ಶ್ರೀ ಅವರ ಚಿಂತನೆ 'ಮೇಲ್ಜಾತಿಪರವಾದದ್ದು' ಎನ್ನುವ ಅಭಿಪ್ರಾಯ ಹಾಗೆಯೇ ಉಳಿದುಕೊಂಡು ಬರಲು ಕಾರಣವಾಗಿದೆ.

ಬಿ.ಎಂ.ಶ್ರೀ ಅವರ ಒಟ್ಟುಚಿಂತನೆ ಆಡುಭಾಷೆಯ ಕನ್ನಡದ ಪರವಾಗಿದೆ. ಸಂಸ್ಕೃತದ ಹಂಗಿನಿಂದ ತಪ್ಪಿಸಿ, ಕನ್ನಡ ಕರ್ನಾಟಕಗಳ ಕಥನವನ್ನು ದ್ರಾವಿಡ ಚೌಕಟ್ಟುಗಳ ಮೂಲಕ ನೋಡಲು

ಮೊದಲು ಯತ್ನಿಸಿದವರು ಬಿ.ಎಂ ಶ್ರಿಕಂಠಯ್ಯನವರು. ಅವರು ಹಾಕಿಕೊಟ್ಟ ಹಾದಿಯಲ್ಲಿ ಡಿ.ಎನ್ ಶಂಕರ ಭಟ್ಟರು ಭಾಷಾಕ್ಷೇತ್ರದಲ್ಲಿ ಪ್ರವೇಶಿಸುತ್ತಿದ್ದಾರೆ.[೨೦] ಬಿ.ಎಂ.ಶ್ರೀ ಅವರು ಆರಂಭಿಸಿದ ಕನ್ನಡ-ಸಂಸ್ಕೃತ ವಾಗ್ವಾದವನ್ನು ಬೇರೊಂದು ಪರಿಯಲ್ಲಿ ಮುಂದುವರೆಸುತ್ತಿರುವಂತೆ ಕಾಣುವ ಶಂಕರಭಟ್ಟರು, ವ್ಯಾಕರಣ ವಾಕ್ಯರಚನೆ ಪದ ರಚನೆಗಳಲ್ಲಿ ಸಂಸ್ಕೃತದ ಯಜಮಾನಿಕೆಯನ್ನು ಪ್ರಶ್ನಿಸುತ್ತಿದ್ದಾರೆ. ಅವರ ಈ ಉಪಕ್ರಮವು ಕನ್ನಡ ಭಾಷೆಯನ್ನು ಸಂಸ್ಕೃತ ಶಬ್ದಗಳ ಹಂಗಿಲ್ಲದೆ ರೂಪಿಸುವತ್ತ ಕರೆದುಕೊಂಡು ಹೋಗುತ್ತಿದೆ. ಇದು ಶ್ರೀಯವರು 'ಕನ್ನಡ ಬಾವುಟ'ದಲ್ಲಿ ಕನ್ನಡ ಬರೆಹವನ್ನು ಸುಧಾರಿಸಲು ಮಾಡಿದ ಪ್ರಯೋಗವನ್ನೂ ನೆನಪಿಸುತ್ತಿದೆ.[೨೧] ಸಾರಾಂಶದಲ್ಲಿ ಇಂದು ಡಿ.ಎನ್ ಶಂಕರಭಟ್ಟರು ಮಂಡಿಸುತ್ತಿರುವ ಸಂಸ್ಕೃತರಹಿತ ಆಡುಭಾಷಾಪ್ರಧಾನವಾದ ಕನ್ನಡದ ಚಿಂತನೆಯ ಮೂಲ ಬಿ.ಎಂ.ಶ್ರೀ ಅವರ ಚಿಂತನೆಗಳಲ್ಲಿಯೇ ಇವೆ.

೮.೧೦..೨ ಎಂ. ಚಿದಾನಂದಮೂರ್ತಿ ಅವರ ಚಿಂತನೆ

'ಸಂಸ್ಕೃತವು ಇಂದು ಕನ್ನಡದ ಮೇಲೆ 'ಸವಾರಿ' ಮಾಡುತ್ತಿಲ್ಲ' ಮತ್ತು 'ಕನ್ನಡದಲ್ಲಿ ಸಂಸ್ಕೃತ ಪದಗಳ ಸಹಾಯವಿಲ್ಲದೆ ನಾವು ಯಾವುದೇ ಉತ್ತಮ ಭಾವನೆಯನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ'[೨೨] ಎಂಬ ಚಿದಾನಂದಮೂರ್ತಿ ಅವರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕನ್ನಡ ಭಾಷಾ ಪ್ರಮಾಣೀಕರಣದ ಕುರಿತ ಅವರ ಚಿಂತನೆಗಳನ್ನು ಅರಿಯಲು ಇಲ್ಲಿ ಪ್ರಯತ್ನಿಸಲಾಗಿದೆ. 'ಸಂಸ್ಕೃತವು ಇಂದು ಕನ್ನಡದ ಮೇಲೆ 'ಸವಾರಿ' ಮಾಡುತ್ತಿಲ್ಲ' ಎಂಬುದು ನಿಜವಾಗಿದ್ದರೆ 'ಕನ್ನಡ ಬರಹವನ್ನು ಸರಿಪಡಿಸೋಣ' ಮತ್ತು 'ಕನ್ನಡಕ್ಕೊಂದು 'ಹೊಸ ಬರಹ' ದಂತಹ ಕೃತಿಗಳು ಸೃಷ್ಟಿಯಾಗುವ ಅಗತ್ಯವೇ ನಿರ್ಮಾಣವಾಗುತ್ತಿದ್ದಿಲ್ಲ ಎನ್ನುವುದು ಒಂದು ವಾದ. ಆದರೂ ಚಿದಾನಂದಮೂರ್ತಿ ಅವರ ಮಾತನ್ನು ಒಂದು ಅಭಿಪ್ರಾಯವಾಗಿ ಸ್ವೀಕರಿಸಬಹುದು. ಆದರೆ 'ಕನ್ನಡದಲ್ಲಿ ಸಂಸ್ಕೃತ ಪದಗಳ ಸಹಾಯವಿಲ್ಲದೆ ನಾವು ಯಾವುದೇ ಉತ್ತಮ ಭಾವನೆಯನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ'ವೆಂಬ ಚಿದಾನಂದಮೂರ್ತಿ ಅವರ ಮಾತು ಚರ್ಚೆಯನ್ನು ಆಹ್ವಾನಿಸುತ್ತದೆ. ಒಂದು ಭಾಷೆಯಲ್ಲಿ ಕೆಲವು ವಿಷಯಗಳನ್ನು ಅಭಿವ್ಯಕ್ತಿ ಮಾಡಲು ಆಗುವುದಿಲ್ಲ, ಮತ್ತೊಂದು ಭಾಷೆಯಲ್ಲಿ ಆಗುತ್ತದೆ ಎನ್ನುವ ನಂಬಿಕೆ ಸಮಾಜದ ಕೆಲವರಲ್ಲಿ ಇರುವುದು ಹೌದು. ಸಾಮಾನ್ಯವಾಗಿ ಈ ಮನೋಭಾವ ಒಂದು ಶ್ರೇಷ್ಠ, ಮತ್ತೊಂದು ಶ್ರೇಷ್ಠವಲ್ಲ ಎನ್ನುವ ಸಾಮಾಜಿಕ ಶ್ರೇಣೀಕರಣಗಳಿಗೆ ಲಗತ್ತಾಗಿ ಭಾಷೆಗೆ ಬಂದಿರುವಂತಹದು. ಈ ಕಾರಣಕ್ಕಾಗಿಯೇ, ರಹಮತ್ ತರೀಕೆರೆ ಅವರು ಗ್ರಹಿಸುವಂತೆ ಶಾಸನ ಹಾಗೂ ಪ್ರಾಚೀನ ಕಾವ್ಯಗಳಲ್ಲಿ ಸಹದೇವರ ಮತ್ತು ರಾಜರ ಕೊಂಡಾಟ ಬಂದಾಗ, ಭಾಷೆ ಕನ್ನಡ ಬಿಟ್ಟು ಸಂಸ್ಕೃತಕ್ಕೆ ನೆಗೆಯುತ್ತದೆ. ಸಂಸ್ಕೃತದಲ್ಲಿ ಹೊಗಳಿಕೆಗೆ ಬೇಕಾದ ಪದಸಂಪತ್ತು ಹೆಚ್ಚಿರಬೇಕು ಅಥವಾ ಅದನ್ನು ಸ್ತುತಿಗೆ ಬಳಸಿ ಕವಿಗಳು ಪಳಗಿಸಿ ಈ ಹದಕ್ಕೆ

ತಂದಿರಬೇಕು. ಜನಭಾಷೆಯಾದ ಕನ್ನಡದಲ್ಲಿ ಹೊಗಳಿದರೆ ಪರಿಣಾಮ ಬೀರುವುದಿಲ್ಲ ಎಂದೂ ಕವಿಗಳಿಗೆ ಅನಿಸಿರಬೇಕು. ವಾಸ್ತವ ಸಂಗತಿಯೆಂದರೆ ಕೆ.ವಿ ನಾರಾಯಣ ಅವರು ಗಮನಿಸುವಂತೆ ಚಾರಿತ್ರಿಕ ಕಾರಣಗಳಿಂದ ಕೆಲವು ಭಾಷೆಗಳು ವಿಶೇಷ ಅವಕಾಶ, ಸೌಲಭ್ಯಗಳನ್ನು ಪಡೆದು ಉಳಿದ ಭಾಷೆಗಳಿಗಿಂತ ಶ್ರೇಷ್ಠವೆಂಬ ಜನನಂಬಿಕೆಯ ಮನ್ನಣೆಯನ್ನು ಪಡೆದಿವೆ. ಆದರೆ ಈ ಶ್ರೇಷ್ಠತೆಯನ್ನು ನಿರ್ಧರಿಸಲು, ಗ್ರಹಿಸಲು ಭಾಷಾಶಾಸ್ತ್ರೀಯವಾದ ಯಾವ ಮಾನದಂಡವೂ ಈಗ ಲಭ್ಯವಿಲ್ಲ. ಹಾಗೆ ನೋಡಿದರೆ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಅನ್ಯಭಾಷೆಯ ಬೇರೆಯ ಪದವೊಂದು ಕನ್ನಡಧ್ವನಿ ರಚನೆಯ ಅಗತ್ಯಗಳನ್ನು ಪೂರೈಸಿಕೊಂಡು ಹೊಸ ಪದಗಳನ್ನು ಸಾಧ್ಯವಿದ್ದಷ್ಟು ಅವು ಇರುವಂತೆಯೇ ಬಳಸಿಕೊಳ್ಳಬೇಕೆಂದು ಸೂಚಿಸಿದವರಲ್ಲಿ ಕುವೆಂಪು ಮೊದಲಿಗರಾಗುತ್ತಾರೆ. ಹೆಚ್.ಎಸ್ ರಾಘವೇಂದ್ರ ರಾವ್ ಅವರು ಕಂಡುಕೊಂಡಂತೆ ಸಾಹಿತ್ಯ ನಿರ್ಮಾಣದ ಸಂದರ್ಭದಲ್ಲಿ ಸಂಸ್ಕೃತದ ಬಳಕೆಯ ಹಿಂದೆ 'ಕಲಾತ್ಮಕವಾದ ಉದ್ದೇಶಗಳನ್ನು' ಹೊಂದಿರುವ ಸಾಧ್ಯತೆಯೂ ಇರಬಹುದು. ಆದರೆ ಒಂದು ಭಾಷೆಗೆ 'ಉತ್ತಮ ಭಾವನೆ'ಯನ್ನು ವ್ಯಕ್ತಪಡಿಸಲು ಸಾಧ್ಯ ಅಥವಾ ಇನ್ನೊಂದು ಭಾಷೆಗೆ ಅದು ಸಾಧ್ಯವಿಲ್ಲ ಎನ್ನುವುದು ಅವೈಜ್ಞಾನಿಕ. ಏಕೆಂದರೆ 'ಭಾಷೆಯೊಂದು ಸಂಕೇತಗಳ ವ್ಯವಸ್ಥೆ' ಲಿಪಿ ಭಾಷೆಯ ಸಂಕೇತಗಳಿಗೆ ಮೂರ್ತರೂಪ ಕೊಡುವ ಒಂದು ಸಾಧನವಷ್ಟೇ. ಮೂಲತಃ ಭಾಷಾ ವಿದ್ವಾಂಸರಾದ ಚಿದಾನಂದಮೂರ್ತಿ ಅವರಿಗೆ ಭಾಷಾ ವೈಜ್ಞಾನಿಕ ದೃಷ್ಟಿಯಿಂದ ಈ ಸಂಗತಿಗಳನ್ನು ನೋಡಲು ಸಾಧ್ಯವಾಗುವುದಿಲ್ಲವೇ ಎನ್ನುವ ಪ್ರಶ್ನೆ ಮೂಡುತ್ತದೆ.

'ಎಲ್ಲ ಆಡುಭಾಷೆಗಳು ಸಮೃದ್ಧವಾಗಿ ಬೆಳೆದಿರುವುದು ಸಂಸ್ಕೃತದಿಂದ'[೨೩] ಎಂದು ಚಿದಾನಂದಮೂರ್ತಿ ಅವರು ಅಭಿಪ್ರಾಯಪಡುತ್ತಾರೆ. ವಾಸ್ತವ ಸಂಗತಿಯೆಂದರೆ, ಡಿ.ಎನ್ ಶಂಕರ ಭಟ್ಟರು ಅಭಿಪ್ರಾಯಪಡುವಂತೆ ಸಂಸ್ಕೃತದಿಂದ ಅನೇಕ ಅಕ್ಷರಗಳು ಮತ್ತು ಪದಗಳು ಕನ್ನಡಕ್ಕೆ ಬಂದಿವೆ. ಕೆಲವು ವಿಶಿಷ್ಟವಾದ ಚಾರಿತ್ರಿಕ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಇದುವರೆಗೆ ಕನ್ನಡ ಬರಹ ಸಂಸ್ಕೃತವನ್ನು ಅವಲಂಬಿಸಿತ್ತು. ಹಾಗೆ ಅವಲಂಬಿಸಬೇಕೆಂದೇನೂ ಇಲ್ಲ. ಸ್ವತಂತ್ರವಾಗಿ ತನ್ನ ಕಾಲ ಮೇಲೆ ನಿಲ್ಲುವ ಶಕ್ತಿ ಕನ್ನಡಕ್ಕಿದೆ.[೨೪]

ಸಂಸ್ಕೃತದಿಂದ ಬಂದ ಅಕ್ಷರ ಮತ್ತು ಪದಗಳು ಕನ್ನಡಕ್ಕೆ ಲಾಭ ತಂದಿರುವುದಕ್ಕಿಂತ ಹೆಚ್ಚು ಹೊರೆಯಾಗಿ ಪರಿಣಮಿಸಿದೆ. 'ಕನ್ನಡ ಬರಹಗಳಲ್ಲಿ ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಅವುಗಳಲ್ಲಿ ಸ್ವಲ್ಪವೂ ಬದಲಾವಣೆ ಮಾಡದೆ ಹಾಗೆಯೇ ಬಳಸುವ ಪ್ರವೃತ್ತಿ ಮುಂದುವರಿದಲ್ಲಿ ಅದು ಕೊನೆಗೆ ತನ್ನದೇ ಆದ ಸೊಗಡನ್ನು ಪೂರ್ತಿ ಕಳೆದುಕೊಂಡೀತು' ಎಂಬ ಆತಂಕದ ಹಿನ್ನೆಲೆಯಲ್ಲಿ 'ಕನ್ನಡ ಬರಹವನ್ನು ಸರಿಪಡಿಸುವ', ಕನ್ನಡಕ್ಕೊಂದು ಹೊಸ ಬರಹವನ್ನು ಕಂಡು ಹಿಡಿಯುವ ಪ್ರಯತ್ನಗಳು ನಡೆಯುತ್ತಿವೆ. ಈ ಪ್ರಯತ್ನಗಳನ್ನು ಚಿದಾನಂದಮೂರ್ತಿ ಅವರು ಕಟುವಾಗಿ ವಿರೋಧಿಸುತ್ತಾರೆ.

ಅವರ ಪ್ರಕಾರ 'ಭಾಷೆಯು ತನ್ನಷ್ಟಕ್ಕೆ ತಾನು ಜನರಿಂದ ಬೆಳೆಯುತ್ತದೆ, ಪುಷ್ಟಗೊಳ್ಳುತ್ತದೆ. ಅಗತ್ಯ ಬಿದ್ದಾಗ ಜನಗಳೇ ಹೊಸ ಪದಗಳನ್ನು ಅಪ್ರಜ್ಞಾಪೂರ್ವಕವಾಗಿ ಟಂಕಿಸುತ್ತಾರೆ. ಅಥವಾ ಬಳಸುತ್ತಾರೆ. ಈಗಾಗಲೇ ಕನ್ನಡವು ಏನು ಬೆಳೆದು ಬಂದಿದೆಯೆಂಬುದನ್ನು ಒಪ್ಪಿಕೊಂಡು ಅದನ್ನು ಬುದ್ಧಿಪೂರ್ವಕವಾಗಿ ಮೊಟಕುಗೊಳಿಸಬಾರದು. ಮೊಟಕುಗೊಳಿಸಲು ಕನ್ನಡಭಾಷೆ ಅವಕಾಶ ಮಾಡಿಕೊಡುವುದಿಲ್ಲ. ಲಿಪಿಯೂ ಅಷ್ಟೆ. ಕನ್ನಡ ಭಾಷೆ, ಲಿಪಿಗಳಿಗೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ದಾಖಲಿತ ಇತಿಹಾಸವಿದೆ. ಅವು ಮೂಲತಃ ಮನುಷ್ಯನಿರ್ಮಿತವಾಗಿದ್ದರೂ ಯಾವನೇ ವ್ಯಕ್ತಿ ರೂಪಿಸಿ ಬೆಳೆಸಿದವು ಅಲ್ಲ. ಒಟ್ಟು ಜನತೆಯ ಬೆಳವಣಿಗೆಯ ಫಲ. ಅವುಗಳನ್ನು ಉದ್ದೇಶಪೂರ್ವಕವಾಗಿ ತಿದ್ದುವುದು ಅನವಶ್ಯಕ ಮತ್ತು ನಿಶ್ಚಿತವಾಗಿಯೂ ಅಸಾಧ್ಯ.'[೨೫]

ಅಗತ್ಯಬಿದ್ದಾಗ ಜನಗಳೇ ಹೊಸ ಪದಗಳನ್ನು ಟಂಕಿಸುತ್ತಾರೆ ಎನ್ನುವುದು ಸತ್ಯ. ಇದನ್ನು ನಾವು ನಮ್ಮ ದಿನನಿತ್ಯದ ಬದುಕಿನಲ್ಲಿಯೇ ಗಮನಿಸುತ್ತಿದ್ದೇವೆ. ಆದರೆ 'ಭಾಷೆಯು ತನ್ನಷ್ಟಕ್ಕೆ ತಾನು ಜನರಿಂದ ಬೆಳೆಯುತ್ತದೆ, ಪುಷ್ಟಗೊಳ್ಳುತ್ತದೆ' ಎನ್ನುವುದು ಪಾರ್ಶ್ವಿಕವಾಗಿ ಮಾತ್ರ ಸತ್ಯವಾಗಿರುವುದು. ಇದು ಪೂರ್ಣವಾಗಿ ಸತ್ಯವಾಗಿದ್ದರೆ ಭೂಕಂಪ, ಸುನಾಮಿಯಂತಹ ನೈಸರ್ಗಿಕ ವಿಕೋಪಗಳ ಕಾರಣಗಳಿಂದ ಒಂದು ಭಾಷಿಕರು ಸಂಪೂರ್ಣನಾಶವಾದ ಸಂದರ್ಭಗಳನ್ನು ಹೊರತುಪಡಿಸಿ ಜಗತ್ತಿನಲ್ಲಿ ಹುಟ್ಟಿದ ಯಾವ ಭಾಷೆಯೂ ನಾಶವಾಗುತ್ತಿರಲಿಲ್ಲ. ನಿಜಸಂಗತಿ ಏನೆಂದರೆ 'ಜನ ಸಮೃದ್ಧವಾಗಿ ಬದುಕಿದ್ದರೂ ಭಾಷೆ ಸಾಯಬಹುದು. ಒಂದು ಸಂಸ್ಕೃತಿ ಪ್ರಬಲವಾದ ಇನ್ನೊಂದು ಸಂಸ್ಕೃತಿಯ ಪ್ರಭಾವಕ್ಕೆ ಗುರಿಯಾಗಿ ಅದರೊಳಗೆ 'ಜೀರ್ಣ'ವಾದಾಗ, ತಮ್ಮದೇ ಭಾಷೆಯನ್ನಾಡುತ್ತಿದ್ದ ಜನ ಹೊಸ ವರ್ತನೆ, ಹೊಸ ನೀತಿಗಳನ್ನು ಅಳವಡಿಸಿಕೊಳ್ಳುತ್ತಾ ತಮ್ಮ ಸಾಂಸ್ಕೃತಿಕ ಚಹರೆ ಕಳೆದುಕೊಂಡಾಗ, ಜನಕ್ಕೆ ತಮ್ಮ ನುಡಿಯ ಬಗ್ಗೆ ಕೀಳರಿಮೆ, ನಾಚಿಕೆ, ಕಸಿವಿಸಿ ಹುಟ್ಟಿ, ಪೂರ್ವಜರ ಭಾಷೆ ತಮ್ಮನ್ನು ದಮನಿಸಿದೆ, ಸಾಮಾಜಿಕ ಮುನ್ನಡೆಗೆ ಅಡ್ಡಿಯಾಗಿದೆ, ಪ್ರಧಾನ ಭಾಷೆ ಕಲಿತರೆ ಪಾರಾದೆವು ಅನ್ನಿಸಿದಾಗ ಅವರ ಭಾಷೆ ಸಾಯಲಾರಂಭಿಸುತ್ತದೆ. ಕಳೆದ ೫೦೦ ವರ್ಷಗಳಲ್ಲಿ ಭಾಷೆಗಳ ಸಾವಿನ ಪ್ರಮಾಣ ನಾಟಕೀಯವಾಗಿ ಹೆಚ್ಚಿದೆ. ಕ್ರಿ.ಶ ೧೫೦೦ರ ಸುಮಾರಿನಲ್ಲಿ ಬ್ರೆಜಿಲ್ ನಲ್ಲಿ ಸುಮಾರು ೧೧೭೫ ಭಾಷೆಗಳ ಬಳಕೆ ಇತ್ತು. ಅಲ್ಲಿ ಇವತ್ತು ಉಳಿದುಕೊಂಡಿರುವ ಭಾಷೆಗಳ ಸಂಖ್ಯೆ ಇನ್ನೂರಕ್ಕಿಂತ ಕಡಿಮೆ.[೨೬] ಈವರೆಗೆ ಜಗತ್ತಿನಲ್ಲಿ ನಡೆದಿರುವ ಅತ್ಯಂತ ದೊಡ್ಡ ಭಾಷಾ ಸಮೀಕ್ಷೆ 'ಪೀಪಲ್ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ'ದ ಸಮೀಕ್ಷೆಯನ್ನು ಆಧರಿಸಿ 'ಭಾರತದ ೪೦೦ ಭಾಷೆಗಳು ಮುಂದಿನ ೫೦ ವರ್ಷಗಳಲ್ಲಿ ನಶಿಸಿ ಹೋಗುವ ಅಪಾಯ ಎದುರಿಸುತ್ತಿದೆ'[೨೭] ಎಂದು ಭಾಷಾಶಾಸ್ತ್ರಜ್ಞ ಗಣೇಶ್ ಎನ್.ದೇವಿ ಹೇಳಿದ್ದಾರೆ.

ದೂರದ ಲ್ಯಾಟಿನ್, ಗ್ರೀಕ್ ಭಾಷೆಯನ್ನು ಮರೆತರೂ ನಮ್ಮ ನೆಲದಲ್ಲಿಯೇ ಹುಟ್ಟಿದ 'ಸಂಸ್ಕೃತ'ದ ಇಂದಿನ 'ಅವನತಿಗೊಂಡ ಸ್ಥಿತಿ' ನಮ್ಮ ಕಣ್ಣೆದುರಿಗಿದೆ. ರಾಜಕೀಯ, ಆರ್ಥಿಕ,

ಸಾಮಾಜಿಕ ಸ್ಥಿತ್ಯಂತರದಂತಹ ಭಾಷಿಕೇತರ ಸಂಗತಿಗಳು ಭಾಷೆಯ ಉಳಿವು, ಅಳಿವು ಮತ್ತು ಬೆಳವಣಿಗೆಯನ್ನು ನಿರ್ಧರಿಸುತ್ತವೆ. ಚಿದಾನಂದಮೂರ್ತಿ ಅವರು ಹೇಳುವಂತೆ ಕನ್ನಡ ಭಾಷೆ, ಲಿಪಿಗಳಿಗೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ದಾಖಲಿತ ಇತಿಹಾಸವಿರುವುದು ಹೌದು. ಆದರೆ 'ಭಾಷೆಯ ಪ್ರಾಚೀನತೆ ಯಾಕೆ ಮುಖ್ಯ? ಅದರ ಅಂತಸ್ಥ ಘನತೆಗೂ ಅದರ ಪ್ರಾಚೀನತೆಗೂ ಸಂಬಂಧ ಏನಾದರೂ ಇದೆಯೇ?' ಎಂಬ ಪ್ರಶ್ನೆಯನ್ನು ಚಿದಾನಂದಮೂರ್ತಿ ಅವರು ಹಾಕಿಕೊಳ್ಳುವುದಿಲ್ಲ. ಇತಿಹಾಸವೇ ಭಾಷೆಯನ್ನು ಮುನ್ನಡೆಸುವುದಿಲ್ಲ. ಯೋಜಿತ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡಿದರೆ ಮಾತ್ರ ಇಪ್ಪತ್ತೊಂದನೆಯ ಶತಮಾನದಲ್ಲಿ ಕನ್ನಡ ತನ್ನ ನಿಜ ಪಾತ್ರವನ್ನು ನಿರ್ವಹಿಸಬಲ್ಲುದು.

'ಕನ್ನಡ ಭಾಷೆ ಮೂಲತಃ ಮನುಷ್ಯನಿರ್ಮಿತವಾಗಿದ್ದರೂ ಯಾವನೇ ವ್ಯಕ್ತಿ ರೂಪಿಸಿ ಬೆಳೆಸಿದವು ಅಲ್ಲ. ಒಟ್ಟು ಜನತೆಯ ಬೆಳವಣಿಗೆಯ ಫಲ' ಎನ್ನುವಲ್ಲಿಯೂ ಪಾರ್ಶ್ವಿಕ ಸತ್ಯ ಮಾತ್ರ ಇದೆ. ಭಾಷೆ ಲಿಪಿಯನ್ನು ಕಂಡುಕೊಳ್ಳುವವರೆಗೂ ಅದರ ಬೆಳವಣಿಗೆ ಸಮುದಾಯವನ್ನು ಅವಲಂಬಿಸಿತ್ತು. ಲಿಪಿ ಕಂಡುಕೊಂಡ ನಂತರ ವ್ಯಕ್ತಿಗಳ ಪ್ರಭಾವವೂ ಭಾಷೆಯ ಮೇಲೆ ಉಂಟಾಗಲಾರಂಭಿಸಿತು. ಬದುಕು ಭಾಷೆಯೊಳಕ್ಕೆ ಪ್ರವೇಶಿಸುವುದು, ಭಾಷೆ ಬದುಕಿನೊಳಕ್ಕೆ ಪ್ರವೇಶಿಸುವುದು ಉಕ್ತಿಯ ಮೂಲಕವೇ. ಈ ಉಕ್ತಿಯ ಸ್ವರೂಪವನ್ನು ಉದಾಸೀನ ಮಾಡಿ, ವಿವಿಧ ಬಗೆಯ ಉಕ್ತಿಗಳ ವಿಶೇಷತೆಯನ್ನು ಗಮನಿಸದೆ ಇರುವ ಎಲ್ಲ ಭಾಷಿಕ ಅಧ್ಯಯನಗಳೂ ಅತಿಯಾದ ಅಮೂರ್ತತೆಯಲ್ಲಿ ಕಳೆದುಹೋಗುತ್ತವೆ. ಬದುಕಿಗೂ ಭಾಷೆಗೂ ಇರುವ ಸಂಬಂಧದ ಕೊಂಡಿಯನ್ನು ದುರ್ಬಲಗೊಳಿಸುತ್ತವೆ. ಜನ ನಿಜವಾಗಿ ಆಡುವ ಮಾತಿನ, ಉಕ್ತಿಯ ಸ್ವರೂಪವನ್ನು ತಿಳಿಯದಿದ್ದರೆ ವ್ಯಾಕರಣ, ಧ್ವನಿಶಾಸ್ತ್ರ ಇವೆಲ್ಲ ಬಂಜರು ಶಾಸ್ತ್ರಗಳು ಎನ್ನುವ ಓ.ಎಲ್ ನಾಗಭೂಷಣಸ್ವಾಮಿ ಅವರ ಗ್ರಹಿಕೆ ಚಿದಾನಂದಮೂರ್ತಿ ಅವರ 'ಭಾವುಕನೆಲೆ'ಯದ್ದೆಂದು ಅನಿಸುವ ಮೇಲ್ಕಂಡ ಅಭಿಪ್ರಾಯದ ಮಿತಿಯನ್ನು ಸೂಚಿಸುತ್ತವೆ.

ಭಾಷೆಯನ್ನು 'ಉದ್ದೇಶಪೂರ್ವಕವಾಗಿ ತಿದ್ದುವುದು ಅನವಶ್ಯಕ ಮತ್ತು ನಿಶ್ಚಿತವಾಗಿಯೂ ಅಸಾಧ್ಯ.' ಎನ್ನುವುದು ಕೂಡ ಚರ್ಚೆಯನ್ನು ಆಹ್ವಾನಿಸುತ್ತದೆ. 'ಬರಹದಲ್ಲಿ ಬದಲಾವಣೆಯಾಗಬೇಕಿದ್ದಲ್ಲಿ ಯಾರಾದರೂ ಬರಹಗಾರರು ಬುದ್ಧಿಪೂರ್ವಕವಾಗಿ ಅದರಲ್ಲಿ ಬದಲಾವಣೆಗಳನ್ನು ನಡೆಸಲು ಪ್ರಯತ್ನಿಸಬೇಕು. ಹಳಗನ್ನಡ ನಡುಗನ್ನಡವಾಗಿ ಬದಲಾಗಲು ದಾಸರು ಮತ್ತು ವಚನಕಾರರು ಮಾಡಿರುವ ಇಂತಹ ಒಂದು ಪ್ರಯತ್ನ ಕಾರಣ; ನಡುಗನ್ನಡ ಹೊಸಗನ್ನಡವಾಗಿ ಬದಲಾಗಲು ಮೈಸೂರಿನ ಬರಹಗಾರರು ಮಾಡಿರುವ ಅಂತಹದೇ ಇನ್ನೊಂದು ಪ್ರಯತ್ನ ಕಾರಣ'[೨೮] ಆದರೆ ಅಚ್ಚಗನ್ನಡದಲ್ಲಿ ಸೃಷ್ಟಿಯಾಗುವ ಹೊಸ ಪದಗಳು ಬಳಕೆದಾರರಿಗೆ ಕಷ್ಟವಾಗಬಾರದು ಎನ್ನುವ ಹಿನ್ನೆಲೆಯಲ್ಲಿ 'ಬರಿಗೆ' (ಅಕ್ಷರ), 'ಅರಿಮೆ'(ವಿಜ್ಞಾನ), 'ಉಲಿಕೆ'

(ಉಚ್ಚಾರ) ಇಂತಹ ಅಚ್ಚಗನ್ನಡದ ಪದಗಳ ಸೃಷ್ಟಿ ಅರ್ಥಹೀನ. ಅವು ಸಂಸ್ಕೃತಕ್ಕಿಂತ ಕಠಿಣವಾದ ಪದಗಳು'[೨೯] ಎನ್ನುವ ಚಿದಾನಂದಮೂರ್ತಿ ಅವರ ಅಭಿಪ್ರಾಯ ಚಿಂತನಾರ್ಹವಾಗಿದೆ.

೮.೧೦.೩ ಕೆ.ವಿ ಸುಬ್ಬಣ್ಣ ಅವರ ಚಿಂತನೆ

ಕನ್ನಡದೊಳಗೆ ಗಾಢವಾಗಿ ಪ್ರವೇಶಿಸಿ ಅದರ ಬೆಳವಣಿಗೆಯನ್ನು ನಿಯಂತ್ರಿಸಿತೆಂದು ಬಿ.ಎಂ.ಶ್ರೀ ಮತ್ತು ಡಿ.ಎನ್ ಶಂಕರಭಟ್ಟರು ಸಂಸ್ಕೃತದ ಮೇಲೆ ಮಾಡುವ ತಕರಾರುಗಳು ಸುಬ್ಬಣ್ಣನವರಲ್ಲಿ ಇಲ್ಲ. ಪ್ರತಿಯಾಗಿ ಕನ್ನಡ ಈ ಭಾಷೆಯೊಂದಿಗೆ ಒಡನಾಡಿಕೊಳ್ಳುತ್ತ ಬೆಳೆಯಿತು ಎಂದು ಸಂಸ್ಕೃತಕ್ಕೆ ಕೃತಜ್ಞತೆಯನ್ನೇ ಅವರು ಸಲ್ಲಿಸುತ್ತಾರೆ.

'ಮಾರ್ಗಭಾಷೆ'ಯೆನ್ನುವಂತಿದ್ದ ಸಂಸ್ಕೃತದೊಡನೆಯೂ ಪ್ರಾಕೃತ ಮತ್ತು ಪೈಶಾಚಿ ಅಪಭ್ರಂಶ ಇತ್ಯಾದಿ ಇನ್ನಿತರ ದೇಶಿಭಾಷೆಗಳೊಡನೆಯೂ ಒಡನಾಡಿಕೊಳ್ಳುತ್ತ, ಕೊಳು ಕೊಡುಗೆಯ ಅನುಸಂಧಾನದಲ್ಲಿ ಬೆಳೆದುಕೊಳ್ಳುತ್ತ ಬಂದಿತು. ಅಲ್ಲಿಂದ ಮುಂದಿನ ಈ ತನಕದ ಸಹಸ್ರಮಾನದಲ್ಲಿ ಕೂಡಾ ಅರಬ್ಬಿ–ಫಾರ್ಸಿ–ಪೋರ್ತುಗೀಸ್–ಇಂಗ್ಲಿಷ್‌ಗಳು ಯಜಮಾನಿಕೆಯಲ್ಲಿ ಹೆಗಲೇರಿ ಕೂತಿದ್ದಾಗಲೂ ಕನ್ನಡವು ಎದೆಗುಂದಿ ಕುಗ್ಗದೆ ಆ ಭಾಷೆಗಳಿಂದ ಸಾಧ್ಯವಾದ ಲಾಭಗಳನ್ನೆಲ್ಲ ಪಡೆದುಕೊಂಡಿತು'.[೩೦] –ಇದು ಸುಬ್ಬಣ್ಣ ಅವರ ಕನ್ನಡ ಅಸ್ಮಿತೆಯ ಅನುಸಂಧಾನದ ನೆಲೆಯ ಸ್ವರೂಪ. ಇನ್ನೊಂದು ಭಾಷೆಯ ಜೊತೆಗೆ ಕನ್ನಡವನ್ನಿಟ್ಟು ಸಂಘರ್ಷದ ನೆಲೆಯಲ್ಲಿ ಅವರು ನೋಡುವುದಿಲ್ಲ. ಯಾವ ಭಾಷೆಯಿಂದ ಕನ್ನಡಕ್ಕೆ ತೊಂದರೆಯಾಯಿತು ಎಂದು ಯೋಚಿಸದೆ ಯಾವ ಭಾಷೆಯಿಂದ ಕನ್ನಡಕ್ಕೆ ಲಾಭವಾಯಿತು ಎಂಬುದರತ್ತಲೇ ಸುಬ್ಬಣ್ಣ ಅವರ ಗಮನ. ಹಾಗೆಂದು ಕನ್ನಡದೊಂದಿಗೆ ಅನುಸಂಧಾನ ಮಾಡುವ ಇನ್ನೊಂದು ಭಾಷೆಯನ್ನು ಯಜಮಾನ ಭಾಷೆಯಂತೆಯೋ ಅಥವಾ ಅಧೀನ ಭಾಷೆಯಂತೆಯೋ ಪರಿಗಣಿಸುವುದಿಲ್ಲ. ಈ ಕಾರಣದಿಂದಲೇ ಈ ಅನುಸಂಧಾನದಿಂದ ಯಾವ ಭಾಷೆಯ ಸ್ವಾಭಿಮಾನಕ್ಕೂ ಧಕ್ಕೆ ಬಾರದ ಆರೋಗ್ಯಕರ ಸಂಬಂಧದ ನೆಲೆ ಇಲ್ಲಿ ಸಾಧ್ಯವಾಗುತ್ತದೆ. ಹಲವು ಭಾಷೆಗಳೊಂದಿಗೆ ಕೊಡುಕೊಳ್ಳುವಿಕೆಯಲ್ಲಿ ಭಾಷೆಯೊಂದು ಬೆಳೆಯುವ ವೈಜ್ಞಾನಿಕ ವಿಧಾನ ಈ ಚಿಂತನೆಯನ್ನು ಸಮರ್ಥಿಸುತ್ತದೆ. ಆದರೆ ಇದುವೇ ಒಂದು ಭಾಷೆಯಿಂದ ಕನ್ನಡಕ್ಕೆ ಆದ ಹಿನ್ನಡೆಗಳನ್ನು ವಿಮರ್ಶಾತ್ಮಕವಾಗಿ ನೋಡುವುದಕ್ಕೆ ತಡೆಯಾಗುತ್ತದೆ. ಸುಬ್ಬಣ್ಣನವರು ಕನ್ನಡ ಮತ್ತು ಸಂಸ್ಕೃತದ ನಡುವಿನ ಸಂಬಂಧವನ್ನು ಚರ್ಚಿಸುವಾಗ ಈ ಮಿತಿ ಎದ್ದು ಕಾಣುತ್ತದೆ.

ಸುಬ್ಬಣ್ಣ ಅವರು ಸಂಸ್ಕೃತವನ್ನು ಕನ್ನಡಕ್ಕೆ ಕಸುವು ತುಂಬಿದ ಭಾಷೆ ಎಂದು ಭಾವಿಸಲು ಕಾರಣವಿದೆ. 'ತನ್ನ ಕಾಲದ ಜನಭಾಷೆಯನ್ನು ಪರಿಣಾಮಕಾರಿಯಾಗಿ ಬಳಸುವುದರ ಮೂಲಕ ಪರಿಣಾಮಕಾರಿಯಾಗುವಂತೆಯೇ ಅಕ್ಷರ ಛಂದಸ್ಸಿನ ಅಗತ್ಯಗಳಿಗೆ ಮಣಿದಂತೆ ಸುದೀರ್ಘವಾದ

ಸಂಸ್ಕೃತ ಸಮಾಸಪದಗಳನ್ನು ಪಂಪ ಬಳಸುತ್ತಾನೆ. ಅದಕ್ಕಿಂತ ಮುಖ್ಯವಾಗಿ ಭಾಷೆಯ ಹೊರಮೈಯ ಲಕ್ಷಣಗಳನ್ನು ಮೀರಿದ ಹೃದಯವನ್ನು ಕಂಡುಕೊಳ್ಳುವುದರಿಂದ, ಪಂಪನು ಹಲವು ಕಡೆ ಆಧುನಿಕ ಓದುಗರಿಗೂ ಸಮರ್ಥವಾಗಿ ತಲುಪುತ್ತಾನೆ. ಒಬ್ಬ ಕವಿಯ ಭಾಷಾ ಸಾಮರ್ಥ್ಯದ ಅಳತೆಗೋಲುಗಳಲ್ಲಿ, ಹೀಗೆ ಕಾಲದ ಗಡಿಗಳನ್ನು ದಾಟುವುದೂ ಒಂದು' ಎಂದು ಸುಬ್ಬಣ್ಣ ಅಭಿಪ್ರಾಯಪಡುತ್ತಾರೆ. ಈ ಬಗೆಯಲ್ಲಿ ಸುಬ್ಬಣ್ಣ ಅವರು ನೋಡುವ ಸಂಸ್ಕೃತ ಮತ್ತು ಕನ್ನಡದ ನಡುವಿನ ಸಂಬಂಧವನ್ನು ಗ್ರಹಿಸಲು ಡಿ.ವಿ.ಜಿ ಅವರ ಚಿಂತನೆ ಕೆಲವು ಒಳನೋಟಗಳನ್ನು ನೀಡುತ್ತದೆ. ಡಿ.ವಿ.ಜಿ ಸಂಸ್ಕೃತವನ್ನು ಗುಡಿಯೊಳಗಿನ ಮೂಲವಿಗ್ರಹಕ್ಕೂ ಕನ್ನಡವನ್ನು ಮೂಲವಿಗ್ರಹದ ಪರವಾಗಿ ಎಲ್ಲರಿಗೆ ದರ್ಶನ ಕೊಡುವ ಉತ್ಸವ ವಿಗ್ರಹಕ್ಕೂ ಹೋಲಿಸುತ್ತಾರೆ. ಈ ಸಂದರ್ಭ ಡಿ.ವಿ.ಜಿ ಸಂಸ್ಕೃತದಲ್ಲಿನ ವೇದಾಂತವನ್ನು ಬಸವಣ್ಣ, ಅಲ್ಲಮಪ್ರಭುಗಳು ಕನ್ನಡದ ಮೂಲಕ ಪ್ರಚುರಪಡಿಸಿದರು ಮತ್ತು ಸಂಸ್ಕೃತದಲ್ಲಿನ ಮಹಾಭಾರತವನ್ನು ಕುಮಾರವ್ಯಾಸ ಕನ್ನಡದ ಮೂಲಕ ಜನಪ್ರಿಯಗೊಳಿಸಿದ ಎನ್ನುವುದು ಸಂಸ್ಕೃತ ಕನ್ನಡದಿಂದ ಪಡೆದ ಪ್ರಯೋಜನವನ್ನು ಹೆಚ್ಚು ಶಕ್ತವಾಗಿ ನಿರೂಪಿಸುತ್ತದೆ. ಹಿಂದೆ ಸಂಸ್ಕೃತದಿಂದ ಕನ್ನಡ ಬದುಕಿತು; ಮುಂದಕ್ಕೆ ಕನ್ನಡದಲ್ಲಿ ಸಂಸ್ಕೃತ ಬದುಕಬೇಕು.[೩೧] ಆದ್ದರಿಂದ ಕನ್ನಡ ಮತ್ತು ಸಂಸ್ಕೃತದ ಸಂಬಂಧ ಕೊಡು ಕೊಳ್ಳುವಿಕೆಯದೇ ವಿನಃ ವೈರತ್ವದ್ದಲ್ಲ ಎನ್ನುವುದು ಡಿ.ವಿ.ಜಿ ನಿಲುವು.

ತಮಿಳು ಭಾಷೆಯು ತನ್ನ ಲಿಪಿವ್ಯವಸ್ಥೆಯನ್ನು ರೂಪಿಸಿಕೊಳ್ಳುವಾಗ ಮೂಲ ಬ್ರಾಹ್ಮೀ ಲಿಪಿಯ ಐವತ್ತಕ್ಕೂ ಮಿಕ್ಕಿದ ಅಕ್ಷರಗಳ ಪೈಕಿ ತನಗೆ ಅಗತ್ಯವಾದ ಕೇವಲ ಇಪ್ಪತ್ತಾರು ಅಕ್ಷರಗಳನ್ನಷ್ಟೇ ಆಯ್ದುಕೊಂಡಿದ್ದಕ್ಕೆ ವಿರುದ್ಧವಾಗಿ ಕನ್ನಡ ತನಗೆ ಅಗತ್ಯವಿಲ್ಲದಿದ್ದರೂ ಬಹುತೇಕ ಅಷ್ಟೂ ಅಕ್ಷರಗಳನ್ನು ಉಳಿಸಿಕೊಂಡಿದ್ದನ್ನು ಕನ್ನಡ ಲಿಪಿವ್ಯವಸ್ಥೆಯ ಉದಾರವಾದಿ ಗುಣವೆಂದು ಸುಬ್ಬಣ್ಣ ಗುರುತಿಸುತ್ತಾರೆ. ಆದರೆ ಹೀಗೆ ಕನ್ನಡಕ್ಕೆ ಅನಗತ್ಯವಾದರೂ ಹೆಚ್ಚುವರಿ ಅಕ್ಷರಗಳನ್ನು ಉಳಿಸಿಕೊಳ್ಳುವುದಕ್ಕೆ ಪ್ರಮುಖ ಕಾರಣವಾಗಿದ್ದು 'ಸಂಸ್ಕೃತ ಪದಗಳನ್ನು ಸಂಸ್ಕೃತದಲ್ಲಿರುವ ಹಾಗೆಯೇ ಕನ್ನಡದಲ್ಲಿ ಬರೆಯಲು' ಎನ್ನುವುದು ಮುಖ್ಯವಾದ ಸಂಗತಿ. ಈ ಹೆಚ್ಚುವರಿ ಅಕ್ಷರಗಳು ಬರಹದಲ್ಲಿ ಮಾತ್ರ ಬಳಕೆಗೆ ಬರುತ್ತಿದ್ದು ಆಡುಮಾತಿನ ಉಚ್ಚಾರಣೆಯ ಸಂದರ್ಭದಲ್ಲಿ ಪ್ರಯೋಜನಕ್ಕೆ ಬರಲಿಲ್ಲ. ಇದುವೇ ಗ್ರಾಮ್ಯ-ಶಿಷ್ಟ ಎಂಬ ಮೇಲುಕೀಳಿನ ವರ್ಗೀಕರಣಕ್ಕೆ ಕಾರಣವಾಯಿತು. ಕವಿರಾಜಮಾರ್ಗ ಅನುಮೋದಿಸುವ 'ತಿರುಳ್ಗನ್ನಡ'ವನ್ನು ಸ್ವತಃ ತಾವೂ ಅನುಮೋದಿಸುವ ಸುಬ್ಬಣ್ಣ 'ಪ್ರಮಾಣೀಕೃತ' ಶಿಷ್ಟಭಾಷೆಯ ಅಗತ್ಯವನ್ನು ಪ್ರತಿಪಾದಿಸುತ್ತಾರೆ. ಸಾಹಿತ್ಯದಲ್ಲಿ 'ಶ್ರೇಷ್ಠತೆಯ ವ್ಯಸನ'ವನ್ನು[೮೩] ವಿರೋಧಿಸುವ ಸುಬ್ಬಣ್ಣ ಅವರು ಭಾಷೆಗೆ ಸಂಬಂಧಿಸಿದಂತೆ 'ಪ್ರಮಾಣೀಕೃತ' ಭಾಷೆಯೊಂದನ್ನು ಪ್ರತಿಪಾದಿಸುವ ಮೂಲಕ 'ಶ್ರೇಷ್ಠತೆ'ಯ ಪರ ವಾದಿಸುತ್ತಿರುವುದು ವೈರುಧ್ಯವಾಗಿದೆ.

ಕೆ.ವಿ ನಾರಾಯಣ ಅವರು ವಿವರಿಸುವಂತೆ ಸಂಸ್ಕೃತ ಪದಗಳಲ್ಲಿ 'ಋ'ಚಿಹ್ನೆಯ ಅಗತ್ಯ ಉಂಟಾದುದಕ್ಕೆ ಕಾರಣವಿದೆ. 'ರ'ಕಾರವೂ ಒಂದು ವ್ಯಂಜನವಾದರೂ ಪ್ರಸಂಗವಶಾತ್ ಅದು ಅಕ್ಷರ ರಚನೆಯ ಕೇಂದ್ರವಾದಾಗ ಅದಕ್ಕೆ ಸ್ವರದ ಲಕ್ಷಣ ಬರುತ್ತದೆ. ಹೀಗಾಗಿ ವ್ಯಂಜನ ಮತ್ತು 'ಋ'ಸ್ವರ ಒಂದೇ ಧ್ವನಿಯ ಎರಡು ನಿಯೋಗಗಳನ್ನು ಪ್ರತಿನಿಧಿಸುತ್ತದೆ. ಕನ್ನಡದಲ್ಲಿ ಅಕ್ಷರರಚನೆಯ ಕೇಂದ್ರವಾಗಿ 'ರ'ಕಾರ ಬರುವುದು ಸಾಧ್ಯವಿಲ್ಲವಾದ್ದರಿಂದ ಅದು ಯಾವಾಗಲೂ 'ರ್' ಎಂಬ ವ್ಯಂಜನವನ್ನು ಮಾತ್ರ ಒಪ್ಪಿಕೊಳ್ಳುತ್ತದೆ. ಸಹಜವಾಗಿಯೇ ಕನ್ನಡ ಧ್ವನಿರಚನೆಯಾಗಿ 'ಋ' ಎಂಬ ಸ್ವರಕ್ಕೆ ಸ್ಥಾನವಿಲ್ಲ.' ಈ ಹಿನ್ನೆಲೆಯಲ್ಲಿ 'ಋ' ಕಾರವನ್ನು ಪಠ್ಯಪುಸ್ತಕದಿಂದ ಕೈಬಿಡಬೇಕು ಎನ್ನುವ ಚರ್ಚೆ ಬಂದಾಗ 'ಭಾಷೆಯ ಬದಲಾವಣೆಯನ್ನು ಅಧಿಕೃತವಾಗಿ ನಿರ್ಧರಿಸಿ ಜಾರಿಗೊಳಿಸುವ ಅಧಿಕಾರವು ಸರ್ಕಾರಕ್ಕಿದೆಯೇ' ಎಂದು ಪ್ರಭುತ್ವ ಜನರ ಭಾಷೆಯೊಳಗೆ ಹಸ್ತಕ್ಷೇಪ ಮಾಡುವುದರ ವಿರುದ್ಧ ಸುಬ್ಬಣ್ಣ ಆಕ್ರೋಶ ವ್ಯಕ್ತಪಡಿಸುತ್ತಾರೆ. 'ಋ'ಕಾರವನ್ನು ಜನರು ಬಳಸುತ್ತಿದ್ದಾರೆಯೇ ಎಂದು ಭಾಷೆಯನ್ನು ಬಳಸುವ ಜನರ ನೆಲೆಯಿಂದ ಸುಬ್ಬಣ್ಣ ಅವರು ನೋಡದಿದ್ದರೂ ಪ್ರಜಾಪ್ರಭುತ್ವಪರವಾದ ದನಿಯನ್ನಿಲ್ಲಿ ಗುರುತಿಸಬಹುದು. ಹೀಗೆ ಗುರುತಿಸುವಾಗಲೇ ಕವಿರಾಜಮಾರ್ಗಕಾರನ ಸಂದರ್ಭದಲ್ಲಿ 'ಮೌಖಿಕಗಳ ಸತ್ವವನ್ನು ಮೆಚ್ಚಿಕೊಳ್ಳುವ ಕವಿರಾಜಮಾರ್ಗಕಾರನಿಗೆ, ಮೌಖಿಕವನ್ನು ಮೀರಿ ವ್ಯಾಪಿಸಬಲ್ಲ ಬಲಿಷ್ಠ ಕನ್ನಡವೊಂದನ್ನು ರೂಢಿಸಬೇಕಾದ್ದೂ ತುರ್ತಿನ ಅಗತ್ಯವಾಗಿತ್ತು' ಎಂದು ಪ್ರಭುತ್ವದ ಪರ ನಿಂತು ಗೊಂದಲಕ್ಕೆ ಕಾರಣವಾಗುತ್ತಾರೆ. ಮೊದಲ ನಿದರ್ಶನದಲ್ಲಿ 'ಪ್ರಜಾಪ್ರಭುತ್ವಪರವಾದ ದನಿ' ಎರಡನೇ ನಿದರ್ಶನದಲ್ಲಿ 'ಬಲಿಷ್ಠ ಕನ್ನಡ'ಪರವಾದ ದನಿ ಮೇಲ್ನೋಟಕ್ಕೆ ಕಂಡುಬಂದರೂ ಎರಡೂ ನಿದರ್ಶನಗಳ ಆಳದಲ್ಲಿರುವುದು 'ಪ್ರಮಾಣ ಕನ್ನಡ'ದ ಪರವಾದ ನಿಲುವು. '೯ನೇ ಶತಮಾನದಲ್ಲಿ ಜನಸಮುದಾಯಗಳು ಬಳಸುತ್ತಿದ್ದ ಅನೇಕ 'ಕನ್ನಡಗಳ' (ದೇಶಿಗಳು) ಬದಲಾಗಿ ಕವಿ ಮತ್ತು ರಾಜ (ಪ್ರಭುತ್ವ) 'ಒಂದು ಕನ್ನಡ'ವನ್ನು ಸಾಹಿತ್ಯಿಕವಾಗಿ ಮತ್ತು ಆಡಳಿತಾತ್ಮಕವಾಗಿ ಚಾಲ್ತಿಯಲ್ಲಿ ತರಲು ಪ್ರಯತ್ನಿಸಿದರೂ ಅದನ್ನು ಗಣನೆಗೆ ತೆಗೆದುಕೊಳ್ಳದೆ ಮುಂದಿನ ಸಾಹಿತ್ಯ ಬೆಳೆದಿದೆ. ಅಮರೇಶ ನುಗಡೋಣಿ ಅವರು ಗಮನಿಸುವಂತೆ ಪ್ರಭುತ್ವ ಹೇರಿದ ಒಂದು ಕನ್ನಡ'ವನ್ನು ನಿರಾಕರಿಸಿ ತನ್ನದೇ ಆದ ದೇಶಿ ಭಾಷೆಯಲ್ಲಿ ಸಾಹಿತ್ಯ ಹುಟ್ಟಿಕೊಂಡಿದೆ. ಭಾಷೆಯನ್ನು ಕೇವಲ ಸಾಂಸ್ಕೃತಿಕ ಚೌಕಟ್ಟಿನಲ್ಲಿ ನೋಡುವ ಮಿತಿ ಸುಬ್ಬಣ್ಣ ಅವರ ಪ್ರಮಾಣಭಾಷೆ ಕುರಿತ ಈ ಚಿಂತನೆಗಿದೆ. ಆಡುಮಾತು-ಪ್ರಮಾಣಭಾಷೆಗಳು ಜನಸಮುದಾಯಗಳಲ್ಲಿ ಯಾವ ಬಗೆಯ ತರತಮಗಳಿಗೆ ಕಾರಣವಾಗಿದೆ ಎಂಬ ಸಾಮಾಜಿಕ ನೆಲೆಯಲ್ಲಿ ನೋಡಿದರೆ ಇಲ್ಲಿನ ಮಿತಿ ಸ್ಪಷ್ಟವಾಗುತ್ತದೆ.

ಟಿಪ್ಪಣಿಗಳು

೧. ಶಂಕರ ಭಟ್ ಡಿ.ಎನ್., ಕನ್ನಡ ನುಡಿಯ ಬಗೆಗೆ ಚಿಂತನೆ, ಪು. ೧೯–೭೦

೨. ನಾಗಭೂಷಣಸ್ವಾಮಿ ಓ.ಎಲ್., ನುಡಿಯೊಳಗಾಗಿ, ಪುಟ. ೧೮೨

೩. ಶಿವರಾಮ ಪಡಿಕ್ಕಲ್, ನಾಡು ನುಡಿಯ ರೂಪಕ, ಮಂಗಳೂರು ವಿ.ವಿ, ಮಂಗಳೂರು, ಪು. ೪೪

೪. ನಾಗಭೂಷಣಸ್ವಾಮಿ ಓ.ಎಲ್., ನುಡಿಯೊಳಗಾಗಿ, ಪುಟ. ೧೯

೫. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೨೬೪

೬. ಅದೇ, ಪು. ೧೩೭

೭. ಅದೇ, ಪು. ೩೧೪

೮. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು.೩೧೨–೧೩

೯. ರಹಮತ್ ತರೀಕೆರೆ, ನೇತು ಬಿದ್ದ ನವಿಲು, ಪು. ೫೩

೧೦. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೩೧೫

೧೧. ನಾರಾಯಣ ಕೆ.ವಿ., ಕನ್ನಡ ಸುವರ್ಣ ವಿಚಾರ ಸಾಹಿತ್ಯ (ಸಂ), ಬಸವರಾಜ ಕಲ್ಗುಡಿ, ಪು. ೨೨೭

೧೨. ಬಿ.ಎಂ.ಶ್ರೀ., ಶ್ರೀ ಸಾಹಿತ್ಯ, ಪು. ೨೫೨

೧೩. ಚಿದಾನಂದಮೂರ್ತಿ. ಎಂ., ಚಿದಾನಂದಾಯಣ, ಪು. ೧೫೨

೧೪. ಬಿ.ಎಂ.ಶ್ರೀ., ಶ್ರೀ ಸಾಹಿತ್ಯ, ಪು. ೨೫೨

೧೫. ರಾಘವೇಂದ್ರರಾವ್ ಎಚ್.ಎಸ್., ಶ್ರೀನಿಧಿ, (ಸಂ) ಜಿ.ಎಸ್ ಶಿವರುದ್ರಪ್ಪ, ಪು. ೧೪೭

೧೬. ರಂಗನಾಥ ಕಂಟನಕುಂಟೆ, ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ, ಪು. ೪೨

೧೭. ರಾಘವೇಂದ್ರರಾವ್ ಎಚ್.ಎಸ್., ಶ್ರೀನಿಧಿ, (ಸಂ) ಜಿ.ಎಸ್ ಶಿವರುದ್ರಪ್ಪ, ಪು. ೧೪೭

೧೮. ರಹಮತ್ ತರೀಕೆರೆ, ಮಾತು ತಲೆ ಎತ್ತುವ ಬಗೆ, (ಸಂ), ಪು. ೧೬

೧೯. ರಾಜೇಂದ್ರ ಚೆನ್ನಿ, ಅಸಮಗ್ರ, ಪು. ೧೮೬

೨೦. ರಹಮತ್ ತರೀಕೆರೆ, ಚಿಂತನೆಯ ಪಾಡು, ಪು. ೧೮೪

೨೧. ರಹಮತ್ ತರೀಕೆರೆ, ಕನ್ನಡ ಸಾಹಿತ್ಯ ವಾಗ್ವಾದಗಳು, ಪು. ೨೦೮

೨೨. ಚಿದಾನಂದಮೂರ್ತಿ. ಎಂ, ಚಿದಾನಂದಾಯಣ, ಪು.೧೫೨

೨೩. ಅದೇ, ಪು. ಪು. ೧೫೨

೨೪. ಶಂಕರಭಟ್ಟ ಡಿ.ಎನ್, ಕನ್ನಡ ಬರಹವನ್ನು ಸರಿಪಡಿಸೋಣ, ಪು. ೨೦

೨೫. ಚಿದಾನಂದಮೂರ್ತಿ. ಎಂ., ಚಿದಾನಂದಾಯಣ, ಪು. ೧೫೩

೨೬. ನಾಗಭೂಷಣಸ್ವಾಮಿ ಓ.ಎಲ್., ನುಡಿಯೊಳಗಾಗಿ, ಪುಟ. ೧೨೦-೧೨೫

೨೭. ಪ್ರಜಾವಾಣಿ, ಆಗಸ್ಟ್ ೬, ೨೦೧೭

೨೮. ಶಂಕರ ಭಟ್ ಡಿ.ಎನ್, ಕನ್ನಡ ನುಡಿಯ ಬಗೆಗೆ ಚಿಂತನೆ, ಪು. ೧೫೨

೨೯. ಚಿದಾನಂದಮೂರ್ತಿ. ಎಂ., ಚಿದಾನಂದಾಯಣ, ಪು. ೧೫೩

೩೦. ಸುಬ್ಬಣ್ಣ ಕೆ.ವಿ., ಅರೆಶತಮಾನದ ಅಲೆಬರೆಹಗಳು, ಪು. ೪೦೮

೩೧. ಡಿ.ವಿ.ಜಿ., ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣಗಳು, ಸಂ.೧, ಪು. ೩೫೩

ಅಧ್ಯಾಯ ೯

ರಾಜಕೀಯ ಧೋರಣೆಗಳು

೯.೧ ಪೀಠಿಕೆ

೯.೨ ಏಕೀಕರಣಪೂರ್ವದ ರಾಜಕೀಯ ಧೋರಣೆಗಳು

೯.೩ 'ಏಕೀಕರಣ ಕರ್ನಾಟಕ' ಒಂದು ರಾಜಕೀಯ ನಿರ್ಧಾರ : ಚರ್ಚೆ

೯.೪ ಏಕೀಕರಣೋತ್ತರ ಕರ್ನಾಟಕದ ಮೇಲೆ ರಾಜಕೀಯ ಧೋರಣೆಗಳ ಪ್ರಭಾವ

೯.೪.೧ ಉತ್ತರದಾಯಿಯಾದ ಸರ್ಕಾರ

೯.೪.೨ ಭೌಗೋಳಿಕವಾದ ಪರಿಕಲ್ಪನೆ ಮಾತ್ರ ಸ್ಥಿರ

೯.೪.೩ ಭಾಷೆಯ ಬೆಳವಣಿಗೆಯಲ್ಲಿ ಸರ್ಕಾರದ ನಿರ್ದೇಶನದ ಸ್ವರೂಪ

೯.೪.೪ ಕನ್ನಡವನ್ನು ಆಡಳಿತಭಾಷೆಯಾಗಿಸಲು ಆಮೆ ನಡಿಗೆಯ ಪ್ರಯತ್ನ

೯.೪.೫ ಮುಂದುವರೆದ ಇಂಗ್ಲಿಶಿನ ಪಾರಮ್ಯ

೯.೪.೬ ಕೆಳಸ್ಥರದ ಶಾಸಕರಿಂದ ಕನ್ನಡಪರ ಧ್ವನಿ

೯.೪.೭ ಲೋಹಿಯಾ ಚಿಂತನೆಗಳ ಪ್ರಭಾವ

೯.೪.೮ ಆಳದ ಕಾಯಿಲೆಯ ನಿವಾರಣೆಗೆ ಹೊರಗಿನ ವ್ರಣಗಳಿಗೆ ಮುಲಾಮು

೯.೪.೯ ಕನ್ನಡದ ಹಿತ ಕಾಯಲು ಪ್ರಾದೇಶಿಕ ಪಕ್ಷ ಸ್ಥಾಪನೆಯ ಚಿಂತನೆ

೯.೪.೧೦ ಇಂಗ್ಲಿಶ್ ಕುರಿತ 'ಸಮ್ಮತಿಯ ಉತ್ಪಾದನೆ'ಯ ರಾಜಕಾರಣ

೯.೪.೧೧ ಭಾಷಿಕ ಸ್ವರೂಪ ಬದಲಿಸುವ ಹಿನ್ನೆಲೆಯಲ್ಲಿ 'ವಲಸೆ' ಕುರಿತು ಸರ್ಕಾರಗಳ ಮೌನ

೯.೪.೧೨ ರೂಪವು ಮುಂಚೂಣಿಗೆ ಆಶಯವು ಹಿಂದಕ್ಕೆ

೯.೪.೧೩ 'ಬಾಸುಂಡೆ ನೋವು ಮರೆಸುವ ಉದ್ದೇಶದ' ಸಾಂಸ್ಕೃತಿಕ ಉತ್ಸವಗಳು

೯.೪.೧೪ ದೇಶಿ ಭಾಷೆಗಳ ಕುರಿತು ಗಂಭೀರವಾಗಿರದ ಕೇಂದ್ರ ಸರ್ಕಾರಗಳು

೯.೫ ರಾಜಕೀಯ ಧೋರಣೆಗಳ ಹೇರಿಕೆಗೆ ಜನಸಮುದಾಯದ ವಿರೋಧದ ಸ್ವರೂಪಗಳು

ಅಧ್ಯಾಯ : ೯

ರಾಜಕೀಯ ಧೋರಣೆಗಳು

೯.೧ ಪೀಠಿಕೆ

'ಭಾಷೆ ಜನರಿಂದ ಸ್ವಾಭಾವಿಕವಾಗಿ ಬೆಳೆಯುತ್ತದೆ' ಎನ್ನುವ ಅಭಿಪ್ರಾಯವೊಂದು ಸಮಾಜದಲ್ಲಿದೆ. ಆದ್ದರಿಂದ 'ಏನೇ ಅಡ್ಡಿ ಆತಂಕಗಳು ಎದುರಾದರೂ ಕನ್ನಡ ಭಾಷೆ ನಾಶವಾಗುವುದಿಲ್ಲ' ಎಂಬ ವಿಶ್ವಾಸವೂ ಒಂದು ಜನವರ್ಗದಲ್ಲಿದೆ. ಇದಕ್ಕೆ ಸಾಕ್ಷಿಯಾಗಿ ಅವರು ಎರಡು ಸಾವಿರ ವರ್ಷಗಳಿಂದ ಕನ್ನಡ ಉಳಿದು ಬೆಳೆದುಬಂದಿರುವುದನ್ನು ಉದಾಹರಿಸುತ್ತಾರೆ. ಆದರೆ ಇದು ತಪ್ಪು ಅಭಿಪ್ರಾಯಗಳು ಎನ್ನುವುದನ್ನು ಭಾಷೆ ಕುರಿತ ಅಧ್ಯಯನಗಳು ಸಾಬೀತುಪಡಿಸಿವೆ. ಭಾಷೆಗೆ ಭಾಷಿಕರನ್ನು ಹೊರತುಪಡಿಸಿ ಪ್ರತ್ಯೇಕ ಅಸ್ತಿತ್ವವಿಲ್ಲದಿರುವುದರಿಂದ ಭಾಷೆಯನ್ನಾಡುವ ಭಾಷಿಕರ ಬದುಕಿನ ಏರಿಳಿತಗಳು ಭಾಷೆಯ ಅಳಿವು-ಉಳಿವಿನ ಪ್ರಶ್ನೆಯೂ ಆಗಬಲ್ಲವು.

ಭಾಷಿಕರ ಬದುಕನ್ನು ಪ್ರಭಾವಿಸುವ ಸಂಗತಿಗಳಲ್ಲಿ ಪ್ರಭುತ್ವದ ಧೋರಣೆಗಳು ಮಹತ್ವದ ಪಾತ್ರ ವಹಿಸುತ್ತವೆ. ಪ್ರಭುತ್ವದ ಭಾಷೆ ಕುರಿತ ಕ್ರಿಯಾಶೀಲ ನಡೆಗಳಂತೆ ಅದರ ಮೌನವೂ ಭಾಷೆಯನ್ನು ಪ್ರಭಾವಿಸುತ್ತವೆ. ಈ ಅಧ್ಯಯನದ ಕಾಲವ್ಯಾಪ್ತಿಯಾದ ೨೦ನೇ ಶತಮಾನದ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಪ್ರಭುತ್ವದ ಧೋರಣೆಗಳನ್ನು ಎರಡು ಕಾಲಘಟ್ಟಗಳಲ್ಲಿ ಪ್ರತ್ಯೇಕವಾಗಿ ನೋಡಲು ಸಾಧ್ಯ. ಅವುಗಳೆಂದರೆ ; ೧. ರಾಜಪ್ರಭುತ್ವ, ಬ್ರಿಟೀಶ್ ವಸಾಹತುಶಾಹಿ ಕಾಲ ಹಾಗೂ ರಾಜಪ್ರಭುತ್ವ, ವಸಾಹತುಶಾಹಿ ಪ್ರಭುತ್ವಗಳಿಂದ ಬಿಡುಗಡೆಗೊಂಡರೂ ಭಾಷಿಕವಾಗಿ ಪ್ರತ್ಯೇಕ ಅಸ್ತಿತ್ವ ಪಡೆಯದ ಏಕೀಕರಣಪೂರ್ವದ ಕಾಲಘಟ್ಟ, ೨. ಏಕೀಕರಣೋತ್ತರ ಕರ್ನಾಟಕದ ಕಾಲಘಟ್ಟ. ಮೊದಲ ಕಾಲಘಟ್ಟ ನಿರ್ದಿಷ್ಟವಾಗಿ ಕಳೆದ ಶತಮಾನದ ಪೂವಾರ್ಧ ಮತ್ತು ಅದಕ್ಕಿಂತ ಹಿಂದಿನ ಕಾಲಾವಧಿಯಾಗಿದ್ದರೆ ಎರಡನೇ ಕಾಲಘಟ್ಟ ಕಳೆದ ಶತಮಾನದ ಉತ್ತರಾರ್ಧವಾಗಿದೆ.

೯.೨ ಏಕೀಕರಣಪೂರ್ವದ ರಾಜಕೀಯ ಧೋರಣೆಗಳು

ಕನ್ನಡದ ಸಂದರ್ಭದಲ್ಲಿ ಪ್ರಭುತ್ವದ ಧೋರಣೆಗಳು ಭಾಷೆಯನ್ನು ಪ್ರಭಾವಿಸುತ್ತ ಬಂದಿರುವುದಕ್ಕೆ ಒಂಬತ್ತನೆಯ ಶತಮಾನದ ಕವಿರಾಜಮಾರ್ಗ ಕೃತಿಯಲ್ಲಿಯೇ ಸಾಕ್ಷಿಗಳು ಸಿಗುತ್ತವೆ. 'ತಿರುಳ್ಗನ್ನಡ'ವನ್ನು ಪ್ರಮಾಣ ಭಾಷೆಯಾಗಿ ಪರಿಗಣಿಸುವ ನಿರ್ಧಾರವೇ ಅಂತಹದ್ದೊಂದು ಮುಖ್ಯವಾದ ಸಾಕ್ಷಿ. 'ಸಂಸ್ಕೃತ' ನಾಡಿನ ಬಹುಸಂಖ್ಯಾತರ ಭಾಷೆಯಾಗಿರದಿದ್ದರೂ ಪ್ರಭುತ್ವದ ಬೆಂಬಲದ ಕಾರಣಕ್ಕಾಗಿ ಉದ್ದಕ್ಕೂ ಮಾನ್ಯತೆ ಪಡೆಯುತ್ತ ಬಂದಿತು. ಫಾರಸಿ, ದಖನಿ, ಉರ್ದುಗಳು

ಮುನ್ನೆಲೆಗೆ ಬಂದಿದ್ದು ಬಹಮನಿ, ಮೊಗಲ್ ಪ್ರಭುತ್ವಗಳ ಬೆಂಬಲದಲ್ಲಿ. ಬ್ರಿಟೀಷರ ಪ್ರವೇಶದ ನಂತರ ಇಂಗ್ಲಿಶ್ ಇಲ್ಲಿ ಬೆಳೆಯಿತು.

ಸ್ಥಳೀಯ ರಾಜಪ್ರಭುತ್ವಗಳ ರಾಜಕೀಯ ಧೋರಣೆಗಳು ಸ್ವರೂಪದಲ್ಲಿ ಹೇರಿಕೆಯ ಸ್ವರೂಪದಲ್ಲಿರುತ್ತಿದ್ದವು. ಆದರೆ ಇಲ್ಲಿ ಇಂಗ್ಲಿಶನ್ನು ಹರಡಿದ ಬ್ರಿಟೀಷರು ಜಾಣತನದಿಂದ ಅದನ್ನು ಸಾಧಿಸಿದರು. ಮೊದಲಿಗೆ ಮಿಶನರಿಗಳು ಭಾರತೀಯ ದೇಶಿಭಾಷೆಗಳಲ್ಲಿ ಕೆಲಸ ಮಾಡುತ್ತಾ ಹೋದರು. ಆದರೆ ಯಾವಾಗ ಬ್ರಿಟಿಶರು ಈ ದೇಶವನ್ನು ಗೆದ್ದು ಪ್ರಭುತ್ವವನ್ನು ಹಿಡಿದರೋ, ಆಗ ಮಾಡಿದ್ದು ಸೋತವರ ಭಾಷೆಯನ್ನು ಕಲಿಯುವುದನ್ನಲ್ಲ. ಸೋತವರೇ ತಮ್ಮ ಭಾಷೆಯನ್ನು ಕಲಿಯುವಂತಹ ಅನಿವಾರ್ಯತೆ ನಿರ್ಮಿಸಿದ್ದು'. ಬ್ರಿಟಿಷರು ಸೃಷ್ಟಿಸಿದ ಇಂಗ್ಲಿಶ್ ಕಲಿಯಬೇಕಾದ ಅನಿವಾರ್ಯತೆಯನ್ನು ಅವರಿಂದ ಭಾರತ ಬಿಡುಗಡೆಗೊಂಡ ನಂತರವೂ ನವಸಾಮ್ರಾಜ್ಯಶಾಹಿ ಶಕ್ತಿಗಳು ಇಲ್ಲಿ ಮುಂದುವರೆಸಿವೆ.

೯.೩ ಏಕೀಕರಣ ಕರ್ನಾಟಕ ಒಂದು 'ರಾಜಕೀಯ ನಿರ್ಧಾರ' ಎಂಬ ಗ್ರಹಿಕೆ.

ಏಕೀಕರಣಗೊಂಡ ಕರ್ನಾಟಕದ ನಿರ್ಮಾಣಕ್ಕೆ ಕಾರಣವಾದ ಅಂಶಗಳ ಮೂಲ ಹುಡುಕುತ್ತ ಹೋದರೆ ಸಿಗುವುದು ಬಂಗಾಳ ವಿಭಜನೆಯ ಘಟನೆ. ಒರಿಯಾ ಭಾಷೆಗಳನ್ನು ಆಡುತ್ತಿದ್ದ ಬಂಗಾಳ ಪ್ರೆಸಿಡೆನ್ಸಿಯಲ್ಲಿ ಬಿಹಾರಿಗಳು ತಮ್ಮತನವನ್ನು ಕಾಯ್ದುಕೊಳ್ಳುವುದು ಸಾಧ್ಯವಿರಲಿಲ್ಲ. ಆದ್ದರಿಂದ ಇವರು ತಮ್ಮನ್ನು ಬಂಗಾಳದಿಂದ ಪ್ರತ್ಯೇಕಿಸಿ ಬೇರೆ ಪ್ರಾಂತ್ಯವನ್ನೇ ರಚಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟು ಚಳವಳಿ ತೀವ್ರಗೊಳಿಸಿದರು. ಈ ಕುರಿತು ಸಹಿ ಸಂಗ್ರಹಿಸಿ ಗೌರ್ನರ್ ಲಾರ್ಡ್ ಕರ್ಜನ್ನನಿಗೆ ಮನವಿ ಸಲ್ಲಿಸಲಾಯಿತು. ೧೯೦೩ರಲ್ಲಿ ಒರಿಯಾಗಳು 'ಉತ್ಕಲ ಐಕ್ಯ ಪರಿಷತ್' ಎಂಬ ಸಂಘಟನೆ ಕಟ್ಟಿದರು. ಒರಿಯಾ ಚಳುವಳಿಯ ಕುರಿತು ಕೃತಿಯೊಂದನ್ನು ಪ್ರಕಟಿಸಿ ಹಂಚಿದರು. ಭಾಷಾ ಚಳುವಳಿಯ ಹಿನ್ನೆಲೆಯಲ್ಲಿ ಇದು ಬಹುಷಃ ಮೊದಲನೆಯದು. ಇದರೊಂದಿಗೆ ಸ್ವಾತಂತ್ರ್ಯ ಚಳುವಳಿಯು ದೇಶದೆಲ್ಲೆಡೆ ನಡೆಯುತ್ತಿದ್ದ ಸಂದರ್ಭದಲ್ಲಿ ಬಂಗಾಳದಲ್ಲಿ ಕ್ರಾಂತಿಕಾರಿ ಚಳುವಳಿ ಆರಂಭವಾಗಿತ್ತು. ಅಹಿಂಸಾ ರೀತಿಯ ಚಳುವಳಿಗಳನ್ನು ನಿಗ್ರಹಿಸಿದಷ್ಟು ಕ್ರಾಂತಿಕಾರಿಗಳನ್ನು ಎದುರಿಸುವುದು ಸುಲಭವಾಗಿರಲಿಲ್ಲ. ಆದ್ದರಿಂದ ಇವರನ್ನು ಹತ್ತಿಕ್ಕಲು ತಮ್ಮ 'ಒಡೆದು ಆಳುವ ನೀತಿ'ಯಂತೆ ಲಾರ್ಡ್ ಕರ್ಜನ್ನನು ಸುಮಾರು ಎಂಟು ಕೋಟಿ ಜನರಿದ್ದ ಬಂಗಾಳ ಪ್ರಾಂತ್ಯವನ್ನು ೧೬.೧೦.೧೯೦೫ರಂದು ಇಬ್ಭಾಗ ಮಾಡಿದನು. ಬಂಗಾಳವನ್ನು ಪೂರ್ವ ಮತ್ತು ಪಶ್ಚಿಮ ಘಟಕಗಳನ್ನಾಗಿ ಛಿದ್ರ ಮಾಡಲಾಯಿತು. ಪೂರ್ವ ಬಂಗಾಳಕ್ಕೆ ಢಾಕಾವನ್ನು ರಾಜಧಾನಿಯನ್ನಾಗಿ ಮಾಡಿ (ಇಂದಿನ ಬಾಂಗ್ಲಾದೇಶ) ಅಸ್ಸಾಂನ್ನು ಸೇರಿಸಿದರು. ಪಶ್ಚಿಮ ಬಂಗಾಳಕ್ಕೆ ಕಲ್ಕತ್ತ ನಗರವನ್ನು ರಾಜಧಾನಿಯನ್ನಾಗಿಸಿ ಒರಿಸ್ಸಾ, ಬಿಹಾರಗಳನ್ನು ಸೇರಿಸಿದರು. ಮುಸ್ಲಿಂ ಮತಬಾಂಧವರೆ ಹೆಚ್ಚು ಇದ್ದ

ಪೂರ್ವ ಬಂಗಾಳವನ್ನು ಹಿಂದೂಗಳಿಂದ (ಪಶ್ಚಿಮ ಬಂಗಾಳ) ಬೇರ್ಪಡಿಸುವ ಕುಟಿಲ ನೀತಿಗೆ ಎರಡೂ ಕಡೆಗಳಿಂದಲೂ ತೀವ್ರ ವಿರೋಧ ವ್ಯಕ್ತಗೊಂಡಿತು. ಈ ಎರಡು ಭಾಗಗಳಿಗೂ ಇಬ್ಬರು ಲೆಫ್ಟಿನೆಂಟ್ ಗೌರ್ನರ್‌ಗಳನ್ನು ನೇಮಕ ಮಾಡಲಾಗಿತ್ತು. ಧರ್ಮದ ಹೆಸರಿನಲ್ಲಿ ಕೋಮುವಾದವನ್ನು ಬಿತ್ತಲು ಯತ್ನಿಸಿದ ಬ್ರಿಟಿಷ್ ಆಳರಸರಿಗೆ ಬಂಗಾಳಿ ಭಾಷಿಕರು ಭಾಷೆಯೊಂದರಿಂದ ಪ್ರಾಂತ್ಯಾಭಿಮಾನ, ಸ್ವಾತಂತ್ರ್ಯಾಭಿಮಾನವನ್ನು ವ್ಯಕ್ತಪಡಿಸಲಾರಂಭಿಸಿದರು. ಬಂಗಾಳ ವಿಭಜನೆಯ ಕಾವು ಕನ್ನಡಿಗರ ಮೇಲೆ ಪ್ರಭಾವ ಬೀರಿತು.[೧]

ದಕ್ಷಿಣ ಭಾರತದಲ್ಲಿ ಅದರಲ್ಲೂ ಕನ್ನಡ ಮಾತನಾಡುತ್ತಿದ್ದ ಭೂಪ್ರದೇಶಗಳಲ್ಲಿ (ಈ ರೀತಿಯ) ಭಾಷಾಪ್ರಕ್ರಿಯೆಗಳು ಭಿನ್ನ ನಿಲುವುಗಳನ್ನು ಕಂಡಿದ್ದವು. ಅಂದರೆ ಮರಾಠಿ, ಗುಜರಾತಿ ಬಂಗಾಳಿ ಭಾಷೆಗಳ ತೀವ್ರ ಒತ್ತಡಗಳಿಂದ ಮುಂಬಯಿ-ಕರ್ನಾಟಕದ ಕನ್ನಡಿಗರು ಬಂಗಾಳದಲ್ಲಿನ ಭಾಷಾ ಹಿನ್ನೆಲೆಯ ಚಟುವಟಿಕೆಗಳನ್ನು ಗಮನಿಸದೆ ಇರಲಿಲ್ಲ. ಮರಾಠಿಯಿಂದ ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳಿಗೆ ಹೆಚ್ಚಿನ ಅಘಾತವಾಗುತ್ತಿದ್ದುದು ಈ ಭಾಗದವರಿಗೆ ಮಾತ್ರ. ಹೀಗಾಗಿ ಭಾಷಾಭಿಮಾನದ ಮೊದಲ ಬೀಜಾಂಕುರ ಆದದ್ದು ಧಾರವಾಡಗಳನ್ನೊಳಗೊಂಡ ಈ ನೆಲದಲ್ಲಿ. ಕನ್ನಡಿಗರ ಶ್ರೇಯೋಭಿವೃದ್ಧಿಗಾಗಿ (೨೦.೦೭.೧೮೯೦ ರಲ್ಲಿ) ಧಾರವಾಡದಲ್ಲಿ ಸಂಸ್ಥೆಯೊಂದು ಹುಟ್ಟಿಕೊಂಡಿತು. ಅದೇ 'ಕರ್ನಾಟಕ ವಿದ್ಯಾವರ್ಧಕ ಸಂಘ' ಕರ್ನಾಟಕ ವಿದ್ಯಾವರ್ಧಕ ಸಂಘ ಬಂಗಾಳ ವಿಭಜನೆಗಿಂತ ೧೫ ವರ್ಷಗಳಷ್ಟು ಹಿಂದೆಯೇ ಹುಟ್ಟಿದ್ದರೂ ಅದು ಕರ್ನಾಟಕ ಏಕೀಕರಣದ ಬಗ್ಗೆ ಹೆಚ್ಚು ಕ್ರಿಯಾಶೀಲವಾಗಲು ಈ ಘಟನೆ ಪ್ರೇರಣೆಯನ್ನು ನೀಡಿತು. ಈ ಎಲ್ಲಾ ಬೆಳವಣಿಗೆಗಳು ಕನ್ನಡ ಭಾಷಿಕರಿಗೊಂದು ಪ್ರತ್ಯೇಕ ಅಸ್ತಿತ್ವದ ಅಗತ್ಯವನ್ನು ಮನಗಾಣಿಸಿದವು. ೧೯೦೭ರ ಫೆಬ್ರವರಿ ಸಂಚಿಕೆಯಲ್ಲಿ ಏಕೀಕರಣದ ಕುರಿತು ವಿದ್ಯಾವರ್ಧಕ ಸಂಘದ 'ವಾಗ್ಭೂಷಣ' ಪತ್ರಿಕೆಯಲ್ಲಿ ಆಲೂರ ವೆಂಕಟರಾಯರು ಕನ್ನಡಿಗರು ಚಿಂತಿಸುವಂತಹ ಲೇಖನ ಬರೆದರು

ಬಂಗಾಳ ವಿಭಜನೆಗೆ ಉಂಟಾದ ಪ್ರತಿರೋಧ ಕೆರಳಿಕೆಗಳನ್ನು ಗಮನಿಸಿ 'ವಸಾಹತುಶಾಹಿ ಆಡಳಿತವು ೧೯೧೧ರಲ್ಲಿ ಅದನ್ನು ರದ್ದುಗೊಳಿಸುವ ತೀರ್ಮಾನಕ್ಕೂ ಬಂದಿತಾದರೂ' ಬಂಗಾಳವನ್ನು ವಿಭಜನೆ ಮಾಡುವ ಬ್ರಿಟೀಶ್ ಸರ್ಕಾರದ ರಾಜಕೀಯ ನಿರ್ಧಾರವೇ ಭಾರತದ ಹಲವು ದೇಶಿ ಭಾಷಾ ಚಳುವಳಿಗಳಿಗೆ ಕಾರಣವಾಯಿತು. ಬೇರೆಡೆಗಳಂತೆ ಕರ್ನಾಟಕದ ಸಂದರ್ಭದಲ್ಲೂ ಏಕೀಕರಣ ಚಳುವಳಿ ಭೌಗೋಳಿಕ ಒಟ್ಟುಗೂಡುವಿಕೆಯನ್ನು ಹೋರಾಟದ ಮುಖ್ಯ ಗುರಿಯನ್ನಾಗಿ ಇಟ್ಟುಕೊಂಡಿತ್ತು.

ಸ್ವಾತಂತ್ರ್ಯೋತ್ತರ ಭಾರತದಲ್ಲೂ ಕರ್ನಾಟಕ ಏಕೀಕರಣ ಚಳುವಳಿಯ ಮೇಲೆ ರಾಜಕೀಯ ನಿಲುವುಗಳ ಪ್ರಭಾವ ಕೆಲಸ ಮಾಡಿತು. ಕರ್ನಾಟಕ ಏಕೀಕರಣ ಚಳವಳಿ ನಡೆಯುತ್ತಿದ್ದ ಕಳೆದ ಶತಮಾನದ ಅರವತ್ತರ ದಶಕದ ಆರಂಭದ ವರ್ಷಗಳಲ್ಲಿ ಗುಜರಾತ್, ಕೇರಳ, ಮಹಾರಾಷ್ಟ್ರಗಳಲ್ಲೂ

ಜನರು ಭಾಷಿಕ ಚಳವಳಿಯನ್ನು ಉಗ್ರರೂಪಕ್ಕೆ ತಂದಿದ್ದರು. ಆ ಸಂದರ್ಭದ ಚುನಾವಣಾ ಫಲಿತಾಂಶ ಕಾಂಗ್ರೆಸ್ ಸರ್ಕಾರಕ್ಕೆ ವ್ಯತಿರಿಕ್ತವಾಗಿತ್ತು. ಇದೆಲ್ಲದರ ಒಟ್ಟು ಪರಿಣಾಮವಾಗಿ ಕೇಂದ್ರ ಸರ್ಕಾರ ೨೯.೧೨.೧೯೫೩ ರಂದು ಭಾಷಾವಾರು ಪ್ರಾಂತ್ಯಗಳ ರಚನೆ ಬಗ್ಗೆ ವರದಿ ನೀಡಲು ಆಯೋಗವೊಂದನ್ನು ನೇಮಿಸಿತು. "ರಾಜ್ಯ ಪುನರ್ವಿಂಗಡಣಾ ಆಯೋಗ" ಎಂದು ಕರೆಸಿಕೊಂಡ ಈ ಆಯೋಗಕ್ಕೆ ಎಸ್.ಫಜಲ್ ಆಲಿ ಅಧ್ಯಕ್ಷರು ಅದರಿಂದಲೇ ಇದನ್ನು 'ಫಜಲ್ ಅಲಿ ಆಯೋಗ' ಎಂತಲೂ ಕರೆಯುವುದು.[೨]

ಕೊನೆಗೂ ೧೯೫೬ ನವೆಂಬರ್ ೧ ರಂದು ರಾಜ್ಯ ರಚನೆಯಾಯಿತು. ಈ ಮೂಲಕ ಹಲವು ಭಾಷೆಗಳ ನಡುವೆ ಹಂಚಿಹೋಗಿದ್ದ ಮತ್ತು ಪರಸ್ಪರ ಸಂಪರ್ಕವಿಲ್ಲದೆ ಹಲವು ಉಪಭಾಷೆಗಳಲ್ಲಿ ತಮ್ಮ ವ್ಯವಹಾರವನ್ನು ನಡೆಸುತ್ತಿದ್ದ ಕನ್ನಡ ಮಾತನಾಡುವವರೂ ಕೂಡ ಒಗ್ಗೂಡಿದ ಭೂಪ್ರದೇಶದಲ್ಲಿ ಸೇರುವಂತಾಯಿತು. 'ಮೇಲುನೋಟಕ್ಕೆ ಕನ್ನಡಿಗರ ಬಹುದಶಕಗಳ ಅಪೇಕ್ಷೆಗಳು ಈ ಮೂಲಕ ಪೂರ್ಣಗೊಂಡಂತೆ ಅನಿಸಿದರೂ ವಾಸ್ತವವಾಗಿ ಇದೊಂದು (ಏಕೀಕರಣ) ರಾಜಕೀಯ ನಿರ್ಧಾರವಾಗಿತ್ತು ಎಂಬುದನ್ನು ಮರೆಯುವಂತಿಲ್ಲ' ಎಂದು ಕೆ.ವಿ ನಾರಾಯಣ ಅವರು ಗುರುತಿಸುತ್ತಾರೆ. 'ರಾಜ್ಯ ಪುನರ್ವಿಂಗಡಣೆಯಿಂದಾದ ಏಕೀಕರಣ ಅಥವಾ ಕರ್ನಾಟಕ ರಾಜ್ಯ ನಿರ್ಮಾಣ, ಏಕೀಕರಣದ ಪರವಾಗಿದ್ದ ಚಳುವಳಿಯ ಫಲಿತ ಎನ್ನುವುದಕ್ಕಿಂತ ಅದೊಂದು ರಾಜಕೀಯ ನಿರ್ಧಾರದ ಪರಿಣಾಮ ಆಗಿದೆ. ಅದರರ್ಥ ಈ ಚಳುವಳಿಯ ಪಾತ್ರವೇನೂ ಇಲ್ಲವೆಂದಲ್ಲ. ಆಡಳಿತ ವರ್ಗ ತನ್ನ ಅಪೇಕ್ಷಿತ ನಿರ್ಧಾರಗಳನ್ನು ನಿರ್ಣಯಗಳನ್ನು ಜಾರಿಗೆ ಕೊಡುವಾಗ ತನ್ನ ಸಮರ್ಥನೆಗಾಗಿ ಇಂತಹ ಚಳುವಳಿಗಳನ್ನು ಬಳಸಿಕೊಳ್ಳುತ್ತದೆ' ಎನ್ನುವುದು ಅವರ ವಿಶ್ಲೇಷಣೆ. 'ಏಕೀಕರಣ ರಾಜಕೀಯ ನಿರ್ಧಾರವಾಗಿತ್ತು' ಎನ್ನುವ ಗ್ರಹಿಕೆಯಲ್ಲಿ ಏಕೀಕರಣ ಸಾಧ್ಯವಾಗಿರುವುದರ ಹೆಚ್ಚಿನ ಒತ್ತು ರಾಜಕೀಯ ನಿರ್ಧಾರದ ಮೇಲೆ ಬೀಳುತ್ತಿದ್ದು ಏಕೀಕರಣ ಚಳುವಳಿಯ ಪಾತ್ರವನ್ನು ನಿರ್ಣಾಯಕವೆಂದು ಭಾವಿಸಿಲ್ಲ. ಈ ಗ್ರಹಿಕೆಯನ್ನು ಪುನರ್ ಪರಿಶೀಲಿಸುವ ಅಗತ್ಯವಿದೆ.

ಸರಿಸುಮಾರು ಅರ್ಧ ಶತಮಾನಕ್ಕಿಂತ ದೀರ್ಘಕಾಲೀನ ಏಕೀಕರಣ ಚಳುವಳಿ ಏಕೀಕರಣಗೊಂಡ ಕರ್ನಾಟಕ ರೂಪುತಳೆಯುವುದರ ಹಿಂದೆ ಕೆಲಸ ಮಾಡಿದೆ. ಆರಂಭದಲ್ಲಿ ಮೈಸೂರು ಪ್ರಾಂತ್ಯದ ಒಂದು ವರ್ಗಕ್ಕೆ ಏಕೀಕರಣದ ಬಗೆಗೆ ಸಹಮತವಿರಲಿಲ್ಲ. ಆನಂತರದ ಕಾಲಘಟ್ಟದಲ್ಲಿ ದಕ್ಷಿಣ ಕನ್ನಡದ ಕೊಂಕಣಿಗರ ಒಂದು ವರ್ಗ ಏಕೀಕರಣದಲ್ಲಿ ನಿರಾಸಕ್ತಿ ತೋರಿಸಿತು. ಕೊಡವರಲ್ಲಿ ಒಂದು ವರ್ಗ ತಮಗೇ ಒಂದು ಪ್ರಾಂತ್ಯ ಬೇಕೆಂದು ಕೇಳಲಾರಂಭಿಸಿದ್ದರು. ಇವೆಲ್ಲವನ್ನು ಮಾತುಕತೆಗಳ ಮೂಲಕ ಬಗೆಹರಿಸಲಾಯಿತು. ೧೯೪೬ರ ಜನವರಿ ೧೯ರಂದು ಮುಂಬಯಿಯಲ್ಲಿ ಸೇರಿದ ಕರ್ನಾಟಕ ಏಕೀಕರಣ ಸಮ್ಮೇಳನದ ೧೧೦ನೆಯ ಅಧಿವೇಶನದಲ್ಲಿ ವಕೀಲರಾದ

ಜಹಗೀರದಾರ ರಂಗಾಚಾರ್ಯರು ಸಭೆಗೆ ವಿವರಿಸಿದ 'ಕರ್ನಾಟಕ'ದ ಚಿತ್ರಣ ಏಕೀಕರಣದ ಸಾಧಿಸುವಲ್ಲಿನ ಸಂಕೀರ್ಣ ಪರಿಸ್ಥಿತಿಯನ್ನು ಮನದಟ್ಟು ಮಾಡಿಕೊಡುತ್ತದೆ: 'ಕರ್ನಾಟಕ ಪ್ರಾಂತವನ್ನು ಬ್ರಿಟಿಷ್ ಕರ್ನಾಟಕ ಹಾಗೂ ಸಂಸ್ಥಾನೀ ಕರ್ನಾಟಕವೆಂದು ಎರಡು ಭಾಗವನ್ನಾಗಿ ಮಾಡಬಹುದು. ಬ್ರಿಟಿಷ್ ಕರ್ನಾಟಕದಲ್ಲಿ ಮುಂಬಯಿ ಆಡಳಿತಕ್ಕೆ ಸೇರಿದ ಬೆಳಗಾವಿ, ಧಾರವಾಡ, ಕಾರವಾರ, ಮತ್ತು ವಿಜಾಪುರ ಜಿಲ್ಲೆಗಳು ಮತ್ತು ಸೊಲ್ಲಾಪುರ, ಸಾತಾರ ಜಿಲ್ಲೆಯ ಕೆಲವು ಭಾಗಗಳು ಇವೆ. ಮದ್ರಾಸು ಆಡಳಿತಕ್ಕೆ ಸೇರಿದ ಬಳ್ಳಾರಿ, ಮಂಗಳೂರು, ನೀಲಗಿರಿ ಜಿಲ್ಲೆಗಳು ಮತ್ತು ಆನಂತಪುರ, ಸೇಲಂ ಮತ್ತು ಕೋಯಮತ್ತೂರ ಜಿಲ್ಲೆಯ ಕೆಲವು ಭಾಗಗಳು ಇವೆ. ಇದಲ್ಲದೆ ಕಮಿಷನರನಿಂದ ಆಳಲ್ಪಡುವ ಚಿಕ್ಕ ಕೊಡಗು ಪ್ರಾಂತವು ಬ್ರಿಟಿಷ್ ಕರ್ನಾಟಕದ ಭಾಗವೇ. ಒಟ್ಟು ಬ್ರಿಟಿಷ್ ಕರ್ನಾಟಕವು ೩೫೪೮೯ ಚದರ ಮೈಲುಗಳಷ್ಟು ವಿಸ್ತೀರ್ಣವಿದ್ದು ೯೦ ಲಕ್ಷ ಜನರನ್ನೊಳಗೊಂಡಿದೆ. ಸಂಸ್ಥಾನೀ ಕರ್ನಾಟಕದಲ್ಲಿ, ಇಡೀ ಮೈಸೂರು ಪ್ರಾಂತ, ಹೈದರಾಬಾದ ಸಂಸ್ಥಾನದ ಬೀದರ, ಕಲುಬುರ್ಗಿ, ಕೊಪ್ಪಳ ಮತ್ತು ರಾಯಚೂರ ಜಿಲ್ಲೆಗಳು, ರಾಮದುರ್ಗ, ಜಮಖಂಡಿ, ಮುಧೋಳ, ಸವಣೂರು, ಸೊಂಡೂರು ಮುಂತಾದ ಸಂಸ್ಥಾನಗಳು ಮತ್ತು ಔಂಧ ಮಿರಜ,(ಹಿರಿ,ಕಿರಿ), ಸಾಂಗಲಿ, ಕುರುಂದವಾಡ, ಅಕ್ಕಲಕೋಟೆ, ಜತ್ತ ಮತ್ತು ಕೊಲ್ಹಾಪುರ ಮೊದಲಾದ ಸಂಸ್ಥಾನಗಳ ಕೆಲವು ಭಾಗಗಳು ಅಡಕವಾಗುವವು. ಸಂಸ್ಥಾನೀ ಕರ್ನಾಟಕದ ವಿಸ್ತಾರವು ಬ್ರಿಟಿಷ್ ಕರ್ನಾಟಕಕ್ಕಿಂತಲೂ ಸ್ವಲ್ಪ ಹೆಚ್ಚೇ ಇರುವುದು. ಇಡೀ ಕರ್ನಾಟಕದ ಜನಸಂಖ್ಯೆಯು ಒಂದೂವರೆ ಕೋಟಿ ಆಗಬಹುದು'

'೨೧ ಆಡಳಿತಗಳಲ್ಲಿ ಕರ್ನಾಟಕದ ಜಿಲ್ಲೆಗಳು ಸ್ವಲ್ಪವಿದ್ದು, ಅವು ರಾಜಧಾನಿ ಪಟ್ಟಣಗಳಿಂದ, ೩೦೦ ಇಲ್ಲವೆ ೬೦೦ ಮೈಲು ದೂರ ಇವೆ. ಮುಂಬಯಿ ಶಾಸನ ಸಭೆಯ ಒಟ್ಟು ಸದಸ್ಯರ ಸಂಖ್ಯೆ ೧೭೫. ಅದರಲ್ಲಿ ಕರ್ನಾಟಕದ ಪ್ರತಿನಿಧಿಗಳು ಕೇವಲ ೩೨, ಮದ್ರಾಸ ಶಾಸನ ಸಭೆಯಲ್ಲಿಯ ೨೧೫ ಸದಸ್ಯರಲ್ಲಿ ಕರ್ನಾಟಕದವರು ಬರೀ ೧೨. ಕೇಂದ್ರ ಶಾಸನ ಸಭೆಯಲ್ಲಿ ೧೪೨ ಸದಸ್ಯರಲ್ಲಿ ಕನ್ನಡಿಗನು ಒಬ್ಬನೇ. ಈ ಪ್ರಕಾರ ಪ್ರತಿಯೊಂದು ಆಡಳಿತದಲ್ಲಿ ಕನ್ನಡಿಗರು ಅಲ್ಪ ಸಂಖ್ಯಾಕರಿರುವುದರಿಂದ ಅವರ ಕಷ್ಟನಷ್ಟಗಳು ಸರಕಾರದ ದೃಷ್ಟಿಗೆ ಬೀಳುವುದಿಲ್ಲ, ಬಿದ್ದರೂ ಕೂಡ ಅವುಗಳನ್ನು ದೂರ ಮಾಡುವುದು ಅವಶ್ಯಕವೆಂದು ಅವರಿಗೆ ಅನಿಸುವುದಿಲ್ಲ.'

ಮೇಲ್ಕಂಡ ಮಾತುಗಳಲ್ಲಿ ರಾಷ್ಟ್ರೀಯ ನಾಯಕರು ಕರ್ನಾಟಕ ಏಕೀಕರಣದ ಬಗ್ಗೆ ಆಸಕ್ತಿ ತೋರದಿರಲು ಅವರು ಈ 'ಕರ್ನಾಟಕ' ಪ್ರಾಂತದಲ್ಲಿ ಇವೆ ಎಂದು ಭಾವಿಸಿದ ಕೊರತೆಗಳು ಹೀಗಿವೆ: ೧. ಕರ್ನಾಟಕಕ್ಕೆ ತನ್ನದಾದ ಸಂಸ್ಕೃತಿಯಿಲ್ಲ. ಜಾತೀಯ ಶಕ್ಯವಿಲ್ಲ. ೨. ಅದಕ್ಕೆ ಒಂದಾದ ಚರಿತ್ರೆಯಿಲ್ಲ ಮತ್ತು ಅದು ಎಂದೂ ಒಂದು ಪ್ರಾಂತವಾಗಿರಲಿಲ್ಲ. ೩. ಕರ್ನಾಟಕದಲ್ಲಿ ಕನ್ನಡವೊಂದೇ ಭಾಷೆಯಿಲ್ಲ. ೪. ವಿಸ್ತಾರ ಮತ್ತು ಜನಸಂಖ್ಯೆಯಲ್ಲಿ ಅದು ತೀರ ಸಣ್ಣದಿದೆ. ೫. ಅದರ ಭಾಗಗಳೆಲ್ಲ ಸಂಲಗ್ನವಾಗಿಲ್ಲ. ೬. ಅಲ್ಲಿ ಸಂಸ್ಥಾನಗಳ ಸಮಸ್ಯೆಯಿದೆ. ೭. ಕರ್ನಾಟಕಕ್ಕೆ ತಕ್ಕ ವಾಹನಸೌಕರ್ಯವಿಲ್ಲ,

ಬಂದರವಿಲ್ಲ ಮತ್ತು ದೊಡ್ಡ ಮುಂದಾಳುಗಳಿಲ್ಲ. ೮. ಅದು ಆರ್ಥಿಕ ದೃಷ್ಟಿಯಿಂದ ಸ್ವಯಂಪೂರ್ಣವಾಗಿಲ್ಲ. ೯. ಈಗಿನ ಆಡಳಿತ ವ್ಯವಸ್ಥೆಯಲ್ಲಿ ಯಾವ ಅನಾನೂಕೂಲತೆಗಳೂ ಇಲ್ಲ. ೧೯೪೬ರ ಜನವರಿ ೧೯ರಂದು ಮುಂಬಯಿಯಲ್ಲಿ ಸೇರಿದ ಕರ್ನಾಟಕ ಏಕೀಕರಣ ಸಮ್ಮೇಳನದ ೧೧ನೆಯ ಅಧಿವೇಶನದಲ್ಲಿ ಸಮ್ಮೇಳನಾಧ್ಯಕ್ಷರಾದ ಬಾಳ ಗಂಗಾಧರ ಖೇರರವರ ಮಾತುಗಳು) ಈ ಕೊರತೆಗಳಲ್ಲಿ ಬಹುತೇಕ ಅವಾಸ್ತವಿಕ ಮತ್ತು ಪೂರ್ವಗ್ರಹಗಳಿಂದ ಕೂಡಿರುವುದು ಮೇಲ್ನೋಟಕ್ಕೆ ಕಾಣುತ್ತವೆ. ಆದರೆ ಈ ಕೊರತೆಗಳೂ ಆ ಕಾಲಘಟ್ಟದಲ್ಲಿ ಒಂದು ಪ್ರಮಾಣದಲ್ಲಿ ಏಕೀಕರಣಕ್ಕೆ ತೊಡರುಗಾಲುಗಳಾಗಿದ್ದವು. ಏಕೀಕರಣ ಫಲಪ್ರದವಾಗುವ ಸೂಚನೆಗಳು ಸಿಗಲಾರಂಭಿಸಿದ ಹೊತ್ತಿನಲ್ಲಿ ಆಂಧ್ರ, ಮಹಾರಾಷ್ಟ್ರ, ಕೇರಳ ತಮಿಳುನಾಡುಗಳ ವಿಸ್ತಾರಕ್ಕಾಗಿ ಕರ್ನಾಟಕದ ಗಡಿಗಳಲ್ಲಿ ಕರ್ನಾಟಕದ ಹಿತಕ್ಕೆ ಧಕ್ಕೆಯಾಗುವ ಚಟುವಟಿಕೆಗಳು ನಡೆಯುತ್ತಿದ್ದವು.[೩] ಇದನ್ನೂ ಏಕೀಕರಣದ ಮುಂದಾಳುಗಳು ಬಗೆಹರಿಸಲು ಪ್ರಯತ್ನಿಸಿದರು.

ಈ ಹಿನ್ನೆಲೆಯಲ್ಲಿ 'ಕನ್ನಡದ ಏಕೀಕರಣದ್ದು ಅಸಾಮಾನ್ಯ ಸಾಹಸ, ಸ್ಥಳೀಯವಾಗಿರುವಂತಹ ಹಲವಾರು ತುಂಡುಗಳು, ಹಲವು ಸಂಸ್ಕೃತಿಗಳು, ಹಲವು ಇತಿಹಾಸಗಳು ಎಲ್ಲವನ್ನೂ ಸೇರಿಸಿಕೊಳ್ಳುವಂತಹ ಏಕೀಕರಣವದು. ಯಾವುದನ್ನು ಕುವೆಂಪು 'ಮೂಕ ಆಶಯ', ಯಾವುದನ್ನು ಸುಬ್ಬಣ್ಣ 'ಇನ್ನೂ ಮೂಡದ ಆಕೃತಿ' ಅಂತ ಗುರುತಿಸಿದ್ದರೋ ಅದಕ್ಕೆ ಮೂರ್ತ, ರಾಜಕೀಯ ಶರೀರವನ್ನು ಕೊಡುವ ಬಹುದೊಡ್ಡ ವೈಚಾರಿಕ ಸಾಹಸ ಅಂದುಕೊಂಡಿದ್ದೇನೆ. ಇವತ್ತು ಕರ್ನಾಟಕ ಇದೆ, ಕರ್ನಾಟಕದ ಗಡಿಗಳಿವೆ, ಕರ್ನಾಟಕದ ಮ್ಯಾಪ್‌ಗಳಿವೆ, ಅವು ಸುಲಭ ಸಾಧ್ಯವಾಗಿ ಕಾಣುತ್ತವೆ. ಆದರೆ ಏಕೀಕರಣಕ್ಕಾಗಿ ಹಲವಾರು ನೂರು ವರ್ಷಗಳವರೆಗೆ ತಮ್ಮದೇ ಸ್ವಂತ ಇತಿಹಾಸ ಸ್ಥಳೀಯ ಸಂಸ್ಕೃತಿಗಳು ಸೇರಿಕೊಂಡು ಕರ್ನಾಟಕ ಅಸ್ತಿತ್ವಕ್ಕೆ ಬರಬೇಕಾಗಿತ್ತು. ಏಕೀಕರಣವು ಇದನ್ನು ಸಾಧಿಸಿತು' ಎಂದು ರಾಜೇಂದ್ರ ಚೆನ್ನಿಯವರು ತಮ್ಮ 'ಅಸಮಗ್ರ' ಕೃತಿಯಲ್ಲಿ ಏಕೀಕರಣ ಚಳುವಳಿಯ ಮಹತ್ವವನ್ನು ಗುರುತಿಸುವುದು ಸರಿಯಾಗಿಯೇ ಇದೆ. ಆದರೆ ಅವರು ಅಖಿಲ ಭಾರತದ ಪರಿಪ್ರೇಕ್ಷ್ಯದಲ್ಲಿ ಏಕೀಕರಣ ಚಳುವಳಿಯನ್ನಿಟ್ಟು ನೋಡುತ್ತ 'ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಸ್ಥಿತಿಯ ಕೆಲವು ವಿಶಿಷ್ಟ ಲಕ್ಷಣಗಳ ಪರಿಣಾಮವಾಗಿ ಈ ಏಕೀಕರಣ ಇಲ್ಲಿ ಸಾಧ್ಯವಾಯಿತು' ಎನ್ನುವ ನಿಲುವಿಗೆ ಬರುತ್ತಾರೆ. ಅಂತಿಮವಾಗಿ 'ಏಕೀಕರಣದ ಚಳುವಳಿ ಇಲ್ಲಿ ನಡೆದಿರೋದು ನಿಜ. ಆದರೂ ಕೂಡ ಅದು ಫಲಪ್ರದವಾಗಿ ಕರ್ನಾಟಕ ಅನ್ನುವಂಥ ಒಂದು ಆಧುನಿಕ ರಾಜ್ಯ ನಿರ್ಮಾಣ ಆಗಿದ್ದು ರಾಜಕೀಯ ಸಂಕಲ್ಪದಿಂದ' ಎನ್ನುವ ಮೂಲಕ 'ಏಕೀಕರಣ ರಾಜಕೀಯ ನಿರ್ಧಾರವಾಗಿತ್ತು' ಎಂಬ ಕೆ.ವಿ ನಾರಾಯಣ ಅವರ ಅಭಿಪ್ರಾಯವನ್ನು ಅನುಮೋದಿಸುತ್ತಾರೆ.

ಏಕೀಕರಣದ ನಿರ್ಧಾರ ತೆಗೆದುಕೊಳ್ಳುವ ಸಂದರ್ಭದಲ್ಲಿನ ರಾಜಕೀಯ ಪರಿಸ್ಥಿತಿಗಳು ಈ ನಿರ್ಧಾರದ ಮೇಲೆ ಪರಿಣಾಮ ಬೀರಿರುವುದು ದಾಖಲಾಗಿರುವ ನಿಜಸಂಗತಿಯಾಗಿದೆ. ಆದರೆ

ಅದುವೇ ಏಕೀಕರಣದ ನಿರ್ಧಾರವನ್ನು ಕೈಗೊಳ್ಳುವಷ್ಟು ಶಕ್ತವಾಗಿರಲಿಲ್ಲ. ಬಳ್ಳಾರಿ ಆಂಧ್ರ ಮತ್ತು ಕರ್ನಾಟಕಗಳಲ್ಲಿ ಯಾವುದಕ್ಕೆ ಸೇರಬೇಕೆಂಬ ವಿವಾದ, ಹೈದರಾಬಾದನ್ನು ಭಾಷಾವಾರು ಪ್ರಾಂತ್ಯಗಳಿಗೆ ಹಂಚುವಲ್ಲಿ ಕೇಂದ್ರ ಸರ್ಕಾರದ ಹಿಂದೇಟು – ಇಂತಹ ಸಂಗತಿಗಳು ಏಕೀಕರಣದ ಕೊನೆಯ ಹಂತದವರೆಗೂ ಏಕೀಕರಣದ ಸಾಧ್ಯತೆಯನ್ನು ಪ್ರಶ್ನಾರ್ಥಕವನ್ನಾಗಿಸಿ ಅದುವೇ ಕರ್ನಾಟಕದ ಜನರ ಆಕ್ರೋಶಕ್ಕೆ ಕಾರಣವಾಗಿತ್ತು ಮತ್ತು ಏಕೀಕರಣ ಚಳುವಳಿಯನ್ನು ಬಿರುಸುಗೊಳಿಸಿತ್ತು. ಈ ಚಳುವಳಿ ಚುನಾವಣಾ ಫಲಿತಾಂಶದ ಮೇಲೂ ಬಿದ್ದು ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತದಲ್ಲಿದ್ದ ಕಾಂಗ್ರೆಸ್ ಉಪಚುನಾವಣೆಗಳಲ್ಲಿ ಸೋಲನ್ನು ಅನುಭವಿಸಿತ್ತು. ಇದುವೇ ಭಾಷಾವಾರು ಪ್ರಾಂತ್ಯಗಳ ರಚನೆ ಬಗ್ಗೆ ವರದಿ ನೀಡಲು 'ಫಜಲ್ ಅಲಿ ಆಯೋಗ'ದ ರಚನೆಗೆ ಕಾರಣವಾಗಿತ್ತು. ಅಂದರೆ ಏಕೀಕರಣದ್ದು ರಾಜಕೀಯ ನಿರ್ಧಾರವಾದರೂ ಇಂತಹ ನಿರ್ಧಾರ ಕೈಗೊಳ್ಳಲು ಇದ್ದ ಒತ್ತಡ ಏಕೀಕರಣ ಚಳುವಳಿಯೇ ಆಗಿತ್ತು. ಇದರೊಂದಿಗೆ ಏಕೀಕರಣಕ್ಕೆ 'ಸಾಂಸ್ಕೃತಿಕ ತಳಹದಿ ಹಾಕಿಕೊಟ್ಟಿದ್ದು ಸಾಹಿತಿ-ಕಲಾವಿದರು ಹಾಗೂ ಅಂದಿನ ಸಮಾಜ. ಇವರು ಛಿದ್ರವಾಗಿದ್ದ ಕನ್ನಡಿಗರನ್ನು ಒಂದು ಮಾಡುವಲ್ಲಿ ಭಾವನಾತ್ಮಕ ಹಾಗೂ ತಾತ್ವಿಕ ಪ್ರಯತ್ನಗಳನ್ನು ಮಾಡಿದರು'[೪]

ಕೆ.ವಿ.ನಾರಾಯಣ ಅವರೇ ದಾಖಲಿಸುವ ಹಾಗೆ 'ಭಾಷಾವಾರು ಪ್ರಾಂತ್ಯಗಳ ರಚನೆಗೆ ಒತ್ತಾಯಿಸುತ್ತಿದ್ದ ಚಳುವಳಿಗಳು ಬಹುಮಟ್ಟಿಗೆ ದಕ್ಷಿಣ ಭಾರತದಲ್ಲಿ ಇದ್ದವು ಎಂಬುದು ಗಮನಿಸಬೇಕಾದ ವಿಷಯ. ವಿಶಾಲಾಂಧ್ರಕ್ಕಾಗಿ ಆಗ್ರಹಿಸಿ ಚಳವಳಿ ಕುಳಿತಿದ್ದ ಪೊಟ್ಟಿ ಶ್ರೀರಾಮುಲು ಜೀವತ್ಯಾಗ ದೆಹಲಿಯ ಆಡಳಿತದ ಮೇಲೆ ಪರಿಣಾಮ ಬೀರಿ ಶೀಘ್ರ ನಿರ್ಧಾರ ತೆಗೆದುಕೊಳ್ಳುವಂತೆ ಪ್ರೇರೇಪಿಸಿತು. ಕರ್ನಾಟಕದಲ್ಲೂ ಬಳ್ಳಾರಿ-ಮೈಸೂರುಗಳ ಮಿಲನದ ಹಿಂದಿನ ರಾತ್ರಿ (೩೦.೦೯.೫೩) ಕನ್ನಡಪ್ರೇಮಿ ರಂಜಾನ್ ಸಾಹೇಬ್ ಅವರು ದುಷ್ಕರ್ಮಿಗಳ ಆಸಿಡ್ ಬಲ್ಬಿನಿಂದಾಗಿ ಬಲಿ ಆದರು. ಆಂಧ್ರದಲ್ಲಿ ಪೊಟ್ಟಿ ಶ್ರೀರಾಮುಲು ಜೀವತ್ಯಾಗದಂತೆ ಕರ್ನಾಟಕದಲ್ಲಿನ ರಂಜಾನ ಸಾಹೇಬ್ ಅವರ ಹತ್ಯೆ ಏಕೀಕರಣದ ಮೇಲೆ ನಿಶ್ಚಿತವಾಗಿ ಪರಿಣಾಮ ಬೀರಿರುತ್ತದೆ ಎಂದು ನಂಬಲು ಕಾರಣಗಳಿವೆ.

ಭಾಷೆಯನ್ನೇ ಮೂಲ ಆಧಾರವನ್ನಾಗಿ ಇಟ್ಟುಕೊಂಡು ಇಂಡಿಯಾವನ್ನು ವಿಭಜಿಸಬೇಕು ಎಂಬ ಚಿಂತನೆಯನ್ನು ವ್ಯಕ್ತಪಡಿಸಿದ ಬ್ರಿಟಿಷ್ ಆಳರಸರಲ್ಲಿ ಜ್ಞಾನ್ ಬ್ರೈಟ್‌ನೆ ಮೊದಲಿಗ (೧೮೫೩). ಒಂದು ನಿಟ್ಟಿನಲ್ಲಿ ಇಂತಹ ಚಿಂತನೆ ಬಿತ್ತಿದ ಜ್ಞಾನ್ ಬ್ರೈಟ್‌ಗೆ ಕನ್ನಡವನ್ನೂ ಒಳಗೊಂಡಂತೆ ಭಾರತದ ದೇಶಿ ಭಾಷೆಗಳು ಋಣಿಯಾಗಿರಬೇಕು. ವಿಶಾಲವಾದ ವ್ಯಾಪ್ತಿಯಲ್ಲಿ ಗ್ರಹಿಸಬಹುದಾದರೆ ವಾಸ್ತವದ ಕರ್ನಾಟಕದ ಸಾಕಾರಕ್ಕೂ ಇದನ್ನು ಲಗತ್ತಿಸಿ ಇದು ಮೂಲದಲ್ಲಿ ಅಂದಿನ ರಾಜಕೀಯ ನಿರ್ಧಾರದ ಫಲವಾಗಿಯೇ ಮೂಡಿದ್ದಾಗಿದೆ ಎಂದು ನಿರ್ಣಯಿಸಬಹುದು. ಆದರೆ ಈ ನಿರ್ಣಯ ನಂತರದ ಸರಿಸುಮಾರು ಒಂದು ನೂರು ವರ್ಷಗಳ ಕಾಲ ನಡೆದುಬಂದ ಏಕೀಕರಣ ಚಳುವಳಿಯ ಪಾತ್ರವನ್ನು ನೇಪಥ್ಯಕ್ಕೆ ಸರಿಸುತ್ತದೆ. ಈ ಹಿನ್ನೆಲೆಯಲ್ಲಿ ಚಳುವಳಿಗಾರರು, ಸಾಹಿತಿ-ಕಲಾವಿದರು ಮತ್ತು ಇದಕ್ಕೆ

ಸ್ಪಂದಿಸಿದ ಜನಸಮುದಾಯ ಇವರೆಲ್ಲರ ಒಕ್ಕೊರಲ ದನಿಯ ಆಗ್ರಹದ ಒಟ್ಟು ಫಲಿತ ಏಕೀಕರಣ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜನಚಳುವಳಿಗಳು ತಮ್ಮ ಬೇಡಿಕೆಯನ್ನು ಈಡೇರಿಸಿಕೊಂಡ ಹಲವು ಉದಾಹರಣೆಗಳಿವೆ. ಇತ್ತೀಚಿನ ಉದಾಹರಣೆಯೆಂದರೆ ಬಹಳ ದೀರ್ಘಕಾಲದ ತೆಲಂಗಾಣ ಹೋರಾಟದ ಫಲಶ್ರುತಿಯಾಗಿ ಹೊಸರಾಜ್ಯ ರೂಪತಾಳಿದ್ದು. 'ಕರ್ನಾಟಕ ಸರ್ಕಾರದ ಭಾಷಾ ನೀತಿಯೂ ಕನ್ನಡ ಭಾಷೆಗೆ ಕಲ್ಪಿಸಿದ ಕನ್ನಡ ಕಾವಲು ಸ್ಥಾಪನೆ ಸೇರಿದಂತೆ ಸ್ಥಾನಮಾನಗಳು ಸರಕಾರದ ನೆಲೆಯಿಂದ ಹುಟ್ಟಿಬಂದಿದ್ದು ಆಗಿರದೇ ಅಂದರೆ ರಾಜಕೀಯ ನಿರ್ಧಾರಗಳಿಂದ ಆಗಿರದೆ ಜನರ ಅಪೇಕ್ಷೆಗಳ ಒತ್ತಾಯದಿಂದ ರೂಪುಗೊಂಡಿದ್ದು'[೫] ಎಂದು ತಿಳಿಯುವುದು ಸಾಧ್ಯವಾಗುವುದಾದರೆ ಕರ್ನಾಟಕ ಏಕೀಕರಣ ಕೂಡ ಜನರ ಅಪೇಕ್ಷೆಗಳ ಒತ್ತಾಯದಿಂದ ರೂಪುಗೊಂಡಿದ್ದು ಎಂದು ತಿಳಿಯಬಹುದಾಗಿದೆ.

'ಏಕೀಕರಣ ರಾಜಕೀಯ ನಿರ್ಧಾರವಾಗಿತ್ತು' ಎನ್ನುವ ಗ್ರಹಿಕೆ ಒಟ್ಟಾರೆಯಾಗಿ ಜನಚಳುವಳಿಗಳು ಸೃಷ್ಟಿ ಮಾಡುವ ಒತ್ತಡಗಳು ರಾಜಕೀಯ ನಿರ್ಧಾರಗಳು ಆಕಾರ ಪಡೆಯುವಲ್ಲಿ ವಹಿಸುವ ನಿರ್ಣಾಯಕ ಪಾತ್ರವನ್ನು ಅಲ್ಲಗಳೆಯುವಂತಿದ್ದು ಈ ಬಗ್ಗೆ ವಿಸ್ತೃತ ಚರ್ಚೆಯ ಅಗತ್ಯವಿದೆ.

೯.೪ ಏಕೀಕರಣೋತ್ತರ ಕರ್ನಾಟಕದ ಮೇಲೆ ರಾಜಕೀಯ ಧೋರಣೆಗಳ ಪ್ರಭಾವ

೯.೪.೧ ಉತ್ತರದಾಯಿಯಾದ ಸರ್ಕಾರ

ಕಳೆದ ಶತಮಾನ ಕನ್ನಡ ಬಹುಮುಖ್ಯ ತಿರುವುಗಳನ್ನು ಪಡೆದು ಹಾದುಬಂದಿದೆ. ರಾಜೇಂದ್ರ ಚೆನ್ನಿ ಅವರು ಗುರುತಿಸುವಂತೆ ಏಕೀಕರಣವಾಗುವ ಮೊದಲು ಕನ್ನಡ ನಾಡು ಅನ್ನುವಂಥದ್ದು ಕೇವಲ ಒಂದು 'ಕಲ್ಪಿತ ಸಮುದಾಯ' ಆಗಿತ್ತು. ಏಕೀಕರಣದ ನಂತರ ಕನ್ನಡ ನಾಡಿಗೆ ಭೌಗೋಳಿಕ ನಿರ್ದಿಷ್ಟತೆ ಬಂದಿತು. ಸ್ವಾತಂತ್ರ್ಯಪೂರ್ವದ ಕನ್ನಡ ಬಹುಪಾಲು ತನ್ನಿಂದ ತಾನೆ, ಯಾವುದೇ ನಿರ್ದಿಷ್ಟ ನಿಯಂತ್ರಣ ಅಥವಾ ಮಾರ್ಗಸೂಚಿಯಿಲ್ಲದೆ ಬೆಳೆದರೆ ನಂತರದ ಕನ್ನಡ ಪ್ರಭುತ್ವದ ನೀತಿ ನಿರೂಪಣೆಗಳಿಗೆ ಪಕ್ಕಾಗಿ ಬೆಳೆಯಿತು. ಏಕೀಕರಣ ಪೂರ್ವದಲ್ಲಿ 'ಒಂದು ರಾಜ್ಯದ ನೀತಿಯ ಪ್ರಶ್ನೆಯಾಗಿಲ್ಲದಿದ್ದಾಗ ಕನ್ನಡ ಅನ್ನೋದು ದೊಡ್ಡ ಸಾರ್ವಜನಿಕ ಚರ್ಚೆ ವಸ್ತು ಆಗಿರದಿದ್ದಾಗ ಕೂಡಾ ಕನ್ನಡಕ್ಕೆ ಒಂದು ಅಸ್ತಿತ್ವ ಇತ್ತು. ಆ ಕನ್ನಡದ ಬಗೆಗಿನ ಕಾಳಜಿ ಎಲ್ಲಿತ್ತು ಅಂದ್ರೆ ಮನೆಗಳಲ್ಲಿ ಇತ್ತು. ಕುಟುಂಬಗಳಲ್ಲಿ ಇತ್ತು. ಸಮುದಾಯಗಳಲ್ಲಿ ಇತ್ತು. ಅಲ್ಲಿ ಕನ್ನಡ ಬಹಳ ಮುಖ್ಯವಾಗಿತ್ತು. ಅದಕ್ಕೆ ತನ್ನದೇ ಆದಂಥ ಒಂದು ಅಸ್ತಿತ್ವ ಇತ್ತು'[೬] ಆದರೆ ಆ ಕಾಲಘಟ್ಟದಲ್ಲಿ ಭಾಷೆ ಕುರಿತಂತೆ ಜನರಿಗೆ ಯಾವ ವ್ಯವಸ್ಥೆಯೂ ಉತ್ತರದಾಯಿಯಾಗಿರದಿದ್ದರೆ ಏಕೀಕರಣದ ನಂತರದ ಘಟ್ಟದಲ್ಲಿ ಸರ್ಕಾರಗಳು ಉತ್ತರದಾಯಿಯಾಯಿತು. 'ಕಳೆದ ೨೦ ಶತಮಾನಗಳಲ್ಲಿ ಕನ್ನಡ ಭಾಷೆಯಲ್ಲಿ ಆಗಿರುವ

ಪರಿಣಾಮಗಳನ್ನು ಯೋಜಿತ ನೆಲೆಯ ಬದಲಾವಣೆಗಳು ಎಂದು ಹೇಳಲಾಗುವುದಿಲ್ಲ. ರಾಜಕೀಯ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಈ ಬದಲಾವಣೆಗಳು ಆ ಭಾಷೆಯಲ್ಲಿ ತಂತಾನೆ ಸಂಭವಿಸಿವೆ. ಅವುಗಳ ಮೇಲೆ ಭಾಷಿಕರಿಗೆ ಯಾವುದೇ ನಿಯಂತ್ರಣ ಇರಲಿಲ್ಲ. ಆದರೆ ಕರ್ನಾಟಕ ರಾಜ್ಯ ನಿರ್ಮಾಣಗೊಂಡ ಮೇಲೆ ಈ ಭಾಷೆಯಲ್ಲಿ ಯಾವ ಬಗೆಯ ಬೆಳವಣಿಗೆಗಳು ಆಗಬೇಕು ಎಂಬುದನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ವ್ಯವಸ್ಥೆಯೊಂದು ಇದೆ.[೬]

ಐವತ್ತು ವರ್ಷಗಳ ಏಕೀಕರಣದ ಅವಧಿಯನ್ನು ನಾವು ಎರಡು ಘಟ್ಟಗಳಲ್ಲಿ ಗಮನಿಸಬೇಕು. ೧೯೫೬ ರಿಂದ ೮೧ರವರೆಗೆ ಮೊದಲ ಘಟ್ಟ. ಆನಂತರದ ಅವಧಿ ಎರಡನೆ ಘಟ್ಟ. ಮೊದಲ ಘಟ್ಟದಲ್ಲಿ ಇಪ್ಪತ್ತೈದು ವರ್ಷಗಳು ಕಳೆದರೂ ಕನ್ನಡದ ಜನಮನವು ಆತಂಕದ ಘಳಿಗೆಗಳನ್ನು ಎದುರಿಸಿದ್ದು ಕಡಿಮೆ. ಏಕೀಕರಣದ ಸಂದರ್ಭದ ಉತ್ಸಾಹದಲ್ಲಿ ಮುಖ್ಯ ಸ್ಥಾಯಿಯಾಗಿ ಉಳಿಯಿತು. ಆಡಳಿತ, ಶಿಕ್ಷಣ, ಸಮೂಹ ಮಾಧ್ಯಮ, ಮುಂತಾದ ಕ್ಷೇತ್ರಗಳಲ್ಲಿ ಭಾಷೆಯ ಬಳಕೆಗೆ ಅವಕಾಶಗಳು ಕಲ್ಪಿತವಾದವು ಆದರೆ ಕನ್ನಡವನ್ನು ಜನರ ಭಾಷೆಯನ್ನಾಗಿ ಸ್ಥಾಪಿಸುವ ವ್ಯವಸ್ಥಿತ ಯೋಜನೆಗಳು ಸರ್ಕಾರದ ಕಡೆಯಿಂದ ಬರಲಿಲ್ಲ. ೧೯೭೫ರವರೆಗೂ ಅದರ ವರ್ಗಸ್ವರೂಪದಿಂದಾಗಿ ಅದು ಜನಪರ ನೆಲೆಗಳನ್ನು ಹೊಂದಿರಲಿಲ್ಲ. ಅಂತಹ ಒತ್ತಾಯಗಳು ಮೂಡಿರಲಿಲ್ಲ. ಎರಡನೆಯ ಹಂತದಲ್ಲಿ ಕನ್ನಡ ಆತಂಕದ ಘಳಿಗೆಗಳನ್ನು ಎದುರಿಸುತ್ತಿರುವುದು ಮತ್ತು ಅದನ್ನು ನಿವಾರಿಸಲು ಪ್ರಯತ್ನಗಳನ್ನು ಮಾಡುವುದು ಇವೆರೆಡು ಜೊತೆಜೊತೆಯಾಗಿಯೇ ಮುಂದುವರೆದಿದೆ. ಈ ಆತಂಕಗಳು ಕೇವಲ ಭಾಷೆಗೆ ಸಂಬಂಧಿಸಿದ ಪ್ರಶ್ನೆಯಲ್ಲ. ಜನಸಮುದಾಯದ ಜೀವನದ ಬಿಕ್ಕಟ್ಟುಗಳು ಹಲವು ರೀತಿಯಲ್ಲಿ ಪ್ರಕಟಗೊಳ್ಳುತ್ತವೆ. ಭಾಷೆಯ ಬಗೆಗೆ ವ್ಯಕ್ತವಾದ ಆತಂಕಗಳು ಇದೇ ನೆಲೆಯವು.[೭] ಮೊದಲ ಘಟ್ಟದಲ್ಲಿ ಆತಂಕಗಳು ಇದ್ದವು, ಅದರ ಬಗ್ಗೆ ಜಾಗೃತಿ ಇರಲಿಲ್ಲ. ೭೫ರ ನಂತರ ಕಾಂಗ್ರೆಸ್ಸೇತರ ಸರ್ಕಾರಗಳು ಅಧಿಕಾರಕ್ಕೆ ಬಂದಿದ್ದು, ಈ ಸರ್ಕಾರದಲ್ಲಿ ಹೊಸ ತಲೆಮಾರಿನ ಶಾಸಕರು ಇದ್ದುದು ಬದಲಾವಣೆಗೆ ಕಾರಣವಾಯಿತು.

೯.೪.೨ ಭೌಗೋಳಿಕವಾದ ಪರಿಕಲ್ಪನೆ ಮಾತ್ರ ಸ್ಥಿರ

ಏಕೀಕರಣಗೊಂಡ ಕರ್ನಾಟಕದ್ದು ಒಂದು ಸಂಕೀರ್ಣ ಸನ್ನಿವೇಶ. ಇದು ಕನ್ನಡ ಭಾಷೆಗೆ ಮಾತ್ರ ಸೀಮೀತವಾದ ಬೆಳವಣಿಗೆಯೇನೂ ಅಲ್ಲ. ಏಕೀಕರಣಗೊಂಡ ಕರ್ನಾಟಕದಲ್ಲಿ ಕನ್ನಡವಲ್ಲದೆ ವಿವಿಧ ಭಾಷಿಕರು ಇದ್ದರು. ಆದ್ದರಿಂದ 'ಕನ್ನಡ, ಕರ್ನಾಟಕ ಮತ್ತು ಕನ್ನಡಿಗ ಎಂಬ ಈ ೩ ಪರಿಕಲ್ಪನೆಗಳು ಪರಸ್ಪರ ಬೆರೆತುಕೊಳ್ಳುವುದು ಕಷ್ಟವೇ. ಕನ್ನಡಿಗರು ಕನ್ನಡವಲ್ಲದೆ ಇತರ ಭಾಷೆಗಳನ್ನು ಕಲಿತು ಮಾತನಾಡಬಹುದು. ಅಲ್ಲದೆ ಬೇರೆ ದೇಶದಲ್ಲಿ, ಪ್ರದೇಶದಲ್ಲಿ ವಾಸ ಮಾಡಬಹುದು. ಕನ್ನಡ ಮಾತ್ರ ಕರ್ನಾಟಕದ ಭಾಷೆಯಾಗಿ ಪರಿಗಣಿತವಾಗಲಾರದು. ಈ ಭೂಪ್ರದೇಶದಲ್ಲಿ ಹಲವು ಭಾಷೆಗಳನ್ನು ಮಾತಾಡುವ ಜನರು ಇರುತ್ತಾರೆ. ಸದ್ಯ ಮೇಲೆ ಹೇಳಿದ ರಾಜಕೀಯ ನಿರ್ಧಾರದಂತೆ

ಹೆಚ್ಚು ಸ್ಥಿರವಾಗಿರುವುದು ಭೌಗೋಳಿಕವಾದ ಪರಿಕಲ್ಪನೆ ಅದು ಕರ್ನಾಟಕ. ಉಳಿದೆರಡು ಪರಿಕಲ್ಪನೆಗಳು ಸದಾ ಚಲನಶೀಲ. ಅವುಗಳು ದೇಶಬದ್ಧವಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರು ಮೊದಲು ಕರ್ಣಾಟಕ ಸಾಹಿತ್ಯ ಪರಿಷತ್ತು ಎಂದಿತ್ತು. ದೇಶವಾಚಿಯಾಗಿದ್ದ ಅದರ ಮೊದಲ ಹೆಸರು ನಂತರ ಭಾಷಾವಾಚಿಯಾಗಿದ್ದು ಆಕಸ್ಮಿಕವಿರಲಾರದು' ಎಂಬ ಕೆ.ವಿ ನಾರಾಯಣ ಅವರ ಗ್ರಹಿಕೆ ವಾಸ್ತವದಿಂದ ಕೂಡಿದೆ.

೯.೪.೩ ಭಾಷೆಯ ಬೆಳವಣಿಗೆಯಲ್ಲಿ ಸರ್ಕಾರದ ನಿರ್ದೇಶನದ ಸ್ವರೂಪ

ಏಕೀಕರಣಗೊಂಡ ನಂತರ ಸರ್ಕಾರ ತಂದ ಕಾನೂನುಗಳು, ನೇಮಿಸಿದ ಹಲವು ಆಯೋಗ, ಸಮಿತಿಗಳನ್ನು ನೋಡಿದರೆ ಭಾಷೆಯಲ್ಲಿ ಮತ್ತು ಭಾಷಿಕ ಪ್ರದೇಶದಲ್ಲಿ ಆಗಬೇಕಾದ ಬೆಳವಣಿಗೆಗಳನ್ನು ಸರ್ಕಾರ ಭಾಷೆಯ ಬೆಳವಣಿಗೆಯನ್ನು ನಿರ್ದೇಶಿಸುತ್ತಿರುವ ಸ್ವರೂಪ ತಿಳಿಯುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮ ಕಡ್ಡಾಯ ಮಾಡಲು ಹೇಳುವ ಎಚ್ಚೆನ್ ವರದಿ, ಆಡಳಿತದಲ್ಲಿ ಕನ್ನಡದ ಅನುಷ್ಠಾನದ ರೀತಿಯನ್ನು ಹೇಳುವ ನಾರಾಯಣಸ್ವಾಮಿ ವರದಿ, ಕನ್ನಡ ವಿಶ್ವವಿದ್ಯಾಲಯದ ಸ್ವರೂಪ ನಿರ್ಧಾರದ ಕುರಿತ ಒಡೆಯರ್ ವರದಿ, ಕೃಷ್ಣಾ ನದಿ ನೀರಿನ ಹಂಚಿಕೆ ವಿವರಣೆ ಕೊಡುವ ಬಚಾವತ್ ವರದಿ, ಕರ್ನಾಟಕ ರಾಜ್ಯ ನಿರ್ಮಾಣ ಕುರಿತು ಸಲಹೆ ನೀಡುವ ಫಜಲ್ ಅಲಿ ವರದಿ, '೧೯೬೩ರ ಅಕ್ಟೋಬರ್ ೧೦ರಂದು ಜಾರಿಗೆ ತಂದ 'ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ', ೧೯೮೨ರಲ್ಲಿ ಇದಕ್ಕೆ ತಂದು ೩ ತಿದ್ದುಪಡಿಗಳು, ಮಹಾರಾಷ್ಟ್ರ ರಾಜ್ಯದೊಂದಿಗಿನ ಗಡಿವಿವಾದಕ್ಕೆ ಸಂಬಂಧಿಸಿದ ಮಹಾಜನ್ ಆಯೋಗ, ಖಾಸಗಿ ಕ್ಷೇತ್ರದಲ್ಲಿ ಕನ್ನಡಿಗರಿಗೆ ಉದ್ಯೋಗಕ್ಕೆ ಸಂಬಂಧಿಸಿದ ಸರೋಜಿನಿ ಮಹಿಷಿ ಆಯೋಗ, ಗೋಕಾಕ್ ವರದಿಗೆ ಮೂಲವಾದ ಭಾಷಾ ಸಮಿತಿ ಇತ್ಯಾದಿ. ಇದರೊಂದಿಗೆ ಭಾಷೆ, ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಗೆಂದು ಸರ್ಕಾರಗಳು ಸ್ಥಾಪಿಸಿದ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಾಟಕ ಅಕಾಡೆಮಿಯಂತಹ ವಿವಿಧ ಅಕಾಡೆಮಿಗಳು, ಕನ್ನಡ ವಿಶ್ವವಿದ್ಯಾಲಯಗಳು ಭಾಷೆಯ ಬೆಳವಣಿಗೆಯನ್ನು ನಿರ್ದೇಶಿಸತೊಡಗಿದವು. ಮುಖ್ಯವಾಗಿ ಭಾಷೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುವ ಶಿಕ್ಷಣ ಕ್ಷೇತ್ರವನ್ನು ಸರ್ಕಾರ ನಿರ್ದೇಶಿಸತೊಡಗಿದ್ದು. ಶತಮಾನದ ಕೊನೆಯಲ್ಲಿ ಖಾಸಗಿ ಕ್ಷೇತ್ರ ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸಿ ಚಿತ್ರಣ ಬದಲಾಗಿದ್ದರೂ ತಾಂತ್ರಿಕವಾಗಿ ನಿಯಂತ್ರಣ ಸರ್ಕಾರದ್ದೇ ಆಗಿದೆ.

೯.೪.೪ ಕನ್ನಡವನ್ನು ಆಡಳಿತಭಾಷೆಯಾಗಿಸಲು ಆಮೆ ನಡಿಗೆಯ ಪ್ರಯತ್ನ

ಭಾರತದ ಸಂವಿಧಾನದಲ್ಲಿ ೩೪೩ರಿಂದ ೩೪೭ರವರೆಗೆ ಇರುವ ವಿಧಿಗಳು ಭಾಷೆಗೆ ಸಂಬಂಧಿಸಿದವು. ಈ ಐದು ಅನುಚ್ಛೇದಗಳಲ್ಲಿ ಪ್ರಾರಂಭದ ಎರಡು ಅನುಚ್ಛೇದಗಳು ಒಕ್ಕೂಟದ

ಅಧಿಕೃತ ಭಾಷೆಯ ಬಗೆಗೆ ಮಾಹಿತಿ ನೀಡುತ್ತವೆ. ಉಳಿದ ಮೂರು ಅನುಚ್ಛೇದಗಳು ರಾಜ್ಯಗಳ ಅಧಿಕೃತ ಭಾಷೆಗಳ ಬಗೆಗೆ ಹೆಚ್ಚಿನ ಮಾಹಿತಿ ನೀಡುತ್ತವೆ. ಯಾವುದೇ ಒಂದು ರಾಜ್ಯದ ವಿಧಾನ ಮಂಡಲವು ಕಾನೂನಿನ ಮೂಲಕ ಆ ರಾಜ್ಯದಲ್ಲಿ ಬಳಕೆಯಲ್ಲಿರುವ ಒಂದು ಅಥವಾ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಅತ್ಯಂತ ಅವಶ್ಯಕ ಎನಿಸುವ ಉದ್ದೇಶಗಳಿಗೆ ಬಳಸಬಹುದೆಂದು ಸಂವಿಧಾನದಲ್ಲಿ ಉಲ್ಲೇಖಗೊಂಡಿದೆ.[೮] ಸಂವಿಧಾನವೇ ಇಂತಹ ಅವಕಾಶ ನೀಡಿದ್ದರೂ ಕರ್ನಾಟಕ ವಿಧಾನಮಂಡಲದಲ್ಲಿ '೧೯೬೩–೧೯೮೨ ರವರೆಗೆ ಅಂದರೆ ೧೯ ವರ್ಷಗಳಷ್ಟು ದೀರ್ಘ ಕಾಲ ಕನ್ನಡವನ್ನು ಬಳಸಬೇಕೆ ಬೇಡವೇ ಎಂಬ ಚರ್ಚೆ ನಡೆದಿವೆ. ಸರ್ಕಾರ ಕನ್ನಡಭಾಷೆಯನ್ನು ಎಲ್ಲಿಯೂ ಬಳಸುವುದಿಲ್ಲವೆಂದು ಹೇಳುವುದಿಲ್ಲ, ಆದರೆ ಅದರ ಕಾರ್ಯನಿರ್ವಹಣೆಯಲ್ಲಿ ಕನ್ನಡ ಇರುವುದಿಲ್ಲ ಅಥವಾ ನಿಧಾನಗತಿಯಲ್ಲಾಗುತ್ತದೆ. ರಾಜ್ಯ ಸರ್ಕಾರಗಳ ಭಾಷಾನೀತಿಯಲ್ಲಿ ಪ್ರಾಂತೀಯ ಭಾಷೆಗಳನ್ನು ನಿರಾಕರಿಸುವ ಧೋರಣೆ ಇರುವುದಿಲ್ಲ. ಆದರೆ ಅದಕ್ಕೆ ತಕ್ಕ ಅವಕಾಶಗಳನ್ನು ಮಾತ್ರ ಕಲ್ಪಿಸುತ್ತಿರುವುದಿಲ್ಲ. ಅದು ತನ್ನ ಭಾಷಾನೀತಿಯಲ್ಲಿ (ವಿಧಾನಮಂಡಲದಲ್ಲಿ) ಕನ್ನಡವನ್ನು ಬಳಸಬಾರದು ಎಂದು ಹೇಳುವುದಿಲ್ಲವಾದರೂ ಸದ್ದಿಲ್ಲದೆ ಇಂಗ್ಲಿಶಿನ ಬಳಕೆಯನ್ನು ಮುಂದುವರೆಸುತ್ತಾ ಹೋಗುವ ಮೂಲಕ ಕನ್ನಡಕ್ಕಿರುವ ಅವಕಾಶವನ್ನು ಪರೋಕ್ಷವಾಗಿ ನಿರಾಕರಿಸುವ ಪ್ರಯತ್ನ ಇದಾಗಿದೆ ಎಂದು ಕೆ.ವಿ ನಾರಾಯಣ ಅವರು ಅಭಿಪ್ರಾಯ ಪಡುತ್ತಾರೆ. ಆರಂಭದಲ್ಲಿಯೇ ಉಲ್ಲೇಖಿಸಿದಂತೆ ರಾಜ್ಯಗಳು ತಂತಮ್ಮ ಪ್ರಾಂತೀಯ ಭಾಷೆಗಳನ್ನು ತಂತಮ್ಮ ರಾಜ್ಯಗಳ ಆಡಳಿತಭಾಷೆಯಾಗಿ ಬಳಸಬಹುದು ಎಂಬ ಅವಕಾಶ ರಾಜ್ಯಾಂಗದಲ್ಲಿದೆ. ಹೀಗಿದ್ದಾಗಲೂ ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತಭಾಷೆಯಾಗಿ ಬಳಸುವ ಅವಕಾಶ ನೀಡುವ ಕಾನೂನು ಬರಲು ಏಳು ವರ್ಷ ಹಿಡಿಯಿತು. ೧೯೬೩ರಲ್ಲಿ ಈ ಅವಕಾಶ ನೀಡುವ ಮಸೂದೆಯನ್ನು ಕರ್ನಾಟಕ ವಿಧಾನಮಂಡಲ ಅಂಗೀಕರಿಸಿತು. ಇದರಿಂದ ಇಂಗ್ಲಿಶಿನ ಬದಲು ಕನ್ನಡ ಎಂದಾಗಲಿಲ್ಲ. ಬದಲಿಗೆ ಇಂಗ್ಲಿಶಿನ ಜೊತೆಯಲ್ಲಿ ಕನ್ನಡ ಎಂಬ ಪರಿಸ್ಥಿತಿ ನಿರ್ಮಾಣವಾಯಿತು.

೯.೪.೫ ಮುಂದುವರೆದ ಇಂಗ್ಲಿಶಿನ ಪಾರಮ್ಯ

ಕರ್ನಾಟಕದಲ್ಲಿ ಕನ್ನಡದ್ದು ಈ ದಯನೀಯ ಪರಿಸ್ಥಿತಿಯಾದರೆ ಇಂಗ್ಲಿಶ್ ಮಾತ್ರ ಇನ್ನೂ ಹೆಚ್ಚು ಗಟ್ಟಿಯಾಗಿ ನೆಲೆಯಾಗತೊಡಗಿತು. ಭಾರತದ ಸಂವಿಧಾನದ ಭಾಷಾನೀತಿಯಲ್ಲಿ ಇಂಗ್ಲಿಶಿಗೆ ಸಂಪರ್ಕಭಾಷೆಯಾಗಿ ಅವಕಾಶ ನೀಡಿದ್ದು ಸಂವಿಧಾನ ಅಂಗೀಕೃತವಾದ ವೇಳೆಯಿಂದ ಮುಂದಿನ ೧೫ ವರ್ಷಗಳಿಗೆ ಮಾತ್ರ, ಆದರೆ ೧೯೬೫ ಜನವರಿ ೨೬ರ ನಂತರ ಇಂಗ್ಲಿಶನ್ನು ಸಂಪರ್ಕಭಾಷೆಯಾಗಿ ಬಳಸುವ ಅವಕಾಶ ಇಲ್ಲವೆಂದೇ ಸ್ಪಷ್ಟಪಡಿಸಲಾಗಿತ್ತು. ಆದರೆ ಈ ಹೊತ್ತಿಗೆ ಎಲ್ಲ ರಾಜ್ಯಗಳು ಹಿಂದಿಯನ್ನು ಸಂಪರ್ಕಭಾಷೆಯಾಗಿ ಬಳಸಲು ಸಿದ್ದಗೊಳ್ಳಬೇಕಿತ್ತು. ಜೊತೆಗೆ ತಮ್ಮ

ಪ್ರಾಂತೀಯ ಆಡಳಿತವನ್ನು ಪ್ರಾಂತೀಯ ಭಾಷೆಗಳಲ್ಲಿ ನಡೆಸಲು ಸನ್ನದ್ಧಗೊಳ್ಳಬೇಕಿತ್ತು. ೧೯೬೫ರಲ್ಲಿ ಆಗಬೇಕಾಗಿದ್ದ ಪರಿವರ್ತನೆ ಆಗಲಿಲ್ಲ. ಸಂವಿಧಾನಕ್ಕೆ ಮತ್ತೊಂದು ತಿದ್ದುಪಡಿಯನ್ನು ತಂದು ಇಂಗ್ಲಿಶನ್ನು ಸಂಪರ್ಕಭಾಷೆಯಾಗಿ ಮುಂದುವರೆಸುವ ಅವಕಾಶ ಕಲ್ಪಿಸಲಾಯಿತು. ಈ ತಿದ್ದುಪಡಿಯಲ್ಲಿ ಬಹು ಎಚ್ಚರಿಕೆಯಿಂದ ಕಾಲಮಿತಿಯ ಶರತ್ತನ್ನು ವಿಧಿಸಿರಲಿಲ್ಲ.[೯]

ಸರ್ಕಾರಗಳು ತೆಗೆದುಕೊಳ್ಳುವ ತೀರ್ಮಾನಗಳು ಹಲವು ಸಂದರ್ಭಗಳಲ್ಲಿ ಖಚಿತ ಉದ್ದೇಶವನ್ನು ಒಳಗೊಂಡ ಪ್ರಜ್ಞಾಪೂರ್ವಕ ನಿರ್ಧಾರಗಳಾಗಿರುವುದಿಲ್ಲ. ಜನರ ಭಾವನೆಗಳನ್ನು ಗೌರವಿಸುತ್ತೇವೆ ಎಂದು ತೋರ್ಪಡಿಸಿಕೊಳ್ಳುವುದು ಮತ್ತು ತನ್ನ ಆಡಳಿತದ ಲೋಪವನ್ನು ಮರೆಮಾಚುವುದು ಕೂಡ ಇದರಲ್ಲಿ ಸೇರಿರುವ ಸಂಭವವಿರುತ್ತವೆ. ರಾಜ್ಯ ಸರ್ಕಾರ ಹಿಂದಿಯ ಜೊತೆ ಇಂಗ್ಲಿಶನ್ನು ಸಂಪರ್ಕಭಾಷೆಯಾಗಿ ಮುಂದುವರೆಸುವ ನಿರ್ಧಾರ ಇದಕ್ಕೊಂದು ಜ್ವಲಂತ ನಿದರ್ಶನ. ಕರ್ನಾಟಕದಂತಹ ರಾಜ್ಯಗಳು ೧೯೬೫ರಲ್ಲಿ ಹಿಂದಿಯ ಜೊತೆಗೆ ಇಂಗ್ಲಿಶನ್ನು ಸಂಪರ್ಕಭಾಷೆಯನ್ನಾಗಿ ಮುಂದುವರೆಸುವ ಚಳವಳಿಯ ಪರವಾಗಿ ಇದ್ದುದಕ್ಕೆ ಎರಡು ಕಾರಣಗಳನ್ನು ಕೆ.ವಿ ನಾರಾಯಣ ಅವರು ಗುರುತಿಸುತ್ತಾರೆ. ೧. ಹಿಂದಿ ಒತ್ತಾಯದಿಂದ ಹೇರಲಾದ ಭಾಷೆಯೆಂಬ ಜನರಲ್ಲಿ ಪ್ರಚಲಿತವಿದ್ದ ಭಾವನೆಗಳ ಪರವಾಗಿ ನಿಂತಿದ್ದು ೨. ಏಕೀಕರಣದ ೯ ವರ್ಷಗಳ ನಂತರವೂ ರಾಜ್ಯದ ಆಡಳಿತಭಾಷೆಯನ್ನಾಗಿ ಬಳಸಲು ರಾಜ್ಯಸರ್ಕಾರ ಸನ್ನದ್ಧಗೊಂಡಿರಲಿಲ್ಲ. ಇದು ಮುಖ್ಯ ಕಾರಣ[೧೦]

೯.೪.೬ ಕೆಳಸ್ಥರದ ಶಾಸಕರಿಂದ ಕನ್ನಡಪರ ಧ್ವನಿ

ಯಾವ ಸರ್ಕಾರ ಬಂದರೂ ಏನೂ ಬದಲಾಗೋದಿಲ್ಲ, ರಾಗಿ ಬೀಸೋದು ತಪ್ಪೋದಿಲ್ಲ ಎನ್ನುವ ಮಾತು ಸಾಮಾನ್ಯವಾಗಿ ಜನರ ಕಾಮನ್ ಸೆನ್ಸ್ ಆಗಿಬಿಟ್ಟಿದೆ. ಪ್ರಭುತ್ವದ ಜಡತೆಯನ್ನು, ಸಂವೇದನಾಹೀನತೆಯನ್ನು ಈ ಮಾತುಗಳು ಧ್ವನಿಸುತ್ತವೆ ಎನ್ನುವುದು ನಿಜ. ಆದರೆ ಸರ್ಕಾರದೊಳಗೆ ಹೊಸ ಚಿಂತನೆಯಿಂದ ಪ್ರಭಾವಿತರಾದ ಶಾಸಕರು ಬಂದರೆ ಬದಲಾವಣೆಗಳು ಸಾಧ್ಯ ಎನ್ನುವುದಕ್ಕೆ ಉದಾಹರಣೆ ಕರ್ನಾಟಕ ಸರ್ಕಾರಗಳ ಒಳಗೆ ಸಿಗುತ್ತದೆ. ೧೯೮೦ರ ಆನಂತರದಲ್ಲಿ ಕರ್ನಾಟಕ ವಿಧಾನಮಂಡಲದ ಸದಸ್ಯರ ಸಾಮಾಜಿಕ ರಚನೆಯಲ್ಲಿ ಆಗಿದ್ದ ವ್ಯತ್ಯಾಸಗಳು ಏಕೆ ಹೆಚ್ಚು ಕನ್ನಡ ಪರವಾದವು ಎಂಬುದು ಗಮನಿಸಬೇಕಾದ ವಿಷಯ. ಈ ಕಾಲಘಟ್ಟದಲ್ಲಿ ನಡೆದ ದಲಿತ, ಬಂಡಾಯ, ರೈತ ಚಳುವಳಿಗಳ ಪ್ರಭಾವ ಒಂದು ಕಾರಣವಾದರೆ ಎರಡನೆಯದ್ದು ಹಾವನೂರ ಆಯೋಗದ ವರದಿ ಜಾರಿಗೆ ಬಂದ ನಂತರ ಸಾಮಾಜಿಕ ಕೆಳಸ್ಥರದ ಜನರು ವಿಧಾನಮಂಡಲವನ್ನು ಪ್ರವೇಶಿಸಿದ್ದು. ಈ ಹೊಸ ಸ್ವರೂಪದ ಸದಸ್ಯರುಗಳಿದ್ದ ವಿಧಾನಮಂಡಲವು ಕನ್ನಡದಲ್ಲಿ ಆಡಳಿತ ವ್ಯವಹಾರವನ್ನು ನಡೆಸಬೇಕೆಂದು ಒತ್ತಾಯಿಸಿತು.[೧೧]

ಸರ್ಕಾರದೊಳಗೆ ಕೆಳವರ್ಗಗಳ ಭಾಗವಹಿಸುವಿಕೆ ಮತ್ತು ಜನಚಳುವಳಿಗಳ ಪ್ರಭಾವದಿಂದ ಪ್ರಾದೇಶಿಕ ಕನ್ನಡಕ್ಕೆ ಮಾನ್ಯತೆ ಸಿಗತೊಡಗಿತು. ಈ ಹಿನ್ನೆಲೆಯಲ್ಲಿ ಏಕೀಕರಣದ ಆನಂತರದ ಕೆಲವು ಸಮಯ ಕಳೆದ ಮೇಲಿನ ವರ್ಷಗಳಲ್ಲಿ ಒಂದು ಮುಖ್ಯ ಬದಲಾವಣೆ ಭಾಷಾ ಪಠ್ಯಪುಸ್ತಕಗಳಲ್ಲಿ ಕಾಣತೊಡಗುತ್ತದೆ. ಅದೆಂದರೆ ಇಡೀ ಪಠ್ಯಪುಸ್ತಕದಲ್ಲಿ ಪ್ರಾಸಂಗಿಕವಾಗಿ ಕೆಲವು ಪಾಠಗಳನ್ನು ಪ್ರಾದೇಶಿಕ ಕನ್ನಡ ಪ್ರಭೇದಗಳಲ್ಲಿ ನೀಡಲಾರಂಭಿಸಿದ್ದು.

೯.೪.೭ ಲೋಹಿಯಾ ಚಿಂತನೆಗಳ ಪ್ರಭಾವ

ಕರ್ನಾಟಕದಲ್ಲಿ ಲೋಹಿಯಾ ಚಿಂತನೆಗಳು ಸರ್ಕಾರವನ್ನೂ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಪ್ರಭಾವ ಬೀರಿತು. 'ಬಹುಷಃ ಗಾಂಧಿ, ಮಾರ್ಕ್ಸ್, ಅಂಬೇಡ್ಕರ್ ನಂತರ ಆಧುನಿಕ ಕರ್ನಾಟಕದ ಸಾಂಸ್ಕೃತಿಕ ವಿದ್ಯಮಾನದ ಮೇಲೆ ದಟ್ಟ ಪ್ರಭಾವ ಬೀರಿದವರಲ್ಲಿ ರಾಮಮನೋಹರ ಲೊಹಿಯಾ (೧೯೧೦-೧೯೬೭) ಒಬ್ಬರು. ಜಾತಿ ಪದ್ಧತಿ, ಕಾಂಗ್ರೆಸ್ ಪಕ್ಷದ ಜಡತೆ, ನೆಹರೂ ಆಡಳಿತ ಮತ್ತು ಇಂಗ್ಲಿಶ್ ಹೇರಿಕೆಗಳನ್ನು ವಿರೋಧಿಸುವುದು, ದೇಶೀ ಭಾಷೆ, ಗಾಂಧಿವಾದಗಳ ಒಲವು, ಸಾಹಿತ್ಯ ಸಂಗೀತಗಳ ಅಭಿರುಚಿ ಹೊಂದಿರುವುದು, ಲೋಹಿಯಾವಾದಿ ಚಿಂತನೆಯ ಪ್ರಮುಖ ತಾತ್ವಿಕ ರಾಜಕೀಯ ಸಾಮಾಜಿಕ ಚಹರೆಗಳಾಗಿದ್ದವು. ಲೋಹಿಯಾರವರ ಚಿಂತನೆಗಿಂತ ಅವರ ಆದರ್ಶವಾದಿ ವ್ಯಕ್ತಿತ್ವ ಮತ್ತು ರಾಜಕೀಯ ಕ್ರಿಯೆಗಳ ಪಾತ್ರ ಮಹತ್ವದ್ದಾಗಿತ್ತು ಎನ್ನಬಹುದು. ವಿಧಾನಮಂಡಲವನ್ನು ಪ್ರವೇಶಿಸಿದ್ದ ಲೋಹಿಯಾವಾದದ ಹಿನ್ನೆಲೆಯಿಂದ ಬಂದ ಸಮಾಜವಾದಿ ತಾತ್ವಿಕತೆಯ ಸದಸ್ಯರು ಮಾತ್ರ ಅಧಿಕೃತ ಲಿಖಿತ ದಾಖಲೆಗಳು ಕನ್ನಡದಲ್ಲಿ ಇರಬೇಕೆಂದು ಒತ್ತಾಯಿಸುತ್ತಿದ್ದರು. ಆದರೂ 'ವಿಧಾನಮಂಡಲದ ವ್ಯವಹಾರದಲ್ಲಿ ಮಾತಿನ ನೆಲೆಯಲ್ಲಿ ಅವಕಾಶ ಪಡೆಯುವ ಕನ್ನಡ, ಬರಹದ ಅಧಿಕೃತ ನೆಲೆಗೆ ದಾಟುವಾಗ ಮಾತ್ರ ಈಗಲೂ ಇಂಗ್ಲಿಶಿನ ಸಾಹಚರ್ಯದಲ್ಲಿ ಇರಬೇಕಾಗುತ್ತದೆ'[೧೨]

೯.೪.೮ ಆಳದ ಕಾಯಿಲೆಯ ನಿವಾರಣೆಗೆ ಹೊರಗಿನ ವ್ರಣಗಳಿಗೆ ಮುಲಾಮು

೧೯೯೫ರಲ್ಲಿ ರಾಜ್ಯ ಸರ್ಕಾರವು ಆಡಳಿತದಲ್ಲಿ ಕನ್ನಡದ ಅನುಷ್ಠಾನಕ್ಕಾಗಿ 'ಕನ್ನಡ ಕಾವಲು' ಸಮಿತಿಯನ್ನು ನೇಮಿಸಿತು. ಪಾಟೀಲ ಪುಟ್ಟಪ್ಪ ಅವರನ್ನು ಈ ಸಮಿತಿಯ ಅಧ್ಯಕ್ಷರನ್ನಾಗಿ ಸರ್ಕಾರ ನೇಮಿಸಿತು. ನಾಲ್ಕು ವರ್ಷಗಳ ಕಾಲ ಪಾಟೀಲ ಪುಟ್ಟಪ್ಪ ಅವರು ಆಡಳಿತದ ವಿವಿಧ ವಿಭಾಗದ ಮುಖ್ಯಸ್ಥರಿಗೆ ನಿರಂತರವಾಗಿ ಪತ್ರ ಬರೆದು ಆಡಳಿತದಲ್ಲಿ ಕನ್ನಡ ಭಾಷೆಯ ಅನುಷ್ಠಾನವನ್ನು ತರಲು ಪ್ರಯತ್ನ ಮಾಡಿದರು. ಈ ಪ್ರಯತ್ನದ ವಿವರಗಳು 'ಕನ್ನಡ ಕಾವಲು' ಪುಸ್ತಕದಲ್ಲಿ ಸಿಗುತ್ತವೆ. ಬಂಡವಾಳಶಕ್ತಿಗಳು ಮತ್ತು ಪ್ರಭುತ್ವ ಕೂಡಿಯೇ ಸ್ಥಳೀಯ ಭಾಷಾ ಅಸ್ಮಿತೆಯನ್ನು ಜನರ ಪ್ರಜ್ಞೆಯಿಂದ ಪಲ್ಲಟಗೊಳಿಸುವ ಕೆಲಸವನ್ನು ಒಂದು ಶತಮಾನಪೂರ್ವದಿಂದಲೇ, ಇನ್ನೂ ಖಚಿತವಾಗಿ ಕಳೆದ ಮೂರು ದಶಕಗಳಿಂದ ನಿರಂತರವಾಗಿ ಮಾಡುತ್ತಿವೆ. ಸ್ಥಳೀಯ ಭಾಷೆಗಳನ್ನು ಕೀಳೀಕರಿಸುವ ಮತ್ತು

ಇಂಗ್ಲಿಷನ್ನು ಅನಿವಾರ್ಯಗೊಳಿಸುವ ಮೂಲಕ ಇದನ್ನವು ಸಾಧಿಸುತ್ತಿವೆ. ಆದರೆ ಹೊರನೋಟದಲ್ಲಿ ಸ್ಥಳೀಯ ಭಾಷೆಗಳ ಉದ್ಧಾರಕ್ಕಾಗಿ ಎಂದು ಕೆಲವು ಯೋಜನೆಗಳನ್ನು ರೂಪಿಸುತ್ತ ಬಂಡವಾಳಶಾಹಿ ಶಕ್ತಿಗಳ ಜತೆಗಿನ ತಮ್ಮ ಸಖ್ಯವನ್ನು ಮುಚ್ಚಿಡುತ್ತಿವೆ. ಈ ಹಿನ್ನೆಲೆಯಲ್ಲಿ ಪಾಟೀಲ ಪುಟ್ಟಪ್ಪ ಅವರ ನೇತೃತ್ವದ ಕನ್ನಡ ಕಾವಲು ಸಮಿತಿಯ ನೇಮಕದ ಹಿಂದಿನ ಪ್ರಭುತ್ವದ ಉದ್ದೇಶವೂ ಸಂದೇಹಗಳನ್ನು ಹುಟ್ಟಿಸಿದರೆ ಅದು ಅಸಹಜವಲ್ಲ.

ಕನ್ನಡ ಕಾವಲು ಸಮಿತಿಯ ಸಾಧನೆಗಳೆಲ್ಲ ಮುಖ್ಯವಾದವುಗಳಾಗಿದ್ದರೂ ಕನ್ನಡದ ವರ್ತಮಾನದ ಸ್ಥಿತಿಯಲ್ಲಿ ನಿರರ್ಥಕವಾಗಿಬಿಟ್ಟವೇನೋ ಎಂಬ ಅನುಮಾನ ಮೂಡಲು ಕಾರಣಗಳಿವೆ. ತೊಂಬತ್ತರ ದಶಕದವರೆಗೆ ಸರ್ಕಾರಿ ಶಾಲೆಗಳಲ್ಲಿ ಒಟ್ಟು ಪ್ರಮಾಣದ ವಿದ್ಯಾರ್ಥಿಗಳಲ್ಲಿ ಪ್ರತಿಶತ ಎಪ್ಪತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದರೆ ಆನಂತರ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತ ಪ್ರಸ್ತುತ ದಿನನಿತ್ಯ ವಿದ್ಯಾರ್ಥಿಗಳಿಲ್ಲದೆ ಈ ಶಾಲೆಗಳು ಒಂದರ ಹಿಂದೆ ಒಂದರಂತೆ ಮುಚ್ಚುತ್ತಿವೆ. ಅವರೆಲ್ಲ ಖಾಸಗಿ ಇಂಗ್ಲಿಷ್ ಮಾಧ್ಯಮದ ಶಾಲೆಗಳತ್ತ ತೆರಳುತ್ತಿದ್ದಾರೆ. ಇದಕ್ಕೆ ಕಾರಣವಾಗಿದ್ದು ಜಾಗತೀಕರಣದ ಕಾರಣದಿಂದ ಸರ್ಕಾರಿ ಉದ್ಯೋಗದ ಪ್ರಮಾಣವೂ ಕುಗ್ಗಿ ಖಾಸಗಿ ಮತ್ತು ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗ ಅನಿವಾರ್ಯವೆನಿಸಿದ್ದು. ಇಲ್ಲಿ ಉದ್ಯೋಗ ಪಡೆಯಲು ಇಂಗ್ಲಿಷ್ ಅನಿವಾರ್ಯ ಎನಿಸುವ ಪರಿಸ್ಥಿತಿ ನಿರ್ಮಾಣವಾಗಿದ್ದು. ಇಂತಹ ಆತಂಕಗಳು 'ಕನ್ನಡ ಕಾವಲು' ಕೃತಿಯಲ್ಲಿಯೇ ಅನುರಣಿಸುತ್ತವೆ. ಈ ಹಿನ್ನೆಲೆಯಲ್ಲಿ ಕನ್ನಡ ಕಾವಲು ಸಮಿತಿಯ ಆಡಳಿತದಲ್ಲಿ ಕನ್ನಡ ಅನುಷ್ಠಾನದ ಪ್ರಾಮಾಣಿಕ ಪ್ರಯತ್ನಗಳು ಆಳವಾಗಿ ಬೇರುಬಿಟ್ಟ ಭೀಕರ ಕಾಯಿಲೆಯ ಹೊರಲಕ್ಷಣವಾದ ವ್ರಣಗಳಿಗೆ ಮುಲಾಮು ಹಚ್ಚಿ ರೋಗ ವಾಸಿ ಮಾಡುವ ವಿಫಲ ಯತ್ನಗಳಂತೆ ಭಾಸವಾಗುತ್ತವೆ. 'ಇಂಗ್ಲಿಶಿಗೆ ಸಮಸ್ತವಾದ ಎಲ್ಲ ಅಧಿಕಾರವನ್ನು ಹಂಚಿಬಿಟ್ಟು, ಎಲ್ಲವನ್ನು ಕೊಟ್ಟುಬಿಟ್ಟು ಆ ಸಂದರ್ಭವನ್ನು ಏನೂ ಬದಲಾಯಿಸದೇನೆ ಕನ್ನಡಕ್ಕೆ ನಾವು ಆಡಳಿತ ಭಾಷೆ ಮಾಡ್ತೀವಿ ಅಂದ್ರೆ ಅದರಿಂದ ಏನು ಪ್ರಯೋಜನ ಆಗುತ್ತೆ?' ಎನ್ನುವ ರಾಜೇಂದ್ರ ಚೆನ್ನಿ ಅವರ ಟೀಕೆ ಇದನ್ನೇ ಧ್ವನಿಸುತ್ತದೆ.

ರಾಜಪ್ರಭುತ್ವಗಳು ಮತ್ತು ಬ್ರಿಟೀಶ್ ವಸಾಹತುಶಾಹಿ ಕಾಲದಲ್ಲಿ ಜನಭಾಷೆಗೆ ಬದಲು ಆ ಪ್ರಭುತ್ವಗಳು ಹೇರಿದ ಭಾಷೆಗಳು ಮಾನ್ಯತೆ ಪಡೆಯುತ್ತಿದ್ದುದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮಿಂದಲೇ ಆಯ್ಕೆಗೊಂಡ ಜನಪ್ರತಿನಿಧಿಗಳು ಮತ್ತು ಇಲ್ಲಿನವರೇ ಆದ ನಮ್ಮ ನೌಕರರು ಸರ್ಕಾರದಲ್ಲಿದ್ದರೂ ನಮ್ಮ ನೆಲದ ಭಾಷೆ ಯಾಕೆ ಮೂಲೆಗುಂಪಾಗುತ್ತದೆ ಎನ್ನುವುದು ವಿಸ್ಮಯಕಾರಿ ಸಂಗತಿಯಾಗಿ ಕಾಣುತ್ತದೆ. ಇದರ ಆಳಕ್ಕೆ ಇಳಿದು ನೋಡಿದಾಗ ನಿಜದ ಅರಿವಾಗುತ್ತದೆ. 'ಮೇಲುನೋಟಕ್ಕೆ ಜನಪ್ರತಿನಿಧಿಗಳು ಮತ್ತು ನೌಕರಶಾಹಿಯು ಜನಸಮುದಾಯದಿಂದಲೇ ರೂಪುಗೊಂಡು ಬಂದವರೆಂದು ಅನಿಸುತ್ತದೆ. ಆದರೆ ಅಧಿಕಾರದ

ಚೌಕಟ್ಟಿನಲ್ಲಿ ಅವರು ಜನರ ಜೊತೆಗಿನ ಸಂಪರ್ಕದ ಬದಲು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲಸಂಪರ್ಕದಲ್ಲಿ ಸೇರುತ್ತಾರೆ. ತಾವು ಗುರುತಿಸಿಕೊಂಡ ಜಾಲದ ಅಧಿಕೃತ ಭಾಷೆಯನ್ನೇ ತಮ್ಮ ಭಾಷೆಯನ್ನಾಗಿ ಆಡಳಿತಗಾರರು ಬೆಳೆಸುತ್ತಾರೆ. ನಮ್ಮ ರಾಜಕೀಯ, ಆರ್ಥಿಕ ಪರಿಸ್ಥಿತಿಯ ಈ ವಿನ್ಯಾಸಗಳು ಕನ್ನಡಕ್ಕೆ ಈ ಹೊತ್ತಿಗೆ ಯಾವ ಸ್ಥಾನಮಾನಗಳು ದೊರಕಬೇಕಾಗಿತ್ತೊ ಅದು ಲಭ್ಯವಾಗದಂತೆ ಮಾಡಿಬಿಟ್ಟಿದೆ'[೧೩]

ಅಧಿಕಾರದ ಚೌಕಟ್ಟಿನಲ್ಲಿ ಜನರ ಜೊತೆಗಿನ ಸಂಪರ್ಕದ ಬದಲು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲಸಂಪರ್ಕದಲ್ಲಿ ಸೇರಿರುವ ಸರ್ಕಾರಗಳಿಗೆ ಕರ್ನಾಟಕದ ಅಭಿವೃದ್ಧಿ ಎಂದರೆ, ಕನ್ನಡ ಭಾಷೆಯ ಅಭಿವೃದ್ಧಿ ಎಂದರೆ ತಕ್ಷಣ ಹೊಳೆಯುವುದು ಬಂಡವಾಳಶಾಹಿ ರೂಪಿಸಿಕೊಟ್ಟ ಮಾದರಿಗಳು. 'ಪಶ್ಚಿಮದ ಒಂದು ಸನ್ನಿವೇಶದಲ್ಲಿ ಬಂಡವಾಳಶಾಹಿ ಸಿದ್ಧವಾಗಿಸಿದ್ದನ್ನು ಕೇವಲ ಕನ್ನಡಕ್ಕೆ ತರುವುದರ ಮೂಲಕ ಯಾವ ಬದಲಾವಣೆ ಆಗಲಿಕ್ಕೆ ಸಾಧ್ಯವಿಲ್ಲ. ಕರ್ನಾಟಕದ ಹಸಿದ ಹೊಟ್ಟೆಗಳ ಮೇಲೆ ಐಟಿ ಸಾಮ್ರಾಜ್ಯವನ್ನೇ ಬೆಂಗಳೂರಿನಲ್ಲಿ ಕಟ್ಟಲು ಹೊರಟರೆ ಕನ್ನಡ ಸಂಸ್ಕೃತಿ ಬಿದ್ದುಹೋಗುತ್ತದೆ'[೧೪] ಎನ್ನುವ ಎಚ್ಚರ ಸರ್ಕಾರಗಳಿಗೆ ಇರುವಂತಿಲ್ಲ.

೯.೪.೯. ಕನ್ನಡದ ಹಿತ ಕಾಯಲು ಪ್ರಾದೇಶಿಕ ಪಕ್ಷ ಸ್ಥಾಪನೆಯ ಚಿಂತನೆ

'ಭಾಷೆಯೊಂದು ಬಲಿಷ್ಠವಾಗುವುದು ಆ ಭಾಷಿಕ ಜನಾಂಗ ರಾಜಕೀಯವಾಗಿ ಬಲವಾದಾಗ ಎಂಬ ಉತ್ತರ ಸರಳವಾದದ್ದು. ಆದರೆ ತುಂಬ ಮುಖ್ಯವಾದದ್ದು. ರಾಜಕೀಯವಾಗಿ ಪ್ರಬಲವಾಗುವುದು ಎಂಬ ಆಸೆ ತಾರ್ಕಿಕವಾಗಿ ಕೊನೆಯಾಗುವುದು ಆ ಭಾಷಿಕಕುಲ ಪ್ರತ್ಯೇಕ ರಾಷ್ಟ್ರೀಯ ಪ್ರಭುತ್ವವಾದಾಗ' ಎಂದು ಡಿ.ಆರ್ ನಾಗರಾಜ್ ಅವರು ಅಭಿಪ್ರಾಯಪಡುತ್ತಾರೆ. ಈ ಚಿಂತನೆ ಕಾರ್ಯರೂಪಕ್ಕೆ ಬಂದಿದ್ದು ತಮಿಳುನಾಡು ಮತ್ತು ಕೇರಳಗಳಲ್ಲಿ. ಸ್ಥಳೀಯತೆ ಮತ್ತು ಭಾಷಾ ಅಸ್ಮಿತೆಗಳೇ ಇಲ್ಲಿನ ಪ್ರಾದೇಶಿಕ ಪಕ್ಷಗಳ ಮುಖ್ಯನೆಲೆ. ಬರಗೂರು ಅವರು ವಿಶ್ಲೇಷಿಸುವಂತೆ ಕೇರಳದಲ್ಲಿ ನಡೆದ ಜನಚಳವಳಿಗಳು ತಮ್ಮ ಎಡಪಂಥೀಯ ವಿಚಾರಧಾರೆಯಲ್ಲಿಯೇ ಭಾಷಿಕ ಸಾಂಸ್ಕೃತಿಕ ವಿಷಯಗಳನ್ನು ಸಹಜವಾಗಿ ಒಳಗೊಂಡಿದ್ದವು. ತಮಿಳುನಾಡಿನ ದ್ರಾವಿಡ ಚಳವಳಿ ಒಂದು ಪ್ರಖರ ಸಾಮಾಜಿಕ-ಸಾಂಸ್ಕೃತಿಕ ಚಳವಳಿಯಾಗಿತ್ತು. ಈ ಎರಡೂ ರಾಜ್ಯಗಳಲ್ಲಿ ಇಂತಹ ಜನಚಳವಳಿಗಳೇ ಮುಂದೆ ಅಧಿಕಾರವನ್ನು ಹಿಡಿದವು. ಆದರೆ ಕರ್ನಾಟಕದ ಇತಿಹಾಸ ಬೇರೆ. ಇಲ್ಲಿ ಜನಚಳವಳಿಗಳು ಇದ್ದರೂ ಕೇರಳ, ತಮಿಳುನಾಡುಗಳಂತೆ ಪ್ರಖರವಾಗಿರಲಿಲ್ಲವಷ್ಟೇ ಅಲ್ಲ, ಭಾಷಿಕ-ಸಾಂಸ್ಕೃತಿಕ ಸಂಗತಿಗಳು ಈ ಚಳವಳಿಗಳ ಆಶಯಗಳಲ್ಲಿ ಅಂತರ್ಗತವಾಗಿರಲಿಲ್ಲ. ಭಾಷಾ ಚಳವಳಿಗಳು ಪ್ರಖರವಾಗಿದ್ದರೂ ಜನ ಚಳವಳಿಗಳ ಸಾಮಾಜಿಕ-ಆರ್ಥಿಕ ಆಶಯಗಳನ್ನು ಒಳಗೊಳ್ಳಲಿಲ್ಲ.

ಕೇರಳ, ತಮಿಳುನಾಡುಗಳ ಪ್ರೇರಣೆ ಕರ್ನಾಟಕದಲ್ಲಿಯೂ ಪ್ರಾದೇಶಿಕ ಪಕ್ಷಗಳ ಸ್ಥಾಪನೆಗೆ ಹಲವು ಸಂದರ್ಭಗಳಲ್ಲಿ ಕುಮ್ಮಕ್ಕು ಕೊಟ್ಟಿದೆ. ೧೯೮೭ ರಲ್ಲಿ ರೈತ ಹೋರಾಟಗಾರ ಎಂ.ಡಿ ನಂಜುಂಡಸ್ವಾಮಿ ಅವರ ಅಧ್ಯಕ್ಷತೆಯಲ್ಲಿ 'ಕನ್ನಡ ದೇಶ ಪಕ್ಷ' ಅವುಗಳಲ್ಲಿ ಭರವಸೆ ಹುಟ್ಟಿಸುವ ಪ್ರಯತ್ನವಾಗಿತ್ತು. 'ಕೆಲವೇ ಜನರ ಪ್ರಭುತ್ವ ಸಾಧನೆಗಾಗಿ ಭಾರತದಲ್ಲಿ ರೂಪಿಸಿಕೊಂಡಿರುವ ಹಿಂದಿ ಮತ್ತು ಇಂಗ್ಲಿಶ್ ಭಾಷಾ ಸಾಮ್ರಾಜ್ಯಶಾಹಿ, ಬೌದ್ಧಿಕ ಸಾಮ್ರಾಜ್ಯಶಾಹಿ, ಉತ್ಪಾದನಾ ಸಾಮ್ರಾಜ್ಯಶಾಹಿ, ಹಾಗೂ ಬೆಲೆ- ಲೂಟಿ ಸಾಮ್ರಾಜ್ಯಶಾಹಿಯನ್ನು ಮುರಿದು ಎಲ್ಲ ಜನರಿಗೂ ಭಾಷಿಕ ಸಮಾನತೆ, ಬೌದ್ಧಿಕ ಸಮಾನತೆ, ಆಸ್ತಿ ಸಮಾನತೆ, ಶ್ರಮ ಮೌಲ್ಯ ಸಮಾನತೆ ಮತ್ತು ಬೆಲೆ ಸಮಾನತೆಯನ್ನು ದೊರಕಿಸಿಕೊಡಬೇಕಾಗಿರುವುದೇ ನಮಗುಳಿದಿರುವ ಮಾರ್ಗ'ವೆಂದು ಈ ಪ್ರಾದೇಶಿಕ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಭಾಷೆಗೂ ನಾಡಿನ ಆರ್ಥಿಕ, ರಾಜಕೀಯ, ಸಾಮಾಜಿಕ ವ್ಯವಸ್ಥೆಗೂ ಇರುವ ನಂಟನ್ನು ಗುರುತಿಸಿತ್ತು. 'ಕನ್ನಡ ದೇಶ ಪಕ್ಷ' ರಾಜಕೀಯ ಪಕ್ಷವಾಗಿ ಯಶಸ್ಸನ್ನು ಕಾಣಲಿಲ್ಲ.

ಪ್ರಾದೇಶಿಕ ಪಕ್ಷಗಳು ನದಿವಿವಾದಗಳಂತಹ ಸಂಗತಿಗಳಲ್ಲಿ ರಾಷ್ಟ್ರೀಯ ಪಕ್ಷಗಳಿಗೆ ಸೆಡ್ಡು ಹೊಡೆದು ತನ್ನ ಹಿತವನ್ನು ಕಾಯ್ದುಕೊಳ್ಳುವಲ್ಲಿ ಅನೇಕ ವೇಳೆ ಸಫಲವಾಗಿದೆ. ಕೇರಳ ಕೂಡಾ ಕೇಂದ್ರಕ್ಕೆ ಅಧೀನವಾಗದೆ ತನ್ನತನವನ್ನು ಕಾಯ್ದುಕೊಂಡಿದೆ. ಆದರೆ ಜಾಗತೀಕರಣದ ಪ್ರಭಾವ ಎಲ್ಲ ಭಾಷಿಕರಂತೆ ಕೇರಳಿಗರು ಮತ್ತು ತಮಿಳುಭಾಷಿಕರನ್ನೂ ಬಾಧಿಸುತ್ತಿದೆ. ಹಿಂದಿ ಭಾಷೆ ಕುರಿತಂತೆ ಚಿಂತಿಸುವುದಾದರೆ ದೇಶದ ಬೇರೆ ರಾಜ್ಯಗಳಿಗಿಂತ ಹಿಂದಿ ಹೇರಿಕೆಯನ್ನು ತಮಿಳುನಾಡು ಸಮರ್ಥವಾಗಿ ತಡೆದಿದೆ, ನಿಜ. ಆದರೆ, ಹಿಂದಿ ಭಾಷೆಗೆ ಇರುವ ವಿರೋಧ ಇಂಗ್ಲಿಷಿಗಿಲ್ಲ. ಆಡಳಿತದಲ್ಲಿ ಇಂಗ್ಲಿಷ್ ಪ್ರಭಾವ ಇದ್ದೇ ಇದೆ. ಭಾಷೆ ಕೂಡ ಮೂಲಭೂತವಾಗಬಹುದು ಎಂಬುದನ್ನು ಮಹಾರಾಷ್ಟ್ರದಲ್ಲಿ ಢಾಳಾಗಿ, ಕೆಲಮಟ್ಟಿಗೆ ತಮಿಳುನಾಡಿನಲ್ಲಿ ಕಂಡಿದೆ. ಆದ್ದರಿಂದ ಭಾಷೆಯನ್ನೇ ನೆಲೆಯಾಗಿಟ್ಟುಕೊಂಡು ಗಳಿಸುವ ರಾಜಕೀಯ ಶಕ್ತಿಯ ಬಗ್ಗೆ ವಿಭಿನ್ನ ನೆಲೆಯ ವಾಗ್ವಾದಗಳು ಕರ್ನಾಟಕದಲ್ಲಿ ನಡೆದಿವೆ. ಡಿ.ಆರ್ ನಾಗರಾಜರು ಅಭಿಪ್ರಾಯಪಡುವಂತೆ ಭಾಷಿಕಕುಲವೊಂದು ರಾಜಕೀಯವಾಗಿ ಏಕಾಗ್ರತೆಯಿಂದ ಶಕ್ತಿಶಾಲಿಯಾಗಲು ಪ್ರಯತ್ನಿಸಿದ ಹಾಗೆಲ್ಲ ಅದರ ಸಂಸ್ಕೃತಿಗೆ ಪೆಟ್ಟು ಬೀಳುತ್ತದೆ ಎಂಬ ನೀಷೆಯ ವಿಚಾರ ಕುತೂಹಲಕಾರಿ. ಆದರೆ ಪೂರ್ಣವಾಗಿ ಒಪ್ಪುವುದು ಕಷ್ಟ. ಸಮಕಾಲೀನ ಜಾಗತಿಕ ರಾಜಕಾರಣದ ವ್ಯಂಗ್ಯ ಎಂದರೆ, ರಾಜಕೀಯವಾಗಿ ಕರ್ನಾಟಕ ಪ್ರಬಲವಾಗದಿದ್ದರೆ ನಮ್ಮ ಸಂಸ್ಕೃತಿ ಎದ್ದು ಕಾಣುವುದೂ ಇಲ್ಲ ಎನ್ನುವುದು.

೯.೪.೧೦ ಇಂಗ್ಲಿಶ್ ಕುರಿತ ‘ಸಮ್ಮತಿ’ಯ ಉತ್ಪಾದನೆಯ ರಾಜಕಾರಣ

ಗೋಕಾಕ್ ಚಳವಳಿಯ ನಂತರ ತಾತ್ವಿಕವಾಗಿ ಇಂಗ್ಲಿಶನ್ನು ವಿರೋಧಿಸುವ ದೊಡ್ಡ ಚಳುವಳಿಗಳು ಕರ್ನಾಟಕದಲ್ಲಿ ನಡೆದಿಲ್ಲ. ಇದಕ್ಕೆ ಕಾರಣ ಆ ಸಂದರ್ಭದಲ್ಲಿ ‘ಹೇರಿಕೆ’ಯ ಭಾಷೆಯಾಗಿದ್ದ ಇಂಗ್ಲಿಶ್ ನಂತರದಲ್ಲಿ ಜನರ ‘ಬೇಡಿಕೆ’ಯ ಭಾಷೆಯಾಗಿ ಬದಲಾದದ್ದು. ನದಿನೀರು, ಗಡಿವಿವಾದಗಳೆಂದು ನೆರೆಯ ಭಾಷಿಕರ ವಿರುದ್ಧ ಕರ್ನಾಟಕದಲ್ಲಿ ಪ್ರತಿಭಟನೆಗಳು ನಡೆದಂತೆ ಇಂಗ್ಲಿಶ್ ಮಾಧ್ಯಮದ ಶಾಲೆಗಳ ವಿರುದ್ಧ ನಡೆದಿಲ್ಲ. ವ್ಯತಿರಿಕ್ತವಾಗಿ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಶನ್ನು ಮೊದಲ ತರಗತಿಯಿಂದಲೇ ಕಲಿಸಬೇಕೆಂಬ ಹೋರಾಟಗಳು ನಡೆದಿವೆ. ಇದು ಶ್ರೀಮಂತ ಮತ್ತು ಮಧ್ಯಮವರ್ಗಗಳ ಬಂಡವಾಳಶಾಹಿ ವ್ಯವಸ್ಥೆಯ ಲಾಭ ಪಡೆಯುವ ಮತ್ತು ಇಂಗ್ಲಿಶ್ ವ್ಯಾಮೋಹದ ಕಾರಣದಿಂದ ಬಂದಿರದೆ ಸಾಮಾಜಿಕ ನ್ಯಾಯದ ಹಕ್ಕುದಾರಿಕೆಯ ಕಾರಣದಿಂದ ಬಂದುದಾಗಿದೆ.

ಮೇಲ್ನೋಟಕ್ಕೆ ಕಾಣುವಂತೆ ಈ ಎಲ್ಲಾ ವ್ಯಾಮೋಹ ಮತ್ತು ಹಂಬಲಗಳು ವೈಯಕ್ತಿಕ ಕಾರಣಗಳಿಂದ ಹುಟ್ಟಿರುವುದಲ್ಲ. ಇದರ ಹಿಂದೆ ಪ್ರಭುತ್ವದ ರಾಜಕಾರಣವಿದೆ. ‘ಅಧಿಕಾರವನ್ನು ಪಡೆಯುವುದಕ್ಕೆ, ನಮ್ಮ ರಾಜಕೀಯ ನಂಬಿಕೆಗಳನ್ನು ಇತರರೂ ಒಪ್ಪುವ ಹಾಗೆ ಮಾಡುವುದಕ್ಕೆ ಹಲವು ದಾರಿಗಳಿವೆ. ಬಲಪ್ರಯೋಗ ಒಂದು ದಾರಿ. ಸೈನ್ಯಬಲವನ್ನು ಬಿಟ್ಟರೆ ಕಾನೂನು ವ್ಯವಸ್ಥೆಯ ಮೂಲಕ ಜನರನ್ನು ಜನರ ವರ್ತನೆಗಳನ್ನು ನಿಯಂತ್ರಿಸುವುದು ಇನ್ನೊಂದು ದಾರಿ. ಆದರೆ ಜನ ಸ್ವಂತ ಇಚ್ಛೆಯಿಂದ ಆಳುವವರ ಆಸೆಗೆ ತಕ್ಕಂತೆ ವರ್ತಿಸುವ ಹಾಗೆ ಮಾಡುವುದು ಇವೆಲ್ಲಕ್ಕಿಂತ ಹೆಚ್ಚು ಪರಿಣಾಮಕಾರಿಯಾದದ್ದು. ಆಳುವವರಿಗೆ ಏನು ಬೇಕೋ ಅದೇ ತಮ್ಮ ಬದುಕಿಗೂ ಅಗತ್ಯ ಎಂದು ಜನ ಭಾವಿಸುವಂತೆ ಮಾಡುವುದನ್ನು; ಜನರ ಒಪ್ಪಿಗೆಯನ್ನು, ಅಥವ ಒಲುಮೆಯನ್ನು ಉದ್ದೇಶಪೂರ್ವಕವಾಗಿ ಉತ್ಪಾದಿಸುವುದನ್ನು ಫೇರ್ ಕ್ಲೋ ೧೯೮೯ರಲ್ಲಿ ಮ್ಯಾನ್ಯುಫ್ಯಾಕ್ಚರಿಂಗ್ ಕನ್ಸೆಂಟ್ ಎಂದು ಕರೆದ. ಆಳುವವರಿಗೆ ಏನು ಅಗತ್ಯವೋ ಅದೇ ಕಾಮನ್ ಸೆನ್ಸ್ ಅನ್ನುವ ಹಾಗೆ ಜನ ಒಪ್ಪಬೇಕು, ಹೀಗಾದಾಗ ಜನ ಆಳುವವರ ಐಡಿಯಾಲಜಿಯನ್ನು ಮರುಮಾತಿಲ್ಲದೆ ಒಪ್ಪಿಕೊಳ್ಳುತ್ತಾರೆ’[೧೫]

ನಿರ್ದಿಷ್ಟವಾದ ಒಂದು ವಿಚಾರ ಸರ್ಕಾರವನ್ನೇ ಬದಲಿಸುವಷ್ಟು ಪ್ರಾಮುಖ್ಯತೆ ಹೊಂದಿದೆ ಎಂದರೆ ಆ ವಿಚಾರದ ಬಗ್ಗೆ ನಾಡಿನ ಬಹುಸಂಖ್ಯಾತ ಜನರು ಗಂಭೀರವಾಗಿದ್ದಾರೆ ಎಂದು ಅರ್ಥ. ಸ್ವಾತಂತ್ರ್ಯಾನಂತರದ ಆರಂಭಿಕ ದಶಕಗಳಲ್ಲಿ ಭಾಷೆ ಚುನಾವಣೆಯ ವಿಷಯವಾಗಿದ್ದನ್ನು ಗಮನಿಸಬಹುದು. ಕರ್ನಾಟಕ ಏಕೀಕರಣದ ಆಶಯ ಸಾಕಾರವಾಗಲು ಏಕೀಕರಣದ ವಿಚಾರ ಚುನಾವಣೆಗಳ ಮೇಲೆ ಬೀರುವ ಪರಿಣಾಮಗಳ ಕುರಿತ ಕಾಂಗ್ರೆಸ್ ಪಕ್ಷಕ್ಕಿದ್ದ ಭಯವೂ ಕಾರಣವಾಗಿತ್ತು. ಜಾಗತೀಕರಣೋತ್ತರದ ಕಾಲಘಟ್ಟದಲ್ಲಿ ಜನಭಾಷೆಗಳನ್ನು ಶಿಕ್ಷಣದ ಮಾಧ್ಯಮವಾಗಿ ಜಾರಿಗೆ ತನ್ನಿ ಎನ್ನುವ ಭಾಷಾ ಚಳವಳಿಗಾರರ ಹಾಗೂ ಭಾಷಾವಿಜ್ಞಾನಿಗಳ ಆಗ್ರಹಕ್ಕೆ ಪ್ರಭುತ್ವ

ಸ್ಪಂದಿಸದಿರುವುದು ಅದೊಂದು ಚುನಾವಣಾ ರಾಜಕಾರಣದ ಮೇಲೆ ಯಾವ ಪರಿಣಾಮವನ್ನೂ ಬೀರಲಾರದು ಎನ್ನುವ ಅದಕ್ಕಿರುವ ನಂಬಿಕೆಯೇ ಆಗಿದೆ. ಅಂದರೆ ಅದರ ಅರ್ಥ ಬಂಡವಾಳಶಾಹಿ ಶಕ್ತಿಗಳ ಪರವಾಗಿ ಕಾರ್ಯನಿರ್ವಹಿಸುವ ನಮ್ಮ ಸರ್ಕಾರಗಳಿಗೆ ಮಾತ್ರವಲ್ಲ, ಬಂಡವಾಳಶಾಹಿಗಳು ಮತ್ತು ಸರ್ಕಾರಗಳ ಇಂಗ್ಲಿಷನ್ನು ಅನಿವಾರ್ಯಗೊಳಿಸುವ ಕಾರ್ಯತಂತ್ರದ ಹಿಂದಿನ ರಾಜಕಾರಣವನ್ನು ಅರಿಯದೆ ಅದನ್ನು ಒಪ್ಪಿಕೊಂಡುಬಿಟ್ಟಿರುವ ಈ ತಲೆಮಾರಿನ ಜನರಿಗೆ ಮಾತೃಭಾಷೆಯ ಸಂಗತಿ ಪ್ರಧಾನವಾದುದಾಗಿಲ್ಲ ಎಂಬುದು.

೯.೪.೧೧ ಭಾಷಿಕ ಸ್ವರೂಪ ಬದಲಿಸುವ ಹಿನ್ನೆಲೆಯಲ್ಲಿ 'ವಲಸೆ' ಕುರಿತು ಸರ್ಕಾರಗಳ ಮೌನ

೨೦ನೇ ಶತಮಾನದಲ್ಲಿ ಕನ್ನಡದ ಭಾಷಿಕ ಸ್ವರೂಪವನ್ನು ಬದಲಿಸಿದ ಪ್ರಕ್ರಿಯೆಗಳಲ್ಲಿ ವಲಸೆ ಬಹಳ ಮುಖ್ಯವಾದದ್ದು. ಮುಖ್ಯವಾಗಿ ಹಳ್ಳಿಗಳಿಂದ ನಗರಕ್ಕೆ ಜನರ ವಲಸೆ ಹೆಚ್ಚಿತು. ನವೋದಯ ಕಾಲಘಟ್ಟದ ಕಾದಂಬರಿಗಳಲ್ಲಿ ಇದು ಸಾಮಾನ್ಯವಾದ ಸಂಗತಿ. 'ಮರಳಿ ಮಣ್ಣಿಗೆ' ಈ ಹಿನ್ನೆಲೆಯಲ್ಲಿ ಸಾಹಿತ್ಯದಲ್ಲಿ ಮತ್ತೆ ಮತ್ತೆ ಚರ್ಚಿತವಾದ ಕಾದಂಬರಿ. ದೇಶ ಸ್ವತಂತ್ರಗೊಳ್ಳುತ್ತಿದ್ದಂತೆ ವಲಸೆಯ ಪ್ರಮಾಣ ಹೆಚ್ಚಿತು. ಬ್ರಿಟಿಷರಿಂದ ದೊರೆತ ಶಿಕ್ಷಣ, ಶಿಕ್ಷಣದ ಮೂಲಕ ಅರಿವಿಗೆ ಬಂದ ಹಳ್ಳಿಗಳಲ್ಲಿನ ಭೂಮಾಲೀಕ ಮತ್ತು ಜಾತಿವ್ಯವಸ್ಥೆಯ ಕ್ರೌರ್ಯ, ಇಂಗ್ಲಿಶ್ ಮೂಲಕ ಬಂದ ಆಧುನಿಕತೆಯ ಹಂಬಲ, ಉದ್ಯೋಗದ ಕಾರಣ ಇವೆಲ್ಲವೂ ವಲಸೆಗೆ ಪ್ರೇರಣೆ ನೀಡಿದವು. ಶತಮಾನದ ಕೊನೆಯ ದಶಕದಲ್ಲಿ ವಲಸೆಯ ಸ್ವರೂಪದಲ್ಲಿ ಮಹತ್ತರ ಬದಲಾವಣೆಯಾಯಿತು. ಬಹುತೇಕ ಹಳ್ಳಿಗಳಿಂದ ಹತ್ತಿರದ ಪಟ್ಟಣಗಳಿಗೆ ಸೀಮಿತವಾಗಿದ್ದ ವಲಸೆ ಬೆಂಗಳೂರಿನತ್ತ ತಿರುಗಿತು. ವಿದೇಶಗಳಿಗೆ ಹೋಗುವವರ ಸಂಖ್ಯೆ ಹೆಚ್ಚುತ್ತ ಹೋಯಿತು. ಈ ವಲಸೆಯೆಲ್ಲವೂ ನಡೆದದ್ದು ಯುವ ಸಮುದಾಯದ ವಲಯದಲ್ಲಿ. ಕೃಷಿ ಕುಟುಂಬಗಳು ನಗರಗಳಲ್ಲಿ ತಮ್ಮ ವಾಸಸ್ಥಾನವನ್ನು ನಗರಗಳಿಗೆ ಬದಲಿಸಿಕೊಳ್ಳುವ ಪ್ರಕ್ರಿಯೆಗೆ ವೇಗ ಸಿಕ್ಕಿದ್ದು ಕೂಡ ಈ ಅವಧಿಯಲ್ಲಿಯೇ. ತಮ್ಮ ಮಕ್ಕಳಿಗೆ ಇಂಗ್ಲಿಶ್ ಶಿಕ್ಷಣ ಕೊಡಿಸುವುದು ಇದರ ಹಿಂದಿದ್ದ ಪ್ರಮುಖ ಪ್ರೇರಣೆ. ವಲಸೆಯ ಈ ಚಲನೆಗಳೆಲ್ಲ ಕನ್ನಡ ಭಾಷಿಕ ಸ್ವರೂಪದ ಮೇಲೆ ಪ್ರಭಾವ ಬೀರಿದವು. ಇದರಿಂದ ಅರಿವಾಗುವ ಸಂಗತಿಯೆಂದರೆ 'ಭಾಷೆಗಳ ಉಳಿಕೆ ಎಂಬುದು ಕೇವಲ ನೆಲೆಗಳಿಗೆ ಸೀಮಿತವಾಗುವುದಿಲ್ಲ. ಕನ್ನಡದಂತಹ ಭಾಷೆಗಳು ಈಗ ಇಂತಹ ವಲಸೆ ಸಮುದಾಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯತೊಡಗಿವೆ.[೧೬] ವಲಸೆ ಭಾಷೆಯ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಸರ್ಕಾರ ಚಿಂತಿಸಿದ ಬಗ್ಗೆ ಯಾವ ಕುರುಹುಗಳೂ ದೊರಕುವುದಿಲ್ಲ.

೯.೪.೧೨ ದೇಶಿ ಭಾಷೆಗಳ ಕುರಿತು ಗಂಭೀರವಾಗಿರದ ಕೇಂದ್ರ ಸರ್ಕಾರಗಳು

ಕರ್ನಾಟಕ ಏಕೀಕರಣ ಚಳುವಳಿ ಕನ್ನಡ ಭಾಷೆ ಮತ್ತು ಭಾಷಿಕರಿಗೊಂದು ಪ್ರತ್ಯೇಕ ಪ್ರಾಂತ್ಯವನ್ನು ಪಡೆಯುವ ಗುರಿಯನ್ನು ಹೊಂದಿದ್ದಂತೆ ತೋರಿದರೂ ಆಳದಲ್ಲಿ ಎಲ್ಲ ಬಗೆಯ ತರತಮಗಳ ವಿರುದ್ಧವಾಗಿನ ಚಳುವಳಿಯಾಗಿತ್ತು. ಅನಕೃ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಮುಖಪತ್ರಿಕೆ 'ಕನ್ನಡ ನುಡಿ'ಯ ೧೬.೧೨.೧೯೩೮ರ ಸಂಚಿಕೆಯಲ್ಲಿ ಉಲ್ಲೇಖಿಸಿರುವ, ಕರ್ನಾಟಕ ಏಕೀಕರಣ ಕುರಿತಂತೆ ಜನರ ಅಭಿಪ್ರಾಯ ಸಂಗ್ರಹಿಸಲು ಮುಂಬಯಿ ಸರ್ಕಾರದ ಪ್ರತಿನಿಧಿಗಳಾಗಿ ಡಿಸೆಂಬರ್ ೧೯೩೮ರಲ್ಲಿ ಕರ್ನಾಟಕದಲ್ಲಿ ಪ್ರವಾಸ ಮಾಡಿ ಬಂದ ಬಿ.ಜಿ.ಖೇರ್ ರವರು ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ಈ ಕುರಿತ ಒಳನೋಟವಿದೆ. ಅವರು ಅಭಿಪ್ರಾಯ ಪಡುವಂತೆ 'ಕರ್ನಾಟಕ ಏಕೀಕರಣ ಚಳುವಳಿಯು ರಾಷ್ಟ್ರದಲ್ಲಾಗಿರುವ ಜನಜಾಗೃತಿಯ ಕೇವಲ ಒಂದು ಭಾಗ. ನಮ್ಮ ದೇಶದ ಜನರ ಜೀವನದ ಮೇಲೆ ಹಾಕಲ್ಪಟ್ಟಿರುವ ಅನೇಕ ನಿರ್ಬಂಧಗಳಿಂದ ಉಂಟಾಗಿರುವ ಅಸಂತೋಷ ಮತ್ತು ನಮ್ಮ ಸಾಮಾಜಿಕ ಸೌಕರ್ಯಗಳ ಪುನರ್ಘಟನೆ ಮಾಡಬೇಕೆಂಬ ಉತ್ಕಟೇಚ್ಛೆಗಳೇ ಈ ಚಳುವಳಿಗೆ ಕಾರಣ'

ಸ್ವಾತಂತ್ರ್ಯಾನಂತರದ ದೇಶಿ ಭಾಷೆಗಳ ಭಾಷಿಕ ಸ್ವರೂಪದ ಹಕ್ಕೊತ್ತಾಯಗಳ ಒಡಲೊಳಗೂ ಆರ್ಥಿಕ, ಸಾಮಾಜಿಕ ನೆಲೆಯ ಅಸಮಾಧಾನಗಳಿವೆ. ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಬೇಕಾದ ಕೇಂದ್ರ ಸರ್ಕಾರ ಈಗಲೂ ದೇಶಿ ಭಾಷೆಗಳ ಬಗ್ಗೆ ಗಂಭೀರವಾಗಿಲ್ಲ. ಪುರುಷೋತ್ತಮ ಬಿಳಿಮಲೆ ಅವರು ವಿವರಿಸುವಂತೆ ೧೦ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಂಸ್ಕೃತ ಮತ್ತು ಹಿಂದಿ ಭಾಷೆಯ ಅಭಿವೃದ್ಧಿಗೆ ಕೆಲವು ಯೋಜನೆಗಳನ್ನು ರೂಪಿಸಿದ್ದರೂ ಉಳಿದ ಭಾರತೀಯ ಭಾಷೆಗಳ ಬಗೆಗೆ ಅದು ದಿವ್ಯ ಮೌನವನ್ನು ತಾಳಿದೆ. ೧೧ ಮತ್ತು ೧೨ನೆ ಪಂಚವಾರ್ಷಿಕ ಯೋಜನೆಗಳಲ್ಲಿ ಭಾರತೀಯ ಭಾಷೆಗಳ ಬಗ್ಗೆ ಯಾಂತ್ರಿಕವಾಗಿ ನಾಲ್ಕು ಮಾತು ಹೇಳಲಾಗಿದೆಯಲ್ಲದೆ, ಅವುಗಳ ಅಭಿವೃದ್ಧಿಯ ಬಗೆಗೆ ಯಾವುದೇ ಯೋಜನೆಗಳನ್ನು ರೂಪಿಸಿಲ್ಲ. ಹೀಗೆ ಯಾವುದೇ ಮಾರುಕಟ್ಟೆಯ ಧ್ಯೇಯ ಧೋರಣೆಗಳೇ ಉನ್ನತ ಶಿಕ್ಷಣವನ್ನು ನಿಯಂತ್ರಿಸುತ್ತಿರುವ ಇಂದಿನ ಸಂದರ್ಭದಲ್ಲಿ ಕನ್ನಡದಂಥ ಸಣ್ಣ ಭಾಷೆಗಳ ಭವಿಷ್ಯವೇನು? ಎಂಬುದರ ಬಗ್ಗೆ ನಾವು ಗಂಭೀರವಾಗಿ ಚಿಂತಿಸಬೇಕು. ಮಾರುಕಟ್ಟೆ ಕೇಂದ್ರಿತ ಉನ್ನತ ಶಿಕ್ಷಣವ್ಯವಸ್ಥೆಯಲ್ಲಿ ಜ್ಞಾನದ ಉತ್ಪತ್ತಿ ಮತ್ತು ವಿತರಣೆಯು ಅಂತಾರಾಷ್ಟ್ರೀಯವಾಗುವುದು ಅನಿವಾರ್ಯ. ಈ ಪ್ರಕ್ರಿಯೆಯಲ್ಲಿ ಆಳುವ ಶಕ್ತಿಶಾಲೀ ಭಾಷೆಯಾಗಿ ಇಂಗ್ಲಿಶ್ ಹೊರಹೊಮ್ಮಿದೆ. ಇಂಗ್ಲಿಶ್ ಭಾಷೆ ಕಲಿತರೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಬಹುದು ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಜನರೂ ಈ ಬೆಳವಣಿಗೆಯನ್ನು ಒಪ್ಪಿಕೊಂಡಿದ್ದಾರೆ. ಇದು ಕನ್ನಡವೂ ಸೇರಿದಂತೆ ಜಗತ್ತಿನ ಅನೇಕ ಸಣ್ಣಭಾಷೆಗಳ ಕುರಿತು ಆಯಾ ದೇಶದ ಸರ್ಕಾರಗಳು ಮತ್ತು ಜನರು ನಿರ್ಲಕ್ಷ್ಯ ವಹಿಸುವಂತೆ ಮಾಡಿದೆ. ಇದರಿಂದ ಜಗತ್ತಿನಾದ್ಯಂತ ಇಂದು ಅನೇಕ

ಭಾಷೆಗಳು ಅವಸಾನದ ಅಂಚಿಗೆ ಬಂದು ನಿಲ್ಲುವಂತಾಗಿದೆ. ಸಣ್ಣ ಭಾಷೆಗಳ ಧ್ವನಿ ಉಡುಗಿವೆ. ಅವುಗಳ ನಾಲಿಗೆ ಕಟ್ಟಿಹೋಗಿವೆ. ಉಳಿಯುವಿಕೆಗಾಗಿ ಅವು ಹೆಣಗಾಡುತ್ತಿವೆ.. ಕಲಿಕೆ ಮತ್ತು ಉಪಯೋಗಗಳ ವಿಷಯದಲ್ಲಿ ಇಂಗ್ಲಿಶ್ ಸಾವಿರಾರು ಸಣ್ಣಭಾಷೆಗಳನ್ನು ಅಪಾಯದ ಅಂಚಿಗೆ ತಳ್ಳಿದೆ.

೯.೪.೧೩ ರೂಪವು ಮುಂಚೂಣಿಗೆ ಆಶಯವು ಹಿಂದಕ್ಕೆ

ಸರ್ಕಾರ ಭಾಷಾ ಅಭಿವೃದ್ಧಿಗೆಂದು ರೂಪಿಸುವ ಯೋಜನೆಗಳೆಲ್ಲ ಭಾಷೆಯ ಬೆಳವಣಿಗೆಗೆ ಸಹಕಾರಿ ಎಂದೆನ್ನುವಂತಿಲ್ಲ. ಜನರ ಭಾವನೆಗಳಿಗೆ ಸ್ಪಂದಿಸುತ್ತಿದ್ದೇನೆಂದು ತೋರಿಸಿಕೊಳ್ಳುವ, ಅವರ ಅಸಮಾಧಾನವನ್ನು ಶಮನಗೊಳಿಸುವ ಅಥವಾ ನಿರ್ದಿಷ್ಟ ಜಾತಿಗಳನ್ನು ಓಲೈಸುವ ಉದ್ದೇಶವನ್ನು ಹೊಂದಿರುವ ಸಾಧ್ಯತೆಯಿರುತ್ತದೆ. 'ಅಗಾಧ ಪ್ರಮಾಣದಲ್ಲಿ ವಚನಸಂಪುಟ ಸೇರಿದಂತೆ ವಿವಿಧ ಪುಸ್ತಕಗಳನ್ನು ಪ್ರಕಟಿಸುವ ಸರ್ಕಾರ ಅವುಗಳನ್ನು ಮುಚ್ಚಿದ ಕಪಾಟುಗಳ ಒಳಗೆ ಸೇರಿಸುತ್ತಿದೆ. ಭಾಷೆಯ ಅಭಿವೃದ್ಧಿಗಾಗಿ ಈ ಬಗೆಯ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಕೊಡುವ ಮೂಲಕ ಸರ್ಕಾರವು ತನ್ನ ಸಾಧನೆಗಳನ್ನು ಪೂರೈಸಿದ ತೃಪ್ತಿ ಪಡಬಹುದೇ ಹೊರತು ಸಾಂಸ್ಕೃತಿಕವಾಗಿ ಪರಿಣಾಮ ಮಾತ್ರ ಶೂನ್ಯ.'[೧೭] ಭಾಷೆಯ ಅಭಿಮಾನದ ಗುರುತಾಗಿ ಸಾಹಿತ್ಯ ಕೃತಿಗಳನ್ನು ಪರಿಗಣಿಸುವ ಈ ಪ್ರವೃತ್ತಿ ಕೇವಲ ಈ ವಲಯಕ್ಕೆ ಮಾತ್ರ ಸೀಮಿತವಾದುದಲ್ಲ. ಸಂಸ್ಕೃತಿಯ ಈ ಹೊತ್ತಿನ ನೆಲೆಗಳನ್ನು ಅದು ಬಿಂಬಿಸುತ್ತದೆ. ರೂಪ ಮತ್ತು ಆಶಯ ಈ ದ್ವಂದ್ವಮಾನಗಳಲ್ಲಿ ರೂಪವು ಮುಂಚೂಣಿಗೆ ಬಂದು ಆಶಯವು ಹಿಂದಕ್ಕೆ ಸರಿಯುವ ಅಥವಾ ನಾಶವಾಗಿ ಹೋಗುವ ಸಂದರ್ಭಗಳು ಸೃಷ್ಟಿಯಾಗುತ್ತಿವೆ.[೧೮]

೯.೪.೧೪ 'ಬಾಸುಂಡೆ ನೋವು ಮರೆಸುವ ಉದ್ದೇಶದ' ಸಾಂಸ್ಕೃತಿಕ ಉತ್ಸವಗಳು

ಕನ್ನಡದ ನಿಜವಾದ ಸಮಸ್ಯೆಗಳನ್ನು ಗುರುತಿಸಿ ಅದರ ಪರಿಹಾರಕ್ಕೆ ಕ್ರಿಯಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದು ಭಾಷೆಯ ಬಗ್ಗೆ, ಭಾಷಿಕರ ಬಗ್ಗೆ ಸರ್ಕಾರಕ್ಕಿರುವ ಹೊಣೆಗಾರಿಕೆ. ಆದರೆ ಬಹುತೇಕ ನಿದರ್ಶನಗಳಲ್ಲಿ ಸರ್ಕಾರ ಭಾಷೆಯನ್ನು ಕುರಿತಂತೆ ಮಾಡುವ ಕಾರ್ಯಕ್ರಮಗಳು ಅದರ ನಿಜವಾದ ಉದ್ದೇಶವನ್ನೇ ಸಂದೇಹಿಸುವಂತಿರುತ್ತವೆ ಮತ್ತು ಅದರ ಕಾರ್ಯಕ್ರಮಗಳಲ್ಲೇ ವೈರುಧ್ಯ ಕಾಣುತ್ತವೆ. ರಹಮತ್ ತರೀಕೆರೆ ಅವರು ಅಭಿಪ್ರಾಯಪಡುವಂತೆ 'ಕನ್ನಡ ಮತ್ತು ಕನ್ನಡಿಗರ ಹೆಸರಲ್ಲಿ ವಿಶ್ವವಿದ್ಯಾಲಯ, ಪ್ರಾಧಿಕಾರ, ಅಕಾಡೆಮಿ, ಭುವನೇಶ್ವರಿ ಪ್ರತಿಮೆ, ಥೀಮ್ ಪಾರ್ಕ್ ಮುಂತಾದವು ಸ್ಥಾಪನೆ ಆಗುತ್ತಿವೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನವೂ ಬಂದಿದೆ; ಆದರೆ ಕನ್ನಡ ಶಾಲೆಗಳು ವರ್ಷೇವರ್ಷ ಕಣ್ಮುಚ್ಚುತ್ತಿವೆ. ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕೆಂಬ ನೀತಿಯನ್ನು ಜಾರಿಗೆ ತರಲು ಆಗುತ್ತಿಲ್ಲ. ಕನ್ನಡ ಮಾತು ನಿಜವಾಗಿಯೂ ತಲೆಯೆತ್ತುವಂತೆ ಮಾಡಬಲ್ಲ ಚರ್ಚೆ ಮತ್ತು ಖಚಿತ ಕಾರ್ಯಕ್ರಮಗಳೇ ಇಲ್ಲ. ಬದಲಿಗೆ ಸಾಂಸ್ಕೃತಿಕ ಉತ್ಸವಗಳು

ಜರುಗುತ್ತಿವೆ. ಸರ್ಕಾರ ನಡೆಸುವ ವೈಭವೋಪೇತ ಸಾಲು ಸಾಲು ಉತ್ಸವಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ಹಿಂದೆ ನಿರ್ದಿಷ್ಟ ಉದ್ದೇಶವಿರುವಂತಿದೆ. ರೈತರನ್ನು ಸಂಕಟದಂಚಿಗೆ ದೂಡಿ ಬಹುರಾಷ್ಟ್ರೀಯ ಕಂಪನಿಗಳ ಹೂಡಿಕೆಗೆ ಅನುವಾಗುವ ಆರ್ಥಿಕ ನೀತಿಗಳಿಂದ, ಎಲ್ಲ ಹಂತಗಳಲ್ಲಿ ಇಂಗ್ಲಿಶ್ ಮಾಧ್ಯಮವನ್ನು ಶಾಶ್ವತವಾಗಿಸುವ ನೀತಿಗಳಿಂದ ಲಾಭಗಳಿಕೆಯನ್ನು ದೊಡ್ಡ ಮೌಲ್ಯವಾಗಿ ಬಿತ್ತುತ್ತಿರುವ ಮಾರುಕಟ್ಟೆ ಕೊಬ್ಬುತ್ತಿದ್ದು ರೈತರು ಮತ್ತು ಜನಭಾಷೆಗಳು ಪೆಟ್ಟು ತಿನ್ನುತ್ತಿವೆ. 'ಈ ಪೆಟ್ಟಿನ ಬಾಸುಂಡೆ ಮರೆಮಾಚುವುದಕ್ಕೇ ಭಾವನಾತ್ಮಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ'

೯.೫ ರಾಜಕೀಯ ಧೋರಣೆಗಳ ಹೇರಿಕೆಗೆ ಜನಸಮುದಾಯದ ವಿರೋಧದ ಸ್ವರೂಪಗಳು

ಪ್ರಭುತ್ವಗಳು ಭಾಷೆ ಕುರಿತ ತಮ್ಮ ಧೋರಣೆಗಳನ್ನು ಜನರ ಮೇಲೆ ಹೇರುತ್ತವೆ ಎನ್ನುವುದು ಸತ್ಯವಾದರೂ ಸಮುದಾಯಗಳು ಸಾರಾಸಗಟಾಗಿ ಅದಕ್ಕೆ ತಲೆಬಾಗುತ್ತವೆ ಎಂದರ್ಥವಲ್ಲ. ೧೨ನೇ ಶತಮಾನದ ವಚನಕಾರರು ಪ್ರಜ್ಞಾಪೂರ್ವಕವಾಗಿ ಹೊಸದೊಂದು ಕನ್ನಡವನ್ನು ತಮ್ಮ ಅಭಿವ್ಯಕ್ತಿಗೆ ಹುಡುಕಿಕೊಂಡದ್ದು ಪ್ರಭುತ್ವದ ಪ್ರಮಾಣಭಾಷೆಗೆ ತಮ್ಮ ವಿರೋಧವನ್ನು ದಾಖಲಿಸಲು. ಪ್ರಭುತ್ವದ ಧೋರಣೆಗಳಿಗೆ ಜನಸಮುದಾಯ ಇಡಿಯಾಗಿ ವಿರೋಧವನ್ನೋ, ಸಹಮತವನ್ನೋ ತೋರುತ್ತದೆಯೆಂದಲ್ಲ. ಆಳುವವರ್ಗದ ಭಾಷೆಯನ್ನು – ಅದು ಇಂಗ್ಲಿಶಿರಲಿ, ಫಾರಸಿ ಉರ್ದುಗಳಿರಲಿ – ಅಕ್ಷರಸ್ಥರಾಗುವ ಉಚ್ಚವರ್ಗಗಳು ಕೂಡಲೆ ಕಲಿತು, ಅಧಿಕಾರ ಕೇಂದ್ರಕ್ಕೆ ಹತ್ತಿರವಾಗುತ್ತವೆ, ಆಪ್ತವಾಗುತ್ತವೆ. ಆದರೆ ಆಳುವವರ್ಗದ ಭಾಷೆಯನ್ನು ಹಠದಿಂದ ಕಲಿಯದೆ, ತಮ್ಮ ದೇಶಿಭಾಷೆಗಳ ಒಳಗೆ ಬಾಳಬಯಸುವ ಜಿಗುಟುತನವನ್ನು ಕೆಳವರ್ಗಗಳು ತೋರುತ್ತವೆ. ಹೈದರಾಬಾದ್ ಕರ್ನಾಟಕದ ಹಳ್ಳಿಗಾಡಿನಲ್ಲಿದ್ದ ಎಷ್ಟೋ ಕನ್ನಡ ಮನೆಮಾತಿನ ಮುಸ್ಲಿಮರು, ತಮ್ಮ ಮತದ ದೊರೆಗಳು ಆಳುತ್ತಿದ್ದರೂ, ಆಡಳಿತ ಭಾಷೆಯಾಗಿದ್ದ ಉರ್ದುವನ್ನು ಕಲಿಯಲಿಲ್ಲ. ಈ ಭಾಗದಲ್ಲಿ ಕನ್ನಡಬಾರದ ನಿಜಾಮನ ಅಧಿಕಾರಿಗಳನ್ನು ಪೆಚ್ಚುಮಾಡುವ ಜಾನಪದ ಕತೆಗಳನ್ನು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಆದರೆ ಈ ಸೀಮೆಯ ಎಲ್ಲ ಉಚ್ಚ ಜಾತಿಯವರು ಕೂಡಲೆ ಉರ್ದುವನ್ನು ಕಲಿತು, ಅಧಿಕಾರ ರಚನೆಯಲ್ಲಿ ಸೇರಿ ಪ್ರಯೋಜನ ಪಡೆದರು. ಮುಖ್ಯವಾದ ಸಂಗತಿಯೆಂದರೆ 'ಯಾವತ್ತೂ ಸಮುದಾಯಗಳು ಆಳುವ ವರ್ಗದ ಭಾಷೆಗೆ ಶರಣಾಗತಿ ಅಥವಾ ತಿರಸ್ಕಾರಗಳೆಂಬ ಎರಡೇ ಮಾದರಿಗಳಲ್ಲಿ ಪ್ರತಿಕ್ರಿಯಿಸುವುದಿಲ್ಲ. ಅವು ಬೇರೆ ಬೇರೆ ಪರ್ಯಾಯಗಳನ್ನು ಸೃಷ್ಟಿಸಬಲ್ಲವು. ಆರಂಭದಲ್ಲಿ ಕರ್ನಾಟಕವನ್ನಾಳಿದ ಬಹಮನಿಗಳು ಮೊದಮೊದಲು ಫಾರಸಿಯನ್ನು ಆಡಳಿತ ಭಾಷೆ ಮಾಡಿಕೊಂಡಿದ್ದರು. ಆದರೆ ಜನ ಫಾರಸಿ ಕನ್ನಡ ಮರಾಠಿಗಳನ್ನು ಸೇರಿಸಿ ಸಂಕರವಾದ ದಖನಿಯನ್ನು ಸೃಷ್ಟಿಸಿಕೊಂಡರು. ಮೊಗಲರು ಸಂಕರಕೂಸುಗಳಾದ ಹಿಂದವಿ ದಖನಿಗಳನ್ನು ಬಹುಕಾಲದ ತನಕ ಅಸ್ಥಾನದೊಳಗೆ ಬಿಟ್ಟುಕೊಳ್ಳಲಿಲ್ಲ.

ಬದಲಿಗೆ ಮೊಗಲರ ಮೇಲಿದ್ದ ವಿರೋಧಗಳಿಂದ ಬಹಮನಿಗಳು ದಖನಿಯನ್ನು ಆಡಳಿತದಲ್ಲಿ ತರಲಾರಂಭಿಸಿದರು. ಆದರೆ ಫಾರಸಿಯಿಂದ ಸ್ವತಃ ಕೀಳೀಕರಣಕೊಳಗಾಗಿದ್ದ ದಖನಿ ಉರ್ದು, ಕ್ರಮೇಣ ಹೈದರಾಬಾದ್ ನವಾಬರ ಕಾಲಕ್ಕೆ, ಕನ್ನಡ ತೆಲುಗು ಮರಾಠಿಗಳನ್ನು ದಮನಿಸಿ ಮೇಲೆ ಕುಳಿತಿತು. ಅದು ಗದ್ದುಗೆಯವರ ಭಾಷೆಯಾಗಿ ಬಿಟ್ಟಿತು'[೧೯]

ರಾಜಪ್ರಭುತ್ವದ ಕಾಲಘಟ್ಟದಲ್ಲಿ ಪ್ರಭುತ್ವದ ಭಾಷೆ ಕುರಿತ ಜನವಿರೋಧಿ ನಿರ್ಧಾರಗಳಿಗೆ ಜನಸಮುದಾಯಗಳು ಶರಣಾಗತಿ, ತಿರಸ್ಕಾರ ಮತ್ತು ಪರ್ಯಾಯಗಳ ಹುಡುಕಾಟದ ರೂಪದಲ್ಲಿ ಪ್ರತಿಕ್ರಿಯಿಸಿದರೆ ಸ್ವಾತಂತ್ರ್ಯೋತ್ತರ ಪ್ರಜಾಪ್ರಭುತ್ವದ ಕಾಲದಲ್ಲಿ ಪ್ರತಿಭಟನಾ ಚಳುವಳಿಗಳ ಮೂಲಕ ಪ್ರತಿಕ್ರಿಯಿಸುತ್ತವೆ. ಈ ಪ್ರತಿಭಟನೆಗಳು ನೇರವಾಗಿ ಭಾಷೆಯನ್ನು ಕುರಿತೇ ಇರಬೇಕಾದ್ದಿಲ್ಲ. ಅಥವಾ ಭಾಷೆಯನ್ನು ಕುರಿತಾಗಿದ್ದರೂ ರಾಜಕೀಯ, ಸಾಮಾಜಿಕ ಸಂಗತಿಗಳನ್ನು ಸೇರಿದಂತೆ ಹಲವು ತರತಮಗಳ ವಿರುದ್ಧವಾಗಿರುತ್ತದೆ. ಗೋಕಾಕ್ ಚಳುವಳಿ ಮತ್ತು 'ಧರ್ಮಕಾರಣ', 'ಮಹಾಚೈತ್ರ', 'ಅನುದೇವಾ ಹೊರಗಣವನು' ಕೃತಿಗಳನ್ನು ಸರ್ಕಾರ ನಿಷೇಧಿಸಿದಾಗ ವ್ಯಕ್ತವಾದ ಪ್ರತಿಭಟನೆಗಳನ್ನು ಇದಕ್ಕೆ ನಿದರ್ಶನಗಳನ್ನಾಗಿ ಗಮನಿಸಬಹುದಾಗಿದೆ.

ಟಿಪ್ಪಣಿಗಳು

೧. ಗೋವಿಂದರಾಜು ಸಿ.ಆರ್., ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಪು. ೪೬–೪೭

೨. ಅದೇ, ಪು. ೪೯

೩. ಅ.ನ.ಕೃ., ಅ.ನ.ಕೃಷ್ಣರಾಯರ ಸಾಹಿತ್ಯ ಶ್ರೇಣಿ (ಸಂಪುಟ.೩), ಪು. ೨೪೧

೪. ಗೋವಿಂದರಾಜು ಸಿ.ಆರ್., ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಪು. ೩

೫. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೩೫

೬. ಅದೇ, ಪು. ೮

೭. ಅದೇ, ಪು. ೩೯

೮. ಮಹಾದೇವಯ್ಯ ಪಿ., ಆಡಳಿತ ಕನ್ನಡ, (ಸಂ)ಮುರಿಗೆಪ್ಪ ಎ, ಮುಖ್ಯಮಂತ್ರಿ ಚಂದ್ರು, ಪು. ೩೩,೩೪

೯. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೨೩

೧೦. ಅದೇ, ಪು. ೨೪

೧೧. ಅದೇ, ಪು. ೩೫

೧೨. ಅದೇ, ಪು. ೩೫

೧೩. ಅದೇ, ಪು. ೪೦

೧೪. ರಾಜೇಂದ್ರ ಚೆನ್ನಿ, ಅಸಮಗ್ರ, ಪು. ೧೮೯

೧೫. ನಾಗಭೂಷಣಸ್ವಾಮಿ ಓ.ಎಲ್., ನುಡಿಯೊಳಗಾಗಿ, ಪು. ೮೨

೧೬. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೨೮೪

೧೭. ಅದೇ, ಪು. ೩೧೮

೧೮. ಅದೇ, ಪು. ೩೧೮

೧೯. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಪು. ೧೦೦–೧

ಅಧ್ಯಾಯ ೧೦

ಕನ್ನಡ ಅಸ್ಮಿತೆಯ ಸಂವಿಧಾನ

ಅಧ್ಯಾಯ ೧೦

ಕನ್ನಡ ಅಸ್ಮಿತೆಯ ಸಂವಿಧಾನ

೧೦.೧ ಭರವಸೆ ಮತ್ತು ಪತನದ ಲಕ್ಷಣಗಳು

ದಿನದಿನಕ್ಕೂ ಮುಚ್ಚುತ್ತಿರುವ ಕನ್ನಡ ಮಾಧ್ಯಮದ ಶಾಲೆಗಳು, ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿ ಬಿಗಿಯಾಗುತ್ತಿರುವ ಇಂಗ್ಲಿಶಿನ ಹಿಡಿತ ಇತ್ಯಾದಿ ಕಣ್ಣೆದುರಿನ ಸಂಗತಿಗಳು ಕನ್ನಡವು ಕಣ್ಮರೆಯಾಗುವ ಆತಂಕವನ್ನು ಹುಟ್ಟಿಸುವುದು ಅಚ್ಚರಿಯ ಸಂಗತಿಯಲ್ಲ. ಇದರೊಂದಿಗೆ ಕನ್ನಡದ ಬಳಕೆ ಕಡಿಮೆಯಾಗುತ್ತಾ ಹೋಗುತ್ತಿದೆ. ಕನ್ನಡದ ಜಾಗವನ್ನು ಇಂಗ್ಲಿಶ್ ಆಕ್ರಮಿಸಿಕೊಳ್ಳುತ್ತಿದೆ. ನಾವು ಬಳಸುತ್ತಿರುವ ಕನ್ನಡ ಕೂಡಾ ಶುದ್ಧವಾಗಿಲ್ಲ. ಈ ಕಾರಣಗಳಿಂದ ಕನ್ನಡ ಕಣ್ಮರೆಯಾಗಬಹುದು ಎನ್ನುವ ಸಂಗತಿಗಳು ಆತಂಕವನ್ನು ಹೆಚ್ಚಿಸಿವೆ.

ಕನ್ನಡ ವಿಚಾರ ಸಾಹಿತ್ಯ ಈ ಎಲ್ಲಾ ಸಂಗತಿಗಳನ್ನು ಕೂಲಂಕುಷವಾಗಿ ಅವಲೋಕಿಸಿದೆ. ಕನ್ನಡ ಕಣ್ಮರೆಯಾಗುವ ಸಂಭವವನ್ನು ಅಲ್ಲಗೆಳೆದರೂ ಕನ್ನಡ ಭಾಷೆಯನ್ನು ಅವನತಿಯತ್ತ ದೂಡುವ ಸಂಗತಿಗಳ ಕುರಿತು ಕಡು ಎಚ್ಚರದಿಂದ ಚಿಂತಿಸಿದೆ. ಕೆ.ವಿ ನಾರಾಯಣ ಅವರು ವಿಶ್ಲೇಷಿಸುವಂತೆ ಭಾಷಾನಾಶವೆಂದರೆ ಒಂದು ಭಾಷೆಯನ್ನು ಬಳಸುವ ಜನಸಮುದಾಯ ತನ್ನ ಭಾಷೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುವುದು. ಇನ್ನೊಂದು ಭಾಷೆಯ ಮಡಿಲನ್ನು ಸೇರಿ ಆ ಭಾಷೆಯ ಭಾಷಿಕರಾಗುವುದು. ಇದು ಉಂಟಾಗುವುದು ಯಾವಾಗ ಎಂದರೆ, ಒಂದು: ಭಾಷೆಯನ್ನಾಡುವ ಜನರು ಸಂಖ್ಯೆಯಲ್ಲಿ ಕಡಿಮೆಯಾಗುತ್ತ ಕೊನೆಗೆ ಒಬ್ಬಿಬ್ಬರು ಉಳಿದು ಆನಂತರ ಅವರು ಮಾಯವಾಗಿ ಬಿಡುವುದು. ಎರಡು: ಒಂದು ಭಾಷಾ ಸಮುದಾಯ ಸಾಮಾಜಿಕ ಒತ್ತಡಗಳಿಂದಾಗಿ ತನ್ನ ಭಾಷೆಯನ್ನು ಬಿಟ್ಟುಕೊಟ್ಟು ಇನ್ನೊಂದು ಅಧಿಕಾರದ ಭಾಷೆಯನ್ನು ಬಳಸಲು ತೊಡಗುವುದು. ಮೂರು: ಒಂದು ಭಾಷೆಯನ್ನಾಡುವ ಜನರು ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಯದೆ ಇನ್ನೊಂದು ಭಾಷಾ ಸಮುದಾಯದೊಡನೆ ವ್ಯವಹರಿಸಬೇಕಾಗಿ ಬಂದಾಗ ನಡೆಯುವ ವಿದ್ಯಮಾನಗಳಿಂದ ಪಿಜಿನ್ ಎಂಬ ಭಾಷಾ ಪ್ರಭೇದ ಹುಟ್ಟಿಕೊಳ್ಳುವುದು. ಕ್ರಿಯೊಲ್ ಎಂದು ಕರೆಯಲಾಗುವ ಈ ಭಾಷೆಯಲ್ಲಿ ಮೂಲ ಭಾಷೆಯ ವ್ಯಾಕರಣ ಮತ್ತು ಇನ್ನೊಂದು ಭಾಷೆಯ ಪದಕೋಶ ಇವೆರೆಡು ಸೇರಿಕೊಳ್ಳುತ್ತದೆ. ಈ ಮೇಲಿನ ಮೂರು ಸಂದರ್ಭಗಳಲ್ಲಿ ಯಾವುದು ಈಗ ಒದಗಿಬಂದಿದೆ ಎಂಬುದನ್ನು ಗಮನಿಸಿದರೆ ಅಂತಹ ಯಾವುದೇ ಸಂದರ್ಭಗಳು ಇಲ್ಲಿ ಒದಗಿವೆ ಎನ್ನಿಸುವುದಿಲ್ಲ. ಕಳೆದು ಹೋಗುತ್ತಿರುವ ಭಾಷೆಗಳು ಸಾಮಾನ್ಯವಾಗಿ ಅನ್ಯಭಾಷೆ ಸಂಸರ್ಗವಿಲ್ಲದ ಬದುಕುತ್ತಿರುವ ಆದಿವಾಸಿಗಳ ಭಾಷೆಗಳು. ಆದರೆ ಕನ್ನಡ ಹೀಗೆ ಅನ್ಯಭಾಷೆ ಸಂಸರ್ಗವಿಲ್ಲದ

ಭಾಷೆಯಲ್ಲ. ಇದೊಂದು ಪೌರ ಸಮಾಜದ ಭಾಷೆ. ಆದ್ದರಿಂದ ಈ ಕಾರಣದಿಂದಲೂ ಕನ್ನಡವು ನಾಶವಾಗುವ ಭಾಷೆ ಎನ್ನುವಂತಿಲ್ಲ .

ಕನ್ನಡ ವಿಚಾರ ಸಾಹಿತ್ಯ ಕನ್ನಡದ ಬಗ್ಗೆ ವ್ಯಕ್ತಪಡಿಸಿರುವ ಭರವಸೆಯನ್ನು ಈ ಕುರಿತು ನಡೆದ ಸಮೀಕ್ಷೆಗಳೂ ಕೂಡ ದೃಢಪಡಿಸಿವೆ. ಯುನೆಸ್ಕೋವು ಸಿದ್ಧಪಡಿಸಿದ ಭಾಷೆಗಳ ಜಾಗತಿಕ ಭೂಪಟವು ಭಾರತದಲ್ಲಿನ ೧೭೨ ಭಾಷೆಗಳನ್ನು ಅಪಾಯದ ಅಂಚಿನಲ್ಲಿರುವ ಭಾಷೆಗಳೆಂದೂ, ೧೦೧ ಭಾಷೆಗಳನ್ನು ಅತೀವ ಅಪಾಯದ ಅಂಚಿನಲ್ಲಿರುವ ಭಾಷೆಗಳೆಂದೂ ೭೧ ಭಾಷೆಗಳನ್ನು ಎಲ್ಲ ಬಗೆಯ ಅಪಾಯಗಳಿಗೆ ಬಲಿಯಾಗುತ್ತಿರುವ ಭಾಷೆಗಳೆಂದೂ ಗುರುತಿಸಿದೆ. (christoper Moseley,ed., UNESCO,, Paris 2010),[೧] ಈವರೆಗೆ ಜಗತ್ತಿನಲ್ಲಿ ನಡೆದಿರುವ ಅತ್ಯಂತ ದೊಡ್ಡ ಭಾಷಾ ಸಮೀಕ್ಷೆ 'ಪೀಪಲ್ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ'ದ ಸಮೀಕ್ಷೆಯನ್ನು ಆಧರಿಸಿ 'ಭಾರತದ ೪೦೦ ಭಾಷೆಗಳು ಮುಂದಿನ ೫೦ ವರ್ಷಗಳಲ್ಲಿ ನಶಿಸಿ ಹೋಗುವ ಅಪಾಯ ಎದುರಿಸುತ್ತಿದೆ'[೨] ಎಂದು ಭಾಷಾಶಾಸ್ತ್ರಜ್ಞ ಗಣೇಶ್ ಎನ್.ದೇವಿ ಹೇಳಿದ್ದಾರೆ. ಈ ಎರಡೂ ಸಮೀಕ್ಷೆಗಳಲ್ಲಿ ಕನ್ನಡವನ್ನು ನಶಿಸಿ ಹೋಗುವ ಅಪಾಯದಲ್ಲಿರುವ ಭಾಷೆಯೆಂದು ಗುರುತಿಸಿಲ್ಲ. ಎರಡನೇ ಸಮೀಕ್ಷೆಯಲ್ಲಂತೂ ಕನ್ನಡ, ಹಿಂದಿ, ಮರಾಠಿ, ಬಂಗಾಳಿ, ತೆಲುಗು, ತಮಿಳು, ಪಂಜಾಬಿ ಮತ್ತು ಮಲಯಾಳದಂತಹ ಭಾಷೆಗಳಿಗೆ ಇಂಗ್ಲಿಶಿನಿಂದ ಅಪಾಯವಿದೆ ಎಂಬುದು ಭ್ರಮೆ. ಇವುಗಳನ್ನು ಜಗತ್ತಿನ ಅತ್ಯಂತ ದೊಡ್ಡ, ಪ್ರಬಲ ಮತ್ತು ಪ್ರಮುಖ ೩೦ ಭಾಷೆಗಳೆಂದು ಪರಿಗಣಿಸಲಾಗಿದೆ. ಇವುಗಳಿಗೆ ೧೦೦೦ ವರ್ಷಗಳಿಗಿಂತಲೂ ದೀರ್ಘಾವಧಿಯ ಇತಿಹಾಸವಿದೆ. ಈ ಭಾಷೆಗಳನ್ನು ಮಾತನಾಡುವ ಜನರ ಸಂಖ್ಯೆ ತಲಾ ೨ ಕೋಟಿಗಿಂತಲೂ ಹೆಚ್ಚು. ಈ ಭಾಷೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸಾಹಿತ್ಯ ರಚನೆಯಾಗಿದೆ. ಸಾವಿರಾರು ಕೋಟಿ ಬಂಡವಾಳದ ಸಿನೆಮಾ ಮತ್ತು ಕಿರುತೆರೆ ಉದ್ಯಮಗಳು, ಪತ್ರಿಕೆ ಮತ್ತು ಟಿ.ವಿ ಮಾಧ್ಯಮಗಳು ಇವೆ. ಭಾಷೆಯಿಂದ ಜೀವನೋಪಾಯಕ್ಕೆ ಕೊಡುಗೆ ಇರುವವರೆಗೂ ಆ ಭಾಷೆಗಳಿಗೆ ಅಪಾಯವಿರುವುದಿಲ್ಲ ಎಂಬ ಭರವಸೆ ವ್ಯಕ್ತವಾಗಿದೆ. ಎತ್ನೋಲಾಗ್ ಮತ್ತು ಟೆರ್ರಾ ಲಿಂಗ್ವಾ ಮತ್ತು ಲಿಂಗ್ವಿಸ್ಫಿಯರ್ ಸ್ವಾಯತ್ತ ವೇದಿಕೆಗಳು ಕೂಡ ಅಳಿವಿನ ಅಂಚಿನಲ್ಲಿರುವ ಭಾಷೆಗಳ ಪಟ್ಟಿಯಲ್ಲಿ ಕನ್ನಡವನ್ನು ಸೇರಿಸಿಲ್ಲ.

ಜಗತ್ತಿನ ಭಾಷೆಗಳನ್ನು ಅಧ್ಯಯನ ಮಾಡಿದಾಗ ಒಂದು ವಿಶಿಷ್ಟ ಸಂಗತಿ ನಮ್ಮ ಗಮನಕ್ಕೆ ಬರುತ್ತದೆ. ಮೊದಲ ಸಹಸ್ರಮಾನದ ಸಂದರ್ಭದಲ್ಲೂ ಜನಭಾಷೆಯಾಗಿದ್ದು ಬರವಣಿಗೆಯ ಪರಂಪರೆಯನ್ನು ಹೊಂದಿದ್ದು, ಮೂರನೆಯ ಸಹಸ್ರಮಾನದಲ್ಲೂ ಅದೇ ಮನ್ನಣೆಯನ್ನು ಕಾಯ್ದುಕೊಂಡು ಬಂದಿರುವ ಭಾಷೆಗಳ ಸಂಖ್ಯೆ ಹೆಚ್ಚಾಗಿಲ್ಲ. ಅವು ಇಡೀ ಜಗತ್ತಿನಲ್ಲಿ ಎಂಟೋ ಹತ್ತೋ ಇರಬಹುದು. ಅವುಗಳಲ್ಲಿ ಕನ್ನಡವೂ ಒಂದು. ಹೀಗಿದ್ದರೂ ಕನ್ನಡ ನಿರಾತಂಕವಾಗಿ ಇರುವಂತಿಲ್ಲ. ಏಕೆಂದರೆ ಕನ್ನಡ ಬೇರೆ ಬೇರೆ ಸ್ವರೂಪಗಳಲ್ಲಿ ಆತಂಕವನ್ನು ಎದುರಿಸುತ್ತಿದೆ. ಕನ್ನಡ

ಓದುಗವಲಯದಲ್ಲಿ ಇಂಗ್ಲಿಶ್ ತನ್ನ ಪಾಲನ್ನು ಹೆಚ್ಚಿಸಿಕೊಳ್ಳುತ್ತಿರುವುದು. ಕಣ್ಣಿನ ನೆಲೆಯಲ್ಲಿ ಕನ್ನಡ ಕಣ್ಮರೆಯಾಗುತ್ತಿರುವುದು ಅಂತಹ ಎರಡು ಆತಂಕಗಳು. ಬರವಣಿಗೆಗೆ ಕನ್ನಡ ಅಗತ್ಯ ಎನ್ನುವ ಪ್ರಸಂಗಗಳು ಕಡಿಮೆಯಾಗುತ್ತಿವೆ. ಓದುವವರು ಕೂಡಾ ನಿರ್ದಿಷ್ಟ ಪ್ರಮಾಣದಲ್ಲಿ ಕನ್ನಡದಿಂದ ದೂರವಾಗುತ್ತಿದ್ದಾರೆ. ಕಲಿತ ಜನರು ಪರಿಸರದಲ್ಲಿ ದ್ವಿಭಾಷಿಕರಾಗಿರುವ ಪ್ರಸಂಗ ಹೆಚ್ಚಿದೆ.[೩] ಎಷ್ಟೋ ಭಾಷೆಗಳ ಚರಿತ್ರೆಯನ್ನು ಗಮನಿಸಿದರೆ ಆ ಭಾಷೆಗಳು ಕಿವಿಯ ಭಾಷೆಗಳಾಗಿ ಯಾವ ಆತಂಕವು ಇಲ್ಲದೇ ಉಳಿದುಕೊಂಡಿರುವುದನ್ನು ನೋಡುತ್ತೇವೆ. ಆದರೆ ಭಾಷೆ ಕಣ್ಣಿನ ನೆಲೆಯಲ್ಲಿ ಉಳಿದುಕೊಳ್ಳಬೇಕು. ಕಣ್ಣಿನ ನೆಲೆಯಲ್ಲಿ ಬರಹ ನೋಡುತ್ತದೆ. ಕನ್ನಡ ಈ ಅಪಾಯವನ್ನು ಎದುರಿಸುತ್ತಿರುವಂತೆ ತೋರುತ್ತದೆ.[೪]

ಭಾರತವೂ ಸೇರಿದಂತೆ ಜಗತ್ತಿನ ಬಹುತೇಕ ದೇಶಿ ಭಾಷೆಗಳಿಗೆ ಬೆದರಿಕೆ ಎದುರಾಗಿರುವುದು ವಸಾಹತುಭಾಷೆಯಾದ ಇಂಗ್ಲಿಶಿನಿಂದ. 'ಆರ್ಥಿಕ ಜಾಗತೀಕರಣದ ವ್ಯಾಪಾರಿ ಮಾಧ್ಯಮವಾಗಿ ಇಂಗ್ಲಿಶ್ ಬೆಳೆದಷ್ಟು ಅದು ಉಳಿದ ಸಂಸ್ಕೃತಿಗಳ ಬಗೆಗೆ ಮಾರಕ ಎಂಬ ಮಾತಿನಲ್ಲಿ ಸತ್ಯವಿದೆ' ಎನ್ನುವ ಡಿ.ಆರ್ ನಾಗರಾಜ್ ಅವರು ಈಚಿನ ದಶಕಗಳ ಆರ್ಥಿಕ ಜಾಗತೀಕರಣದ ಪ್ರಕ್ರಿಯೆ ಇಂಗ್ಲಿಶಿಗೆ ಇಂತಹ ಮಹತ್ವ, ಶಕ್ತಿ ತಂದುಕೊಟ್ಟಿರುವುದನ್ನು ಗುರುತಿಸುತ್ತಾರೆ.

ಹಾಗೆ ನೋಡಿದರೆ ಭಾಷಿಕವಾಗಿ ಬೇರೆಲ್ಲ ಭಾಷೆಗಳಿಗಿಲ್ಲದ ವಿಶಿಷ್ಟವಾದ ತನ್ನದೇ ಆದ ಶಕ್ತಿಯೇನೂ ಇಂಗ್ಲಿಶಿಗೆ ಇಲ್ಲ. ಬಳಸುವವರ ಕೈಯಲ್ಲಿ ಅದು ದೈತ್ಯಶಕ್ತಿಯಂತೆ ತೋರುತ್ತಿದೆ ಅಷ್ಟೆ. 'ಇಂಗ್ಲಿಶ್ ಭಾಷೆಯೇ ತಂತಾನೆ ಒಂದು ಭಾಷೆಯನ್ನು ಹತ್ಯೆ ಮಾಡಲಾರದು. ಅಧಿಕಾರ ಸಂಬಂಧದಲ್ಲಿ ಇಂಗ್ಲಿಶ್ ಭಾಷೆಯನ್ನು ಬಳಸಿ ಒಂದು ಜನಾಂಗವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಬೇಕೆಂದು ಬಯಸುತ್ತಿರಬಹುದು. ಚಾರಿತ್ರಿಕವಾಗಿ ಇಂಗ್ಲಿಶ್ ಭಾಷೆಯನ್ನು ಹೀಗೆ ಹಿಡಿತದ ಸಾಧನವನ್ನಾಗಿ ಬಳಸಿದ್ದು ಪರಿಚಿತ ವಿಧಾನವೇ ಆಗಿದೆ. ಭಾರತದಲ್ಲೂ ಇಂಗ್ಲಿಶರು ಇಲ್ಲಿನ ಜನತೆಗೆ ಇಂಗ್ಲಿಶ್ ಶಿಕ್ಷಣವನ್ನು ನೀಡಲು ಬಯಸಿದ್ದು ಎರಡು ಕಾರಣಗಳಿಂದ. ಒಂದು: ಆಡಳಿತ ನಡೆಸಲು ತಮಗೆ ನೆರವಾಗುವ ಇಂಗ್ಲಿಶ್ ಬಲ್ಲ ಜನವರ್ಗವನ್ನು ಇಲ್ಲಿ ರೂಪಿಸುವುದು. ಎರಡು: ಇಂಗ್ಲಿಶ್ ಭಾಷೆಯನ್ನು ಈ ಜನರಿಗೆ ಅರಿವಿನ ಕಿಟಕಿಯನ್ನಾಗಿ ಮಾಡುವುದು. ನವ ವಸಾಹತುಶಾಹಿ ಶಕ್ತಿಗಳು ಅಗತ್ಯಬಿದ್ದರೆ ದೇಶಿ ಭಾಷೆಯನ್ನು ಕೂಡ ಬಳಸುತ್ತಾರೆ ಎನ್ನವುದನ್ನು ಕೆ.ವಿ ನಾರಾಯಣ ಅವರು ಉದಾಹರಣೆ ಮೂಲಕ ವಿವರಿಸುತ್ತಾರೆ. 'ಇಂಗ್ಲಿಶ್ ಭಾಷೆ ತನ್ನ ಆಧಿಪತ್ಯವನ್ನು ಏಕಪಕ್ಷೀಯವಾಗಿ ಸಾಧಿಸುತ್ತದೆ ಎನ್ನುವ ಮಾತು ಅಷ್ಟು ಸರಳವಲ್ಲ. ಏಕೆಂದರೆ ಮಾರುಕಟ್ಟೆಯ ಶಕ್ತಿಗಳು ಇಂಗ್ಲಿಶನ್ನು ಅಸ್ತ್ರವಾಗಿ ಬಳಸುತ್ತಿವೆ ಎನ್ನುವುದು ನಿಜ. ಆದರೆ ಕೊಳ್ಳುವ ಜನರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಮಾರುಕಟ್ಟೆಯ ಶಕ್ತಿಗಳ ಮುಖ್ಯ ಗುರಿಯೇ ಹೊರತು ಇಂಗ್ಲಿಶನ್ನು ಬೆಳೆಸುವುದಲ್ಲ. ಒಂದು ವೇಳೆ ಕೊಳ್ಳುವವರನ್ನು ಓಲೈಸಲು ಅವರ ಭಾಷೆಯನ್ನು ಬಳಸಬೇಕು ಎಂಬ

ಪ್ರಸಂಗ ಒದಗಿದರೆ ಆಗ ಇಂಗ್ಲಿಶಿನ ಜೊತೆಗೆ ಈ ಭಾಷೆಯನ್ನು ಬಳಸಲು ಹಿಂಜರಿಯುವುದಿಲ್ಲ. ಜಾಗತೀಕರಣ ಪ್ರಕ್ರಿಯೆಯಲ್ಲಿ ಈ ಅಂಶ ಈಗ ಬಹಿರಂಗಗೊಳ್ಳುತ್ತಿದೆ. ಮಾಹಿತಿ ತಂತ್ರಜ್ಞಾನ ವಲಯದ ದೈತ್ಯ ಕಂಪನಿ ಮೈಕ್ರೋಸಾಫ್ಟ್ ಏಕಪಕ್ಷೀಯವಾಗಿ ಇಂಗ್ಲಿಶನ್ನು ಹೇರುತ್ತಿತ್ತು. ಆದರೆ ಈಗ ತಂತಾನೆ ಕನ್ನಡವೂ ಸೇರಿದಂತೆ ಜಗತ್ತಿನ ನೂರಾರು ಭಾಷೆಗಳನ್ನು ತನ್ನ ಕಾರ್ಯವಾಹಿಯಲ್ಲಿ ಭಾಗಿಯಾಗುವ ಅವಕಾಶ ಕಲ್ಪಿಸಿದೆ.[೫] ಬಂಡವಾಳಶಾಹಿಗಳು ನಮ್ಮ ಭಾಷೆಯಲ್ಲಿಯೇ ಕಾರ್ಯನಿರ್ವಹಿಸುವ ಈ ಸನ್ನಿವೇಷವಂತೂ ಕನ್ನಡಕ್ಕೆ ಬಿಸಿ ತುಪ್ಪದ ಪರಿಸ್ಥಿತಿ ನಿರ್ಮಾಣ ಮಾಡುವಂತಹದ್ದು. ಬಂಡವಾಳಶಾಹಿ ವ್ಯವಸ್ಥೆ ಕನ್ನಡದಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಖುಷಿ ಪಡಬೇಕೋ ಅಥವಾ ಕನ್ನಡದ ಮೂಲಕವೇ ಇಡೀ ನಾಡನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿದೆ ಎಂದು ಆತಂಕಪಡಬೇಕೋ ಎನ್ನುವ ಗೊಂದಲದ ಸನ್ನಿವೇಶವಿದು. ಸದ್ಯಕ್ಕಂತೂ ಬಂಡವಾಳಶಾಹಿಗಳು ಸೃಷ್ಟಿಸಿರುವ ಕನ್ನಡ ಬಳಸುವ ಈ ವ್ಯವಸ್ಥೆಯನ್ನು ಮತ್ತು ಇಂಗ್ಲಿಶನ್ನು ಭಾರತೀಯ ದೇಶಭಾಷೆಗಳ ಸೇವೆಗೆ ಪರಿಣಾಮಕಾರಿಯಾಗಿ ದುಡಿಸಿಕೊಳ್ಳುವ ಸಾಧ್ಯತೆಗಳ ಬಗೆಗೆ ಗಮನ ಕೊಡುವುದನ್ನು ಬಿಟ್ಟು ಬೇರೆ ಪರ್ಯಾಯಗಳು ಗೋಚರಿಸುತ್ತಿಲ್ಲ.

ಮೇಲೆ ಕಂಡುಕೊಂಡಂತೆ ಸಮಸ್ಯೆಯಿರುವುದು ಇಂಗ್ಲಿಶಿನದಲ್ಲ. ಅದರ ಹಿಂದಿರುವ ಜಾಗತಿಕ ಬಂಡವಾಳವಾದದ್ದು ಮತ್ತು ಅದಕ್ಕೆ ಜತೆಗೂಡಿರುವ ಮತೀಯವಾದದ್ದು. ಇಂತಹ 'ಜಾಗತಿಕ ಬಂಡವಾಳವಾದವೂ, ಪ್ರಭುತ್ವಗಳೂ, ಮತೀಯವಾದವೂ ವಿಚಿತ್ರವಾಗಿ ಏಕೀಭವಿಸಿರುವ ಈ ಕಾಲದಲ್ಲಿ, ಕನ್ನಡದ ಕಷ್ಟವು ಭಾರತದ ಎಲ್ಲ ಜನಭಾಷೆಗಳ ಕಷ್ಟವೂ ಆಗಿರುವಂತಿದೆ. ನಿಜವಾಗಿಯೂ ಸಮಸ್ಯೆಯ ಮೂಲ ಎಲ್ಲಿದೆ? ದೇಶೀಯವಾದ ಭಾಷೆ ಮತ್ತು ವೃತ್ತಿಕುಶಲತೆಗಳನ್ನು ನಾಶ ಮಾಡುವ ಆರ್ಥಿಕ ನೀತಿಯನ್ನು ಮನೆಯೊಳಗೆ ಬಿಟ್ಟುಕೊಂಡು, ಅವುಗಳ ಪರಿಣಾಮ ಮಾತ್ರ ಬೇರೆಯಾಗಿರಬೇಕು ಎಂದು ಅಪೇಕ್ಷಿಸುತ್ತಿರುವುದರಲ್ಲಿಯೋ? ಜನಭಾಷೆಗಳು ಸಾರ್ವಜನಿಕ ಜೀವನದ ಹಲವು ವಲಯಗಳಲ್ಲಿ ಬಳಕೆಗೊಳ್ಳುವಂತಹ ಹೊಸ ಹಾದಿಗಳನ್ನು ಹುಡುಕಲು ಅಸಮರ್ಥವಾಗಿರುವುದರಲ್ಲಿಯೋ?'[೬] ಈ ಬಗ್ಗೆ ವಿಸ್ತೃತ ಚಿಂತನೆಯ ಅಗತ್ಯವಿದೆ.

ಬಂಡವಾಳವಾದದೊಂದಿಗೆ ಜತೆಗೂಡಿರುವ, ಭಾಷೆಗೂ ತಗುಲಿರುವ ಮತೀಯವಾದದ ಹಿಂದಿನ ತರ್ಕವನ್ನು ಸರಿಯಾಗಿ ಗ್ರಹಿಸುವುದು ಅಗತ್ಯವಾಗಿದೆ. ಅಧಿಕಾರ ಲೋಕದಲ್ಲಿ ಒಡೆದಾಳುವುದು ಫಿತೂರಿ ಆಕ್ರಮಣ ರಾಜಿ ಸಾಮಾನ್ಯ ಸಂಗತಿಗಳು. ಈ ಸಂಗತಿಗಳನ್ನು ಆರ್ಥಿಕವಾಗಿ ರಾಜಕೀಯವಾಗಿ ಅರ್ಥೈಸಿದರೆ ಕಾಣುವ ನಿಜವೇ ಬೇರೆ. ರಾಜಕೀಯ ವಿಸ್ತರಣೆಗಾಗಿ ಹಾಗೂ ಸಂಪತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ, ಪ್ರಭುತ್ವಗಳು ಉದ್ದಕ್ಕೂ ಸಂಘರ್ಷ ಮಾಡಿವೆ. ಇದು ನಿಮ್ಮ ಸಂಘರ್ಷವೆಂದು ಜನರನ್ನು ನಂಬಿಸಿವೆ. ಇದೇ ನಂಬಿಕೆಯನ್ನು ತಂದು ಚರಿತ್ರೆಕಾರರು ನಮ್ಮ ಮೇಲೆ ಹೇರುತ್ತಿದ್ದಾರೆ. ವಿಜಯನಗರದ ಪತನ ನಡೆದಿದ್ದು ಇಂತಹ ಸಂಘರ್ಷಗಳ ಕಾರಣಕ್ಕೆ.

ಆದರೂ ಯುದ್ಧ ಮಾಡಿದವರು ಮುಸ್ಲಿಂ ದೊರೆಗಳು ಎಂಬ ಕಾರಣಕ್ಕೆ ಇಡೀ ಮುಸ್ಲಿಂ ಸಮುದಾಯವನ್ನು ಕನ್ನಡದ ವಿರೋಧಿಗಳಂತೆ ಬಿಂಬಿಸುವ ಪ್ರಯತ್ನ ಇಂದೂ ನಡೆಯುತ್ತಿದೆ. ಕನ್ನಡಾಭಿಮಾನದ ಮುಸುಕಿನಲ್ಲಿರುವ ಹಿಂದುತ್ವಕ್ಕೆ ಯಾವತ್ತೂ ಸಮಕಾಲೀನವಾದ ಆರ್ಥಿಕ-ರಾಜಕೀಯ ಬಿಕ್ಕಟ್ಟುಗಳೇ ಕಾರಣ. ಆದರೂ ಅದು ತನ್ನ ಕ್ರಿಯೆಗಳಿಗಾಗಿ ಚರಿತ್ರೆಯ ನೆನಪುಗಳಿಗೆ ಹೋಗುತ್ತದೆ. ಅದು ಹರಡಿ ನಂಬಿಸುವ ಚರಿತ್ರೆಯ ಗ್ರಹಿಕೆಗಳು ಶಿಕ್ಷಣಕ್ರಮದಲ್ಲೂ ಸಂಸ್ಕೃತಿ ಚಿಂತನೆ-ಶೋಧನೆಯಲ್ಲೂ ಅನಂತರೂಪಗಳಲ್ಲಿ ನೆಲೆಸಿಬಿಟ್ಟಿವೆ. 'ಕರ್ನಾಟಕ ಸಂಸ್ಕೃತಿ ಬರೆಹಗಳಲ್ಲಿರುವ ಮರೆವು ಮತ್ತು ಪೂರ್ವಗ್ರಹಗಳಿಗೂ ಈ ಗ್ರಹಿಕೆಗಳು ಕಾರಣವಾಗಿವೆ. ಕರ್ನಾಟಕದ 'ಚರಿತ್ರೆ' ಯನ್ನು ಬರೆದ ಮನಸ್ಸುಗಳೇ 'ಕರ್ನಾಟಕ ಸಂಸ್ಕೃತಿ'ಯ ವ್ಯಾಖ್ಯಾನವನ್ನೂ ಮಾಡಿರುವುದರಿಂದ, ಈ ಮರೆವು ಮತ್ತು ಪೂರ್ವಗ್ರಹಗಳು ಆಶ್ಚರ್ಯಕರವಲ್ಲ. ಸುಪ್ತವಾಗಿರುವ ಮತೀಯ ಭಾವನೆಗಳು, ಕರ್ನಾಟಕ ಸಂಸ್ಕೃತಿಯಲ್ಲಿ ಶಿಶುನಾಳ ಸಂತನನ್ನು ಅಥವಾ ನಿಸಾರ್ ಅಹಮದರಂತಹ ಕವಿಯನ್ನು ಪ್ರಾತಿನಿಧಿಕವಾಗಿ ಗುರುತಿಸುತ್ತವೆ. ಮೊಹರಮ್ ಆಚರಣೆಯನ್ನು ಉಲ್ಲೇಖಿಸುತ್ತವೆ. ಈ ಪೂರ್ವಗ್ರಹಗಳು ರಾಜಕೀಯವಾಗಿಯೂ ಕೆಲಸ ಮಾಡುವಂತಹವು. ಇವುಗಳಿಗೆ ಉತ್ತರಿಸುವುದು ಕೂಡ ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಒಂದು ಅಗತ್ಯವಾಗಿದೆ'[೭]

ಇದಕ್ಕೆ ಉತ್ತರ ಕರ್ನಾಟಕ ಸಂಸ್ಕೃತಿಯಲ್ಲಿಯೇ ಇದೆ. 'ಕರ್ನಾಟಕ ಸಂಸ್ಕೃತಿ ಎಂದರೆ, ಈ ನಾಡಿನಲ್ಲಿ ಬದುಕುತ್ತಿರುವ ಎಲ್ಲ ಜನ ಸಮುದಾಯಗಳ ಚಿಂತನೆ ಮತ್ತು ನಡಾವಳಿಗಳ ರೀತಿ ಎಂದು ಒಪ್ಪಿಕೊಂಡಲ್ಲಿ, ಕನ್ನಡ ಭಾಷೆಯೊಂದನ್ನೇ ಅಥವಾ ವೈದಿಕ 'ಹಿಂದೂ' ಮತವೊಂದನ್ನೇ ನೆಚ್ಚುವುದು ನಿಲ್ಲುತ್ತದೆ. ಆಗ ಉರ್ದು, ಕೊಂಕಣಿ ತುಳುವಿನಂಥ ಭಾಷೆಗಳಿಂದ ಹಿಡಿದು ಲಿಪಿಯೇ ಇಲ್ಲದ ಲಂಬಾಣಿ ಹಕ್ಕಿಪಿಕ್ಕಿಗಳ ಭಾಷೆಯ ತನಕ ಅರಿವನ್ನು ಹುಡುಕುವ ಕೆಲಸ ಶುರುವಾಗಬಹುದು. ಅಕ್ಷರದೊಳಗಿನ ಜ್ಞಾನವನ್ನೇ ನೆಚ್ಚಿ ಮಾತನಾಡುವ ಚಟ ನಿಂತು, ಅಪಾರವಾಗಿರುವ ಮೌಖಿಕ ಪರಂಪರೆಯ ಅರಿವಿನಲ್ಲಿ ಕರ್ನಾಟಕ ಸಂಸ್ಕೃತಿಯ ಹುಡುಕಾಟ ನಡೆಯಬಹುದು. ಎಲ್ಲ ಭಾಷೆ ಮತ್ತು ಧರ್ಮಗಳನ್ನು ಒಳಗೊಂಡರೂ ಭಾಷೆ-ಧರ್ಮಗಳ ಗಡಿಮೀರಿದ ಸಂಸ್ಕೃತಿಯನ್ನು ರೂಪಿಸಲು ಆಗ ಸಾಧ್ಯವಾಗುತ್ತದೆ'[೮]

ಮೀರುವ ಕ್ರಿಯೆ – ಕನ್ನಡ ಮನಸ್ಸಿನ ಬಹುಮುಖ್ಯ ಗುಣಲಕ್ಷಣವಾಗಿದೆ. ಮಲಿನತೆಯನ್ನು ಮೀರಿ ಮಾನವೀಯವಾಗುತ್ತ ಬಂದದ್ದು ಕನ್ನಡ ಮನಸ್ಸು, ಒಳಗಿರುವ ವಿವಿಧ ಶಕ್ತಿ ಸಂಘರ್ಷಗಳ ನಡುವೆ, ವಿವೇಕ ಮತ್ತು ಔಚಿತ್ಯದ ಅಂಶಗಳನ್ನು ತನ್ನದಾಗಿಸಿಕೊಳ್ಳುತ್ತ, ಜೀವವಿರೋಧಿ ನಿಲುವುಗಳನ್ನು ನಿರಾಕರಿಸುತ್ತ ಜೀವಪರ ಧಾರೆಯನ್ನು ಸ್ವೀಕರಿಸುತ್ತ ವಿಕಾಸಗೊಂಡದ್ದು ಕನ್ನಡ ಮನಸ್ಸು.[೯] ಹೀಗಿರುವಾಗಲೂ ಯಾರಿಗಾದರೂ ತಮ್ಮ ಮಾತೃಭಾಷೆಯಲ್ಲಿ ಗುರುತಿಸಿಕೊಳ್ಳಲು ಹಿಂಜರಿವ ಸ್ಥಿತಿ ಯಾಕಾಗಿ ಬರುತ್ತದೆ? ಯುವ ತಲೆಮಾರಿನ ಒಂದು ವರ್ಗ ಯಾಕೆ ಕನ್ನಡವನ್ನು

ತಮ್ಮ ಐಡೆಂಟಿಟಿಯಾಗಿ ಬಳಸಲು ಹಿಂಜರಿಯುತ್ತಿದ್ದಾರೆ? ಈ ಯುವ ತಲೆಮಾರು ಯಾವುದು? ಕನ್ನಡದೊಂದಿಗೆ ಬಂದ ಸಾಮಾಜಿಕ ಕ್ರೌರ್ಯಗಳಿಗೆ ತುತ್ತಾದ ದಲಿತರೇ? ಕನ್ನಡವನ್ನು ಹಿಂದೂಧರ್ಮದ ಮತೀಯ ಚೌಕಟ್ಟಿನೊಳಗೆ ಸೇರಿಸುವ ಪ್ರಯತ್ನಗಳಿಂದ ಕಂಗೆಟ್ಟ ಅಲ್ಪಸಂಖ್ಯಾತ ಸಮುದಾಯದವರೇ? ಕನ್ನಡದ ಯಜಮಾನ್ಯದಿಂದ ಬೇಸತ್ತ ತುಳು, ಲಂಬಾಣಿಯಂತಹ ಕರ್ನಾಟಕದ ಇತರ ಭಾಷಿಕರೇ? ಇಂಗ್ಲಿಶಿನಿಂದ ಆಧುನಿಕ ಸೌಕರ್ಯಗಳನ್ನು ಪಡೆದ ಮೇಲ್ಜಾತಿಯವರೇ? ಇವರನ್ನೆಲ್ಲ ಕನ್ನಡದ ಮಡಿಲಿಗೆ ಮರಳಿ ತರುವ ಪ್ರಯತ್ನ ಹೇಗೆ? ಕನ್ನಡದ ಪ್ರಾಚೀನತೆ, ವೈಭವ ಸಾರುವ ಉತ್ಸವಗಳು, ಪ್ರಚಾರಗಳು ಈ ಸಮಸ್ಯೆಗೆ ಪರಿಹಾರವಲ್ಲ. ಆರೋಗ್ಯಕರ ಸಂಗತಿಯೆಂದರೆ ಕರ್ನಾಟಕದಲ್ಲಿ ಹುಸಿ ವೈಭವ ಮತ್ತು ವಾಸ್ತವಗಳ ನಡುವೆ ಅರ್ಥಪೂರ್ಣ ಮುಖಾಮುಖಿ ನಡೆಯುತ್ತಿರುತ್ತದೆ. ಇಂತಹ ಮುಖಾಮುಖಿಗಳು ನಿರಂತರವಾಗಬೇಕು. ಕನ್ನಡವನ್ನು ಮಾತನಾಡುವವರು ಜೀವಂತ ಮನುಷ್ಯರೇ ಎಂದು ಭಾವಿಸಿ ಅವರು ಕನ್ನಡದಿಂದ ದೂರ ಹೋಗುತ್ತಿರುವುದಕ್ಕೆ ಕಾರಣಗಳನ್ನು ಅರಿತು ಅದಕ್ಕೆ ಸ್ಪಂದಿಸುವುದೇ ಸರಳ ಮತ್ತು ಶಾಶ್ವತ ಪರಿಹಾರ. ಭಾಷೆಯಾಡುವ ಜನರ ಬದುಕು ಸಹನೀಯವಾಗದೆ ಕೇವಲ ಆ ಭಾಷೆಗೆ ಭವಿಷ್ಯವಿಲ್ಲ. ಕನ್ನಡವೂ ಇದಕ್ಕೆ ಹೊರತಲ್ಲ.

೧೦.೨ ಕನ್ನಡ ಅಸ್ಮಿತೆಯ ನಿರ್ದೇಶಕ ತತ್ವಗಳು

ಸ್ವಸ್ಥ ಸಮಾಜ ಮತ್ತು ಭಾಷೆಯನ್ನು ಅಭಿನ್ನವಾಗಿ ಗ್ರಹಿಸಿರುವ ಕನ್ನಡ ವಿಚಾರ ಸಾಹಿತ್ಯ ಸೂಚಿಸುತ್ತಿರುವ ಕನ್ನಡ ಅಸ್ಮಿತೆಯ ಐದು ನಿರ್ದೇಶಕ ತತ್ವಗಳನ್ನು ಈ ಅಧ್ಯಯನ ಗುರುತಿಸಿದೆ. ಅವುಗಳೆಂದರೆ: ೧. ಪ್ರಜಾಪ್ರಭುತ್ವಕ್ಕೆ ಸಂವಾದಿ ೨. ಸಮುದಾಯ ಪ್ರಜ್ಞೆ ೩. ಬುದ್ಧಿಪ್ರಧಾನ ೪. ಜಂಗಮರೂಪಿ ೫. ದೇಶಿಯತೆ.

ಕನ್ನಡ ಅಸ್ಮಿತೆಯ ಮೇಲ್ಕಂಡ ಐದು ನಿರ್ದೇಶಕ ತತ್ವಗಳನ್ನು ಈ ಮುಂದೆ ವಿವರಿಸಲಾಗಿದೆ.

೧. **ಪ್ರಜಾಪ್ರಭುತ್ವಕ್ಕೆ ಸಂವಾದಿ** : ಪ್ರಜಾಪ್ರಭುತ್ವಕ್ಕೆ ಸಂವಾದಿಯಾಗಿ ಕನ್ನಡ ಭಾಷೆ ಎಂಬುದನ್ನು ಗ್ರಹಿಸಬೇಕು. ಪ್ರಜಾಪ್ರಭುತ್ವಕ್ಕೆ ಎರವಾದ ಸಂಗತಿಗಳು ಘಟಿಸುತ್ತಿರುವಾಗ ಪ್ರಜಾಪ್ರಭುತ್ವ ನಶಿಸುತ್ತಿರುವದರ ಬಗ್ಗೆ ಚಕಾರ ಎತ್ತದೆ ಕೇವಲ ಭಾಷಾ ಕೇಂದ್ರಿತವಾಗಿ ಚಿಂತಿಸಿದರೆ ಅದು ಆತ್ಯಂತಿಕವಾಗಿ ಕನ್ನಡ ಭಾಷೆಯ ಹಿತವನ್ನೂ ಕಾಯಲಾರದು.[೧೦] ಕನ್ನಡಜನಗಳ ಪಾಲಿಗೆ ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ಮಾಡಬಲ್ಲ ಭಾಷೆ ಕನ್ನಡವೊಂದೇ.[೧೧]

೨. ಸಮುದಾಯ ಪ್ರಜ್ಞೆ : ಕನ್ನಡ ಸಮಾಜ ಅನ್ನೋದು ಹಲವಾರು ಉಪಸಂಸ್ಕೃತಿಗಳ ಸಡಿಲವಾದ ಒಂದು ಒಕ್ಕೂಟ. ನಾವು ಕರ್ನಾಟಕ ಅಂತ ನಿಜವಾಗಲೂ ಕರೆಯಬೇಕಾಗಿರುವುದು ಇಂತಹ ಹಲವಾರು ಚಿಕ್ಕ ಚಿಕ್ಕ ಸಮುದಾಯಗಳ ಒಕ್ಕೂಟಕ್ಕೆ. ಉದಾಹರಣೆಗೆ ಕರಾವಳಿ ಕನ್ನಡ

ಸಮುದಾಯ, ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯ. ಈ ಯಾವುದೇ ಒಂದು ಭಾಗಕ್ಕೆ, ಸಮುದಾಯಕ್ಕೆ ಅಪಾಯ ಬಂದ್ರೆ ಅದು ಕನ್ನಡಕ್ಕೆ ಆಗಿರೋ ಅಪಾಯ ಅಂತ ಗಮನಿಸಬೇಕು. ಕನ್ನಡದ ಕಾಡುಗಳ ಬಗ್ಗೆ, ಕನ್ನಡದ ನದಿಗಳ ಬಗ್ಗೆ, ಕನ್ನಡದ ರೈತರ ಬಗ್ಗೆ ಯೋಚನೆ ಮಾಡದಿರುವ ಹೋರಾಟ ಕನ್ನಡದ ಹೋರಾಟ ಅಲ್ಲ. ಕನ್ನಡದ ಪ್ರಶ್ನೆಗಳು, ಕನ್ನಡ ಸಮಾಜದ ಪ್ರಶ್ನೆಗಳು ಅಂದ್ರೆ ಕನ್ನಡ ಸಮುದಾಯದ ಪ್ರಶ್ನೆಗಳು. ಕನ್ನಡವನ್ನು ಸಾವಿರಾರು ವರ್ಷ ಕಾಪಾಡಿಕೊಂಡು ಬಂದಂತಹ ಶ್ರಮವರ್ಗದ ಪ್ರಶ್ನೆಗಳೇ ಕನ್ನಡದ ಪ್ರಶ್ನೆಗಳು.[೧೨] ಕನ್ನಡದ ಪರವಾಗಿ ಇರುವುದು ಎಂದರೆ ವಚನಕಾರರು ಚಿಂತಿಸಿದಂತೆ[೧೩] ಸ್ಥಳೀಯ ಸಮುದಾಯದ ಆಶೋತ್ತರಗಳ ಪರವಾಗಿ ಇರುವುದು.[೧೪]

೩. ಬುದ್ಧಿಪ್ರಧಾನ : 'ಭಾವಪ್ರಧಾನ' ಆಂಶಗಳತ್ತಲೇ ಕನ್ನಡ ಅಸ್ಮಿತೆಯ ಒತ್ತು ಬಿದ್ದಿರುವುದು ಕನ್ನಡ, ಕರ್ನಾಟಕದ ಆರೋಗ್ಯಕರ ಬೆಳವಣಿಗೆಯ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರಿದೆ. 'ಭಾವಪ್ರಧಾನ' ಅಂಶಗಳಿಗಿಂತ 'ಬುದ್ಧಿಪ್ರಧಾನ' ವೈಚಾರಿಕತೆ ಭಾಷೆಯನ್ನು ಆರೋಗ್ಯಕರವಾಗಿ ಬೆಳೆಸುತ್ತದೆ. ಈ ಕುರಿತ ಚಿಂತನೆಗಳು ಗೋವಿಂದ ಪೈ[೧೫], ಶಿವರಾಮ ಕಾರಂತ[೧೬], ಗೌರೀಶ ಕಾಯ್ಕಿಣಿ[೧೭] ಅವರು ಸೇರಿದಂತೆ ಹಲವು ಕನ್ನಡ ಸಾಹಿತಿಗಳಲ್ಲಿ ಕಾಣುತ್ತವೆ.

೪. ಜಂಗಮ ಸ್ವರೂಪಿ : ವಸಾಹತುಶಾಹಿ ಕಥನಗಳು ಮತ್ತು ಗತಕಾಲವನ್ನೇ ವಿಜೃಂಭಿಸುವ ಪುನರುತ್ಥಾನವಾದಿ ಕಥನಗಳಿಗೆ ಬದಲಾಗದೇ ಇರುವ ಜಡ, ನಿಶ್ಚಲ ಚಿತ್ರಗಳೇ ಬೇಕು. ಯಾವುದೋ ಕಾಲದಲ್ಲೋ, ದೇಶದಲ್ಲೋ ಸ್ಥಗಿತವಾಗಿರೋದನ್ನು ಅದು ಒಪ್ಪಿಕೊಳ್ಳುತ್ತದೆ. ಕನ್ನಡದ ಅತ್ಯುತ್ತಮ ಸೃಷ್ಟಿಶೀಲ ಮನಸ್ಸುಗಳು ಈ ಬಗೆಯ ನಿಶ್ಚಲಸ್ವರೂಪಿ ಕಥನಗಳನ್ನು ಒಪ್ಪಿಕೊಳ್ಳುವುದಿಲ್ಲ.[೧೮] ಕನ್ನಡ ಅಸ್ಮಿತೆ ಎನ್ನುವುದು ಜಂಗಮ ಸ್ವರೂಪಿ. ನಾಡಿಗೆ ಒಂದು ಅಸ್ಮಿತೆ ಕೊಡುವ ಸಂದರ್ಭದಲ್ಲಿ ಬಹಳ ನಿರ್ದಿಷ್ಟವಾಗಿ ಅದನ್ನು ಒಂದು ರಾಜಕೀಯ ಸ್ಥಿತಿಯಾಗಿ ನೋಡಿದರೆ ಅಪಾಯವಿದೆ. ಆ ಕನ್ನಡದ ಗುರುತು ಎನ್ನುವ ಕಲ್ಪನೆ ಆಕ್ರಮಣಶೀಲವಾಗಬಹುದು. ಅದು ಅನ್ಯರನ್ನು ಬಹಳ ಅಸಹನೆಯಿಂದ ಕಾಣಬಹುದು. 'ನಾವು ಎದುರಿಗೆ ಕಾಣುವುದು ಇದೇ ಕನ್ನಡ, ಇದೇ ಕರ್ನಾಟಕ, ಇದು ಹೀಗೆ, ಇದೇ ಕನ್ನಡ' ಎಂದು ವಾದ ಮಾಡುವುದಕ್ಕೆ ಶುರುಮಾಡಿದರೆ ನಮ್ಮ ಗುರುತಿನ ಹುಡುಕಾಟದಲ್ಲಿ ಅದು ಇತರರ ಮೇಲೆ ಅಸಹನೆಯನ್ನು ತೋರಬಹುದು. ಆದ್ದರಿಂದ ಕನ್ನಡ ಅನ್ನೋದು ಇನ್ನೂ ಆಗಿಲ್ಲದಂತಹ ಸ್ಥಿತಿ, ಕನ್ನಡ ನಾಡು ಅಂದ್ರೆ ನಾವು ಯಾವಾಗಲೂ ಕನಸು ಕಾಣೋ ಸ್ಥಿತಿ.[೧೯] ಕನ್ನಡ ಭಾಷಿಕರು ಮೆಟ್ಟುವ ನೆಲವೇ ಕರ್ನಾಟಕ, 'ಕನ್ನಡ ಕಾವ್ಯಗಳನ್ನೋದುವಾತನು ಅಮೆರಿಕೆಯಲ್ಲಿದ್ದರೂ ಅದು ಕರ್ನಾಟಕವೇ. 'ಪಂಪನನೋದುವ ನಾಲಗೆ' ಮಿಸಿಸಿಪಿ ಹೊಳೆಯ ನೀರನ್ನು ಈಂಟಿದರೂ ಕಾವೇರಿಯೆ.[೨೦] ಮೂಲತಃ ಕನ್ನಡವು ಪರಿಭಾವಿಸುವ ಒಂದು ಕ್ರಿಯೆ. [೨೧]

೫. ದೇಶಿಯತೆ ಪರ : ಕನ್ನಡ ಅಸ್ಮಿತೆ ಎಲ್ಲಿಲ್ಲಿ ಕನ್ನಡ ಎನ್ನುವ 'ಭಾಷೆ'ಗೆ ಸೀಮಿತವಾಗಿದೆಯೋ ಅಲ್ಲೆಲ್ಲ ಅದು ಭಾಷೆ ಕುರಿತ ಭಾವನಾತ್ಮಕ ಸಂಗತಿಯಾಗುತ್ತಾ ಹುಸಿ–ನಿಜದ ಕಲಸುಮೇಲೋರಗದ ವೈಭವದ ಗತದ ನೆನಕೆಯಲ್ಲಿ ವಾಸ್ತವದ ಸ್ಥಿತಿಗೆ ಸ್ವಮರುಕ ಪಡುವುದಕ್ಕೆ ಸೀಮಿತವಾಗುತ್ತದೆ. ಅದು ಕರ್ನಾಟಕ ಎಂಬ ಜೀವಂತ ಅಸ್ಮಿತೆಗೆ ಜಗಿತ ಕಂಡಾಗ ತನ್ನ ಮಿತಿಗಳನ್ನು ಮೀರುವ ಆತ್ಮಾವಲೋಕನಕ್ಕೆ ದಾರಿ ಮಾಡಿಕೊಡುತ್ತದೆ. ಕನ್ನಡ ಅಸ್ಮಿತೆಯ ಜೀವಂತಿಕೆ ಸಾಕಾರವಾಗುವುದು ಮತ್ತು ವಿಕಾಸ ಪಡೆಯುವುದು ಕರ್ನಾಟಕ ಅಸ್ಮಿತೆಯ ಜತೆ ಜತೆಯಲ್ಲಿಯೇ. ಕನ್ನಡ ಅಸ್ಮಿತೆ 'ಭಾಷೆಗೆ' ಸೀಮಿತವಾದಂತೆಲ್ಲ ಭಾಷೆಯಾಗಿಯೂ ಅದು ಹಿನ್ನಡೆಯನ್ನು ಅನುಭವಿಸುತ್ತದೆ. ಒಂದು ನಾಡಿನ ಜನರ ಸಾಮಾಜಿಕ ಆರ್ಥಿಕ ಬದುಕು ನೆಟ್ಟಗಾಗದೆ ಆ ನಾಡಿನ ಸಂಸ್ಕೃತಿಯ ಚರ್ಚೆಗೆ ಏನೂ ಅರ್ಥವಿಲ್ಲ.[೨೨] ಕನ್ನಡ ಅಸ್ಮಿತೆ ಎಂದರೆ ಈ ನಾಡಿನಲ್ಲಿ ಬದುಕುತ್ತಿರುವ ಎಲ್ಲ ಜನಸಮುದಾಯಗಳ ಚಿಂತನೆ ಮತ್ತು ನಡಾವಳಿಗಳ ರೀತಿ. ಕನ್ನಡದ ಪರವಾಗಿ ಇರುವುದು ಎಂದರೆ ವಚನಕಾರರು ಚಿಂತಿಸಿದಂತೆ[೨೩] ದೇಶೀಯತೆಯ ಪರವಾಗಿ ಇರುವುದು.[೨೪]

ಟಿಪ್ಪಣಿಗಳು

೧. ಪುರುಷೋತ್ತಮ ಬಿಳಿಮಲೆ, ವಾರ್ತಾಭಾರತಿ, ಮಾರ್ಚ್೨೧, ೨೦೧೬

೨. ಗಣೇಶ್ ಎನ್ ದೇವಿ, ಪ್ರಜಾವಾಣಿ, ಆಗಸ್ಟ್ ೬, ೨೦೧೭

೩. ನಾರಾಯಣ ಕೆ.ವಿ., ಕನ್ನಡ ಜಗತ್ತು – ಅರ್ಧ ಶತಮಾನ, ಪು. ೩೩೧

೪. ಅದೇ, ಪು. ೩೩೧

೫. ಅದೇ, ಪು. ಪು. ೩೨೧

೬. ರಹಮತ್ ತರೀಕೆರೆ, ನೇತು ಬಿದ್ದ ನವಿಲು, ಪು. ೯

೭. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಪು. ೧೫

೮. ರಹಮತ್ ತರೀಕೆರೆ, ಪ್ರತಿ ಸಂಸ್ಕೃತಿ, ಪು. ೬೧

೯. ಬರಗೂರು ರಾಮಚಂದ್ರಪ್ಪ, ಕನ್ನಡಪ್ರಜ್ಞೆ, ಪು. ೪೪

೧೦. ಸುಬ್ಬಣ್ಣ. ಕೆ.ವಿ., ಅರೆ ಶತಮಾನದ ಅಲೆ ಬರಹಗಳು, ಪು. ೧೮೮

೧೧. ಶಿವರಾಮ ಕಾರಂತ, ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣಗಳು, ಸಂಪುಟ: ೩, ಪು. ೬೧

೧೨. ರಾಜೇಂದ್ರ ಚೆನ್ನಿ, ಅಸಮಗ್ರ, ಪು. ೧೬೩,೪

೧೩. ರಹಮತ್ ತರೀಕೆರೆ, ಕನ್ನಡ ಸಾಹಿತ್ಯ ವಾಗ್ವಾದಗಳು, ಪು. ೨೦೮

೧೪. ರಹಮತ್ ತರೀಕೆರೆ, ಪ್ರತಿ ಸಂಸ್ಕೃತಿ, ಪು. ೬೧

೧೫. ಗೋವಿಂದ ಪೈ. ಎಂ., ಕನ್ನಡದ ಮೊರೆ, ಪು. ೬೩,೬೪

೧೬. ಶಿವರಾಮ ಕಾರಂತ, ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣಗಳು, ಸಂಪುಟ:೩, ಪು. ೬೧

೧೭. ಗೌರೀಶ ಕಾಯ್ಕಿಣಿ, ಗೌರೀಶ ಕಾಯ್ಕಿಣಿ ಅವರ ಆಯ್ದ ಲೇಖನಗಳು, (ಸಂ) ವಿಷ್ಣುನಾಯ್ಕ, ಪು. ೬, ೭

೧೮. ರಾಜೇಂದ್ರ ಚೆನ್ನಿ, ಅಸಮಗ್ರ, ಪು. ೧೮೪

೧೯. ಅದೇ, ಪು. ೧೫೬

೨೦. ಕುವೆಂಪು, ಸಮಗ್ರ ಗದ್ಯ, ಸಂಪುಟ-೨, ಪು. ೧೪೪

೨೧. ರಾಜೇಂದ್ರ ಚೆನ್ನಿ, ಅಸಮಗ್ರ, ಪು. ೧೫೫

೨೨. ರಹಮತ್ ತರೀಕೆರೆ, ಪ್ರತಿ ಸಂಸ್ಕೃತಿ, ಪು. ೬೨,೨೦೮

೨೩. ರಹಮತ್ ತರೀಕೆರೆ, ಕನ್ನಡ ಸಾಹಿತ್ಯ ವಾಗ್ವಾದಗಳು, ಪು. ೨೦೮

೨೪. ರಹಮತ್ ತರೀಕೆರೆ, ಪ್ರತಿ ಸಂಸ್ಕೃತಿ, ಪು. ೬೧

ಅಧ್ಯಾಯ ೧೧

ಸಮಾರೋಪ

೧೧.೧ ಅಧ್ಯಯನದ ಪ್ರಮುಖ ಫಲಿತಗಳು

೧೧.೨ ತೊಡಕು ಮತ್ತು ಸಾಧ್ಯತೆ

ಅಧ್ಯಯನ ಸೂಚಿ

ಅಧ್ಯಾಯ ೧೧

ಸಮಾರೋಪ

'ಕನ್ನಡ ವಿಚಾರ ಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯ ಹುಡುಕಾಟದ ನೆಲೆಗಳು' ಎಂಬ ಈ ಅಧ್ಯಯನ ಆರು ಭಿನ್ನ ಚಿಂತನಾಧಾರೆಗಳು ಕನ್ನಡ ಅಸ್ಮಿತೆಯನ್ನು ಕುರಿತು ಚಿಂತಿಸಿರುವ ಕ್ರಮವನ್ನು ಅರಿಯಲು ಯತ್ನಿಸಿದೆ. 'ಸಾಹಿತ್ಯಕ ನೆಲೆ', 'ಮೂಲಭೂತವಾದಿ ನೆಲೆ', 'ಸಾಂಸ್ಕೃತಿಕ ಹುಡುಕಾಟದ ನೆಲೆ', 'ಜನಪ್ರಿಯ ನೆಲೆ', 'ದ್ರಾವಿಡ ಶೋಧದ ನೆಲೆ' ಹಾಗೂ 'ಸಾಮಾಜಿಕ ನೆಲೆ' ಎಂಬ ಈ ಚಿಂತನಾಧಾರೆಗಳ ಚಿಂತನೆಗಳು ಕನ್ನಡಭಾಷೆಯತ್ತ ಮುಖ ಮಾಡಿರುವಂತೆ ತೋರಿದರೂ ಆಳದಲ್ಲಿ ಅವುಗಳ ಆಸಕ್ತಿ ಜನರ ಬದುಕನ್ನು ಕುರಿತದ್ದೇ ಆಗಿದೆ. ಈ ಎಲ್ಲ ಚಿಂತನಾಧಾರೆಗಳಲ್ಲಿ 'ಮೂಲಭೂತವಾದಿ ನೆಲೆ' ಕೊಂಚ ಭಿನ್ನವಾಗಿ ನಿಂತಂತೆ ತೋರಿದರೂ ಅದರ ಮೂಲದಲ್ಲಿ ಇರುವುದು ಜನರ ಬದುಕೇ. ಮೇಲ್ನೋಟಕ್ಕೆ ಅದು ಇಡೀ ಕನ್ನಡ ಭಾಷಿಕರನ್ನು ಕುರಿತು ಚಿಂತಿಸುತ್ತಿದೆ ಎನಿಸಿದರೂ ಮೊದಲ ಹಂತದ ವಿಶ್ಲೇಷಣೆಯಲ್ಲಿಯೇ ಅದು ನಿರ್ದಿಷ್ಟ ವರ್ಗದ ಜನರ ಬದುಕನ್ನು ಕುರಿತದ್ದು ಎನ್ನುವುದು ಖಚಿತವಾಗುತ್ತದೆ. ಇದು ಅದರ ಮಿತಿ. ಉಳಿದ ಚಿಂತನಾಧಾರೆಗಳಿಗೆ ಹೋಲಿಸಿದರೆ ದ್ರಾವಿಡ ನೆಲೆಯ ಚಿಂತನಾಧಾರೆ ಹೆಚ್ಚು ವೈಜ್ಞಾನಿಕವಾದದ್ದು. ಭಾವನಾತ್ಮಕ ಸಂಗತಿಗಳನ್ನು ದೂರವೇ ಇಡುವ ವಿಜ್ಞಾನದ ಮಿತಿ ಈ ಚಿಂತನಾಧಾರೆಗಿದ್ದರೂ, ಭಾವುಕವಾಗಿ ನೋಡದ ಕಾರಣಕ್ಕಾಗಿಯೇ ವಸ್ತುನಿಷ್ಠತೆ ಸಾಧ್ಯವಾಗಿದೆ.

೧೧.೧ ಅಧ್ಯಯನದ ಪ್ರಮುಖ ಫಲಿತಗಳು

'ಕನ್ನಡ ವಿಚಾರ ಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯ ಹುಡುಕಾಟದ ನೆಲೆಗಳು' ಎಂಬ ವಿಷಯದ ಮೇಲೆ ನಡೆಸಲಾದ ಪ್ರಸ್ತುತ ಅಧ್ಯಯನದಲ್ಲಿ ಮೂಡಿಬಂದ ಫಲಿತಗಳನ್ನು ವಿಶಾಲನೆಲೆಯಲ್ಲಿ ಭಾಷಿಕ, ಸಾಮಾಜಿಕ, ರಾಜಕೀಯ, ಸಾಹಿತ್ಯಿಕ ಮತ್ತು ಧಾರ್ಮಿಕ ನೆಲೆಗಳೆಂಬ ೫ ವಿಭಾಗಗಳಲ್ಲಿ ವಿಂಗಡಿಸಿ ಇಲ್ಲಿ ಮಂಡಿಸಲಾಗಿದೆ.

ಭಾಷಿಕ ನೆಲೆ

೧. ವಿವಿಧ ಕನ್ನಡ ಚಿಂತಕರ ಕನ್ನಡ ಅಸ್ಮಿತೆಯ ಹಿಂದಿನ ತಾತ್ವಿಕ ನೆಲೆಗಳು ಭಿನ್ನ ಭಿನ್ನವಾಗಿವೆ. ಈ ತಾತ್ವಿಕ ನೆಲೆಗಳ ಭಿನ್ನತೆಗೆ ಪ್ರಭಾವ ಬೀರಿರುವ ಸಂಗತಿಗಳೆಂದರೆ, ಈ ಚಿಂತಕರ ಸಾಮಾಜಿಕ ಹಿನ್ನೆಲೆ, ಸಿದ್ಧಾಂತ, ಜೀವಿಸಿದ ಕಾಲಘಟ್ಟ, ಜೀವಿಸಿದ ಪ್ರದೇಶ, ಪ್ರಭಾವ ಬೀರಿದ ವ್ಯಕ್ತಿಗಳು ಹಾಗೂ ಅವರ ವೃತ್ತಿ. ಇದರೊಂದಿಗೆ ಆ ಚಿಂತಕರನ್ನು ಪ್ರಭಾವಿಸಿದ ಕನ್ನಡ ಸಾಹಿತ್ಯ ಮತ್ತು ಭಾಷೆ ಕುರಿತಂತೆ ಅವರು ನಡೆಸಿದ ಪ್ರಯೋಗಗಳು ಸಹ ಕಾರಣವಾಗಿರುತ್ತವೆ. ಕನ್ನಡ

ಅಸ್ಮಿತೆಯ ವಿಶಿಷ್ಟ ಮಾದರಿಯೊಂದನ್ನು ರೂಪಿಸುವ ಕ್ರಿಯೆ ಇದಾಗಿದೆ. ಒಬ್ಬರೇ ಚಿಂತಕರ ಚಿಂತನೆಗಳ ನೆಲೆ ಕಾಲಘಟ್ಟಗಳಲ್ಲಿ ಬದಲಾದದ್ದನ್ನೂ ನಾವು ಗಮನಿಸಬಹುದು. ಉದಾಹರಣೆಗೆ ಐವತ್ತರ ದಶಕದಲ್ಲಿ ಸಾಂಸ್ಕೃತಿಕ ನೆಲೆಯಲ್ಲಿದ್ದ ಅನಂತಮೂರ್ತಿ ಅವರ ಚಿಂತನೆಗಳು, ಕಳೆದ ಶತಮಾನದ ಕೊನೆಯ ದಶಕಗಳಲ್ಲಿ ಸಾಮಾಜಿಕ ನೆಲೆಗೆ ಬದಲಾದದ್ದನ್ನೂ ನಾವು ಗುರುತಿಸಬಹುದು. ಜಾಗತೀಕರಣ ಭಾಷೆ ಮೇಲೆ ಬೀರಿದ ಗಾಢ ಪ್ರಭಾವಗಳು, ಬದಲಾದ ಕಾಲಘಟ್ಟದಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತ್ಯಂತರಗಳೂ, ಕನ್ನಡ ಚಳುವಳಿಗಳ ಜೊತೆಗಿನ ಭಿನ್ನಮತಗಳೂ, ಹುಟ್ಟಿಕೊಂಡ ಜನಪರ ಕಾಳಜಿಗಳೂ ಇಂತಹ ಬದಲಾವಣೆಗೆ ಕಾರಣವಾಗಿವೆ.

೨. ನಾಡಿನ ಭಾಷಿಕ ಅಸ್ಮಿತೆಯನ್ನು ಪ್ರತಿಷ್ಠೆಯನ್ನಾಗಿಸಿಕೊಂಡ ಸಮುದಾಯಗಳು ಹುಸಿ ಅಸ್ಮಿತೆಯ ನಾಶದ ಆತಂಕದಲ್ಲಿರುತ್ತವೆ. ಇದನ್ನು 'ಹುಸಿ ಅಸ್ಮಿತೆಯ ನಾಶದ ಆತಂಕ' ಎಂದು ಗುರುತಿಸುತ್ತಿರುವುದು ಏಕೆಂದರೆ ಸ್ವತಃ ಇಂತಹ ಆತಂಕ ಹೊಂದಿದ ಸಮುದಾಯಗಳನ್ನೂ ಒಳಗೊಂಡಂತೆ ಈ ಭಾಷೆ ಜನಬಳಕೆಯಲ್ಲಿರುವುದಿಲ್ಲ. ಜೀವಂತಭಾಷೆಯಾದ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯದ ಭಾಷೆಗಳ ಉಳಿವಿಗೆ ಯಾವ ಪ್ರಯತ್ನವೂ ನಡೆಯದ ಸಮಯದಲ್ಲಿಯೇ ಒಂದು ಕಾಲಘಟ್ಟದಲ್ಲಿ ಪ್ರಭುತ್ವದ ಭಾಷೆಗಳಾಗಿದ್ದು, ವರ್ತಮಾನದಲ್ಲಿ ಜನಬಳಕೆಯಲ್ಲಿಲ್ಲದ ಭಾಷೆಗಳು ತಮ್ಮ 'ರಕ್ಷಣೆ'ಗೆ ಸಾಂಸ್ಥಿಕ ನೆರವನ್ನು ಪಡೆಯಬಲ್ಲ ವೈರುಧ್ಯದ ವಿದ್ಯಮಾನಗಳು ನಡೆಯುತ್ತವೆ. ಒಂದು ಭಾಷೆ ಪ್ರತಿಷ್ಠಿತ ಎನಿಸಿಕೊಳ್ಳಲು ಅಥವಾ ನಿರ್ಲಕ್ಷ್ಯಕ್ಕೆ ಒಳಗಾಗಲು ನಿರ್ಣಾಯಕವಾಗಿರುವುದು ಆ ಭಾಷೆ ಎಷ್ಟು ಜೀವಂತವಾಗಿದೆ ಎನ್ನುವುದಕ್ಕಿಂತ ಅದು ಯಾವ ವರ್ಗದ್ದು ಮತ್ತು ಪ್ರಭುತ್ವದ ಮೇಲೆ ಅದರ ಪ್ರಭಾವದ ಸ್ವರೂಪವೇನು ಎಂಬುದು. ಕರ್ನಾಟಕದ ಸಂದರ್ಭದಲ್ಲಿ ಕನ್ನಡದ ಸಹಭಾಷೆಗಳಾಗಿರುವ ಹಕ್ಕಿಪಿಕ್ಕಿ, ಬ್ಯಾರಿ, ಕೊಡವ, ಲಂಬಾಣಿ ಮುಂತಾದ ಜನಭಾಷೆಗಳ ಮತ್ತು ವರ್ತಮಾನದಲ್ಲಿ ಜನಬಳಕೆಯಲ್ಲಿಲ್ಲದ ಸಂಸ್ಕೃತ ಭಾಷೆಗಳ ವಿಚಾರದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಇದಕ್ಕೆ ಸಾಕ್ಷಿಯಾಗಿವೆ. ದಲಿತ-ಬಂಡಾಯದ ಚಿಂತಕರು ತಮ್ಮ ವಿಚಾರ ಸಾಹಿತ್ಯದಲ್ಲಿ ಈ ಕುರಿತ ಚರ್ಚೆಯನ್ನು ಮುನ್ನಲೆಗೆ ತಂದಿದ್ದಾರೆ.

೩. ಕನ್ನಡ ಅಸ್ಮಿತೆ ಕುರಿತ ಚಿಂತನಾಧಾರೆಗಳು ಹರಿದುಬಂದ ಕ್ರಮವನ್ನು ಗೆರೆಕೊರೆದಂತೆ ಗುರುತಿಸಲಾಗದಿದ್ದರೂ ಒಟ್ಟಾರೆಯಾಗಿ ಗಮನಿಸಿದಾಗ ಅವುಗಳು ಕ್ರಮವಾಗಿ ಸಾಹಿತ್ಯವಾದಿ ನೆಲೆ, ಭಾಷಾ ಮೂಲಭೂತವಾದಿ ನೆಲೆ, ಸಾಂಸ್ಕೃತಿಕ ಹುಡುಕಾಟದ ನೆಲೆ, ಜನಪ್ರಿಯ ನೆಲೆ, ದ್ರಾವಿಡ ಶೋಧದ ನೆಲೆ, ಮತ್ತು ಜನಕೇಂದ್ರಿತ ಅಥವಾ ಸಾಮಾಜಿಕ ನೆಲೆಗಳಲ್ಲಿ

ಹರಿದುಬಂದಿರುವುದನ್ನು ಗಮನಿಸಬಹುದು. ಈ ನೆಲೆಗಳಿಗೆ ಕಾರಣವಾದದ್ದು ಕನ್ನಡ ಭಾಷೆ ಎದುರುಗೊಂಡ ಆಯಾಯ ಕಾಲಘಟ್ಟದ ಸಾಹಿತ್ಯಿಕ ಹಾಗೂ ಸಾಮಾಜಿಕ ಸಂಕೀರ್ಣತೆಗಳು, ಪ್ರಭುತ್ವದ ನೀತಿಗಳು ಮತ್ತು ಇವುಗಳಿಂದ ಹುಟ್ಟಿದ ಅಪೇಕ್ಷೆಗಳು. ಕನ್ನಡ ಅಸ್ಮಿತೆ ಕುರಿತಾದ ಚಿಂತನಾಧಾರೆಗಳು ೨೦ನೇ ಶತಮಾನದ ಆರಂಭಘಟ್ಟದಲ್ಲಿ ಸಾಹಿತ್ಯಿಕ ನೆಲೆಯಲ್ಲಿ ಆರಂಭಗೊಂಡು ಶತಮಾನದ ಅಂತ್ಯದಲ್ಲಿ ಸಾಮಾಜಿಕ ನೆಲೆಗೆ ಬಂದು ಸೇರಿದಂತೆ ಭಾಸವಾಗುತ್ತದೆ. ಗಮನಿಸಬೇಕಾದ ಸಂಗತಿಯೆಂದರೆ 'ಭಾಷಾ ಮೂಲಭೂತವಾದಿ ನೆಲೆ'ಯೊಂದನ್ನು ಹೊರತುಪಡಿಸಿ ಉಳಿದ ಚಿಂತನಾಧಾರೆಗಳಲ್ಲೆಲ್ಲ ಸಾಮಾಜಿಕ ನೆಲೆಯೂ ಅಂತರ್ಗತವಾಗಿದ್ದು ಆಯಾಯ ಸಂದರ್ಭದ ತುರ್ತಿಗೆ ಸ್ಪಂದಿಸಿ ನಿರ್ದಿಷ್ಟ ಚಿಂತನಾಧಾರೆಗಳು ಮುನ್ನೆಲೆಗೆ ಬಂದಿದ್ದನ್ನು ನೋಡಬಹುದು. ಕಳೆದ ಶತಮಾನದ ವಿವಿಧ ಕಾಲಘಟ್ಟಗಳಲ್ಲಿ ಜರುಗಿದ ಅಖಿಲಭಾರತ ಕನ್ನಡ ಸಾಹಿತ್ಯಸಮ್ಮೇಳನಗಳ ಅಧ್ಯಕ್ಷರ ಭಾಷಣಗಳಲ್ಲಿಯೂ ಇವು ಬಹುಪಾಲು ಮೇಲ್ಕಂಡ ಕ್ರಮದಲ್ಲಿಯೇ ಪ್ರತಿಬಿಂಬಿತವಾಗಿವೆ.

೪. ಕನ್ನಡದ್ದೆಂದು ಗುರುತಿಸಲಾದ ಪ್ರದೇಶಗಳನ್ನು ಆಳಿದ ರಾಜರ ಪರಾಕ್ರಮ, ಕನ್ನಡ ಜನರ ಕಲೆ, ಸಂಸ್ಕೃತಿ, ಸಾಹಿತ್ಯಕ ಸಾಧನೆಗಳನ್ನು ಗುರುತಿಸಿ, ಅವುಗಳ ಬಗೆಗೆ ಅಭಿಮಾನವನ್ನು ಮೂಡಿಸುವ ಮೂಲಕ ಕನ್ನಡ ಪ್ರಜ್ಞೆಯನ್ನು ಸ್ಥಾಪಿಸಬಹುದು ಎನ್ನುವ ವಿಶ್ವಾಸ ಭಾಷಾ ಮೂಲಭೂತವಾದಿ ನೆಲೆ ಮತ್ತು ಜನಪ್ರಿಯ ನೆಲೆಗಳ ಕನ್ನಡ ಅಸ್ಮಿತೆಯ ಚಿಂತಕರಲ್ಲಿ ಗಾಢವಾಗಿದೆ. ಆದುದರಿಂದಲೇ ಈ ನೆಲೆಗಳ ಕನ್ನಡ ಅಸ್ಮಿತೆಯ ಚಿಂತಕರಲ್ಲಿ ಕರ್ನಾಟಕ ಪರಂಪರೆಯ ವೈಭವೀಕರಣ ಸಾಮಾನ್ಯ ಚಹರೆಯಾಗಿದೆ. ಕನ್ನಡ ಅಸ್ಮಿತೆಯ ಸಾಂಸ್ಕೃತಿಕ ಹುಡುಕಾಟದ ನೆಲೆಯ ಚಿಂತಕರು ಕರ್ನಾಟಕ ಪರಂಪರೆಯನ್ನು ವೈಭವೀಕರಿಸದಿದ್ದರೂ ಕರ್ನಾಟಕ ಪರಂಪರೆಯನ್ನು ನೆನಪಿಸುವ ಮೂಲಕ ಕನ್ನಡ ಪ್ರಜ್ಞೆಯನ್ನು ಜಾಗೃತಗೊಳಿಸಬಹುದು ಎನ್ನುವ ತಿಳಿವಳಿಕೆಯಲ್ಲಿ ಅವರಿಗೆ ನಂಬಿಕೆಯಿದೆ. ಪ್ರಜಾಪ್ರಭುತ್ವದ ಕಡು ಸಮರ್ಥಕವಾದ ಸಾಂಸ್ಕೃತಿಕ ಹುಡುಕಾಟದ ನೆಲೆಯ ಕನ್ನಡ ಅಸ್ಮಿತೆ ಆಳಿಹೋದ ರಾಜಪ್ರಭುತ್ವಗಳನ್ನು 'ಭಾಷಾಜನಪದದ ಸಾರ್ವಭೌಮತ್ವ'ಗಳೆಂದು ಗುರುತಿಸುವುದೂ ಕನ್ನಡವನ್ನು ಉಳಿಸಿ ಬೆಳೆಸಿದ ಅನಕ್ಷರಸ್ಥ ಸಮುದಾಯವನ್ನು ಕೃತಜ್ಞತೆಯಿಂದ ನೆನೆಯುವುದೂ, ಇಂತಹ ನಂಬಿಕೆಯ ಕಾರಣದಿಂದಾಗಿಯೇ. ಸಮಕಾಲೀನ ಕನ್ನಡ ಜೀವನದ ಅಸಮಾನತೆಯ ನೆಲೆಗಳಿಗೆ ಕಾರಣವಾದ ಸಂಗತಿಗಳು ಕನ್ನಡ ಪರಂಪರೆಯಲ್ಲಿರುವುದನ್ನು ಗುರುತಿಸಿರುವ ಸಾಮಾಜಿಕ ನೆಲೆಯ ಕನ್ನಡ ಚಿಂತಕರು ಈ ಕುರಿತ ಪ್ರಶ್ನೆಗಳನ್ನು ಮುನ್ನೆಲೆಗೆ ತಂದಿದ್ದಾರೆ.

೫. ಸಾಹಿತ್ಯವಾದಿ ನೆಲೆ, ಸಾಂಸ್ಕೃತಿಕ ಹುಡುಕಾಟದ ನೆಲೆ, ದ್ರಾವಿಡಶೋಧದ ನೆಲೆ ಮತ್ತು ಜನಕೇಂದ್ರಿತ ನೆಲೆಗಳು ಪ್ರತಿಪಾದಿಸಿದ 'ಬುದ್ಧಿಪ್ರಧಾನ' ವೈಚಾರಿಕತೆಗೆ ಬದಲಾಗಿ ಭಾಷಾ ಮೂಲಭೂತವಾದಿ ನೆಲೆ ಮತ್ತು ಜನಪ್ರಿಯ ನೆಲೆಗಳು ಪ್ರತಿಪಾದಿಸಿದ 'ಭಾವಪ್ರಧಾನ' ಅಂಶಗಳತ್ತಲೇ ಕನ್ನಡ ಅಸ್ಮಿತೆಯ ಒತ್ತು ಬಿದ್ದಿರುವುದು ಕನ್ನಡ, ಕರ್ನಾಟಕದ ಆರೋಗ್ಯಕರ ಬೆಳವಣಿಗೆಯ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರಿದೆ. ಸರ್ಕಾರಿ ಕನ್ನಡ ಮಾಧ್ಯಮದ ಶಾಲೆಗಳು ಸರಣಿಯೋಪಾದಿಯಲ್ಲಿ ಮುಚ್ಚುತ್ತಿರುವ ಸಂದರ್ಭದಲ್ಲಿ ಅವುಗಳನ್ನು ಉಳಿಸುವ ಪ್ರಯತ್ನಗಳಿಗಿಂತ ಮಿಗಿಲಾಗಿ ಕರ್ನಾಟಕವನ್ನು ಆಳಿದ ಸಾಮ್ರಾಜ್ಯಗಳು, ಪ್ರಾಚೀನ ಕವಿಗಳ ಹೆಸರಿನಲ್ಲಿ ವೈಭವದ ಉತ್ಸವಗಳು ಹೆಚ್ಚುತ್ತಿರುವುದು ಇದಕ್ಕೆ ಒಂದು ನಿದರ್ಶನವಾಗಿದೆ. ಈ ಅಪಾಯದ ಬಗೆಗಿನ ಚಿಂತನೆಗಳು ಗೋವಿಂದ ಪೈ, ಗೌರೀಶ ಕಾಯ್ಕಿಣಿ ಅವರಿಂದ ಮೊದಲುಗೊಂಡು ದೇವನೂರ ಮಹಾದೇವರವರೆಗೂ ಕಾಣುತ್ತವೆ.

೬. 'ಜನಪ್ರಿಯ ನೆಲೆ'ಯವರೆಗಿನ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಇಂಗ್ಲಿಶಿಗೆ ಬದಲು ನೆರೆಯ ತಮಿಳು, ಮರಾಠಿ, ತೆಲುಗುನಂತಹ ಭಾಷೆಗಳನ್ನೇ ಕನ್ನಡದ ಪ್ರಧಾನ ಶತ್ರುಗಳೆಂದು ಗುರುತಿಸಿದ್ದು ಆ ಕಾಲಘಟ್ಟದವರೆಗಿನ ಸಂದರ್ಭಕ್ಕೆ ಅನುಸಾರವಾಗಿತ್ತು. ಕುಟುಂಬವೊಂದು ಪಾಲಾಗುವ ಹಂತದಲ್ಲಿ ತನಗೆ ಸೇರಬೇಕಾದ ಗದ್ದೆ-ತೋಟಗಳನ್ನು ಗುರುತಿಸಿಕೊಳ್ಳುತ್ತ ಅದು ತಮಗೆ ದಕ್ಕುತ್ತದೋ ಇಲ್ಲವೋ ಎನ್ನುವ ಆತಂಕದಲ್ಲಿ ಸಹೋದರರೇ ಪರಸ್ಪರ ವೈರಿಗಳೆಂದುಕೊಳ್ಳುವ ಸಂಕೀರ್ಣ ಕಾಲಘಟ್ಟವಿದು. ಏಕೀಕರಣದ ನಂತರದ ದ್ರಾವಿಡ ಶೋಧದ ನೆಲೆ ಮತ್ತು ಸಾಮಾಜಿಕ ನೆಲೆಗಳು ಇಂಗ್ಲಿಶ್ ಮತ್ತು ಹಿಂದಿಯನ್ನು ಕನ್ನಡದ ಶತ್ರುಗಳೆಂದು ಸ್ಪಷ್ಟವಾಗಿ ಗುರುತಿಸಿದವು. ಜನಪ್ರಿಯ ನೆಲೆಯ ಚಿಂತನಾಧಾರೆಗೂ ಹಿಂದಿನ ಸಾಹಿತ್ಯಕ ನೆಲೆ ಮತ್ತು ಸಾಂಸ್ಕೃತಿಕ ಹುಡುಕಾಟದ ನೆಲೆಗಳ ಆರಂಭದ ಚಿಂತಕರು ನೆರೆಯ ಭಾಷೆಗಳನ್ನು ವೈರಿಸ್ಥಾನದಲ್ಲಿಟ್ಟು ನೋಡದಿರುವುದು ಪ್ರಶ್ನಾರ್ಥಕವಾಗಿ ಕಾಣಬಹುದು. ಇದಕ್ಕೆ ಕಾರಣ ಸಾಹಿತ್ಯಕ ನೆಲೆಯ ಒಂದು ಧಾರೆಗೆ ಕನ್ನಡಕ್ಕೆ ಹೊರೆಯಾಗಿರುವ ಸಂಸ್ಕೃತವನ್ನು ಬಿಡಿಸಿಕೊಳ್ಳಲಿಕ್ಕೆ ಇಂಗ್ಲಿಶಿನ ನೆರವು ಪಡೆಯುವ ತುರ್ತು ಇದ್ದುದು. ಈ ನೆಲೆಯ ಇನ್ನೊಂದು ಧಾರೆ ಇಂಗ್ಲಿಶನ್ನು ಪ್ರಬಲವಾಗಿ ವಿರೋಧಿಸಿದ್ದು ಅದಕ್ಕಿದ್ದ ಅಂತರಾಷ್ಟ್ರೀಯ ರಾಜಕಾರಣದ ಅರಿವಿನಿಂದ. ಸಾಹಿತ್ಯಕ ಮತ್ತು ಸಾಂಸ್ಕೃತಿಕ ನೆಲೆಯ ಭಾಷಿಕ ಅಸ್ಮಿತೆಗಳು ವಿಶ್ವಾತ್ಮಕ ನೆಲೆಯದಾಗಿದ್ದೂ ಅವುಗಳು ನೆರೆಯ ಭಾಷೆಗಳನ್ನು ವೈರಿಗಳೆಂದು ಪರಿಗಣಿಸದಿರಲು ಕಾರಣವಾಯಿತು.

೭. ಯಾವುದೇ ಭಾಷೆಗೆ, ರಾಚನಿಕ ಸ್ವರೂಪಗಳ ವಿಶ್ಲೇಷಣೆ ಮಾಡುವ ಭಾಷಾಶಾಸ್ತ್ರೀಯ ಆಯಾಮ ಮತ್ತು ಭಾಷೆಯ ಉಳಿವು ಹಾಗೂ ಅಳಿವನ್ನು ನಿರ್ಧರಿಸುವ ಬಾಹ್ಯರೂಪದ

ಸಾಮಾಜಿಕ, ರಾಜಕೀಯ ಆಯಾಮಗಳಿವೆ. ಭಾಷೆಯೊಂದು ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವ ಅಂಶವಾಗಿದ್ದು ಸಾಮಾಜಿಕ ಅಸಮಾನತೆಗೂ ಕಾರಣವಾಗಿದೆ. ಕನ್ನಡ ಅಸ್ಮಿತೆಯೂ ಇದರಿಂದ ಹೊರತಾಗಿಲ್ಲ. ಭಾಷೆಯನ್ನು ರಕ್ಷಿಸುವ ಮತ್ತು ಬಳಸುವ ಒತ್ತಡಗಳು, ಅಭಿಮಾನದಂತಹ ಭಾವನಾತ್ಮಕ ಸಂಗತಿಗಳು ಹಾಗೂ ಮಾತೃಭಾಷೆಯಿಂದ ಭಾಷಾವಿಜ್ಞಾನ ಗುರುತಿಸಿರುವ ವೈಯಕ್ತಿಕವಾಗಿ ಆಗುವ ಪ್ರಯೋಜನಗಳಿಗಿಂತ ಹೆಚ್ಚಾಗಿ ದೈನಂದಿನ ಬದುಕಿನ ಸುಲಭ ನಿರ್ವಹಣೆ ಭಾಷೆ ಕುರಿತ ನಿಲುವುಗಳಿಗೆ ಪ್ರಧಾನ ಕಾರಣವಾಗುತ್ತವೆ. ಭಾಷೆ ಹೊತ್ತು ತರುವ ಸಾಮಾಜಿಕ ಸ್ಥಾನಮಾನ, ಆರ್ಥಿಕ ಅನುಕೂಲತೆಗಳೇ ಭಾಷೆಯ ಉಳಿವು ಮತ್ತು ಭವಿಷ್ಯವನ್ನು ನಿರ್ಧರಿಸುವಲ್ಲಿ ಹೆಚ್ಚು ನಿರ್ಣಾಯಕವೆನಿಸುತ್ತವೆ. ಕನ್ನಡ ಭಾಷೆಯ ಸಂದರ್ಭದಲ್ಲಿಯೂ ಇದು ಅನ್ವಯವಾಗುವ ಸಂಗತಿ. ಕನ್ನಡ ಭಾಷೆ ತಮಗೆ ಅನುಕೂಲಕರ ಎಂದು ಕಂಡರೆ ಎಲ್ಲ ವರ್ಗಗಳೂ ಕನ್ನಡಭಾಷೆಯತ್ತ ಮುಖ ಮಾಡುತ್ತವೆ. ಕನ್ನಡಭಾಷೆಯನ್ನು ಹೀಗೆ ಎಲ್ಲ ವರ್ಗಗಳಿಗೂ ಲಾಭಕರ ಮಾಡುವುದರಲ್ಲಿ ಕನ್ನಡದ ಅಭಿವೃದ್ಧಿ ಅಡಗಿದೆ. ಈ ಕುರಿತ ಚಿಂತನೆಗಳು ಕೆ.ವಿ ನಾರಾಯಣ ಅವರಲ್ಲಿ ವಾಸ್ತವಿಕ ನೆಲೆಯಲ್ಲಿ ಕಾಣುತ್ತವೆ.

ಸಾಮಾಜಿಕ ನೆಲೆ

೮. ಭಾಷೆ ಕುರಿತ ಚಿಂತನೆಗಳ ಕಾಲಾನುಕ್ರಮದ ಹರಿಯುವಿಕೆಯನ್ನು ಗಮನಿಸಿದಾಗ ಸಾಹಿತ್ಯಿಕ ನೆಲೆ ಮತ್ತು ಸಾಂಸ್ಕೃತಿಕ ಹುಡುಕಾಟದ ನೆಲೆಯ ಕನ್ನಡ ಅಸ್ಮಿತೆಗಳು ಕ್ರಮೇಣ ಸಾಮಾಜಿಕ ನೆಲೆಯನ್ನು ಪಡೆದುಕೊಂಡು ಶೈಕ್ಷಣಿಕವಾಗಿಯೂ ವಿಸ್ತರಣೆಯನ್ನು ಪಡೆದಿರುವುದನ್ನು ಗಮನಿಸಬಹುದು. ಹೆಚ್ಚು ನಿರ್ದಿಷ್ಟವಾಗಿ ಹೇಳಬೇಕೆಂದರೆ ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಭಾಷೆಯನ್ನು ಸಾಮಾಜಿಕ ನೆಲೆಯಲ್ಲಿ ನೋಡುವ ಚಿಂತನೆ ಹರಳುಗಟ್ಟಿದ್ದನ್ನು ಗಮನಿಸಬಹುದು. ಆದರೆ ಅವು ಸಾಮಾಜಿಕ ನೆಲೆಯ ಚಿಂತನೆಗಳಾಗಿದ್ದರೂ ಸಾಂಸ್ಕೃತಿಕ ಹುಡುಕಾಟದ ನೆಲೆಯ ಮೂಲದಿಂದ ಬಂದವುಗಳಾಗಿದ್ದು ಹೆಚ್ಚು ಸಂಕೀರ್ಣತೆಯನ್ನು ಪಡೆದಿವೆ. ಕನ್ನಡ ಅಸ್ಮಿತೆಯ ಸಾಹಿತ್ಯಿಕ ನೆಲೆ, ಸಾಂಸ್ಕೃತಿಕ ಹುಡುಕಾಟದ ನೆಲೆ ಮತ್ತು ಸಾಮಾಜಿಕ ನೆಲೆಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿದಾಗ ಈ ಅಂಶ ಹೆಚ್ಚು ಸ್ಪಷ್ಟವಾಗುತ್ತದೆ.

೯. ಕನ್ನಡ ವಿಚಾರ ಸಾಹಿತ್ಯದಲ್ಲಿ ಸಾಮಾಜಿಕ ನೆಲೆಯ ಕನ್ನಡ ಅಸ್ಮಿತೆಯ ಹುಡುಕಾಟವು ಇಂಗ್ಲಿಶ್ ಭಾಷೆ ಕನ್ನಡ ಪರಿಸರದಲ್ಲಿ ಉಂಟು ಮಾಡಿದ ತಲ್ಲಣಗಳಿಗೆ ಸಂವಾದಿಯಾಗಿ ಹುಟ್ಟಿದೆ. ಒಂದು ಭಾಷೆಯಾಗಿ ಸಾವಿರಾರು ವರ್ಷಗಳಿಂದ ನಮ್ಮ ಪ್ರಜ್ಞೆಯನ್ನು ರೂಪಿಸಿದ ಕನ್ನಡವನ್ನು ಉಳಿಸಿಕೊಳ್ಳುವ ಕಾಳಜಿ ಮತ್ತು ಮೇಲ್ವರ್ಗಗಳು ಇಂಗ್ಲಿಷ್ ಮೂಲಕ ಸಾಮಾಜಿಕ ಮತ್ತು

ಆರ್ಥಿಕ ಮೇಲ್ಚಲನೆಗೊಳ್ಳುತ್ತಿರುವುದರ ಹಿನ್ನೆಲೆಯಲ್ಲಿ ಕೆಳವರ್ಗಗಳಿಗೂ ಅದನ್ನು ದೊರಕಿಸಬೇಕಾದ ಅನಿವಾರ್ಯತೆಯ ನಡುವೆ ಸಾಮಾಜಿಕ ನೆಲೆಯ ಕನ್ನಡ ಅಸ್ಮಿತೆ ಬಿಕ್ಕಟ್ಟನ್ನು ಎದುರಿಸುತ್ತಿದೆ.

೧೦. ಒಂದು ಭಾಷೆಯ ಅಥವಾ ಸಮುದಾಯದ ಮಧ್ಯಮ ಮತ್ತು ಶ್ರೀಮಂತ ವರ್ಗಗಳು ತಮ್ಮ ಅಸ್ಮಿತೆಯ ರಕ್ಷಣೆಗಾಗಿ ಹೋರಾಡುತ್ತಿರುತ್ತವೆ, ಆದರೆ ಕೆಳವರ್ಗಗಳಿಗೆ 'ಅಸ್ಮಿತೆ' ಎನ್ನುವುದು ಆತಂಕದ ಸಂಗತಿಯಲ್ಲ. ಮಧ್ಯಮವರ್ಗದ ಬಗೆಗೆ ಮೇಲಿನ ಟೀಕೆ ಮಾಡುವಾಗಲೂ ಎಚ್ಚೆತ್ತ ಮಧ್ಯಮವರ್ಗಗಳೇ ಅಂತಿಮವಾಗಿ ಭಾಷೆಯ ಕುರಿತ ಜನಪರ ಹೋರಾಟಕ್ಕೆ ತಾತ್ವಿಕ ಚೌಕಟ್ಟು ಮತ್ತು ನಾಯಕತ್ವ ಕೊಡುತ್ತವೆ ಎಂಬುದನ್ನು ಮರೆಯುವಂತಿಲ್ಲ. ಕನ್ನಡದಲ್ಲಿ ವಿಚಾರ ಸಾಹಿತ್ಯದ ವಸ್ತು ಮತ್ತು ಈ ಸಾಹಿತ್ಯ ರಚಿಸುತ್ತಿರುವವರ ಸಾಮಾಜಿಕ ಹಿನ್ನೆಲೆಯಿಂದ ಈ ಅಂಶವನ್ನು ಗುರುತಿಸಬಹುದು.

೧೧. ಯಾವುದೇ ಒಂದು ಭಾಷೆಯು ಪ್ರಭುತ್ವದ ಭಾಷೆಗಳು ಹಾಗು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಜನರ ಭಾಷೆಯ ಎದುರು ಅಥವಾ ಜೊತೆಗೆ ವರ್ತಿಸುವ ಬಗೆ ಏಕಪ್ರಕಾರವಾಗಿರುವುದಿಲ್ಲ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಜನರ ಭಾಷೆಯ ಎದುರು ಅದು ಯಜಮಾನ ಭಾಷೆಯಂತೆಯೂ, ಪ್ರಭುತ್ವದ ಭಾಷೆಗಳ ಜೊತೆಗೆ ಅಧೀನ ಭಾಷೆಯಂತೆಯೂ ವರ್ತಿಸುತ್ತ ದಮನಿತ ಮತ್ತು ದಮನಕಾರಿ ಎರಡೂ ಆಯಾಮಗಳನ್ನು ಒಳಗೊಂಡಿರುತ್ತದೆ. ಕನ್ನಡ ವಿಚಾರ ಸಾಹಿತ್ಯದಲ್ಲಿ ಕಂಡು ಬರುವಂತೆ ಈ ಲಕ್ಷಣ ಕನ್ನಡ ಅಸ್ಮಿತೆಯದ್ದೂ ಆಗಿದೆ.

ರಾಜಕೀಯ ನೆಲೆ

೧೨. ಭಾಷಾ ಅಸ್ಮಿತೆ ಜನಸಮುದಾಯದ ಪ್ರಜ್ಞೆಯ ಭಾಗವಾಗಿರುವಂಥಹುದು. ಬಂಡವಾಳಶಾಹಿಶಕ್ತಿಗಳು ಮತ್ತು ರಾಜಕೀಯ ಪ್ರಭುತ್ವ ಕೂಡಿಯೇ ಸ್ಥಳೀಯ ಭಾಷಾ ಅಸ್ಮಿತೆಯನ್ನು ಜನರ ಪ್ರಜ್ಞೆಯಿಂದ ಪಲ್ಲಟಗೊಳಿಸುವ ಕೆಲಸವನ್ನು ಒಂದು ಶತಮಾನಪೂರ್ವದಿಂದಲೇ, ಇನ್ನೂ ಖಚಿತವಾಗಿ ಕಳೆದ ಮೂರು ದಶಕಗಳಿಂದ ನಿರಂತರವಾಗಿ ಮಾಡುತ್ತಿವೆ. ಸ್ಥಳೀಯ ಭಾಷೆಗಳನ್ನು ಕೀಳೀಕರಿಸುವ ಮತ್ತು ಇಂಗ್ಲಿಶನ್ನು ಅನಿವಾರ್ಯಗೊಳಿಸುವ ಮೂಲಕ ಇದನ್ನವು ಸಾಧಿಸುತ್ತಿವೆ. ಆದರೆ ಹೊರನೋಟದಲ್ಲಿ ಸ್ಥಳೀಯ ಭಾಷೆಗಳ ಉದ್ಧಾರಕ್ಕಾಗಿ ಎಂದು ಕೆಲವು ಯೋಜನೆಗಳನ್ನು ರೂಪಿಸುತ್ತ ಹಾಗೂ ಕನ್ನಡದ ಇತಿಹಾಸ, ಸಾಹಿತ್ಯ ಮತ್ತು ಪರಂಪರೆಗಳನ್ನು ಬಿಂಬಿಸುವ ವೈಭವಯುತ

ಕಾರ್ಯಕ್ರಮಗಳನ್ನು ಏರ್ಪಡಿಸುತ್ತ, ಇವುಗಳ ಮುಸುಕಿನಲ್ಲಿ ಬಂಡವಾಳಶಾಹಿ ಶಕ್ತಿಗಳ ಜತೆಗಿನ ತಮ್ಮ ಸಖ್ಯವನ್ನು ಮುಚ್ಚಿಡುತ್ತಿವೆ. ಇವುಗಳ ಬಗ್ಗೆ ಸಾಹಿತ್ಯವಾದಿ, ಸಾಂಸ್ಕೃತಿಕ ಹುಡುಕಾಟದ ಮತ್ತು ದ್ರಾವಿಡ ಶೋಧದ ನೆಲೆಯ ಕನ್ನಡ ಅಸ್ಮಿತೆಗಳಿಗೆ ಸ್ಪಷ್ಟತೆಯಿದ್ದು ಅವುಗಳು ಎಚ್ಚರಿಕೆಯಿಂದ ಇವುಗಳಿಗೆ ಪ್ರತಿಕ್ರಿಯಿಸಿದರೆ ಸಾಮಾಜಿಕ ನೆಲೆಯ ಕನ್ನಡ ಅಸ್ಮಿತೆ ಈ ಬಗ್ಗೆ ಹೆಚ್ಚು ಚಿಂತಿಸುವುದಿಲ್ಲ. ಭಾಷಾ ಮೂಲಭೂತವಾದಿ ಮತ್ತು ಜನಪ್ರಿಯ ನೆಲೆಯ ಕನ್ನಡ ಅಸ್ಮಿತೆಗಳು ಬಂಡವಾಳಶಾಹಿ ಶಕ್ತಿಗಳು ರೂಪಿಸುವ ಇಂತಹ ಯೋಜನೆಗಳ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತವೆ. ಕನ್ನಡದ ಅಭಿವೃದ್ಧಿಗೆಂದು ಸರ್ಕಾರ ರೂಪಿಸುವ ಯೋಜನೆ ಮತ್ತು ಕನ್ನಡ ಪರಂಪರೆಯನ್ನು ನೆನಪಿಸುವ ಕಾರಣ ನೀಡಿ ಏರ್ಪಡಿಸುವ ವೈಭವದ ಸಮಾರಂಭಗಳಿಗೆ ಕನ್ನಡ ವಿಚಾರ ಸಾಹಿತ್ಯದಲ್ಲಿ ಕಾಣುವ ವಿರೋಧ ಮತ್ತು ಸಹಮತದ ಸ್ವರೂಪಗಳ ಅವಲೋಕನದಲ್ಲಿ ಇದು ಸ್ಪಷ್ಟವಾಗುತ್ತದೆ.

೧೩. ಪ್ರಭುತ್ವಭಾಷೆ ಮತ್ತು ದೇಶಿ ಭಾಷೆಗಳ ಸಂಬಂಧವನ್ನು ನಿರ್ವಚಿಸುವ ಎರಡು ತಾತ್ವಿಕ ಚಿಂತನೆಗಳಿವೆ. ಒಂದನೆಯದು ಪ್ರಭುತ್ವದ ಭಾಷೆಗಳನ್ನು ಯಜಮಾನಿಕೆ ಸ್ಥಾನದಲ್ಲಿಯೂ, ದೇಶಿ ಭಾಷೆಗಳನ್ನು ದಮನಿತ ಸ್ಥಾನದಲ್ಲಿಯೂ ಗ್ರಹಿಸುವ ಚಿಂತನಾ ಕ್ರಮ. ಇಂತಹ ಚಿಂತನಾಕ್ರಮ ದ್ರಾವಿಡ ಶೋಧದ ನೆಲೆಯ ಕನ್ನಡ ಅಸ್ಮಿತೆಯ ಚಿಂತನೆಯ ಒಂದು ಧಾರೆಯಲ್ಲಿದೆ. ಎರಡನೆಯದು ಪ್ರಭುತ್ವದ ಭಾಷೆಗಳು ಮತ್ತು ದೇಶಿ ಭಾಷೆಗಳು ಕೊಡುಕೊಳ್ಳುವಿಕೆಯಲ್ಲಿ ಪರಸ್ಪರ ಶಕ್ತಿಸಂಚಯ ಮಾಡಿಕೊಳ್ಳುತ್ತವೆ ಎಂದು ಗ್ರಹಿಸುವ ಚಿಂತನಾಕ್ರಮ. ಇಲ್ಲಿ ಪ್ರಭುತ್ವದ ಭಾಷೆಯನ್ನು ದಮನ ಮಾಡುವ ಭಾಷೆಯನ್ನಾಗಿಯೂ, ದೇಶಿ ಭಾಷೆಯನ್ನು ದಮನಿತ ಭಾಷೆಯನ್ನಾಗಿಯೂ ನೋಡಲಾಗುವುದಿಲ್ಲ. ಸಾಹಿತ್ಯವಾದಿ ಮತ್ತು ಸಾಂಸ್ಕೃತಿಕ ಹುಡುಕಾಟದ ನೆಲೆಯ ಕನ್ನಡ ಅಸ್ಮಿತೆಯಲ್ಲಿ ಈ ಬಗೆಯ ಚಿಂತನೆಯನ್ನು ಗಮನಿಸಬಹುದು.

೧೪. ಕನ್ನಡವು ವಿವಿಧ ಕಾಲಘಟ್ಟಗಳಲ್ಲಿ ಸಂಸ್ಕೃತ, ಇಂಗ್ಲಿಶ್ ಭಾಷೆಗಳ ಎದುರಿನಲ್ಲಿ ತನ್ನ ಅಸ್ಮಿತೆಯ ಉಳಿವಿಗಾಗಿ ಹೋರಾಟ ನಡೆಸಿದೆ. ವಸಾಹತುಶಾಹಿ ಹಾಗೂ ನವವಸಾಹತುಶಾಹಿ ಕಾಲಘಟ್ಟದ ಜೀವನವಿಧಾನಗಳು ಕನ್ನಡದ ಅಸ್ಮಿತೆಯನ್ನು ಗಂಭೀರವಾಗಿ ಕಾಡಿವೆ. ಕನ್ನಡ ಏಕೀಕರಣ ಚಳುವಳಿ, ಗೋಕಾಕ್ ಚಳುವಳಿ, ಕಾವೇರಿ ಚಳುವಳಿ, ರೈತ, ದಲಿತ, ಅಹಿಂದ ಚಳುವಳಿಗಳು, ಬಂಡಾಯ ಸಾಹಿತ್ಯ ಚಳುವಳಿ, ಕರ್ನಾಟಕ ರಕ್ಷಣಾ ವೇದಿಕೆಯಂತಹ ಕನ್ನಡಪರ ಸಂಘಟನೆಗಳ ಹೋರಾಟಗಳು ಕೂಡ ಕನ್ನಡ ಅಸ್ಮಿತೆಯ ಹುಡುಕಾಟದ ಸ್ವರೂಪವನ್ನು ಬದಲಾಯಿಸುತ್ತಾ ಬಂದಿವೆ. ಕನ್ನಡ ವಿಚಾರ ಸಾಹಿತ್ಯ ಇವುಗಳ ಕುರಿತು ವಿಮರ್ಶಾತ್ಮಕ ಹಾಗೂ ಭಾವನಾತ್ಮಕ ನೆಲೆಯಲ್ಲಿ ಗಂಭೀರ ಚಿಂತನೆ ನಡೆಸಿದೆ.

೧೫. ಜನರ ಮೂಲಕ ನೋಡುವುದಾದರೆ ಎಚ್ಚೆತ್ತ ಜನಸಮುದಾಯಗಳು ತಮ್ಮ ನೆಲದ ಭಾಷೆಯ ಉಳಿವಿಗಾಗಿ ಹಲವು ರೀತಿಯಲ್ಲಿ ಪ್ರಯತ್ನಿಸುತ್ತವೆ. ಒಂದನೆಯದು ಭಾಷೆಯ ಕುರಿತು ಆಳವಾದ ಚಿಂತನೆಗಳನ್ನು ಮಂಡಿಸುವುದು. ಎರಡನೆಯದು ಇಂತಹ ಚಿಂತನೆಗಳನ್ನು ತಮ್ಮ ವೈಯಕ್ತಿಕ ಕಾರ್ಯವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವುದು. ಮೂರನೆಯದು ಈ ಚಿಂತನೆಗಳನ್ನು ಅನುಷ್ಠಾನಗೊಳಿಸಲು ಪ್ರಭುತ್ವದ ಮೇಲೆ ಒತ್ತಡ ತರುವ ಚಳುವಳಿ ರೂಪಿಸುವುದು. ಸಂಘಟನೆಗಳನ್ನು ಹೊರತುಪಡಿಸಿ ವ್ಯಕ್ತಿಗಳ ನಿಟ್ಟಿನಲ್ಲಿ ನೋಡಿದಾಗ ಹೆಚ್ಚಿನ ನಿದರ್ಶನಗಳಲ್ಲಿ ಚಿಂತನೆ ಮತ್ತು ಹೋರಾಟ ಮಾಡುವ ವ್ಯಕ್ತಿಗಳು ಒಬ್ಬರೇ ಆಗಿರುತ್ತಾರೆ. ಭಾಷೆ ಕುರಿತ ತಮ್ಮ ಚಿಂತನೆಗಳನ್ನು ಮಂಡಿಸುವುದರೊಂದಿಗೆ ಅದನ್ನು ಅನುಷ್ಠಾನಗೊಳಿಸುವ ಅವಕಾಶ ಕೆಲವರಿಗೆ ಮಾತ್ರ ಲಭ್ಯವಿರುತ್ತದೆ. ವಿಶ್ವವಿದ್ಯಾಲಯ ಮತ್ತು ಪ್ರಾಧಿಕಾರಗಳಲ್ಲಿದ್ದ ಸರ್ಕಾರದ ವಿವಿಧ ತಮ್ಮ ಅಧಿಕಾರದ ಸ್ಥಾನಗಳ ಮೂಲಕ ಇವರು ಕನ್ನಡಭಾಷೆಯನ್ನು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಶ್ರಮಿಸಿದವರು. ಚಳವಳಿಗಾರ ಚಿಂತಕರಿಂದ ರೂಪುಗೊಳ್ಳುವ ಕನ್ನಡ ಅಸ್ಮಿತೆಗಿಂತ ಅಧಿಕಾರಸ್ಥ ಸ್ಥಾನಗಳಲ್ಲಿರುವ ಚಿಂತಕರಿಂದ ರೂಪುಗೊಳ್ಳುವ ಕನ್ನಡ ಅಸ್ಮಿತೆ ಹೆಚ್ಚು ವ್ಯಾಪಕವಾಗಿ ಆಡಳಿತವ್ಯವಸ್ಥೆಯಲ್ಲಿ ಅಧಿಕೃತಗೊಳ್ಳುತ್ತದೆ. ಬಿ.ಎಂ.ಶ್ರೀ, ಕುವೆಂಪು, ಬರಗೂರು ರಾಮಚಂದ್ರಪ್ಪರಂತಹ ಚಿಂತಕರಿಂದ ಇಂತಹ ಕನ್ನಡ ಅಸ್ಮಿತೆ ರೂಪುಗೊಂಡಿದೆ.

೧೬. ಜಾಗತೀಕರಣದಿಂದಾಗಿ ಹೆಚ್ಚುತ್ತಿರುವ ಕರ್ನಾಟಕ ಸಮಾಜದ ವಿವಿಧ ಜನವರ್ಗಗಳ ನಡುವಿನ ಅಸಮಾನತೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಭಾಷೆಯನ್ನು ಆರ್ಥಿಕ ಹಿನ್ನೆಲೆಯಲ್ಲಿ ಪರ್ಯಾಲೋಚನೆ ಮಾಡುವ ವಿಧಾನ ಸಾಂಸ್ಕೃತಿಕ ಹುಡುಕಾಟದ ನೆಲೆಯ ಕನ್ನಡ ಅಸ್ಮಿತೆಯ ಚಿಂತನೆಯಲ್ಲಿ ಬಹುಮಟ್ಟಿಗೆ ಕಡಿಮೆ. ಭಾಷಿಕರ ಆರ್ಥಿಕತೆಗಿಂತಲೂ ಸಾಂಸ್ಕೃತಿಕ ಔನ್ನತ್ಯ ಪ್ರಧಾನವೆಂದು ಈ ಚಿಂತನೆ ಭಾವಿಸುತ್ತದೆ. ಜಾಗತೀಕರಣ ಇಂಗ್ಲಿಷಿನ ಮೂಲಕ ಸೃಷ್ಟಿಸಿರುವ ಸಾಮಾಜಿಕ ಬಿಕ್ಕಟ್ಟುಗಳನ್ನು ಮುಖಾಮುಖಿ ಮಾಡಿಕೊಳ್ಳದೆ ಸಾಂಸ್ಕೃತಿಕವಾಗಿ, ಭಾಷಾಕೇಂದ್ರಿತವಾಗಿ ಮಾಡುವ ಎಂತಹ ಉನ್ನತವಾದ ಚಿಂತನೆಯೂ ಭಾಷೆಯನ್ನು ಉಳಿಸಿಕೊಳ್ಳುವಲ್ಲಿ ಪ್ರಾಯೋಗಿಕವಾಗಿ ವಿಫಲವಾಗುತ್ತದೆ. ಸಾಂಸ್ಕೃತಿಕ ಹುಡುಕಾಟದ ನೆಲೆಯಲ್ಲಿ ಕನ್ನಡ ಅಸ್ಮಿತೆಯನ್ನು ನೋಡುವ ಭಾಷೆ ಕುರಿತ ಕನ್ನಡದ ಚಿಂತನೆಗಳೂ ಇಂತಹ ಬಿಕ್ಕಟ್ಟನ್ನು ಎದುರಿಸುತ್ತಿವೆ.

ಸಾಹಿತ್ಯಿಕ ನೆಲೆ

೧೭. ಸಾಹಿತ್ಯವಾದಿ ನೆಲೆಯ ಕನ್ನಡ ಅಸ್ಮಿತೆಯ ಚಿಂತನೆಯ ಒಂದು ಧಾರೆಗೆ ಬ್ರಿಟಿಷ್ ಪ್ರಭುತ್ವದ ಬಗ್ಗೆ ಅವಿರೋಧದ ನೆಲೆಯಿದೆ. ಈ ಮಿತಿಯ ಕಾರಣಕ್ಕಾಗಿ ಈ ನೆಲೆಯ ಕನ್ನಡ ಅಸ್ಮಿತೆ ಇಂಗ್ಲಿಶನ್ನು ಒಂದು ಸಾಮ್ರಾಜ್ಯಶಾಹಿ ಭಾಷೆ ಎಂದು ಗ್ರಹಿಸಿದರೂ ಅದರ ಹುನ್ನಾರಗಳ ವ್ಯಾಪಕತೆಯನ್ನು, ಭಾಷೆಯನ್ನೇ ಸಾಧನವನ್ನಾಗಿ ಮಾಡಿಕೊಂಡು ಆರ್ಥಿಕ ಅಸಮಾನತೆಯನ್ನು ಸೃಷ್ಟಿ ಮಾಡುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳ ಬಗ್ಗೆ ಚಿಂತಿಸಿದಂತೆ ಕಾಣುವುದಿಲ್ಲ. ಹೀಗಿದ್ದರೂ ಬ್ರಿಟಿಷರ ಮೂಲಕ ಬಂದ ಇಂಗ್ಲಿಶ್‌ನಡಿ ಕನ್ನಡ ನಾಶವಾಗದಂತೆ ತಡೆಯುವ ಎಚ್ಚರವಿತ್ತು. ಸಂಸ್ಕೃತದಿಂದ ಹರಿದುಬಂದ ಜಡವೆನಿಸುತ್ತಿದ್ದ ಕಾವ್ಯಮೀಮಾಂಸೆಯಿಂದ ಕನ್ನಡ ಸಾಹಿತ್ಯವನ್ನು ಪಾರುಮಾಡುವ ಸಲುವಾಗಿ ಇಂಗ್ಲಿಶಿನ ಹೊಸ ಶೈಲಿಯನ್ನು ಅದು ಕನ್ನಡಕ್ಕೆ ತಂದಿತು. ವೈಚಾರಿಕತೆ ತರುವ ಇಂಗ್ಲಿಶ್ ನಮಗೆ ಬೇಕೆ ಹೊರತು, ನಮ್ಮ ಭಾಷೆಯನ್ನೇ ನಾಶ ಮಾಡುವ ಸಾಮ್ರಾಜ್ಯಶಾಹಿ ಇಂಗ್ಲಿಶಲ್ಲ ಎನ್ನುವುದು ಸಾಹಿತ್ಯವಾದಿ ನೆಲೆಯ ನಿಲುವು. ಸಾಮಾಜಿಕ ಬಿಡುಗಡೆಗೆ ವೈಚಾರಿಕತೆಯಾಗಿ ಇಂಗ್ಲಿಶನ್ನು ಅನುಮೋದಿಸುವ ಈ ಚಿಂತನೆ ದೇಶಿಭಾಷೆಯಲ್ಲಿ ಜ್ಞಾನ ಪಡೆಯುವ ಶಿಕ್ಷಣದಲ್ಲಿ ಇಂಗ್ಲಿಶ್ ತೊಡಕೆಂದು ಅದನ್ನು ದೂರವಿಡಲು ಬಯಸುತ್ತದೆ. ಅನುಮೋದಿಸುವ ಇಂಗ್ಲಿಶ್ ಮತ್ತು ದೂರವಿರಿಸುವ ಇಂಗ್ಲಿಶಿನ ಮೇಲ್ಕಂಡ ಎರಡೂ ಸ್ತರಗಳ ಸೂಕ್ಷ್ಮ ವಿಂಗಡಣೆ ಈ ಚಿಂತನೆಯಲ್ಲಿದೆ. ತನ್ನ ಭಾಷೆಗೆ ಬದಲಿಯಾಗಿ ಒಂದು ಭಾಷೆಯನ್ನು ಸಂಪೂರ್ಣವಾಗಿ ಸ್ವೀಕರಿಸದೇ ಅಥವಾ ತಿರಸ್ಕರಿಸದೇ, ತನ್ನ ಭಾಷೆಗೆ ವಿರೋಧಿಯೆಂದು ಭಾವಿಸದೆ ಅಥವಾ ಅದರ ಎಲ್ಲಾ ನೆಲೆಗಳಲ್ಲಿ ಸ್ವೀಕರಿಸದೆ, ತನ್ನ ಭಾಷೆಗೆ ಚೈತನ್ಯ ತುಂಬುವ ಅಂಶಗಳನ್ನು ಮಾತ್ರ ಆ ಭಾಷೆಯಿಂದ ಪಡೆಯುವ ಸಾಹಿತ್ಯವಾದಿ ನೆಲೆಯ ಈ ಗುಣ ಕನ್ನಡದ ಕಡುವಿವೇಕದ ಅಸ್ಮಿತೆಯಾಗಿದೆ. ಈ ಗುಣ ಸಾಮಾಜಿಕ ಮತ್ತು ದ್ರಾವಿಡ ನೆಲೆಯ ಚಿಂತಕರಲ್ಲಿಯೂ ಕಂಡುಬರುತ್ತದೆ. ಸಾಂಸ್ಕೃತಿಕ ನೆಲೆಯ ಕನ್ನಡ ಅಸ್ಮಿತೆಯ ಒಂದು ಧಾರೆಗೆ ಇಂಗ್ಲಿಶ್ ಬಗ್ಗೆ ವಿರೋಧವೂ ಇಲ್ಲ, ಕನ್ನಡ ಕಟ್ಟುವಿಕೆಯಲ್ಲಿ ಅದನ್ನು ಹೇಗೆ ಬಳಸಿಕೊಳ್ಳಬೇಕು ಎನ್ನುವ ಸಾಹಿತ್ಯವಾದಿ ನೆಲೆಯಂತೆ ಕಾಣ್ಕೆಯೂ ಕಾಣುವುದಿಲ್ಲ.

೧೮. ಸಾಂಸ್ಕೃತಿಕ ಹುಡುಕಾಟದ ನೆಲೆಯ ಕನ್ನಡ ಅಸ್ಮಿತೆಯ ಒಂದು ಧಾರೆ ಬಹುತೇಕ ಸಾಹಿತ್ಯ ಪಠ್ಯಗಳಿಂದ ರೂಪಿತವಾಗಿದೆ. ಪಠ್ಯಗಳ ಮೂಲಕ ಭಾಷಿಕ ಅಸ್ಮಿತೆಯ ಚರ್ಚೆ ಮಾಡುವಾಗ ಆ ಚರ್ಚೆ ಆ ಭಾಷೆಯನ್ನು ಬಳಸುವ ನಿರ್ದಿಷ್ಟ ವರ್ಗದ ಆಶೋತ್ತರಗಳನ್ನು ಬಿಂಬಿಸುವ ಸಂಗತಿಯಾಗಿರುತ್ತದೆ. ಆಗ ಸಹಜವಾಗಿ ಭಾಷೆಯನ್ನು ಬಳಸುವ ಇತರ ಸಮುದಾಯಗಳ ಚರ್ಚೆ ಹೊರಗುಳಿಯುತ್ತದೆ. ಈ ಚಿಂತನೆಯ ಕನ್ನಡ ಅಸ್ಮಿತೆ ಡೆಮಾಕ್ರಟಿಕ್ ಆಗಿದ್ದರೂ ಅದು

ಒಂದು ವರ್ಗದ ಆಲೋಚನಾಕ್ರಮಕ್ಕೆ ಸೀಮಿತವಾಗುವ ಮಿತಿ ಹೊಂದಿದೆ. ಇದನ್ನು ಸಾಮಾಜಿಕ ನೆಲೆಯ ಕನ್ನಡ ಅಸ್ಮಿತೆ ಮಾಡುವ ಚರ್ಚೆಗೆ ಹೋಲಿಸಿದರೆ ಇನ್ನಷ್ಟು ಸ್ಪಷ್ಟವಾಗುತ್ತದೆ. ಈ ಮೂಲಕ ತಿಳಿಯುವ ಸಂಗತಿಯೆಂದರೆ ಭಾಷಿಕ ಅಸ್ಮಿತೆಯ ಚರ್ಚೆಯನ್ನು ಯಾವ ಚಿಂತಕರು ಯಾವ ಲೋಕದ ಉಲ್ಲೇಖಗಳ ಮೂಲಕ ಮಾಡುತ್ತಾರೆ ಎಂಬುದು ಆ ಚಿಂತನೆಯ ತಾತ್ವಿಕ ನೆಲೆಯನ್ನು ಸೂಚಿಸುತ್ತದೆ ಎನ್ನುವುದು.

೧೯. ಕನ್ನಡ ಅಸ್ಮಿತೆ ಕುರಿತ ಚರ್ಚೆಯಲ್ಲಿ ಬರುವ ಚಿಂತಕರುಗಳನ್ನು ಅಕೆಡೆಮಿಕ್, ನಾನ್ ಅಕೆಡೆಮಿಕ್ ಮತ್ತು ಆ್ಯಕ್ಟಿವಿಸ್ಟ್ ಎಂದು ವಿಂಗಡಿಸಿನೋಡಿದಾಗ ಅಸ್ಮಿತೆಯ ಚಹರೆ ಭಿನ್ನವಾಗಿರುವುದು ಕಂಡುಬರುತ್ತದೆ. ಅಕೆಡೆಮಿಕ್ ಹಿನ್ನೆಲೆಯ ಚಿಂತಕರು ಹೆಚ್ಚು ಭಾಷಾಮೂಲದಿಂದ ಚಿಂತಿಸಿದರೆ, ನಾನ್ ಅಕೆಡೆಮಿಕ್ ಮತ್ತು ಆ್ಯಕ್ಟಿವಿಸ್ಟ್ ಆಗಿರುವವರು ಜನರ ಬದುಕಿನ ಹಿನ್ನೆಲೆಯಲ್ಲಿ ಭಾಷೆಯನ್ನು ನೋಡುತ್ತಾರೆ. ಆದರೆ ಕನ್ನಡದಲ್ಲಿ ಅಕೆಡೆಮಿಕ್ ಆಗಿದ್ದ ಬಹುತೇಕ ಚಿಂತಕರು ಆ್ಯಕ್ಟಿವಿಸ್ಟ್‌ಗಳೂ ಆಗಿದ್ದರಿಂದ ಅವರ ಕನ್ನಡ ಅಸ್ಮಿತೆ ಕೇವಲ 'ಭಾಷೆ'ಗೆ ಸೀಮೀತವಾಗದೆ ಜನರತ್ತ ವಿಸ್ತರಿಸಿದೆ.

೨೦. ಕನ್ನಡ ವಿಚಾರ ಸಾಹಿತ್ಯದಲ್ಲಿ ಸಾಮಾಜಿಕ ನೆಲೆಯ ಕನ್ನಡ ಅಸ್ಮಿತೆಯ ಹುಡುಕಾಟವು ಜಾತ್ಯಾತೀತವಾಗಿದೆ. ಕಾಲದ ಪರೀಕ್ಷೆಯಲ್ಲಿ ಗೆದ್ದು ಮಾನವೀಯವಾಗಿ ಮುಂದುವರೆಯುವ ಅಂಶಗಳನ್ನು ಕನ್ನಡದ ಗುರುತಾಗಿ ಈ ಅಸ್ಮಿತೆ ಸ್ವೀಕರಿಸುತ್ತದೆ. ನಮ್ಮ ಸಂಸ್ಕೃತಿಯ ಹುಸಿ ಹೆಮ್ಮೆಯಲ್ಲಿ ಅಭಿಮಾನವೇ ಅಹಂಕಾರವಾಗಬಾರದು ಎಂಬ ಎಚ್ಚರ ಇದಕ್ಕಿದೆ. ಭಾಷಾಭಿಮಾನಕ್ಕೂ ಭಾಷಾಂಧತೆಗೂ ನಡುವೆ ಸ್ಪಷ್ಟ ಗೆರೆ ಕೊರೆಯಲಾಗಿದ್ದು ಭಾಷಾಂಧತೆಯನ್ನು ಮೈಗೂಡಿಸಿಕೊಂಡ ನೆರೆರಾಜ್ಯಗಳ ಭಾಷಾಪರ ಸಂಘಟನೆಗಳ ಮಾದರಿಯನ್ನು ತಿರಸ್ಕರಿಸಲಾಗಿದೆ. ಸಾರಾಂಶದಲ್ಲಿ ಕನ್ನಡ ಅಸ್ಮಿತೆಯನ್ನು ಆತ್ಯಂತಿಕ ವಿಶಾಲತೆಯಲ್ಲಿ ಗ್ರಹಿಸಲಾಗಿದೆ.

೨೧. ಸಾಹಿತ್ಯವಾದಿ ನೆಲೆಯ ಒಟ್ಟುಚಿಂತನೆ ಆಡುಭಾಷೆಯ ಕನ್ನಡದ ಪರವಾಗಿದ್ದು ಇಂದು ದ್ರಾವಿಡ ನೆಲೆಯ ಕನ್ನಡ ಅಸ್ಮಿತೆಯ ಚಿಂತಕರು ಮಂಡಿಸುತ್ತಿರುವ ಸಂಸ್ಕೃತರಹಿತ ಆಡುಭಾಷಾಪ್ರಧಾನವಾದ ಕನ್ನಡದ ಬೀಜಗಳು ಆ ಚಿಂತನೆಗಳಲ್ಲಿಯೇ ಇವೆ. ಇದು ಕನ್ನಡ ಅಸ್ಮಿತೆ ಕುರಿತ ಕಳೆದ ಶತಮಾನದ ಆರಂಭದಲ್ಲಿನ ಚಿಂತನೆಗಳು ಈವರೆಗೂ ವಿಸ್ತರಿಸುತ್ತ ಬಂದಿರುವುದನ್ನೂ, ಈ ಕಾರಣಕ್ಕಾಗಿಯೇ ಅವುಗಳ ಮಹತ್ವವನ್ನೂ ಸೂಚಿಸುತ್ತವೆ.

೨೨. ಕನ್ನಡದಲ್ಲಿ ವಿಚಾರ ಸಾಹಿತ್ಯವನ್ನೇ ತಮ್ಮ ಪ್ರಧಾನ ಪ್ರಕಾರವಾಗಿಸಿಕೊಂಡವರ ಸಂಖ್ಯೆ ಕಡಿಮೆ. ಹೀಗೆ ವಿಚಾರ ಸಾಹಿತ್ಯಕ್ಕೆ ಸೀಮಿತರಾದವರು ನಿರ್ದಿಷ್ಟ ಚಳವಳಿಗಳಲ್ಲಿ ತೊಡಗಿಸಿಕೊಂಡ ಹೋರಾಟಗಾರರು. ತಮ್ಮ ಹೋರಾಟಕ್ಕೆ ಪೂರಕವಾದ ಸಾಹಿತ್ಯ ರಚಿಸುವುದು ಇವರ ಆದ್ಯತೆಯಾಗಿತ್ತು. ಹೋರಾಟದಲ್ಲಿದ್ದ ಕಾರಣಕ್ಕಾಗಿ ಭಿನ್ನವಾದ ಚಿಂತನೆಯ ಗುಣ ಇವರಲ್ಲಿ ಕಂಡುಬರುತ್ತದೆ.

ಧಾರ್ಮಿಕ ನೆಲೆ

೨೩. ಭಾಷಾ ಮೂಲಭೂತವಾದಿ ನೆಲೆಯ ಕನ್ನಡ ಅಸ್ಮಿತೆಯ ಬಹುತೇಕ ಚಿಂತನೆಯನ್ನು ಹಿಂದುತ್ವವಾದಿ ತತ್ವಗಳು ಪ್ರಭಾವಿಸಿದೆ. ಇಲ್ಲಿನ ಕನ್ನಡ ಅಸ್ಮಿತೆ ಮತೀಯ ಶ್ರದ್ಧೆಯಾಗಿ ರೂಪುಗೊಂಡಿದೆ. ಈ ನೆಲೆಯ ಕನ್ನಡ ಅಸ್ಮಿತೆ ವೈದಿಕ ಹಿಂದೂ ಧರ್ಮದೊಂದಿಗೆ ಸಮೀಕರಿಸಿಕೊಳ್ಳುತ್ತದೆ. ಕನ್ನಡವನ್ನು ಹಿಂದೂಯೇತರ ಧರ್ಮಗಳಿಂದ ಪ್ರತ್ಯೇಕಿಸುವ ಮತ್ತು ಪ್ರತ್ಯೇಕಿಸದಿರುವ ಎರಡೂ ಬಗೆಯ ಪ್ರಯತ್ನಗಳೂ ಈ ಚಿಂತನೆಯಲ್ಲಿವೆ. ಅದೇ ರೀತಿ ಕನ್ನಡದ ಎದುರು ನೆರೆಯ ಭಾಷೆಗಳನ್ನು ಸಹನೆಯಿಂದ ನೋಡುವ ಮತ್ತು ವೈರಿಯಂತೆ ಕಾಣುವ ಎರಡೂ ಬಗೆಯ ಚಹರೆ ಭಾಷಾ ಮೂಲಭೂತವಾದಿ ನೆಲೆಯ ಕನ್ನಡ ಅಸ್ಮಿತೆಗಿದೆ. ಕ್ರಮವಾಗಿ ಆಲೂರು ಮತ್ತು ಚಿದಾನಂದಮೂರ್ತಿ ಅವರ ಚಿಂತನೆಗಳನ್ನು ಈ ಎರಡು ವಿಭಿನ್ನ ನೆಲೆಯ ಚಿಂತನೆಗಳಿಗೆ ನಿದರ್ಶನವಾಗಿ ನೋಡಬಹುದು.

೨೪. ಭಾವನಾತ್ಮಕವಾಗಿ ಕರ್ನಾಟಕದ ಭೌಗೋಳಿಕ ಏಕೀಕರಣವನ್ನು ಸಾಧಿಸಲು ಧಾರ್ಮಿಕ ಸಂಕೇತಗಳನ್ನು ಚಳುವಳಿಗಳಲ್ಲಿ ಬಳಸಲಾಯಿತು. ಇದು ಕನ್ನಡ ಅಸ್ಮಿತೆಯನ್ನು ಜಾತ್ಯತೀತವಾಗಿ ರೂಪಿಸುವ ಪ್ರಕ್ರಿಯೆಗೆ ಧಕ್ಕೆ ತಂದಿತು. ಕರ್ನಾಟಕ ಏಕೀಕರಣ ಚಳುವಳಿಯ ಸಂದರ್ಭದಲ್ಲಿ ಧಾರ್ಮಿಕ ಸಂಕೇತಗಳನ್ನು ಬಳಸುವುದರ ಹಿಂದೆ ಬಹುಪಾಲು ದೂರದೃಷ್ಟಿಯಿಲ್ಲದ ತಕ್ಷಣದ ಉದ್ದೇಶದ ಈಡೇರಿಕೆಯ ಹಂಬಲವುಳ್ಳ ಕನಸುಗಾರ ಹೋರಾಟಗಾರರ ಮುಗ್ಧತೆಯಿತ್ತು. ಇದರ ಜೊತೆಗೆ ಧಾರ್ಮಿಕ ವಿಚಾರಗಳ ಮೂಲಕ ಜನರ ಬೆಂಬಲವನ್ನು ಪಡೆದು ಅವರ ಮುಗ್ದತೆಯನ್ನು ದುರುಪಯೋಗ ಪಡಿಸಿಕೊಳ್ಳುವ ಬಲಪಂಥೀಯರ ಮತೀಯ ಆಶಯವೂ ಇತ್ತು. ಇದರ ದುಷ್ಪರಿಣಾಮಗಳು ಮುಂದೆ ಬೆಳವಣಿಗೆ ಹೊಂದಿ ಸಮಕಾಲೀನ ಕರ್ನಾಟಕದ ಸಮಾಜದಲ್ಲಿ ನಿಚ್ಚಳವಾಗಿ ಗೋಚರಿಸಿದವು. ಕನ್ನಡವನ್ನು ಕೇವಲ 'ಹಿಂದೂ'ಗಳ ಭಾಷೆಯನ್ನಾಗಿ ಬಿಂಬಿಸುವ, ಪ್ರತಿಷ್ಠಾಪಿಸುವ ಹುನ್ನಾರ ಇದರಲ್ಲೊಂದು. ಕರ್ನಾಟಕದ ಏಕೀಕರಣ ಚಳುವಳಿಯ ಚಾರಿತ್ರಿಕ ಮಹತ್ವ ಹಾಗೂ ಯಶಸ್ಸನ್ನು

ಅರಿಯುವಾಗಲೂ ಇದರೊಂದಿಗೆ ಕನ್ನಡ ಅಸ್ಮಿತೆಗೆ ತಗುಲಿದ ಮತೀಯ ಸೋಂಕನ್ನು ಅಗತ್ಯವಾಗಿ ಗಮನಿಸಬೇಕು.

೨೫. ವಿವಿಧ ಕಾಲಘಟ್ಟಗಳಲ್ಲಿ ಹಲವು ಪ್ರಭುತ್ವದ ಭಾಷೆಗಳು ಇದ್ದ ಸಂದರ್ಭದಲ್ಲಿ ದೇಶಿ ಭಾಷೆ ಯಾವ ಪ್ರಭುತ್ವದ ಭಾಷೆಗೆ ಹೆಚ್ಚಿನ ಒಲವು ತೋರುತ್ತದೆ ಮತ್ತು ಯಾವ ಪ್ರಭುತ್ವದ ಭಾಷೆಯನ್ನು ದೂರೀಕರಿಸುತ್ತದೆ ಎನ್ನುವುದು ಸಮಾಜದ ಯಾವ ವರ್ಗ ದೇಶಿ ಭಾಷೆಯನ್ನು ನಿರ್ದೇಶಿಸುತ್ತಿದೆ ಎನ್ನುವುದರ ಮೇಲೆ ನಿರ್ಧರಿತವಾಗುತ್ತದೆ. ದೇಶಿ ಭಾಷೆಯನ್ನು ಪ್ರಭುತ್ವದ ಭಾಷೆಗೆ ನಿಕಟವಾಗಿಸುವುದರ ಮತ್ತು ದೂರೀಕರಿಸುವ ಹಿಂದೆ ಭಾಷೆಯ ಮೂಲಕ ಸಮಾಜವೊಂದನ್ನು ಮತೀಕರಣಗೊಳಿಸುವ ಪ್ರಯತ್ನವನ್ನು ಗುರುತಿಸಬಹುದು. ಕರ್ನಾಟಕದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಪ್ರಭುತ್ವದ ಭಾಷೆಗಳಾಗಿದ್ದ ಸಂಸ್ಕೃತ ಮತ್ತು ಫಾರ್ಸಿ ಭಾಷೆಗಳ ಜೊತೆ ಕನ್ನಡದ ಇಂದಿನ ಸಂಬಂಧ ಇದಕ್ಕೆ ನಿದರ್ಶನವಾಗಿದೆ.

೨೬. ಸಾಮಾಜಿಕ ನೆಲೆಯ ಕನ್ನಡ ಅಸ್ಮಿತೆಯ ಒಂದು ಧಾರೆಯಲ್ಲಿ ಕನ್ನಡ ಭಾಷೆಯ ಕಲಿಕೆಗೆ ಸಂಬಂಧಿಸಿದಂತೆ ಧಾರ್ಮಿಕ ಅಲ್ಪಸಂಖ್ಯಾತರನ್ನು ಮತ್ತು ಭಾಷಾ ಅಲ್ಪಸಂಖ್ಯಾತರನ್ನು ಒಂದೇ ರೀತಿಯಲ್ಲಿ ಗ್ರಹಿಸಲಾಗುತ್ತದೆ. ಆದರೆ ಇದು ತರ್ಕಹೀನವಾದ ಅವಾಸ್ತವಿಕ ಚಿಂತನೆಯಾಗಿದೆ. ಭಾಷಾ ಅಲ್ಪಸಂಖ್ಯಾತರು ಹೊರ ರಾಜ್ಯದಿಂದ ಬಂದವರಾಗಿದ್ದರೆ ಅವರಿಗೆ ಕನ್ನಡ ಕಲಿಸುವ ಅಗತ್ಯ ಸಹಜವಾಗಿ ಬರುತ್ತದೆ. ಆದರೆ ಧಾರ್ಮಿಕ ಅಲ್ಪಸಂಖ್ಯಾತರು ಈ ರಾಜ್ಯದಲ್ಲಿಯೇ ಹುಟ್ಟಿ ಬದುಕುತ್ತಿರುವವರು. ಇವರಲ್ಲಿ ಕೆಲವರು ಕನ್ನಡ ಭಾಷೆ ಕಲಿತಿಲ್ಲ ಎಂದರೆ ಅದಕ್ಕೆ ಕಾರಣ ಅವರ ಧರ್ಮವಾಗಿರದೆ ಅವರು ನೆಲೆಸಿರುವ ಭಾಷಿಕ ಪರಿಸರ ಕಾರಣವಾಗಿರುತ್ತದೆ. ಇದು ಧಾರ್ಮಿಕ ಅಲ್ಪಸಂಖ್ಯಾತರಿಗೆ ಮಾತ್ರ ಸಂಬಂಧಿಸಿದ ವಿದ್ಯಮಾನವಲ್ಲ. ಪರಿಸರದ ಕಾರಣದಿಂದ ಕನ್ನಡವನ್ನು ಕಲಿಯದಿರುವ ಅಥವಾ ಅರೆಬರೆ ಕಲಿತಿರುವ ಹಿಂದೂಗಳೂ ಸೇರಿದಂತೆ ವಿವಿಧ ಜಾತಿ ಜನಾಂಗಗಳ ಜನರು ಸಾಕಷ್ಟು ಪ್ರಮಾಣದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರನ್ನು ಕುರಿತು ಸಮಾಜದಲ್ಲಿ ಹರಡಿರುವ ಪೂರ್ವಗ್ರಹಗಳಿಗೆ ಸಾಮಾಜಿಕ ನೆಲೆಯಲ್ಲಿ ಕನ್ನಡ ಅಸ್ಮಿತೆಯನ್ನು ನೋಡುವ ಚಿಂತಕರೂ ಒಳಗಾಗಿದ್ದಾರೆ ಎಂಬುದು ತಿಳಿಯುತ್ತದೆ.

೧೧.೨ ತೊಡಕು ಮತ್ತು ಸಾಧ್ಯತೆ

೧. ಒಬ್ಬರು ಚಿಂತಕರ ಚಿಂತನೆಗಳು ಹಲವು ನೆಲೆಗಳಲ್ಲಿ ಹರಡಿದ್ದಾಗ ಅವರನ್ನು ಯಾವ ನೆಲೆಯ ಚೌಕಟ್ಟಿನಲ್ಲಿ ಅಧ್ಯಯನ ಮಾಡಬೇಕೆಂಬ ತೊಡಕು ಸಂಶೋಧನೆಯ ಸಂದರ್ಭದಲ್ಲಿ ಉಂಟಾಗಿದ್ದು ಸಹಜ. ನಿದರ್ಶನಕ್ಕೆ ಕುವೆಂಪು ಅವರನ್ನೇ ತೆಗದುಕೊಂಡರೆ ಕನ್ನಡ ಅಸ್ಮಿತೆ ಕುರಿತ ಅವರ ಚಿಂತನೆಗಳು ಸಾಹಿತ್ಯದ ನೆಲೆಯಲ್ಲಿರುವಂತೆಯೇ ಸಾಂಸ್ಕೃತಿಕ ಹುಡುಕಾಟದ ನೆಲೆಯಲ್ಲಿಯೂ ಇವೆ. ಅನಂತಮೂರ್ತಿ ಅವರ ಚಿಂತನೆಗಳು ಸಾಂಸ್ಕೃತಿಕ ನೆಲೆಯಲ್ಲಿರುವಂತೆಯೇ ಸಾಹಿತ್ಯಕ ನೆಲೆಯಲ್ಲಿಯೂ ಇವೆ. ಜನಪ್ರಿಯ ನೆಲೆಯಲ್ಲಿರುವ ಅನಕೃ ಅವರ ಚಿಂತನೆಗಳು ಸಾಂಸ್ಕೃತಿಕ ನೆಲೆಗೂ ವಿಸ್ತರಣೆ ಪಡೆಯುತ್ತವೆ. ಹೀಗಿರುವಾಗ ಈ ಚಿಂತಕರನ್ನು ಒಂದು ನೆಲೆಯ ಚಿಂತನಾಧಾರೆಯ ಚೌಕಟ್ಟಿಗೆ ಒಳಪಡಿಸುವುದು ಅಸಾಧ್ಯದ ಸಂಗತಿ. ಮೇಲ್ನೋಟಕ್ಕೆ ಇದೊಂದು ತೊಡಕು. ಆದರೆ ಚಿಂತಕರೊಬ್ಬರಲ್ಲಿ ಹೀಗೆ ವಿವಿಧ ನೆಲೆಯ ಚಿಂತನೆಗಳಿದ್ದರೂ ಆ ಚಿಂತನೆಗಳು ಆ ಚಿಂತಕರ ನಿರ್ದಿಷ್ಟ ನೆಲೆಯ ಚಿಂತನೆಗೆ ಕೊಂಡೊಯ್ಯುವ ಪೂರಕ ಚಿಂತನೆಗಳಾಗಿರುತ್ತವೆ ಎಂಬುದನ್ನು ಕಂಡುಕೊಳ್ಳಲಾಯಿತು. ಆ ನಿರ್ದಿಷ್ಟ ನೆಲೆಯನ್ನು ಗುರುತಿಸಿ ಈ ತೊಡಕನ್ನು ಬಿಡಿಸಿಕೊಳ್ಳಲಾಯಿತು.

೨. ಈ ಅಧ್ಯಯನದಲ್ಲಿ ಆಯ್ದುಕೊಳ್ಳಲಾದ ಚಿಂತಕರ ಬರಹದ ಪ್ರಮಾಣ ಅಗಾಧವಾದುದು. ಈ ಬರಹಗಳಲ್ಲಿ ನಿರ್ದಿಷ್ಟವಾಗಿ ಕನ್ನಡ ಅಸ್ಮಿತೆಯನ್ನು ಕುರಿತೇ ಇರುವ ಬರಹಗಳ ಪ್ರಮಾಣ ಒಟ್ಟು ಬರಹಕ್ಕೆ ಹೋಲಿಸಿದರೆ ಗಮನಾರ್ಹವಾಗಿ ಕಡಿಮೆಯಾದರೂ ಜಾಗತೀಕರಣ, ರಾಷ್ಟ್ರೀಯತೆ, ಶಿಕ್ಷಣ, ಮೂಲಭೂತವಾದ ಇತ್ಯಾದಿ ಕುರಿತ ಬರಹಗಳಲ್ಲಿಯೂ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳು ಬೇರ್ಪಡಿಸಲಾಗದಂತೆ ಸೇರಿಕೊಂಡಿವೆ. ಆದ್ದರಿಂದ ಈ ಬರಹಗಳನ್ನು ಗಮನಿಸದೇ ಇರುವುದೂ ಕೂಡ ಅಸಾಧ್ಯವಾಗಿರುವಂತಹದು. ಈ ತೊಡಕನ್ನು ಕನ್ನಡ ಅಸ್ಮಿತೆಗೆ ನೇರ ಲಗತ್ತಾಗಿರುವ ಸಂಗತಿಗಳನ್ನು ಕೇಂದ್ರೀಕರಿಸುವುದರ ಮೂಲಕ ನಿವಾರಿಸಿಕೊಳ್ಳಲಾಯಿತು.

೩. ಒಬ್ಬ ಚಿಂತಕನ ೩೦–೪೦ ವರ್ಷಗಳ ಬೌದ್ಧಿಕ ಯಾನದಲ್ಲಿ ಪರಸ್ಪರ ವಿರುದ್ಧವೆನಿಸುವ ಚಿಂತನೆಗಳು ಒಡಮೂಡಲು ಸಾಧ್ಯ. ಇದಕ್ಕೆ ಆ ಚಿಂತಕ ಹಾದುಬಂದ ಕಾಲಘಟ್ಟದ ಸ್ಥಿತ್ಯಂತರಗಳು, ಹೊಸ ವಿದ್ಯಮಾನಗಳಿಂದ, ಓದಿನಿಂದ ದಕ್ಕಿದ ಹೊಸ ಅರಿವು ಚಿಂತನೆಗಳು ರೂಪಾಂತರಕ್ಕೆ, ಪರಿವರ್ತನೆಗೆ ಕಾರಣವಾಗಬಹುದು. ಈ ಅಧ್ಯಯನದ ಕಾಲಘಟ್ಟವಾದ ೨೦ನೇ ಶತಮಾನವಂತೂ ರಾಜಪ್ರಭುತ್ವ, ಬ್ರಿಟಿಷ್ ವಸಾಹತುಶಾಹಿ, ಪ್ರಜಾಪ್ರಭುತ್ವ, ನವವಸಾಹತುಶಾಹಿ ಈ ಎಲ್ಲಾ ಒಂದರೊಡನೊಂದುಗೂಡಿದ, ಪ್ರತ್ಯೇಕವಾಗಿಯೂ ಇದ್ದ ರಾಜಕೀಯ ವ್ಯವಸ್ಥೆಗಳಿಗೆ ಮೈಯೊಡ್ಡಿದ ದೈನ್ಯತೆ–ಪ್ರತಿರೋಧ–ಆತ್ಮಾಭಿಮಾನ–

ಅಸಾಹಾಯಕತೆಗಳು ಮೇಳೈಸಿದ ಕಾಲ. ಈ ಸಂದರ್ಭದಲ್ಲಿ ಚಿಂತಕರ ಚಿಂತನೆಗಳಲ್ಲಿನ ವೈರುಧ್ಯಗಳನ್ನು ಬದಿಗೆ ಸರಿಸದೆ ಆ ವೈರುಧ್ಯಗಳನ್ನು ಅವುಗಳಿಗೆ ಮೂಲವಾದ ಚಾರಿತ್ರಿಕ ಸನ್ನಿವೇಷದಲ್ಲಿಟ್ಟು ಉಂಟಾದ ತೊಡಕುಗಳನ್ನು ಬಗೆಹರಿಸಿಕೊಳ್ಳಲಾಯಿತು.

೪. ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾದ ಪ್ರಾತಿನಿಧಿಕ ಚಿಂತಕರ ಯಾದಿಯಲ್ಲಿ ಒಬ್ಬರು ಮಹಿಳೆಯರೂ ಇಲ್ಲ. ರಾಷ್ಟ್ರೀಯತೆ, ಜನಭಾಷೆ ಇಂತಹ ಅಧ್ಯಯನ ವಿಷಯಗಳಲ್ಲೆಲ್ಲ ಎದ್ದು ಕಾಣುವ ಕೊರತೆಯಿದು. ಮಹಿಳಾ ಚಿಂತಕಿಯರು ಕನ್ನಡ ಅಸ್ಮಿತೆಯನ್ನು ಕುರಿತು ನಡೆಸಿರುವ ಚಿಂತನೆಗಳನ್ನು ಅರಿಯುವ ಅಗತ್ಯವಿದೆ. ಇದುವೇ ಒಂದು ವಿಸ್ತೃತ ಅಧ್ಯಯನವಾಗುವ ಎಲ್ಲ ಸಾಧ್ಯತೆಗಳಿವೆ. ಈ ಅಧ್ಯಯನದಲ್ಲಿ ದಲಿತ ಚಿಂತಕರ ಕನ್ನಡ ಅಸ್ಮಿತೆ ಕುರಿತ ಚಿಂತನೆಗಳನ್ನು ಸಾಮಾಜಿಕ ನೆಲೆಯ ಅಧ್ಯಾಯದಲ್ಲಿ ಚರ್ಚಿಸಿದ್ದರೂ ಅದೂ ಕೂಡ ವಿಸ್ತೃತ ಅಧ್ಯಯನವಾಗುವ ಕಸುವುಳ್ಳ ಕ್ಷೇತ್ರವಾಗಿದೆ. ಕನ್ನಡ ಅಸ್ಮಿತೆ ಕುರಿತು ಮುಸ್ಲಿಂ, ಕ್ರಿಶ್ಚಿಯನ್ನರಂತಹ ಅಲ್ಪಸಂಖ್ಯಾತ ಸಮುದಾಯದ ಚಿಂತಕರ ಚಿಂತನೆಗಳ ಅಧ್ಯಯನವೂ ಆಗಬೇಕಾಗಿದೆ. ಮೇಲ್ಕಂಡ ಅಧ್ಯಯನಗಳ ಅಗತ್ಯವಿರುವುದು ಅಧ್ಯಯನಕ್ಕೆ ಬೇಕಾದಷ್ಟು ಆಕರಗಳು ಸಿಗುತ್ತವೆ ಎನ್ನುವ ಕಾರಣಕ್ಕಲ್ಲ. ಬದಲಿಗೆ ಕನ್ನಡ ಅಸ್ಮಿತೆಯ ಕೊರತೆಗಳನ್ನು ಅರಿತು ಅದನ್ನು ಸರಿಪಡಿಸಿಕೊಳ್ಳಲು. ಹೀಗೆ ಸರಿಪಡಿಸಿಕೊಳ್ಳುವುದರ ಮೂಲಕ ಕನ್ನಡಕ್ಕೆ, ಕನ್ನಡ ಬದುಕಿಗೆ ಶಕ್ತಿ ತುಂಬಲು.

ಕನ್ನಡ ಬದುಕಿನ ಚರಿತ್ರೆಯ ಹುಸಿ–ನಿಜದ ವೈಭವ ಮತ್ತು ಎದುರಾದ ಹುಸಿ–ನಿಜದ ವಿದ್ರೋಹವನ್ನು ಲಗತ್ತಿಸುವ ಮೂಲಕ ಹೆಮ್ಮೆ ಅಥವಾ ದ್ವೇಷ ಹುಟ್ಟಿಸುವ ನಿರ್ದಿಷ್ಟ ಗುರುತುಗಳೊಳಗೆ ಕನ್ನಡ ಅಸ್ಮಿತೆಯನ್ನು ಬಂಧಿಸಿಡುವ ಚಿಂತನಾಧಾರೆ ಏಕೀಕರಣ ಚಳುವಳಿ ಸಂದರ್ಭದಲ್ಲಿಯೇ ಕ್ರಿಯಾಶೀಲವಾಗಿತ್ತು. ನಿರ್ದಿಷ್ಟ ಗುರುತುಗಳೇ ಕನ್ನಡ ಅಸ್ಮಿತೆಗೆ ಎರವಾಗುವ ಅಪಾಯವನ್ನು ಗ್ರಹಿಸಿ ಅದಕ್ಕೆ ಪರ್ಯಾಯಗಳನ್ನು ನೀಡುವ ಚಿಂತನಾಧಾರೆಯೂ ಈ ಹೊತ್ತಿನಲ್ಲಿಯೇ ಮೊಳಕೆಯೊಡೆಯಿತು. ಈ ಅಧ್ಯಯನ ಕಂಡುಕೊಂಡಂತೆ ಕನ್ನಡ ಅಸ್ಮಿತೆಯನ್ನು ಸ್ಥಾವರಗೊಳಿಸುವ ಮತ್ತು ಅನಿಕೇತನಗೊಳಿಸುವ ಚಿಂತನಾಧಾರೆಗಳ ನಡುವಿನ ಸಂಘರ್ಷವೇ ಇಪ್ಪತ್ತನೆಯ ಶತಮಾನದ ಕನ್ನಡದ ಕಥನವಾಗಿದೆ. ಸ್ಥಾವರಗೊಳಿಸುವ ಚಿಂತನೆಗಳ ಹಿಂದೆ ಯಥಾಸ್ಥಿತಿವಾದದ ಮುಂದುವರಿಕೆಯ ಹುನ್ನಾರಗಳಿದ್ದರೆ ಅನಿಕೇತನಗೊಳಿಸುವ ಚಿಂತನೆಗಳ ಹಿಂದೆ ಯಥಾಸ್ಥಿತಿಯನ್ನು ಮುರಿದು ಚಲನಶೀಲಗೊಳಿಸುವ ಹಂಬಲಗಳಿವೆ. ಸಾರಾಂಶದಲ್ಲಿ, ಇಲ್ಲಿ ಯಥಾಸ್ಥಿತಿಯನ್ನು ಮುಂದುವರೆಸುವ ಅಥವಾ ಚಲನಶೀಲಗೊಳಿಸುವ ಚಿಂತನೆಗಳ ಹಿಂದೆ ಭಾಷೆ ಸಾಧನ ಮಾತ್ರವಾಗಿದ್ದು ಅದರ ಕೇಂದ್ರದಲ್ಲಿರುವುದು ಸಾಮಾಜಿಕ ವ್ಯವಸ್ಥೆಯಾಗಿದೆ. ಕರ್ನಾಟಕದಲ್ಲಿ

ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳು ಹಾಗೂ ಮತೀಯ ಪೂರ್ವಗ್ರಹಗಳು ಮೇಲುಗೈ ಪಡೆದಿರುವಷ್ಟು ಕಾಲವೂ ಕನ್ನಡ ಭಾಷಿಕ ಸಮಸ್ಯೆಗಳಿಗೆ ಬಿಡುಗಡೆಯಿಲ್ಲ. 'ಗತವೈಭವ'ದ ಕುರಿತ ಚರ್ಚೆಗಳನ್ನು ಬದಿಗಿಟ್ಟು ಅಂತಹದ್ದೊಂದು 'ಗತವೈಭವ' ನಮಗಿತ್ತು ಎಂದು ಭಾವಿಸಿದರೂ, ಅಂತಹ ವೈಭವದ ರಥದಲ್ಲಿ ಉತ್ಸವಮೂರ್ತಿಗಳಾಗಿ ಕುಳಿತವರ ಜೊತೆ ಜಾತಿ-ಧರ್ಮಗಳ ಹಂಗು ತೊರೆದು ರಥವನ್ನು ಮುನ್ನಡೆಸಲು ಬೆವರು ಹರಿಸಿದ ಅನಾಮಿಕರೇ ಕನ್ನಡದ ಅಂತಃಸತ್ವ ಎಂದು ಗುರುತಿಸಲು ಸಾಧ್ಯವಾದರೆ ಕನ್ನಡ ಅಸ್ಮಿತೆ ಜೀವಂತಿಕೆಯಿಂದ ಪುಟಿಯುತ್ತದೆ.

ಮೂಲಭೂತವಾದಿಗಳಿರಲಿ, ಪ್ರಗತಿಪರರಿರಲಿ, ದೇಶಿ ಭಾಷೆಗಳಿಗೆ ಮತ್ತು ನಾಡಿನ ದೊಡ್ಡ ಪ್ರಮಾಣದಲ್ಲಿರುವ ಕೆಳಸಮುದಾಯಗಳಿಗೆ ಕುತ್ತಾಗಿ ಪರಿಣಮಿಸಿರುವ, ನವಬಂಡವಾಳಶಾಹಿಯನ್ನು ಕಟುವಿರೋಧ ಮಾಡುತ್ತಿರುವ ಸಮಾಜದ ಎಲ್ಲಾ ಪ್ರಜ್ಞಾವಂತ ವರ್ಗಗಳೂ ಒಂದಲ್ಲಾ ಒಂದು ಬಗೆಯಲ್ಲಿ, ದಕ್ಕಿದ ಫಲದ ಪ್ರಮಾಣದಲ್ಲಿ ವ್ಯತ್ಯಾಸಗಳಿದ್ದರೂ, ಅದರ ಫಲಾನುಭವಿಗಳೇ ಆಗಿವೆ. ಜೊತೆಗೆ ಇವುಗಳದ್ದು ನವಬಂಡವಾಳಶಾಹಿ ಸೃಷ್ಟಿಸಿಕೊಟ್ಟಿರುವ ಜೀವನಶೈಲಿಯೇ ಆಗಿದೆ. ಸಾರಾಂಶದಲ್ಲಿ ಗೊತ್ತಿದ್ದೊ ಗೊತ್ತಿಲ್ಲದೆಯೊ ಇವು ನವಸಾಮ್ರಾಜ್ಯಶಾಹಿಯ ಆಳ್ವಿಕೆಯನ್ನು ಮುಂದುವರೆಸುತ್ತಿರುವ ಇತರೆಲ್ಲ ವರ್ಗಗಳ ಜೊತೆ ಕೈ ಜೋಡಿಸಿವೆ. ಇದನ್ನು ಒಪ್ಪಿಕೊಳ್ಳದಿದ್ದರೆ ಅದು ಆಷಾಡಭೂತಿತನವಾಗುತ್ತದೆ. ಈ ಸಂದಿಗ್ದದಿಂದ ನಮ್ಮನ್ನು ಪಾರು ಮಾಡಬಲ್ಲವನು ಬಹುಷಃ ಗಾಂಧಿ ಮಾತ್ರ. ಕನ್ನಡ ವಿಚಾರ ಸಾಹಿತ್ಯದ ವಿಶಿಷ್ಟತೆಯಿರುವುದು ಜಡಪಾಂಡಿತ್ಯದ ವಿಚಾರ ಮಂಡನೆಗೆ ಬದಲಾಗಿ ಅದರ ಆಯ್ಕೆ ತನ್ನನ್ನು ತಾನು ನೋಡಿಕೊಳ್ಳುವ ಕಡು ಆತ್ಮವಿಮರ್ಶೆಯ ಹಾದಿಯಾಗಿರುವುದು. ಇದು ಯಾವ ಕಾಲಕ್ಕೂ ನಮ್ಮನ್ನು ಎಚ್ಚರಗೆಡದಂತೆ ಮುನ್ನಡೆಸುವ ವಚನಕಾರರು ತೋರಿದ ಹಾದಿ. ಈ ಬಗೆಯಲ್ಲಿ ವಚನಕಾರರು ನಮ್ಮ ಪ್ರಜ್ಞೆಯಲ್ಲಿ ಇರುವವರೆಗೂ ಕನ್ನಡ ಅಸ್ಮಿತೆಗೆ ತನ್ನನ್ನು ತಾನು ಕಾಪಾಡಿಕೊಳ್ಳುವ ರೋಗನಿರೋಧಕ ಶಕ್ತಿ ಕುಂದಲು ಸಾಧ್ಯವಿಲ್ಲ.

ಅಧ್ಯಯನ ಸೂಚಿ

ಅ. ಪ್ರಾಥಮಿಕ ಆಕರಗಳು

೧. ಅನಂತಮೂರ್ತಿ. ಯು.ಆರ್., ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೬೫

೨. ಅನಂತಮೂರ್ತಿ. ಯು.ಆರ್., ಬೆತ್ತಲೆ ಪೂಜೆ ಯಾಕೆ ಕೂಡದು?, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೬

೩. ಅನಂತಮೂರ್ತಿ. ಯು.ಆರ್., ಸನ್ನಿವೇಶ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೭೪

೪. ಅನಂತಮೂರ್ತಿ ಯು.ಆರ್., ಪೂರ್ವಾಪರ, ಅಕ್ಷರ ಪ್ರಕಾಶನ, ಹೆಗ್ಗೊಡು, ೧೯೯೬

೫. ಅನಂತಮೂರ್ತಿ. ಯು.ಆರ್., ವಾಲ್ಮೀಕಿಯ ನೆವದಲ್ಲಿ, ಅಭಿನವ ಪ್ರಕಾಶನ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೬

೬. ಅ.ನ.ಕೃ, ಅ.ನ.ಕೃಷ್ಣರಾಯರ ಸಾಹಿತ್ಯ ಶ್ರೇಣಿ (ಸಂಪುಟ.೩), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧

೭. ಅ.ನ.ಕೃ, ಅ.ನ.ಕೃಷ್ಣರಾಯರ ಸಾಹಿತ್ಯ ಶ್ರೇಣಿ (ಸಂಪುಟ.೪), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧

೮. ಅ.ನ.ಕೃ, ಅ.ನ.ಕೃಷ್ಣರಾಯರ ಸಾಹಿತ್ಯ ಶ್ರೇಣಿ (ಸಂಪುಟ.೬), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,೨೦೧೧

೯. ಆಲೂರು ವೆಂಕಟರಾಯರು, ಕರ್ನಾಟಕ ಗತ ವೈಭವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬ (೧೯೫೦)

೧೦. ಆಲೂರು ವೆಂಕಟರಾಯರು, ಕರ್ನಾಟಕತ್ವದ ವಿಕಾಸ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯ (೧೯೫೭)

೧೧. ಕುವೆಂಪು, ಕುವೆಂಪು ಸಮಗ್ರ ಕಾವ್ಯ , ಸಂಪುಟ-೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

೧೨. ಕುವೆಂಪು, ಕುವೆಂಪು ಸಮಗ್ರ ಗದ್ಯ, ಸಂಪುಟ-೧, (ಸಂ) ಡಾ.ಕೆ.ಸಿ ಶಿವಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ,೨೦೦೩

೧೩. ಕುವೆಂಪು, ಕುವೆಂಪು ಸಮಗ್ರ ಗದ್ಯ, ಸಂಪುಟ-೨, (ಸಂ) ಡಾ.ಕೆ.ಸಿ ಶಿವಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ,೨೦೦೪

೧೪. ಗೋವಿಂದರಾಜು, ಸಿ.ಆರ್., ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೧೫. ಚಿದಾನಂದಮೂರ್ತಿ ಎಂ., ಬೃಹತ್ ಕರ್ನಾಟಕ : ಭಾಷಿಕ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೧೬. ಚಿದಾನಂದಮೂರ್ತಿ ಎಂ., ಚಿದಾನಂದಾಯಣ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೨

೧೭. ಜೋಶಿ ಶಂಬಾ, ಶಿವರಹಸ್ಯ, ಮೋಹನ ಮುದ್ರಣಾಲಯ, ಧಾರವಾಡ, ೧೯೩೯

೧೮. ಜೋಶಿ ಶಂಬಾ, ಕಣ್ಮರೆಯಾದ ಕನ್ನಡ, ಶಂ.ಬಾ ವಿಚಾರ ವೇದಿಕೆ, ಬೆಂಗಳೂರು, ೧೯೯೩

೧೯. ಜೋಶಿ ಶಂಬಾ, ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ, ಮಾನವಧರ್ಮ ಪ್ರತಿಷ್ಠಾನ, ಧಾರವಾಡ, ೨೦೦೮

೨೦. ದೇವನೂರು ಮಹಾದೇವ, ಎದೆಗೆ ಬಿದ್ದ ಅಕ್ಷರ, ಅಭಿನವ ಪ್ರಕಾಶನ, ೨೦೧೩

೨೧. ನಾರಾಯಣಗೌಡ. ಟಿ., ನೇರ ನುಡಿ, ಕರವೇ ನಲ್ನುಡಿ, ಡಿಸೆಂಬರ್ ೨೦೧೨

೨೨. ನಾರಾಯಣ ಕೆ.ವಿ., (ಸಂ), ಭಾಷೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯ (೨೦೦೦)

೨೩. ಬರಗೂರು ರಾಮಚಂದ್ರಪ್ಪ, ಕನ್ನಡಪ್ರಜ್ಞೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೨೪. ಬರಗೂರು ರಾಮಚಂದ್ರಪ್ಪ, ಕನ್ನಡಾಭಿಮಾನ, ಅಂಕಿತ ಪ್ರಕಾಶನ,ಬೆಂಗಳೂರು, ೨೦೦೨

೨೫. ಬಿ.ಎಂ.ಶ್ರೀ, (ಸಂ) ಕನ್ನಡದ ಬಾವುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,೧೯೯೫ (೧೯೩೮)

೨೬. ಬಿ.ಎಂ.ಶ್ರೀ, ಶ್ರೀ ಸಾಹಿತ್ಯ, (ಸಂ) ಡಿ.ಕೆ.ರಾಜೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೨

೨೭. ಲಂಕೇಶ್. ಪಿ., ಟೀಕೆ–ಟಿಪ್ಪಣಿ, ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೯೧

೨೮. ಲಂಕೇಶ್. ಪಿ., ಸಾಹಿತಿ, ಸಾಹಿತ್ಯ, ವಿಮರ್ಶೆ, (ಸಂ.) ಪ್ರೊ.ವಿ.ಎಸ್ ಶ್ರೀಧರ್, ಪತ್ರಿಕೆ ಪ್ರಕಾಶನ, ಬೆಂಗಳೂರು, ೨೦೦೮

೨೯. ಲಂಕೇಶ್. ಪಿ., ಸಾಹಿತಿ, ಟೀಕೆ–ಟಿಪ್ಪಣಿ, ಸಂಪುಟ.೩ (ಸಂ) ಪಾರ್ವತೀಶ, ಪತ್ರಿಕೆ ಪ್ರಕಾಶನ, ಬೆಂಗಳೂರು, ೨೦೦೮

೩೦. ಲಂಕೇಶ್. ಪಿ., ಮರೆಯುವ ಮುನ್ನ, ಪತ್ರಿಕೆ ಪ್ರಕಾಶನ, ಬೆಂಗಳೂರು, ೨೦೧೦

೩೧. ಲಂಕೇಶ್. ಪಿ., ಬಿಟ್ಟು ಹೋದ ಪುಟಗಳು, ಪತ್ರಿಕೆ ಪ್ರಕಾಶನ, ಬೆಂಗಳೂರು, ೨೦೧೪

೩೨. ಸುಬ್ಬಣ್ಣ ಕೆ.ವಿ., ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೧೦

೩೩. ಶಂಕರ ಭಟ್ ಡಿ.ಎನ್., ಕನ್ನಡ ನುಡಿಯ ಬಗ್ಗೆ ಚಿಂತನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೩೪. ಶಂಕರ ಭಟ್, ಡಿ.ಎನ್., ಕನ್ನಡ ನುಡಿ ನಡೆದು ಬಂದ ದಾರಿ, ಬಾಶಾ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೯ (೨೦೦೭)

ಆ. ಪೂರಕ ಆಕರಗಳು

೧. ಅಂಗಡಿ, ಎಸ್.ಎಸ್., ಶಂಬಾ ಜೋಶಿ ಭಾಷಿಕ ವಿವೇಚನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೨. ಅಮರೇಶ ನುಗಡೋಣಿ (ಸಂ), ನುಡಿವ ಬೆಡಗು, ಕನ್ನಡ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩. ಅಮರೇಶ ನುಗಡೋಣಿ, ಹೈದರಾಬಾದು ಕರ್ನಾಟಕ ಹಾಡು ಪಾಡು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೪. ಆನಂದ್ ಜಿ., ನಮ್ಮ ಮೆಟ್ರೋ ಹಿಂದೀ ಬೇಡ (ನುಡಿ ಸಮಾನತೆಯತ್ತ ಒಂದು ಹೆಜ್ಜೆ), ಬನವಾಸಿ ಬಳಗ, ೨೦೧೭

೫. ಆನಂದ್ ಜಿ., ಕನ್ನಡಿಗ, ಬನವಾಸಿ ಬಳಗ, ೨೦೧೭

೬. ಆರ್ವಿಯಸ್ ಸುಂದರಂ, ಶಾಸ್ತ್ರೀಯ ಕನ್ನಡ ಭಾಷೆ, ಅಭಿರುಚಿ ಪ್ರಕಾಶನ, ಮೈಸೂರು, ೨೦೦೯

೭. ಕರೀಗೌಡ ಬೀಚನಹಳ್ಳಿ,(ಸಂ) ಕನ್ನಡ ವಾರ್ಷಿಕ ೧೯೯೩, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

೮. ಕರೀಗೌಡ ಬೀಚನಹಳ್ಳಿ, ಬಿ.ಎಂ.ಶ್ರೀ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩

೯. ಕರಿಮನಿ ಸಿ.ವಿ., (ಸಂ) ಚೆಲುವ ಕನ್ನಡ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೨

೧೦. ಕೃಷ್ಣಭಟ್ಟ ಸೇಡಿಯಾಪು, ವಿಚಾರ ಪ್ರಪಂಚ, (ಸಂ) ಪಾದೇಕಲ್ಲು ವಿಷ್ಣು ಭಟ್ಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧

೧೧. ಕೃಷ್ಣಪರಮೇಶ್ವರ ಭಟ್ಟ, ಭಾಷೆ ಮತ್ತು ಸಾಮಾಜಿಕ ಸಂದರ್ಭ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೩

೧೨. ಕೃಷ್ಣಪ್ಪ.ಬಿ., ಪ್ರೊ.ಬಿ. ಕೃಷ್ಣಪ್ಪ ಚಿಂತನೆಗಳು ಮತ್ತು ಬರಹಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೧೩. ಕೃಷ್ಣಯ್ಯ ಎಂ.ಎಚ್., ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೨೦೦೨

೧೪. ಕುರ್ತಕೋಟಿ ಕೀರ್ತಿನಾಥ, ಉರಿಯ ನಾಲಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,೨೦೦೬

೧೫. ಗಣೇಶ್ ಮೊಗಳ್ಳಿ, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೬. ಗಾಯಕ್ವಾಡ್ ವಿಠಲರಾವ್ ಟಿ., ಕನ್ನಡ–ಮರಾಠಿ ಸಾಂಸ್ಕೃತಿಕ ಬಾಂಧವ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨

೧೭. ಗಣೇಶ್ ಮೊಗಳ್ಳಿ, ಶಂಬಾ ಭಾಷಿಕ ಸಂಶೋಧನೆ, ಅಂಕಿತ ಪ್ರಕಾಶನ, ೨೦೧೪

೧೮. ಗಾಂಧಿ, ಹಿಂದ್ ಸ್ವರಾಜ್ಯ, (ಅನು: ಉಷಾ ಬಿ.ಎ), ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಬೆಂಗಳೂರು, ೧೯೯೭

೧೯. ಗೂಗಿ ವಾ ಥಿಯಾಂಗೊ, ವಸಾಹತು ಪ್ರಜ್ಞೆ ಮತ್ತು ವಿಮೋಚನೆ, (ಅನುವಾದ) ರಹಮತ್ ತರೀಕೆರೆ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೧

೨೦. ಗೋವಿಂದ ಪೈ ಎಂ., ಕನ್ನಡದ ಮೊರೆ, (ಸಂ) ದೇ ಜವರೇಗೌಡ, ಕಾವ್ಯಾಲಯ, ಮೈಸೂರು, ೧೯೭೫

೨೧. ಗೋವಿಂದರಾಜು ಸಿ.ಆರ್., ಕನ್ನಡಮ್ಮ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೨೨. ಗೋವಿಂದರಾಜು ಸಿ.ಆರ್., ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೨೩. ಗೌರೀಶ ಕಾಯ್ಕಿಣಿ, ಗೌರೀಶ ಕಾಯ್ಕಿಣಿ ಸಮಗ್ರ ಸಾಹಿತ್ಯ ಸಂಪುಟ.೧, (ಸಂ) ವಿಷ್ಣುನಾಯ್ಕ, ರಾಘವೇಂದ್ರ ಪ್ರಕಾಶನ, ಅಂಕೋಲ, ೧೯೯೩

೨೪. ಗೌರೀಶ ಕಾಯ್ಕಿಣಿ, ಗೌರೀಶ ಕಾಯ್ಕಿಣಿ ಆಯ್ದ ಲೇಖನಗಳು, (ಸಂ) ವಿಷ್ಣುನಾಯ್ಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೨೫. ಚಂದ್ರಶೇಖರ ಎಸ್., ಆಧುನಿಕ ಕರ್ನಾಟಕದ ಆಂದೋಲನಗಳು, ನಮ್ಮ ಪ್ರಕಾಶನ, ತಿಪಟೂರು, ೧೯೮೩

೨೬. ಚಂದ್ರಶೇಖರ ಎಸ್., ವಸಾಹತು ಕಾಲೀನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೨೭. ಚಂದ್ರಶೇಖರ ಕಂಬಾರ, ತುದಿಯಿರದ ದಾರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೨೮. ಚಿದಾನಂದಮೂರ್ತಿ ಎಂ., (ಸಂ) ಕನ್ನಡ-ಕನ್ನಡಿಗ-ಕರ್ನಾಟಕ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೬

೨೯. ಜಯಪ್ರಕಾಶ ಬಂಜಗೆರೆ, ಕನ್ನಡ ರಾಷ್ಟ್ರೀಯತೆ, ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು, ೨೦೦೦

೩೦. ಜಯಪ್ರಕಾಶ ಬಂಜಗೆರೆ, ಉಲಿಯ ಉಯ್ಯಲೆ, ಸಿ.ವಿ.ಜಿ ಪಬ್ಲಿಕೇಶನ್ಸ್, ಬೆಂಗಳೂರು, ೨೦೦೫

೩೧. ತಿರುಮಲೇಶ್ ಕೆ.ವಿ., ಇನ್ನಷ್ಟು ಕನ್ನಡ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೧

೩೨. ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಇದು ಮುಗಿಯದ ಕಥೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು,೨೦೦೪ (೧೯೮೮)

೩೩. ಧರ್ಮಪಾಲ್ (ಅನು: ಮಾಧವ ಪೆರಾಜೆ), ಚೆಲುವ ತರು (ಇಂಗ್ಲಿಶ್ ಮೂಲ : ದಿ ಬ್ಯೂಟಿಫುಲ್ ಟ್ರೀ), ಪರಿಸರ ಪ್ರಕಾಶನ, ಬೆಂಗಳೂರು, ೨೦೧೫

೩೪. ನಟರಾಜ್ ಹುಳಿಯಾರ್, ಗಾಳಿ ಬೆಳಕು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೧

೩೫. ನಟರಾಜ್ ಹುಳಿಯಾರ್ (ಸಂ), ಹಸಿರು ಸೇನಾನಿ- ಪ್ರೊ.ಎಂ.ಡಿ.ನಂಜುಂಡಸ್ವಾಮಿ ಹೋರಾಟ ಮತ್ತು ಚಿಂತನೆ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೨

೩೬. ನಾಗಭೂಷಣ. ಸಿ., ಕನ್ನಡ ನಾಡಿನ ಶಾಸನಗಳ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೩೭. ನಾಗಭೂಷಣಸ್ವಾಮಿ ಓ.ಎಲ್., ನುಡಿಯೊಳಗಾಗಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೩

೩೮. ನಾಗರಾಜ ಡಿ.ಆರ್., ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೬

೩೯. ನಾಗರಾಜ, ಡಿ.ಆರ್., ಸಂಸ್ಕೃತಿ ಕಥನ, ಸಂ.ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೪೦. ನಾಗರಾಜಯ್ಯ ಹಂ.ಪ., (ಸಂ), ಕಡೆಗೋಲು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೪೧. ನಾಗರಾಜಯ್ಯ ಹಂ.ಪ., (ಸಂ), ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು, ಸಂಪುಟ.೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫

೪೨. ನಾರಾಯಣ. ಕೆ.ವಿ., (ಸಂ), ಭಾಷೆ – ಕನ್ನಡ ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೪೩. ನಾರಾಯಣ ಕೆ.ವಿ., ಚಾಮ್ ಸ್ಕಿ ಜೊತೆಗೆ ಎರಡು ಹೆಜ್ಜೆ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೭

೪೪. ನಾರಾಯಣ.ಪಿ.ವಿ., ಕನ್ನಡತನ ಮತ್ತು ಭಾರತೀಯತೆ, ಸಾಹಿತಿಗಳ ಕಲಾವಿದರ ಬಳಗ, ಬೆಂಗಳೂರು, ೧೯೯೦

೪೫. ಪಾಟೀಲ ಪುಟ್ಟಪ್ಪ, ನನ್ನದು ಈ ಕನ್ನಡ ನಾಡು, ಎಸ್.ಬಿ.ಎಸ್ ಪಬ್ಲಿಷರ್ಸ್, ಬೆಂಗಳೂರು, ೧೯೯೨

೪೬. ಪಾಟೀಲ ಪುಟ್ಟಪ್ಪ, ಕನ್ನಡ ಕಾವಲು, ಸಂ.ಗುರುಲಿಂಗ ಕಾಪಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫

೪೭. ಪೂಜಾರಕಟ್ಟೆ ವಿರೂಪಾಕ್ಷಿ, ಏಕೀಕರಣ ಚಳವಳಿ ಮತ್ತು ಬಳ್ಳಾರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪

೪೮. ಪೂರ್ಣಿಮಾ. ಟಿ. ಸಿ., ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೪೯. ಪ್ರಭುಶಂಕರ, (ಸಂ) ಕೃತಿಶೀಲ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೫೦. ಪ್ರಸನ್ನ. ಎ.ವಿ., ಆಡಳಿತದಲ್ಲಿ ಕನ್ನಡ, ಕನ್ನಡ ನುಡಿ ಕನ್ನಡ ಗಡಿ ಜಾಗೃತಿ ಜಾಥ ಸಮಿತಿ, ಬೆಂಗಳೂರು, ೨೦೦೬

೫೧. ಪ್ರಶಾಂತ್ ಹೆಚ್.ಡಿ., ಶಿಕ್ಷಣ ಹಕ್ಕು ಕಾಯಿದೆ ೨೦೦೯, ಹಕ್ಕಲ್ಲ ಹಕ್ಕಿನ ಪ್ರತೀಕ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪

೫೨. ಬಸವರಾಜ ಕಲ್ಗುಡಿ (ಸಂ), ಸುವರ್ಣ ವಿಚಾರ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೫೩. ಬಸವರಾಜ ಸಬರದ, ಕನ್ನಡ ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೧೧

೫೪. ಬೋರಲಿಂಗಯ್ಯ ಹಿ.ಚಿ., ದೇಸಿ ಕನ್ನಡ ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬

೫೫. ಬೇವಿನಕಟ್ಟಿ ಮಂಜುನಾಥ್, ದೇಸಿ Vs ಜಾಗತೀಕರಣ, ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು, ೨೦೦೪

೫೬. ಬೇವಿನಕಟ್ಟಿ ಮಂಜುನಾಥ್, (ಸಂ) ಕನ್ನಡ ಸಾರ್ವಭೌಮತ್ವ ಕನಸಿನ ಆಯಾಮಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೫೭. ಭಗವತ್ ಶರಣ ಉಪಾಧ್ಯಾಯ, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ ಅನು: ಪ್ರಧಾನ ಗುರುದತ್ತ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೪

೫೮. ಮರುಳಸಿದ್ಧಪ್ಪ.ಕೆ., ಪಿ.ಲಂಕೇಶ್, ಸಾಹಿತ್ಯ ಅಕಾಡೆಮಿ, ನವದೆಹಲಿ,೨೦೦೮

೫೯. ಮಲ್ಲೇಪುರಂ.ಜಿ.ವೆಂಕಟೇಶ(ಸಂ), ಪಾತಳಿ, ಶಂಬಾ ವಿಚಾರ ವೇದಿಕೆ, ಕೆಂಪೇಗೌಡ ನಗರ, ಬೆಂಗಳೂರು, ೧೯೯೪

೬೦. ಮಲ್ಲೇಪುರಂ.ಜಿ.ವೆಂಕಟೇಶ(ಸಂ), ದ್ರಾವಿಡಶಾಸ್ತ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೬೧. ಮಹಾದೇವಯ್ಯ.ಪಿ., ಕನ್ನಡ ಭಾಷೆಯ ಕಲಿಕೆಯ ಸಮಸ್ಯೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೬೨. ಮಹಾದೇವಯ್ಯ.ಪಿ., (ಸಂ), ಶಂಬಾ ಜೋಶಿ ಚಿಂತನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫

೬೩. ಮುರಿಗೆಪ್ಪ ಎ., ಮುಖ್ಯಮಂತ್ರಿ ಚಂದ್ರು (ಸಂ), ಆಡಳಿತ ಕನ್ನಡ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦ (೨೦೦೯)

೬೪. ಮುಗಳಿ ರಂ.ಶ್ರೀ (ಸಂ), ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು(ಸಂಪುಟ.೧), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೦

೬೫. ಮೋಹನ ಆಳ್ವ, (ಸಂ), ಕನ್ನಡ ಮನಸ್ಸು : ಸಮನ್ವಯದೆಡೆಗೆ, ೨೦೧೦, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಮೂಡಬಿದರೆ, ೨೦೧೦

೬೬. ಮೋಹನಕೃಷ್ಣ ರೈ. ಕೆ., ತುಳುನಾಡು ಕನ್ನಡನುಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨

೬೭. ರಂಗನಾಥ ಕಂಟನಕುಂಟೆ, ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ, ಮುದ್ದುಶ್ರೀ ಗ್ರಂಥಮಾಲೆ, ಕೆ.ಎಸ್ ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, ೨೦೦೯

೬೮. ರವಿಕುಮಾರ. ನ., (ಸಂ) ನಮಗೆ ಬೇಕಾದ ಕನ್ನಡ, ಅಭಿನವ ಪ್ರಕಾಶನ, ಬೆಂಗಳೂರು,೨೦೦೯

೬೯. ರಹಮತ್ ತರೀಕೆರೆ, ಪ್ರತಿ ಸಂಸ್ಕೃತಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೦ (೧೯೯೩)

೭೦. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮ (೧೯೯೮)

೭೧. ರಹಮತ್ ತರೀಕೆರೆ, (ಸಂ.), ಕನ್ನಡ ಸಾಹಿತ್ಯ ಮೀಮಾಂಸೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೭೨. ರಹಮತ್ ತರೀಕೆರೆ, ಧರ್ಮಪರೀಕ್ಷೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು., ೨೦೦೮

೭೩. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,೨೦೧೦

೭೪. ರಹಮತ್ ತರೀಕೆರೆ, ಚಿಂತನೆಯ ಪಾಡು, ಅಂಕಿತ ಪ್ರಕಾಶನ, ಬೆಂಗಳೂರು,೨೦೧೦

೭೫. ರಹಮತ್ ತರೀಕೆರೆ, ತನ್ನತನದ ಹುಡುಕಾಟ, ಅಂತಃಕರಣ ಪ್ರಕಾಶನ, ಶಿವಮೊಗ್ಗ, ೨೦೧೧

೭೬. ರಹಮತ್ ತರೀಕೆರೆ (ಸಂ.), ಮಾತು ತಲೆಯೆತ್ತುವ ಬಗೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

೭೭. ರಹಮತ್ ತರೀಕೆರೆ, ಕನ್ನಡ ಸಾಹಿತ್ಯ ವಾಗ್ವಾದಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨

೭೮. ರಹಮತ್ ತರೀಕೆರೆ, ನೇತು ಬಿದ್ದ ನವಿಲು, ಲಂಕೇಶ್ ಪ್ರಕಾಶನ, ಬೆಂಗಳೂರು, ೨೦೧೩

೭೯. ರಾಘವೇಂದ್ರ ತೊಗರ್ಸಿ, ಸಮೂಹ ಸಂವಹನ ಕನ್ನಡ, ಆವಿ ಪುಸ್ತಕ ಮನೆ, ಬೆಂಗಳೂರು, ೨೦೦೬

೮೦. ರಾಜ್. ಎಚ್.ಎಸ್., ಕನ್ನಡಿಗರೂ ದ್ರಾವಿಡರೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೨

೮೧. ರಾಜಶೇಖರ ಜಿ., ಜಿ.ರಾಜಶೇಖರ ಅವರ ಆಯ್ದ ಬರಹಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೯

೮೨. ರಾಜಾರಾಮ ಹೆಗಡೆ, ವಸಾಹತುಪೂರ್ವ ಕರ್ನಾಟಕದ ರಾಜ್ಯ ಪದ್ಧತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೮೩. ರಾಜೇಂದ್ರ ಚೆನ್ನಿ, ಸಿರಾಜ್ ಅಹ್ಮದ್(ಸಂ), ಜಾಗತೀಕರಣ ಒಂದು ಸಮಗ್ರ ಮಂಥನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

೮೪. ರಾಜೇಂದ್ರ ಚೆನ್ನಿ, ಅಸಮಗ್ರ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ, ೨೦೧೦

೮೫. ರಾಮಚಂದ್ರೇಗೌಡ. ಹಿ.ಶಿ., ಕರ್ನಾಟಕ–ಕನ್ನಡ ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೮೬. ರಾಮಮನೋಹರ ಲೋಹಿಯಾ, ರಾಮಮನೋಹರ ಲೋಹಿಯಾ ಬರಹಗಳು–ಮಾರ್ಕ್ಸ್, ಗಾಂಧಿ ಸಮಾಜವಾದ, ಭಾಗ.೧, (ಸಂ) ನಟರಾಜ್ ಹುಳಿಯಾರ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೨೦೦೩

೮೭. ರಾಮಮನೋಹರ ಲೋಹಿಯಾ, ರಾಮಮನೋಹರ ಲೋಹಿಯಾ ಚಿಂತನೆ, (ಸಂ) ನಟರಾಜ್ ಹುಳಿಯಾರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

೮೮. ವಾಸವಿ. ಎ.ಆರ್.,(ಸಂ) ಒಳಗನ್ನಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧

೮೯. ವಿವೇಕ ರೈ. ಬಿ.ಎ.,(ಸಂ) ಪ್ರವಾಸಿ ಕಂಡ ವಿಜಯನಗರ, ಕನ್ನಡ ವಿಶ್ವವಿದ್ಯಾಲಯ, ಹಂಪಿ,೨೦೧೪ (೨೦೦೫)

೯೦. ಸಂಗಮೇಶ ಸವದತ್ತಿಮಠ(ಸಂ), ಕನ್ನಡ ಭಾಷಾವಿಜ್ಞಾನ ನಡೆದುಬಂದ ದಾರಿ, ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಾರಕೂಡ, ಬೀದರ್, ೨೦೧೨

೯೧. ಸುಬ್ಬಣ್ಣ ಕೆ.ವಿ., ಕುವೆಂಪುಗೆ ಪುಟ್ಟ ಕನ್ನಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೯೨. ಸೋಮಶೇಖರ. ಸಿ., ತುಮಕೂರು ಜಿಲ್ಲಾ ಉತ್ಸವ ಸಮಿತಿ, ಜಿಲ್ಲಾಡಳಿತ, ತುಮಕೂರು, ೨೦೦೯

೯೩. ಶರ್ಮ. ಆರ್.ಎಸ್., ಪ್ರಾಚೀನ ಭಾರತದಲ್ಲಿ ಶೂದ್ರರು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೪

೯೪. ಶಿವರಾಮ ಪಡಿಕ್ಕಲ್, ನಾಡು ನುಡಿಯ ರೂಪಕ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೨೦೦೧

೯೫. ಶಿವರುದ್ರಪ್ಪ ಜಿ.ಎಸ್., (ಸಂ), ಶ್ರೀನಿಧಿ, ಬಿ.ಎಂ.ಶ್ರೀ ಜನ್ಮಶತಮಾನೋತ್ಸವ ನೆನಪಿನ ಸಂಪುಟ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೫

೯೬. ಶಿವಲಿಂಗಯ್ಯ. ಎಸ್., ಜಿ.ಎಂ.ಹೆಗಡೆ(ಸಂ), ಸ್ಮೃತಿಗಂಧ, ಶಂ.ಬಾ ವಿಚಾರ ವೇದಿಕೆ, ತೃಪ್ತಿ, ಬೆಂಗಳೂರು, ೧೯೯೬

೯೭. ಶೆಟ್ಟರ್. ಷ., ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೧ (೨೦೦೭)

೯೮. ಶ್ರೀಧರ್. ಎಸ್.ಎನ್., ಕನ್ನಡ ಭಾಷೆಯ ಆಧುನೀಕರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

೯೯. ಶ್ರೀನಿವಾಸಮೂರ್ತಿ ಕಾ.ವೆಂ., ಕನ್ನಡಪರ ಚಿಂತನೆ ಮತ್ತು ಪರಂಪರೆ, ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ, ಬೆಳಗಾವಿ, ೨೦೦೦

೧೦೦. ಶ್ರೀನಿವಾಸಮೂರ್ತಿ ಕಾ.ವೆಂ., ಕನ್ನಡ ಸಾಹಿತ್ಯ ಮತ್ತು ಕರ್ನಾಟಕತ್ವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೮

೧೦೧. ಶ್ರೀನಿವಾಸಮೂರ್ತಿ. ಜೆ., ಭಾರತೀಯ ಭಾಷಾಧ್ಯಯನದ ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೦೨. ಷೆಲ್ಡನ್ ಪೊಲಾಕ್, ದೇಶಭಾಷಾ ನಿರ್ಮಾಣ, (ಅನು.ಅಕ್ಷರ ಕೆ.ವಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಇಂಗ್ಲಿಶ್ ಕೃತಿ

೧೦೩. Language Problems of Develioing Nations, Fishman, Joshua A.,Charles A.Furguson and Jyotirindra Das Gupta(ed), John Wiley and sons, New York, 1968

ಇ. ಅಪ್ರಕಟಿತ ಸಂಶೋಧನ ಪ್ರಬಂಧಗಳು

೧. ಒಕ್ಕುಂದ ಎಂ.ಡಿ., ಆಧುನಿಕ ಕನ್ನಡ ಕಾವ್ಯದಲ್ಲಿ ಧಾರ್ಮಿಕ ಹಿಂಸೆ ಹಾಗೂ ಸೌಹಾರ್ದತೆಯ ಸ್ವರೂಪ, (ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಸಂಶೋಧನಾ ಪ್ರಬಂಧ), ೨೦೧೦

೨. ನೆಲ್ಲುಕುಂಟೆ ವೆಂಕಟೇಶಯ್ಯ, ಆಧುನಿಕ ಸಾಹಿತ್ಯದಲ್ಲಿ ಕನ್ನಡ ರಾಷ್ಟ್ರೀಯತಾ ಚಿಂತನೆಯ ಆಯಾಮಗಳು, (ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಸಂಶೋಧನಾ ಪ್ರಬಂಧ), ೨೦೦೮

.ಈ. ಲೇಖನಗಳು

೧. ಅಶೋಕಕುಮಾರ ರಂಜೇರೆ, 'ಕನ್ನಡ ಮತ್ತು ಅದರ ಒಳನುಡಿಗಳ ವೈಶಿಷ್ಟ್ಯ' ಗೌರಿ ಲಂಕೇಶ್ ವಾರಪತ್ರಿಕೆ, ೨೦.೧೧.೨೦೧೩

೨. ಆಶಾದೇವಿ ಎಂ.ಎಸ್, 'ತಾಯ್ನುಡಿ' ಹೆಣ್ಣಿನ ಭಾಷೆಯಾಗಿ ಉಳಿದಿದೆಯೇ?' ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೩. ಇಸ್ಮಾಯಿಲ್ ಎನ್.ಎ.ಎಂ., 'ಕನ್ನಡವೇಕೆ ಜ್ಞಾನದ ಭಾಷೆ ಆಗುತ್ತಿಲ್ಲ?', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೪. ಉಣ್ಣಿಕೃಷ್ಣನ್ ಕೆ., 'ಜೈ ಭುವನೇಶ್ವರಿ ಮಾತೆ', ಸಾಪ್ತಾಹಿಕ ಸಂಪದ, ಉದಯವಾಣಿ, ೨೬.೧೦.೧೪

೫. ಉಮಾಪತಿ.ಡಿ., 'ಇನ್ನು ಹಾಡಿ ಕುಣಿಯುವುದಿಲ್ಲ ಆದಿವಾಸಿಗಳು', ಪ್ರಜಾವಾಣಿ, ೨೦.೮.೧೭

೬. ಉಮಾಪತಿ.ಡಿ., 'ಕರ್ನಾಟಕ ಮರೆತ ಕನ್ನಡಿಗರು ಇವರು!', ಪ್ರಜಾವಾಣಿ, ೦೬.೧೧.೧೭

೭. ಒಕ್ಕುಂದ ಎಂ.ಡಿ., 'ಕನ್ನಡ ಭುವನೇಶ್ವರಿ – ಕರ್ನಾಟಕತ್ವದ ಮತೀಯ ಹಾಗು ನಿರ್ಮತೀಯ ನೆಲೆಗಳು : ಪ್ರತಿಮೀಕರಣ ಹಾಗೂ ಪ್ರತಿನಿಧೀಕರಣ', ಗೌರಿ ಲಂಕೇಶ್ ವಾರಪತ್ರಿಕೆ, ೨೦.೧೧.೨೦೧೩

೮. ಕಾವ್ಯಶ್ರೀ ನಾಯ್ಕ ಮನಮನೆ, 'ಇಂಗ್ಲಿಷ್ ಕಲಿಯುವ ಜರೂರು – ಸವಾಲು', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೯. ಕುಗ್ವೆ ಹರ್ಷಕುಮಾರ್, 'ಹಿಂದುತ್ವ ರಾಷ್ಟ್ರ ಅಜೆಂಡಾ– ಕರ್ನಾಟಕದ ಅನನ್ಯತೆಗೆ ಆಪತ್ತು', ಸುಗ್ಗಿ ಸಾಪ್ತಾಹಿಕ, ವಾರ್ತಾಭಾರತಿ, ೨೯.೧೦..೨೦೧೭

೧೦. ಗಿರೀಶ್ ಭಟ್ ಅಜಕ್ಕಳ, 'ಸಿಬಿಸಿಎಸ್ ಮತ್ತು ಭಾಷಾ ಬೋಧನೆ' ಪ್ರಜಾವಾಣಿ (ಸಂಗತ), ೧೬.೪.೧೬

೧೧. ಚಂದ್ರಶೇಖರ್ ಎಚ್.ಬಿ., 'ಸಂವೇದನಾರಹಿತರಿಗೆ ಬೇಕಿದೆ ಕಡಿವಾಣ' ಪ್ರಜಾವಾಣಿ (ಸಂಗತ), ೧೨.೪.೧೬

೧೨. ಚಂದ್ರಶೇಖರ್ ಎಚ್.ಬಿ., 'ಅಂಕ ಗಳಿಕೆಯ ನಾಗಾಲೋಟ' ಪ್ರಜಾವಾಣಿ (ಸಂಗತ), ೨೪.೦೫.೧೬

೧೩. ಚಂದ್ರಶೇಖರ ದಾಮ್ಲೆ, 'ಯಾಕೆ ಬೇಕು ಭಾಷಾ ಕಲಿಕೆ', ಪ್ರಜಾವಾಣಿ (ಸಂಗತ), ೨೦.೦೪.೨೦೧೬

೧೪. ಜಯಪ್ರಕಾಶ ಶೆಟ್ಟಿ ಎಚ್., 'ಭಾವಿಸಿ ಕನ್ನಡ ಮತ್ತು ಸಹನೆ, ಅಸಹನೆಯ ಸಾಂಸ್ಕೃತಿಕ ತರಬೇತಿ', ಜನ ಹೋರಾಟ, ೦೪.೧೧.೨೦೧೪

೧೫. ಜಾಮದಾರ ಎಸ್.ಎಂ., 'ಕನ್ನಡ ಭಾಷೆ: ಚೈತನ್ಯದ ದಾರಿಗಳು..', ಪ್ರಜಾವಾಣಿ, ೫.೧.೨೦೧೫

೧೬. ತಿರುಮಲೇಶ್ ಕೆ.ವಿ., 'ಭಾಷಾಂತರದ ಬೆನ್ನು ಹತ್ತಿ', ಮುಕ್ತಛಂದ ಪುರವಣಿ, ಪ್ರಜಾವಾಣಿ ೧೯.೧೦.೨೦೧೪

೧೭. ತಿರುಮಲೇಶ್ ಕೆ.ವಿ., 'ಮಕ್ಕಳನ್ನು ಮಾತೆಯರಿಗೆ ಮರಳಿಸುವ ತುರ್ತು' ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೧೮. ದತ್ತಾತ್ರಿ ಎಂ.ಆರ್., 'ಅನಿವಾಸಿ ಮತ್ತು ಭಾಷೆ', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨.೧೧.೨೦೧೪

೧೯. ದತ್ತಾತ್ರಿ ಎಂ.ಆರ್., 'ನಾನೇಕೆ ಕನ್ನಡದಲ್ಲಿ ಬರೆಯುತ್ತೇನೆ?', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೨೦. ದೇವನೂರು ಮಹಾದೇವ ಮತ್ತು ಇತರರು, "ವಿಶ್ವ ಕನ್ನಡ ಸಮ್ಮೇಳನ ಸದ್ಯಕ್ಕೆ ಬೇಡ', ಪ್ರಜಾವಾಣಿ (ಸಂಗತ), ೨೧.೦೭.೨೦೧೭

೨೧. ದೊಡ್ಡಮನಿ ಕೆ.ಎನ್., 'ಬದುಕು ಮೊದಲು ಆಮೇಲೆ ಭಾಷೆ–ಸಂಸ್ಕೃತಿ', ವಾರ್ತಾಭಾರತಿ, ೦೪.೭.೨೦೧೪

೨೨. ದೊರೆಸ್ವಾಮಿ ಹೊರೆಯಾಲ, 'ಕನ್ನಡದ 'ಮುನಿ'ಗಳ ಮನವಿ! ಪ್ರಜಾವಾಣಿ (ಸಂಗತ), ೦೭.೦೫.೨೦೧೬

೨೩. ದೊರೆಸ್ವಾಮಿ ಹೊರೆಯಾಲ, 'ಗೋಕಾಕ್ ಚಳವಳಿಯ ವಸ್ತುನಿಷ್ಠತೆ', ಪ್ರಜಾವಾಣಿ (ಸಂಗತ), ೨೨.೦೬.೨೦೧೬

೨೪. ಧನಂಜಯ್ ಕೆ.ವಿ., 'ಕಾನೂನು ಬಲವಿಲ್ಲದ 'ಮಾತೃಭಾಷೆ' ನೀತಿ', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೨೫. ಪವಿತ್ರ ಕೆ.ಎಸ್., 'ಬನ್ನಿ ಕನ್ನಡ ಉಳಿಸೋಣ', ಶಿಕ್ಷಣ ಪುರವಣಿ, ಪ್ರಜಾವಾಣಿ, ೪.೧೧.೧೭

೨೬. ಪುರುಷೋತ್ತಮ ಬಿಳಿಮಲೆ, 'ಸಂವಾದಿಸಬೇಕಾದ ಕಾಲ' (ಕನ್ನಡ ವಿ.ವಿ ನುಡಿಹಬ್ಬ ಭಾಷಣ), ವಾರ್ತಾಭಾರತಿ, ೨೧.೦೩.೨೦೧೬,

೨೭. ಪುರುಷೋತ್ತಮ ಬಿಳಿಮಲೆ, 'ಸಣ್ಣ ಭಾಷೆಗಳ ಕತ್ತು ಹಿಸುಕುವ ರಾಜಕಾರಣ', ಮುಕ್ತಛಂದ ಪುರವಣಿ, ಪ್ರಜಾವಾಣಿ ೦೧.೦೫.೨೦೧೬

೨೮. ಪ್ರಜಾವಾಣಿ ವರದಿ, 'ಭಾರತದ ನಾನೂರು ಭಾಷೆಗಳು ಅಳಿವಿನತ್ತ', ಪ್ರಜಾವಾಣಿ, ೬.೮.೧೭

೨೯. ಮಲ್ಲಿಕಾರ್ಜುನ ಮೇಟಿ, 'ಡಿ.ಎನ್ ಶಂಕರ ಭಟ್ : ಕನ್ನಡ ನುಡಿ ಸ್ವರಾಜ್ಯದ ಹರಿಕಾರ', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೩೦. ಮೋಹನ ಕುಂಟಾರ್, 'ಹಲವು ನುಡಿಸಂಗಮದ 'ಕನ್ನಡ ನದಿ', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೩೧. ನಟರಾಜ್ ಹುಳಿಯಾರ್, 'ಶುರುವಾಗಲಿದೆ ತಾಯ್ನುಡಿ ಪರ ಯುದ್ಧ', ಪ್ರಜಾವಾಣಿ, ೧೭.೦೯.೨೦೧೭

೩೨. ನಾಗಭೂಷಣ ಡಿ.ಎಸ್., 'ಬೇಕಿರುವುದು ರಾಜ್ಯ ಸ್ವಾಯತ್ತತೆ' ಪ್ರಜಾವಾಣಿ (ಸಂಗತ), ೨೦.೦೭.೨೦೧೭

೩೩. ನಾಗಭೂಷಣ ಸ್ವಾಮಿ ಓ.ಎಲ್., 'ನುಡಿ ತಾಯಂದಿರನ್ನು ನೆನೆವ ಹೊತ್ತು', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೩೪. ನಾಗರಾಜ ಸಿ.ಪಿ., 'ಎರವಲು ಸಂಬಂಧ', ಪ್ರಜಾವಾಣಿ (ವಾಚಕರ ವಾಣಿ) ದಿ ೪.೭.೨೦೧೬

೩೫. ನಾರಾಯಣಗೌಡ ಟಿ. ಎ., 'ದಶಮಾನೋತ್ಸವದಲ್ಲಿ ತೆಗೆದುಕೊಂಡ ನಿರ್ಣಯಗಳು' ಕರವೇ ನಲ್ನುಡಿ ಮಾಸಪತ್ರಿಕೆ, ಜುಲೈ, ೨೦೧೧

೩೬. ನಾರಾಯಣಗೌಡ ಟಿ. ಎ., 'ಭಂಡ ರಾಜಕಾರಣದ ಪರಮಾವಧಿ', ಕರವೇ ನಲ್ನುಡಿ ಮಾಸಪತ್ರಿಕೆ, ಜುಲೈ, ೨೦೧೨

೩೭. ನಾರಾಯಣಗೌಡ ಟಿ. ಎ., 'ಕಾವೇರಿ ಕಿತ್ತುಕೊಂಡ ದ್ರೋಹಿಗಳು', ಕರವೇ ನಲ್ನುಡಿ ಮಾಸಪತ್ರಿಕೆ, ಅಕ್ಟೋಬರ್, ೨೦೧೨

೩೮. ನಾರಾಯಣಗೌಡ ಟಿ. ಎ., 'ಬೆಳಗಾವಿ ನಮ್ಮದು ಎಂದು ಸಾರಿ ಸಾರಿ ಹೇಳಿದ ಸಂಭ್ರಮದ ಘಳಿಗೆಯಲ್ಲಿ', ಕರವೇ ನಲ್ನುಡಿ ಮಾಸಪತ್ರಿಕೆ, ಡಿಸೆಂಬರ್, ೨೦೧೨

೩೯. ನಾರಾಯಣಗೌಡ ಟಿ. ಎ., 'ಹೋಳಾದ ಆಂಧ್ರ : ಮುಂದೇನು?' ಕರವೇ ನಲ್ನುಡಿ ಮಾಸಪತ್ರಿಕೆ, ಮಾರ್ಚ್, ೨೦೧೪

೪೦. ನಾರಾಯಣಗೌಡ ಟಿ. ಎ., 'ನಿಮಗೆ ದೇಶದ 'ಬಹುತ್ವ' ಬೇಕೆ? ಅಥವಾ ದೇಶ ಒಡೆದುಹೋಗುವುದು ಬೇಕಾಗಿದೆಯೇ?' ಕರವೇ ನಲ್ನುಡಿ ಮಾಸಪತ್ರಿಕೆ, ಜುಲೈ, ೨೦೧೪

೪೧. ನಾರಾಯಣಗೌಡ ಟಿ. ಎ., 'ಒಡಕು ಮಾತುಗಳು ಇನ್ನಾದರೂ ನಿಲ್ಲಲಿ..' ಕರವೇ ನಲ್ನುಡಿ ಮಾಸಪತ್ರಿಕೆ, ಜುಲೈ, ೨೦೧೫

೪೨. ನಾವಡ ಎ.ವಿ., 'ದ್ರಾವಿಡದ ಬೇರು ನೀರುಂಡೊಡೆ ತಣಿಯದೆ ಕನ್ನಡದ ಶಾಖೋಪಶಾಖೆಗಳು?', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೪೩. ನೋಮ್ ಚಾಮ್‌ಸ್ಕಿ, (ಅನು.ಕೆ.ವಿ ನಾರಾಯಣ), 'ಭಾಷೆ ಕುರಿತು ಚಾಮ್ ಸ್ಕಿ ಹೇಳುತ್ತಿರುವುದೇನು?', ಅಭಿನವ ಚಾತುರ್ಮಾಸಿಕ, ಬೆಂಗಳೂರು. ೨೦೧೨

೪೪. ರಹಮತ್ ತರೀಕೆರೆ, 'ಪಲ್ಲಟಗೊಳಿಸಬಹುದೇ ಈ ವಾಸ್ತವವನು?', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೪೫. ರಹಮತ್ ತರೀಕರೆ, 'ಲಿಪಿಯ ಹಂಗು', ಜನಹೋರಾಟ, ೧೯.೧೧.೨೦೧೭

೪೬. ರಾಜಕುಮಾರ ವಿ.ಕುಲಕರ್ಣಿ, 'ಕನ್ನಡ ಭಾಷೆಯ ಆತಂಕಗಳು', ಟೈಮ್ಸ್ ಆಫ್ ಕರ್ನಾಟಕ, ೧೫.೧೧.೨೦೧೫

೪೭. ಲಕ್ಷ್ಮಿನಾರಾಯಣ್ ಆರ್, 'ಕನ್ನಡ – ಸಂಸ್ಕೃತ ಅನುಬಂಧ', ಪ್ರಜಾವಾಣಿ (ಸಂಗತ ೧೨.೭.೨೦೧೬)

೪೮. ಲಕ್ಷ್ಮಿನಾರಾಯಣ ಭಟ್ಟ, ಎನ್.ಎಸ್., ಆಳ್ವಾಸ್ ನುಡಿಸಿರಿ–೨೦೦೯ ಉದ್ಘಾಟನಾ ಭಾಷಣ, 'ಕನ್ನಡ ಮನಸ್ಸು : ಸಮನ್ವಯದೆಡೆಗೆ', ಆಳ್ವಾಸ್ ಪ್ರಕಾಶನ, ಮೂಡುಬಿದಿರೆ,ದ.ಕ, ೨೦೧೦.

೪೯. ವಿಕ್ರಂ ಹತ್ವಾರ, 'ಬದುಕಿನ ಓಟದಲ್ಲಿ ನುಡಿ ಸಾಕ್ಷಾತ್ಕಾರ', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೫೦. ವಿಶಾಲ್ ಠಾಕ್ರೆ, 'ದಲಿತ ಬಂಡವಾಳ : ವಿಮೋಚನೆಯ ಮಾರ್ಗವೇ?', ಮುಕ್ತಛಂದ ಪುರವಣಿ, ಪ್ರಜಾವಾಣಿ ೧೦.೦೪.೨೦೧೬

೫೧. ವಿಶಾಲಾಕ್ಷಿ, 'ಸಮಾನ ಶಾಲಾ ಶಿಕ್ಷಣ ವ್ಯವಸ್ಥೆ ಜಾರಿಗೆ ಬರಲಿ..', ಸಂಪಾದಕೀಯ, ಕರವೇ ನಲ್ನುಡಿ, ಜುಲೈ ೨೦೧೧

೫೨. ವಿಶಾಲಾಕ್ಷಿ, 'ಕನ್ನಡದ ಮಕ್ಕಳಿಗೆ ಕನ್ನಡದಲ್ಲಿ ಸಹಿ ಹಾಕುವ ಸ್ವಾತಂತ್ರ್ಯವೂ ಇಲ್ಲವೇ?', ಸಂಪಾದಕೀಯ, ಕರವೇ ನಲ್ನುಡಿ, ಸೆಪ್ಟೆಂಬರ್, ೨೦೧೧

೫೩. ವಿಶಾಲಾಕ್ಷಿ, 'ಇದು ಸಂಕಷ್ಟದ ಕಾಲ', ಸಂಪಾದಕೀಯ, ಕರವೇ ನಲ್ನುಡಿ, ಜುಲೈ ೨೦೧೨

೫೪. ವಿಶಾಲಾಕ್ಷಿ, 'ಕಾಸರಗೋಡಿನ ಕನಸು ಮತ್ತು ಕಯ್ಯಾರರು', ಸಂಪಾದಕೀಯ, ಕರವೇ ನಲ್ನುಡಿ, ಆಗಸ್ಟ್, ೨೦೧೨

೫೫. ವಿಶಾಲಾಕ್ಷಿ, 'ಭಾಷಾನೀತಿ ಬದಲಾಗಲೇಬೇಕಾದ ಸಮಯವಿದು..' ಸಂಪಾದಕೀಯ, ಕರವೇ ನಲ್ನುಡಿ, ಸೆಪ್ಟೆಂಬರ್, ೨೦೧೨

೫೬. ವಿಶಾಲಾಕ್ಷಿ, 'ಕುಡಿಯುವ ನೀರಿನ ಹಕ್ಕೂ ನಮಗಿಲ್ಲವೇ?, ಸಂಪಾದಕೀಯ, ಕರವೇ ನಲ್ನುಡಿ, ಅಕ್ಟೋಬರ್, ೨೦೧೨

೫೭. ವಿಶಾಲಾಕ್ಷಿ, 'ನಮ್ಮ ಮೆಟ್ರೋದಲ್ಲಿ ಹಿಂದಿ ಹೇರಿಕೆ', ಸಂಪಾದಕೀಯ, ಕರವೇ ನಲ್ನುಡಿ, ಮಾರ್ಚ್, ೨೦೧೪

೫೮. ವಿಶಾಲಾಕ್ಷಿ, 'ಹಿಂದಿ ಹೇರಿಕೆ ವಿರುದ್ಧ ಮೊಳಗಿದ ರಣಘೋಷ', ಸಂಪಾದಕೀಯ, ಕರವೇ ನಲ್ನುಡಿ, ಜುಲೈ, ೨೦೧೪

೫೯. ವಿಶಾಲಾಕ್ಷಿ, 'ರೈತರ ಆತ್ಮಹತ್ಯೆ ತಡೆಯುವುದು ಈಗಿನ ತುರ್ತು', ಸಂಪಾದಕೀಯ, ಕರವೇ ನಲ್ನುಡಿ, ಜುಲೈ, ೨೦೧೫

೬೦. ಸಚ್ಚಿದಾನಂದ ಹೆಗಡೆ, 'ಹಲವು ಸಮೀಕರಣಗಳ ನುಡಿಗಣಿತ', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೬೧. ಸತ್ಯನಾರಾಯಣ ಮಲ್ಲಿಪಟ್ಟಣ, 'ಉನ್ನತ ಶಿಕ್ಷಣದಲ್ಲಿ ಕನ್ನಡ', ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೬೨. ಸರಸ್ವತಿ ದು., 'ಉಣ್ಣುವ ಅನ್ನ ಆಡುವ ಭಾಷೆ' ಮುಕ್ತಛಂದ ಪುರವಣಿ, ಪ್ರಜಾವಾಣಿ, ೨೧.೦೨.೨೦೧೬

೬೩. ಸಿದ್ದಯ್ಯ., ಕೆ.ಬಿ., ಸಮ್ಮೇಳನಾಧ್ಯಕ್ಷರ ಭಾಷಣ, ತುಮಕೂರು ಜಿಲ್ಲಾ ೧೨ನೇ ಕನ್ನಡ ಸಾಹಿತ್ಯ ಸಮ್ಮೇಳನ, ೨/೩ ಮಾರ್ಚ್, ೨೦೧೭


೬೪. ಸುರೇಶ ಕೆ.ಪಿ., 'ಇಂದಿನ ಮಕ್ಕಳೇ ನಾಳಿನ ಕಾರಕೂನರು', ಉದಯವಾಣಿ 'ಸಾಪ್ತಾಹಿಕ ಸಂಪದ' ದಿ.೨೨.೦೫.೨೦೧೬

೬೫. ಸಿದ್ದಯ್ಯ., ಕೆ.ಬಿ., ಸಮ್ಮೇಳನಾಧ್ಯಕ್ಷರ ಭಾಷಣ, ತುಮಕೂರು ಜಿಲ್ಲಾ ೧೨ನೇ ಕನ್ನಡ ಸಾಹಿತ್ಯ ಸಮ್ಮೇಳನ, ೨/೩ ಮಾರ್ಚ್,

೬೬. ೨೦೧೭ಸುಂದರ್ ಸುರಕ್ಕೈ, 'ಕನ್ನಡಿಗನ ಅಸ್ಮಿತೆ ಮತ್ತು ಪ್ರಾದೇಶಿಕತೆ', ಮುಕ್ತಛಂದ ಪುರವಣಿ, ಪ್ರಜಾವಾಣಿ ೦೨.೧೧.೨೦೧೬

೬೭. ಶೆಟ್ಟರ್ ಷ., 'ಭಾಷೆಗಳ ಬಳ್ಳಿ ಮತ್ತು ಅಕ್ಷರ ಸಮಾಜ' ಮುಕ್ತಛಂದ ಪುರವಣಿ, ಪ್ರಜಾವಾಣಿ, ೦೫.೦೨.೨೦೧೭

೬೮. ಶೇಣವ ಆರ್.ಬಿ., 'ತಾಯಿಯೋ ಮಗಳೋ?', ಪ್ರಜಾವಾಣಿ (ವಾಚಕರ ವಾಣಿ) ದಿ ೯.೭.೨೦೧೬



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ